JJ-50
(B)25214

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ
SECOND SESSION OF THE TWELFTH LEGISLATIVE ASSEMBLY

ಸಂಪುಟ – 08 (ಕ್ರಮಾಂಕ – 3)

VOLUME - VIII (NO. 3)

(21ನೇ, 22ನೇ, 23ನೇ ಮಾರ್ಚ್ 2007)

(21st, 22nd, 23rd March 2007)

ಕರ್ನಾಟಕ ವಿಧಾನಸಭೆಯ ಸಚಿವಾಲಯ ಬೆಂಗಳೂರು
Karnataka Legislative Assembly Secretariat Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

(B) 25214

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – 08 (ಕ್ರಮಾಂಕ – 3)

VOLUME - VIII (NO. 3)

(21ನೇ, 22ನೇ, 23ನೇ ಮಾರ್ಚ್ 2007)

(21st, 22nd, 23rd March 2007)

ಕರ್ನಾಟಕ ವಿಧಾನಸಭೆಯ ಸಚಿವಾಲಯ ಬೆಂಗಳೂರು

Karnataka Legislative Assembly Secretariat. Bangalore

<u>ಕರ್ನಾಟಕ ವಿಧಾನಸಭೆ</u>

ಬುಧವಾರ 21ನೇ ಮಾರ್ಚ್ 2007ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು

ಶ್ರೀ ಕೃಷ್ಣರವರು

ಪೀಠವನ್ನು ಅಲಂಕರಿಸಿದ್ದರು

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನ ಸಭೆ

ಐದನೆಯ ಅಧಿವೇಶನದ

ಶ್ರೀ ಕೃಷ್ಣ

ಅಧ್ಯಕ್ಷರು

ಶ್ರೀ ಎನ್ ವೈ ಗೋಪಾಲಕೃಷ್ಣ

ಉಪಾಧ್ಯಕ್ಷರು

ಬುಧವಾರ 21-3-2007

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

1 ಪ್ರಶ್ನೋತ್ತರ 1-105

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ 1585 ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

ಪ್ರಶ್ನೆ ಸಂಖ್ಯೆ 213(1327) ಶ್ರೀ ಎಸ್ ಎಸ್ ಪಾಟೀಲ್

ಪ್ರಶ್ನೆ ಸಂಖ್ಯೆ 1394 ಶ್ರೀ ಕೆ ಎಂ ತಿಮ್ಮರಾಯಪ್ಪ

ಪ್ರಶ್ನೆ ಸಂಖ್ಯೆ 215(1573) ಶ್ರೀ ಸಿದ್ದು ಸಾವದಿ

ಪ್ರಶ್ನೆ ಸಂಖ್ಯೆ 216(1567) ಶ್ರೀ ಬಿ ಶಿವರಾಮು

ಪ್ರಶ್ನೆ ಸಂಖ್ಯೆ 217(1577) ಶ್ರೀ ಗಡ್ಡದೇವರ ಮಠ ಗಡ್ಡಯ್ಯ ಶಿವಮೂರ್ತಯ್ಯ

ಪ್ರಶ್ನೆ ಸಂಖ್ಯೆ 1396 ಶ್ರೀ ಹೆಚ್ ಹಾಲಪ್ಪ

ಪ್ರಶ್ನೆ ಸಂಖ್ಯೆ 1566 ಶ್ರೀ ಶಿವಾನಂದ ಎಸ್ ಪಾಟೀಲ್

ಪ್ರಶ್ನೆ ಸಂಖ್ಯೆ 220(1588) ಶ್ರೀ ಪ್ರಕಾಶ್ ಖಂಡ್ರೆ

ಪ್ರಶ್ನೆ ಸಂಖ್ಯೆ 1335 ಶ್ರೀಮತಿ ಟಿ ಭಾಗೀರಥಿ

ಪ್ರಶ್ನೆ ಸಂಖ್ಯೆ 222(1569) ಶ್ರೀಮತಿ ಶಕುಂತಲಾ ಟಿ ಶೆಟ್ಟಿ

ಪ್ರಶ್ನೆ ಸಂಖ್ಯೆ 1332 ಶ್ರೀ ನರಸಿಂಹ ನಾಯಕ್

ಪ್ರಶ್ನೆ ಸಂಖ್ಯೆ 225(1399) ಶ್ರೀ ಆರಗ ಜ್ಞಾನೇಂದ್ರ

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 105

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು 105-109

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 109-113

(ಅ) ವಿಷಯ - ಕಾವೇರಿ ವಿವಾದದ ಬಗ್ಗೆ ಮಾತುಕತೆ

ಶ್ರೀ ವಾಟಾಳ್ ನಾಗರಾಜ್

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು)

(ಆ) ವಿಷಯ – ಬರ ಪರಿಹಾರ ಕಾರ್ಯದಲ್ಲಿ JCB ಯಂತ್ರಗಳನ್ನು ಉಪಯೋಗಿಸಿರುವುದರ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಎಂ ಪಿ ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು)

4 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ 113–131

ವಿಷಯ – ಕಾನೂನು ಬಾಹಿರ ಗಣಿಗಾರಿಕೆ ಬಗ್ಗೆ ತನಿಖೆ ಮಾಡಲು ರಚಿಸಿದ್ದ ಯು ಎಲ್ ಭಟ್ ಕಮಿಷನನ್ನು ರದ್ದುಪಡಿಸಿರುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

ಶ್ರೀ ಆರ್ ವಿ ದೇಶಪಾಂಡೆ

ಶ್ರೀ ಎ ಟಿ ರಾಮಸ್ವಾಮಿ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

(ಸದರಿ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿ ನೀಡಲಾಯಿತು)

5 ನಿಯಮ 69ರ ಅಡಿ ಚರ್ಚೆ 131–151

ವಿಷಯ – ಕಾನೂನು ಬಾಹಿರ ಗಣಿಗಾರಿಕೆ ಬಗ್ಗೆ ತನಿಖೆ ಮಾಡಲು ರಚಿಸಿದ್ದ ಯು ಎಲ್ ಭಟ್ ಕಮಿಷನನ್ನು ರದ್ದುಪಡಿಸಿರುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

ಶ್ರೀ ಆರ್ ವಿ ದೇಶಪಾಂಡೆ

6 ಅನುಬಂಧ 152–360

---------*---------

ಗುರುವಾರ 22-3-2007

ವಿಷಯಾನುಕ್ರಮಣಿಕೆ

1 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಿಲಾದ ಉತ್ತರಗಳು 361-479

ಪ್ರಶ್ನೆ ಸಂಖ್ಯೆ 1307	ಶ್ರೀ ಆರ್ ವಿ ದೇಶಪಾಂಡೆ
ಪ್ರಶ್ನೆ ಸಂಖ್ಯೆ 1323	ಶ್ರೀಮತಿ ಟಿ ಭಾಗೀರಥಿ
ಪ್ರಶ್ನೆ ಸಂಖ್ಯೆ 1618	ಶ್ರೀ ಬಿ ಕೆ ಗೋಪಾಲಕೃಷ್ಣ
ಪ್ರಶ್ನೆ ಸಂಖ್ಯೆ 1617	ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್
ಪ್ರಶ್ನೆ ಸಂಖ್ಯೆ 232(1603)	ಶ್ರೀ ಎಸ್ ರಾಜೇಂದ್ರನ್
ಪ್ರಶ್ನೆ ಸಂಖ್ಯೆ 233(1324)	ಶ್ರೀ ಎ ಎಸ್ ಬಸವರಾಜು
ಪ್ರಶ್ನೆ ಸಂಖ್ಯೆ 234(1613)	ಶ್ರೀ ಎಸ್ ಎಸ್ ಪಾಟೀಲ್
ಪ್ರಶ್ನೆ ಸಂಖ್ಯೆ 1325	ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
ಪ್ರಶ್ನೆ ಸಂಖ್ಯೆ 2381(1600)	ಶ್ರೀ ಎಂ ಟಿ ಕೃಷ್ಣಪ್ಪ
ಪ್ರಶ್ನೆ ಸಂಖ್ಯೆ 239(1616)	ಶ್ರೀ ಬಿ ಶಿವರಾಮು
ಪ್ರಶ್ನೆ ಸಂಖ್ಯೆ 1321	ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಪ್ರಶ್ನೆ ಸಂಖ್ಯೆ 228(1607)	ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 479

2 ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು. 480-491

ಅ) **Karnataka Ground Water Regulation and Control Bill 1996** ಅನ್ನು ಕಾಯ್ದೆಯನ್ನಾಗಿಸಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಬಿ ಆರ್ ಪಾಟೀಲ್

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು)

ಆ) ಪರೀಕ್ಷೆ ಸಮಯದಲ್ಲಿ ಸಂಜೆ ಆರೂವರೆ ಗಂಟೆಯಿಂದ ರಾತ್ರಿ ಹನ್ನೊಂದು

ಗಂಟೆವರೆಗೆ ವಿದ್ಯುತ್ ಕಡಿತಗೊಳಿಸದಿರುವಂತೆ ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಆರ್ ಧೃವನಾರಾಯಣ

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು)

ಇ) ಬೆಂಗಳೂರು ನಗರದಲ್ಲಿ Posters, Cut-outs ಹಾಕುವುದನ್ನು ನಿಷೇಧಿಸುವ ಬಗ್ಗೆ

ಶ್ರೀ ಜಯಪ್ರಕಾಶ್ ಹೆಗಡೆ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಕೆ ಆರ್ ರಮೇಶ್‌ಕುಮಾರ್

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಈ) ಹೊಸ ತಾಲ್ಲೂಕುಗಳ ರಚನೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ

ಶ್ರೀ ಜಿ ಎಸ್ ಗಡ್ಡದೇವರಮಠ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

3 ಹೇಳಿಕೆ

ರೈತರ ಸಾಲಮನ್ನಾ ಮಾಡುವ ಬಗ್ಗೆ ಉಪ ಮುಖ್ಯಮಂತ್ರಿಗಳಿಂದ ಹೇಳಿಕೆ 491–552

ಶ್ರೀ ಬಿ ಎಸ್ ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು)

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ

ಶ್ರೀ ಸಿದ್ಧರಾಮಯ್ಯ

ಶ್ರೀ ಆರ್ ವಿ ದೇಶಪಾಂಡೆ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಶ್ರೀ ಕೆ ಆರ್ ರಮೇಶ್ ಕುಮಾರ್

ಶ್ರೀ ಜೆ ಸಿ ಮಾಧುಸ್ವಾಮಿ

4 ಅನುಬಂಧ 553–680

ಶುಕ್ರವಾರ 23-3-2007

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

1 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 681-712

ವಿಷಯ ರೈತರ ಸಾಲ ಮನ್ನಾ ಮಾಡುವ ಬಗ್ಗೆ

(ವಿರೋಧ ಪಕ್ಷದ ಸದಸ್ಯರು ಧರಣಿಯಲ್ಲಿ ಪಾಲ್ಗೊಂಡಿದ್ದರು)
ಶ್ರೀ ಆರ್ ವಿ ದೇಶಪಾಂಡೆ
ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)
ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ
ಶ್ರೀ ಹೆಚ್ ಡಿ ಬಸವರಾಜು

2 ವಿತ್ತೀಯ ಕಾರ್ಯಕಲಾಪ 712-723

ವಿಷಯ 2006-07ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಹಾಗೂ ಅಂತಿಮ ಕಂತು)

(ಮಂಡಿಸಲಾಯಿತು)

(ವಿರೋಧ ಪಕ್ಷದ ಸದಸ್ಯರು ಧರಣಿಯಲ್ಲಿ ಪಾಲ್ಗೊಂಡಿದ್ದರು)

3 ಅನುಬಂಧ 724-916

(1) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಸುವರ್ಣ ಗ್ರಾಮೋದಯ ಯೋಜನೆಗೆ ಹಳ್ಳಿಗಳ ಆಯ್ಕೆ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 212(1585)
ಸದಸ್ಯರ ಹೆಸರು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)
ಉತ್ತರಿಸುವವರು ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)

ಅ) ರಾಜ್ಯದಲ್ಲಿ ಸುವರ್ಣ ಗ್ರಾಮೋದಯ ಯೋಜನೆಗೆ ಎಂದು ಚಾಲನೆ ನೀಡಲಾಯಿತು,

25 02 07ರಂದು ಚಾಲನೆ ನೀಡಲಾಯಿತು

ಆ) ಈ ಯೋಜನೆಯ ಉದ್ದೇಶಗಳೇನು ಹಾಗೂ ಪ್ರಥಮ ಹಂತದಲ್ಲಿ ರಾಜ್ಯದ ಎಷ್ಟು ಗ್ರಾಮಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು,

ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು, ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುವುದು, ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು ಹಾಗೂ ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿ ನೆರವಾಗುವುದು ಪ್ರಥಮ ಹಂತದಲ್ಲಿ ಈವರೆಗೆ 1127 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಇ) ಈ ಯೋಜನೆಗೆ ಒಳಪಡುವ ಗ್ರಾಮಗಳನ್ನು ಆಯ್ಕೆ ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡಗಳೇನು,

ಪ್ರತಿ ವ್ಯಕ್ತಿಗೆ ರೂ 2500 ರಿಂದ 3000ದವರಗೆ ಅಂದಾಜಿನ ಹೆಚ್ಚುವರಿ ಅಭಿವೃದ್ಧಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ

ಗ್ರಾಮೀಣ ಜನಸಂಖ್ಯೆಗನುಗುಣವಾಗಿ ಹಾಗೂ ಡಾ ಡಿ ಎಂ ನಂಜುಂಡಪ್ಪ ನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 115, 110,105 ಮತ್ತು 100 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗಧಿಪಡಿಸಲಾಗಿದೆ ಈ ರೀತಿ ನಿಗಧಿಪಡಿಸಿದ ಜನಸಂಖ್ಯೆಗೊಳಪಟ್ಟು ಸಾಮಾನ್ಯವಾಗಿ 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಈ) ಸ್ಥಳೀಯ ಶಾಸಕರು ಶಿಫಾರಸ್ಸು ಮಾಡುವ ಗ್ರಾಮಗಳನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗುವುದೇ,

ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳ ಜನಸಂಖ್ಯೆ/ಮತದಾರರ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಸ್ಥಳೀಯ ಅಧಿಕಾರಿಗಳು ಹಾಗೂ ಮುಖಂಡರೊಡನೆ ಸಮಾಲೋಚಿಸಿ, ಜಿಲ್ಲಾ ಉಸ್ತುವಾರಿ ಸಚಿವರಿಂದ ತಾಲ್ಲೂಕಿಗೆ ನಿಗಧಿಪಡಿಸಿದ ಜನಸಂಖ್ಯೆಯ ಮಿತಿಯೊಳಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸಿ ಗ್ರಾಮಗಳನ್ನು ಆಯ್ಕೆ ಮಾಡಿಕ್ಕೊಳ್ಳಲಾಗುವುದು

ಉ) ಹಾಗಿದ್ದಲ್ಲಿ ಔರಾದ್ ವಿಧಾನಸಭಾ ಕ್ಷೇತ್ರದಲ್ಲಿ ಈ ಯೋಜನೆಗೆ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ,

ಗ್ರಾಮಗಳ ಆಯ್ಕೆ ಪ್ರಕ್ರಿಯೆ ಕೊನೆಯ ಹಂತದಲ್ಲಿರುತ್ತದೆ

ಊ) ಈ ಪೈಕಿ, ಸ್ಥಳೀಯ ಶಾಸಕರು ಎಷ್ಟು ಗ್ರಾಮಗಳನ್ನು ಶಿಫಾರಸ್ಸು ಮಾಡಿದ್ದರು ಹಾಗೂ ಉಳಿದ ಗ್ರಾಮಗಳನ್ನು ಶಿಫಾರಸ್ಸು ಮಾಡಿರುವವರು ಯಾರು (ವಿವರಗಳನ್ನು ನೀಡುವುದು)

ಅನ್ವಯಿಸುವುದಿಲ್ಲ

ಋ) ಈ ಯೋಜನೆಗೆ ಗ್ರಾಮಗಳನ್ನು ಶಿಫಾರಸ್ಸು ಮಾಡುವಾಗ ಸ್ಥಳೀಯ ಶಾಸಕರುಗಳ ಪ್ರಸ್ತಾವನೆಗೆ ಆದ್ಯತೆಯನ್ನು ನೀಡಲಾಗುವುದೇ?

ಉತ್ತರ (ಈ)ನಲ್ಲಿದ್ದಂತೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಬರತಕ್ಕ ಗ್ರಾಮಗಳ ವಿವರಗಳನ್ನು ಶಾಸಕರು ಹೇಳಿರುವ ಪಟ್ಟಿ ಕೊಡುತ್ತೀರೋ ಅಥವಾ ಬೇರೆಯವರು ಹೇಳಿರುವ ಪಟ್ಟಿಯನ್ನು ಕೊಡುತ್ತೀರೋ ಎಂದು ಕೇಳಿದ್ದೆ ಅದಕ್ಕೇನೂ ಉತ್ತರವೇ ಇಲ್ಲ ಅದನ್ನು ಬಿಟ್ಟುಬಿಟ್ಟಿದ್ದಾರೆ ಎಲ್ಲಾ ಕಡೆ ಶಾಸಕರು ಹೇಳಿದ್ದನ್ನೇ ಕೊಟ್ಟಿದ್ದಾರೆ ನಮ್ಮ ಕ್ಷೇತ್ರದಲ್ಲಿ ಮಾತ್ರ ಬೇರೆಯವರು ಹೇಳಿದ್ದನ್ನೆಲ್ಲಾ ಕೊಟ್ಟಿದ್ದಾರೆ ಈ ರೀತಿಯ ತಾರತಮ್ಯವೇಕೆ? ಎಲ್ಲಾ ಕಡೆ ಶಾಸಕರು ಹೇಳಿದ್ದನ್ನೇ ಕೊಡಬೇಕಲ್ಲಾ? ನಮ್ಮಲ್ಲಿ

ಮುಖಂಡರು ಹೇಳಿದ್ದನ್ನು ಕೊಡುತ್ತೇವೆಂದು ಹೇಳಿದ್ದಾರೆ ಮುಖಂಡರು ಎಂದರೆ ಯಾರು? ಮುಖಂಡರನ್ನು ಕೇಳುತ್ತೇವೆ, ಜಿಲ್ಲಾ ಮಂತ್ರಿಯವರನ್ನು ಕೇಳುತ್ತೇವೆಂದಿದ್ದಾರೆ ಜಿಲ್ಲಾ ಮಂತ್ರಿಯವರನ್ನು ಕೇಳಿ, ಆದರೆ, ಮುಖಂಡರು ಎಂದರೆ ಯಾರ್ಯಾರು ಇರುತ್ತಾರೆ? ಅದು ನನಗೆ ಅರ್ಥವಾಗಿಲ್ಲ ಅದರ ಬಗ್ಗೆ ಸಚಿವರು ಸರಿಯಾದ ಉತ್ತರವನ್ನು ಹೇಳಬೇಕು ಬೇರೆ ಕಡೆ ಶಾಸಕರು ಹೇಳಿದ್ದನ್ನೆಲ್ಲಾ ಮಾಡಿದ್ದಾರೆ ಆದರೆ, ಇಲ್ಲಿ ಉದ್ಭವಿಸುವುದಿಲ್ಲವೆಂದು ಹೇಳಿದರೆ ಏನು ಅರ್ಥವಿದೆ? ಹೇಳುವುದೊಂದು, ಮಾಡುವುದು ಮತ್ತೊಂದನ್ನೇಕೆ ಮಾಡುತ್ತಿದ್ದೀರಿ? ತಾವು ನೇರವಾಗಿಯೇ ಹೇಳಿಬಿಡಿ ನಿಮ್ಮ ಶಾಸಕರಿಗೂ ಕೊಡಬೇಡಿ ನಮ್ಮ ಶಾಸಕರಿಗೂ ಕೊಡಬೇಡಿ ಯಾರಿಗೂ ಕೊಡಬೇಡಿ ಎಲ್ಲವನ್ನೂ ಅಧಿಕಾರಿಗಳಿಂದ ಮಾಡಿ ಶಾಸಕರುಗಳೇಕೆ ಬೇಕು? ಜನಪ್ರತಿನಿಧಿಗಳೇಕೆ ಬೇಕು? ಜನಪ್ರತಿನಿಧಿಗಳ ಅವಶ್ಯಕತೆ ಇಲ್ಲವಲ್ಲ? ಇದು ಯಾವ ಪದ್ಧತಿ ನಿಮ್ಮದು? ಇದರ ಬಗ್ಗೆ ತಾವು ಸರಿಯಾದ ಉತ್ತರವನ್ನು ಹೇಳಬೇಕು

ಶ್ರೀ ಸಿ ಎಂ ಉದಾಸಿ ಮಾನ್ಯ ಅಧ್ಯಕ್ಷರೆ, ಚುನಾಯಿತ ಪ್ರತಿನಿಧಿಗಳೆಲ್ಲರ ಅಭಿಪ್ರಾಯವನ್ನು ಪಡೆದು ಜಿಲ್ಲಾ ಮಂತ್ರಿಯವರು ಆಯಾ ತಾಲ್ಲೂಕಿಗೆ ಕೊಟ್ಟಿರುವ ಜನಸಂಖ್ಯೆ ಮತ್ತು ಅನುದಾನದ ಆಧಾರದ ಮೇಲೆ ಗ್ರಾಮಗಳನ್ನು ಗುರುತಿಸಬೇಕೆಂದು ಸಲಹೆಯನ್ನು ನಾವು ನೀಡಿದ್ದೆವು ಅದರ ಪ್ರಕಾರ ಬೀದರ್ ಜಿಲ್ಲೆಯ ಪಟ್ಟಿ ಸಂಪೂರ್ಣವಾಗಿ ಆಗಿಲ್ಲ ಔರಾದ್‌ನಲ್ಲೂ ಸಹ final ಮಾಡಬೇಕಾದ ಸಂದರ್ಭದಲ್ಲಿ ಇವರು ಕಳುಹಿಸುವ ಸಲಹೆಗಳನ್ನು ನಾವು ಗಮನಿಸುತ್ತೇವೆ ಔರಾದ್‌ನಲ್ಲಿ ಚಿಕ್ಲಿ, ಬಂಡರಕುಮಟ, ಏಕಾಂಬ, ಗೌಂಡಗಾಂವ, ಚಿಂಟಾಕಿ, ಬೊಂತಿ, ಮುಧೋಳೆ, ರಾಣೆಕುಸನೂರು, ಜೋಜನಾ- ಈ ಗ್ರಾಮಗಳನ್ನು ಸೇರಿಸುವುದರ ಸಲುವಾಗಿ ಸಲಹೆ ಬಂದಿದೆ ಇದನ್ನು 28 ಸಾವಿರ ಜನಸಂಖ್ಯೆಗೆ ಸೀಮಿತಗೊಳಿಸಿ, 700 ಲಕ್ಷ ರೂಪಾಯಿಗಳಿಗೆ ಈ ಜನಸಂಖ್ಯೆಯನ್ನು ಗುರುತಿಸಿಕೊಂಡು, ಕಾರ್ಯಕ್ರಮದ ಪ್ರಸ್ತಾವನೆ ನಮ್ಮ ಮುಂದೆ ಬಂದಿದೆ ಎಂದು ಹೇಳಲು ಬಯಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಸಚಿವರೆಂದರೆ Constitutional post ಆಗಿದೆಯಾ ಎಂಬುದು ಬೇಕು? ಅವರಿಗೇನು ಅಧಿಕಾರವಿದೆ? ಉಸ್ತುವಾರಿ ಸಚಿವರು ಹೇಳಿದ್ದ ಪಟ್ಟಿಯನ್ನು ತೆಗೆದುಕೊಳ್ಳುವುದಾದರೆ ಅವರ ಅಧಿಕಾರ ವ್ಯಾಪ್ತಿಯೇನು? ಅದು Constitutional post- ಹೌದಾ? ಶಾಸಕರು ಅವರವರ ಕ್ಷೇತ್ರದ್ದೇನು ಎಂಬ ಬಗ್ಗೆ ಸಲಹೆ ಕೊಡುವುದನ್ನು ನಾವು

ಕೇಳಿದ್ದೇವೆ ಆದರೆ, ಉಸ್ತುವಾರಿ ಸಚಿವರು selection ಮಾಡುವುದಕ್ಕೆ ಅರ್ಧವೇನಿದೆಯೆಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ

ಶ್ರೀ ಬಿ ಶಿವರಾಂ ಸ್ಥಳೀಯ ಶಾಸಕರ ಶಿಫಾರಸ್ಸು, ಇಲ್ಲಿ particular ಆಗಿ ಶಾಸಕರ ಬಗ್ಗೆಯೇ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಶ್ನೆಯನ್ನು ಕೇಳಿದ್ದಾರೆ ನಾಲ್ಕೂ ಪ್ರಶ್ನೆಗಳಿಗೂ evasive reply ಇದೆ ಶಾಸಕರನ್ನು ಕೇಳಿ ಮಾಡುತ್ತೇವೆ ಅಥವಾ ಇಲ್ಲ ಎಂಬ ಬಗ್ಗೆ specific ಆಗಿ ಹೇಳುವುದಿಲ್ಲ ಆದರೆ, ಅವರು ಏನು ಹೇಳುತ್ತಾರೆಂದರೆ, "ಸ್ಥಳೀಯ ಮುಖಂಡರು" ಅಂದರೆ ಶಾಸಕರನ್ನು ಹೊರತುಪಡಿಸಿ ಸ್ಥಳೀಯ ಮುಖಂಡರು ಬರುತ್ತಾರೆಯೇ? ಇವತ್ತು ಇದೇ ಪರಿಸ್ಥಿತಿ ನನ್ನ ಜಿಲ್ಲೆಯಲ್ಲಿ ಉಂಟಾಗಿದೆ ನನ್ನ ಕ್ಷೇತ್ರದಲ್ಲಿ ಕೂಡ ಇದರಲ್ಲಿ ಸಾಧಾರಣ 16 ಆಯ್ಕೆಯಾದರೂ ಅಧಿಕಾರಿಗಳು ಕನಿಷ್ಟ ಒಂದಕ್ಕೂ ಕೇಳುವುದಾಗಲಿ ಅಥವಾ ಒಂದು ಪತ್ರವನ್ನು ಬರೆಯುವುದಾಗಲಿ ಇಲ್ಲಿಯವರೆಗೂ ಮಾಡಲಿಲ್ಲ ಇಚ್ಛಾನುಸಾರ ಆಯ್ಕೆ ಮಾಡುವುದೆನ್ನುವುದಾದರೆ, ಇಲ್ಲಿ ಶಾಸಕರಿಗೆ ಆಯ್ಕೆಗೆ ಅಧಿಕಾರವಿದೆಯೇ ಎಂದು ಕೇಳಿದರೆ, ಉಸ್ತುವಾರಿ ಸಚಿವರಿಗೆ ಎಂದು ಹೇಳುವುದಾದರೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಉಸ್ತುವಾರಿ ಸಚಿವರಿಗೆ constitutional post ಇದೆಯೇ ಎಂದು ಕೇಳಿದರು ಅವರಿಗೆ ಅದು constitutional post ಎಂದು ಹೇಳಿತ್ತೀರಾ? ಶಾಸಕರನ್ನು ಅಷ್ಟರ ಮಟ್ಟಿಗೆ ಕಡೆಗಣಿಸಿ ಆಯ್ಕೆಮಾಡುವುದಾದರೆ ಇಡೀ ಜಿಲ್ಲೆಯಲ್ಲಿ ಎಲ್ಲರಿಗೂ ಅದೇ ನೀತಿಯನ್ನು ಅನುಸರಿಸುತ್ತಿರಾ?

ಕೆಲವರಿಗೆ ನೀವು ಪತ್ರ ಕೇಳಿ, ಅವರಿಂದ ಆಯ್ಕೆ ಪತ್ರ ಪಡೆದು ಆಯ್ಕೆ ಮಾಡಿದ್ದೀರಿ ಕಾಂಗ್ರೆಸ್ ಶಾಸಕರಿರುವ ಬಹುಪಾಲು ಕ್ಷೇತ್ರಗಳಲ್ಲಿ, ಅದು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿ ಇರಬಹುದು, ನಾನು ಇರಬಹುದು ಅಥವಾ ಬೇರೆಯವರು ಇರಬಹುದು, ಅಲ್ಲಿ, ನೀವಾಗಲಿ, ನಿಮ್ಮ ಇಲಾಖೆಯಾಗಲೀ ಅಥವಾ ಉಸ್ತುವಾರಿ ಸಚಿವರಾಗಲಿ, ಕನಿಷ್ಟ ಅಲ್ಲಿನ ಶಾಸಕರನ್ನು ಕೇಳುವಂತಹ ಸೌಜನ್ಯವನ್ನು ತೋರಿಸಲಿಲ್ಲ ಎನ್ನುವುದಾದರೆ, ಇದು ಎಷ್ಟರಮಟ್ಟಿಗೆ ತಾರತಮ್ಯವನ್ನು ತೋರಿಸಿದಂತಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಇದು ಒಳ್ಳೆಯದಲ್ಲ ದಯವಿಟ್ಟು ತಾವು ಶಾಸಕರನ್ನು consult ಮಾಡುವಂಥಾದ್ದನ್ನು ಇನ್ನು ಮುಂದೆಯಾದರೂ ಅನುಸರಿಸಿ

[ಗೊಂದಲ]

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ನಮಗೊಂದು ಸ್ಪಷ್ಟವಾಗಬೇಕು

[ಗೊಂದಲ]

ಶ್ರೀ ಬಿ ಶಿವರಾಂ – ಮಾನ್ಯ ಅಧ್ಯಕ್ಷರೆ, ಶಾಸಕರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ತಾವು ಆ ಸ್ಥಾನದಲ್ಲಿದ್ದು ಯೋಚನೆ ಮಾಡಬೇಕಾಗುತ್ತದೆ

ಅಧ್ಯಕ್ಷರು – ಮಾನ್ಯ ಶಿವರಾಂರವರೆ, ನಾನು ಯೋಚನೆ ಮಾಡಿದರೆ ಏನು ಪ್ರಯೋಜನವಾಗುತ್ತದೆ?

[ಗೊಂದಲ]

ಶ್ರೀ ಬಿ ಶಿವರಾಂ – ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ

[ಗೊಂದಲ]

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ನಮಗೊಂದು ಸ್ಪಷ್ಟನೆ ಬೇಕಾಗಿದೆ

[ಗೊಂದಲ]

ಅಧ್ಯಕ್ಷರು – ತಾವು ಒಬ್ಬೊಬ್ಬರಾಗಿ ಕೇಳಿ ನಂತರ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ

[ಗೊಂದಲ] .

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಸಚಿವರಿಗೆ ಸಂವಿಧಾನ ಬದ್ಧವಾದಂತಹ ಸ್ಥಾನ ಇದೆಯೇ? ಅಥವಾ ಸರ್ಕಾರದವರು, ಯಾವುದಾದರೂ rules ಅನ್ನು frame ಮಾಡಿ, ಇವರಿಗೆ ಏನಾದರೂ ಅಧಿಕಾರ ಕೊಟ್ಟಿದ್ದಾರೆಯೇ? ಇದು extra Constitutional authority ಆಗುತ್ತದೆ ಆದ್ದರಿಂದ ಇದು ಕಾನೂನು ಬದ್ಧವಲ್ಲ ಮತ್ತು ಸಂವಿಧಾನ ವಿರೋಧಿ ಇವರು ರಾಜಕೀಯ ಕಾರಣಗಳಿಗೋಸ್ಕರ ಉಸ್ತುವಾರಿ ಸಚಿವರನ್ನು ಮಾಡಿ, ಸ್ಥಳೀಯ ಶಾಸಕರನ್ನು ಕಡೆಗಣಿಸುತ್ತಾ ಹೋದರೆ, ನಾವೇಕೆ ಈ ಶಾಸನ ಸಭೆಗೆ ಬರಬೇಕು? ಉಸ್ತುವಾರಿ ಸಚಿವರ recommendation ಮೇಲೆ ಎಲ್ಲವನ್ನೂ ಮಾಡಿದರೆ ಹೇಗೆ? ಇವತ್ತು ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಬೇರೆ ಬೇರೆ ಅಭಿಪ್ರಾಯ ಇರುವಂತಹ ಪಕ್ಷದ ಶಾಸಕರುಗಳು ಆಯ್ಕೆಯಾಗಿರುತ್ತಾರೆ ಹೀಗಾದರೆ ಅವರ ಪರಿಸ್ಥಿತಿಗಳೇನು? "ಸ್ಥಳೀಯ ಮುಖಂಡರು" ಎಂದರೆ ಯಾರು? ಜಿಲ್ಲಾ ಉಸ್ತುವಾರಿ ಸಚಿವರ ಅಧಿಕಾರ ವಿರೋಧಿಸಿ ನಾವು ಧರಣಿ ಮಾಡಬೇಕಾಗುತ್ತದೆ

[ಗೊಂದಲ]

ಅಧ್ಯಕ್ಷರು – ಮಾನ್ಯ ಶ್ರೀರಾಮರೆಡ್ಡಿಯವರೆ, ಪ್ರಶ್ನೆ ಅಥವಾ ಸ್ಪಷ್ಟನೆ ಕೇಳಿ ಎಂದು ಮಾತನಾಡಲು ಅವಕಾಶ ಮಾಡಿಕೊಟ್ಟರೆ, ನೀವು ನಿಂತುಕೊಂಡು ಭಾಷಣ ಮಾಡುವುದಕ್ಕೆ start ಮಾಡಿದರೆ ಹೇಗೆ?

[ಗೊಂದಲ]

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಮತ್ತು ಮಾನ್ಯ ಸಚಿವರು ನೀಡಿದ ಉತ್ತರ ಎರಡನ್ನೂ ಕೂಡ ತಾವು ದಯವಿಟ್ಟು ಗಮನಿಸಬೇಕು "ಸ್ಥಳೀಯ ಶಾಸಕರು ಶಿಫಾರಸ್ಸು ಮಾಡುವ ಗ್ರಾಮಗಳನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗುವುದೇ?" ಎಂಬ ಪ್ರಶ್ನೆಗೆ "ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಗಳ ಜನಸಂಖ್ಯೆ/ಮತದಾರರ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಸ್ಥಳೀಯ ಅಧಿಕಾರಿಗಳು ಹಾಗೂ ಮುಖಂಡರೊಡನೆ ಸಮಾಲೋಚಿಸಿ, ಜಿಲ್ಲಾ ಉಸ್ತುವಾರಿ ಸಚಿವರಿಂದ ತಾಲ್ಲೂಕಿಗೆ ನಿಗದಿಪಡಿಸಿದ ಜನಸಂಖ್ಯೆಯ ಮಿತಿಯೊಳಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು" ಎಂದು ಉತ್ತರಿಸಲಾಗಿದೆ ಮಾನ್ಯ ಮಂತ್ರಿಗಳು ಈಗ ರಾಜೀನಾಮೆ ಕೊಡಬೇಕಾಗುತ್ತದೆ ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಬಹಳ ಗೌರವವಿದೆ ಆದರೆ ಅದೇ ಬೇರೆ, ಇದೇ ಬೇರೆ ಜಿಲ್ಲಾ ಉಸ್ತುವಾರಿ ಸಚಿವರು ಯಾರು? ಅವರೇನು ಕ್ಷೇತ್ರಗಳಿಗೆ ಪಾಳೆಗಾರರೇ? "ಸ್ಥಳೀಯ ಮುಖಂಡರು" ಎಂದರೆ ಯಾರು?

[ಗೊಂದಲ]

ಅಧ್ಯಕ್ಷರು – ಒಬ್ಬೊಬ್ಬರಾಗಿ ಮಾತನಾಡಿ

[ಗೊಂದಲ]

ಶ್ರೀ ವಾಟಾಳ್ ನಾಗರಾಜ್ – ಈ ಪ್ರಶ್ನೆ ಸದನದಲ್ಲಿ ಇತ್ಯರ್ಥವಾಗಲೇ ಬೇಕು

[ಗೊಂದಲ]

ಅಧ್ಯಕ್ಷರು – ಮೊದಲು ಮಾನ್ಯ ಮಂತ್ರಿಗಳು ಉತ್ತರ ಹೇಳಲಿ ನಂತರ ಸ್ಪಷ್ಟೀಕರಣ ಕೇಳಿ

[ಗೊಂದಲ]

ಒಬ್ಬೊಬ್ಬರಾಗಿ ಮಾತನಾಡಿ ಎಲ್ಲರೂ ಹೀಗೆ ನಿಂತುಕೊಂಡರೆ ಹೇಗೆ?

[ಗೊಂದಲ]

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಲೇಬೇಕು ಇದು ಒಳ್ಳೆಯ ಸೂಚನೆಯಲ್ಲ

[ಗೊಂದಲ]

ಅಧ್ಯಕ್ಷರು – ಎಲ್ಲರೂ ಹೀಗೆ ನಿಂತುಕೊಂಡು ಮಾತನಾಡಿದರೆ ಹೇಗೆ? ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಇದೆ ಆದರೆ ಎಲ್ಲರೂ ಹೀಗೆ ನಿಂತುಕೊಂಡು ಮಾತನಾಡಿದರೆ, ನಾನು ಪ್ರಶ್ನೋತ್ತರ ನಡೆಸುವುದು ಹೇಗೆ? ಬಹಳ ಜನ ಕೇಳಿದ್ದಾರೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ

[ಗೊಂದಲ]

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ನಾನು ಸ್ವಲ್ಪ ಮಾತನಾಡುತ್ತೇನೆ

[ಗೊಂದಲ]

ಅಧ್ಯಕ್ಷರು – ಆಯಿತು, ಒಬ್ಬೊಬ್ಬರಾಗಿ ಮಾತನಾಡಿ ಎಲ್ಲರೂ ನಿಂತುಕೊಂಡರೆ ಹೇಗೆ?

[ಗೊಂದಲ]

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ – ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಹಿಂದಿನ ಸಾಲಿನವರಿಗೂ ಮಾತನಾಡಲು ಅವಕಾಶ ಕೊಡಬೇಕು ಯಾವಾಗಲೂ ಮುಂದಿನ ಸಾಲಿನವರಿಗೇ ಮಾತನಾಡಲು ಅವಕಾಶ ಕೊಟ್ಟರೆ ಹೇಗೆ? ನಾವೂ ಸಹ ವಿದಾಸಸಭಾ ಸದಸ್ಯರಾಗಿ ಆರಿಸಿ ಬಂದಿದ್ದೇವೆ ದಯವಿಟ್ಟು ಹಿಂದಿನ ಸಾಲಿನವರಿಗೂ ಮಾತನಾಡಲು ಅವಕಾಶ ಕೊಡಿ ನಮ್ಮನ್ನು ಏಕೆ ಕಡೆಗಣಿಸುತ್ತೀರಿ?

ಅಧ್ಯಕ್ಷರು ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿದ ಮೇಲೆ ತಮಗೂ ಅವಕಾಶ ಕೊಡುತ್ತೇನೆ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಸಿದ್ಧರಾಮಯ್ಯ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು "ಸ್ಥಳೀಯ ಶಾಸಕರು ಎಷ್ಟು ಗ್ರಾಮಗಳನ್ನು ಶಿಫಾರಸ್ಸು ಮಾಡಿದ್ದರು ಹಾಗೂ ಉಳಿದ ಗ್ರಾಮಗಳನ್ನು ಶಿಫಾರಸ್ಸು ಮಾಡಿರುವವರು ಯಾರು [ವಿವರಗಳನ್ನು ನೀಡುವುದು]?" ಎಂಬ ಪ್ರಶ್ನೆಗೆ ಮಾನ್ಯ ಸಚಿವರು "ಅನ್ವಯಿಸುವುದಿಲ್ಲ" ಎಂದು ಉತ್ತರ ಕೊಟ್ಟಿದ್ದಾರೆ ಅಂದರೆ ನೀವು ಶಾಸಕರನ್ನು ಗಣನೆಗೇ ತೆಗೆದುಕೊಂಡಿಲ್ಲ ಎಂಬುದು ಸ್ಪಷ್ಟವಾಯಿತು "ಈ ಯೋಜನೆಗೆ ಗ್ರಾಮಗಳನ್ನು ಶಿಫಾರಸ್ಸು ಮಾಡುವಾಗ ಸ್ಥಳೀಯ ಶಾಸಕರುಗಳ ಪ್ರಸ್ತಾವನೆಗೆ ಆದ್ಯತೆಯನ್ನು ನೀಡಲಾಗುವುದೇ?" ಎಂಬ ಪ್ರಶ್ನೆಗೆ "ಉತ್ತರ [ಈ]ನಲ್ಲಿದ್ದಂತೆ" ಎಂದು ಮಾನ್ಯ ಸಚಿವರು ಹೇಳಿದ್ದಾರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದೇ ಪಾರ್ಟಿಯಿಂದ ಗೆದ್ದು ಬಂದಿರಲಿ, ಜನ ಅವರಿಗೆ ಆಯ್ಕೆ ಮಾಡಿ ಕಳುಹಿಸಿರುತ್ತಾರೆ ನೀವು ಎಂ ಎಲ್ ಎ ಬಿಟ್ಟು, ಸ್ಥಳೀಯ ಮುಖಂಡರುಗಳು ಅಥವಾ ಜಿಲ್ಲಾ ಮಂತ್ರಿಗಳ ಶಿಫಾರಸ್ಸಿನ ಮೇರೆಗೆ ಮಾಡುವುದಾದರೆ, ಜನ ಆಯ್ಕೆ ಮಾಡಿದವರಿಗೆ ಅಗೌರವ ಸೂಚಿಸಿದಂತಾಗುವುದಿಲ್ಲವೇ? ಆ ಎಂ ಎಲ್ ಎ ಗೆ ಅಗೌರವ ಮಾಡುವುದೆಂದರೆ, ಆ ಕ್ಷೇತ್ರದ ಜನತೆಗೇ ಅಗೌರವ ಮಾಡಿದಂತಾಗುತ್ತದೆ

ತನ್ಮೂಲಕ ಅವರು ಆಯ್ಕೆಯಾಗಿರುವ ಸಭೆಗೂ ಅವಮಾನ ಮಾಡಿದಂತಾಗುತ್ತದೆ ಇದರಿಂದಾಗಿ ಶಾಸಕರ ಹಕ್ಕುಚ್ಯುತಿಯಾಗುತ್ತದೆ ಜಿಲ್ಲಾ ಮಂತ್ರಿಗಳು ಮೇಲ್ವಿಚಾರಣೆ ಮಾಡಬಹುದೇ ಹೊರತು, ಅವರಿಗೆ ರಾಜ್ಯಾಂಗಬದ್ಧವಾಗಿ ಯಾವುದೇ ಅಧಿಕಾರವಿಲ್ಲ ಜಿಲ್ಲಾ ಮಂತ್ರಿ ಎನ್ನುವುದೇ Constitutionನಲ್ಲಿ ಇಲ್ಲ ಅವರಿಗೆ ಅಧಿಕಾರ ಎಲ್ಲಿಂದ ಬಂತು? ಸರ್ಕಾರ ಯಾವ ತಿದ್ದುಪಡಿ ಮೂಲಕ ಅವರಿಗೆ ಅಧಿಕಾರ ಕೊಟ್ಟಿದ್ದಾರೆ?

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ– ಮಾನ್ಯ ಅಧ್ಯಕ್ಷರೆ, ನಮಗೂ ಮಾತನಾಡಲು ಅವಕಾಶ ಕೊಡಬೇಕು

ಶ್ರೀ ಸಿದ್ಧರಾಮಯ್ಯ– ನೀವು ಆಮೇಲೆ ಮಾತನಾಡಿ, 'ಬೇಡ' ಎಂದು ಯಾರೂ ಹೇಳುವುದಿಲ್ಲ You have got all the rights ನೀವು ನಂತರ ಎಷ್ಟು ಬೇಕಾದರೂ ಮಾತನಾಡಿ ಮಾನ್ಯ ಉದಾಸಿಯವರೆ, ತಾವು Senior Member ಆಗಿದ್ದೀರಿ, ಬಹಳ ವರ್ಷಗಳಿಂದ ಶಾಸಕರಾಗಿದ್ದು, ಈಗ ಮಂತ್ರಿಯಾಗಿದ್ದೀರಿ ನಮಗೆ ಬಹಳ ಸಂತೋಷ But, ಈ ತರಹದ ನಡವಳಿಕೆ ಇದೆಯಲ್ಲಾ, ಇದು ಪ್ರಜಾಪ್ರಭುತ್ವಕ್ಕೆ ಮಾಡತಕ್ಕಂಥ ಅಗೌರವ ಈ ಸದನಕ್ಕೆ ಮಾಡತಕ್ಕಂಥ ಅಗೌರವ ಮತ್ತು ಮಾನ್ಯ ಸದಸ್ಯರಿಗೆ ಮಾಡತಕ್ಕಂಥ ದೊಡ್ಡ ಅಗೌರವವಾಗುತ್ತದೆ ನಿಮ್ಮ ಪಾರ್ಟಿಯವರು ಇರುವ ಕಡೆ ಆಯಾ ಕ್ಷೇತ್ರಗಳಲ್ಲಿ ಅವರು ಹೇಳಿದಂತೆ ನೀವು ಮಾಡಿ ಕೊಡಿ ಮಾನ್ಯ ಗುರುಪಾದಪ್ಪನವರು ಔರಾದ್ ಕ್ಷೇತ್ರದವರು ಅವರನ್ನು ಅಲ್ಲಿ ಕೇಳಿ ಗ್ರಾಮವನ್ನು ಆಯ್ಕೆ ಮಾಡಿಲ್ಲ ಈ ತರಹ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಆಗಿದೆ ನಾನಿನ್ನೂ ಗೆದ್ದಿಲ್ಲವಲ್ಲಾ, ಆದ್ದರಿಂದ ನನ್ನನ್ನು ಈ ವಿಷಯವಾಗಿ ಕೇಳಿಲ್ಲವೆಂದು ನಾನು ಅಂದುಕೊಂಡಿದ್ದೆ ನಾನು ಈ ಬಗ್ಗೆ ಡಿ ಸಿ ಯವರನ್ನು ಕೇಳಿದಾಗ ಅವರು ನೀವು ಆಯ್ಕೆಯಾಗುವುದಕ್ಕಿಂತ ಮುಂಚಿತವಾಗಿಯೇ ಇದೆಲ್ಲಾ ಆಗಿದೆ ಎಂದು ಹೇಳಿದ್ದರಿಂದ ನಾನು ಸುಮ್ಮನಾಗಿದ್ದೆ ಆದರೆ ನೀವು ಯಾರನ್ನೂ ಕೇಳಿಯೇ ಇಲ್ಲವೆಂದು ಇಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯಗಳಿಂದ ವ್ಯಕ್ತವಾಗುತ್ತಿದೆ ಯಾರನ್ನೂ ಕೇಳದೇ ನೀವು ಮಾಡಿದರೆ, ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ನೀವು ಕೆಲಸ ಮಾಡುತ್ತಿದ್ದೀರಿ ಎಂದು ಹೇಳ ಬೇಕು? ಅಭಿವೃದ್ಧಿ ಕೆಲಸಗಳಿಗೂ ಕೂಡ ಎಂ ಎಲ್ ಎ ಮಾತು ನಡೆಯಲಿಲ್ಲವೆಂದರೆ ಆ ಎಂ ಎಲ್ ಎ ಗಳು ಏಕೆ ಇರಬೇಕು? ಈ ರೀತಿ ಸರ್ಕಾರ ನಡೆಸಲಿಕ್ಕೆ ನಿಮಗೆ ಯಾವ ನೈತಿಕ ಹಕ್ಕು ಇದೆ? This is not correct It amounts to breach of privilege

ಅಧ್ಯಕ್ಷರು – ಮಾನ್ಯ ಸಿದ್ಧರಾಮಯ್ಯನವರೆ, let him answer

ಶ್ರೀ ಸಿದ್ಧರಾಮಯ್ಯ– ಈಗ ಆಯ್ಕೆ ಮಾಡಿರುವುದನ್ನು ರದ್ದು ಮಾಡಿ, ಹೊಸದಾಗಿ ಶಾಸಕರುಗಳ ಮೂಲಕ ಪಟ್ಟಿ ತರಿಸಿಕೊಂಡು ಅದನ್ನು ಮಂಜೂರು

ಮಾಡಿಕೊಡಬೇಕು ಇಲ್ಲದಿದ್ದರೆ, It amount to breach of privilege ಇದು ಸದನಕ್ಕೆ ಗೌರವ ತರತಕ್ಕದ್ದಲ್ಲ ಯಾವುದೇ ಪಕ್ಷದ ಸರ್ಕಾರ ಇರಲಿ, ಸರ್ಕಾರ ಈ ರೀತಿಯಾಗಿ ಸ್ವೇಚ್ಛೆಯಾಗಿ ತನಗೆ ಇರತಕ್ಕ ಅಧಿಕಾರ ಚಲಾಯಿಸಲಿಕ್ಕಾಗುವುದಿಲ್ಲ I demand, ಇಡೀ ಲಿಸ್ಟನ್ನು ಶಾಸಕರನ್ನು ಕೇಳದೇ ಮಾಡಿದ್ದರೆ, ಅದನ್ನು ರದ್ದು ಮಾಡಬೇಕು ಮತ್ತೆ ಶಾಸಕರಿಂದ ಪಟ್ಟಿಯನ್ನು ಪಡೆದುಕೊಂಡು ಹೊಸದಾಗಿ ಕ್ರಿಯಾ ಯೋಜನೆಯನ್ನು ತಯಾರು ಮಾಡಬೇಕು District Minister has no role to select the villages

ಶ್ರೀ ಕೆ ಎಸ್ ಈಶ್ವರಪ್ಪ – ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಾನು ಇನ್ನೂ ಪ್ರಶ್ನೆಯನ್ನೇ ಕೇಳಿಲ್ಲ ತಾವು ಆಗಲೇ ಉತ್ತರವನ್ನು ಹೇಳುತ್ತಿದ್ದೀರಿ

ಶ್ರೀ ಕೆ ಎಸ್ ಈಶ್ವರಪ್ಪ – ನಾನು ಒಂದೇ ನಿಮಿಷ ನನ್ನ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ

ಅಧ್ಯಕ್ಷರು – ಅವರು Senior Minister, ಅವರು ಏನು ಹೇಳುತ್ತಾರೋ ಕೇಳೋಣ ಇರಿ

ಶ್ರೀ ಕೆ ಎಸ್ ಈಶ್ವರಪ್ಪ – ಮಾನ್ಯ ಅಧ್ಯಕ್ಷರೇ, ನಾನು ಹದಿನೈದು ವರ್ಷಗಳ ಕಾಲ ವಿರೋಧ ಪಕ್ಷದ ಶಾಸಕನಾಗಿ ಕೆಲಸ ಮಾಡಿದ್ದೇನೆ ಹಿಂದೆ ಮಾನ್ಯ ಉಪಮುಖ್ಯಮಂತ್ರಿಗಳಾಗಿದ್ದವರು, ಇವತ್ತು ಈ ಪ್ರಶ್ನೆಯನ್ನು ಕೇಳುತ್ತಿದ್ದಾರಲ್ಲಾ ಎಂದು ನನಗೆ ಬಹಳ ಸಂತೋಷವಾಯಿತು, ಒಂದು ರೀತಿಯ ಸಮಾಧಾನವಾಯಿತು

ಅಧ್ಯಕ್ಷರು – ಈಗ ಅವರು ವಿರೋಧ ಪಕ್ಷದ bench ನಲ್ಲಿದ್ದಾರೆ, ಆದ್ದರಿಂದ ಅವರು ಆ ರೀತಿ ಕೇಳಲೇಬೇಕು

ಶ್ರೀ ಕೆ ಎಸ್ ಈಶ್ವರಪ್ಪ – ನನಗ ಬಹಳ ಸಂತೋಷವಾಯಿತು ವಿರೋಧ ಪಕ್ಷದ ಶಾಸಕರೂ ಕೂಡ ಜನಗಳ ಮಧ್ಯದಿಂದ ಗೆದ್ದು ಬಂದಿದ್ದಾರೆ ಜನರ ಪ್ರತಿನಿಧಿಗಳಾಗಿ ಅವರೂ ಇದ್ದಾರೆ ಅವರ ಮಾತನ್ನೂ ಕೂಡ ಕೇಳಬೇಕು ಎನ್ನುವಂತಹ ಭಾವನೆ ಇವತ್ತಾದರೂ ಅವರಲ್ಲಿ ಬಂತಲ್ಲಾ ಎಂದು ನನಗೆ ಸಂತೋಷವಾಗುತ್ತಿದೆ ಏಕೆಂದರೆ, 15 ವರ್ಷಗಳಿಂದ ನಾನು ವಿರೋಧ ಪಕ್ಷದ ಶಾಸಕನಾಗಿದ್ದಾಗ, ಪ್ರತಿಯೊಂದು ಬೋರ್ಡ್‌ಗೂ ಕೂಡ, ಪ್ರತಿಯೊಂದು ಕಮಿಟಿಗೂ ಸದಸ್ಯರನ್ನು ನಾವು ಆಯ್ಕೆ ಮಾಡಿ ಕಳುಹಿಸಿದಂತಹ ಪಟ್ಟಿಗೂ ನಮಗೂ ಸಂಬಂಧವೇ ಇಲ್ಲವೆನ್ನುವಂತೆ ಆಗ ಆಡಳಿತ ಪಕ್ಷ ನಡೆದುಕೊಂಡಿತ್ತು

ಏಕೆಂದರೆ, ಇವತ್ತು ವಿರೋದಪಕ್ಷ, ಆಡಳಿತ ಪಕ್ಷ ಎಂಬ ಎರಡು ಕೂಡ ಪ್ರಜಾಪ್ರಭುತ್ವ ರಕ್ಷಣೆ ಮಾಡುವಂತಹ ಎರಡು ಚಕ್ರಗಳು ಎಂದು ನಿಮ್ಮ ಬಾಯಿಯಲ್ಲಿ

ಬರುತ್ತಿರುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ ಇವತ್ತು ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಅನೇಕ ವರ್ಷಗಳಿಂದ ಏನು ವ್ಯವಸ್ಥೆಗಳನ್ನು ಮಾಡಿಕೊಂಡು ಬಂದಿರುತ್ತಾರೆ, ಆ ವ್ಯವಸ್ಥೆಗಳನ್ನು ಈಗ ಮುಂದುವರಿಸಿಕೊಂಡು ಹೋಗಿರುವ ಒಂದು ವ್ಯವಸ್ಥೆ ಇದಾಗಿದೆ ಇದು ಸರಿ ತಪ್ಪು ಎನ್ನುವುದರ ಬಗ್ಗೆ ಚರ್ಚೆಯಾಗುತ್ತಿದೆ ಮಾನ್ಯ ಮಾಧುಸ್ವಾಮಿಯವರೆ, ನಾನು ನಿಮ್ಮ ಪಕ್ಕದಲ್ಲಿ ಕುಳಿತುಕೊಂಡು ಇವತ್ತೇನು ಮಾನ್ಯ ಸಿದ್ಧರಾಮಯ್ಯನವರೆ ಬಾಯಿಯಲ್ಲಿ ಬರುತ್ತಿದೆ ಆ ಮಾತುಗಳನ್ನು ನಾನು ಆಡಿದ್ದೆ ಇಲ್ಲಿ [ಆಡಳಿತದಲ್ಲಿದ್ದಾಗ] ಕುಳಿತಾಗ ಏತಕ್ಕೆ ಜ್ಞಾನೋದಯವಾಗಿರಲಿಲ್ಲ?

ಶ್ರೀ ವಾಟಾಳ್ ನಾಗರಾಜ್ ಅವರಿಗೆ ಜ್ಞಾನೋದಯವಿಲ್ಲ, ತಾವು ಪರಮ ಪವಿತ್ರರು ತಮಗೆ ಜ್ಞಾನೋದಯವಾಗಿದೆ, ನೀವಾದರೂ ಹೇಳಿ ಸ್ವಾಮಿ

[ಗೊಂದಲ]

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಇದೇನು, ಸರ್ಕಾರದ ಉತ್ತರವೇ?

ಅಧ್ಯಕ್ಷರು ಈ ಪ್ರಶ್ನೆಗೆ 20 ನಿಮಿಷಗಳಾಯಿತು, ಈ ರೀತಿ ಮಾಡುವುದು ಸರಿಯಲ್ಲ, ಪ್ರಶ್ನೋತ್ತರವನ್ನು ಒಂದು ಗಂಟೆಯೊಳಗೆ ಮುಗಿಸಬೇಕಾಗುತ್ತದೆ ಬೇಕಾದರೆ, ಇದನ್ನು ನಿಮಗೆ ಇಷ್ಟ ಬಂದ ರೀತಿಯಲ್ಲಿ ಬೇರೆ ರೀತಿಯಲ್ಲಿ convert ಮಾಡುತ್ತೇನೆ, ಬೇರೆ ವಿಚಾರವನ್ನು ಬೇರೆ ರೀತಿಯಲ್ಲಿ ಎತ್ತಿ ಇದಕ್ಕೆಲ್ಲಾ ಒಂದು ನಿಯಮವಿದೆ

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೆ, ಅವರ ಕಾಲದಲ್ಲಿ, ಜಿಲ್ಲಾ ಸಚಿವರೆಂದರೆ, ಜಿಲ್ಲೆಯ ಪಾಳೆಗಾರರಂತೆ ಇದ್ದರು, ಅವತ್ತು ನಾವು ಯಾರು ಏನು ಹೇಳಿದರೂ ಏನೂ ಕೆಲಸಗಳಾಗುತ್ತಿರಲಿಲ್ಲ, ಜಿಲ್ಲಾ ಸಚಿವರು ಪಾಳೆಗಾರರೇ ಆ ರೀತಿಯಾಗಿ ನಡೆಸಿಕೊಂಡ ಅವರು, ಆ ಕಡೆ ಹೋದ ಮೇಲೆ ಜ್ಞಾನೋದಯವಾಗಿದೆ, ಮಾನ್ಯ ಈಶ್ವರಪ್ಪನವರು ಹೇಳಿದಂತೆ ಇದು ಬಹಳ ಹೆಲ್ತಿ ಅಟ್ಮಾಸ್ಪಿಯರ್ ಈ ಕಡೆ ಒಂದು ಡಿಸಿಷನ್, ಆ ಕಡೆ ಕುಳಿತಾಗ ಒಂದು ಡಿಸಿಷನ್ ಏತಕ್ಕಾಯಿತೋ ಗೊತ್ತಿಲ್ಲ, ಅವತ್ತು ಬಹಳ ದೊಡ್ಡ ಪಾಳೆಗಾರಿಕೆಯನ್ನು ನಡೆಸುತ್ತಿದ್ದರು

[ಗೊಂದಲ]

ಅಧ್ಯಕ್ಷರು ಈಗ Minister concerned ಉತ್ತರವನ್ನು ಹೇಳಲಿ, ಕ್ಲೋಸ್ ಮಾಡೋಣ, ಇದು ಪ್ರಶ್ನೋತ್ತರ ಕಾಲ, ಈ ತರಹ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಯಾರಾದರೂ ಒಬ್ಬರು ಮಾತನಾಡಿ

[ಗೊಂದಲ]

ಶ್ರೀ ನೆಹರು ಓಲೇಕಾರ ಚನ್ನಬಸಪ್ಪ ಮಾನ್ಯ ಅಧ್ಯಕ್ಷರೆ, ಈವರೆವಿಗೂ ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳು ಮಾತನಾಡಿದರು ನಾವು ಸಹ ವಿರೋಧ ಪಕ್ಷದಲ್ಲಿ ಕುಳಿತಿದ್ದೆವು ಆ ಸಂದರ್ಭದಲ್ಲಿ, 20 ತಿಂಗಳುಗಳಲ್ಲಿ ನಾವು ಅನೇಕ ಪತ್ರಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕೊಡುತ್ತಿದ್ದೆವು ಆ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಒಂದೇ ಒಂದು ಕೆಲಸ ಸಹಿತ ನಮ್ಮನ್ನು ಕೇಳದೇ, ಸೋತಂಥ ವಿರೋಧಿ ಶಾಸಕರು ಕೊಟ್ಟಂತಹ ಪಟ್ಟಿಗಳಿಗೆ ಮಂಜೂರಾತಿ ಕೊಟ್ಟಂತಹ ಅನೇಕ ಉದಾಹರಣೆಗಳು ನಮ್ಮ ಎದುರಿಗಿವೆ ಇಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಸಚಿವರು, ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರೆಂದ ಕೂಡಲೇ, ಭಯಂಕರವಾಗಿ ಅದನ್ನು ದೊಡ್ಡದಾಗಿ ಮಾಡುವುದು ಸರಿಯಾಗಿ ಕಾಣುವುದಿಲ್ಲ ಅದಕ್ಕೆ ಇವತ್ತು ಏನೇ ಕೆಲಸಗಳಿದ್ದರೂ ಸಹ, ಏನು ಹಿಂದಿನಿಂದ ಅವರು ಹಾಕಿಕೊಟ್ಟಂತಹ ದಾರಿಯಿದೆ ಆ ದಾರಿಯಲ್ಲಿ ಇವತ್ತಿನ ದಿವಸ ನಡೆದಿದ್ದೇವೆಯೇ ಹೊರತು ಬೇರೆ ಏನು ಆಗಿಲ್ಲ. ಇವತ್ತು ಆ ಕೆಲಸಗಳನ್ನು ನಮ್ಮನ್ನೆಲ್ಲಾ ಕೇಳಿಯೇ ಹಾಕಿದ್ದಾರೆ, ಎಲ್ಲಾ ಕೆಲಸಗಳು ಸರಿ ಇವೆ, ಅದರಲ್ಲೇನೂ ವಿಚಾರ ಮಾಡುವುದಿಲ್ಲವೆಂದು ನಾನು ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ

[ಗೊಂದಲ]

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಇವತ್ತು ಈ ಲಿಸ್ಟ್ ಅನ್ನು ಕ್ಯಾನ್ಸಲ್ ಮಾಡಬೇಕು, ಮುಖಂಡರೆಂದರೆ ಏನು? ಯಾರು ಮುಖಂಡರು? ಸ್ಥಳೀಯ ಮುಖಂಡರೆಂದರೆ ಯಾರು? ಸ್ಥಳೀಯ ಮುಖಂಡರೆಂದರೆ ಚುನಾಯಿತ ಪ್ರತಿನಿಧಿನಾ? ಸ್ಥಳೀಯ ಮುಖಂಡರೆಂದರೆ ಯಾರು? ಚುನಾಯಿತರು ಎಲ್ಲಿಗೆ ಹೋಗಬೇಕು? ಅವರ ವರ್ಕರ್ಸ್ ಹೇಳಿದ್ದನ್ನು ಕೇಳಿ ಇವರು ಮಾಡುತ್ತಾರಾ? ಅವರು ಹೇಳುತ್ತಿದ್ದಾರೆ, ಅವರು ಹೇಳಿದ್ದೆಲ್ಲಾ ಸರಿ ಇದೆ, ಅವರ್ಯಾರೋ ಒಬ್ಬರು ಶಾಸಕರು ಹೇಳಿದ್ದಾರೆ, ಅವರು ಹೇಳಿದ್ದನ್ನು ಮಾಡಿದ್ದಾರೆ ಮುಖಂಡರೆಂದರೆ ಯಾರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು ಜೊತೆಗೆ ಈ ಲಿಸ್ಟ್ ಅನ್ನು ಕ್ಯಾನ್ಸಲ್ ಮಾಡಬೇಕು ಶಾಸಕರಿಗೆ ಸಂಬಂಧವಿಲ್ಲವೆಂದು ಹೇಳುತ್ತೀರಿ ಹೀಗಾಗುವುದಕ್ಕೆ ಸಾಧ್ಯವಿಲ್ಲ, ಹೀಗೆ ಮಾಡುವುದಕ್ಕೆ ಬರುವುದಿಲ್ಲ ಹೀಗೆ ಮಾಡಬಾರದು ಈ ಪಟ್ಟಿಯನ್ನು ರದ್ದು ಮಾಡಬೇಕು

[ಗೊಂದಲ]

ಅಧ್ಯಕ್ಷರು ಈ ರೀತಿ ಮಾಡುವುದು ಸರಿಯಲ್ಲ ನಾವು ಯಾರಿಗೆ ಹೇಳುವುದಕ್ಕಾಗುತ್ತದೆ?

[ಗೊಂದಲ]

ಶ್ರೀ ಸಿದ್ದು ಸವದಿ ಅಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗು ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಕೇಳಿ ಮಾಡುತ್ತಾರೆ, ಅವರೇ ಮುಖಂಡರು

[ಗೊಂದಲ]

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಿಮಗೆ ಅವಮಾನವಾದರೆ ಗೊತ್ತಾಗುತ್ತದೆ ನೀವು 'ಇವತ್ತು ಬಂದು ಹೇಳುತ್ತಿದ್ದೀರಿ ಎಲ್ಲಾ ಗೊತ್ತಿದೆ, ನಾವು 6ನೇ ಸಲ ಆರಿಸಿ ಬಂದಿದ್ದೇವೆ, ಬಹಳ ಗೊತ್ತಿದೆ, ಇಂತಹದ್ದನ್ನು ನಾನು ಬಹಳ ನೋಡಿದ್ದೇನೆ, ಏತಕ್ಕೆ ಮಾತನಾಡುತ್ತೀರಿ? ನೀವು ಮಾತನಾಡುವ ಪದ್ಧತಿನಾ ಇದು?

[ಗೊಂದಲ]

ಅಧ್ಯಕ್ಷರು ಈ ತರಹವಾದರೆ ಏನು ಮಾಡುವುದು? ಯಾರೂ ನಿಯಮದ ಪ್ರಕಾರ ನಡೆದುಕೊಳ್ಳುವುದಿಲ್ಲ ದಯಮಾಡಿ ಕುಳಿತುಕೊಳ್ಳಿ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ

[ಗೊಂದಲ]

ಶ್ರೀ ಸಿ ಎಂ ಉದಾಸಿ ಸನ್ಮಾನ್ಯ ಅಧ್ಯಕ್ಷರೆ, ನಾನು ವಿಷಾದ ವ್ಯಕ್ತಪಡಿಸಿ, ಇಲ್ಲಿ ಒಂದು ಪ್ರಮಾದದ ಬಗ್ಗೆ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ ಇಂಗ್ಲೀಷ್‌ನಲ್ಲಿ ಮತ್ತು ಕನ್ನಡದಲ್ಲಿ ಕೊಟ್ಟಿರುವ ಉತ್ತರ [ಡಿ] ನಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬೇಕೆಂದು ನನ್ನ ಭಾವನೆ ಇದೆ ಇಲ್ಲಿ ಏನು ಮಾಡಿದ್ದಾರೆಂದರೆ, 'Whether the recommendation of the local legislators are being considered for selection of villages' ಎಂದು ಇದ್ದಲ್ಲಿ 'In a given district, the district in charge Minister will finalize the list of villages in accrodance with the guidelines and in consultation with local officers and elected representatives While doing so, ' ಎಂದು ಇದೆ ಇದನ್ನು ಅನುವಾದ ಮಾಡುವಾಗ ತಪ್ಪಾಗಿರಬಹುದು ಎಂದು ನನಗೆ ಸ್ವಲ್ಪ ವಿಷಾದವೆನಿಸುತ್ತದೆ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ಅವರ ಪ್ರಕಾರವೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಕನ್ನಡದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಿರಬಹುದು, ಇಂಗ್ಲೀಷ್‌ನಲ್ಲಿ elected representatives ಎಂದು ಹೇಳಿದ್ದಾರೆ ಮಾನ್ಯ ಸದಸ್ಯರ ನಿರ್ದಿಷ್ಟ ಪ್ರಶ್ನೆ ಇರುವುದು, ಶಾಸಕರನ್ನು ಕೇಳಿದ್ದೀರಾ ಅದವಾ ಶಾಸಕರನ್ನು ಕೇಳಿಲ್ಲ ಎನ್ನುವುದು ಮಾತ್ರ. Elected representatives ಅಂದರೆ, ಗ್ರಾಮ ಪಂಚಾಯಿತಿ ಸದಸ್ಯರನ್ನು ಕೇಳಿದ್ದೇವೆ, ತಾಲ್ಲೂಕು ಸದಸ್ಯರನ್ನು ಕೇಳಿದ್ದೇವೆ, ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಕೇಳಿದ್ದೇವಂದಲ್ಲ ಅವರ ಪ್ರಶ್ನೆ, it is very very specific

ಶಾಸಕರು, ಅವರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳುತ್ತಿದ್ದಾರೆ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದಾರಾ ಇಲ್ಲವಾ? ಹಾಗೆ ಕೇಳಿದ ತಕ್ಷಣವೆ, ಹಿಂದೆಯೆಲ್ಲಾ ನೀವು ಮಾಡುತ್ತಿದ್ದೀರಿ, ನಾವು ಹಾಗೆ ಮಾಡುತ್ತೇವೆ, ನಾವೇನು ಶಾಸಕರನ್ನು ಕೇಳುವುದಿಲ್ಲವೆಂದರೆ, political nominations ಬೇರೆ, constituency ಅಭಿವೃದ್ಧಿ ಕೆಲಸಗಳು ಬೇರೆ

ವ್ಯತ್ಯಾಸ ಗೊತ್ತಾಗಬೇಕು Political nomination ಮಾಡುವಾಗ ಎಲ್ಲ ಮಾಡಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ ನಾವೂ ಇದ್ದಾಗ ಕೂಡ ಮಾಡಿದ್ದೇವೆ ಇವರು political nomination ಮಾಡಿದಾಗ, ನಾವೇನು ಕೇಳುವುದಕ್ಕೆ ಹೋಗಲಿಲ್ಲ ಆದರೆ ಅವರವರ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೂ ಕೂಡ ನಾವು ರಾಜಕೀಯ ಮಾಡುತ್ತೇವೆ, ನಮಗೆ ಅಧಿಕಾರ ಇದೆ, ನಮ್ಮ ಕಾರ್ಯಕರ್ತರಿಗೆ ಕೇಳಿ ಮಾಡುತ್ತೇವೆ, MLA ಗಳಿಗೆ ಕೇಳುವುದಿಲ್ಲವೆಂದು ಹೇಳಿದರೆ ಇದನ್ನು ಪ್ರಜಾಪ್ರಭುತ್ವವೆಂದು ಕರೆಯಬೇಕಾ?ಹಾಗಾದರೆ ನಿಮಗೆ ಪ್ರಜಾಪ್ರಭುತ್ವದ ಬಗ್ಗೆ ಜ್ಞಾನೋದಯವೇ ಆಗಿಲ್ಲವೆಂದಾಗುತ್ತದೆ ಆದ್ದರಿಂದ ಅವರು ಅವರಿಗೆ ಕೇಳದೇ ಇರುವುದರಿಂದ, ಆ ಲಿಸ್ಟನ್ನು ವಜಾ ಮಾಡಬೇಕು ಯಾರ್ಯಾರು MLA ಗಳಿಗೆ ಕೇಳಿಲ್ಲ, ಆ ಪಟ್ಟಿಯನ್ನು ವಜಾ ಮಾಡಿ ಹೊಸದಾಗಿ ಶಾಸಕರಿಗೆ ಕೇಳಿ ಆಯ್ಕೆ ಮಾಡಬೇಕು

[ಗೊಂದಲ]

ಅಧ್ಯಕ್ಷರು ಈ ಪ್ರಶ್ನೆಯನ್ನು ಮುಕ್ತಾಯಗೊಳಿಸಲಾಗಿದೆ ನಾನು ಮುಂದಕ್ಕೆ ಹೋಗುತ್ತೇನೆ ಬೇರೆ ರೂಪದಲ್ಲಿ ನೀವು ಒಂದು ಸೂಚನೆ ಕೊಡಿ ಗಂಟೆಗಟ್ಟಲೆ ಒಂದು ಪ್ರಶ್ನೆ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ

(ಮಾನ್ಯ ಸದಸ್ಯರುಗಳಾದ ಶ್ರೀ ಜಿ ವಿ ಶ್ರೀರಾಮರೆಡ್ಡಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ಉತ್ತರವನ್ನು ವಿರೋಧಿಸಿ ಬಾವಿಗೆ ಬಂದರು)

ಶ್ರೀ ಎಸ್ ಸಿದ್ದರಾಮಯ್ಯ You give the reply

ಅಧ್ಯಕ್ಷರು ಏನು ತೀರ್ಮಾನವಾಗುತ್ತದೆ? ತೀರ್ಮಾನವೂ ಇಲ್ಲ ಏನೂ ಇಲ್ಲ ದಯಮಾಡಿ ಎಲ್ಲರೂ ಸ್ವಲ್ಪ ಕಾಮ್ ಆಗಿ ದಯಮಾಡಿ ಎಲ್ಲರೂ ಅರ್ಥಮಾಡಿಕೊಳ್ಳಿ ಇದು ಬಹಳ ಪ್ರಮುಖವಾದ ವಿಚಾರವೆಂದು ಹಲವಾರು ಸದಸ್ಯರುಗಳಿಗೆ ಅವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ ಅರ್ಧ ಗಂಟೆ ಈ ಪ್ರಶ್ನೆ ಆದರೆ, ಇನ್ನು 13–14 ಪ್ರಶ್ನೆಗಳಿವೆ ದಯಮಾಡಿ ನನ್ನ ಮಾತು ಕೇಳಿ ನೀವು ಇದನ್ನು ಅರ್ಧ ಗಂಟೆ ಕಾಲ ಚರ್ಚೆಗೆ ಸೂಚನೆ ಕೊಡಿ, ನಾನು ಕಾಲಾವಕಾಶ ಮಾಡಿಕೊಡುತ್ತೇನೆ ಪ್ರಶ್ನೋತ್ತರ ಕಾಲದಲ್ಲಿ

ಅಲ್ಲಿಯೇ ಚರ್ಚೆ ಆಗಬೇಕೆನ್ನುವಂಥ ಸಂಪ್ರದಾಯ ಸರಿಯಲ್ಲ ಹಾಗಾದರೆ he has to concede it ನೀವು ಚರ್ಚೆಗೆ ಒಂದು ಅವಕಾಶ ಪಡೆದುಕೊಳ್ಳಬಹುದು ಅದು ಬಿಟ್ಟು, ಪ್ರಶ್ನೋತ್ತರ ಕಾಲದಲ್ಲಿ ಪ್ರತಿಯೊಂದಕ್ಕೂ ನೀವು ಈ ರೀತಿ ಅಡ್ಡಿ ಮಾಡುವುದು ಸರಿಯಲ್ಲ ಅವರು ಎತ್ತಿರತಕ್ಕಂತಹ ಪ್ರಶ್ನೆಗೆ, ತೃಪ್ತಿಕರವಾದ ಉತ್ತರ ಕೊಡುವುದಾದರೆ ನನ್ನದೇನೂ ಅಡ್ಡಿ ಇಲ್ಲ ಆದರೆ ನಾನು ಸುಮ್ಮನೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟುಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಮಾನ್ಯ ಉದಾಸಿಯವರೇ, final ಆಗಿ ಏನು ಹೇಳುತ್ತೀರಿ ಹೇಳಿ I have to go to the next question ನಾವು ಇದನ್ನು ಸಂಪ್ರದಾಯ ಮಾಡಿಕೊಳ್ಳುವುದಕ್ಕಾಗುವುದಿಲ್ಲ ದಯಮಾಡಿ ಮಾನ್ಯ ರೆಡ್ಡಿಯವರೇ ನಿಮ್ಮ ಜಾಗಕ್ಕೆ ಹೋಗಿ ನಾನು ಅವಕಾಶ ಮಾಡಿಕೊಡುತ್ತೇನೆ ಮಾನ್ಯ ಉದಾಸಿಯವರೆ ದಯಮಾಡಿ ಉತ್ತರ ಕೊಡಿ

(ಮಾನ್ಯ ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗೂ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಗಳಿಗೆ ವಾಪಸ್ ಹೋದರು)

ಶ್ರೀ ಸಿ ಎಂ ಉದಾಸಿ ಮಾನ್ಯ ಅಧ್ಯಕ್ಷರೆ, ನಾವು ಗ್ರಾಮಗಳನ್ನು ಆಯ್ಕೆ ಮಾಡುವುದಕ್ಕಿಂತ ಪೂರ್ವದಲ್ಲಿ, ಒಂದು ಸಲಹೆ ಏನು ಬಂದಿತ್ತು ಎಂದರೆ, ರಾಜ್ಯದಲ್ಲಿರುವಂತಹ ಹೋಬಳಿ ಕೇಂದ್ರಗಳನ್ನು ಆಯ್ಕೆ ಮಾಡಬೇಕೆಂದು ಆ ಸಲಹೆ ಬಂದಾಗ ನನಗೇನನ್ನಿಸಿತ್ತು ಎಂದರೆ, regional imbalance ಆಗುತ್ತದೆ ಎಂದು ನನಗೆ ಭಾವನೆ ಬಂದಿತ್ತು ಕೆಲವು ಕ್ಷೇತ್ರಗಳಲ್ಲಿ ಒಂದು ತಾಲ್ಲೂಕಿನಲ್ಲಿ 14 ಹೋಬಳಿಗಳಿದ್ದಂಥದ್ದು ಇದೆ, ಒಂದು ತಾಲ್ಲೂಕಿನಲ್ಲಿ ಎರಡು ಹೋಬಳಿಗಳಿವೆ, ಒಂದು ತಾಲ್ಲೂಕಿನಲ್ಲಿ ಒಂದು ಹೋಬಳಿ ಇದ್ದಂಥ ಕ್ಷೇತ್ರಗಳು ಕೂಡ ಇವೆ ಕೇವಲ 18 ಮನೆಗಳಿರುವಂತಹ ಒಂದು ಹೋಬಳಿ ಕೇಂದ್ರ ಕೂಡ ಇದೆ ಇವುಗಳೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಏನು ಮಾಡಿದ್ದೇವೆಂದರೆ, 98ಲಕ್ಷ ಜನಸಂಖ್ಯೆ ಇರಬೇಕಾದಂತಹ ಒಂದು area ದಲ್ಲಿ 253 ಹೋಬಳಿಗಳು ಬರುತ್ತವೆ 92 ಲಕ್ಷ ಜನಸಂಖ್ಯೆ ಇದ್ದಲ್ಲಿ 150 ಹೋಬಳಿಗಳು ಬರುತ್ತವೆ ಇದನ್ನು ಗಮನಿಸಿದ ಮೇಲೆ ನಾನೇನು ಆಲೋಚನೆ ಮಾಡಿದ್ದೇನೆಂದರೆ, ಇಡೀ ರಾಜ್ಯಾದ್ಯಂತ ಇರುವಂತಹ ಗ್ರಾಮೀಣ ಜನಸಂಖ್ಯೆ, 3 ಕೋಟಿ 48 ಲಕ್ಷ ಏನಿದೆ, ಅದನ್ನು ತಾಲ್ಲೂಕುವಾರು Pro rata ಜನಸಂಖ್ಯೆ ಏನು ಗ್ರಾಮೀಣ ಭಾಗದ್ದು ಇದೆ, ಆ ಜನಸಂಖ್ಯೆ ಆಧಾರದ ಮೇಲೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವಿಭಾಗ ಮಾಡಿ, ಆ ಜನಸಂಖ್ಯೆ ಆದಾರದ ಮೇಲೆ ಗ್ರಾಮಗಳನ್ನು ಆಯ್ಕೆ ಮಾಡಬೇಕೆಂಬ ವಿಚಾರಕ್ಕೆ ನಾವು ಬಂದಿದ್ದೇವೆ ಗ್ರಾಮಗಳನ್ನು ಆಯ್ಕೆ ಮಾಡಬೇಕೆಂದಾಗ, ಆ ತಾಲ್ಲೂಕಿನ ಜನಸಂಖ್ಯೆ

ಆಧಾರದ ಮೇಲೆ ಆಯ್ಕೆ ಮಾಡಬಹುದು ಹಾಗೂ ಎಷ್ಟು ಹಣ ಆ ತಾಲ್ಲೂಕಿಗೆ ಅಲೋಕೇಷನ್ ಆಗಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಮಂತ್ರಿಗಳಿಗೆ ಏನು ಸೂಚನೆ ಕೊಟ್ಟಿದ್ದೇವೆಂದರೆ, ಆಯಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವಂತಹ ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದು ಈ ಮಿತಿಯೊಳಗೆ ತಾವು ಪ್ರಸ್ತಾವನೆಯನ್ನು ಸಲ್ಲಿಸಬೇಕು ನಾನು ಹೇಳುವುದು ಪೂರ್ತಿ ಕೇಳಿ, ನಂತರ ನೀವು ಮಾತನಾಡಿ

ಅಧ್ಯಕ್ಷರು This is not correct ಮಾನ್ಯ ನಾಗಪ್ಪನವರೇ ಅವರು ಉತ್ತರ ಹೇಳಲಿ

ಶ್ರೀ ಸಿ ಎಂ ಉದಾಸಿ ನಿಮ್ಮ ಹರಿಹರ ತಾಲ್ಲೂಕಿನಲ್ಲಿ ಒಂದೇ ಹೋಬಳಿ ಇದೆ ಆ ಹೋಬಳಿಯನ್ನು ಬಿಟ್ಟಿರುವುದು ಈ ಕಾರಣದಿಂದ

ಅಧ್ಯಕ್ಷರು ಮಾನ್ಯ ನಾಗಪ್ಪನವರೇ ನೀವು ಕುಳಿತುಕೊಳ್ಳಿ ನೀವು ಈ ತರಹ ಮಾಡಿದರೆ ಹೇಗೆ?

ಶ್ರೀ ಸಿ ಎಂ ಉದಾಸಿ ಹರಿಹರದಲ್ಲಿ ಒಂದೇ ಹೋಬಳಿ ಇದೆ ನಿಮ್ಮ ಸಮಸ್ಯೆ ನನಗೆ ಗೊತ್ತಿದೆ ನಿಮ್ಮ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ ನಾವು ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳಿ ಎಂದು ಹೇಳಿದಾಗ ಎಲ್ಲರ ಅಭಿಪ್ರಾಯವನ್ನೂ ಕೇಳಬೇಕಾಗುತ್ತದೆ ಪಂಚಾಯಿತಿಯ ಅಧ್ಯಕ್ಷರಿರಬಹುದು, ಜಿಲ್ಲಾಪಂಚಾಯಿತಿಯ ಸದಸ್ಯರಿರಬಹುದು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಇರಬಹುದು, ವಿಧಾನ ಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರಿರಬಹುದು ಎಲ್ಲರ ಅಭಿಪ್ರಾಯವನ್ನು ಪಡೆದು ಅಂತಿಮವಾಗಿ ತೀರ್ಮಾನ ಮಾಡಬೇಕಾದಾಗ ಕೆಲವು ಗ್ರಾಮಗಳನ್ನು ಗುರುತಿಸಿ, ನಾವೇನು ಜನಸಂಖ್ಯೆ ಮಿತಿಯನ್ನು 2,000ದಿಂದ 8,000 ಜನಸಂಖ್ಯೆ ಮಿತಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡುವುದು ಸೂಕ್ತವಾದುದು ಎನ್ನುವಂತಹ ಕಾರಣವನ್ನು ಕೊಟ್ಟಿದ್ದೇವೆ 10,000 ಜನಸಂಖ್ಯೆ ಮೇಲೆ ಇರುವಂತಹ ಗ್ರಾಮಗಳು ಇವತ್ತು ಟೌನ್ ಪಂಚಾಯಿತಿ ಆಗಿ ಪರಿವರ್ತನೆ ಆಗಲಿಕ್ಕೆ ಸಾಧ್ಯತೆ ಇರುವುದರಿಂದ ಗ್ರಾಮಗಳನ್ನು ಆಯ್ಕೆ ಮಾಡುವುದು ಸಾಧುವಾದುದು ಎನ್ನುವಂತಹ ಸಲಹೆಯನ್ನು ನಾವು ಕೊಟ್ಟಿದ್ದೆವು ಆ ಸಲಹೆಗಳನ್ನು ಕೊಡುವಾಗ ತಮ್ಮೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ಆಗಿದೆ ಎನ್ನುವಂತಹ ಭಾವನೆ ನಮಗಿದೆ ಬಹುತೇಕ ಸಂದರ್ಭಗಳಲ್ಲಿ ಲಿಖಿತವಾಗಿ ಸಲಹೆಗಳನ್ನು ಪಡೆಯದೇ ಇದ್ದರೂ ಸಹ, ತಮ್ಮೆಲ್ಲರ ಸಲಹೆಗಳಿಂದ ಆಗಿರಬಹುದು ಎನ್ನುವ ಭಾವನೆ ನಮ್ಮದಾಗಿದೆ ಆದರೂ ಸಹಿತ, ಬೀದರ್ ಜಿಲ್ಲೆಯಲ್ಲಿ ಮಾತ್ರ ಇನ್ನು ಅಂತಿಮ ಪಟ್ಟಿ ಆಗಿಲ್ಲ ಉಳಿದೆಲ್ಲ ಜಿಲ್ಲೆಗಳ ಪಟ್ಟಿ ತಯಾರಾಗಿದೆ ಅಂತಿಮ ಪಟ್ಟಿ

ಇದುವರೆಗೆ ಅನುಮೋದನೆ ಆಗಿಲ್ಲ ಎನ್ನುವುದನ್ನೂ ತಮ್ಮ ಗಮನಕ್ಕೆ ತರುತ್ತೇನೆ ಜಿಲ್ಲಾ ಮಂತ್ರಿಗಳಿಗೆ ಇದನ್ನು ವಹಿಸಿಕೊಟ್ಟಿರುವುದು ಸರಿಯೇ ಎನ್ನುವಂತಹ ಪ್ರಶ್ನೆ ಬಂದಾಗ, ನೀವು ಹಿಂದೆ ನಡೆದಿರುವಂತಹ ಘಟನೆಗಳನ್ನು ನೋಡಿದಾಗ, ನಬಾರ್ಡ್ ಯೋಜನೆಯ ರಸ್ತೆಗಳನ್ನು ಗುರುತಿಸಬೇಕಾದಂತಹ ಸಂದರ್ಭದಲ್ಲಿ ಯಾವ ರೀತಿ ಮಾಡಿದ್ದೀರಿ, Minor irrigation ರಸ್ತೆಗಳನ್ನು ಗುರುತಿಸುವಂತಹ ಸಂದರ್ಭದಲ್ಲಿ ಏನು ಮಾಡಿದಿರಿ, ಇದೆಲ್ಲವನ್ನೂ ನಾವು ನೋಡಿದ್ದೇವೆ ಆದರೆ ಏನು ಮಾಡಿಲ್ಲವೆಂದು ನೀವು ಯಾರಾದರೂ ಹೇಳಿದರೆ ಅದು ಸರಿ ಅಲ್ಲ ಹಿಂದೆ ಹೋಗುವುದು ಬೇಕಾಗಿಲ್ಲ ಜನಸಂಖ್ಯೆ ಮಿತಿಯೊಳಗೆ ಆಯಾ ತಾಲ್ಲೂಕುಗಳಿಗೆ ಬರಬೇಕಾದ ಅನುದಾನಕ್ಕೆ ಪೂರಕವಾದಂತಹ ಗ್ರಾಮಗಳನ್ನು ನಾವು ಆಯ್ಕೆ ಮಾಡಿದ್ದೇವೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವಂತಹ ಕೆಲಸ ಮಾಡಬಹುದೇ ಹೊರತು, ತಾವು ಹಿಂದೆ ನಡೆದುಕೊಂಡು ಬಂದಂತಹ ರೀತಿ ನೀತಿಗಳನ್ನು ನೋಡಬೇಕು ಅದಕ್ಕೆ ನಾವು ವ್ಯತಿರಿಕ್ತವಾಗಿ ಏನಾದರೂ ಮಾಡಿದ್ದೇವಾ? ಅಥವಾ ಯಾರಿಗಾದರೂ ಅನ್ಯಾಯವಾಗಬೇಕೆಂಬ ದೃಷ್ಟಿಯಿಂದ ನಾವು ಮಾಡಿಲ್ಲ 'ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ ಉದಾಹರಣೆಗಾಗಿ, ಏಳು ಕೋಟಿ ರೂಪಾಯಿಗಳಷ್ಟು ಹಣವನ್ನು 28,000 ಜನಸಂಖ್ಯೆಗೆ ಸೀಮಿತವಾಗಿ ಕೊಟ್ಟಿದ್ದೇವೆ ಅವರು ಅದಕ್ಕೆ ಸೀಮಿತವಾಗಿ ಗ್ರಾಮಗಳನ್ನು ಆಯ್ಕೆ ಮಾಡಬೇಕೆಂಬ ಸಲಹೆಯನ್ನು ನಾವು ಕೊಟ್ಟಿದ್ದೇವೆ ಪ್ರತಿಯೊಂದು ತಾಲ್ಲೂಕುಗಳಿಗೆ ನಾವು ಈ ರೀತಿ ಕೊಟ್ಟಿದ್ದೇವೆ ಇಲ್ಲಿ ಯಾರಿಗೂ ಉದ್ದೇಶಪೂರ್ವಕವಾಗಿ ಅನ್ಯಾಯವಾಗಲಿ ಎನ್ನುವ ಉದ್ದೇಶದಿಂದ ಮಾಡಿಲ್ಲ ನಿಮ್ಮ ಸಲಹೆಗಳನ್ನು ಮುಂದೆ ಮಾಡಬೇಕಾದಂತಹ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಕ್ರಮವನ್ನು ತೆಗೆದುಕೊಳ್ಳಲಾಗುವುದು

ಅಧ್ಯಕ್ಷರು Let us go to the next question ಇದು ಒಂದು ಪ್ರಶ್ನೆ 40 ನಿಮಿಷ ಆಗಿ ಹೋಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಬೇರೆ ಜನಪ್ರತಿನಿಧಿಗಳ ಅಭಿಪ್ರಾಯ ಕೇಳುವ ಅವಶ್ಯಕತೆ ಇಲ್ಲ ಶಾಸಕರ ಅಭಿಪ್ರಾಯಗಳನ್ನು ಮಾತ್ರ ಕೇಳಬೇಕು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆದರೆ, ಬೇರೆ ಎಲ್ಲ ಜನಪ್ರತಿನಿಧಿಗಳಿಗೆ ಕೇಳಬಹುದು ಇದು ಸರ್ಕಾರದ ಕಾರ್ಯಕ್ರಮ ಬೇರೆ ಪ್ರತಿನಿಧಿಗಳಿಗೆ ಕೇಳುವುದಕ್ಕೆ ಇದು ಜಿಲ್ಲಾ ಪಂಚಾಯಿತಿಯ ಕಾರ್ಯಕ್ರಮ ಅಲ್ಲ ಸರ್ಕಾರದ ಕಾರ್ಯಕ್ರಮ ಆಗಿರುವುದರಿಂದ ಶಾಸಕರ ಅಭಿಪ್ರಾಯ ಮಾತ್ರ ಕೇಳಬೇಕು ಅಲ್ಲಿ ಉಸ್ತುವಾರಿ ಸಚಿವರು ಮತ್ತು ಬೇರೆ ಜನ ಪ್ರತಿನಿಧಿಗಳ ಪ್ರಶ್ನೆ

ಬರುವುದಿಲ್ಲ, This is a Government programme This is not a RDPR programme, state sector ಇದು State sector ನಲ್ಲಿ ಇದು ಬಂದಿರತಕ್ಕಂಥದ್ದು State sector ನಲ್ಲಿ ಬಂದಿರತಕ್ಕಂಥದ್ದಕ್ಕೆ ನೀವು ಎಲ್ಲರನ್ನೂ ಕೇಳಬೇಕೆಂದು ಹೇಳಿದರೆ ಹೇಗೆ?

ಅಧ್ಯಕ್ಷರು ಎಲ್ಲರೂ ನಿಂತು ಮಾತನಾಡಿದರೆ ಪ್ರಯೋಜನವಾಗುವುದಿಲ್ಲ

ಶ್ರೀ ಸಿ.ಎಂ ಉದಾಸಿ ಮುಂದೆ ಗ್ರಾಮಗಳನ್ನು ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ ತಮ್ಮೆಲ್ಲರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸವನ್ನು ನಿರ್ವಹಣೆ ಮಾಡುತ್ತೇವೆ

ಶ್ರೀ ಬಿ ಶಿವರಾಮ್ ಪ್ರತಿ ಸಾರಿಯೂ ಇದೇ ಮುಂದುವರೆಯುತ್ತಿದೆ ಸರಿಪಡಿಸುವುದು ಯಾವಾಗ? ಈ ಹಂತದಲ್ಲಿ ಸರಿಪಡಿಸದೇ ಹೋದರೆ ಇದೇ ವ್ಯವಸ್ಥೆ ಮುಂದುವರೆಯುತ್ತದೆ ಹೊರತು, ನ್ಯಾಯ ಎಲ್ಲಿ ಸಿಗುತ್ತದೆ? ನೀವು ಕನಿಷ್ಟ ಶಾಸಕರಿಗೆ ಒಂದು ಪತ್ರ ಬರೆದು ಕೇಳತಕ್ಕಂತಹ ಸೌಜನ್ಯ ತೋರಿಸಿ ಅದನ್ನು ಧೃಡೀಕರಿಸಿದರೆ ಸಾಕು

ಶ್ರೀ ಅಮರೇಗೌಡ ಬಯ್ಯಾಪುರ ಇದರ ಬಗ್ಗೆ ಒಂದು circular ಮಾಡಿ ಶಾಸಕರಿಗೆ ಕೇಳಿಯೇ ಮಾಡಬೇಕೆಂಬ ಬಗ್ಗೆ ಒಂದು circular ಆಗಲಿ ನಾವೂ ಕೂಡ ವಿರೋಧ ಪಕ್ಷದಲ್ಲಿದ್ದಾಗ ನಮಗೆ ಏನೇನಾಗಿದೆ ಎಂದು ನಮಗೆ ಗೊತ್ತಿದೆ ನಾವೂ ಕೂಡ ಅಲ್ಲಿದ್ದು ಇದನ್ನೆಲ್ಲಾ ಅನುಭವಿಸಿದ್ದೇವೆ ಹಿಂದೆ ಏನಾಗಿದೆ ಎಂದು ನಮಗೆ ಗೊತ್ತಿದೆ ಅದರ ಬಗ್ಗೆ ನಮಗೆ ಎಲ್ಲಾ ಅನುಭವ ಇದೆ ನಿಮ್ಮಿಂದ ನಾವು ಮಾರ್ಗದರ್ಶನ ಮಾಡಿಸಿಕೊಳ್ಳಬೇಕಾಗಿಲ್ಲ

(ಗೊಂದಲ)

ಅಧ್ಯಕ್ಷರು ಅವರು ಉತ್ತರ ಕೊಟ್ಟಿದ್ದಾರೆ ನೀವು ಏನಾದರೂ ಚರ್ಚೆ ಮಾಡಬೇಕೆಂದರೆ ಅದರ ಬಗ್ಗೆ ಸೂಚನೆ ಕೊಡಿ, ನಾನು ಅವಕಾಶ ಕೊಡುತ್ತೇನೆ

ಈಗ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ ಈಗಾಗಲೇ ಮೊದಲ ಪ್ರಶ್ನೆಗೆ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ ಇನ್ನೂ ಹೆಚ್ಚು ಅದರ ಬಗ್ಗೆ ಚರ್ಚೆ ಮಾಡಬೇಕೆಂದಿದ್ದರೆ ಆ ಬಗ್ಗೆ ಲಿಖಿತ ಮೂಲಕ ನನಗೆ ಪತ್ರವನ್ನು ಕೊಟ್ಟರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಬಹುದು ಈಗ ಮುಂದಿನ ಪ್ರಶ್ನೆಗೆ ಹೋಗೋಣ ಮಾನ್ಯ ಎಸ್ ಎಸ್ ಪಾಟೀಲರೆ, ಪ್ರಶ್ನೆ ಕೇಳಿ

(ಪ್ರಶ್ನೆಯನ್ನು ಕೇಳಿದ್ದ ಮಾನ್ಯ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಸದನದ ಬಾವಿಗೆ ಬಂದು ಧರಣಿನಿರತರಾದರು)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ ಮೊದಲು ಈ ಪ್ರಶ್ನೆ ಬಗ್ಗೆ ಆಗಿರುವ ಗೊಂದಲವನ್ನು ಸೆಟ್‌ರೈಟ್ ಮಾಡಿಸಿ

ಅಧ್ಯಕ್ಷರು ಏನು ಸೆಟ್‌ರೈಟ್ ಮಾಡುತ್ತೀರಿ, ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ ಆ ವಿಷಯದ ಬಗ್ಗೆಯೇ ಹೆಚ್ಚು ಮಾತನಾಡಬೇಕೆಂದಿದ್ದರೆ ನನಗೆ ಬೇರೆ ಯಾವುದಾದರೂ ಲಿಖಿತ ಸೂಚನೆಯನ್ನು ಕೊಡಿ ನಾನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ಪ್ರಶ್ನೋತ್ತರ ಕಾಲದಲ್ಲಿ ಹೇಗೆ ಸೆಟ್‌ರೈಟ್ ಮಾಡುವುದು ಹೇಳಿ ನೀವೇ ಹೇಳಿ, ಏನು ಸೆಟ್‌ರೈಟ್ ಮಾಡುವುದು? ಈಗ ಪ್ರಶ್ನೋತ್ತರ ನಡೆಯುತ್ತಿದೆ ಇದೇ ಮೊದಲ ಪ್ರಶ್ನೆ

ಶ್ರೀ ಎಂ ಪಿ ಪ್ರಕಾಶ್(ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೆ, ಮೂಲಭೂತವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಸ್ಥಾನಮಾನವೇನು ಎಂಬ ಬಗ್ಗೆ ಮೊದಲು ತೀರ್ಮಾನವಾಗಬೇಕು

ಅಧ್ಯಕ್ಷರು – ಮಾನ್ಯ ವಾಟಾಳ್‌ರವರೆ, ಸಂಸದೀಯ ವ್ಯವಹಾರಗಳ ಸಚಿವರು ಏನೋ ಹೇಳುತ್ತಿದ್ದಾರೆ ತಾವು ಕುಳಿತುಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್(ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕಾಗಿ ಒಂದು ಗಂಟೆ ಅವಧಿಯನ್ನು ತಾವು ನಿಗದಿಪಡಿಸಿದ್ದೀರಿ ಬಹಳ ಮಹತ್ವವಾಗಿರತಕ್ಕಂಥ ಪ್ರಶ್ನೆ ಬಂದಾಗ ಸದಸ್ಯರೆಲ್ಲರೂ ಕೂಡ, ಅದರಲ್ಲಿ ಭಾಗವಹಿಸಬೇಕೆಂದು ಬಯಸುತ್ತಾರೆ ಇದರಲ್ಲಿ ಬೇಕಾದಷ್ಟು ಸ್ಪಷ್ಟೀಕರಣವನ್ನು ಕೇಳುವುದಕ್ಕೂ ಕೂಡ ಅವರು ಪ್ರಯತ್ನ ಮಾಡುತ್ತಿದ್ದಾರೆ ಈ ಸಂದರ್ಭದಲ್ಲಿ ಚರ್ಚೆಗೆ ನಾವು ನಿರಾಕರಿಸುತ್ತೇವೆ ಎಂದೇನಿಲ್ಲ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ತಾವೆಲ್ಲರೂ ಬಯಸುವುದಾದರೆ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಮೀಸಲಿಡಿ ಈಗ ಬೇರೆ ಪ್ರಶ್ನೆಗಳು ಕೂಡ ಇವೆ ಅದನ್ನು ತೆಗೆದುಕೊಳ್ಳಬಹುದು ಈ ವಿಷಯವನ್ನು ಅರ್ಧ ಗಂಟೆ ಚರ್ಚೆಯಲ್ಲಿ ತೆಗೆದುಕೊಳ್ಳಿ ಈಗಲೇ ಇದರಲ್ಲಿಯೇ ಎಲ್ಲ ಉತ್ತರವನ್ನು ಬಯಸುವಂಥದ್ದಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಇದರಲ್ಲಿ ಚರ್ಚೆ ಮಾಡತಕ್ಕಂಥ ವಿಷಯ ಏನೂ ಇಲ್ಲ ಈಗ ಮಾನ್ಯ ಉದಾಸಿಯವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ ಅವರು ಏನು ಹೇಳಿದರೆಂದರೆ, ಕೆಲವು ತಾಲ್ಲೂಕಿನಲ್ಲಿ 2 ಹೋಬಳಿಗಳಿರುತ್ತವೆ, ಕೆಲವು ಕಡೆ 4, ಕೆಲವು ಕಡೆ 5, 6, 8 ಹೋಬಳಿಗಳಿವೆ, ಆದುದರಿಂದ ಡಿಸ್ಕ್ರಿಮಿನೇಶನ್ ಆಗುತ್ತದೆ ಅದಕ್ಕಾಗಿ ನಾನು ಕೆಲವೊಂದು ನಿರ್ದೇಶನಗಳನ್ನು ಕೊಡುತ್ತೇನೆ ಎಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಅದನ್ನು

ಮಾಡುವಾಗ ಜನಪ್ರತಿನಿದಿಗಳಾದ ಶಾಸಕರನ್ನು ಕೇಳಿ ಈ ನಿರ್ದೇಶನಗಳನ್ನು ಮಾಡಿ ಎಂದು ಅವರು ಹೇಳಿದರೆ ಈ ಪ್ರಶ್ನೆ ಮುಕ್ತಾಯವಾಗುತ್ತದೆ ಆದರೆ ಈಗ ನೀವೇನು ಮಾಡಿದ್ದೀರೆಂದರೆ, ನಿಮಗೆ ಬೇಕಾದಂಥ ಜಾಗದಲ್ಲಿ ರೆಪ್ರಸೆಂಟಟಿವ್ಸ್ ಎಂದು ಹಾಕಿದರೆ ಅದರಲ್ಲಿ ಪಂಚಾಯತ್ ಮೆಂಬರ್ ಕೂಡ ಬರಬಹುದು, ತಾಲ್ಲೂಕು ಪಂಚಾಯತ್ ಮೆಂಬರೂ ಬರಬಹುದು, ಜಿಲ್ಲಾ ಪಂಚಾಯತ್ ಮೆಂಬರ್ ಕೂಡ ಬರಬಹುದಾಗಿರುತ್ತದೆ ಈಗ ನಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ, ಮಾನ್ಯ ಪ್ರಕಾಶ್‌ರವರಿಗೂ ಗೊತ್ತಿದೆ, ಮಾನ್ಯ ಉದಾಸಿಯವರಿಗೂ ಗೊತ್ತಿದೆ, ಲ್ಯಾಂಡ್ ಟ್ರಿಬ್ಯುನಲ್ ಮೆಂಬರ್ ಸಾಮಾನ್ಯ ಸದಸ್ಯರಾಗಿ ಭೂಮಿ ಓನರ್‌ಶಿಪ್‌ನ್ನು ಇತ್ಯರ್ಥ ಮಾಡುತ್ತಾನೆ ಆಶ್ರಯ ಸಮಿತಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತಿತ್ತು ಈಗ ಅದು ಕೂಡ ಬೇರೆ ರೀತಿಯಿಂದ ಹೋಯಿತು ಈಗ ಅನೇಕ ಕಮಿಟಿಗಳಲ್ಲಿ

ಶ್ರೀ ಹೆಚ್ ಆಂಜನೇಯ ಮಾನ್ಯ ವಿರೋಧ ಪಕ್ಷದ ನಾಯಕರು ಆಶ್ರಯ ಸಮಿತಿಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಪ್ರಸ್ತಾಪ ಮಾಡಲಿ ನಾವು ಅದನ್ನು ಒಪ್ಪುವುದಕ್ಕೆ ತಯಾರಿದ್ದೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ನಾನು ನಿಮ್ಮ ಕಡೆ ತಿರುಗಿಕೊಂಡು ಮಾತನಾಡುತ್ತಿಲ್ಲ ಅಧ್ಯಕ್ಷರ ಕಡೆ ತಿರುಗಿ ಮಾತನಾಡುತ್ತಿದ್ದೇನೆ

(ಗೊಂದಲ)

ಶ್ರೀ ಹೆಚ್ ಆಂಜನೇಯ – ಎಲ್ಲಾ ಶಾಸಕರೂ ತಯಾರಿದ್ದೇವೆ, ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲು ನಾವು ತಯಾರಿದ್ದೇವೆ ನೀವು ಬಿಲ್‌ನ್ನು ತೆಗೆದುಕೊಂಡು ಬನ್ನಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಎಲ್ಲೆಲ್ಲಿ ಮಾನ್ಯ ಶಾಸಕರುಗಳನ್ನು ಕೇಳದೇ ಮಾಡಲಾಗಿದೆಯೋ ಅಲ್ಲೆಲ್ಲಾ ಮತ್ತೆ ಮಾನ್ಯ ಶಾಸಕರುಗಳನ್ನು ಕೇಳಿ ಮಾಡುತ್ತೇವೆ ಎಂದು ಹೇಳಲಿ ಎಲ್ಲಿ ಕಾಂಟ್ರೋವರ್ಶಿಯಲ್ ಇದೆಯೇ ಅಲ್ಲಿ ಎಲ್ಲಿ ಮಾಡಿದರೂ ಕೂಡ ಅದೇ ಕ್ಷೇತ್ರದಲ್ಲಿ ಮಾಡಬೇಕು ತಾನೇ ಆ ಮತಕ್ಷೇತ್ರ ಬಿಟ್ಟು ಬೇರೆ ಮಾಡುವಂತಿಲ್ಲ

ಶ್ರಿ ಸಿದ್ದರಾಮಯ್ಯ– ಈಗಲೇ ಅದರ ಬಗ್ಗೆ ಹೇಳಿ ಬಿಡಲಿ ಎಲ್ಲೆಲ್ಲಿ ಮಾನ್ಯ ಶಾಸಕರನ್ನು ಕೇಳಿ ಗ್ರಾಮಗಳ ಆಯ್ಕೆಯನ್ನು ಮಾಡಿಲ್ಲವೋ, ಆ ಪಟ್ಟಿ ತರಿಸಿಕೊಂಡು ಮಾನ್ಯ ಶಾಸಕರುಗಳನ್ನು ಕೇಳಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಉತ್ತರ ಕೊಡಲಿ ಇದನ್ನು ಹೇಳುವುದಕ್ಕೆ ಅರ್ದ ಗಂಟೆ ಚರ್ಚೆ ಆಗಬೇಕು? ಈ ಬಗ್ಗೆ ಸರ್ಕಾರ ಪ್ರತಿಷ್ಠೆ ಮಾಡಿಕೊಂಡರೆ ಹೇಗೆ? ವಿಧಾನ ಸಭಾ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಜಿಲ್ಲಾ ಮಂತ್ರಿಗಳನ್ನು ಕೇಳಿ ಮಾಡುವುದು, ಇನ್ಯಾರೋ ಮೆಂಬರ್‌ಗಳನ್ನು ಕೇಳಿ ಮಾಡುವುದಾದರೆ ಇಲ್ಲಿಗೆ ಶಾಸಕರುಗಳಾದರೂ ಏಕೆ ಬರಬೇಕು? ಏಕೆ ಬರಬೇಕು,

ಹೇಳಿ ನೋಡೋಣ ಯಾವ ಯಾವ ಅಧಿಕಾರ ಜಿಲ್ಲಾ ಮಂತ್ರಿಗಳಿಗೆ ಇದೆ ಎಂದು ಹೇಳಿ ನೋಡೋಣ

ಶ್ರೀ ಎಂ ಪಿ ಪ್ರಕಾಶ್(ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಂತ್ರಿಗಳಿಗೆ ಯಾವ ಅಧಿಕಾರವನ್ನು ಕೊಟ್ಟಿದ್ದೀರಿ ಎಂದು ಅವರು ಕೇಳಿದ್ದಾರೆ ಅದನ್ನು ಡಿ ಪಿ ಎ ಆರ್ ಮುಖೇನ ನಾವು ಯಾವಾಗಲೂ ಕೂಡ ಯಾರು ಜಿಲ್ಲಾ ಮಂತ್ರಿಗಳು, ಅವರ ಕರ್ತವ್ಯಗಳೇನು ಎಂದು ತಿಳಿಸಿಕೊಟ್ಟಿದ್ದಾರೆ ಕೆಲವರು ಅದನ್ನು ಸಂವಿಧಾನಬದ್ಧವಾಗಿರತಕ್ಕಂಥ ಅಧಿಕಾರವಲ್ಲ ಎಂದು ಹೇಳುವಂಥದ್ದು ಇದ್ದರೂ ಕೂಡ ಎಕ್ಸಿಕ್ಯುಟಿವ್ ಆರ್ಡರ್ ಮೂಲಕವಾಗಿ ಮಾಡಿರತಕ್ಕಂಥ ಉದಾಹರಣೆಗಳು ಇವೆ ಅನೇಕ ಕಡೆಗೆ ಉಪ ಪ್ರಧಾನಮಂತ್ರಿ, ಉಪ ಮುಖ್ಯಮಂತ್ರಿ ಎನ್ನತಕ್ಕಂಥದ್ದನ್ನು ಸೃಷ್ಟಿ ಮಾಡಿದ್ದೇವೆ ಅದಕ್ಕೆ ಸಂವಿಧಾನದಲ್ಲಿ ಸ್ಥಾನ ಇಲ್ಲವೆಂದರೂ ಕೂಡ ಅದನ್ನು ನಾವು ವಾಡಿಕೆಯಲ್ಲಿ ಇಟ್ಟುಕೊಂಡಿದ್ದೇವೆ

ಶ್ರೀ ಸಿದ್ದರಾಮಯ್ಯ– ಎಕ್ಸಿಕ್ಯುಟಿವ್ ಆರ್ಡರ್ ಮೂಲಕವಾಗಿದೆ ಅವರಿಗೆ ಪವರ್ಸ್ ಇಲ್ಲವೆಂದು ನಾವು ಹೇಳುವುದಿಲ್ಲ ಆದರೆ ಶಾಸಕರನ್ನು ಓವರ್‌ಟೇಕ್ ಮಾಡಿ ಮಾಡಬೇಕೆಂದು ನೀವು ಕೊಟ್ಟಿದ್ದೀರಾ?

ಶ್ರೀ ಎಂ ಪಿ ಪ್ರಕಾಶ್ – ಎಲ್ಲರಿಗಿಂತ ಹೆಚ್ಚಾಗಿ ಮಾನ್ಯ ಶಾಸಕರುಗಳ ಮಾತುಗಳಿಗೆ ಮತ್ತು ಅವರ ಸಲಹೆಗಳಿಗೆ ಹೆಚ್ಚಿನ ಗೌರವವನ್ನು ಕೊಡಬೇಕಾಗುತ್ತದೆ ಅವರು ಇಲ್ಲಿ ಹೇಳಿರತಕ್ಕಂಥದ್ದು ಯಾವುದಾದರೂ ತಪ್ಪುಗಳಾಗಿದ್ದರೆ ಅದನ್ನೂ ಸರಿಪಡಿಸುತ್ತೇವೆ, ಬೀದರ್ ಜಿಲ್ಲೆಯಲ್ಲಿ ಆಗಿರತಕ್ಕಂಥದ್ದಕ್ಕೆ ಸಂಬಂಧಪಟ್ಟಂತೆ ಇನ್ನೂ ನಾವು ನಿರ್ಧಾರಗಳನ್ನು ತೆಗೆದುಕೊಂಡಿಲ್ಲ

ಶ್ರೀ ಬಿ ಶಿವರಾಮ್ – ಹಾಸನ ಜಿಲ್ಲೆಯದ್ದು ಏನಾಗಿದೆ? ಅಲ್ಲಿಯೂ ಶಾಸಕರನ್ನು ಕೇಳಿಲ್ಲ

(ಗೊಂದಲ)

(ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಸದನದ ಬಾವಿಯಿಂದಲೇ ಮಾತನಾಡುತ್ತಿದ್ದರು)

ಅಧ್ಯಕ್ಷರು – ಮಾನ್ಯ ಗುರುಪಾದಪ್ಪನವರೆ, ಬಾವಿಯಲ್ಲಿದ್ದುಕೊಂಡು ಮಾತನಾಡಬಾರದು

ಶ್ರೀ ಎಂ ಪಿ ಪ್ರಕಾಶ್ – ತಾವು ಬಾವಿಯಲ್ಲಿ ಇದ್ದೇ ಮಾತನಾಡಬಾರದು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಬಹುದು ಮಾನ್ಯ ಅಧ್ಯಕ್ಷರೆ, ನಾನು ಅರ್ಧ ಗಂಟೆ ಚರ್ಚೆಗೆ ಬೇಕಾದರೆ ಇದನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದು ಏಕೆಂದರೆ, ಇದನ್ನು ಬಹಳ ಮಹತ್ವವಾದ ವಿಷಯವೆಂದು ಮಾಡುವುದಾಗಿದ್ದರೆ ಮಾಡಿ ಏಕೆಂದರೆ ಈಗ ಬೇರೆ ಪ್ರಶ್ನೆಗಳನ್ನು ಕೇಳುವಂಥವರು ಅವಕಾಶದಿಂದ

ವಂಚಿತರಾಗುತ್ತಾರೆ ಆ ಕಾರಣಕ್ಕಾಗಿಯೇ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅರ್ಧ ಗಂಟೆ ಕಾಲಾವದಿ ನಿಯಮದಡಿಯಲ್ಲಿ ಚರ್ಚೆಯಾಗಲಿ ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ

(ಗೊಂದಲ)

ಶ್ರೀ **ವಾಟಾಳ್ ನಾಗರಾಜ್** – ಮಾನ್ಯ ಪ್ರಕಾಶ್‌ರವರೆ, ತಮ್ಮಲ್ಲಿ ಮನವಿ ಏನೆಂದರೆ, ಈ ಜಿಲ್ಲಾ ಉಸ್ತುವಾರಿ ಸಚಿವರ ಸ್ಥಾನಮಾನವೇನು? ಅದರ ಬಗ್ಗೆ ತೀರ್ಮಾನವಾಗಿ ಬಿಟ್ಟರೆ ನಮಗೆ ಸಂತೋಷ ಅವರು ಪಾಳೆಗಾರರೇ? ಅವರು ತಮಗೆ ಇಷ್ಟಬಂದ ಹಾಗೆ ಮಾಡಬಹುದೇ? ಇದರ ಬಗ್ಗೆ ತೀರ್ಮಾನವಾಗಬೇಕಲ್ಲ ಈಗ ಪಾಳೆಗಾರಿಕೆ ಆಗುತ್ತಿದೆ ನನಗೆ ಗೊತ್ತಿದೆ, ಅನೇಕ ಕ್ಷೇತ್ರಗಳಲ್ಲಿ ಪಾಳೆಗಾರಿಕೆ ಆಗುತ್ತಿದೆ

ಶ್ರೀ **ಎಂ ಪಿ ಪ್ರಕಾಶ್** – ಉಸ್ತುವಾರಿ ಮಂತ್ರಿಗಳೂ ಕೂಡ ಪಾಳೆಗಾರರಲ್ಲ, ಶಾಸಕರು ಕೂಡ ಪಾಳೆಗಾರರಲ್ಲ ಶಾಸಕರು ಪಾಳೆಗಾರರಂತೆ ವರ್ತಿಸುವುದಕ್ಕೆ ಆಗುವುದಿಲ್ಲ

ಶ್ರೀ **ವಾಟಾಳ್ ನಾಗರಾಜ್** – ಶಾಸಕರು ಚುನಾಯಿತ ಪ್ರತಿನಿಧಿಗಳು ಅದನ್ನು ನೀವು ಅರ್ಥ ಮಾಡಿಕೊಳ್ಳಿ ಶಾಸಕರು ಚುನ್ನಾಯಿತ ಪ್ರತಿನಿಧಿಗಳು ಅವರಿಗೆ ಸಂಪೂರ್ಣ ಅಧಿಕಾರವಿದೆ ಶಾಸಕರನ್ನು ಕಡೆಗಣಿಸಿ ನೀವು ಇದನ್ನು ಮಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ **ಎನ್ ಚೆಲುವರಾಯಸ್ವಾಮಿ** – ಎಲ್ಲರೂ ಹೇಗೆ ಬೇಕೋ ಹಾಗೆ ಮಾತನಾಡುವುದಕ್ಕೆ ಹೋಗಬಾರದು ನಿಯಮಗಳಡಿಯಲ್ಲಿ ಸಮಯೋಚಿತವಾಗಿ ಮಾತನಾಡಿ

ಶ್ರೀ **ಎಂ ಪಿ ಪ್ರಕಾಶ್** – ಮಂತ್ರಿಗಳಾಗಿರಲಿ, ಶಾಸಕರಾಗಿರಲಿ, ರಾಜ್ಯಪಾಲರಾಗಿರಲಿ, ರಾಷ್ಟ್ರಪತಿಗಳಾಗಿರಲಿ, ಸಂವಿಧಾನ ನಿಬಂಧನೆಗಳಿಗೆ ಒಳಪಟ್ಟಿರತಕ್ಕಂಥದ್ದು, ಅಬ್‌ಸಲ್ಯೂಟ್ ಪವರ್ ಎನ್ನತಕ್ಕಂಥದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರಿಗೂ ಇರುವುದೇ. ಇಲ್ಲ ಆದುದರಿಂದ ಎಲ್ಲರಿಗಿಂತಲೂ ಹೆಚ್ಚು ಗೌರವವನ್ನು ಮಾನ್ಯ ಶಾಸಕರಿಗೆ ಕೊಡಬೇಕಾಗಿರುವುದು ಅತ್ಯಂತ ಅವಶ್ಯಕ ಆ ಕಾರಣಕ್ಕಾಗಿಯೇ ಇವೊತ್ತು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆ ಉತ್ತರದಲ್ಲಿ ನಾನು ಸರಿಪಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ ತಾವೆಲ್ಲರೂ ಶಾಂತ ರೀತಿಯಿಂದ ಇರುವುದಾದರೆ ಇನ್ನೊಂದು ಸಲ ಮಾನ್ಯ ಉದಾಸಿಯವರು ಉತ್ತರವನ್ನು ಕೊಡುತ್ತಾರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೂ

ತಯಾರಿದ್ದೇವೆ ಮಾನ್ಯ ಗುರುಪಾದಪ್ಪನವರೆ, ತಾವು ತಮ್ಮ ಸ್ಥಾನಕ್ಕೆ ದಯವಿಟ್ಟು ಹೋಗಿ ಆಮೇಲೆ ಬೇಕಾದರೆ ಮತ್ತೆ ಬಾವಿಗೆ ಬರುವಿರಂತೆ

ಅಧ್ಯಕ್ಷರು – ಮಾನ್ಯ ಗುರುಪಾದಪ್ಪನವರೆ, ದಯಮಾಡಿ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋಗಿ (ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

ಶ್ರೀ ಸಿ ಎಂ ಉದಾಸಿ – ಮಾನ್ಯ ಅಧ್ಯಕ್ಷರೆ, ಈಗಾಗಲೇ 26 ಜಿಲ್ಲೆಗಳಲ್ಲಿ ಪೂರ್ಣವಾಗಿ ಗ್ರಾಮಗಳನ್ನು ಆಯ್ಕೆ ಮಾಡುವಂಥ ಪ್ರಕ್ರಿಯೆಗಳನ್ನು ಮುಗಿಸಲಾಗಿದೆ ಎಲ್ಲೆಲ್ಲಿ ಆಕ್ಷೇಪಣೆಗಳು ಬಂದು ತೀರ ಅನ್ಯಾಯವಾಗಿದೆ ಎನ್ನುವ ವಿಚಾರ ಗಮನಕ್ಕೆ ಬಂದಾಗ ಅದೆಲ್ಲವನ್ನೂ ಸರಿಪಡಿಸಿ ಕೊಡುವ ಕೆಲಸನ್ನೂ ಕೂಡ ಮಾಡಿ ಕೊಟ್ಟಾಗಿದೆ

(ಗೊಂದಲ)

ಅಧ್ಯಕ್ಷರು – ಈಗ ಅವರು ಮೊದಲು ಉತ್ತರ ಕೊಡಲು ಅವಕಾಶ ಮಾಡಿಕೊಡಿ ಎಲ್ಲರೂ ಹೀಗೆ ಮದ್ಯೆ ನಿಂತುಕೊಂಡು ಅಡ್ಡಿಪಡಿಸಿದರೆ ಹೇಗೆ?

ಶ್ರೀ ಸಿ ಎಂ ಉದಾಸಿ – ಮಾನ್ಯ ಅಧ್ಯಕ್ಷರೆ, ಈಗಾಗಲೇ ಯೋಜನೆಗಳನ್ನು ತಯಾರು ಮಾಡಿ ಕೆಲಸವನ್ನು ಪ್ರಾರಂಭ ಮಾಡಿರುವಲ್ಲಿ ಬದಲಾವಣೆಯನ್ನು ಮಾಡುವುದು ಸ್ವಲ್ಪ ತೊಂದರೆಯಾಗಬಹುದು ಗ್ರಾಮದಲ್ಲಿ ಈಗಾಗಲೇ ಗುರುತಿಸಿರುವಂಥ ಕೆಲಸದಲ್ಲಿ ಬದಲಾವಣೆ ಮಾಡಿದರೆ, ಶಾಸಕರಿಗೆ ಆಕ್ಷೇಪಣೆ ಬರುವಂಥ ಸಂಭವ ಹೆಚ್ಚಾಗಿದೆ ಆದರೆ ಇವರ ಬೇಡಿಕೆ ಏನಿದೆ, ಅದು ಪರಿಗಣಿಸಬೇಕಾದಂಥದ್ದು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ನೀವು ವಕೀಲರಲ್ಲದಿದ್ದರೂ ವಕೀಲರ ಹಾಗೆ ಮಾತನಾಡುತ್ತೀರಿ

ಶ್ರೀ ಸಿ ಎಂ ಉದಾಸಿ – ಈಗ ನಿಯಮಗಳನ್ನು ಬದಲಾಯಿಸಿದರೆ ಆಕ್ಷೇಪಣೆಗಳು ಬರುತ್ತದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಒಂಬತ್ತು ಭಾಷೆಗಳ ಪಂಡಿತರು ಈ ರೀತಿಯಾಗಿ ಮಾತನಾಡಿದರೆ ಹೇಗೆ ಹೇಳಿ

ಶ್ರೀ ಬಿ ಶಿವರಾಮ್ – ಈಗ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು

ಶ್ರೀ ಸಿ ಎಂ ಉದಾಸಿ – ಒಂದು ನಿಮಿಷ ಕೇಳಿ ಈಗ ಎಲ್ಲಿ ಕೆಲಸ ಪ್ರಾರಂಭವಾಗಿದೆ ಅಲ್ಲಿ ಬದಲಾಯಿಸಿದರೆ ಎಂಎಲ್ಎ ಮೇಲೆ ಆಕ್ಷೇಪ ಬರುವ ಸಂಭವ ಹೆಚ್ಚಾಗಿದೆ ಇನ್ನು ಮುಂದೆ ಅರ್ಜಿಗಳನ್ನು ಪರಿಗಣಿಸಬೇಕಾದಂಥ ಸಂದರ್ಭದಲ್ಲಿ, ನೇರವಾಗಿ ಶಾಸಕರಿಂದ ಅಭಿಪ್ರಾಯವನ್ನೂ ಪಡೆಯಬೇಕು ಎನ್ನುವ ಸಲಹೆಯನ್ನು ಕೊಡುವ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವುದನ್ನು ದಯವಿಟ್ಟು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ

ಎಲ್ಲಿ ಕೆಲಸ ಪ್ರಾರಂಭವಾಗಿದೆ, ಪ್ರಾರಂಭ ಮಾಡಿದ ಕೆಲಸದಲ್ಲಿ ಆಕ್ಷೇಪ ಮಾಡಿ ಬದಲಾಯಿಸಿದರೆ, ಆರೋಪ ಬರುವ chances ಹೆಚ್ಚಾಗಿದೆ ಇನ್ನು ಮುಂದೆ ಪರಿಗಣಿಸಬೇಕಾದಂತಹ ಸಂದರ್ಭದಲ್ಲಿ ನೇರವಾಗಿ ಶಾಸಕರಿಂದ ಅಭಿಪ್ರಾಯವನ್ನು ಪಡೆಯಬೇಕು ಎನ್ನುವ ಸಲಹೆಯನ್ನು ಕೊಡುವಂತಹ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ

ಶ್ರೀ ಬಿ ಶಿವರಾಂ No, ಈಗಲೇ ಅದನ್ನು set right ಮಾಡಬೇಕು ಈಗಾಗಿರುವ ಅನ್ಯಾಯವನ್ನು set right ಮಾಡಲೇಬೇಕು

(ಗೊಂದಲ)

ಅಧ್ಯಕ್ಷರು ಈಗ ಪ್ರಶ್ನೆಯನ್ನು ಮುಗಿಸುತ್ತಿದ್ದೇನೆ ಮಾನ್ಯ ಪಾಟೀಲರು

(ಗೊಂದಲ)

ಶ್ರೀ ಬಿ ಶಿವರಾಂ ಇದನ್ನು ನಿರಂತರವಾಗಿ ಸಹಿಸುವುದಕ್ಕಾಗುವುದಿಲ್ಲ No, ಇದನ್ನು ಸರಿಪಡಿಸದೇ ಇದ್ದರೆ ಧರಣಿ ಮಾಡುತ್ತೇವೆ ಮಾನ್ಯ ಪ್ರಕಾಶ್‌ರವರು ರಕ್ಷಣೆಗೆ ಬರಬೇಕು ಈಗ ನಮ್ಮ ರಕ್ಷಣೆಗೆ ಬರದೇ ಇದ್ದರೆ ನಾವು ಧರಣಿ ಮಾಡುತ್ತೇವೆ ನಾನು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ, ನೀವು ನಮ್ಮ ರಕ್ಷಣೆಗೆ ಬರಲೇಬೇಕು

ಒಬ್ಬರು ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಸದನದಲ್ಲಿ ಕೊಟ್ಟರೂ ಕೂಡ ಅದಕ್ಕೆ ಪದೇ ಪದೇ ಅಡಚಣೆ ಮಾಡುತ್ತಿದ್ದಾರೆ

ಅಧ್ಯಕ್ಷರು ನೀವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜ್ ನೀವು ಮಂತ್ರಿಯಾಗಿ ಏನು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು ಏನ್ರಿ ಇದು? ದಯಮಾಡಿ ಕುಳಿತುಕೊಳ್ಳಿ ಈ ಪ್ರಶ್ನೆಯನ್ನು ಮುಕ್ತಾಯ ಮಾಡಲಾಗಿದೆ ನಾನು ಮುಂದಿನ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಎಸ್ ಎಸ್ ಪಾಟೀಲ್‌ರವರನ್ನು ಕರೆದಿದ್ದೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಬಿ ಶಿವರಾಂ ಏನು ಸಮಸ್ಯೆ ಇದೆ ಎಂದು ಕೇಳಿ ಕೇಳುವ ಸೌಜನ್ಯತೆ ಇಲ್ಲ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಇಲ್ಲದಿದ್ದರೆ ನಿಮ್ಮನ್ನು ಹೊರಗಡೆ ಕಳುಹಿಸಬೇಕಾಗುತ್ತದೆ ದಯಮಾಡಿ ಮಾನ್ಯ ಶಿವರಾಂ, ನೀವು ಕುಳಿತುಕೊಳ್ಳಿ

ಒಬ್ಬರು ಮಾನ್ಯ ಸದಸ್ಯರು. ಮಾನ್ಯ ಸಭಾಧ್ಯಕ್ಷರೆ, ಮಾಜಿ ಸಚಿವರು ದಬ್ಬಾಳಿಕೆಯನ್ನು ತಮ್ಮ ಕ್ಷೇತ್ರದಲ್ಲಿ ಮಾಡಿಕೊಳ್ಳಲಿ

ಅಧ್ಯಕ್ಷರು ಈಗ ಈ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ, ಮುಂದಿನ ಪ್ರಶ್ನೆಗೆ ಮಾನ್ಯ ಎಸ್ ಎಸ್ ಪಾಟೀಲರನ್ನು ಕರೆದಿದ್ದೇನೆ ದಯಮಾಡಿ ನೀವೆಲ್ಲರೂ ಸಹಕರಿಸಬೇಕು ಈ ರೀತಿಯಾದರೆ ಹೇಗೆ? No, no ಇದನ್ನು allow ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಉತ್ತರ ಕೊಟ್ಟಿದ್ದಾರೆ

ಶ್ರೀ ಬಿ ಶಿವರಾಂ ನಾವು ಧರಣಿ ಮಾಡುತ್ತೇವೆ ಮಾನ್ಯ ಪ್ರಕಾಶ್‌ರವರೆ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ ಇಲ್ಲ, ನಾವು ಬದಲಾವಣೆ ಮಾಡುವುದಕ್ಕೆ ಆಗುವುದೆ ಇಲ್ಲ ಕನಿಷ್ಟ ನೀವು ನಮ್ಮನ್ನು ಕೇಳಿ, ನಿಮ್ಮ ಆಯ್ಕೆಗೆ ನಮ್ಮ ವಿರೋಧ ಎಂದು ಅಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ತೀರ್ಮಾನವಾಗಬೇಕು, ನಾವು ಧರಣಿ ಮಾಡುತ್ತೇವೆ

ಅಧ್ಯಕ್ಷರು ಈಗ ಈ ರೀತಿಯಾದರೆ ಏನೂ ಮಾಡುವುದಕ್ಕೆ ಸಾಧ್ಯವವಾಗುವುದಿಲ್ಲ

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೆ, ನಮಗೆ ಹಿಂದಿನ ಸಾರಿ ಅವರೆಲ್ಲಾ ಜಿಲ್ಲಾ ಮಂತ್ರಿಯಾಗಿ ಏನೇನು ತೊಂದರೆ ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ, ನೀವು ಒಂದು ಗಂಟೆ ಚರ್ಚೆಗೆ ಅವಕಾಶ ಕೊಡಿ ಹಿಂದಿನ ಅವಧಿಯಲ್ಲಿ ಇವರೆಲ್ಲಾ ಜಿಲ್ಲಾ ಮಂತ್ರಿಯಾಗಿ ನಮಗೆ ಏನೇನು ತೊಂದರೆ ಮಾಡಿದ್ದಾರೆ, ಎಷ್ಟು ಹಿಂಸೆ ಮಾಡಿದ್ದಾರೆ, ಎಂದು ಹೇಳುತ್ತೇನೆ ನೋಡಿ ಮಾನ್ಯ ಶಿವರಾಂರವರು ಚಿಕ್ಕಮಗಳೂರು ಜಿಲ್ಲೆಯ ಸಚಿವರಾಗಿ, ಶಿವಮೊಗ್ಗ ಜಿಲ್ಲೆಯಲ್ಲಿ ಏನೇನು ಮಾಡಿದ್ದಾರೆ ಎಂದು ಹೇಳುತ್ತೇವೆ

(ಗೊಂದಲ)

ಅಧ್ಯಕ್ಷರು ನೋಡಿ wellನಲ್ಲಿ ನಿಂತುಕೊಂಡು ಈ ರೀತಿ ಮಾಡಬಾರದು, ಸುಮ್ಮನೆ ನಿಂತುಕೊಳ್ಳಿ ಈಗ ಎಸ್ ಎಸ್ ಪಾಟೀಲರೆ ದಯಮಾಡಿ ಕೇಳಿ

ಶ್ರೀ ಆರಗ ಜ್ಞಾನೇಂದ್ರ, ಜಿಲ್ಲಾ ಮಂತ್ರಿಗಳು ಏನೇನು ಮಾಡಿದ್ದಾರೆ ಎಂದು ಹೇಳುತ್ತೇವೆ, ಒಂದು ಗಂಟೆ ಅವಕಾಶ ಕೊಡಿ ಸ್ವಾಮಿ, ಇವರು ಈಗ ಎಲ್ಲಾ ಹೇಳುತ್ತಾರೆ ಈಗ ಇವರಿಗೆ ಜ್ಞಾನೋದಯವಾಗಿದೆ ಇಲ್ಲ ಸಾರ್, ಜಿಲ್ಲಾ

ಮಂತ್ರಿಗಳಾಗಿ ಹಿಂದಿನ ಅವಧಿಯಲ್ಲಿ ಏನೇನು ಮಾಡಿದ್ದಾರೆ ಎಂಬು ಹೇಳುವುದಕ್ಕೆ ಒಂದು ಗಂಟೆ ಅವಕಾಶ ಕೊಡಿ

ಅಧ್ಯಕ್ಷರು ಆಯಿತು, ಅದರ ಬಗ್ಗೆ ಸೂಚನೆ ಕೊಡಿ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ ಈಗ ಎಸ್ ಎಸ್ ಪಾಟೀಲರನ್ನು ಕರೆದಿದ್ದೇನೆ, ದಯಮಾಡಿ ಎಲ್ಲಾ ಸಹಕರಿಸಿ ಮಾನ್ಯ ಪಾಟೀಲರೆ ಕೇಳಿ

ಶ್ರೀ ಆರಗ ಜ್ಞಾನೇಂದ್ರ ನಮ್ಮನ್ನು ಯಾರನ್ನು ಕೂಡ ಕೇಳದೇ ಮಾಡಿದಂತಹವರು ಇವರು ಜಿಲ್ಲಾ ಮಂತ್ರಿಗಳು ಎಂದರೆ ಪಾಳೆಗಾರರು ಎಂದು ತಿಳಿದುಕೊಂಡು ನಡೆಸಿದಂತಹವರು ಈಗ ಇವರಿಗೆ ಜ್ಞಾನೋದಯವಾಗಿದೆ

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು, ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್ ಹಾಗೂ ಜಿ ವಿ ಶ್ರೀರಾಮರೆಡ್ಡಿಯವರು ಧರಣಿ ಮಾಡಲು ಬಾವಿಗೆ ಬಂದರು)

ಅಧ್ಯಕ್ಷರು ಈಗ ದಯಮಾಡಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಈ ರಾಜಕೀಯ ಅಂತ ಇದೆಯಲ್ಲ, ಅದಕ್ಕೂ ಒಂದು ಇತಿಮಿತಿ ಎಂದು ಇದೆ ಏನೆಂದರೆ ಈ ರೀತಿ ಮಾತನಾಡಿದರೆ ಜನ ನಗುತ್ತಾರೆ ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಹೇಳಿದ್ದಾರೆ ಅಲ್ಲಿಗೆ ಮುಕ್ತಾಯವಾಯಿತು ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ ಈಗ ನೀವು ಏಕೆ ಇಲ್ಲಿಗೆ ಬಂದಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ ದಯಮಾಡಿ ಮಾನ್ಯ ಪಾಟೀಲರೆ ಕೇಳಿ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಕೇಳುವುದಲ್ಲ, House order ನಲ್ಲಿ ಇಲ್ಲ

ಅಧ್ಯಕ್ಷರು ನೀವು ಕೇಳುತ್ತೇನೆ ಎಂದರೆ ಕೇಳಿ ಸ್ವಾಮಿ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ದಯವಿಟ್ಟು ಎಲ್ಲರೂ ಕೇಳಿದಂತೆ ಹೇಳುತ್ತೇನೆ

(ಗೊಂದಲ)

ಅಧ್ಯಕ್ಷರು ಮಾನ್ಯ ಸಚೇತಕರೇ, ನೋಡಿ ಆಳುವ ಪಕ್ಷದ ಸದಸ್ಯರು ಈ ರೀತಿ behave ಮಾಡುವುದು ಸರಿಯಲ್ಲ ಪ್ರಶ್ನೆ ಕೇಳಲು ಅವರನ್ನು ಕರೆದಿದ್ದೇನೆ, ಇವರು ಏಕೆ ನಿಂತುಕೊಳ್ಳಬೇಕು?

(ಗೊಂದಲ)

ಶ್ರೀ ಎಸ್ ಎ ರವೀಂದ್ರನಾಥ್ ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಲಾಗಿದೆ

ಅಧ್ಯಕ್ಷರು ಈಗ ಸದನ ನಡೆಯಬೇಕು ಎನ್ನುತ್ತೀರೋ, ನಡೆಯಬಾರದು ಎನ್ನುತ್ತೀರೋ? ಹೇಳಿ

ಶ್ರೀ ಎಸ್ ಎಸ್ ಪಾಟೀಲ್ ಇದು ಪ್ರಶ್ನೆ ಹಾಗೆ ಇದೆ ನೀವು ಮಾಡಿದಿರಿ, ನಾವು ಮಾಡುತ್ತೇವೆ ಎಂದು ಪ್ರಾರಂಭವಾಗಿಬಿಟ್ಟರೆ, ಸದನ ಹಾಳಾಗಿಹೋಯಿತು ಇದಕ್ಕೆ ಏನಾದರೂ ಒಂದು ನೀತಿ ಮಾಡಬೇಕು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಕ್ಷೇತ್ರದಲ್ಲಿ MLAಗಳಿಗೆ ಗೌರವ ಸಿಗದೇ ಇದ್ದರೆ, ಸದನ ಏಕೆ ಬೇಕು?

ಅಧ್ಯಕ್ಷರು ಈಗ ನೀವು ಪ್ರಶ್ನೆ ಕೇಳುತ್ತೀರೋ ಇಲ್ಲವೋ?

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪ್ರಶ್ನೆ ಏನು ಕೇಳುತ್ತೀರಿ?

ಅಧ್ಯಕ್ಷರು ಅವರು wellನಲ್ಲಿ ನಿಂತಿದ್ದಾರೆ ನೀವು ಕೇಳಿ ಸ್ವಾಮಿ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ ಯಾವ ಪ್ರಶ್ನೆ ಕೇಳುತ್ತೀರಿ? ಇಲ್ಲಿ ಇನ್ನೊಂದು ಏನು ನಡೆಯುತ್ತಿದೆ ಎಂದರೆ ಹಿಂದೆ ನೀವು ಮಾಡಿದಿರಿ, ನಾವು ಮಾಡುತ್ತೇವೆ ಎಂದು ಪ್ರಾರಂಭ ಮಾಡಿದರೆ, ಇದಕ್ಕೆ ಏನಾದರೂ ಇತಿಶ್ರೀ ಹಾಡಬೇಕು ತಾವೇ ಇದಕ್ಕೆ ಒಂದು ಇತಿಶ್ರೀ ಹಾಡಿರಿ ಯಾವ ಸರ್ಕಾರ ಬರಲಿ, ಇದು ಸರಿಯಾದ ಕ್ರಮ ಅಲ್ಲ

ಅಧ್ಯಕ್ಷರು ನಿಮಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದೆ ಹೊರತು ಭಾಷಣ ಮಾಡುವುದಕ್ಕೆ ಅಲ್ಲ ದಯಮಾಡಿ ಪ್ರಶ್ನೆ ಕೇಳಿ

ಶ್ರೀ ಎಸ್ ಎಸ್ ಪಾಟೀಲ್ ಯಾವ ಸರ್ಕಾರ ಬರಲಿ ಜನಪ್ರತಿನಿಧಿ ಇರಬೇಕು, ಶಾಸಕರಿಗೆ ಹೆಚ್ಚು ಗೌರವ ಇರಬೇಕು ಆ ರೀತಿ ಎಲ್ಲರೂ ನಡೆದುಕೊಳ್ಳಬೇಕು ಎಂದು ಒಂದು ನಿರ್ಣಯ ಮಾಡಿ ಯಾವ ಸರ್ಕಾರ ಬರಲಿ ಇದು ನೀವು ಮಾಡಿರಿ, ನಾವು ಮಾಡುತ್ತೇವೆ ಎಂದು ಪ್ರಾರಂಭವಾದರೆ, ಸದನಕ್ಕೆ ಗೌರವ ಇರುವುದಿಲ್ಲ

ಅಧ್ಯಕ್ಷರು ಮಾನ್ಯ ಪಾಟೀಲರೆ, ಇವರು ಎಲ್ಲಾ ಹೇಳಿಯಾಗಿದೆ ನೀವು ಪ್ರಶ್ನೆ ಕೇಳಿ ಎಂದು ಕರೆದರೆ, ಏನಿದು? ನಿಮ್ಮ ಪ್ರಶ್ನೆ ಇದೆ, ಕೇಳಿ ಎಂದು ಕರೆದಿದ್ದೇನೆ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ತಾವೂ ಕೂಡ ಇಲ್ಲಿ ರಕ್ಷಣೆಗೆ ಬರಬೇಕು ಶಾಸಕರ ರಕ್ಷಣೆಗೆ ತಾವು ಬರಬೇಕಾಗುತ್ತದೆ, ಅವರೆಲ್ಲಾ ಅಲ್ಲಿ ನಿಂತುಕೊಂಡಿರುವಾಗ ನೀವು ನನ್ನನ್ನು ಪ್ರಶ್ನೆ ಕೇಳಿ ಎಂದು ಹೇಳಿದರೆ ಹೇಗೆ ನಡೆಯುತ್ತದೆ? ಅಧ್ಯಕ್ಷರೆ ತಾವೇ ಹೇಳಿ ದಯವಿಟ್ಟು ಸದನವನ್ನು orderನಲ್ಲಿ ತೆಗೆದುಕೊಂಡು ಬನ್ನಿ ಅದು ತಮ್ಮ ಕರ್ತವ್ಯ ಶಾಸಕರ ರಕ್ಷಣೆ ಮಾಡುವಂತಹ ಜವಾಬ್ದಾರಿ ತಮ್ಮದು

ಅಧ್ಯಕ್ಷರು ಎಲ್ಲರಿಗೂ ಅಂತರ್‌ಸಾಕ್ಷಿ ಎಂದು ಇದ್ದರೆ, ಆ ರೀತಿ ಮಾಡಬಹುದು

ಶ್ರೀ ಎಸ್ ಎಸ್ ಪಾಟೀಲ್ ಇದನ್ನು ಒಂದು policy ಮಾಡಬೇಕಾಗುತ್ತದೆ

ಅಧ್ಯಕ್ಷರು ಅಂತರ್‌ಸಾಕ್ಷಿ ಇಲ್ಲದೇ ನಡೆದುಕೊಳ್ಳುವುದಾದರೆ ಯಾವುದೂ policy ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಇದು ನೀವು ಮಾಡಿ, ನಾವು ಮಾಡುತ್ತೇವೆ ಎನ್ನುವುದು ಪ್ರಾರಂಭವಾಗಿದೆ ಇದು ಆಗಬಾರದು

ಅಧ್ಯಕ್ಷರು ಏನು ಅರ್ಥ ಇದೆ? ಅವರು ಉತ್ತರ ಕೊಟ್ಟಿದ್ದಾರೆ ಎಲ್ಲರಿಗೂ ಕೂಡ ಅವರವರ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಕೆಲವು ಕಡೆ ಕೇಳಿದ್ದಾರೆ, ಕೆಲವು ಕಡೆ ಕೇಳಿಲ್ಲ ಏಕೆ ಹಾಗೆ ಮಾಡುತ್ತಾರೆ?

ಅಧ್ಯಕ್ಷರು ಎರಡು ಮೂರು ಸಲ ಕರೆದಿದ್ದೇನೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಎಸ್ ಎಸ್ ಪಾಟೀಲ್ ಬಹಳ ಕಡೆ ಕೇಳಿದೆ, ಇಲ್ಲೆಲ್ಲಾ ನಾನು ಕೇಳಿದೆ ಬಹಳ ಮಂದಿಗೆ ಕೇಳಿಲ್ಲ

ಅಧ್ಯಕ್ಷರು ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ ಮಾನ್ಯ ಪಾಟೀಲರೇ, ಈಗ ನೀವು ಕೇಳುತ್ತೀರೋ ಇಲ್ಲವೋ ಸ್ವಾಮಿ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಈಗ ನೀವು ಸದನವನ್ನು ಮುಂದೂಡುತ್ತೇನೆ ಎನ್ನುವ ಮಾತು ಹೇಳಿಯಾಯಿತು "ಸದನವನ್ನು"ಎಂದು ಹೇಳಿದಿರಿ ಆದರೆ ಏನೆಂದು ಹೇಳಲಿಲ್ಲ ಐದು ನಿಮಿಷ ನಮ್ಮನ್ನು ಕರೆದು ಮಾತನಾಡಿ

ಅಧ್ಯಕ್ಷರು ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ

(ಸದನವು ತನ್ನ ಕಲಾಪವನ್ನು ಮಧ್ಯಾಹ್ನ 12 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸಭೆಯು ಮಧ್ಯಾಹ್ನ 1 35 ಗಂಟೆಗೆ ಮತ್ತೆ ಪ್ರಾರಂಭವಾದಾಗ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು

ಪ್ರಶ್ನೋತ್ತರ

ಚು ಪ್ರ 1585, ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆ

–*–

–(ಮುಂದುವರಿದುದು)

ಅಧ್ಯಕ್ಷರು – ಮಾನ್ಯ ಉದಾಸಿಯವರೆ, ತಾವು ಮಾತನಾಡಿ

ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) – ಮಾನ್ಯ ಅಧ್ಯಕ್ಷರೇ, ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಗ್ರಾಮಗಳನ್ನು ಗುರುತಿಸುವಂಥ ಸಂದರ್ಭದಲ್ಲಿ ಈಗಾಗಲೇ ಆಗಿರತಕ್ಕಂಥ ಲೋಪದೋಷಗಳ ಬಗ್ಗೆ ಈ ಸಭೆಯ ಗಮನಕ್ಕೆ ತರುವಂಥ ಕೆಲಸ ಇದುವರೆಗೂ ನಡೆದಿದೆ ಇದರ ಬಗ್ಗೆ ಚರ್ಚೆ ಆಗಿರುವ ಪ್ರಕಾರ, ಸನ್ಮಾನ್ಯ ಸದಸ್ಯರುಗಳಿಗೆ ನಾನು ಭರವಸೆ ಕೊಡುವುದಕ್ಕೆ ಬಯಸುವುದೇನೆಂದರೆ, ಯಾವ್ಯಾವ ವಿಧಾನ ಸಭಾ ಕ್ಷೇತ್ರದಲ್ಲಿ ಲೋಪದೋಷಗಳು ಆಗಿವೆ ಎನ್ನುವುದರ ಬಗ್ಗೆ ಸದಸ್ಯರು ನನ್ನ ಜೊತೆಯಲ್ಲಿ ಚರ್ಚೆ ಮಾಡಿ ಅದಕ್ಕೆ ಪರಿಹಾರ ಕಂಡುಹಿಡಿಯತಕ್ಕಂಥ ಕೆಲಸ ಆಗಬೇಕೆಂದು ಹೇಳಿದ್ದಾರೆ ಆದ್ದರಿಂದ, ಅವರು ಸೂಚಿಸುವಂಥ ಗ್ರಾಮಗಳನ್ನೇ ಗುರುತಿಸತಕ್ಕಂಥ ಕೆಲಸದಲ್ಲಿ ಅವರಿಗೆ ಸಹಕಾರ ನೀಡುತ್ತೇವೆ ಎಂಬ ಭರವಸೆಯನ್ನು ಕೊಡುವುದರ ಜೊತೆಗೆ, ಇನ್ನು ಮುಂದೆ ಗ್ರಾಮಗಳನ್ನು ಆಯ್ಕೆ ಮಾಡುವಾಗ ಆಯಾ ವಿಧಾನ ಸಭಾ ಕ್ಷೇತ್ರದಲ್ಲಿ ಜನಸಂಖ್ಯೆಯ ಅನುಗುಣವಾಗಿ ಮತ್ತು ಅವರು ನೀಡುವ ಸಲಹೆ ಸೂಚನೆಗಳ ಮೇರೆಗೆ ಅವರು ಸೂಚಿಸುವಂಥ ಗ್ರಾಮಗಳನ್ನು ಗುರುತಿಸಿ, ಕೆಲಸ ಮಾಡಲು ತೀರ್ಮಾನ ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ ಇವತ್ತಿನ ದಿವಸ ಆಯ್ಕೆ ಮಾಡಿರತಕ್ಕಂಥ ಗ್ರಾಮಗಳಲ್ಲಿ ಏನು ಕೆಲಸ ಕಾರ್ಯಗಳು ಆಗಬೇಕಾಗಿದೆಯೋ ಅದರ ಬಗ್ಗೆ ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರ ಜೊತೆ ಚರ್ಚೆ ಮಾಡಿ ಆ ಕಾರ್ಯಗಳನ್ನು ಯಶಸ್ವಿಗೊಳಿಸತಕ್ಕಂಥ ಕೆಲಸ ಆಗಬೇಕೆಂದು ಜಿಲ್ಲಾ ಪಂಚಾಯತ್‌ನ ಇಂಜಿನಿಯರ್‌ಗಳಿಗೆ ಸೂಚನೆ ಕೊಡುತ್ತೇನೆಂಬ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಆರಗ ಜ್ಞಾನೇಂದ್ರ– ಮಾನ್ಯ ಅಧ್ಯಕ್ಷರೇ ಮಲೆನಾಡು ಭಾಗಕ್ಕೆ ಸಂಬಂಧಪಟ್ಟಂತೆ ಈಗ ಇರುವ ನಾರ್ಮ್ಸ್‌ನ ಬದಲಾವಣೆಯನ್ನು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಏಕೆಂದರೆ, ಇದರಲ್ಲಿ ಮುಖ್ಯವಾಗಿ ಒಂದು ಗ್ರಾಮವನ್ನು ತೆಗೆದುಕೊಳ್ಳುತ್ತೇವೆ ಆದರೆ, ನಮ್ಮಲ್ಲಿ ಭಜನೆ ಹಳ್ಳಿಗಳು ಹತ್ತಾರು ಇರುತ್ತವೆ ಆದ್ದರಿಂದ ಮಲೆನಾಡಿನಲ್ಲಿರುವ ಹಳ್ಳಿಗಳ ಒಂದು ಕ್ರೈಟೀರಿಯವನ್ನು ಗಮನದಲ್ಲಿಟ್ಟುಕೊಂಡು ದಯವಿಟ್ಟು ಮಾಡಬೇಕೆಂದು ನಾನು ವಿನಂತಿ

ಮಾಡಿಕೊಳ್ಳುತ್ತೇನೆ ಈಗ ಬಯಲುಸೀಮೆ ಗ್ರಾಮಗಳಿಗೆ ಇದರಿಂದ ಅನುಕೂಲವಾಗುತ್ತಿದೆ ಇಲ್ಲಿ ಒಂದು ಗ್ರಾಮವೆಂದರೆ, ಒಂದೇ ಹಳ್ಳಿಯಿರುತ್ತದೆ ಆದರೆ, ನಮ್ಮಲ್ಲಿ ಒಂದು ಗ್ರಾಮಕ್ಕೆ ಹತ್ತಾರು ಭಜನೆ ಹಳ್ಳಿಗಳು ಸೇರಿರುತ್ತವೆ ಆದ್ದರಿಂದ, ಮಲೆನಾಡು ಪ್ರದೇಶಗಳಿಗೋಸ್ಕರ ಇದರ ನಾರ್ಮ್ಸ್‌ನ್ನು ಬದಲಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಲ್ಯಾಂಡ್ ಆರ್ಮಿಯವರಿಗೆ ಈ ಕೆಲಸ ಕೊಡುವುದು ಬೇಡವೆಂದು ನಾವು ಈಗಾಗಲೇ ಹೇಳಿದ್ದೇವೆ ಆದ್ದರಿಂದ, ಲ್ಯಾಂಡ್ ಆರ್ಮಿಗೆ ಕೊಡದೇ ಇರತಕ್ಕಂಥವರ ಬಗ್ಗೆ ಹೇಳಬೇಕು ಏಕೆಂದರೆ, ಅವರು ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಮಾನ್ಯ ಅಧ್ಯಕ್ಷರೆ, ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿರತಕ್ಕಂಥ ವಿಷಯವನ್ನು ನಾನು ಕೂಡ ಒಪ್ಪುತ್ತೇನೆ ಮತ್ತೆ ಮಾನ್ಯ ದೇಶಪಾಂಡೆಯವರೂ ಕೂಡ ಮಾತನಾಡುವಂಥ ಸಂದರ್ಭದಲ್ಲಿ, ಈ ವಿಷಯವನ್ನೇ ಹೇಳಿದ್ದಾರೆ ಮಲೆನಾಡು ಪ್ರದೇಶದಲ್ಲಿ ಕೇವಲ ಜನಸಂಖ್ಯೆಯನ್ನು ಆಧಾರವನ್ನಾಗಿ ತೆಗೆದುಕೊಳ್ಳಬಾರದು ಅಲ್ಲಿನ ಪ್ರದೇಶದ ವಿಸ್ತೀರ್ಣದ ವ್ಯಾಪ್ತಿಯನ್ನು ಸಹ ಗಣನೆಗೆ ತೆಗೆದುಕೊಂಡು, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು ಆಯಿತು ಇಲ್ಲಿಗೆ ಈ ವಿಷಯ ಮುಗಿಸೋಣ

ಡಾ॰ಶರಣಪ್ರಕಾಶ್ ರುದ್ರಪ್ಪ ಪಾಟೀಲ್॰– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇನ್ನೂ ಕೆಲವು ತಾಂತ್ರಿಕ ದೋಷಗಳಿವೆ ಅದೇನೆಂದರೆ, ಒಂದೊಂದು ತಾಲ್ಲೂಕಿನಲ್ಲಿ ಒಂದಕ್ಕಿಂಥ ಹೆಚ್ಚು ಶಾಸಕರು ಇರುತ್ತಾರೆ ಆದ್ದರಿಂದ, ಎಲ್ಲಾ ಕಡೆಗೂ ಪ್ರೊಟೆಕ್ಷನ್ ಕೊಡಬೇಕು

ಅಧ್ಯಕ್ಷರು – ಬೆಳಗ್ಗೆಯಿಂದ ಇದರ ಬಗ್ಗೆ ತಮ್ಮೆಲ್ಲಾ ಅಭಿಪ್ರಾಯಗಳನ್ನು ಹೇಳಿದ್ದೀರಿ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಒಂದೊಂದು ತಾಲ್ಲೂಕಿನಲ್ಲಿ ಸುಮಾರು ಮೂರ್‍ನಾಲ್ಕು ಕ್ಷೇತ್ರಗಳಿರುತ್ತವೆ ಆದ್ದರಿಂದ, ಅಂಥ ಕಡೆ ಎಲ್ಲಾ ಕ್ಷೇತ್ರಗಳಿಗೂ ಸಮಪಾಲು ಕೊಡಬೇಕಾಗುತ್ತದೆ ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಈಗಾಗಲೇ ಅನ್ಯಾಯವಾಗಿದೆ

ಅಧ್ಯಕ್ಷರು.– ಎಲ್ಲಾ ನಾಯಕರು ಸೇರಿ ಈಗಾಗಲೇ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಮತ್ತೆ ಅಲ್ಲಿ ಆಗಿರುವ ತೀರ್ಮಾನವನ್ನು ಈಗಾಗಲೇ

ಮಾನ್ಯ ಸಚಿವರು ಹೇಳಿದ್ದಾರೆ ಈಗ ಸದನವನ್ನು ಮಧ್ಯಾಹ್ನ 2 45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸಭೆಯು ಮಧ್ಯಾಹ್ನ 1 39 ಗಂಟೆಗೆ ಮುಕ್ತಾಯಗೊಂಡು ಪುನಃ 2 45 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 3 00 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು

(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1 (A) ಪ್ರಶ್ನೋತ್ತರ

---ಮುಂದುವರಿದುದು

ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 213(1327)

ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಉತ್ತರಿಸುವ ಸಚಿವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಮುಂಡರಗಿ ಮತಕ್ಷೇತ್ರದ ಲಕ್ಕುಂಡಿ ಗ್ರಾಮದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳು ಬತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ತುಂಗಭದ್ರಾ ನೀರಿನ ಸರಬರಾಜು ಸರಿಯಾಗಿ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಇ) ಬಂದಿದ್ದರೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಲಾಗುವುದೆ?

ಲಕ್ಕುಂಡಿ ಗ್ರಾಮದಲ್ಲಿ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗಿದ್ದು, ಈ ಗ್ರಾಮಕ್ಕೆ ನೀರು ಸರಬರಾಜು ಮಾಡುವ ಸಲುವಾಗಿ ಜಂತ್ಲಿ ರಸ್ತೆಯಲ್ಲಿ ಜಲನಿರ್ಮಲ ಯೋಜನೆಯಡಿಯಲ್ಲಿ 2 ಹೊಸ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ ಈ ಎರಡು ಕೊಳವೆ ಬಾವಿಗಳಿಗೆ ರಾಜ್ಯ ಯೋಜನೆಯಡಿ ಪಂಪಿಂಗ್ ಮೆಷಿನರಿ ಮತ್ತು ಏರು ಕೊಳವೆ ಮಾರ್ಗಗಳನ್ನು ರೂ 7 20 ಲಕ್ಷ ಅಂದಾಜು ವೆಚ್ಚದಲ್ಲಿ ಅಳವಡಿಸಿ ಮೇಲ್ಮಟ್ಟದ ಜಲಗಾರಕ್ಕೆ ನೀರನ್ನು ತುಂಬಿಸಿ ವಿತರಣಾ ಕೊಳವೆಗಳ ಮೂಲಕ ಲಕ್ಕುಂಡಿ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ

ಶ್ರೀ ಎಸ್ ಎಸ್ ಪಾಟೀಲ್ – ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನೇನೋ ಒದಗಿಸಿದ್ದಾರೆ ನಿಮ್ಮ ಅಧಿಕಾರಿಗಳು ಏನೋ ಒಂದು ಅಂಕಿ ಅಂಶವನ್ನು ಬರೆದು ಕಳುಹಿಸಿಬಿಡುತ್ತಾರೆ ಈಗೇನು ಅಲ್ಲಿ ಎರಡು ಕೊಳವೆ ಬಾವಿಗಳನ್ನು ಹಾಕಿ ಮೋಟಾರ್ ಕೂರಿಸಿ ನೀರು ಸರಿಯಿದೆಯೆಂದು ಹೇಳುತ್ತಿದ್ದಾರೆ, ಅದು ಸರಿಯಲ್ಲ ಅಲ್ಲಿ ಸಾಕಷ್ಟು ನೀರಿಲ್ಲ ಆಮೇಲೆ ಹೊಳೆಯಿಂದ ಆ ಊರಿಗೆ ನೀರು ಬರುತ್ತದೆ, ಅದೂ ಕೂಡ ಸರಿಯಾಗಿ ಬರುವುದಿಲ್ಲ ಹೀಗಾಗಿ ಅಲ್ಲಿ ಬಹಳ ತೊಂದರೆಯಾಗುತ್ತಿದೆ ಆ ಕಾರಣದಿಂದ ಅಲ್ಲಿ ಇನ್ನೂ ಹೊಸ ಬೋರ್‌ವೆಲ್‌ಗಳನ್ನು ಹಾಕಬೇಕು ಹಾಗೆಯೇ ಹೊಳೆ ನೀರು ಬರಲಿಕ್ಕೂ ಸಹ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕು ಆ ಕಾರಣದಿಂದ ತಾವು ಮಾಡುವಿರೇ, ಎಂದು ಹೇಳಬೇಕು ಇದೇ ರೀತಿ ಇಡೀ ನನ್ನ ಕ್ಷೇತ್ರದ ಪ್ರತಿಯೊಂದು ಹಳ್ಳಿಯಲ್ಲಿ ಕಷ್ಟವಾಗಿದೆ ಎಲ್ಲಾ ಹಳ್ಳಿಯಲ್ಲಿಯೂ ಕಡೆಗೆ ಒಂದೆರಡು ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿ ಕೈ ಪಂಪ್‌ಗಳನ್ನು ಕೂರಿಸಿ ಕೊಟ್ಟರೆ ಜನರಿಗೆ ಕುಡಿಯಲಿಕ್ಕೆ ನೀರು ದೊರೆಯುತ್ತದೆ ಇಲ್ಲವಾದರೆ 8,000 ಜನಸಂಖ್ಯೆಯಿರುವ ಈ ಊರಿಗೆ, ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಟ್ರಕ್‌ಗಳ ಮೂಲಕ ನೀರನ್ನು ತರಿಸಿಕೊಡಬೇಕು ಆ ಕಾರಣದಿಂದ ಕೂಡಲೇ ತಾವು ಇದನ್ನು ಮಾಡುವಿರಾ ಎಂಬುದನ್ನೂ ಹೇಳಬೇಕು

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) – ಈ ಜಲ ನಿರ್ಮಲ ಯೋಜನೆಯಲ್ಲಿ 80 00 ಲಕ್ಷ ರೂಪಾಯಿಗಳು ಮಂಜೂರಾಗಿದೆ, ಅದನ್ನು ಮುಂದಿನ ದಿನಗಳಲ್ಲಿ ಟೆಂಡರ್ ಕರೆದು, ಆ ಗ್ರಾಮಗಳಿಗೆ ಕುಡಿಯುವ ನೀರು ಕೊಡುವ ವ್ಯವಸ್ಥೆ ಮಾಡುತ್ತೇವೆ ಅದರ ಜೊತೆಗೆ ಬೋರ್‌ವೆಲ್ ಕೊರೆಯುವ ವಿಷಯದಲ್ಲಿ, ಆ ಗದಗ್ ಜಿಲ್ಲೆಯಲ್ಲಿನ ಜಿಲ್ಲಾ ಪಂಚಾಯಿತಿಯಲ್ಲಿ ಸರ್ಕಾರದ ಎಸ್ ಆರ್ ಗಿಂತ ಕಡಿಮೆ ಹಣಕ್ಕೆ ಬೋರ್‌ವೆಲ್ ಕೊರೆದರೆ, ಕೊರೆಯಲಿ ಇಲ್ಲವೇ ಬಿಡಲಿ ಎಂಬುದಕ್ಕೆ ಜಿಲ್ಲಾ ಪಂಚಾಯತ್‌ನಿಂದ ಒಂದು ರೆಸಲ್ಯೂಷನ್ ಮಾಡಿದ್ದಾರೆ 55 00 ರೂ ಗಳಿಗೆ ಕೊಳವೆ ಬಾವಿ ಕೊರೆಯಬೇಕೆಂದು ಮಾಡಿದ್ದಾರೆ ಸರ್ಕಾರದ ಎಸ್ ಆರ್ 68 00 ರೂ ಗಳಿವೆ ಈ ರೀತಿಯಲ್ಲಿ ಅಲ್ಲಿ ಇನ್ನೂ 150 ಕೊಳವೆ ಬಾವಿಗಳನ್ನು ಹೆಚ್ಚಿಗೆ ಕೊರೆಯಲಿಕ್ಕೆ ಹಣವಿದ್ದರು ಸಹ ಅಲ್ಲಿ ಈ ರೀತಿ ರೆಸಲ್ಯೂಷನ್ ಮಾಡಿರುವುದರಿಂದ ಅಲ್ಲಿ ಯಾರೂ ಕೊಳವೆ ಬಾವಿಗಳನ್ನು ಕೊರೆಯಲಿಕ್ಕೆ ಮುಂದೆ ಬರುತ್ತಿಲ್ಲ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಮಂತ್ರಿಗಳಿಗೆ ಅವರ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ 55–00 ರೂಪಾಯಿಗಳಿಗೆ ಕೊಳವೆ ಬಾವಿ ಕೊರೆಯಲಿಕ್ಕೆ ಬರುತ್ತಾರೆ, ಆದರೆ ಅವರಿಗೆ ತಕ್ಷಣ ರೊಕ್ಕ ಕೊಡಬೇಕು ನಾವು

ಇಬ್ಬರೂ ಕೂಡಿಯೇ ಮಾಡಿದ್ದೇವೆ, ಎಲ್ಲಾ ಎಂ ಎಲ್ ಎ ಗಳು ಕೂಡಿಯೇ ಮಾಡಿದ್ದೇವೆ ಸುಮ್ಮನೆ ಅದೇನೋ ಒಂದು ರೇಟ್ ಇದೆಯೆಂದು ತಿಳಿದುಕೊಂಡು ಪಂಚಾಯಿತಿಯಲ್ಲಿ 80 00 ರೂ ಗಳನ್ನು ಹಾಕುತ್ತಿದ್ದರು ಎಲ್ಲರೂ ತಕ್ಷಣವೇ ಕೊಳವೆ ಬಾವಿ ಕೊರೆಯಬೇಕು, ಯಾರೂ ಇದರಲ್ಲಿ ನಡುವೆ ಪರ್ಸೆಂಟೇಜ್ ಕೇಳಬಾರದು ಎಂದು ಸ್ಪಷ್ಟವಾಗಿ ನಿರ್ಣಯ ಮಾಡಿ ಅದಕ್ಕೆ ತಕ್ಷಣ ಹಣ ಕೊಟ್ಟರೆ ಇವತ್ತೇ ಕೊಳವೆ ಬಾವಿ ಕೊರೆಯುತ್ತಾರೆ ಆ ರೀತಿಯಾಗಿ ತಾವು ಆದೇಶ ಮಾಡಬೇಕು 55 00 ರೂಪಾಯಿಗಳಿಗೆ ಕೊಳವೆ ಬಾವಿ ಕೊರೆಯುತ್ತಾರೆ 50 00 ರೂಪಾಯಿಗಳಿಗೂ ಕೊಳವೆ ಬಾವಿ ಕೊರೆಯುತ್ತಾರೆ, ಆದರೆ ಇವರು ತಕ್ಷಣ ಹಣ ಕೊಡುವುದಿಲ್ಲ ಅಂದರೆ ಆರಾರು ತಿಂಗಳು ಹಣ ಕೊಡದೇ ನಿಲ್ಲಿಸುತ್ತಾರೆ ಹಾಗಾಗಿ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಿದರೆ, ಅಧ್ಯಕ್ಷರೇ ನಾನು ಖಂಡಿತವಾಗಿ ಹೇಳುತ್ತೇನೆ, 50 00 ರೂ ಗಳಿಗೂ ಕೊಳವೆ ಬಾವಿ ಕೊರೆಯುತ್ತಾರೆ ಸುಮ್ಮನೆ 68 00 ರೂ ಗಳು, 80 00 ರೂಪಾಯಿಗಳು ಬಿಲ್ ಮಾಡುತ್ತಾರೆ ಅಷ್ಟೊಂದು ಹಣ ಕೊಡುವುದು ಬೇಕಾಗಿಲ್ಲ, ಅಧಿಕಾರಿಗಳು ಸುಮ್ಮನೆ ಹೆಚ್ಚು ಬಿಲ್ ಮಾಡುತ್ತಾರೆ ಅದರ ಮೇಲೆ ಏನೇನೋ ಇರುತ್ತವೆ, ಅದರ ದೆಶೆಯಿಂದ ಹೀಗೆಲ್ಲಾ ಆಗುತ್ತದೆ 50 00 ರೂ ಗಳನ್ನು ತಕ್ಷಣ ಕೊಡಲಿಕ್ಕೆ ನೀವು ವ್ಯವಸ್ಥೆ ಮಾಡಿ, ನಾಳೆ 100 ಬೋರ್‌ವೆಲ್ ಕೊರೆಯಲಿಕ್ಕೆ ಜನ ಬರುತ್ತಾರೆ

ಅಧ್ಯಕ್ಷರು – ಮಾನ್ಯ ಪಾಟೀಲರೆ, no water, no money ಎನ್ನುವ ದೃಷ್ಟಿಯಿಂದ ಟೆಂಡರ್ ಹಾಕಿದರೆ, ಜಾಸ್ತಿಯಾಗುತ್ತದೆಂದು ಇಲಾಖೆಯವರು ಹೇಳುವುದು

ಶ್ರೀ ಎಸ್ ಎಸ್ ಪಾಟೀಲ್ – ಇದು no water, no money ಅಲ್ಲ, ಅದು ಎಸ್ ಸಿ /ಎಸ್ ಟಿ ಗೆ ಇದು ಜನರಲ್‌ನವರಿಗೆ, ಬೋರ್‌ವೆಲ್ ಹಾಕಿಸುವ ಬಗ್ಗೆ ಇದಕ್ಕೆ ಹಣದ ಸಂಬಂಧವಿಲ್ಲ ಕುಡಿಯುವ ನೀರಿನ ಸಲುವಾಗಿ, ಫೇಲ್ ಆದರೂ ಹಣ ಕೊಡುತ್ತಾರೆ ಅದನ್ನು ಆಮೇಲೆ ಹೆಚ್ಚು ಮಾಡಬೇಕಾಗುತ್ತದೆ ಅನಿವಾರ್ಯವಿದ್ದರೆ ಹೆಚ್ಚು ಮಾಡಬೇಕಾಗುತ್ತದೆ ಏಕೆಂದರೆ ನಾಲ್ಕಕ್ಕೆ ಒಂದು ಫೇಲ್ ಆದರೂ ಅವನು ಸತ್ತು ಹೋಗಿಬಿಡುತ್ತಾನೆ ಆ ಕಾರಣದಿಂದ ತಕ್ಷಣವೇ ನೀವು ಹಣ ಕೊಡುವ ವ್ಯವಸ್ಥೆ ಮಾಡಿ

ಶ್ರೀ ಎಸ್ ಎ ರವೀಂದ್ರನಾಥ – ಆ ಅಧಿಕಾರಿಗಳು ಏನು ಮಾಡುತ್ತಾರೆಂದು ನೋಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಆದಷ್ಟು ತುರ್ತಾಗಿ ಬೋರ್‌ವೆಲ್ ಕೊರೆಸಲಿಕ್ಕೆ ಪ್ರಯತ್ನ ಮಾಡುತ್ತೇವೆ

ಜಲಸಂಪನ್ಮೂಲ ಇಲಾಖೆಯಿಂದ ಪಾವಗಡ ತಾಲ್ಲೂಕನ್ನು ಸೇರಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214(1394)
ಸದಸ್ಯರ ಹೆಸರು ಶ್ರೀ ತಿಮ್ಮರಾಯಪ್ಪ ಕೆ ಎಂ (ಪಾವಗಡ)
ಉತ್ತರಿಸುವ ಸಚಿವರು ಶ್ರೀ ಕೆ ಎಸ್ ಈಶ್ವರಪ್ಪ(ಜಲ ಸಂಪನ್ಮೂಲ ಸಚಿವರು)

ಅ) ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಪಾವಗಡ ತಾಲ್ಲೂಕನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಭದ್ರಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯೊಳಗೆ ಪಾವಗಡ ತಾಲ್ಲೂಕು ಸೇರಿರುವುದಿಲ್ಲ

ಆ) ಹಾಗಾದರೆ, ಪಾವಗಡ ತಾಲ್ಲೂಕು ಶಾಶ್ವತ ಬರಪೀಡಿತವಲ್ಲದೆ ನೀರಾವರಿ ಹಾಗೂ ಕುಡಿಯುವ ನೀರಿನಿಂದ ವಂಚಿತ ತಾಲ್ಲೂಕು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಭದ್ರಾ ಮೇಲ್ದಂಡೆ ಯೋಜನೆಗೆ ಲಭ್ಯವಾಗುವ ನೀರು ಮತ್ತು ಸದರಿ ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳು ಇತ್ಯಾದಿಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವಂತೆ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ದಿನಾಂಕ 24-10-05 ರಂದು ರಚಿಸಲಾಗಿತ್ತು ಭದ್ರಾ ಮೇಲ್ದಂಡೆ ಯೋಜನೆಗೆ ಲಭ್ಯವಾಗುವ ನೀರು ಮತ್ತು ಸದರಿ ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳು ಇತ್ಯಾದಿಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವಂತೆ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ದಿನಾಂಕ 24-10-05 ರಂದು ರಚಿಸಲಾಗಿತ್ತು

ಇ) ಬಂದಿದ್ದಲ್ಲಿ ಈ ಯೋಜನೆಯಲ್ಲಿ ಪಾವಗಡ ತಾಲ್ಲೂಕನ್ನು ಸೇರಿಸಲು ಕ್ರಮ ಕೈಗೊಳ್ಳುವುದು ಅವಶ್ಯವಲ್ಲವೇ,

ಪರಿಣಿತರ ಸಮಿತಿಯ ವರದಿಯನ್ನು ತಯಾರಿಸುವಾಗ ಮೂಲ ಯೋಜನೆಯಲ್ಲಿದ್ದ ಚಿತ್ರದುರ್ಗ ಅಚ್ಚುಕಟ್ಟು ಪ್ರದೇಶದಲ್ಲಿ ಹಿಂಗಾರು ನೀರಾವರಿಯನ್ನು ಕಡಿತಗೊಳಿಸಿ ಅದಕ್ಕೆ ಬೇಕಾಗುವ ನೀರಿನ ಪ್ರಮಾಣವನ್ನು ಕುಡಿಯುವ ನೀರಿಗಾಗಿ ಬಳಸಬೇಕೆಂದು ಸಮಿತಿಯು ತೀರ್ಮಾನಿಸಿ ಸುಮಾರು 5 5 ಟಿ ಎಂ ಸಿ ನೀರನ್ನು ನಿಗದಿಗೊಳಿಸಲಾಗಿದೆ ಅದರಲ್ಲಿ ಕೆರೆಯ ಶ್ರೇಣಿಗಳನ್ನು ತುಂಬುವಂತಹ ಪಂಕ್ತೀಕರಣಕ್ಕೆ ಸಮೀಪವಾಗಿ ಬರುವ ಕೆರೆಗಳನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ಬೇಕಾದ ನೀರಿನ ಪ್ರಮಾಣವು 4 76 ಟಿ ಎಂ ಸಿ ಎಂದು ಪರಿಗಣಿಸಿ ಇನ್ನುಳಿದ 0 74 ಟಿ ಎಂ ಸಿ ನೀರನ್ನು ಬಳಸುವ ಬಗ್ಗೆ ಸಮಿತಿಯ ಸಭೆಗಳಲ್ಲಿ ಚರ್ಚಿಸಲಾಗಿದೆ ಚಿಕ್ಕಮಗಳೂರು, ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಸಣ್ಣ

ನೀರಾವರಿ ಕೆರೆಗಳನ್ನು ತುಂಬಲು 7 62 ಟಿಎಂಸಿ ನೀರನ್ನು ಬಳಸುವ ಕುರಿತು ಸಮಿತಿಯು ಪರಿಶೀಲಿಸಿರುತ್ತದೆ ಭದ್ರಾ ಮೇಲ್ದಂಡೆ ಯೋಜನೆಯಡಿ ಚಿತ್ರದುರ್ಗ ಶಾಖಾ ಕಾಲುವೆಯ ತುದಿಯಿಂದ 0 74 ಟಿಎಂಸಿ ಪ್ರಮಾಣದ ನೀರನ್ನು ಕೊಳವೆ ಮೂಲಕ ಹರಿಸುವ ಪಥವನ್ನು ಸಹ ಸಮಿತಿಯು ಪರೀಕ್ಷಿಸಿದೆ ಬರಪೀಡಿತ ಪ್ರದೇಶವಾದ ಪಾವಗಡ ತಾಲ್ಲೂಕಿಗೂ ಈ ಯೋಜನೆಯಡಿ ನೀರನ್ನು ಒದಗಿಸುವುದರ ಬಗ್ಗೆ ತನ್ನ ಸಭೆಗಳಲ್ಲಿ ಸಮಿತಿಯು ಪರಿಶೀಲಿಸಿದೆ ಭದ್ರಾ ಮೇಲ್ದಂಡೆ ಯೋಜನೆಯ ಪ್ರಸ್ತಾಪಿತ ಪಥದಲ್ಲಿ 0 74 ಟಿಎಂಸಿ ನೀರನ್ನು ಹರಿಸುವುದು ಕಾರ್ಯಸಾಧುವಲ್ಲವಾದ್ದರಿಂದ, ಪಾವಗಡ ತಾಲ್ಲೂಕಿಗೆ ನೀರೊದಗಿಸುವ ಪ್ರಸ್ತಾವನೆಯನ್ನು ಸಮಿತಿಯಿಂದ ಕೈಬಿಡಲಾಗಿದೆ

ಈ) ಹಾಗಿದ್ದಲ್ಲಿ ಪಾವಗಡಕ್ಕೆ ತುಂಬಾ ಹತ್ತಿರದಲ್ಲಿ ಹರಿದು ಹೋಗುವ ನೀರನ್ನು ಈ ತಾಲ್ಲೂಕಿಗೂ ಒದಗಿಸಲಾಗುವುದೇ?

ನೂತನ ಕೃಷ್ಣಾ ಜಲವಿವಾದ ನ್ಯಾಯಾಧೀಕರಣದಿಂದ ಸ್ಕೀಂ–ಬಿ ಅಡಿಯಲ್ಲಿ ದೊರೆಯಬಹುದಾದ ನೀರಿನ ಪ್ರಮಾಣವನ್ನು ಆಧರಿಸಿ ಮತ್ತು ಅನ್ಯ ತಿರುವು ಯೋಜನೆಗಳ ಮೂಲಕ ಪಾವಗಡ ತಾಲ್ಲೂಕಿಗೆ ನೀರಾವರಿ ಸೌಲಭ್ಯ ನೀಡುವ ಬಗ್ಗೆ ವಿವಿಧ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ

ಶ್ರೀ ಕೆ ಎಂ ತಿಮ್ಮರಾಯಪ್ಪ – ಮಾನ್ಯ ಅಧ್ಯಕ್ಷರೇ ಉತ್ತರವನ್ನು ಒದಗಿಸಿದ್ದಾರೆ ಪಾವಗಡ ತಾಲ್ಲೂಕನ್ನು ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದಾಗ, ಅದು ಸೇರಿರುವುದಿಲ್ಲ ಎಂದು ಅವರು ಉತ್ತರವನ್ನು ಒದಗಿಸಿದ್ದಾರೆ ಪಾವಗಡ ತಾಲ್ಲೂಕು ಸತತವಾಗಿ ಬರಗಾಲಕ್ಕೆ ಸಿಲುಕಿರುವಂಥ ತಾಲ್ಲೂಕು ಆಗಿದೆ ಅಲ್ಲಿ ಕುಡಿಯುವ ನೀರಿದ್ದರೂ ಸಹ ತೀವ್ರವಾದಂಥ ಸಮಸ್ಯೆಯನ್ನು ಎದುರಿಸಿ ಆ ಪಾವಗಡ ನಗರಕ್ಕೆ ನೂರಾರು ಟ್ಯಾಂಕ್‌ಗಳ ಮೂಲಕ ನೀರನ್ನು ನಾವು ಒದಗಿಸುತ್ತಿದ್ದೇವೆ, ಆದರೆ ಅಲ್ಲಿನ ರೈತರ ಸಮಸ್ಯೆ ಮತ್ತು ಕೂಲಿಕಾರರ ಸಮಸ್ಯೆ ಏನಾಗಿದೆ? ನಮ್ಮ ತಾಲ್ಲೂಕನ್ನು ಶಾಶ್ವತ ಬರಗಾಲದ ಪ್ರದೇಶವೆಂದು ಪ್ರತಿಸಾರಿ ಸಾರುತ್ತಿದ್ದಾರೆ ಇವತ್ತು ಅಲ್ಲಿನ, ಜನ ಹೊರಗೆ ಗುಳೆ ಹೋಗಿ ಜೀವನ ಮಾಡತಕ್ಕಂಥದ್ದು ಏನಿದೆ, ಕ್ಲಿಷ್ಟಕರವಾದಂಥ ಪರಿಸ್ಥಿತಿಯಿರುವಂಥ ಈ ಒಂದು ಸನ್ನಿವೇಶದಲ್ಲಿ ನಮ್ಮ ತಾಲ್ಲೂಕು ಕುಡಿಯುವ ನೀರಿಗೂ ಸಹ ತುಂಬಾ ಕಷ್ಟವನ್ನು ಅನುಭವಿಸುವಂತಾಗಿದೆ ಆ ಭಾಗದ ಜನರೆಲ್ಲರೂ ಭದ್ರಾ ಮೇಲ್ದಂಡೆ ಯೋಜನೆಯಿಂದ ಮುಂದೆ ಪರಿಹಾರ ಸಿಗಬಹುದೆಂದು ಅರ್ಥ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಬಯಲು ಸೀಮೆ ಪ್ರದೇಶವಾದಂಥ ನನ್ನ ತಾಲ್ಲೂಕು, ಆ ತಾಲ್ಲೂಕಿಗೆ ಪಕ್ಕದಲ್ಲೇ ಬರತಕ್ಕಂಥ ಚಿತ್ರದುರ್ಗ ಜಿಲ್ಲೆಗೆ ಚಳ್ಳಕೆರೆ

ತಾಲ್ಲೂಕಿನ ನೀರನ್ನು ತರುವ ವ್ಯವಸ್ಥೆಯಿರುವ ಹಿನ್ನೆಲೆಯಲ್ಲಿ, ನನ್ನ ತಾಲ್ಲೂಕಿನ ಹಳ್ಳಿಗಳು ಅತಿ ಹತ್ತಿರವಾದಂಥ ಹಳ್ಳಿಗಳಾಗಿವೆ ಆ ಭಾಗಕ್ಕೆ ಚಿತ್ರದುರ್ಗ ಶಾಖಾ ಕಾಲುವೆಯ ಮೂಲಕ ನೀರನ್ನು ಕೊಡುವುದರ ಮುಖಾಂತರ ನಮ್ಮ ಭಾಗದ ಜನರ, ರೈತರ, ಕೃಷಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ಈ ಮೂಲಕ ನಾನು ಸಚಿವರಲ್ಲಿ ಮತ್ತೊಂದು ಸಾರಿ ಈ ಸದನದ ಮೂಲಕ ಕೋರುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) – ಮಾನ್ಯ ಅಧ್ಯಕ್ಷರೇ, ಪಾವಗಡ ಕ್ಷೇತ್ರದ ಶಾಸಕರಾದ ಶ್ರೀ ತಿಮ್ಮರಾಯಪ್ಪನವರು ಹೇಳುತ್ತಿರುವುದು ಸತ್ಯವಿದೆ ಪಾವಗಡ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆಯೂ ಕೂಡ ತುಂಬಾ ಜಾಸ್ತಿಯಿದೆ ಆದರೆ, ಈ ಭದ್ರಾ ಮೇಲ್ದಂಡೆ ಯೋಜನೆ ಏನಾಗಿದೆ, ವಿಶೇಷವಾಗಿ ತುಂಗಾ ನದಿಯಿಂದ 15 ಟಿ ಎಂ ಸಿ ಮತ್ತು ಭದ್ರಾ ಯೋಜನೆಯಿಂದ ಸರ್‌ಪ್ಲಸ್ 6 5 ಟಿ ಎಂ ಸಿ ನೀರನ್ನು ಬಳಸಿಕೊಳ್ಳುತ್ತಿದ್ದೇವೆ, ಇದನ್ನು ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯ ಅಚ್ಚುಕಟ್ಟು ಪ್ರದೇಶದಲ್ಲಿಯೂ ಹಿಂಗಾರು ನೀರನ್ನು ಕಡಿತ ಮಾಡಿ ಅಲ್ಲಿ ಕುಡಿಯುವ ನೀರಿಗಾಗಿ ಹಾಗು ನೀರಾವರಿಗಾಗಿ ಒಟ್ಟು 5 5 ಟಿ ಎಂ ಸಿ ನೀರನ್ನು ಬಳಸುತ್ತಿದ್ದೇವೆ ಹೀಗಾಗಿ ಅವರೇನು ಹೇಳುತ್ತಿದ್ದಾರೆ, ಪಾವಗಡ ಭಾಗದಲ್ಲಿ ನಿಜಕ್ಕೂ ತೊಂದರೆಯಿದೆ ಬದ್ರಾ ಮೇಲ್ದಂಡೆ ಯೋಜನೆಯು ಹೋಗುತ್ತಿರುವ ಬಗ್ಗೆ ಕೆ ಸಿ ರೆಡ್ಡಿಯವರ ವರದಿಯ ಪ್ರಕಾರ ಏನು ವ್ಯವಸ್ಥೆಯಿದೆ, ಎಲ್ಲೆಲ್ಲಿ ಈ ಚಾನೆಲ್‌ಗಳು, ಈ ಯೋಜನೆಗಳು ಹೋಗುತ್ತಿವೆ, ಹಾಗೆ ಹೋಗುತ್ತಿರುವಂಥಾ ಎಲ್ಲಾ ಭಾಗದ ಶಾಸಕರು ಕೇಳುತ್ತಿರುವುದು ತಪ್ಪಲ್ಲ ಆದರೆ, ಈ ನೀರನ್ನು ಬೇರೆ ಯೋಜನೆ ಮಾಡಿದ್ದಾರೆ, ವಿಶೇಷವಾಗಿ ಚಿತ್ರದುರ್ಗ ಭಾಗಕ್ಕೆ ನಿಜಲಿಂಗಪ್ಪನವರ ಕಾಲದಿಂದಲೂ, ಅದೊಂದು ಕನಸು ಆ ಭಾಗಕ್ಕೆ, ಚಿತ್ರದುರ್ಗ, ಚಿಕ್ಕಮಗಳೂರು, ಕೋಲಾರ, ತುಮಕೂರು ಈ ನಾಲ್ಕು ಜಿಲ್ಲೆಗಳಿಗೆ 156 ಕೆರೆಗಳ ಮೂಲಕ ಕುಡಿಯುವ ನೀರು, ನೀರಾವರಿಗೆ ಅವರೇನು ಯೋಜನೆ ಮಾಡಿದ್ದಾರೆ, ಆ ಪ್ರಕಾರವೇ ಮಾತ್ರ ಮಾಡಲು ಆಗುತ್ತದೆ ಈಗೇನಾಗುತ್ತದೆ, ಹೇಗೆ ಹೋಗುತ್ತಿದೆ ಪ್ರಾಜೆಕ್ಟ್, ಅದರ ಪ್ರಕಾರ ನಮ್ಮ ತಾಲ್ಲೂಕಿಗೆ ಕೊಡಿ ನಮ್ಮ ತಾಲ್ಲೂಕಿಗೆ ಕೊಡಿ ಎಂದು ಎಲ್ಲರೂ ಕೇಳುವುದು ತಪ್ಪಲ್ಲ ಅದರಲ್ಲಿರುವ ನೀರು ಕಡಿಮೆಯಾಗಿರುವುದರಿಂದ ಉಳಿದ ತಾಲ್ಲೂಕುಗಳಿಗೆ ಈ ಪ್ರಾಜೆಕ್ಟ್ ಮೂಲಕ ನೀರು ಕೊಡುವುದು ತುಂಬಾ ಕಷ್ಟವಾಗುತ್ತದೆ ಅವರೇನು ಪ್ರಸ್ತಾಪ ಮಾಡುತ್ತಿದ್ದಾರೆ, ಅದನ್ನು ಈ ಗ್ರಾಮೀಣಾಭಿವೃದ್ಧಿಯ ಯೋಜನೆ ಅಡಿಯಲ್ಲಿ ಅಥವಾ ನಮ್ಮ ಇಲಾಖೆಯ ಮುಖಾಂತರವಾದರೂ ಕೂಡ ಮಾಡಬೇಕಾಗುತ್ತದೆ ನಮ್ಮ ಇಲಾಖೆಯ ಮುಖಾಂತರ ಮಾಡಲಿಕ್ಕೆ ಸಾಧ್ಯವಾದರೆ ಖಂಡಿತ ನಾನು ಪಾವಗಡಕ್ಕೂ ಹೋಗುತ್ತೇನೆ ಅಲ್ಲಿ ಕುಳಿತು ಈ ಯೋಜನೆಯ ಮೂಲಕವಲ್ಲದಿದ್ದರೂ ಬೇರೆ

ಯಾವುದಾದರೂ ಪ್ಲಾನ್ ಮಾಡಿಕೊಂಡು ಅದರ ಮುಖಾಂತರ ಮಾಡಲಿಕ್ಕೆ ಸಾಧ್ಯವಾದರೆ ಪ್ರಯತ್ನವನ್ನು ನಡೆಸುತ್ತೇನೆ

ಶ್ರೀ ಕೆ ಎಂ ತಿಮ್ಮರಾಯಪ್ಪ – ಅಧ್ಯಕ್ಷರೆ, ಬೇರೆ ಯೋಜನೆ ಮೂಲಕ ಪ್ರಯತ್ನ ಮಾಡುವುದಾಗಿ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ ಪಾವಗಡ ಅಲ್ಲದೇ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಹೇಮಾವತಿಯಿಂದ ಮತ್ತು ಕೆಲವು ಭದ್ರಾ ಮೇಲ್ದಂಡೆಯಿಂದ ನೀರನ್ನು ಕೊಡುವಂಥ ಯೋಜನೆಯನ್ನು ಅಳವಡಿಸಿದ್ದಾರೆ ವಿಶೇಷವಾಗಿ ಪಾವಗಡ ತಾಲ್ಲೂಕನ್ನು ಕೈಬಿಡುವಂಥದ್ದು ತುಂಬಾ ಅನ್ಯಾಯವೆಂದು ಭಾವಿಸಿ ಆ ಭಾಗದ ಜನರ ಸಮಸ್ಯೆಗೆ ತಕ್ಕನಾಗಿ ಸರ್ಕಾರ ಕೂಡಲೇ ಸ್ಪಂದಿಸಿ ತಾವು ಯಾವುದೇ ನೀರನ್ನಾದರೂ ಆಗಲಿ, ತಾವು ಭದ್ರಾ ನೀರನ್ನಾದರೂ ಕೊಡಿ, ಹೇಮಾವತಿ ನದಿ ನೀರನ್ನಾದರೂ ಕೊಡಿ, ಇಲ್ಲವಾದರೆ ತುಂಗಭದ್ರಾ ಅಣೆಕಟ್ಟಿನ ನೀರನ್ನಾದರೂ ಕೊಡಿ ನಮಗೆಲ್ಲಿಂದಾರೂ ಸಹ ನನ್ನ ತಾಲ್ಲೂಕಿಗೆ ನೀರನ್ನು ಕೊಡುವ ಕೆಲಸವನ್ನು ತಾವು ಮಾಡಲೇಬೇಕೆಂದು ನಾನು ಈ ಸದನದ ಮೂಲಕ ನನ್ನ ಕ್ಷೇತ್ರದ ಜನತೆಯ ಪರವಾಗಿ ಮತ್ತೊಂದು ಸಾರಿ ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) – ಅವರ ಕಳಕಳಿ ಖಂಡಿತವಾಗಿ ಸರ್ಕಾರಕ್ಕೆ ಅರ್ಥವಾಗುತ್ತಿದೆ ಕೇವಲ ಪಾವಗಡ ತಾಲ್ಲೂಕು ಮಾತ್ರ ಈ ಒಂದು ಭಾಗದಲ್ಲಿ ಬಿಟ್ಟಿದ್ದೇವೆಂದಲ್ಲ ಹೊಳಲ್ಕೆರೆ, ಚಿತ್ರದುರ್ಗ, ತರೀಕೆರೆ, ಚಿಕ್ಕನಾಯಕನಹಳ್ಳಿ ಅನೇಕ ತಾಲ್ಲೂಕುಗಳು ಈ ಯೋಜನೆಯ ಅಡಿಯಲ್ಲಿ ಬಿಟ್ಟು ಹೋಗಿವೆ, ಅವರೇನು ಹೇಳುತ್ತಿದ್ದಾರೆಂದರೆ ಒಂದಲ್ಲ ಒಂದು ಯೋಜನೆಯ ಮುಖಾಂತರ ಆ ಒಂದು ತಾಲ್ಲೂಕಿಗೂ ನೀರನ್ನು ಕೊಡುವ ಕರ್ತವ್ಯ ರಾಜ್ಯ ಸರ್ಕಾರದ್ದಾಗಿದೆ ಆ ದಿಕ್ಕಿನಲ್ಲಿ ಖಂಡಿತವಾಗಿಯೂ ನಾನು ನನ್ನ ಪ್ರಯತ್ನವನ್ನು ಮಾಡುತ್ತೇನೆಂಬ ಅಂಶವನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಚಿತ್ರದುರ್ಗದಿಂದ ಕೋಲಾರಕ್ಕೆ ಬೈಪಾಸ್ ಮಾಡಲಿಕ್ಕೆ ನೇಮಿಸಿತ್ತೇ, ಬೇರೆ ಏನಾದರೂ ಕಾರಣಕ್ಕೆ ನೇಮಿಸಿತ್ತೇ, ಕೆ ಸಿ ರೆಡ್ಡಿಯವರು ಯಾವತ್ತಾದರೂ ಇರಿಗೇಷನ್ ಇಲಾಖೆಯಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕೆಲಸ ಮಾಡಿದ್ದರೇ ಎಂದು ಈ ಸಭೆಯ ಮುಂದೆ ಸನ್ಮಾನ್ಯ ಸಚಿವರು ಉತ್ತರಿಸಬೇಕು ಕ ಸಿ ರೆಡ್ಡಿಯವರ ಬಗ್ಗೆ ಗೌರವವಿದೆ, ಲೋಕೋಪಯೋಗಿ ಇಲಾಖೆಯಲ್ಲಿ ಒಪ್ಪಿಕೊಂಡಿದ್ದೇವೆ ಇರಿಗೇಷನ್ ಇಲಾಖೆಯಲ್ಲಿ ಅವರು ಯಾವತ್ತು expert ಆದರೂ, ಸರ್ವೇ ಮಾಡಲಿಕ್ಕೆಂದು ಹೇಳಿದ್ದನ್ನು ತಿರುಚಲಿಕ್ಕೆ ಅವರಿಗೆ ಯಾರು

ಅಧಿಕಾರ ಕೊಟ್ಟರು ಯಾವ ಉದ್ದೇಶಕ್ಕೆ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ಸಮಿತಿ ನೇಮಕವಾಗಿತ್ತು? ದಯವಿಟ್ಟು ಹೇಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಕೆ ಸಿ ರೆಡ್ಡಿಯವರ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಿದಿರಿ ಕೋಲಾರ ಜಿಲ್ಲೆಯವರಿಗೆ ಎಂಥಾ ಇರುಸು ಮುರುಸು ಮಾಡಿದಿರಿ ಎಂದರೆ, ಹೆಡ್‌ಲೈನ್‌ನಲ್ಲಿ ಕೋಲಾರ ಜಿಲ್ಲೆಗೆ ನೀರು ಬರುತ್ತದೆಂದು ಹೇಳಿದರು ಆದರೆ ವರದಿಯಲ್ಲಿ ಕರೆಕ್ಟ್ ಆಗಿ ಏನಿದೆಯೆಂದರೆ, ಕೋಲಾರ ತಾಲ್ಲೂಕಿನ 19 ಕೆರೆಗಳಿಗೆ ಮಾತ್ರ ನೀರು ಹಾಯಿಸಬಹುದು ಆ 19 ಕೆರೆಗಳಿಗೆ ಪೈಪ್‌ಲೈನ್‌ಗಳು ಎಲ್ಲಿಂದ ಬರುತ್ತದೆ ಅಂದರೆ ಕೊರಟಗೆರೆಯಿಂದ, ಗೌರಿಬಿದನೂರು ಚಿಕ್ಕಬಳ್ಳಾಪುರ, ಶಿಡ್ಲಘಟ್ಟದ ಮೇಲೆ ಹಾದು ನೇರವಾಗಿ ಕೋಲಾರ ತಾಲ್ಲೂಕಿನ ಕಾಲನೂರು ಹತ್ತಿರಕ್ಕೆ 19 ಕೆರೆಗಳಿಗೆ ಬರುತ್ತದೆ ಕೆ ಸಿ ರೆಡ್ಡಿಯವರ ಬಗ್ಗೆ ನಾನೇನು ಕಾಮೆಂಟ್ ಮಾಡುತ್ತಿಲ್ಲ ಸ್ವಲ್ಪ ಸಾಮಾನ್ಯ ಪ್ರಜ್ಞೆ ಇರುವವರು ನಾವು, ಹಸಿಧಿರುವವರು ನಾವು, ಬಾಯಾರಿಕೆಯಾಗಿರುವವರು, ಪೈಪ್‌ಲೈನ್‌ನಲ್ಲಿ ನೀರು ಹೋಗುತ್ತಿದ್ದರೆ ಮೂರು ತಾಲ್ಲೂಕಿನವರು, ಕೋಲಾರದವರೆಗೆ ನೀರು ಬರುವವರೆಗೆ ಸುಮ್ಮನೆ ಕುಳಿತಿರುತ್ತಾರೆಯೇ ಏತಕ್ಕೆ ಮೂರು ತಾಲ್ಲೂಕುಗಳಿಗೆ ಬೈಪಾಸ್ ಮಾಡಬೇಕು ಎನ್ನುವ ಬಗ್ಗೆ ಈಗಾಗಲೇ ಮಾಧುಸ್ವಾಮಿಯವರು ಪ್ರಶ್ನಿಸಿದ್ದಾರೆ, ಮೂರು ತಾಲ್ಲೂಕುಗಳಿಗೆ ಬೈಪಾಸ್ ಮಾಡಿ ಕೋಲಾರ ತಾಲ್ಲೂಕಿಗೆ ಬರುವಾಗ, ಬಾಯಾರಿಕೆಯಾಗಿರುವಂಥ ಜನ ಆ ಪೈಪ್‌ಲೈನ್ ಅನ್ನು ಇಟ್ಟಿರುತ್ತಾರೆಯೇ? ಆಗ ಏನಾಗುತ್ತದೆ? ಒಂದು ತಾಲ್ಲೂಕಿನ ಮೇಲೆ ಇನ್ನೊಂದು ತಾಲ್ಲೂಕನ್ನು ಎತ್ತಿಕಟ್ಟಿ ಜನರ ಮಧ್ಯೆ ಯುದ್ಧ ಮಾಡಿಸುವ ಉದ್ದೇಶವೇ? ಎರಡನೆಯ ಪಾಯಿಂಟ್ ಕೆ ಸಿ ರೆಡ್ಡಿಯವರ ವರದಿಯಿಂದ ಕೋಲಾರ ಜಿಲ್ಲೆಗೆ ನೀರು ಬರುತ್ತದೆಂದು ಹೇಳಿ, ಬೇರೆ ಯಾರಾದರೂ ಕೋಲಾರ ಜಲ್ಲೆಗೆ ನೀರು ಕೊಡಲಿಕ್ಕೆ ಇಂಥಾ ಯೋಜನೆಯಿದೆ ಎಂದು ಹೇಳಿದರೆ, ಅದನ್ನು ಕಸದ ಬುಟ್ಟಿಗೆ ಹಾಕಿಬಿಟ್ಟು, ಇದನ್ನು ಮುಂದೆ ತಂದಿಟ್ಟು, ನಮ್ಮನ್ನು ಸಂಪೂರ್ಣವಾಗಿ ಮುಳುಗಿಸುತ್ತಿದ್ದಾರೆ ನಾನು ಈ ವಿಚಾರವನ್ನು ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತಂದಿದ್ದೇನೆ, ದಯವಿಟ್ಟು ಅದರ ಬಗ್ಗೆ ಸ್ಪಷ್ಟತೆಯನ್ನು ಕೊಡಬೇಕು

ಶ್ರೀ ಎಸ್ ರಾಜೇಂದ್ರನ್ – ಅಧ್ಯಕ್ಷರೆ, ಕೋಲಾರ ಜಿಲ್ಲೆಯೆಂದರೆ ಬಂಗಾರಪೇಟೆ ತಾಲ್ಲೂಕು ಅದರಲ್ಲಿ ಕೆ ಜಿ ಎಫ್ ತಾಲ್ಲೂಕು ಕೂಡ ಇದೆ, ಇದೆಲ್ಲಾ ಸೇರಿ ಕೋಲಾರ ಜಿಲ್ಲೆಯಾಗಿದೆ ನೀವು ಕೋಲಾರ ಜಿಲ್ಲೆಯೆಂದು ಹೇಳಿ ಅವರಿಗೆ ಮಾತ್ರ ನೀರು ಕೊಟ್ಟರೆ ನಾವೆಲ್ಲಿ ಹೋಗುವುದು? ಸ್ವಲ್ಪ ಚಿಂತನೆ ಮಾಡಿ, ಪಕ್ಕದಲ್ಲಿ ಮಾಲೂರು ಇದೆ, ಬೇತಮಂಗಲ, ಕೆ ಜಿ ಎಫ್ ಇದೆ ಸ್ವಲ್ಪ ಕುಡಿಯಲಿಕ್ಕೆ ನೀರು ಒದಗಿಸಬೇಕು

ಶ್ರೀ ಕೆ ಎಸ್ ಈಶ್ವರಪ್ಪ – ಮಾನ್ಯ ಮಾಧುಸ್ವಾಮಿ, ಮಾನ್ಯ ಶ್ರೀರಾಮರೆಡ್ಡಿ, ನಮ್ಮ ಮಾನ್ಯ ಸ್ನೇಹಿತರಾದ ರಾಜೇಂದ್ರನ್‌ರವರು, ಅವರೆಲ್ಲಾ ಪ್ರಸ್ತಾಪ ಮಾಡುತ್ತಿರುವುದು ಸರಿಯಿದೆ ಆದರೆ ಇಲ್ಲೇನಾಗಿದೆ, ನಮ್ಮ ಮಾನ್ಯರಾದ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿ, ರಾಜೇಂದ್ರನ್‌ರವರಾಗಲಿ, ಕೆ ಸಿ ರೆಡ್ಡಿಯವರ ಬಗ್ಗೆ ಪ್ರಸ್ತಾಪ ಮಾಡಿದಂತೆ, ಅವರು ನೀರಾವರಿ ತಜ್ಞರಲ್ಲ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡಿದ್ದರು ಯಾರು ಅವರನ್ನು ನೇಮಕ ಮಾಡಿದರು, ಏತಕ್ಕೆ ಮಾಡಿದರು, ಇದರ ಬಗ್ಗೆ ಚರ್ಚೆಯನ್ನು ಮಾಡುತ್ತಾ ಕುಳಿತರೆ ಖಂಡಿತ ಲಾಭವಾಗುತ್ತದೆಂದು ನನಗೇನೂ ಅನ್ನಿಸುವುದಿಲ್ಲ ನೀರು ಕೊಡಬೇಕು, ಅದು ನನ್ನ ಡ್ಯೂಟಿ ಇದೆ, ಕೆ ಸಿ ರೆಡ್ಡಿಯವರ ಸಮಿತಿಯನ್ನು ಹಿಂದಿನ ಸರ್ಕಾರದವರು ಮಾಡಿದ್ದಾರೆ ಅವರು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯನ್ನು ಇಂಪ್ಲಿಮೆಂಟ್ ಮಾಡಬೇಕೆಂದು ರಾಜ್ಯ ಸರ್ಕಾರ ತೀರ್ಮಾನಿಸಿದೆ ಈಗಾಗಲೇ ಭದ್ರಾ modernızatıon ಕೆಲಸವನ್ನು ಬಹಳ ವೇಗವಾಗಿ ಮುಗಿಸಿದ್ದೇವೆ ಅದರಂತೆ ಪುನಃ 389 00 ಕೋಟಿ ರೂಪಾಯಿಗಳಿಗೆ ಮತ್ತೆ ಟೆಂಡರ್ ಕರೆದಿದ್ದೇವೆ ಇದಲ್ಲದೆ, ಭದ್ರಾ ಮೇಲ್ದಂಡೆ ಯೋಜನೆಗು ಕೂಡ 825 00 ಕೋಟಿ ರೂ ಗಳ ಟೆಂಡರ್ ಕರೆದಿದ್ದೇವೆ ಈ ಯೋಜನೆ ನಡೆಯುತ್ತಿದೆ ನಾನು ಮೊನ್ನೆ ಕೋಲಾರಕ್ಕೂ ಹೋಗಿದ್ದೆನು ಮಾನ್ಯ ಶ್ರೀರಾಮರೆಡ್ಡಿಯವರು ಇದ್ದರು ಆ ಸಂದರ್ಭದಲ್ಲಿ ನೀರು ಕೊಡಲಿಕ್ಕೆ ಏನು ಮಾಡಬೇಕೆಂದು ಅವರ ಜೊತೆಗೆ ಕುಳಿತು ಚರ್ಚೆಯನ್ನು ಕೂಡ ನಾವು ಈಗಾಗಲೇ ಮಾಡಿದ್ದೇವೆ ಈಗಾಗಲೇ ಜಲಾನಯನ ಮೂಲಕ 11 ತಾಲ್ಲೂಕುಗಳ ಪೈಕಿ 7 ತಾಲ್ಲೂಕುಗಳಲ್ಲಿ ನೀರನ್ನು ಪಡೆಯಲಿಕ್ಕೆ, ಅಭಿವೃದ್ಧಿ ಮಾಡಲಿಕ್ಕೆ, ಏನು ಮಾಡಬೇಕೋ ಅದರ ಪ್ರಯತ್ನವನ್ನು ನಡೆಸುತ್ತಿದ್ದಾರೆ ಉಳಿದ ನಾಲ್ಕು ತಾಲ್ಲೂಕುಗಳನ್ನು ನಮ್ಮ ಇಲಾಖೆಯ ಮೂಲಕ ತೆಗೆದುಕೊಂಡು 40 ಕೆರೆಗಳನ್ನು ನಾವು ಮಾಡಬೇಕೆಂದು ಅಂದುಕೊಂಡಿದ್ದೇವೆ ಈ 19 ಕೆರೆಗಳೇನು ಈಗ ಈ ಯೋಜನೆ ಮೂಲಕ ಬಂದಿದೆ, ಅದನ್ನು ಕೂಡ ಅಭಿವೃದ್ಧಿ ಪಡಿಸುತ್ತೇವ ಒಟ್ಟಾರೆ ಚಿಕ್ಕನಾಯಕನಹಳ್ಳಿ ಇರಬಹುದು, ಕೋಲಾರ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಿರಬಹುದು ಈ ಎಲ್ಲಾ ಭಾಗಗಳಲ್ಲಿಯೂ ನೀರು ಕೊಡುವುದು ನನ್ನ ಕರ್ತವ್ಯವೆಂದು ನನಗೆ ಅನ್ನಿಸುತ್ತದೆ ಅದು ಈ ರಾಜ್ಯ ಸರ್ಕಾರದ ಕರ್ತವ್ಯವಾಗಿದೆ ಆ ದಿಕ್ಕಿನಲ್ಲಿ ಏನೇನು ಯೋಜನೆಗಳನ್ನು ಮಾಡಬೇಕೋ ಅದನ್ನು ಖಂಡಿತ ಮಾಡಿ, ಅಲ್ಲಿಯೂ ನೀರು ಕೊಡುವ ಪ್ರಯತ್ನವನ್ನು ಮಾಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ರಾಜ್ಯದಲ್ಲಿ ದೊಡ್ಡದಾಗಿ ಹಣ ಇಟ್ಟು ಸರ್ವೇ ಮಾಡಿ ಆ ಒಂದು ವರದಿಯನ್ನು ಏಕಾಏಕಿ ಭದ್ರಾ ಮೇಲ್ದಂಡೆ ನೀರನ್ನು ಡೈವರ್ಟ್

ಮಾಡಲಿಕ್ಕೆ, ಚರ್ಚೆ ಮಾಡಲಿಲ್ಲ ಅದಕ್ಕೊಂದು ಸಮಿತಿ ನೇಮಕ ಮಾಡಿ, ಅದಕ್ಕೊಂದು ವರದಿ ಕೊಟ್ಟು, ಅಲ್ಲೆಲ್ಲಾ ಇಂಜಿನಿಯರ್ಸ್ ಇದ್ದು, ಎಲ್ಲಾ ವ್ಯವಸ್ಥೆ ಮಾಡಿ ಒಂದು ನಿರ್ದಿಷ್ಟವಾದ ರೂಪುರೇಷೆಯನ್ನು ನಿಗದಿ ಮಾಡಿದ ಮೇಲೆ ಕೆ ಸಿ ರೆಡ್ಡಿಯವರನ್ನು ದಿಢೀರ್ ಎಂದು ಕೂರಿಸಿ, ಕುಳಿತಲ್ಲೇ ಈ ಫ್ಯಾನ್‌ಗಳ ಕೆಳಗೆ, ಏರ್ ಕಂಡಿಷನ್‌ನಲ್ಲಿ ಕುಳಿತುಕೊಂಡು, "ಬಿಟ್ಟು ನೋಡಿ, ನೀರು ಇಲ್ಲಿ ಹೋಗುವುದಿಲ್ಲ, ಇಲ್ಲಿಗೆ ಹೋಗುವುದಿಲ್ಲ, ಈ ಕಡೆಯಿಂದ ಪೈಪ್‌ಗಳ ಮೂಲಕ ನೀರನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತೇನೆ", ಎಂದರೆ ಏನು ಈ ರಾಜ್ಯದ ಹಿತಾಸಕ್ತಿಯಲ್ಲಿ ಕೆಲಸ ನಡೆಯುತ್ತಿದೆಯೇ? ಅಥವಾ ಯಾರಾದರೂ ವ್ಯಕ್ತಿಗಳ ಹಿತಾಸಕ್ತಿಯಲ್ಲಿ ಕೆಲಸ ನಡೆಯುತ್ತಿದೆಯೇ ಎಂಬುದು ನಮಗೆ ಅರ್ಥವಾಗಬೇಕಲ್ಲವೇ? ಈ ರಾಜ್ಯದಲ್ಲಿ ನಾವು ಯಾವ ಪಾಪ ಮಾಡಿ ಹುಟ್ಟಿದ್ದೇವೆ ನಮಗೂ ಕೊಟ್ಟುಬಿಡಿ, 200 ಕಿ ಮೀ ವರೆಗೆ ಪೈಪ್‌ಗಳಲ್ಲಿ ಹೇಗೆ ನೀರನ್ನು ತೆಗೆದುಕೊಂಡು ಹೋಗುತ್ತಾರೆ? ಚಿತ್ರದುರ್ಗಾ ಜಿಲ್ಲೆಯಿಂದ ಕೋಲಾರ ಜಿಲ್ಲೆಗೆ 200 ಕಿ ಮೀ ದೂರ 5 ಟಿ ಎಂ ಸಿ ನೀರು ತೆಗೆದುಕೊಂಡು ಹೋಗುತ್ತೇವೆ ಎಂದು ವರದಿ ಕೊಟ್ಟು 400–500 ಕೋಟಿ ರಾಜ್ಯದ ಹಣವನ್ನು ಹಾಳು ಮಾಡಲಿಕ್ಕೆ ಹೊರಟಿದ್ದೀರಲ್ಲಾ, ನಾಳೆ ಇದನ್ನು ಜಸ್ಟಿಫೈ ಮಾಡುವವರು ಯಾರು ಎಂದು ಉತ್ತರ ಹೇಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅದರ ಜೊತೆಗೆ ಹಿಂದಿನ ಸರ್ಕಾರ ಒಂದೇ ನಿಮಿಷ, ಇದಕ್ಕೆ ಸಂಬಂಧಪಟ್ಟಿದ್ದೇ ವರದಿಯ ಬಗ್ಗೆ

ಅಧ್ಯಕ್ಷರು – ಆಯಿತು, I can't allow ಈಗ ನೋಡಿ ಬೆಳಿಗ್ಗೆ ಒಂದು ಗಂಟೆ ಕಾಲವಾಗಿದೆ ಈಗ ಮತ್ತೆ ಅರ್ಧಗಂಟೆಯಾಗಬೇಕೇನು? No, ಸ್ವಾಮಿ ಉತ್ತರ ಹೇಳಿ ನಾನು allow ಮಾಡಲಿಕ್ಕಾಗುವುದಿಲ್ಲ ದಯಮಾಡಿ ಕುಳಿತುಕೊಳ್ಳಿ ನೋಡಿ, ನೀವು ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ opinion ಹೇಳಿದ್ದೀರಿ ದಯಮಾಡಿ ಕುಳಿತುಕೊಳ್ಳಿ ಏಕೆಂದರೆ ಒಂದೊಂದು ಪ್ರಶ್ನೆಗೆ ಅರ್ಧ ಗಂಟೆ ತೆಗೆದುಕೊಳ್ಳುತ್ತಾರೆ, ದಯಮಾಡಿ ತಾವು ಉತ್ತರ ಹೇಳಿ ಸ್ವಾಮಿ

ಶ್ರೀ ಕೆ ಎಸ್ ಈಶ್ವರಪ್ಪ – ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿರುವ ಪ್ರಕಾರ ಕೆ ಸಿ ರೆಡ್ಡಿಯವರ ವರದಿಯ ಬಗ್ಗೆ ಖಂಡಿತವಾಗಿ ಅಷ್ಟು ಹಗುರವಾಗಿ ಮಾತನಾಡಬಾರದು ಎಂದು ನನ್ನ ಪರ್ಸನಲ್ ಅಭಿಪ್ರಾಯ No, no ನಾನು ಏಕೆ ಹೇಳುತ್ತಿದ್ದೇನೆಂದರೆ, ಅನೇಕ ವರ್ಷಗಳಿಂದ ಇದ್ದಂಥ ಅಭಿಪ್ರಾಯ, ಚಿತ್ರದುರ್ಗ, ಕೋಲಾರ, ತುಮಕೂರು ಇವೆಲ್ಲದರ ಬಗ್ಗೆ ನಿಮಗೆ ಗೊತ್ತಿದೆ 2022 ನೇ ಇಸವಿಗೆ ಮರಳುಗಾಡು ಆಗುತ್ತದೆ ಈಗೇನು 21 ಟಿ ಎಂ ಸಿ ನೀರನ್ನು ತಂದಿದ್ದಾರೆ ಈ ನೀರಿನಿಂದ ಸುಮಾರು 2 00 ಲಕ್ಷ ಎಕರೆಯಷ್ಟು ಚಿತ್ರದುರ್ಗಕ್ಕೆ

ನೀರಾವರಿಯಾಗುತ್ತದೆ ಆ ನಾಲ್ಕು ಜಿಲ್ಲೆಗಳಲ್ಲಿ ಎಷ್ಟು ಸಾಧ್ಯವೋ, ಸುಮಾರು 156 ಕೆರೆಗಳಲ್ಲಿ ನೀರು ತುಂಬಿಸಲಿಕ್ಕೆ ಸುಮಾರು 800 ಕೋಟಿ ರೂಗಳ ಆರ್ಥಿಕ ಹಣವಿಟ್ಟು ಅದನ್ನು ತುಂಬಿಸುವಂಥ ಪ್ರಯತ್ನ ಮಾಡಿದ್ದಾರೆ ಭದ್ರಾ ಮೇಲ್ದಂಡೆ ಯೋಜನೆಯಿಂದ ಇಡೀ ಕರ್ನಾಟಕ ರಾಜ್ಯಕ್ಕೆ ಆ ನೀರು ಸಪ್ಲೈ ಮಾಡುತ್ತೇವೆನ್ನುವುದು ಅಲ್ಲ ಇರುವಷ್ಟು ನೀರನ್ನು ಹಂಚಲಾಗುತ್ತಿದೆ ನಾನು ಅದಕ್ಕೋಸ್ಕರ ಹೇಳಿದೆ ಈ ಯೋಜನೆಯಿಂದ ಪೂರ್ಣವಾಗಿ ಇಡೀ ಕರ್ನಾಟಕ ರಾಜ್ಯಕ್ಕೆ ನೀರು ಕೊಡಲು ಒಪ್ಪಲಿಕ್ಕೆ ನಾನಂತೂ ತಯಾರಿಲ್ಲ ಇನ್ನೂ ಎಲ್ಲೆಲ್ಲಿಗೋ ಬೇಕೋ, ಈ ಭದ್ರಾ ಮೇಲ್ದಂಡೆ ಯೋಜನೆ ಮೂಲಕ, ಅವರೇನು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡಿ ಉಳಿದ ತಾಲ್ಲೂಕುಗಳ ಬಗ್ಗೆ ಕೂಡ ನಾನು ಮತ್ತೆ ಹೇಳುತ್ತೇನೆ, ನಮ್ಮ ಕರ್ತವ್ಯವಿದೆ, ಖಂಡಿತ, ನಾನು ಈಗಾಗಲೇ ಪರ್ಸನಲ್ ಆಗಿಯೂ ಮಾತನಾಡಿದ್ದೇನೆ ನಿಮ್ಮ ತಾಲ್ಲೂಕುಗಳಿಗೆ ನೀರು ಕೊಡುವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದೇವೆ ಚಿಕ್ಕನಾಯಕನಹಳ್ಳಿ ಇರಬಹುದು, ಶ್ರೀರಾಮರೆಡ್ಡಿಯವರ ಕ್ಷೇತ್ರ ಇರಬಹುದು, ಅವರ ಹತ್ತಿರವೂ ಕೂಡ ಮಾತನಾಡಿದ್ದೇನೆ ಬಾಗೇಪಲ್ಲಿ ಬಗ್ಗೆ ಕೂಡ ಮಾತನಾಡಿದ್ದೇನೆ ಅಲ್ಲಿಯೂ ಕೂಡ ನೀರು ಕೊಡುವ ಕರ್ತವ್ಯವಿದೆ ಆ ದಿಕ್ಕಿನಲ್ಲಿ ಯೋಜನೆ ಮಾಡಿ ಸರ್ಕಾರದಿಂದ ಏನು ಮಾಡಬೇಕೋ ಅದನ್ನು ಮಾಡಿಕೊಡುತ್ತೇನೆ

ಕೃಷ್ಣಾ ನ್ಯಾಯಾಧೀಕರಣಕ್ಕಾಗಿ ಮಾಡಿರುವ ವೆಚ್ಚ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**215(1573)**
ಸದಸ್ಯರ ಹೆಸರು	ಶ್ರೀ ಸಿದ್ದು ಸಾವದಿ(ಜಮಖಂಡಿ)
ಉತ್ತರಿಸುವ ಸಚಿವರು	ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ರಚಿಸಲ್ಪಟ್ಟ ನ್ಯಾಯಾಧೀಕರಣ ಯಾವಾಗ ರಚನೆಯಾಯಿತು ಹಾಗೂ ಅದರ ಅವಧಿ ಎಷ್ಟು,

ಕೃಷ್ಣಾ ಜಲ ವಿವಾದ ನ್ಯಾಯಾಧೀ ಕರಣವು ದಿನಾಂಕ 2 4 2004ರಂದು ರಚನೆಯಾಗಿದೆ ಇದರ ಕಾರ್ಯಾವಧಿಯು ಮೂರು ವರ್ಷಗಳು ಹಾಗೂ ಅಗತ್ಯವಿದ್ದಲ್ಲಿ ಅವಧಿಯನ್ನು ಇನ್ನು ಎರಡು ವರ್ಷಗಳು ವಿಸ್ತರಿಸಬಹುದು

ಆ) ರಾಜ್ಯದಿಂದ ಯಾವ ಯಾವ ನ್ಯಾಯವಾದಿಗಳನ್ನು ಟ್ರಿಬ್ಯೂನಲ್‌ನಲ್ಲಿ ವಾದಿಸಲು ನೇಮಿಸಲಾಗಿದೆ (ವಿವರ ನೀಡುವುದು),

ರಾಜ್ಯದ ಅಡ್ವೋಕೇಟ್ ಜನರಲ್‌ರವರೊಂದಿಗೆ ಕೆಳಕಂಡ ಹಿರಿಯ ವಕೀಲರು ವಕೀಲರುಗಳನ್ನು ಕಾನೂನು ಇಲಾಖೆ ನೇಮಿಸಿರುತ್ತದೆ

1) ಶ್ರೀ ಎಫ್ ಎಸ್ ನಾರಿಮನ್, ಹಿರಿಯ ವಕೀಲರು
2) ಶ್ರೀ ಎಸ್ ಎಸ್ ಜವಳಿ, ಹಿರಿಯ ವಕೀಲರು
3) ಶ್ರೀ ಬಸವಪ್ರಭು ಎಸ್ ಪಾಟೀಲ್, ಅಡ್ವೋಕೇಟ್ ಆನ್ ರೆಕಾರ್ಡ್
4) ಶ್ರೀ ಮೋಹನ್ ವಿ ಕಾತರ್ಕಿ, ವಕೀಲರು
5) ಶ್ರೀ ಬ್ರಿಜೇಶ್ ಕಾಳಪ್ಪ, ವಕೀಲರು
6) ಶ್ರೀ ಎಸ್ ಸಿ ಶರ್ಮಾ, ವಕೀಲರು
7) ಶ್ರೀ ಆರ್ ಎಸ್ ಪಪ್ಪು, ವಕೀಲರು (ದಿ 27 6 2006ರವರೆಗೆ)
8) ಶ್ರೀ ಆರ್ ಎಸ್ ರವಿ ವಕೀಲರು(ದಿ 27 6 2006 ರಿಂದ)

ಇ) ತೀರ್ಪು ಯಾವಾಗ ಬರಬಹುದು, ಇದುವರೆವಿಗೂ ಎಷ್ಟು ಉಪವೇಶನಗಳು ನಡೆದಿವೆ ಹಾಗೂ ಇನ್ನು ಎಷ್ಟು ಉಪವೇಶನಗಳು ನಡೆಯುವ ಸಾಧ್ಯತೆ ಇದೆ,

ನ್ಯಾಯಾಧೀಕರಣದ ನಿಗದಿತ ಕಾರ್ಯನಿರ್ವಹಣಾ ಅವಧಿಯಲ್ಲಿ ತೀರ್ಪು ನಿರೀಕ್ಷಿಸಲಾಗಿದೆ ಇದುವರೆಗೂ 25 ಉಪವೇಶನಗಳು ನಡೆದಿವೆ ಅಂತಿಮ ತೀರ್ಪು ಬರುವವರೆಗೂ ಅಗತ್ಯವಿರುವಷ್ಟು ಉಪವೇಶನಗಳು ನಡೆಯುವ ಸಾಧ್ಯತೆ ಇದೆ

ಈ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು,

ರೂ 4,97,11,000/- (ರೂಪಾಯಿಗಳು ನಾಲ್ಕು ಕೋಟಿ ತೊಂಬತ್ತೇಳು ಲಕ್ಷದ ಹನ್ನೊಂದು ಸಾವಿರಗಳು ಮಾತ್ರ)

ಉ) ತೀರ್ಪು ನೀಡಲು ಇರುವ ಮಾರ್ಗದರ್ಶಿ ಸೂತ್ರಗಳಾವುವು,

ಮಾರ್ಗದರ್ಶಿ ಸೂತ್ರಗಳು ಇರುವುದಿಲ್ಲ

ಊ) ಕರ್ನಾಟಕಕ್ಕೆ ತೀರ್ಪಿನಿಂದ ನ್ಯಾಯ ಸಿಗುವಂತೆ ಮಾಡಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ನ್ಯಾಯಾಧಿಕರಣದ ಮುಂದೆ ರಾಜ್ಯದ ಪರವಾಗಿ ಪ್ರತಿನಿಧಿಸಲು ಹಾಗೂ ವಾದ ಮಂಡಿಸಲು ಹಿರಿಯ ನ್ಯಾಯಾವಾದಿಗಳನ್ನು ಮತ್ತು ಅವರಿಗೆ ತಾಂತ್ರಿಕ ನೆರವು ಮಾಹಿತಿ ನೀಡಲು ತಾಂತ್ರಿಕ ಪರಿಣಿತರು ಹಾಗೂ ಸಲಹೆಗಾರರುಗಳನ್ನು ಸರ್ಕಾರವು ನೇಮಿಸಿದೆ

ಶ್ರೀ ಸಿದ್ದು ಸವದಿ ಅಧ್ಯಕ್ಷರೆ, Tribunal ರಚನೆಯಾಗಿ ಈಗಾಗಲೇ 3 ವರ್ಷವಾಯಿತು ಯಾವಾಗ ಕೃಷ್ಣ ಐತೀರ್ಪು ಬರುತ್ತದೋ ಗೊತ್ತಿಲ್ಲ, ಮತ್ತು ಯಾವುದೇ ನಿಯಮಗಳೂ ಅದಕ್ಕಿಲ್ಲ ಅಂತಲೂ ಹೇಳಿದ್ದಾರೆ ನಿಯಮಗಳಿಲ್ಲದೇ ಒಂದು ವೇಳೆ ಐತೀರ್ಪು ಬಂದರೆ ಕಾವೇರಿಯಲ್ಲಿ ಯಾವ ರೀತಿ ಅನ್ಯಾಯವಾಯಿತೋ ಅದೇ ರೀತಿ ಕೃಷ್ಣೆಗೂ ಕಾದಿದೆಯೇನೋ ಏಕೆಂದರೆ ಎಷ್ಟು ಪ್ರದೇಶದಲ್ಲಿ ನದಿ ಹರಿವು ಇದೆ, ಎಷ್ಟು ನೀರು ಆಯಾ ರಾಜ್ಯಕ್ಕೆ ಕೊಡಬೇಕು ಎಂದು ಯಾವ ರೀತಿ ತಮಿಳುನಾಡಿನವರು ವಾದಿಸಿ ನಮ್ಮಲ್ಲಿ ಹುಟ್ಟಿದ ಕಾವೇರಿ ನೀರನ್ನು ಪಡೆದರೋ ಅಂತಹುದೇ ನ್ಯಾಯ ನಮಗೆ ಸಿಗುವಂತಾಗಬೇಕು ಕೃಷ್ಣೆ ನಮ್ಮ ಬದಿಯಲ್ಲೇ ಹರಿದರೂ ಬೇಸಿಗೆಯ 4 ತಿಂಗಳು ನೀರಿಲ್ಲದೇ ನಾವು ಪರಿತಪಿಸುವಂತಹ ವಾತಾವರಣ ನಿರ್ಮಾಣವಾಗಿದೆ ಪ್ರತಿ ಬೇಸಿಗೆಯಲ್ಲೂ ಮಹಾರಾಷ್ಟ್ರಕ್ಕೆ ರೂ 5-10 ಕೋಟಿ ಕೊಟ್ಟು ಕುಡಿಯುವ ನೀರನ್ನು ಖರೀದಿ ಮಾಡಿ ಕುಡಿಯಬೇಕಾಗಿದೆ ಅದೂ ಅವರ ಮರ್ಸಿ ಮೇಲೆ ಒಂದೊಂದ್ಸಲ "ನಾವು ನೀವು ನೂರು ಕೋಟಿ ಕೊಟ್ಟರೂ ಕರ್ನಾಟಕಕ್ಕೆ ನೀರೇ ಬಿಡುವುದಿಲ್ಲ" ಎಂದು ಉದ್ಧಟತನದ ಮಾತು ಮಹಾರಾಷ್ಟ್ರದವರು ಹೇಳುತ್ತಾರೆ ಅಂತಹ ಸಂದರ್ಭದಲ್ಲಿ ನಮ್ಮನ್ನು ಕಾಪಾಡುವವರು ಯಾರು? ಈಗಾಗಲೇ ಸಾವಿರಾರು ಕೋಟಿ ರೂಗಳ ಬೆಳೆ ಹಾಳು ಮಾಡಿಕೊಂಡಿದ್ದೇವೆ ಸಾವಿರಾರು ಕೋಟಿಗಳನ್ನು, ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದೇವೆ ಈ ಹಿನ್ನೆಲೆಯಲ್ಲಿ ನಮಗೆ ಕೃಷ್ಣೆಯಲ್ಲಿ ಯಾವ ರೀತಿ ನ್ಯಾಯ ಒದಗಿಸಿಕೊಡುತ್ತೀರಿ ಎಂದು ಸರ್ಕಾರ ಹೇಳಬೇಕು

ಶ್ರೀ ಕೆ ಎಸ್ ಈಶ್ವರಪ್ಪ ಅಧ್ಯಕ್ಷರೆ, 2-4-2004ರಲ್ಲಿ ಕೃಷ್ಣ tribunalನ್ನು ಕೇಂದ್ರ ಸರ್ಕಾರ ರಚನೆ ಮಾಡಿದೆ ಅವರು ಮೂರು ವರ್ಷದೊಳಗೆ ಇದರ ಅಂತಿಮ ವರದಿ ಕೊಡಬೇಕಾಗಿತ್ತು, ಕೊಟ್ಟಿಲ್ಲ, ಇನ್ನೊಂದೆರಡು ವರ್ಷ ಕೇಳಿದ್ದಾರೆ ನಮ್ಮ ವಕೀಲರಾದ ನಾರೀಮನ್ ಮತ್ತಿತರರು ಕೃಷ್ಣ ತಕರಾರಿನಲ್ಲಿ ಒಳ್ಳೆಯ ವಾದವನ್ನೇ ಮಾಡಿದ್ದಾರೆ ಈ ಮಧ್ಯೆ ಆಂಧ್ರ ಪ್ರದೇಶ ನಮಗೆ ತೊಂದರೆ ಕೊಡಲು ಹೋದಾಗ ನಮ್ಮ ಯಾವ್ಯಾವ ಯೋಜನೆಗಳನ್ನು ನಿಲ್ಲಿಸಬೇಕು ಅಂತ ಕೇಳಿದ್ದರೋ ಅವ್ಯಾವುದನ್ನೂ ನಿಲ್ಲಿಸಲು ಅವಕಾಶ ಕೊಡಲಿಲ್ಲ, ಮುಂದುವರೆಸಿಕೊಂಡು ಹೋಗಲು ನಮಗೆ ಸೂಚನೆ ಬಂದಿದೆ, ಮುಂದುವರಿಸುತ್ತಲೂ ಇದ್ದೇವೆ ಹೀಗಾಗಿ ಕೃಷ್ಣ Tribunalನಲ್ಲಿ ನನಗಂತೂ ವಿಶ್ವಾಸವಿದೆ, ಕರ್ನಾಟಕಕ್ಕೆ ನ್ಯಾಯ ದೊರಕುತ್ತದೆ ಎಂದು ಅಲ್ಲಿ ತನಕ ಈಗಾಗಲೇ ನಾವು ಹಮ್ಮಿಕೊಂಡಿರುವ ಯೋಜನೆಗಳೇನಿವೆ, ಕಳೆದ ವರ್ಷ ಹಲವು ಯೋಜನೆಗಳನ್ನು ಕೈಗೊಂಡಿದ್ದೆವು ಅವು ಪೂರ್ಣವಾಗಿವೆ, ಈ ವರ್ಷವು ಕೆಲವನ್ನು ತೆಗೆದುಕೊಳ್ಳುವವರಿದ್ದೇವೆ, ಇದಕ್ಕೆ ನಮ್ಮೆಲ್ಲ ಶಾಸಕರ ವಿಶೇಷ

ಸಭೆಯನ್ನೂ ಕರೆದಿದ್ದೇನೆ ಹೀಗಾಗಿ ಇವರ ಅಪೇಕ್ಷೆಗೆ ತಕ್ಕಂತೆ ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸುವ ಪ್ರಶ್ನೆಯಿಲ್ಲ

ಶ್ರೀ ಸಿದ್ದು ಸವದಿ ಅಧ್ಯಕ್ಷರೆ, ಯಾವ ರೀತಿ ಕಾವೇರಿ ಟ್ರಿಬ್ಯೂನಲ್ ನವರು 205 TMC ನೀರು ತಮಿಳುನಾಡಿಗೆ ಬಿಡಬೇಕು ಅಂತ ಮಧ್ಯಂತರ ತೀರ್ಪು ಕೊಟ್ಟರೋ, ಇಲ್ಲೂ ಕರ್ನಾಟಕದ ಪರವಾಗಿ ಮಧ್ಯಂತರ ತೀರ್ಪಿಗೆ ನೀವು ಏಕೆ ಅವಕಾಶ ಮಾಡಿಕೊಳ್ಳಲಿಲ್ಲ? ಈ ಬೇಡಿಕೆ ಯಾಕೆ ಇಡಲಿಲ್ಲ? ಪ್ರತಿ ವರ್ಷ ನಾವು ನೀರಿಗಾಗಿ ಪರಿತಪಿಸಿ ಸಾಯುತ್ತಿದ್ದೇವೆ, ಸಾವಿರಾರು ಕೋಟಿ ಬೆಳೆ ಹಾನಿಯಾಗುತ್ತಿದೆ ಆದ್ದರಿಂದ ಮಧ್ಯಂತರ ತೀರ್ಪು ಪಡೆದು ಬೇಸಿಗೆಯಲ್ಲಿ ನಮಗೆ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿ ಇಲ್ಲವಾದರೆ ಹಿಪ್ಪರಗಿಯಲ್ಲಿ ಕೇವಲ 6 ಟಿಎಂಸಿ ನೀರು ನಿಲ್ಲಿಸಲು ವ್ಯವಸ್ಥೆ ಮಾಡಿರುವ ಕಡೆ ಇನ್ನೂ 6 ಟಿಎಂಸಿ ನೀರು ನಿಲ್ಲಿಸಬಹುದು ಇದರಿಂದ ಮಹಾರಾಷ್ಟ್ರದ ಭೂಮಿ ಒಂದಿಂಚೂ ಮುಳುಗುವುದಿಲ್ಲ ಯಾಕೆಂದರೆ ಮೇಲೆ ಎರಡು ಬ್ಯಾರೇಜಿವೆ, ಒಂದು ಉಗಾರ, ಇನ್ನೊಂದು ರಾಜಾಪುರ ರಾಜಾಪುರದವರೆಗೂ ನಾವು 6 ಟಿಎಂಸಿ ನೀರು ನಿಲ್ಲಿಸಬಹುದು ಅಲ್ಲಿ ನೀರು ನಿಲ್ಲಿಸಿದರೆ ಕೆಳಗೆ ನಾವು ಬೇಸಿಗೆಯಲ್ಲಿ ನೀರು ಪಡೆಯಬಹುದು ಇದಕ್ಕೆ ಯೋಚನೆ ಮಾಡಬೇಕು ಮತ್ತು ಮಧ್ಯಂತರ ಆಜ್ಞೆ ಪಡೆದುಕೊಂಡು ಕೊಯ್ನಾದಿಂದ ನೀರು ತರುವ ವ್ಯವಸ್ಥೆಯಾಗಬೇಕು ಇದೆಲ್ಲದರ ಬಗ್ಗೆ ಸರ್ಕಾರ ಯಾವ ರೀತಿ ಯೋಚನೆ ಮಾಡಿದೆ ಹೇಳಬೇಕು

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಸಿದ್ದು ಅವರು ಹೇಳಿದಂತೆ interim award ಪಡೆದುಕೊಂಡು ನಮಗೆ ಬೇಸಿಗೆಯಲ್ಲಿ ಕೊರತೆ ಬಿದ್ದಾಗ ಆ ನೀರು ತರಿಸಲು ಆಗುತ್ತದಾ? ಟ್ರಿಬ್ಯುನಲ್ ಆಜ್ಞೆ ಬರುವುದರೊಳಗೆ scheme (B) ನಡಿ ಎಷ್ಟು ನೀರು allocate ಆಗುತ್ತದೆ ಅದಕ್ಕೆ atleast survey and investigation ಮಾಡಿಸಿ, ಆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಆಗುತ್ತದಾ? ಯಾಕೆಂದರೆ ಆಂಧ್ರದವರು ಎಲ್ಲ illegal schemesನ್ನೇ regularize ಮಾಡಿಕೊಂಡಿದ್ದಾರೆ ಕಾವೇರಿಯಲ್ಲಿ ನಿಮಗೆ ಅದೇ ಅನುಭವ ಬಂದಿದೆ ತಮಿಳುನಾಡು ಮೊದಲು 3 ಲಕ್ಷ ಮಾಡುವವರು ಇವತ್ತು 30 ಲಕ್ಷಕ್ಕೆ ಪಡೆದುಕೊಳ್ಳುವ ಹುನ್ನಾರ ಮಾಡಿದರು, ಅವರು ಯಶಸ್ವಿಯೂ ಆದರು ಕೃಷ್ಣೆ ಕಣಿವೆಯಲ್ಲಿ, ನಮಗೂ ಅದೇ ಭಯವಿದೆ ಇದಕ್ಕೆ ನಿಮ್ಮ ಮುಂದಾಲೋಚನೆಯೇನು? ನಾಳೆ scheme (B) award ಬರುವವರೆಗೂ ನಾವು ಕಾದು ಕೂರಬೇಕಾ? ಅಥವಾ ಅದು ಬರುವುದರೊಳಗೆ infrastructure ready ಮಾಡಿ ಯೋಜನೆಗಳಿಗೆ ನೀರು ನಿಲ್ಲಿಸುವ ವ್ಯವಸ್ಥೆ ಸೃಷ್ಟಿ ಮಾಡುತ್ತೀರಾ? ಇದು

ಒಂದು ಆಮೇಲ ಮಾನ್ಯ ಮಾಧುಸ್ವಾಮಿ ಹೇಳಿದಂತೆ ಎಲ್ಲ ಕಡೆ ಕರೆಗೆ ನೀರು ಬಿಡುತ್ತೇವೆ ಅಂತ, ಅದು feasible ಇದೆಯೋ ಇಲ್ಲವೋ ಅಂತ ನಾನು ಹೇಳುವುದಿಲ್ಲ ಆದರೆ ಇಂತಹ ಯೋಜನೆಗಳನ್ನೇ ನೀವು ಸೃಷ್ಟಿಸಿಕೊಂಡು ಏನು ಮೂಲಭೂತವಾದ ಯೋಜನೆಗಳಿಗೆ ಕೊಡುವ ಹಣವನ್ನು ನೀವು divert ಮಾಡುತ್ತಿದ್ದೀರಿ, ಇದರಿಂದ ಖಂಡಿತ ನಾವು suffer ಆಗುತ್ತೇವೆ

ಶ್ರೀ ಬರಮಗೌಡ ರಾಜು ಕಾಗೆ ನಾವು ಮಹಾರಾಷ್ಟ್ರದಿಂದ ನೀರು ತರುವುದಕ್ಕೆ ಅವರು ಕೆಲವು ಷರತ್ತುಗಳು ಹಾಕಿದ್ದಾರೆ ವರ್ಷಕ್ಕೆ ರೂಪಾಯಿಗಳು 3ರಿಂದ 5ಕೋಟಿ ಕೊಟ್ಟು ನಾವು ಎರಡು ಸಲ ನೀರು ಕೊಯ್ನಾದಿಂದ ಬಿಡಿಸಿಕೊಳ್ಳಬೇಕೆಂಬುದು ಒಂದು ಮೊದಲು ಸಮುದ್ರಕ್ಕೆ ಹೋಗುವ ನೀರನ್ನೇ ಕೃಷ್ಣೆಗೆ ಬಿಡುತ್ತೇವೆ ಅಂದರು ಆದರೆ, ಹಿಂದಿನ ಸರ್ಕಾರ ಅದಕ್ಕೆ ಒಪ್ಪಲಿಲ್ಲ ಈಗ ನಾವು ದುಡ್ಡು ಕೊಟ್ಟರೂ, ಸ್ವತಃ ನಾನು ಎಸ್ ಎಂ ಕೃಷ್ಣ ಸರ್ಕಾರವಿದ್ದಾಗ ನೀರಾವರಿ ಸಚಿವರೊಡನೆ ನಾವು ನೀರಿಗಾಗಿ ಮಹಾರಾಷ್ಟ್ರಕ್ಕೆ ಹೋದಾಗ, ಮಾತನಾಡಿಸಲೇ ಒಲ್ಲರು, ನೀವು ಎಷ್ಟು ದುಡ್ಡು ಕೊಟ್ಟರೂ ನಾವು ನೀರು ಬಿಡುವುದಿಲ್ಲ, ಯಾಕೆಂದರೆ ನೀವು ನಮಗೆ ಸೊಲ್ಲಾಪುರಕ್ಕೆ ನೀರು ಬಿಡುತ್ತಿಲ್ಲ ಅಂತ ಆದ್ದರಿಂದ ಮಾನ್ಯ ಸಿದ್ದು ಸವದಿಯವರು ಹೇಳಿದಂತೆ ಪ್ರತಿ ಬೇಸಿಗೆಯಲ್ಲಿ ನಮಗೆ ನೀರು ಕೊರತೆ ಬೀಳುತ್ತದೆ, ಬೆಳೆದ ಕಬ್ಬು ಒಣಗಿಹೋಗುವಂತಹ ಪ್ರಸಂಗವಿದೆ ಆದ್ದರಿಂದ ಕೊಯ್ನಾದಿಂದ ನೀರು ಬಿಡಿಸಿಕೊಂಡು ಬರಲು ಸರ್ಕಾರ ಏನು ವ್ಯವಸ್ಥೆ ಮಾಡಿದೆ ಅಂತ ಸಚಿವರು ಹೇಳಬೇಕು

ಶ್ರೀ ಕೆ ಎಸ್ ಈಶ್ವರಪ್ಪ ಅಧ್ಯಕ್ಷರೆ ಇದರ ಕುರಿತು ಮಾನ್ಯ ಸಿದ್ದು ಸವದಿಯವರು ಕಳೆದ ಬಾರಿಯೂ ಪ್ರಸ್ತಾಪಿಸಿದ್ದರು ಹೀಗಾಗಿ ಮಹಾರಾಷ್ಟ್ರ ಸರ್ಕಾರದೊಡನೆ ವಿಧಾನ ಪರಿಷತ್ ಸಭಾಪತಿಗಳು ಕೆಲವು ಹಿರಿಯ ಶಾಸಕರು ಹೋಗಿ ಚರ್ಚೆ ಮಾಡಿ, ಇದರಲ್ಲಿ ಏನೇನು ಮಾಡಬೇಕು ಅಂತ ನಮ್ಮ ಅವರ ಪ್ರಧಾನ ಕಾರ್ಯದರ್ಶಿಗಳು ಕೂತು ಚರ್ಚಿಸಿ ಒಂದು ವರದಿ ಕೊಡಬೇಕು ಅಂತೆಲ್ಲ ಆಗಿದೆ ಮೂರು ಬಾರಿ ಅವರು ಸಭೆಯನ್ನೂ ಮಾಡಿದ್ದಾರೆ ಇನ್ನು ಕೊಯ್ನಾದಿಂದ ನೀರು ತರಲು ಅನೇಕ ವರ್ಷಗಳಿಂದ ಹಣ ಕೊಡುತ್ತಲೇ ಬಂದಿದ್ದೇವೆ ಕಳೆದ ಬಾರಿ ಕೊಡಲಿಲ್ಲ ಅಂತ ನೀರು ನಿಲ್ಲಿಸಿ ಬಿಟ್ಟಿದ್ದರು ಹಿಂದಿನದೆಲ್ಲ ಬಾಕಿ ತೀರಿಸಿ ನೀರು ಪಡೆದೆವು ಯಾವ ರೀತಿಯಿಂದಲಾದರೂ feasibility ಇದೆಯೋ ಇಲ್ಲವೋ, ನೋಡಿಕೊಂಡು ತಾತ್ಕಾಲಿಕವಾಗಿಯಾದರೂ ಮಾಡಿ ಅಂತ ಮಾನ್ಯ ಶಿವಾನಂದ ಪಾಟೀಲರು ಹೇಳಿದರು ಇದರಲ್ಲೇನಾಗುತ್ತಿದೆ ಅಂದರೆ ಒಂದೊಂದು ಯೋಜನೆಗೂ ಅನೇಕ ಅಭಿಪ್ರಾಯಗಳು ಬರುತ್ತವೆ ಆ ಭಾಗದಲ್ಲಿ 20-30 ಸಾವಿರ ಜನ ಕೆರೆಗಳಿಗೆ

ನೀರು ತುಂಬಿಸಬೇಕು ಅಂತ ಅನೇಕ ವರ್ಷಗಳಿಂದ ಹೋರಟ ಮಾಡುತ್ತ ಇರುವಾಗ ಅವರ ಅಭಿಪ್ರಾಯವನ್ನೂ ನಾವು ಕೇಳಬೇಕಾಗುತ್ತದೆ Feasibilityನ್ನೂ ನಾವು ನೋಡುತ್ತೇವೆ ಯಾವ್ಯಾವ ರೂಪದಲ್ಲಿ ನೀರು ತರಲು ಸಾಧ್ಯವೋ ಅದನ್ನು ಸರ್ಕಾರ ಮಾಡುತ್ತಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಪಾಟೀಲರ ಮೂಲಭೂತ ಪ್ರಶ್ನೆ ಇಷ್ಟೆ, ಎಲ್ಲಿ natural flow ಇಂದ ನೀರಾವರಿಯಾಗುತ್ತದೆ ಮತ್ತು ಈಗಾಗಲೇ ಟ್ರಿಬ್ಯೂನಲ್ ನಿಂದ allocate ಆಗಿದೆ, ಅಂತಹ ಯೋಜನೆಗಳನ್ನು feasible ಅಂತ ಮೊದಲೇ ಗುರುತಿಸಿ ನೀರು ಪಡೆಯುವುದು ಮಾಡಲಾಗಿದೆ ಇತ್ತೀಚೆಗೆ ಏನಾಗಿದೆ ಅಂದರೆ, ಅವರು ಯಾರು ಅಂತ ಹೇಳುವುದಿಲ್ಲ ಯಾರೋ ನಾಲ್ಕು ಜನ ಸೇರಿದರು, ಒಂದು ಸಭೆ ಕರೆದರು, ಇಂತಹ ಕಡೆ ನಮ್ಮ ಕೆರೆಗೆ ನೀರು ತುಂಬಿಸಬೇಕು ಅಂತ ಕೇಳಿದ ತಕ್ಷಣವೇ, ಆಯಿತು ಇದನ್ನು ನಾವು examine ಮಾಡುತ್ತೇವೆ, 20 ಕೆರೆಗೆ ನೀರು ಕೊಡುತ್ತೇವೆ ಅಂತ ಹೇಳಿಬಿಡುವುದು ಆಗ ಏನಾಗುತ್ತದೆ, ನಿಮ್ಮ natural flowನಿಂದಾಗುವ ನೀರಾವರಿ ಅಥವಾ lift irrigation ಇಂದ ಆಗುವ ನೀರಾವರಿಗೆಂದು ಮೊದಲೇ ನಾವು ಗುರ್ತಿಸಿ ಹಣ ಇಟ್ಟಿರುತ್ತೇವೆ, ನೀರೂ ಹಂಚಿಕೆ ಮಾಡುತ್ತೇವೆ, ಅಂಥವು suffer ಆಗುತ್ತವೆ ಭಾವನೆ ಪ್ರಶ್ನೆಗಿಂತಲೂ ಯಾವುದು ನಮಗೆ feasible, non-feasible ಮತ್ತು ಯಾವ ಪ್ರಾಜೆಕ್ಟ್‌ನಿಂದ ಹೆಚ್ಚಿನ ನೀರಾವರಿಯಾಗುತ್ತದೆ, ಅಥವಾ ಯಾವ project costlier ಆಗುತ್ತದೆ, ಅದನ್ನು ನೋಡಿಕೊಂಡು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕೇ ಹೊರತಾಗಿ, ಎಲ್ಲಿಯಾದರೂ ಒಂದು ನಾಲ್ಕು ಜನರು ಸೇರಿ ನಮಗೆ ಬೇಕು ಅಂದಕೂಡಲೇ ಅಲ್ಲೆಲ್ಲಾ ಕಡೆ ನಾವು promise ಮಾಡಿದರೆ ನಿಜವಾಗಲೂ ತೊಂದರೆಯಾಗುತ್ತದೆ ಆ ಒಂದು ದೃಷ್ಟಿಯಿಂದ ಅವರು ಆ ಪ್ರಶ್ನೆಯನ್ನು ಕೇಳಿದ್ದು ಅದಕ್ಕಾಗಿ ನೀವು ಎಲ್ಲೇ promise ಮಾಡಬೇಕಾದರೆ ಎಲ್ಲೇ ಆ project ಗಳನ್ನು ತೆಗೆದುಕೊಳ್ಳಬೇಕಾದರೆ ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕೃಷ್ಣಾ 'ಎ' ಸ್ಕೀಂ ಇರಬಹುದು, ಅಥವಾ ಈ ಕಡೆ ಕಾವೇರಿ ಯೋಜನೆಯಲ್ಲಿ ಮೊದಲೇ ಗುರುತು ಮಾಡಿದ ಯೋಜನೆಗಳೇ ಇರಬಹುದು, ಅದು ಮುಗಿದ ಮೇಲೆ surplus water ಇದ್ದು, ಅದು ಸುಮ್ಮನೆ ಹೋಗುತ್ತಿತ್ತು ಎಂದರೆ ಅಂಥ ಟೈಮ್ ನಲ್ಲಿ ನಮ್ಮ ರಾಜ್ಯದ ರೈತರಿಗೆ ಅದರಿಂದ ಅನುಕೂಲವಾಗುತ್ತದೆ ಅದಕ್ಕೆ ಎಷ್ಟೇ cost ಬೀಳಲಿ, ಒಂದು ತೊಟ್ಟು ಹನಿ ನೀರನ್ನು ಬಿಡುವುದಿಲ್ಲ ಎನ್ನುವ ದೃಷ್ಟಿಯಿಂದ ಮಾಡಿದರೆ ಅದು ಸ್ವಾಗತಾರ್ಹ ಆದರೆ ಸುಮ್ಮನೆ non-feasible ಬೆನ್ನು ಹತ್ತಿ feasible ಇರುವ project ಗಳು ಹಾಳಾಗಬಾರದು

ಶ್ರೀ ಕೆ ಎಸ್ ಈಶ್ವರಪ್ಪ ಬಹಳ ಒಳ್ಳೆಯ ಪ್ರಶ್ನೆಯನ್ನು ಮಾನ್ಯ ಖರ್ಗೆಯವರು ಎತ್ತಿದ್ದಾರೆ

ಶ್ರೀ ಶಿವಾನಂದ ಪಾಟೀಲ್ ಒಂದೇ ಒಂದು ಪ್ರಶ್ನೆ

ಶ್ರೀ ಕೆ ಎಸ್ ಈಶ್ವರಪ್ಪ ನೀವು ಆಮೇಲೆ ಕೇಳಿ ಅಧ್ಯಕ್ಷರು ನನಗೆ ಸಮಯ ಮುಗಿಯಿತು ಎಂದು ಹೇಳುತ್ತಾರೆ ಮತ್ತೆ ನನಗೆ ಉತ್ತರವನ್ನು ಕೊಡಲು ಆಗುವುದಿಲ್ಲ ಉತ್ತರವನ್ನು ಕೊಟ್ಟಮೇಲೆ ಮತ್ತೇ ಹೇಳುತ್ತೇನೆ ಅಧ್ಯಕ್ಷರು ಅನುಮತಿ ಕೊಟ್ಟರೆ ಕೇಳಿ ಈ ಅಧಿಕಾರಿಗಳು ಕೆಲವು ಸಾರಿ ಕೆಲವು ಕಾರಣಗಳಿಗಾಗಿ not feasible ಎಂದು ಬರೆಯುವ ಅಭ್ಯಾಸವನ್ನು ಇಟ್ಟುಕೊಂಡು ಬಿಟ್ಟಿದ್ದಾರೆ ಆ ರೀತಿ ಅಂದುಕೊಂಡೇ ಅನೇಕ ವರ್ಷಗಳಿಂದ ಈ ಯೋಜನೆಗಳು ಹಾಗೇ ಮೂಲೆಗೆ ಬಿದ್ದು ಹೋಗಿವೆ ಈಗ ಅನೇಕ ವರ್ಷಗಳಿಂದ ಕಳಸ ಬಂಡೂರಿ ನಾಲಾ ಆಗಬೇಕೆನ್ನುವ ಅಂಶವನ್ನು ಮಾಡುತ್ತಾ ಬಂದಿದ್ದರು not-feasible ಎಂದು ಅದರ ಬಗ್ಗೆ ಬರೆಯುತ್ತಲೇ ಇದ್ದರು ಅವರನ್ನು ಕೂಡಿಸಿಕೊಂಡು ಚರ್ಚೆ ಮಾಡಿ ಹಣವನ್ನು ಕೂಡ ಇಟ್ಟೆವು ಏಕೆ not-feasible ಆಗುತ್ತೆ ಎಂದು ಈಗ ಶುರುಮಾಡಿದ್ದೇವೆ ಬಿಜಾಪುರ ಬಾಗಲಕೋಟೆ ಬಗ್ಗೆ, ಅಲ್ಲಿ ವಿಶೇಷವಾಗಿ ಎಲ್ಲ ಚುನಾಯಿತ ಪ್ರತಿನಿಧಿಗಳಿಗೂ ಗೊತ್ತು, ಅದರ ಬಗ್ಗೆ ಚರ್ಚೆ ಮಾಡಿ ಹಣಕಾಸು ಇಲಾಖೆ, ನೀರಾವರಿ ಇಲಾಖೆ, ಎಲ್ಲರ ಜೊತೆ ಕೂತು ಚರ್ಚೆ ಮಾಡಿ, ನಂತರವೇ ನಾವು ಬಿಜಾಪುರ ಬಾಗಲಕೋಟೆಗೆ feasible ಎಂದು ತೀರ್ಮಾನವಾದ ಮೇಲೆಯೇ ಎಷ್ಟು ಅನುಕೂಲವಾಗುತ್ತೋ ಅದನ್ನು ಮಾಡಿಕೊಂಡು, ಅದಕ್ಕೆ 86 ಕೋಟಿ ರೂ ಗಳನ್ನು ಇಟ್ಟಿದ್ದೇವೆ ಸರ್ವೆ ಕಾರ್ಯವನ್ನು ಶುರುಮಾಡಿದ್ದೇವೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳುತ್ತಿರುವ ಬಗ್ಗೆ ನಾನು ತಕರಾರು ಮಾಡುತ್ತಿಲ್ಲ ದಾವಣಗೆರೆಯಲ್ಲಿ 19 ಕೆರೆಗಳನ್ನು ತುಂಬಿಸಬೇಕೆಂದು ಅನೇಕ ವರ್ಷಗಳಿಂದ ಹೋರಾಟಗಳು ನಡೆಯುತ್ತಿತ್ತು ಯಾರೊ ನಾಲ್ಕು ಜನರು demonstration ಮಾಡುತ್ತಾರೆ, ಇಷ್ಟಕ್ಕೆ ಅಲ್ಲ ಯಾವ ವಿಚಾರಗಳನ್ನು ತೆಗೆದುಕೊಂಡು ನಾವು ಹೋರಾಟವನ್ನು ಮಾಡಿದ್ದವೋ, ಆ ಹೋರಾಟ ಮಾಡಿದ ಅಂಶವನ್ನು feasible ಎಂದು ಗೊತ್ತಿದ್ದೂ ಕೂಡ ನಾವು ಹೋರಾಟ ಮಾಡಿದ್ದು ಹಾಗೆ ಹೋರಾಟ ಮಾಡಿದ ಅಂಶಗಳನ್ನು ನಾವು ಮಂತ್ರಿಗಳಾದಾಗಲೂ ಕೂಡ implement ಮಾಡಲಿಲ್ಲ ಎಂದರೆ ಹೇಗೆ? ಅವರಂತೂ ಮಾಡಲಿಲ್ಲ ಹಾಗಾದರೆ ನಾವ್ಯಾಕೆ ಮಂತ್ರಿಗಳಾಗಿರಬೇಕು? ಹೀಗಾಗಿ feasible ಆಗಿರುವ projectಗಳನ್ನು ಅನೇಕ ವರ್ಷಗಳಿಂದ ಬೇರೆಯವರು ಮಾಡುವುದಕ್ಕೆ ಆಗದೇ ಇದ್ದುದಕ್ಕೋಸ್ಕರ ಇದನ್ನು ತೆಗೆದುಕೊಂಡಿದ್ದೇವೆ ಮಾಡುತ್ತಿದ್ದೇವೆ ಇದು ಬಿಟ್ಟರೆ ಖಂಡಿತ ಬೇರೆ ಏನೂ ಇಲ್ಲ ಅದಕ್ಕೋಸ್ಕರ ನಾನು ಹೇಳಿದೆ ನಾನು ಮಂತ್ರಿಯಾದ ತಕ್ಷಣ, ಈ ಸರ್ಕಾರ

ಬಂದ ತಕ್ಷಣ, ನಾವು ವಿಶೇಷವಾಗಿ ತೆಗೆದುಕೊಂಡಿದ್ದು ಮೂರೇ ಒಂದು, ಕಳಸ ಬಂಡೂರಿ, ಎರಡು ಬಿಜಾಪುರ–ಬಾಗಲಕೋಟೆ, ಮೂರನೆಯದು ದಾವಣಗೆರೆ ಈ ಮೂರು ಬಿಟ್ಟರೆ, ಉಳಿದಂತೆ ಕೋಲಾರ ಜಿಲ್ಲೆಗೆ ಮೊನ್ನೆ ಹೋಗಿ ಅವರಿಗೆ ನೀರಿನ ಸೌಲಭ್ಯ ಜಾಸ್ತಿ ಮಾಡುವ ದಿಕ್ಕಿನಲ್ಲಿ ಆಶ್ವಾಸನೆ ಕೊಟ್ಟು ಬಂದಿದ್ದು ಬಿಟ್ಟರೆ, ನಾವು ಖಂಡಿತ ಇನ್ನಾವುದನ್ನೂ not feasible ಎಂದು ಇನ್ನಾವ programme ಅನ್ನು ತೆಗೆದುಕೊಂಡಿಲ್ಲ ಮತ್ತು ತೆಗೆದುಕೊಂಡಿರುವಂಥದ್ದನ್ನು implement ಮಾಡಿಯೇ ಮಾಡುತ್ತೇವೆ ಎನ್ನುವ ವಿಶ್ವಾಸ ನಮಗೆ ಇದೆ ನಾನು ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ ಈ ಇಲಾಖೆಯಲ್ಲಿ ನಾನು ಖಂಡಿತ ತಜ್ಞ ಅಲ್ಲ ತಾವು ಹಿರಿಯರಿದ್ದೀರಿ ತಾವು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು ಏಕೆಂದರೆ ಒಂದು ವರ್ಷದಲ್ಲಿ 2–3 ಬಾರಿ ಈ ಚರ್ಚೆಯಾಯಿತು ಚರ್ಚೆ ಆದ ಸಂದರ್ಭದಲ್ಲಿ ಕಳೆದ ಬಜೆಟ್ ನಲ್ಲೂ ಚರ್ಚೆ ಮಾಡುವುದಕ್ಕೆ ಅವಕಾಶವಾಗಲಿಲ್ಲ ನಮಗೆ ಅವರ ಮಾರ್ಗದರ್ಶನ ಸಿಗುತ್ತೆ ಎಂದು ಅಂದುಕೊಂಡಿದ್ದೆವು ಆಗಲೂ ನಮಗೆ ಆಗಲಿಲ್ಲ ಬೇರೆ ಬೇರೆ ಕಾರಣಗಳಲ್ಲಿ ಧರಣಿ, ಸಭಾತ್ಯಾಗ ಇದರಲ್ಲೇ ನಡೆದುಹೋಯಿತು ಈ ಬಾರಿಯಾದರೂ ಕೂಡ ನಾವು ಯಾವ ತಪ್ಪು ಮಾಡಿದ್ದೇವೆಂದು ತಾವು ಹೇಳಿ ಖಂಡಿತ ಅದನ್ನು ತಿದ್ದಿಕೊಳ್ಳುತ್ತೇವೆ ಅವರ ಅನೇಕ ವರ್ಷದ ಅನುಭವ ನಮಗೆ ಧಾರೆ ಎರೆದು ಕೊಡಲಿ ಖಂಡಿತವಾಗಿ ಆ ಕೆಲಸವನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ

ಶ್ರೀ ಶಿವಾನಂದ ಪಾಟೀಲ್ ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ

ಅಧ್ಯಕ್ಷರು ಈಗ ಏನಾಗಿದೆ ಎಂದರೆ, ಪ್ರಶ್ನೋತ್ತರ ಕಾಲದಲ್ಲಿ ಇದೇನು?

ಶ್ರೀ ಶಿವಾನಂದ ಪಾಟೀಲ್ ಕೃಷ್ಣ tribunal award ಬರುವುದು ಇದೆ ಒಂದು ನಿಮಿಷ ಸಾರ್

ಅಧ್ಯಕ್ಷರು ಹೇಳಿ ಒಂದೇ ಒಂದು ಪ್ರಶ್ನೆ ಮಾತ್ರ

ಶ್ರೀ ಶಿವಾನಂದ ಪಾಟೀಲ್ ಈಗ ನಿಮ್ಮ irrigation experts, ಅದರ ಮೇಲೆ ಒಂದು report ಅನ್ನು ಬರೆದಿದ್ದಾರೆ ಇದೇ ಮಾನ್ಯ ಖರ್ಗೆ ಸಾಹೇಬರು ಆ ಕಡೆ Irrigation minister ಇದ್ದರು ನಾನು ಬಿಜೆಪಿ ಶಾಸಕನಿದ್ದೆ ನಿಮ್ಮ ಇಲಾಖೆಯವರೇ not feasible ಎಂದು ಅವತ್ತು report ಅನ್ನು ಕೊಟ್ಟರು ಇವತ್ತು ಹೇಗೆ ಅದು feasible ಆಗುತ್ತೆ? ನೀವೇ ಹೇಳಿ ನೋಡೋಣ ಈಗ ನೀವು 80 ಕೋಟಿ ರೂ ಗಳನ್ನು ಖರ್ಚು ಮಾಡಿ ಒಂದು tmc ನೀರನ್ನು ತರುತ್ತಿದ್ದೀರಿ ನಾವು ಬರೀ 8 ಕೋಟಿ ರೂ ಗಳನ್ನು ಕೊಟ್ಟರೆ gravity flow ಮೇಲೆ ನಿಮ್ಮ main

canal ನಲ್ಲಿ 8 tmc ನೀರನ್ನು ತೆಗೆದುಕೊಂಡು ಬರುತ್ತೇವೆ, ಮತ್ತು ಈ ಎಲ್ಲ ಯೋಜನೆಗಳು Scheme-B ಯಲ್ಲಿ cover ಆಗುತ್ತವೆ Scheme-B ಬರುವವರೆಗೆ ಕೂಡ patience ನಿಂದ wait ಮಾಡುತ್ತಿಲ್ಲ ಇದು ಈಗಾಗಲೇ ನಿಮಗೆ ಗೊತ್ತಿದೆ, ಈಗಾಗಲೇ major, minor lift irrigation schemes ಗಳು totally defunct ಆಗಿರುವುದೆಷ್ಟುಎಂದು ಲಿಸ್ಟ್ ತೆಗೆದು ಹೇಳಿ 32 ಯೋಜನೆಗಳು ನಿಂತು ಹೋಗಿದೆ ಏಕೆಂದರೆ want of current bill ನಾಳೆ ನೀವೇ ವಿಚಾರ ಮಾಡಿ ನಿಮ್ಮಲ್ಲೇ reports ಇವೆ subject committee reports ಇವೆ ಬೇಕಾದರೆ ಅವುಗಳನ್ನು ತರಿಸಿ ನೋಡಿ ಆ ಇಲಾಖೆಯವರು ಇವರಿದ್ದಾಗ not feasible ಎನ್ನುತ್ತಾರೆ ನೀವು ಇದ್ದಾಗ feasible ಎಂದರೆ ಏನು ಅದರ ಅರ್ಥ? 80 ಕೋಟಿ ಖರ್ಚು ಮಾಡಿ ಒಂದು ಟಿಎಂಸಿ ನೀರನ್ನು ತರುತ್ತೀರಿ ಬರೀ 8 ಕೋಟಿ ಕೊಟ್ಟರೆ ಎಂಟು ಟಿಎಂಸಿ ನೀರು ಬರುತ್ತದೆ ಅದು gravity ಮೇಲೆ main canal ಪಕ್ಕಕ್ಕೆ ಬರುತ್ತದೆ ಹೇಗೆ ನೀವು ಉತ್ತರವನ್ನು ಕೊಡುತ್ತೀರಿ?

ಶ್ರೀ ಕೆ ಎಸ್ ಈಶ್ವರಪ್ಪ ಅದಕ್ಕೆ ನಾನು ಹೇಳಿದ್ದು ಇದೇ ಅಧಿಕಾರಿಗಳು ಕಳಸ ಬಂಡೂರಿ ಬಗ್ಗೆ not feasible ಎಂದು ಬರೆದಿದ್ದರು ಅದೇ ರೀತಿ ಬಾಗಲಕೋಟೆ ಬಿಜಾಪುರ ಬಗ್ಗೆ ನಮ್ಮ ಶಾಸಕರುಗಳು, ನಿಮ್ಮ ಶಾಸಕರುಗಳು ಕೂಡ ವರದಿಯನ್ನು ಕೊಟ್ಟಿದ್ದಾರೆ ಆ ವರದಿಯಲ್ಲಿ feasible ಎಂದು ಇದೆ ನಾವು ಅಧಿಕಾರಿಗಳ ಜೊತೆ ಕೂತು ಚರ್ಚೆ ಮಾಡಿಕೊಂಡು

ಶ್ರೀ ಸಿ ಎಸ್ ನಾಡಗೌಡರ್ ನಮ್ಮ ಪ್ರಶ್ನೆ ಅದಲ್ಲ feasible, ಅಥವಾ no feasibility ಆಮೇಲೆ, ಅದರ ಬಗ್ಗೆ ಇನ್ನೊಮ್ಮೆ ತಜ್ಞರನ್ನು ಕರೆದು ಚರ್ಚೆ ಮಾಡಿ opinion ಅನ್ನು ತೆಗೆದುಕೊಳ್ಳಿ ಆದರೆ natural flow ನಿಂದ ಬರುವ ನೀರನ್ನು, ಆ scheme ಅನ್ನು, ಈಗ ತೆಗೆದುಕೊಳ್ಳದೇ ನೀವು priority ಅನ್ನು ನೀವು lift irrigation ಗೆ ಕೊಡುತ್ತೇವೆಂದು ಹೇಳಿದರೆ, ನಾಳೆ ಏನಾದರೂ ನಿಮ್ಮ tribunal award ನಲ್ಲಿ ನೀರಿನ ಕಡಿತ ಆಯಿತೆಂದರೆ ಆಗ ನಾವೆಲ್ಲ suffer ಆಗುತ್ತೇವೆ 8 ಕೋಟಿ ರೂ ನಲ್ಲಿ ಎಂಟು ಟಿಎಂಸಿ ನೀರನ್ನು draw ಮಾಡಬಹುದು Canal side ನಲ್ಲಿರುವ ಕೆರೆಗಳಲ್ಲಿ ಕೂಡ ನೀರನ್ನು ತುಂಬಿಸುತ್ತಿಲ್ಲ ಅದಕ್ಕೆ ನೀವು ಹೆಚ್ಚು ಒತ್ತನ್ನು ಕೊಡಬೇಕೆಂದು ನಮ್ಮ ಶಿವಾನಂದ ಪಾಟೀಲರು ಹೇಳಿದ್ದು ಮೊದಲು ಅದನ್ನು ಮಾಡಿ ನೀವು feasibility, non-feasibility ಈಗ ನೀವು ಬಂದಮೇಲೆ feasibility ಆಗಿದೆ ಎಂದರೆ ಬಹಳ ಸಂತೋಷ ಇನ್ನು ಹೆಚ್ಚು feasible ಆಗುತ್ತೆ ಎಂದರೆ ಇನ್ನು ಹೆಚ್ಚು ಸಂತೋಷ ನೀವು ಸಾವಿರ ಕೋಟಿ ರೂ ಗಳನ್ನು ಖರ್ಚು

ಮಾಡುತ್ತೇವೆಂದರೆ ಬಹಳ ಸಂತೋಷ ನಿಮ್ಮನ್ನು ಸ್ವಾಗತ ಮಾಡುತ್ತೇವೆ ಆದರೆ, ಮೊದಲು ಯಾರಿಗೆ ನ್ಯಾಯಯುತವಾಗಿ ನೀರು ಸಿಗಬೇಕೋ ಅವರಿಗೆ ನೀರನ್ನು ಕೊಟ್ಟು ಮುಂದಿನ ಯೋಜನೆಯನ್ನು ಕೈಗೊಳ್ಳಿ .

ಶ್ರೀ **ಕೆ ಎಸ್ ಈಶ್ವರಪ್ಪ** ವಿಶೇಷವಾಗಿ (B)-Scheme ಎಂದುಕೊಂಡು ಕೂತು report ಬಂದಮೇಲೆ ಏಕೆ urgent ಮಾಡುತ್ತೀರಿ? "ಆಮೇಲೆ ಮಾಡುತ್ತೇವೆ" ಎಂದರೆ ಆ ಭಾಗದಲ್ಲಿ ನಾವು ಸರ್ವೆ ಮಾಡುತ್ತಾ ಇದ್ದೇವೆ ಇನ್ನು ಅಲ್ಲಿ ಕೆಲಸ ಶುರುಮಾಡುವುದಕ್ಕೆ ಹೊರಟಿಲ್ಲ

ಶ್ರೀ **ಸಿ ಎಸ್ ನಾಡಗೌಡರ್** ನೀವು A schemeನಲ್ಲಿ cover ಆಗುತ್ತಿರುವುದನ್ನು ತೆಗೆದುಕೊಳ್ಳುತ್ತಿಲ್ಲ

ಶ್ರೀ **ಜೆ ಸಿ ಮಾಧುಸ್ವಾಮಿ** ಅಂದಾಜು 120 TMC ನೀರು ನಮಗೆ B-scheme ನಲ್ಲಿ ಸಿಗಬಹುದು ಎಂದು ನಿರೀಕ್ಷೆ ಇದೆ Minister is right Action ಅನ್ನು ತೆಗೆದುಕೊಳ್ಳಲೇಬೇಕು Infrastructure ಅನ್ನು ನೀವು water store ಮಾಡುವುದಕ್ಕೆ ಸೃಷ್ಟಿ ಮಾಡಿಕೊಳ್ಳಲೇಬೇಕು ನಾಳೆ tribunal award ಆದಮೇಲೆ ನೀವು 120 tmc ಯನ್ನು ಕೃಷ್ಣ ಬೇಸಿನ್‌ನಲ್ಲಿ store ಮಾಡುವುದಕ್ಕೆ ಎಲ್ಲಿಯೂ ಜಾಗ ಇಲ್ಲ ಈಗಲೇ ನೀವು ಕಾರ್ಯಪ್ರವೃತ್ತರಾಗಬೇಕು A-scheme ನಲ್ಲಿ ಮೊದಲು ಅವರಿಗೆ side ನಲ್ಲಿರುವ ಕೆರೆಗಳಿಗೆ ಕೊಡಿ ಎಂದರೆ ಕೊಟ್ಟುಕೊಂಡು ಹೋಗಿ ಕೃಷ್ಣ ಬೇಸಿನ್ ನೀರು ನಾಳೆ ನಿಮಗೆ 120 tmc surplus ನೀರು ಸಿಕ್ಕಿದರೆ ಈಗಿನಿಂದ programme ಹಾಕದೆ, ಇನ್ನು ಯಾವಾಗ ಹಾಕುತ್ತೀರಿ?

ಶ್ರೀ **ಕೆ ಎಸ್ ಈಶ್ವರಪ್ಪ** ಏನಾಯಿತೆಂದರೆ, ಕೃಷ್ಣ tribunal ಮುಂದೆ ಆಂಧ್ರ ಸರ್ಕಾರದವರು ಚೀಮಾರಿ ಹಾಕಿಸಿಕೊಳ್ಳುತ್ತಿದ್ದಾರೆ ಏಕೆಂದರೆ ಅವರು construction ಮಾಡಿಕೊಂಡು ಮಾಡಿಕೊಂಡು ಹೋಗುತ್ತಿದ್ದಾರೆ ನಾವು feasible, non feasible ಎಂದು ಚರ್ಚೆ ಮಾಡುತ್ತಾ ಕುಳಿತುಕೊಂಡು ನಾವು ಇನ್ನು ಸರ್ವೆ ಕೂಡ ಮಾಡಲು ಹೊರಟಿಲ್ಲ ಹೀಗಾಗಿ ನಾವು ಇದೇ ಕಾರಣಕ್ಕೆ ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡಿರುವುದು ನಾವು ಸರ್ವೆ ಮಾಡುತ್ತೇವೆ ಯಾವುದು ನಮಗೆ tribunal ನಿಂದ award ಬರುತ್ತೋ ಅದು ಬರುತ್ತಿದ್ದಂತೆ immediate ಆಗಿ ನಾವು ಕೆಲಸವನ್ನು ಶುರುಮಾಡುತ್ತಾ ಹೋಗುತ್ತೇವೆ ಜೊತೆಗೆ

ಶ್ರೀ **ಶಿವಾನಂದ ಪಾಟೀಲ್** ಸರ್ವೆ ಮಾಡಿಲ್ಲ ಕೆಲಸವನ್ನು ಹೇಗೆ ಮಾಡುತ್ತೀರಿ?

ಶ್ರೀ ಕೆ ಎಸ್ ಈಶ್ವರಪ್ಪ ನೀವು ಪ್ರಶ್ನೆ ಕೇಳುತ್ತಾ ಇರುತ್ತೀರಿ ನಾನು ಕೂತಿರಬೇಕು ನಾನು ಉತ್ತರ ಕೊಡಬೇಕಾದಾಗ ನೀವು ಕೇಳುವ ಹಾಗೆ ಇಲ್ಲ ಅವರೇನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತ ಗಮನಿಸುತ್ತೇನೆ ಆ ದಿಕ್ಕಿನಲ್ಲಿ ಕೂಡ ಎಷ್ಟರಮಟ್ಟಿಗೆ ಅನುಕೂಲ ಮಾಡಬೇಕೋ ಅದನ್ನು ಖಂಡಿತ ಮಾಡುತ್ತೇನೆ

ಅಧ್ಯಕ್ಷರು ಮುಂದಿನ ಪ್ರಶ್ನೆ ಬಿ ಶಿವರಾಂ ಅವರದು

ಶ್ರೀ ಹಂಪನಗೌಡ ಬಾದರ್ಲಿ ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ ದಯವಿಟ್ಟು, ಮಾನ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ (B)-scheme ಬಗ್ಗೆ

ಅಧ್ಯಕ್ಷರು ಎಲ್ಲ ನಿಂತುಕೊಳ್ಳುತ್ತೀರಿ ಏನು ಇದು? ಇದು ಪ್ರಶ್ನೋತ್ತರ ಹಿರಿಯ ಸದಸ್ಯರುಗಳು ಎಲ್ಲ ನಿಂತುಕೊಂಡು ಯಾರು ಹೇಳುವುದಿಲ್ಲ, ಕೇಳುವುದಿಲ್ಲ ನಿಂತುಬಿಡುತ್ತೀರಿ, ಭಾಷಣ ಹೊಡೆಯುತ್ತೀರಿ ಒಂದೊಂದು ಪ್ರಶ್ನೆಗೆ ಒಂದೊಂದು ಗಂಟೆಯಾಗುತ್ತೆ ಇದೇನು?

ಶ್ರೀ ಹಂಪನಗೌಡ ಬಾದರ್ಲಿ ಕೇಳು ಎಂದರೆ ನಾವು ಕೇಳುತ್ತೇವೆ ಬೇಡವೆಂದರೆ ನಾವು ಕುಳಿತುಬಿಡುತ್ತೇವೆ ಮಾತನಾಡಿ ಎಂದರೆ ಮಾತನಾಡುತ್ತೇವೆ ಬೇಡ ಎಂದರೆ ಬಿಟ್ಟು ಬಿಡುತ್ತೇವೆ

ಅಧ್ಯಕ್ಷರು ಕೂಡ್ರಿ, ನಾನು ಮಾನ್ಯ ಶಿವರಾಂ ಅವರನ್ನು ಕರೆದಿದ್ದೇನೆ

ಏತ ನೀರಾವರಿ ಯೋಜನೆಯ ಪ್ರಗತಿ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**216(1567)**
ಸದಸ್ಯರ ಹೆಸರು	**ಶ್ರೀ ಬಿ ಶಿವರಾಮು(ಗಂಡಪಿ)**
ಉತ್ತರಿಸುವವರು	**ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಹಾಸನ ಜಿಲ್ಲೆ, ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ಅನುಷ್ಠಾನಕ್ಕೆ ಒದಗಿಸಲಾಗಿರುವ ಮೊತ್ತವೆಷ್ಟು,

ರೂ 10 00 ಕೋಟಿಗಳು (2006–07ನೇ ಸಾಲಿಗೆ)

ಆ) ಕಾಚೇನಹಳ್ಳಿ ಹಂತ 1, 2 ಮತ್ತು 3 ಯೋಜನೆಗಳಿಗೆ ಪೂರ್ಣ ಪ್ರಮಾಣದ ತಾಂತ್ರಿಕ ಮಂಜೂರಾತಿ ದೊರೆತ್ತಿರುತ್ತದೆಯೇ,

ಇಲ್ಲ

ಇ) ಕಾಚೇನಹಳ್ಳಿ 3 ನೇ ಹಂತದ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ,

2 ನೇ ಹಂತದ ಯೋಜನೆಯು ಮುಗಿದ ನಂತರ 3ನೇ ಹಂತವನ್ನು ಕೈಗೆತ್ತಿಕೊಳ್ಳಲಾಗುವುದು

ಈ) ಪ್ರಾರಂಭಿಸಲು ಇರುವ ತೊಂದರೆಗಳೇನು?

ಬಹು ಹಂತದ ಯೋಜನೆಗಳಾಗಿರುವುದರಿಂದ, ಹಂತ ಹಂತವಾಗಿ ನಿರ್ವಹಿಸಬೇಕಾಗಿರುತ್ತದೆ ಅದರನ್ವಯ ಈ ಯೋಜನೆಯ 2 ನೇ ಹಂತದ ಕಾಮಗಾರಿಗಳು ಮುಗಿದ ನಂತರ 3ನೇ ಹಂತವನ್ನು ಕೈಗೆತ್ತಿಕೊಳ್ಳಲಾಗುವುದು

ಶ್ರೀ ಬಿ ಶಿವರಾಮು ಮಾನ್ಯ ಅಧ್ಯಕ್ಷರೆ, ಕಾಚೇನಹಳ್ಳಿ ಏತ ನೀರಾವರಿ ಯೋಜನೆ ಅನುಷ್ಠಾನದ ಬಗ್ಗೆ ಹಂತ 1, 2 ಮತ್ತು 3ಕ್ಕೆ ಪೂರ್ಣ ಪ್ರಮಾಣದ ತಾಂತ್ರಿಕ ಮಂಜೂರಾತಿ ದೊರೆತಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ'ವೆಂದು ತಾವು ಹೇಳಿದ್ದೀರಿ ಇದಕ್ಕೆ ಕಾರಣವೇನೆಂದು ನನಗೆ ಗೊತ್ತಾಗಬೇಕು ಎರಡನೆಯದಾಗಿ, ಇದೊಂದು comprehensive project ಆದರೆ, ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಏನಿದೆಯೆಂದರೆ, 2ನೇ ಹಂತದ ಯೋಜನೆ ಮುಗಿದ ನಂತರ 3ನೇ ಹಂತದ ಯೋಜನೆ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ ಈ comprehensive project ಆದ ನಂತರ ಮೊದಲನೇ ಹಂತ, ಎರಡನೇ ಹಂತ ಮತ್ತು ಮೂರನೇ ಹಂತವನ್ನು ಒಟ್ಟಿಗೆ ತೆಗೆದುಕೊಳ್ಳಬೇಕಾಗಿರತಕ್ಕಂಥಾದ್ದು, ಆಡಳಿತ ಮಂಜೂರಾತಿ ಕೊಟ್ಟಿರುವುದರ ಪ್ರಕಾರ ಸರ್ಕಾರದ ಜವಾಬ್ದಾರಿ ಜೊತೆಗೆ, ನೀರಿನ ಲಭ್ಯತೆಯನ್ನು ಈಗಾಗಲೇ ತೋರಿಸಿದೆ TICMIPCಯಲ್ಲಿ clearance ಆಗಿದೆ ನಿಮಗೆ size of the canal ಇದೆಯಲ್ಲ, 3ನೇ ಹಂತದವರೆಗೂ ಏನು ನೀರನ್ನು ತೆಗೆದುಕೊಂಡು ಹೋಗಬೇಕು, ಅದು ಈಗಾಗಲೇ ನಿಗದಿಯಾಗಿರುವುದರಿಂದ ನೀವು technical sanction ಮಾಡಿಕೊಂಡು ಮೂರೂ ಯೋಜನೆಯನ್ನು comprehensive ಆಗಿ ಒಟ್ಟಿಗೆ ತೆಗೆದುಕೊಳ್ಳುವುದರಿಂದ ಆಗುವಂತಹ ಅನಾನುಕೂಲತೆಗಳು ಏನೆಂದು ದಯಮಾಡಿ ಹೇಳುತ್ತೀರಾ?

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೇ, ಇದರಲ್ಲಿ 1st Stage, 2nd Stage, 3rd Stage ಇದೆ, ಹೌದು ಅದಕ್ಕಿಂತಲೂ ಮುಖ್ಯವಾಗಿ ನಿಮಗೆ ಗೊತ್ತಿರುವಂತೆ, ಈ ಯೋಜನೆ 2002ರಲ್ಲಿ ಆರಂಭವಾಗಿದ್ದು ಅದಾದ ನಂತರ, ಅದು ಕರ್ನಾಟಕ ನೀರಾವರಿ ನಿಗಮದಿಂದ 2003ರಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ವಹಿಸಿಕೊಟ್ಟರು ಅಲ್ಲಿಂದ 2003ರ ತನಕವೂ ಕೂಡ extra financial

implications problem ನಿಂದಾಗಿ ಯಾವುದೇ ಕಾಮಗಾರಿಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ ಈಗ ತಾವು ಏನು ಹೇಳುತ್ತಿದ್ದೀರಿ, ಇದನ್ನೆಲ್ಲಾ ಗಮನಿಸಿ, ನಾವು ಈ ಬಾರಿ 15 ಕೋಟಿ ರೂಪಾಯಿಗಳಷ್ಟು ಹಣ ಇಟ್ಟು ಹೆಚ್ಚಿನ ಕಾಮಗಾರಿ ತೆಗೆದುಕೊಳ್ಳಬೇಕೆಂದು ಕೂಡ ತೀರ್ಮಾನ ಮಾಡುತ್ತೇವೆ ನಾವು ಆ ಭಾಗಕ್ಕೆ ಬರುತ್ತೇವೆ, ನಿಮ್ಮ ಜೊತೆ ಕುಳಿತುಕೊಳ್ಳುತ್ತೇವೆ, ಚರ್ಚೆ ಮಾಡುತ್ತೇವೆ ಇನ್ನು ಏನೇನು ಆಗಬೇಕೋ, ಅದನ್ನೂ ಕೂಡ ಖಂಡಿತವಾಗಿ ಮಾಡುತ್ತೇವೆ

ಶ್ರೀ ಬಿ ಶಿವರಾಮು ಅಧ್ಯಕ್ಷರೆ, ಈಗ ನನ್ನ ಪ್ರಶ್ನೆ ಇಷ್ಟೆ, ಈ ಸಾರಿ ಕೂಡ ಈ ಯೋಜನೆಗೆ 15 ಕೋಟಿ ಇಟ್ಟಿದ್ದೇವೆಂದು ಹೇಳಿದ್ದೀರಿ ಹಿಂದೆ 10 ಕೋಟಿ ಇಟ್ಟಿದ್ದೀರಿ ಅದು ಎಷ್ಟು ಖರ್ಚಾಯಿತೆಂದು ನನಗೆ ಗೊತ್ತಿಲ್ಲ ಕಾಚೇನಹಳ್ಳಿಯಲ್ಲಿ ಏತ ನೀರಾವರಿ ಪ್ರಾರಂಭವಾಗಿದ್ದು 2002ರಲ್ಲಿ ಅಲ್ಲ, ಅದು 1993-94ರಲ್ಲಿ sanction ಆಗಿದ್ದು ಅನಂತರ, CoDಗೆ ನಾನಾ ಕಾರಣಗಳಿಗಾಗಿ ಹೋಯಿತು ಜೆ ಹೆಚ್ ಪಟೇಲರಿದ್ದಾಗ CoD enquiryಯನ್ನು cacel ಮಾಡಿ ಮತ್ತೆ ಆ ಯೋಜನೆಯನ್ನು ತೆಗೆದುಕೊಂಡ ನಂತರ, 1st Stage, 2nd Stage and 3rd Stage ಅನ್ನು comprehensive ಆಗಿ sanction ಮಾಡಿದ ನಂತರ, 3ನೇ ಹಂತದ ಯೋಜನೆ ಇದೆಯಲ್ಲ, ಈ ಯೋಜನೆ ಕುರಿತಂತೆ ಶ್ರೀಕಾಂತ್‌ರವರು ಸರ್ವೆ ಮಾಡುತ್ತಿರತಕ್ಕಂಥಾದ್ದು ಇನ್ನೂ ಮುಗಿದಿಲ್ಲವಲ್ಲ, ಕಾರಣವೇನು? ಏಕೆ ಹೇಳುತ್ತೇನೆಂದರೆ, ನಿಮ್ಮಲ್ಲಿ ಇಚ್ಛಾಶಕ್ತಿ ಇದೆಯೆಂದು ನಾನು ಗಮನಿಸಿದೆ ನೀರಾವರಿ ಸಚಿವರಾಗಿ ಈ ರಾಜ್ಯಕ್ಕೆ ನೀರಾವರಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಮ್ಮಲ್ಲಿ ಬದ್ಧತೆ ಎಷ್ಟಿದೆ, ಕಳಸಾ-ಬಂಡೂರಿ ಬಗ್ಗೆ ನಿಮ್ಮ ಇಚ್ಛಾಶಕ್ತಿ ಎಷ್ಟರಮಟ್ಟಿಗೆ ತಮಗೆ ಇದೆಯೆಂದು ಹೇಳಿದಾಗ ನಿಜವಾಗಿಯೂ ನನಗೆ ಬಹಳ ಸಂತೋಷವಾಯಿತು ಆದರೆ, 3ನೇ ಹಂತದ ಯೋಜನೆ ಗಂಡಸಿ ಕ್ಷೇತ್ರಕ್ಕೆ ಬರುತ್ತದಲ್ಲ ಒಂದು ಸರ್ವೆ ಕಾರ್ಯವನ್ನು ಶ್ರೀಕಾಂತ್‌ರವರಿಗೆ 2003-04ರಲ್ಲಿ entrust ಮಾಡಿ ಮೂರು ವರ್ಷವಾಯಿತು ಏಕೆ ಅದು ಮುಗಿದಿಲ್ಲ? ಎರಡನೇ ಹಂತ ಮುಗಿದ ನಂತರ ಮೂರನೇ ಹಂತ ತೆಗೆದುಕೊಳ್ಳುತ್ತೇವೆಂದು ತಾವೇಕೆ ಹೇಳುತ್ತೀರಿ? Water allocation is made specifically for all the three stages This is a comprehensive project ನಿಮ್ಮಲ್ಲಿ ಆ ವಿಳಂಬದ ಧೋರಣೆ ಏಕೆ? ಇದರಲ್ಲಿ ಏಕೆ repeated ಆಗಿ ಹೇಳುತ್ತಿದ್ದೇನೆಂದರೆ, ಹಿಂದೆ ನಿಮಗೆ ಒಂದು ಸಾರಿ ಪ್ರಶ್ನೆ ಕೇಳಿದ್ದೆ ನೀವು ಬಹಳ ಚೆನ್ನಾಗಿ ಅಧ್ಯಕ್ಷರ ಹತ್ತಿರ ಹೇಳಿದ್ದೀರಿ "ನಾನು ಕರೆದುಬಿಟ್ಟು ಮಾತನಾಡಿ, ಬಗೆಹರಿಸುತ್ತೇನೆ, clear ಮಾಡುತ್ತೇನೆ" ಎಂದು ಹೇಳಿ ಒಂದು ಸಲವೂ ನೀವು ಕರೆಯಲಿಲ್ಲ ಅದೇಕೆ ಎಂದು

ನನಗೆ ಅರ್ಥವಾಗುವುದಿಲ್ಲ ಹಾಸನ ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಕರೆದು ಮಾತನಾಡತಕ್ಕಂಥ ಸೌಜನ್ಯವನ್ನು ಯಾವ ಸಚಿವರೂ ಇಲ್ಲಿಯವರೆಗೂ ತೋರಿಸಿಲ್ಲ ಈ ಸದನದಲ್ಲಿ ನಮ್ಮದು ಸುಮ್ಮನೆ, ಅರಣ್ಯರೋದನವಾಗಿದೆ ಎರಡು ಸಾರಿ ಧರಣಿ ಮಾಡಿದ್ದೇವೆ PWD ಇಲಾಖೆ ಬಗ್ಗೆ ಒಳಗಡೆ ನಿಮ್ಮ chamber ನಲ್ಲಿ ಕರೆದು ಚರ್ಚೆ ಮಾಡಿದಿರಿ ಇಲ್ಲಿಯವರೆಗೂ ಅದಕ್ಕೆ ಯಾವ result ಸಹ ನನಗೆ ಸಿಕ್ಕಿಲ್ಲ ಅದಕ್ಕೋಸ್ಕರ, ನಾನು ನಿಮ್ಮಲ್ಲಿ ಹೇಳುತ್ತಿದ್ದೇನೆ ನಿಮಗೆ ಇಚ್ಛಾಶಕ್ತಿ, ಬದ್ಧತೆ ಇರುವುದರಿಂದ ಈ ಯೋಜನೆಗೆ ಸಂಬಂಧಿಸಿದಂತೆ ಎಷ್ಟು ದಿವಸದೊಳಗೆ ಶ್ರೀಕಾಂತ್‌ರವರು ಮಾಡುತ್ತಿರತಕ್ಕಂಥ 3ನೇ ಹಂತದ ಸರ್ವೆಯನ್ನು ಪೂರ್ಣಗೊಳಿಸಿ, ಈ comprehensive ಆಗಿ ಈ scheme ಅನ್ನು ಕೈಗೆತ್ತಿಕೊಳ್ಳುತ್ತೀರಿ? ಬಜೆಟ್‌ನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಹಣದ ಕೊರತೆ ಇಲ್ಲವೆಂದು ಹೇಳಿದ್ದೀರಿ ಇಷ್ಟೆಲ್ಲಾ ಇಲ್ಲವೆಂದು ಹೇಳಿದ ನಂತರವೂ ನಿಮಗೆ ಯಾವುದರ ಕೊರತೆ ಇದೆಯೆಂದು ನನಗೆ ಹೇಳಬೇಕು ಅದಕ್ಕೋಸ್ಕರವೆ, ಮೂಲಭೂತವಾಗಿ ನಾನು ಆ ಪ್ರಶ್ನೆ ಕೇಳಿದ್ದು

ಶ್ರೀ ಕೆ ಎಸ್ ಈಶ್ವರಪ್ಪ ನಾಳೆ ದಿವಸ ಬೆಳಿಗ್ಗೆ 9 ಗಂಟೆಗೆ ಕಾವೇರಿ ನೀರಾವರಿ ನಿಗಮದ ಆ ಭಾಗದ ಎಲ್ಲಾ ಶಾಸಕರುಗಳ ಸಭೆ ಕರೆದಿದ್ದೇನೆ ಇವತ್ತು ಬೇರೆ ಬೇರೆ ಜಿಲ್ಲೆಗಳದ್ದು ಕರೆಯುತ್ತಿದ್ದೇನೆ ಒಂದೊಂದೇ ದಿವಸ 3-4 ಜಿಲ್ಲೆಗಳ ಶಾಸಕರುಗಳ, ನೀರಾವರಿ ಕ್ಷೇತ್ರದ ಪ್ರಮುಖರ ಸಭೆ ಕರೆದು, ಅವರ ಸಮಸ್ಯೆಗಳೇನೆಂದು ಕೇಳುವುದಕ್ಕೋಸ್ಕರ ಈ ರೀತಿ ನಾನು ಮಾಡುತ್ತಿರುವುದು ಇದು ಮೊದಲನೆಯದು ಇದರಲ್ಲಿ ನಮಗೆ ಯಾವುದೇ ಗೊಂದಲವಿಲ್ಲ ಇದನ್ನು ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ ಮಾನ್ಯ ಶಿವರಾಮುರವರು ನಗಬಹುದು ಇದರ ಬಗ್ಗೆ ನೀವು ಪ್ರಶ್ನೆ ಕಳುಹಿಸಿದ ನಂತರ, ತೆಗೆದು ನೋಡಿದೆ ತಾವೇ ತಿಳಿಸಿದಂತೆ ಇದು sanction ಆಗಿರುವುದು 1993ರಲ್ಲಿ 2002-03ರಲ್ಲಿ ಆಗಿಲ್ಲ ಒಂದು ರೂಪಾಯಿಯನ್ನೂ ಇಟ್ಟಿಲ್ಲ 2003-04ರಲ್ಲಿ ಅನುದಾನವೆಂದು 50 ಲಕ್ಷ ಇಟ್ಟಿದ್ದರು ಅದೇ ರೀತಿ 2004-05ರಲ್ಲಿ 60 ಲಕ್ಷ, 2005-06ರಲ್ಲಿ 375 ಲಕ್ಷ ಅನುದಾನವಿಟ್ಟು, ಕೇವಲ 79 ಲಕ್ಷ ಖರ್ಚು ಮಾಡಿದ್ದಾರೆ ಆಗ EFI ಸಮಸ್ಯೆಯಿತ್ತು

ಶ್ರೀ ಬಿ ಶಿವರಾಮು 2006-07ರಲ್ಲಿ ಎಷ್ಟು ಇತ್ತು ಹೇಳಿ?

ಶ್ರೀ ಕೆ ಎಸ್ ಈಶ್ವರಪ್ಪ 2006-07ರಲ್ಲಿ ರೂ 990 ಲಕ್ಷ, ಅಂದರೆ ಒಟ್ಟು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು ನಿಮಗೆ ಗೊತ್ತಿದೆ ಅಲ್ಲಿಂದ ಇಲ್ಲಿಯ ತನಕವೂ EFI ಸಮಸ್ಯೆಯಿತ್ತು ಈ ಸಮಸ್ಯೆ ಇವತ್ತಿನದಲ್ಲ ಈ ಸಮಸ್ಯೆ ಆರಂಭವಾದಾಗಿನಿಂದಲೂ ಇದ್ದು, ಮೊನ್ನೆ ಈ ಸಮಸ್ಯೆ ಪರಿಹಾರವಾಗಿದೆ ನಾವು EFI ಅನ್ನು ಕೂರಿಸಿ, Advocate General ಅವರನ್ನೂ ಕರೆಸಿ, ಇದೇಕೆ ಈ ರೀತಿ

ತೊಂದರೆಯಾಗುತ್ತಿದೆಯೆಂದು ಅವರಿಂದ clearance ಮಾಡಿಸಿ, Final Department ಇದಕ್ಕೆ ಒಪ್ಪಿಗೆ ಕೊಟ್ಟಿರುವುದರಿಂದ, ಈ project ನಿಧಾನವಾಗುತ್ತಿದೆಯೆಂಬ ಒಂದೇ ಕಾರಣಕ್ಕೆ ಈ ಸಲ 15 ಕೋಟಿಯಷ್ಟು ರೂಪಾಯಿಗಳನ್ನು ಈಗಾಗಲೇ ಇಟ್ಟಿದ್ದೇವೆ ಈಗಾಗಲೇ ನಿಮಗೆ ನೋಟೀಸ್ ಬಂದಿರಬಹುದೆಂದು ಭಾವಿಸುತ್ತೇನೆ ಯಾವ ನೀರಾವರಿ ಸಚಿವರೂ ಕೂಡ ಬದ್ಧತೆ ತೋರಿಸಿಲ್ಲವೆಂದು ಹೇಳಬೇಡಿ ನಮಗೆ ಬದ್ಧತೆ ಇರುವುದಕ್ಕೋಸ್ಕರವೇ ನಿಮ್ಮನ್ನು ಆ ಸಭೆಗೆ ಕರೆಯುತ್ತಿರುವುದು ನಿಮ್ಮನ್ನು ನಾಳೆ ಕರೆದು ನಿಮ್ಮ ಹತ್ತಿರವೇ ಇದರ ಚರ್ಚೆ ಮಾಡುತ್ತೇವೆ ಈ ವರ್ಷದಲ್ಲಿ ಎಷ್ಟು ಯೋಜನೆಗಳನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳುತ್ತೇವೆ ಎಷ್ಟು ಮಾಡುತ್ತೇವೆ, ಎಷ್ಟು ಮಾಡುವುದಕ್ಕಾಗುವುದಿಲ್ಲ ಎಂಬುದನ್ನೂ ಹೇಳುತ್ತೇನೆ ನನಗೆ 1ನೇ ಹಂತ, 2ನೇ ಹಂತ, 3ನೇ ಹಂತವೆಂದು, ಇದರಲ್ಲಿ ರಾಜಕೀಯ ತರುವ ಪ್ರಶ್ನೆಯೇ ಇಲ್ಲ ಇದನ್ನು ತಮಗೆ ನಾನು ತುಂಬಾ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ ನಾಳೆ ಬನ್ನಿ, ಕುಳಿತುಕೊಂಡು ಚರ್ಚೆ ಮಾಡೋಣ ಆ ಯೋಜನೆಗೆ ಎಷ್ಟು ವೇಗವಾಗಿ ಚಾಲನೆ ಕೊಡಬೇಕೋ, ಅಷ್ಟು ಬೇಗ ನಾನು ಚಾಲನೆ ಕೊಡುತ್ತೇನೆ

ಅಧ್ಯಕ್ಷರು. ಮಾನ್ಯ ಶಿವರಾಮುರವರೆ, ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ

ಶ್ರೀ ಬಿ ಶಿವರಾಮು ನನಗೆ ಬಹಳ ಸಮಾಧಾನವಾಗಿದೆ ನಾನು ಒಂದೇ ವಿಚಾರ ಕೇಳುತ್ತೇನೆ 3rd Stageಗೆ ಸರ್ವೆ ಕೆಲಸಕ್ಕೆ ಶ್ರೀಕಾಂತ್‌ರವರಿಗೆ ಕೊಟ್ಟಿದ್ದೀರಲ್ಲ, ಅದು ಪೂರ್ಣವಾಗಿಲ್ಲ ಎಷ್ಟು ದಿವಸದೊಳಗೆ ಪೂರ್ಣವಾಗುತ್ತದೆಂದು ಒಂದು specific reply ಹೇಳಿಬಿಡಿ, ಸಾಕು

ಶ್ರೀ ಕೆ ಎಸ್ ಈಶ್ವರಪ್ಪ ಶ್ರೀಕಾಂತ್‌ರವರು ಮಾಡುತ್ತಿರುವ ಸರ್ವೆ ಮುಗಿಯುವ ಹಂತದಲ್ಲಿದೆ

ಶ್ರೀ ಬಿ ಶಿವರಾಮು ಅದರ ಜೊತೆಗೆ ವಹಿಸಿದ 5 ಪ್ರಾಜೆಕ್ಟ್‌ಗಳಿಗೂ ಮುಗಿದು ಎರಡು-ಎರಡೂವರೆ ವರ್ಷಗಳಾದವು ಇದೊಂದು ಮಾತ್ರ ಇನ್ನೂ 'ಮುಗಿಯುವ ಹಂತದಲ್ಲಿದೆ, ಮುಗಿಯುವ ಹಂತದಲ್ಲಿದೆ' ಎಂದರೆ, ನಿರಂತರವಾಗಿ ಮುಗಿಯುವ ಹಂತದಲ್ಲಿಯೇ ಇರುತ್ತದೆ! Simultaneously, 5 ಪ್ರಾಜೆಕ್ಟ್‌ಗಳನ್ನು ಶ್ರೀಕಾಂತ್‌ರವರಿಗೆ ವಹಿಸಿದ ಕಾಲದಲ್ಲಿ 4 ಪ್ರಾಜೆಕ್ಟ್‌ಗಳು ಮುಗಿದು, ಇದೊಂದು ಪ್ರಾಜೆಕ್ಟ್ ಮಾತ್ರ ನನ್ನ ಕ್ಷೇತ್ರಕ್ಕೆ ಸೇರಿದ್ದು, ಅದು ಮುಗಿದಿಲ್ಲವೆಂದಾಗ ಯಾವ ಭಾವನೆ ಬರುತ್ತದೆ?

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಸದಸ್ಯರು ಈಗ ಹೇಳಿದ್ದಕ್ಕೆ ನಾನೂ ಹೇಳಲೇಬೇಕು ಏಕೆಂದರೆ, 3 ವರ್ಷಗಳ ಕೆಳಗೆ ನಾನು ಮಂತ್ರಿಯಾಗಿರಲಿಲ್ಲ 3

ವರ್ಷದ ಕೆಳಗೆ ಸನ್ಮಾನ್ಯ ಶ್ರೀ ಎಸ್ ಎಂ ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು ಆ ಪ್ರಶ್ನೆಯನ್ನು ಅವರಿಗೆ ಕೇಳಲಿಲ್ಲ ಮೊನ್ನೆ ತನಕ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದರು ಆಗ ಆ ಪ್ರಶ್ನೆ ಕೇಳಲಿಲ್ಲ ಆದರೆ, ನನಗೆ ಈ ಪ್ರಶ್ನೆ ಕೇಳಿದಾಗ ನಾನು ಹೇಳುತ್ತಿದ್ದೇನೆ ನಾನು ಮಾಡುತ್ತೇನೆಂದು ಹೇಳುತ್ತಿದ್ದೇನೆ ಅದಕ್ಕೋಸ್ಕರ, ಅವರೇಕೆ ಮಾಡಲಿಲ್ಲವೆಂಬುದು ನನಗೆ ಸಂಬಂಧವಿಲ್ಲ ನಿಮಗೆ ಸಂಬಂಧಪಟ್ಟದ್ದು ನೀವು ಅದೇ ಪಾರ್ಟಿಯಲ್ಲಿದ್ದೀರಿ, ಅವರೂ ಅದೇ ಪಾರ್ಟಿಯಲ್ಲಿದ್ದರು ಅದು ನಿಮಗೆ ಸಂಬಂಧಪಟ್ಟದ್ದು ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಾನು ನಾಳೆ ಮೀಟಿಂಗ್ ಕರೆಯುತ್ತಿದ್ದೇನೆ ನಿಮಗೆ ಏನೇನು ಬೇಕೋ ಎಲ್ಲವನ್ನೂ ಮಾಡುತ್ತೇನೆ ನಿಮ್ಮ ಕ್ಷೇತ್ರಕ್ಕೆ ಬರುತ್ತೇನೆ ಎಷ್ಟು fast ಆಗಿ ಆಗುತ್ತದೋ, ಅಷ್ಟು ಬೇಗ ಮುಗಿಸಿಕೊಡುತ್ತೇನೆ

ಶ್ರೀ ಬಿ ಶಿವರಾಮು ಯಾರೇ ಮಂತ್ರಿಯಾಗಲಿ, ಯಾರೇ ಮುಖ್ಯಮಂತ್ರಿಯಾಗಲಿ, ವ್ಯವಸ್ಥೆ ಏನಾಗಿದೆಯೆಂದು ಹೇಳುತ್ತಿದ್ದೇನೆ

ಶ್ರೀ ಕೆ ಎಸ್ ಈಶ್ವರಪ್ಪ ರಾಜಕೀಯ ಇಚ್ಛಾಶಕ್ತಿ ಬೇಕಾಗಿದೆ ನಾವು ಹೇಳಿದಂತೆ ಅಧಿಕಾರಿಗಳು ಕೇಳುತ್ತಾರೆ ನಾವು ಹೇಳಿದರೆ ಅಧಿಕಾರಿಗಳು ಮಾಡುತ್ತಾರೆ ಇಲ್ಲದಿದ್ದರೆ, ಇಲ್ಲವೆಂದು ಹೇಳುತ್ತಾರೆ

ಶ್ರೀ ಬಿ ಶಿವರಾಮು ಮೊದಲು ಗೊರೂರು Chief Engineer ಅವರನ್ನು suspend ಮಾಡಿ ಆಗ ಗೊತ್ತಾಗುತ್ತದೆ ಅವರು ಏಕೆ ರಿಪೋರ್ಟ್ ಕೊಡಲಿಲ್ಲ?

ಶ್ರೀ ಕೆ ಎಸ್ ಈಶ್ವರಪ್ಪ ರಾಜಕೀಯ ಇಚ್ಛಾಶಕ್ತಿಯ ಕೊರತೆಗೋಸ್ಕರ ಎಂದು ನಾನು ಹೇಳುತ್ತಿದ್ದೇನಲ್ಲ

ಶ್ರೀ ಬಿ ಶಿವರಾಮು ಈ systemನಲ್ಲಿ ಮೊದಲು ರಿಪೋರ್ಟ್ ಕೊಡಲಿ

ಶ್ರೀ ಕೆ ಎಸ್ ಈಶ್ವರಪ್ಪ No system

ಅಧ್ಯಕ್ಷರು ಇಬ್ಬರೂ ಈ ರೀತಿ ಮಾತನಾಡಿದರೆ ಯಾವುದೂ record ಗೆ ಹೋಗುವುದು ಬೇಡ

ಶ್ರೀ ಕೆ ಎಸ್ ಈಶ್ವರಪ್ಪ ದಯವಿಟ್ಟು, ನೀವು blame ಮಾಡುವುದಕ್ಕೆ ಸಾಧ್ಯವೇ ಇಲ್ಲ

ಶ್ರೀ ಬಿ ಶಿವರಾಮು ವ್ಯವಸ್ಥೆಯನ್ನು ಸರಿಪಡಿಸಬೇಕೆಂಬುದಷ್ಟೇ ನನ್ನ ಪ್ರಶ್ನೆಯಾಗಿದೆ

ಶ್ರೀ ಕೆ ಎಸ್ ಈಶ್ವರಪ್ಪ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಾಳೆ ಬನ್ನಿ, ಖಂಡಿತವಾಗಿಯೂ ಸರಿಪಡಿಸುತ್ತೇನೆ

ತುಂಗಭದ್ರಾ ನದಿಯಿಂದ ಕುಡಿಯುವ ನೀರನ್ನು ಪೂರೈಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 217(1577),
ಸದಸ್ಯರ ಹೆಸರು ಶ್ರೀ ಗಡ್ಡದೇವರಮರ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)
ಉತ್ತರಿಸುವ ಸಚಿವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ,
ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಶಿರಹಟ್ಟಿ ಮತಕ್ಷೇತ್ರದ ಬೆಳ್ಳಟ್ಟಿ ಹಾಗೂ ಸುತ್ತಮುತ್ತಲಿನ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ತುಂಗಭದ್ರಾ ನದಿಯಿಂದ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆಯು ಮಂಜೂರಾತಿಗಾಗಿ ಸರ್ಕಾರಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ಈ ಪ್ರಸ್ತಾವನೆಯ ಮಂಜೂರಾತಿಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ,

ಸದರಿ ಯೋಜನೆಯ ರೇಖಾ ಅಂದಾಜಿಗೆ ದಿನಾಂಕ 18–10–2006ರಂದು ನಡೆದ ರಾಜ್ಯ ಮಟ್ಟದ ಎಂಪವರ್ಡ್ ಸಮಿತಿ ಸಭೆ ಅನುಮೋದನೆ ನೀಡಿದೆ

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು,

ಸದರಿ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಅನುದಾನ ಬಿಡುಗಡೆಗೊಳಿಸಲು ಪ್ರಸ್ತಾಪಿಸಿದೆ ಕೇಂದ್ರದಿಂದ ಈ ಯೋಜನೆಗಾಗಿ ಅನುದಾನ ಬಿಡುಗಡೆಯಾದ ಕೂಡಲೇ ಅನುಷ್ಠಾನ ಸಲುವಾಗಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು

ಈ) ಇದರ ಅಂದಾಜು ಮೊತ್ತ ಎಷ್ಟು,

ರೂ 601 13 ಲಕ್ಷ

ಉ) ಇದರಲ್ಲಿ ಯಾವ ಯಾವ ಗ್ರಾಮಗಳು ಒಳಗೊಂಡಿವೆ (ಗ್ರಾಮಗಳ ವಿವರ ತಿಳಿಸುವುದು)?

ಈ ಯೋಜನೆಯ ವ್ಯಾಪ್ತಿಗೆ (1) ಇಟಗಿ (2) ಸಾಸಲವಾಡ (3) ಕೂಗನೂರ (4) ಅಂಕಲಿ (5) ತಂಗೋಡ (6) ನಾಗರಮಡುವು (7) ಗೋವನಕೊಪ್ಪ (8) ವಡವಿ (9) ಹೊಸೂರು (10) ಅಲಗಿನವಾಡ (11) ಬೆಳಗಟ್ಟಿ (12) ಬೆಳ್ಳಟ್ಟಿ (13) ನಾರಾಯಣಪುರ (14) ಬಿಜ್ಜೂರ (15) ಚಿಕ್ಕಸವಣೂರ ಗ್ರಾಮಗಳು ಬರುತ್ತವೆ

ಶ್ರೀ ಗಡ್ಡದೇವರ ಮಠ ಗಡ್ಡಯ್ಯ ಶಿವಮೂರ್ತಯ್ಯ ಸನ್ಮಾನ್ಯ ಅಧ್ಯಕ್ಷರೆ, ಕೊಟ್ಟಂಥ ಉತ್ತರ ತೃಪ್ತಿಕರವಾಗಿದೆ ಈ ದಿಸೆಯಲ್ಲಿ ಸನ್ಮಾನ್ಯ ರವೀಂದ್ರನಾಥ ಸಾಹೇಬರ ಬಗ್ಗೆ ನನಗಂತೂ ಬಹಳ ಗೌರವವಿದೆ ಅಂತೂ ಈ ಅವಸ್ಥೆಯೊಳಗಾದರೂ ಅವರು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಆದರೆ, ಇದು ನನ್ನ ಕರ್ತವ್ಯವೆಂದು ನಾನು ಭಾವಿಸಿಕೊಂಡಿದ್ದೇನೆ ಈಗ ಇದು ಎಷ್ಟು ತಡವಾಗುತ್ತದೋ, ಅಲ್ಲಿನ severity, seriousness ಅನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿಕೊಳ್ಳುತ್ತೇನೆ ನನ್ನ ತಾಲ್ಲೂಕಿನ ಪ್ರದೇಶದಲ್ಲಿ ಏನು ಸ್ಥಿತಿ ಇದೆಯೆಂದರೆ, ಪ್ರತಿ ವರ್ಷ ಮಳೆಗಾಲದಲ್ಲಿ ತೇಲುವ ಮೋಡಗಳನ್ನು ನೋಡುತ್ತೇವೆಯೇ ಹೊರತು, ಮೋಡಗಳ ನೆರಳಿನಲ್ಲಿ ಇರುತ್ತೇವೆಯೇ ಹೊರತು, ಮೋಡಗಳಿಂದ ನಮಗೆ ಮಳೆ ಇಲ್ಲವೇ ಇಲ್ಲ ಅಂತಹ ಒಂದು ಪರಿಸ್ಥಿತಿಯಲ್ಲಿ ಜನರಿಗಾಗಲಿ, ಜಾನುವಾರುಗಳಿಗಾಗಲಿ, ಕುಡಿಯುವ ನೀರಿಗೆ ಅತೀವವಾದ ತೊಂದರೆ ನಮ್ಮ ಪ್ರದೇಶದಲ್ಲಿದೆ ನನ್ನ ಮತ ಕ್ಷೇತ್ರದೊಳಗೆ ಸುಮಾರು 46 ಹಳ್ಳಿಗಳನ್ನು fluorosis villages ಎಂದು declare ಆಗಿದೆ ಆದರೆ, ದುರ್ದೈವ ತಾವು ನಮ್ಮ ಕ್ಷೇತ್ರಕ್ಕೆ ಒಮ್ಮೆ ಭೇಟಿ ಕೊಡಬೇಕು ಇಂತಹ ಸನ್ನಿವೇಶದಲ್ಲಿ ನಾವು ಕಾಣುವುದೇನೆಂದರೆ, ಸುಮಾರು 35 ವರ್ಷದ ಜನರನ್ನು ನೋಡಿದರೆ, ಇವರಿಗೆ 75 ವರ್ಷಗಳಾಗಿದೆಯೆಂದು ಕಾಣುತ್ತದೆ 35 ವರ್ಷಕ್ಕೇ ಆ ಪ್ರದೇಶದಲ್ಲಿನ ಜನರ ಹಲ್ಲು ಬಿದ್ದು ಹೋಗಿರುತ್ತದೆ! ಅಂತಹ ಒಂದು ಕಠಿಣವಾದ ಪರಿಸ್ಥಿತಿ ಇದೆ ಇನ್ನು ತಾಯಿಂದರ ಪರಿಸ್ಥಿತಿ ಹೇಗಿದೆಯೆಂದರೆ, ಅವರೆಷ್ಟೇ ಬಾಂಡಲೆ ತಿಕ್ಕಿದರೂ, ಆ ಬಾಂಡಲೆ ಬೆಳ್ಳಗಾಗುವುದಿಲ್ಲ! ಅಂತಹ ಒಂದು ಕಠಿಣವಾದ fluorosis content ಹೊಂದಿರುವ ನೀರನ್ನು ಇದುವರೆಗೂ ನಾವು ಅವರಿಗೆ ಕುಡಿಸುತ್ತಿದ್ದೇವೆ

ಯೋಜನೆಯೇನೋ ಇಲ್ಲಿಯವರೆಗೆ ಬಂದಿದೆ ಆದರೆ, ಅದಷ್ಟು ತೀವ್ರಗತಿಯಲ್ಲಿ ಆ ಯೋಜನೆಯನ್ನು ಜಾರಿಗೊಳಿಸುವ ವ್ಯವಸ್ಥೆ ಮಾಡಿ ಆ ಭಾಗದ ಜನರಿಗೆ ಆದಷ್ಟು ಶೀಘ್ರ ನೀರನ್ನು ಕೊಡಿಸುವಂಥ ವ್ಯವಸ್ಥೆಯನ್ನು ಮಾಡಿದರೆ ನಾನು ಅವರಿಗೆ ಧನ್ಯವಾದವನ್ನು ಹೇಳಲು ಇಚ್ಛಿಸುತ್ತೇನೆ ಎಷ್ಟು ದಿವಸಗಳೊಳಗೆ ನೀರನ್ನು ಕೊಡಿಸಬಹುದು ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ್ 18 10 2006ರ ರಾಜ್ಯ ಮಟ್ಟದ empowered committee ಯಿಂದ ಇದು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಹೋಗಿದೆ ಅದು ಬಂದ ತಕ್ಷಣವೇ ಆ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಯತ್ನ ಮಾಡುತ್ತೇವೆ

ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ ಅಲ್ಲಿ ಅತ್ಯಂತ ಕಠಿಣವಾದ ಪರಿಸ್ಥಿತಿ ಇದೆ ಬಹಳಷ್ಟು ಗ್ರಾಮೀಣ ಪ್ರದೇಶದಲ್ಲಿ ನೀರಿಲ್ಲದಂತಹ ಪ್ರಸಂಗವಾಗಿದೆ

ದನಕರುಗಳಿಗೂ ನೀರಿಲ್ಲದಿರುವ ಪರಿಸ್ಥಿತಿಯಾಗಿದೆ ಆದ್ದರಿಂದ ಅಲ್ಲಿಯವರೆಗೆ ಹೆಚ್ಚೆ ಬೋರ್‌ವೆಲ್‌ಗಳನ್ನು ಕೊರೆಸಿ ನೀರನ್ನು ಒದಗಿಸುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ ಆ ಸ್ಥಿತಿ ಇದ್ದರೆ ಆದಷ್ಟು ಬೇಗ ಬೋರ್‌ವೆಲ್‌ನ್ನು ಕೊರೆಸಲು ಹಣವನ್ನು ಮಂಜೂರು ಮಾಡಿಸಿಕೊಡುತ್ತೇವೆ

ಜಿಲ್ಲಾ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರಿ ವಕೀಲರನ್ನು ನೇಮಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **218(1396),**
ಸದಸ್ಯರ ಹೆಸರು **ಶ್ರೀ ಹಾಲಪ್ಪ ಹೆಚ್ (ಹೊಸನಗರ),**
ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)**

ಅ) ರಾಜ್ಯದ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳ ಮೇಲೆ ಸಾರ್ವಜನಿಕರು ವಿವಿಧ ಮೊಕದ್ದಮೆಗಳನ್ನು ಹೂಡಿದಾಗ, ಸ್ಥಳೀಯ ಸಂಸ್ಥೆಗಳ ಪರವಾಗಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ನಡೆಸಲು ಸರ್ಕಾರದ ವಕೀಲರನ್ನು ನೇಮಿಸಲಾಗುತ್ತಿದೆಯೇ,

ಜಿಲ್ಲಾ / ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸಂಸ್ಥೆಗಳಾದ್ದರಿಂದ ಸರ್ಕಾರದ ವಕೀಲರನ್ನು ನೇಮಿಸುತ್ತಿಲ್ಲ ಆದರೆ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೇ ತಮ್ಮಲ್ಲಿ ಲಭ್ಯವಿರುವ ನ್ಯಾಯವಾದಿಗಳ ಪ್ಯಾನಲ್‌ನಿಂದ ವಕೀಲರನ್ನು ನೇಮಕ ಮಾಡಲಾಗುತ್ತದೆ

ಆ) ನೇಮಿಸಿದ್ದಲ್ಲಿ, ಈ ಪಂಚಾಯತಿಗಳಲ್ಲಿ ವಿವಿಧ ಮೊಕದ್ದಮೆಗಳು ಬಾಕಿ ಇರುವ ಯಾವ ಯಾವ ಪ್ರಕರಣಗಳು ಯಾವ ಯಾವ ಹಂತದಲ್ಲಿದೆ,

ಮೂರು ಹಂತದ ಪಂ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳು ವಿವಿಧ ನ್ಯಾಯಾಲಯಗಳಲ್ಲಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ

ಇ) ನೇಮಿಸದಿದ್ದಲ್ಲಿ, ಸರ್ಕಾರಿ ವಕೀಲರನ್ನು ಯಾವಾಗ ನೇಮಿಸಲಾಗುವುದು ಸರ್ಕಾರವನ್ನು ಪ್ರತಿವಾದಿಯನ್ನಾಗಿ ಮಾಡಿದ ಪ್ರಕರಣಗಳಲ್ಲಿ ಸರ್ಕಾರಿ ವಕೀಲರನ್ನು ನೇಮಿಸಲಾಗುವುದು

ಈ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ರಿಪ್ಪನಪೇಟೆ ಗ್ರಾಮ ಪಂಚಾಯತಿ ಬರುವ ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂ 43ಕ್ಕೆ ಹೈ ಕೋರ್ಟ್‌ರಿಟ್ ಪಿಟಿಷನ್ ನಂ ಡಬ್ಲ್ಯೂಪಿ 22999 05 ಹಾಗೂ 17199 05 ಮತ್ತು 545 06

ಸಂಬಂಧಿಸಿದಂತೆ ಕಳೆದ ಒಂದು ವರ್ಷದಿಂದ ವಕೀಲರನ್ನು ನೇಮಿಸದಿರಲು ಕಾರಣವೇನು?

ಈ ಪ್ರಕರಣದಲ್ಲಿ ಸರ್ಕಾರವು ಮೊದಲನೇ ಪ್ರತಿವಾದಿಯಾಗಿದ್ದು, ಸರ್ಕಾರದ ಮಟ್ಟದಲ್ಲಿ ಈಗಾಗಲೇ ಸರ್ಕಾರಿ ವಕೀಲರನ್ನು ನೇಮಕ ಮಾಡಿ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಡೆಸಲು ಕ್ರಮ ವಹಿಸಲಾಗಿದೆ

ಶ್ರೀ ಹೆಚ್ ಹಾಲಪ್ಪ ಉತ್ತರವನ್ನು ಒದಗಿಸಿದ್ದಾರೆ ನಾನು ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ specific ಆಗಿ ಕೇಳಿದ್ದೆ ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಕೇಸ್ ಇದೆ ಇದರಲ್ಲಿ ಸರ್ಕಾರವೆ first party ಇದಕ್ಕೆ ಸರ್ಕಾರದಿಂದ ವಕೀಲರನ್ನು ನೇಮಕ ಮಾಡಿದ್ದೀರಾ ಎಂದು ಕೇಳಿದೆ ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ ಆದರೆ, ಕಳೆದ 2 ವರ್ಷಗಳಿಂದ ಆ ವಕೀಲರು ಹೈಕೋರ್ಟ್‌ಗೆ ಹೋಗಿಲ್ಲವೆಂದು ಮಾಹಿತಿ ಇದೆ ನಾನು ಈ ಪ್ರಶ್ನೆಯನ್ನು ಹಾಕುವವರೆಗೂ ವಕೀಲರು attend ಮಾಡಿರಲಿಲ್ಲ ಏಕೆ ಹಾಜರಾಗಿಲ್ಲ? ಅದರ ಆಸಕ್ತಿಯೇನು? ಊರಿನ ಮಧ್ಯದಲ್ಲಿನ 3 ಎಕರೆ ಜಮೀನಿಗೆ ಇದು ಸಬಂಧಪಟ್ಟಿದ್ದು ಏಕೆ ಇದು delay ಆಗಿದೆಯೆಂದು ಹೇಳಬೇಕು ಆ ವಕೀಲರು ಇನ್ನೂ ವಕಾಲತ್ತೇ ಹಾಕಿಲ್ಲ, ಕಳೆದ 2 ವರ್ಷದಿಂದ ಏಕೆ ಕೋರ್ಟ್‌ಗೆ ಹಾಜರಾಗಿಲ್ಲ? ಆ ವಕೀಲರ ಹೆಸರು ಮತ್ತು ಅವರು ಯಾವಾಗ ವಕಾಲತ್ತನ್ನು ಹಾಕಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಬೇಕು

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ಸಕ್ಕರೆ ಸಚಿವರು) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ವಕೀಲರನ್ನು ನೇಮಕ ಮಾಡಲು ಅವರಿಗೇ ಅಧಿಕಾರವಿದೆ ಅವರು ಸರಿಯಾದ ವಕೀಲರನ್ನಿಟ್ಟು ಕೇಸನ್ನು ನಡೆಸತಕ್ಕದ್ದು ಅವರಿಗೆ ಬಿಟ್ಟದ್ದು ಇವರು ಹೊಸನಗರ ತಾಲ್ಲೂಕಿನ ರಿಪ್ಪನಪೇಟೆ ವಿಷಯದಲ್ಲಿ ಕೇಳುತ್ತಿದ್ದಾರೆ ಅವರು ವಕೀಲರನ್ನಿಟ್ಟು ಮಾಡಿದ್ದರೆ ಸರಿಯಾಗಿರುತ್ತಿತ್ತು ಮುಂದಿನ ಸಲ ಅವರೇನು ಸಲಹೆಯನ್ನು ಕೊಡುತ್ತಾರೆ, ಅದರಂತೆ ಮಾಡಲು ಪ್ರಯತ್ನ ಪಡುತ್ತೇವೆ

ಶ್ರೀ ಹೆಚ್ ಹಾಲಪ್ಪ ಇವರು ಈ ಹಿಂದೆ ವಕೀಲರನ್ನು ಇಡಲೇ ಇಲ್ಲ ನಾವೇ ಹೋಗಿ ನ್ಯಾಯಾಲಯದಲ್ಲಿ ವಾದ ಮಾಡಿದ್ದೇವೆ ಹೈಕೋರ್ಟ್‌ನಲ್ಲಿ ಸರ್ಕಾರವನ್ನು party ಮಾಡಿದ್ದಾರೆ 2 ವರ್ಷವಾಗಿದೆ 2 ವರ್ಷವಾಗಿದ್ದರೂ ನೀವು ವಕೀಲರನ್ನು ನೇಮಕ ಮಾಡಿಲ್ಲವೆಂದರೆ ಸಾರ್ವಜನಿಕರ ಆಸ್ತಿ ಹೋಗುತ್ತಿರುವುದೇ? ಇದಕ್ಕೆ ಆಸಕ್ತಿ ಇಲ್ಲವೇ? ಅಧಿಕಾರಿಗಳೇಕೆ ಇನ್ನೂ ನೇಮಿಸಿಲ್ಲ? ತೊಂದರೆಯೇನು?

ಶ್ರೀ **ಎಸ್ ಎ ರವೀಂದ್ರನಾಥ್** ಪಂಚಾಯಿತಿಯವರೇನು ಇದಕ್ಕೆ ಜವಾಬ್ದಾರರಿರುತ್ತಾರೆ ಅವರಿಂದ ವಕೀಲರಿಗೆ ಸರಿಯಾದ ಮಾಹಿತಿಯನ್ನು ಕೊಡುವ ಕೆಲಸವಾಗಬೇಕು ಅದನ್ನು ಅವರು ಮಾಡದಿದ್ದರೆ ರಾಜ್ಯದವರು ಮಾಡಲು ಸಾಧ್ಯವಿಲ್ಲ ಅದನ್ನು ಅವರು ಮಾಡಬೇಕು ಅದನ್ನು ಮುಂದಿನ ದಿನಗಳಲ್ಲಿ ಸರಿ ಮಾಡುವುದನ್ನು ಮಾಡುತ್ತೇವೆ

2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 219(1566)
ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)
ಉತ್ತರಿಸುವ ಸಚಿವರ ಹೆಸರು ಶ್ರೀ ಡಿ ಟಿ ಜಯಕುಮಾರ(ವಸತಿ ಸಚಿವರು)

ಅ) ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ (ಅಂಬೇಡ್ಕರ್, ಆಶ್ರಯ, ಇಂದಿರಾ ಆವಾಸ್) ಕಡುಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಹಾಕಿಕೊಂಡಿದ್ದ ಗುರಿ ಏನು?

2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 3,40,560 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 53,299 ಮನೆಗಳ ಗುರಿಯನ್ನು ನೀಡಲಾಗಿದೆ ಮತ್ತು ನಗರ ಆಶ್ರಯ ಹಾಗೂ ಗ್ರಾಮೀಣ ಅಂಬೇಡ್ಕರ್ ಯೋಜನೆಗಳಿಗೆ ಗುರಿಯನ್ನು ನಿಗದಿಪಡಿಸಿರುವುದಿಲ್ಲ

ಆ) ಸರ್ಕಾರ ಹಾಕಿಕೊಂಡ ಗುರಿಗೆ ಅನುಗುಣವಾಗಿ ಸಾಧಿಸಲಾಗಿರುವ ಪ್ರಗತಿ ಏನು? (ಜಿಲ್ಲಾವಾರು ಮಾಹಿತಿ ನೀಡುವುದು)

2006–07ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಜಿಲ್ಲಾವಾರು ಪ್ರಗತಿಯನ್ನು ಅನುಬಂಧ "ಅ" ದಲ್ಲಿ ನೀಡಲಾಗಿದೆ

2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) ಸರ್ಕಾರ ಹಾಕಿಕೊಂಡಿರುವ ಗುರಿಯಂತೆ ಸಾಧಿಸಲಾಗಿರುವ ಪ್ರಗತಿಗಳನ್ನು ತುಲನೆ ಮಾಡಿದಾಗ ಈ ಯೋಜನೆ ಆಶಾದಾಯಕವೆಂಬಂತಾಗಿದೆಯೆ?

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2006–07ನೇ ಸಾಲಿನಲ್ಲಿ ನೀಡಲಾದ ಒಟ್ಟು 53299 ಮನೆಗಳ ಗುರಿಗೆ ಎದುರಾಗಿ 39006 ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ ಹಾಗೂ 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯ ಪಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ

ಈ) ರಾಜ್ಯದಲ್ಲಿ ಸರ್ಕಾರ ಹಾಕಿಕೊಂಡ ವಸತಿ ಯೋಜನೆಗಳ ಗುರಿಯನ್ನು ಸಾಧಿಸದೇ ಇದ್ದಲ್ಲಿ ಅದಕ್ಕೆ ಸಕಾರಣಗಳೇನು?

ಇಂದಿರಾ ಆವಾಸ್ ಯೋಜನೆಯಡಿ ಗುರಿಯನ್ನು ಸಾಧಿಸಲಾಗುವುದು 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲು 31 03 2007ರ ವರಗೆ ಕಾಲವಕಾಶ ನೀಡಲಾಗಿರುತ್ತದೆ

ಉ) ಹಾಗಾದರೆ, ಈ ಬಗ್ಗೆ ಮುಂದಿನ ವರ್ಷ ಹಾಕಿಕೊಳ್ಳುವ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲು ವಸತಿ ಯೋಜನೆಗಳಲ್ಲಿ ಯಾವ ಮಾರ್ಪಾಡುಗಳನ್ನು ತರಲಾಗುವುದು?

ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಗತಿಯನ್ನು ಸಾಧಿಸಲಾಗುವುದು

ಗ್ರಾಮ ಪಂಚಾಯತಿವಾರು ಪ್ರತಿವಾರ ನಿಗಮದ ವೆಬ್‌ಸೈಟಿನಲ್ಲಿ ಪ್ರಗತಿ ವರದಿಯನ್ನು ನಮೂದಿಸಲು ಸೂಚಿಸಲಾಗಿದ್ದು, ಸಾಧಿಸಿದ ಪ್ರಗತಿಗೆ ಅನುಗುಣವಾಗಿ ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ ಇದರಿಂದಾಗಿ ಮುಂದಿನ ದಿನಗಳಲ್ಲಿ ಉತ್ತಮ ಪ್ರಗತಿ ಸಾಧಿಸಲು ಅನುಕೂಲವಾಗುತ್ತದೆ

ಪ್ರಗತಿಯನ್ನು ಚುರುಕುಗೊಳಿಸಲು ಈಗಾಗಲೇ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಹಾಗೂ ಪ್ರತಿ ತಾಲ್ಲೂಕಿಗೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ವಸತಿ ಯೋಜನೆಗಳ ಮೇಲ್ವಿಚರಣೆಗಾಗಿ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು ಪ್ರಗತಿಯನ್ನು ಉತ್ತಮಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿರುತ್ತದೆ

ಸರ್ಕಾರದಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಜಿಲ್ಲೆಗೆ ನಿಗದಿಪಡಿಸಲಾದ ಗುರಿಯನ್ನು ಸಾಧಿಸಲು ಜವಾಬ್ದಾರನ್ನಾಗಿ ಮಾಡಲಾಗಿದೆ ಮತ್ತು ಪ್ರತಿವಾರ ಜಿಲ್ಲೆಯಲ್ಲಿ ಸಾಧಿಸಲಾದ ಪ್ರಗತಿಯನ್ನು ಪರಿಶೀಲಿಸಿ ಪ್ರಗತಿಯನ್ನು ಉತ್ತಮಗೊಳಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ

IAY New Construction of Houses upto 28.02.2007			
Sl No	Name of District	Target	Houses completed
1	2	3	4
1	Bagalkot	1795	1063
2	BangaloreRural	1637	1485
3	BangaloreUrban	782	438
4	Belgaum	6280	3052
5	Bellary	4339	2824
6	Bidar	1249	1277
7	Bijapur	1841	1084
8	Chamarajanagar	1089	714
9	Chikmagalur	1161	718
10	Chitradurga	2836	2008
11	Dakshina Kannada	545	662
12	Davanagere	1952	1453
13	Dharwad	1182	815
14	Gadag	981	325
15	Gulbarga	3100	2346
16	Hassan	1007	1053
17	Haveri	1368	1031
18	Kodagu	494	430
19	Kolar	1874	1814
20	Koppal	2580	991
21	Mandya	1115	1124
22	Mysore	1782	1740
23	Raichur	5717	5270
24	Shimoga	1661	848
25	Tumkur	3056	3377
26	Udupi	592	314

27	Uttara Kannada	1284	750
	Grand Total	53299	39006

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಉತ್ತರವನ್ನೊದಗಿಸಿದ್ದಾರೆ ಉತ್ತರವನ್ನು ಅವರೇ ನೋಡಬೇಕು ಏಕೆಂದರೆ, ಹೋದ ವರ್ಷದ ಆಯವ್ಯಯದಲ್ಲಿ ತಾವೇ 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಿರಿ 3 ಲಕ್ಷ ಗುರಿಯನ್ನು ಇಟ್ಟುಕೊಂಡು, ಅದೂ ಇಂದಿರಾ ಆವಾಜ್‌ನಲ್ಲಿ 39 ಸಾವಿರ ಮನೆಗಳನ್ನು ಮಾತ್ರ ಮಾಡಿದಿರಿ ಅಂಬೇಡ್ಕರ್ ಯೋಜನೆಯಲ್ಲಿ ಪ್ರಗತಿ ಇಲ್ಲ ಏನಾದರು ಹೇಳಿದರೆ ರಾಜಕೀಯ ಇಚ್ಚಾಶಕ್ತಿಯೆಂದು ಮಾನ್ಯ ಈಶ್ವರಪ್ಪನವರು ಹೇಳುತ್ತಾರೆ ಅದಕ್ಕೆ ಇಚ್ಚಾಶಕ್ತಿ ಇದೆ ಇದಕ್ಕೇಕೆ ಇಲ್ಲ ಎಂಬ ಬಗ್ಗೆ ನಾನು ಕೇಳಬೇಕಾಗಿದೆ

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು) ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಅರ್ಥವಿದೆ ಏಕೆಂದರೆ 2005–06ನೇ ಸಾಲಿನಲ್ಲೇನು ಗುರಿ ನಿಗದಿಪಡಿಸಲಾಗಿತ್ತು, ಅದನ್ನು ಮಾಡಲು ಆಗಲಿಲ್ಲ ಕಾರಣ, ಶಾಸಕರು ಅದರ ಅಧ್ಯಕ್ಷರಾಗಬೇಕೋ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯರು ಅಧ್ಯಕ್ಷರಾಗಬೇಕೋ ಎಂಬ ಬಗ್ಗೆ ಇದೇ ಸದನದಲ್ಲಿ 6 ತಿಂಗಳ ಹಿಂದೆ ಚರ್ಚೆಯಾಗಿದೆ ಜೊತೆಗೆ 14 ಅಂಕಗಳು ಎಂಬ ನಿಗದಿ ಬಂದಿದ್ದರಿಂದ 9 ತಿಂಗಳ ಕಾಲ ಯಾವುದೇ ಫಲಾನುಭವಿಗಳನ್ನು ಆಯ್ಕೆಮಾಡಲು ಆಗಲಿಲ್ಲ 2005–06ನೇ ಸಾಲಿನದ್ದು ಈಗ carry over ಆಗಿದೆ ಪ್ರತಿ ವರ್ಷವೂ carry over ಆಗುತ್ತದೆ ಆ ರೀತಿ carry over ಪ್ರಕಾರ 2005–06ರಲ್ಲಿ 2 ಲಕ್ಷದ 26 ಸಾವಿರ ಗುರಿ ಇತ್ತು 2006–07ಕ್ಕೆ ಗುರಿ 3 ಲಕ್ಷದ 20 ಸಾವಿರ ಆಯಿತು ಇದುವರೆಗಿನ ಪ್ರಗತಿ 1 ಲಕ್ಷದ 35 ಸಾವಿರ ಆಶ್ರಯ ಮನೆಗಳದ್ದು, ಇಂದಿರಾ ಆವಾಸ್‌ನಲ್ಲಿ 39 ಸಾವಿರ ಮಾರ್ಚ್‌ನೊಳಗೆ 1 ಲಕ್ಷದ 25 ಸಾವಿರ ಮನೆಗಳನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ ಇದರ ಜೊತೆಗೆ ಈ ಸಲ ಒಂದು ಗ್ರಾಮ ಪಂಚಾಯಿತಿಗೆ ಹೆಚ್ಚುವರಿಯಾಗಿ 60 ಮನೆಗಳಂತೆ 5652 ಗ್ರಾಮಪಂಚಾಯಿತಿಗಳಿಗೆ 3 ಲಕ್ಷದ 40 ಸಾವಿರ ಮನೆಗಳನ್ನು ಹೆಚ್ಚುವರಿ ಮಾಡಿ, ಈಗಾಗಲೆ ಜನವರಿ 31, last date ಎಂದು ಗುರುತುಪಡಿಸಿ ಈ 60 ಮನೆಗಳ ಫಲಾನುಭವಿಗಳನ್ನು ಆಯ್ಕೆಮಾಡುವುದು, ಗ್ರಾಮಪಂಚಾಯಿತಿಗಳು ಎಂದು ಗುರಿಯನ್ನು ಮಾಡಿ ಇಟ್ಟುಕೊಂಡಿದ್ದೇವೆ ಕೆಲವು ಜಿಲ್ಲಾಧಿಕಾರಿಗಳು time ಕೇಳಿದ್ದರಿಂದ, ಈ 60 ಮನೆಗಳ ಗುರಿ ಕೊಟ್ಟರೆ, ಅದರ ಮೊದಲನೆಯ ಕಂತನ್ನು ಬಿಡುಗಡೆ ಮಾಡಲು, ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿದ್ದೇವೆ ಮಾನ್ಯ ಯಡಿಯೂರಪ್ಪನವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ ಮೊಟ್ಟಮೊದಲನೆಯ ಬಾರಿಗೆ ಆಶ್ರಯ ಸಮಿತಿಗೆ 600 ಕೋಟಿ ರೂಪಾಯಿ

ಹಣವನ್ನು ಕೊಟ್ಟಿದ್ದಾರೆ "ನೀವು ಎಲ್ಲವನ್ನು ಖರ್ಚು ಮಾಡಿ, ಬೇಕಾದರೆ ಇನ್ನೂ 300 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ" ಎಂದು ಅವರು ಹೇಳಿದ್ದಾರೆ ಆದ್ದರಿಂದ ಮೊದಲನೆಯ ಕಂತಿನಲ್ಲಿ ಹಾವೇರಿ ಜಿಲ್ಲೆಯೊಂದನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಈಗ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಆಯ್ಕೆ ಪ್ರಕ್ರಿಯೆಗಳೆಲ್ಲಾ ಮುಗಿದು registration ಆದ ಕೂಡಲೇ ಹಣ ಬಿಡುಗಡೆ ಮಾಡುತ್ತೇವೆ ಈಗ ಹಣದ ಕೊರತೆ ಇಲ್ಲ ಆದ್ದರಿಂದ ಈ ಸಲ ನಾವು ಗುರಿಯನ್ನು ಸಾಧನೆ ಮಾಡಲು ಸಾಧ್ಯವಾಗುತ್ತದೆ

ಶ್ರೀ ಶಿವಾನಂದ ಎಸ್ ಪಾಟೀಲ್ ಇವರು ಹೇಳುವ ಉತ್ತರಕ್ಕೆ ತಾತ್ಪರ್ಯವೇ ಇಲ್ಲ ಏಕೆಂದರೆ, ನನ್ನ ಬಿಜಾಪುರ ಜಿಲ್ಲೆಯಲ್ಲಿ 12 ಸಾವಿರ ಮನೆಗಳ ಗುರಿ ಇದೆ ಅದರಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ

ಶ್ರೀ ಡಿ ಟಿ ಜಯಕುಮಾರ್ ನೀವು ಫಲಾನುಭವಿಗಳ ಆಯ್ಕೆಯನ್ನೇ ಮಾಡಿಕೊಟ್ಟಿಲ್ಲವಲ್ಲಾ

ಶ್ರೀ ಶಿವಾನಂದ ಎಸ್ ಪಾಟೀಲ್ ಅದನ್ನು ಮಾಡುವವರು ನಾವಲ್ಲ ನಮಗೆ ಅಧಿಕಾರವನ್ನೇ ಕೊಟ್ಟಿಲ್ಲವಲ್ಲಾ ಅದನ್ನು ಗ್ರಾಮಪಂಚಾಯಿತಿಗೆ ಕೊಟ್ಟೇ ಈ ರೀತಿಯ ಹಣೆಯಬರಹವಾಗಿರುವುದು

ಶ್ರೀ ಆರ್ ವಿ ದೇಶ್‌ಪಾಂಡೆ 2005-06ನೇ ಸಾಲಿನಲ್ಲಿ ಮನೆಗಳ ಆಯ್ಕೆ ವಿಚಾರದಲ್ಲಿ ವಿಳಂಬವಾಯಿತು 2006-07ರ ಜನವರಿಯಲ್ಲಿ ಪ್ರತಿ ಪಂಚಾಯಿತಿಗೆ 60 ಮನೆಗಳನ್ನು ಕೊಟ್ಟಿದ್ದು ನಿಜ ಮಾನ್ಯ ಧರ್ಮ್‌ಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ 2005-06ರಲ್ಲಿ ಪಂಚಾಯಿತಿಗೆ 40 ಮನೆ ರಿಲೀಸ್ ಆಗಿದ್ದು ನಿಜ ಪ್ರಾಮಾಣಿಕವಾಗಿ ಹೇಳಿ, 2005-06ನೇ ಸಾಲಿನಲ್ಲಿ ಪ್ರತಿ ಪಂಚಾಯಿತಿಗೆ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರಿ, ಅನಂತರ ಇವತ್ತಿನವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಹೇಳಿ 2006-07ರಲ್ಲಿ ನೀವು ಒಂದು ರೂಪಾಯಿಯನ್ನೂ ಕೊಟ್ಟಿಲ್ಲ 2005-06ಕ್ಕೆ against 40 houses ಒಂದು ಲಕ್ಷ ರೂಪಾಯಿ ಕೊಟ್ಟಿದ್ದೀರಿ ಇದರಿಂದ ಯಾವ ಮನೆಯನ್ನು ಕಟ್ಟಲು ಆಗುತ್ತದೆ? 2006-07ರಲ್ಲಿ 60 ಮನೆಗಳನ್ನು ಕೊಟ್ಟಿರಿ ಆದರೆ, ಒಂದು ಪೈಸೆ ಹಣವನ್ನು ಕೊಟ್ಟಿಲ್ಲ Check up ಮಾಡಿ ಹೇಳಿ That is the reason

ಶ್ರೀ ಡಿ ಟಿ ಜಯಕುಮಾರ್ ಹಿಂದೆ ಒಂದು ಕಾಂಪೊನೆಂಟ್‌ಗೆ ಒಂದು ಫಲಾನುಭವಿಗೆ 20 ಸಾವಿರ ರೂಪಾಯಿ ಕೊಟ್ಟುಬಿಡುತ್ತಿದ್ದಿರಿ ನಾವು ಅದನ್ನೀಗ 25 ಸಾವಿರ ಮಾಡಿದ್ದೇವೆ ನಿಮ್ಮ E O ಗೆ ಗೊತ್ತಿಲ್ಲವೆಂದು ಕಾಣುತ್ತದೆ ಅವನು ಪ್ರತಿ Saturday website ನಲ್ಲಿ up date ಮಾಡಬೇಕು ಅವನು figure ಕೊಟ್ಟರೆ ಸೋಮವಾರದ ದಿನವೇ ಹಣವನ್ನು ಬಿಡುಗಡೆ ಮಾಡುತ್ತೇವೆ ಇದುವರೆಗೆ ಎಲ್ಲೂ ಬಾಕಿ ಇಲ್ಲ ಯಾರು register ಮಾಡಿಸಿ Saturday up date ಮಾಡುತ್ತಾರೆ

ಅವರಿಗೆ Monday ದಿವಸ ಹಣವನ್ನು ಬಿಡುಗಡೆ ಮಾಡುತ್ತೇವೆ ಇದುವರೆಗೆ ಯಾವ E O ಕೂಡ ಹಣದ ಕೊರತೆ ಇದೆಯೆಂದು ಹೇಳಿಲ್ಲ

ಶ್ರೀ ಆರ್ ವಿ ದೇಶ್‌ಪಾಂಡೆ ನಾನೇ, ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ರವರ ಹತ್ತಿರ ಮಾತನಾಡಿದ್ದೇನೆ ಸರ್ಕಾರದ ಗಮನಕ್ಕೆ ತಂದಿದ್ದೇನೆ ಬೇಕಾದರೆ ನಿಮಗೆ ಇನ್ನೂ record ನ್ನು ತಂದು ಕೊಡುತ್ತೇನೆ

ಶ್ರೀ ಡಿ ಟಿ ಜಯಕುಮಾರ್ ಆ ರೀತಿ ಏನಾದರೂ ದಾಖಲೆ ಇದ್ದರೆ ಕಳುಹಿಸಿಕೊಡಿ ನಾನು ತಕ್ಷಣ ಹಣವನ್ನು ಬಿಡುಗಡೆ ಮಾಡಿಸುತ್ತೇನೆ

ಶ್ರೀ ಎಂ ಟಿ ಕೃಷ್ಣಪ್ಪ 2005-06ರಲ್ಲಿ ಏನು 40 ಮನೆಗಳನ್ನು ಕೊಟ್ಟಿದ್ದರು ಅದರ ಆಯ್ಕೆ ಪಟ್ಟಿಯನ್ನು ಕೊಟ್ಟಿದ್ದರೂ ಇದುವರೆಗೆ ಕೇವಲ 2 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ ಮಂತ್ರಿಯವರು ಹಣದ ಕೊರತೆ ಇಲ್ಲವೆಂದು ಇವತ್ತು ಸುಳ್ಳು ಉತ್ತರವನ್ನು ಕೊಡುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು ಎಲ್ಲರೂ ಎದ್ದುನಿಂತು ಮಾತನಾಡಿದರೆ ಅವರು ಉತ್ತರವನ್ನು ಕೊಡಲು ಸಾಧ್ಯವಾಗುವುದಿಲ್ಲ ಅವರು ಉತ್ತರವನ್ನು ಹೇಳಿದ್ದಾರೆ ಏನಾದರು ಹೆಚ್ಚಿನ ವಿವರಗಳಿದ್ದರೆ, ಅವರ ಹತ್ತಿರ ಹೋಗಿ ಮಾತನಾಡಿ ಈಗ ಮಾನ್ಯ ಪ್ರಕಾಶ್ ಖಂಡ್ರೆಯವರೆ, ತಮ್ಮ ಪ್ರಶ್ನೆಯನ್ನು ಕೇಳಿ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಚಾರ

ಅಧ್ಯಕ್ಷರು ಹಿರಿಯ ಸದಸ್ಯರು, ದಯಮಾಡಿ ಕುಳಿತುಕೊಳ್ಳಬೇಕು

(ಗೊಂದಲ)

ಶ್ರೀ ಡಿ ಟಿ ಜಯಕುಮಾರ್ ಜನವರಿ 31ಕ್ಕೆ ಸಮಯವನ್ನು ನಿಗದಿ ಮಾಡಲಾಗಿತ್ತು ಅದನ್ನು ಈಗ ಮಾರ್ಚ್ 31ರವರೆಗೆ ವಿಸ್ತರಣೆ ಮಾಡಲಾಗಿದೆ ಫಲಾನುಭವಿಗಳ ಆಯ್ಕೆಯ ವಿಚಾರದಲ್ಲಿ ಮೋಸ, ಅನ್ಯಾಯವಾಗುತ್ತಿದೆ 60 ಮನೆ ಕೊಟ್ಟರೆ ಅದನ್ನೇನೋ ಅವರ ಪಿತ್ರಾರ್ಜಿತ ಸ್ವತ್ತು ಎಂಬಂತೆ 20 ಜನ member ಇದ್ದರೆ, ಎಲ್ಲರೂ ಮೂರುಮೂರು ಮನೆಗಳನ್ನು ಹಂಚಿಕೊಂಡುಬಿಡುತ್ತಾರೆ ಅವರ ನೆಂಟರು, ಬಂಧುಗಳಿಗೆ ಕೊಟ್ಟುಕೊಳ್ಳುತ್ತಿದ್ದಾರೆ 2003ರ ಸಮೀಕ್ಷೆಯ ಪ್ರಕಾರ ಹದಿಮೂರೂವರೆ ಲಕ್ಷ ನಿವೇಶನ ರಹಿತ, 25 ಲಕ್ಷ ಕುಟುಂಬದವರು ಮನೆ ರಹಿತ ಎಂದು ಪಟ್ಟಿ ಮಾಡಿದ್ದೇವೆ ಆ ಪಟ್ಟಿಯಲ್ಲಿರುವವರನ್ನು ಯಾರೂ ಆಯ್ಕೆ ಮಾಡುವುದಿಲ್ಲ ಅವರ ನೆಂಟರಿಗೆ, ಅವರ ಬಂಧು ಬಳಗದವರಿಗೆ ಕೊಡಲು ಅವಕಾಶವಿಲ್ಲದಿದ್ದರೂ ಅವ್ಯವಹಾರದಲ್ಲಿ ಕೊಡುತ್ತಿದ್ದಾರೆ ಇದರಿಂದ demoralise ಆಗುತ್ತಿದೆ ಅದಕ್ಕೋಸ್ಕರವೆ ಎಂ ಎಲ್ ಎ ಗಳೇ ಆಯ್ಕೆ ಮಾಡಬೇಕಾಗುತ್ತದೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – ಇದು ಯಾವ ಮಟ್ಟಕ್ಕೆ ನಿಮ್ಮ ಸರ್ಕಾರ ಹೋಗಿದೆ ಎಂಬುದನ್ನು ತೋರಿಸುತ್ತದೆ Take action against them Who has stopped you from taking action?

(ಗೊಂದಲ)

ಅಧ್ಯಕ್ಷರು – ಮಾನ್ಯ ಖಂಡ್ರೆಯವರೆ, ದಯಮಾಡಿ ನಿಮ್ಮ ಪ್ರಶ್ನೆ ಕೇಳಿ

(ಗೊಂದಲ)

ಮಾನ್ಯ ದೇಶಪಾಂಡೆಯವರೆ, ಈ ಬಗ್ಗೆ ತಾವು ನನಗೊಂದು ಸೂಚನೆ ಕೊಡಿ ನಾನು ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

ಬೀದರ್ ಜಿಲ್ಲೆಯಲ್ಲಿ ಈ ವರ್ಷ 2006–07ರಲ್ಲಿ ಒಟ್ಟು ಇದ್ದಂತಹ ಕಬ್ಬಿನ ಪ್ರಮಾಣವೆಷ್ಟು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **220(1588)**
ಸದಸ್ಯರ ಹೆಸರು **ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ)**
ಉತ್ತರಿಸುವ ದಿನಾಂಕ **21 03 2007**
ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಈ ವರ್ಷ 2006–07ರಲ್ಲಿ ಒಟ್ಟು ಇದ್ದಂತಹ ಕಬ್ಬಿನ ಪ್ರಮಾಣವೆಷ್ಟು,

ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರ ವರದಿಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ 22 59 ಲಕ್ಷ ಟನ್ ಕಬ್ಬಿನ ಉತ್ಪಾದನೆ ಇದೆ

ಆ) ಇಲ್ಲಿಯವರೆಗೆ ಸಕ್ಕರೆ ಕಾರ್ಖಾನೆಗಳು ಎಷ್ಟು ಟನ್ ಕಬ್ಬನ್ನು ಅರೆಯಲಾಗಿದೆ,

ಬೀದರ್ ಜಿಲ್ಲೆಯಲ್ಲಿನ 3 ಸಹಕಾರ ಮತ್ತು 1 ಖಾಸಗಿ ಸಕ್ಕರೆ ಕಾರ್ಖಾನೆಗಳು ದಿನಾಂಕ 14 03 2007ರವರೆಗೆ ಕಬ್ಬು ನುರಿಸಿದ ವಿವರ ಈ ಕೆಳಕಂಡಂತಿದೆ

(ಮೆ ಟನ್‌ಗಳಲ್ಲಿ)

ಕಾರ್ಖಾನೆಯ ಹೆಸರು	ನುರಿಸುವ ಗುರಿ	ನುರಿಸಿದ ಕಬ್ಬು	ನುರಿಸಲು ಬಾಕಿಯಿರುವ ಕಬ್ಬು
ಬೀದರ್ ಸಸಕಾ	7 00	4 16	2 84

ನಾರಂಜಾ ಸಸಕಾ	6 00	3 93	2 07
ಮಹಾತ್ಮಾಗಾಂದಿ ಸಸಕಾ	4 00	2 49	1 51
ಭವಾನಿ ಶುಗರ್ಸ್	1 00	0 53	0 47
ಒಟ್ಟು	18 00	11 11	6 89

ಇ) ಈ ಸಾಲಿನಲ್ಲಿ ಇನ್ನೂ ಎಷ್ಟು ಟನ್ ಕಬ್ಬನ್ನು ಅರೆಯಲಾಗುವುದು,

ಈ ಸಾಲಿನಲ್ಲಿ ಇನ್ನೂ ಸುಮಾರು 6 89 ಲಕ್ಷ ಟನ್ ಕಬ್ಬನ್ನು ಅರೆಯುವ ಅಂದಾಜಿದೆ

ಈ) ಈ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯದಿರುವುದರಿಂದ ಎಷ್ಟು ಟನ್ ಕಬ್ಬು ಬಾಕಿ ಉಳಿದಿದೆ,

ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಸುಮಾರು 22 59 ಲಕ್ಷ ಟನ್ ಕಬ್ಬು ಉತ್ಪಾದನೆ ಇದ್ದು, ಕಾರ್ಖಾನೆಗಳು ಇದುವರೆವಿಗೂ 11 11 ಲಕ್ಷ ಟನ್ ಕಬ್ಬು ನುರಿಸಿದ್ದು, 6 89 ಲಕ್ಷ ಟನ್ ಕಬ್ಬು ನುರಿಸುವುದು ಬಾಕಿ ಇರುತ್ತದೆ ಈ ಕಬ್ಬನ್ನು ನುರಿಸಲು ಕಾರ್ಖಾನೆಗಳಿಗೆ ಸುತ್ತೋಲೆ ಮೂಲಕ ಸೂಚಿಸಲಾಗುತ್ತಿದೆ ಖಂಡಸಾರಿ ಸಕ್ಕರೆ ಕಾರ್ಖಾನೆಗಳಿಗೆ 1 47 ಲಕ್ಷ ಟನ್ ಮತ್ತು ಬೀಜ ಹಾಗೂ ಬೆಲ್ಲಕ್ಕಾಗಿ 3 12 ಲಕ್ಷ ಟನ್ ಬಳಕೆಯಾಗುವ ಸಾಧ್ಯತೆ ಇದ್ದು, ಜಿಲ್ಲೆಯಲ್ಲಿ ಕಬ್ಬು ಉಳಿಯುವ ಸಾಧ್ಯತೆ ಇಲ್ಲ

ಉ) ಬಾಕಿ ಉಳಿದಂತ ಕಬ್ಬಿನ ಬಗ್ಗೆ ಸರ್ಕಾರದ ಕ್ರಮವೇನು ಹಾಗೂ ರೈತರಿಗೆ ಯಾವ ಪರಿಹಾರವನ್ನು ನೀಡಲಾಗುವುದು?

ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಎಲ್ಲಾ ಕಬ್ಬು ಬಳಕೆಯಾಗುತ್ತಿದ್ದು, ಹೆಚ್ಚುವರಿಯಾಗಿ ಯಾವುದೇ ಕಬ್ಬು ಉಳಿಯದಿರುವುದರಿಂದ ರೈತರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಪ್ರಕಾಶ್ ಖಂಡ್ರೆ.- ಮಾನ್ಯ ಅಧ್ಯಕ್ಷರೆ, ಮಾನ್ಯ ಸಕ್ಕರೆ ಮಂತ್ರಿಯವರು ಬೀದರ್ ಜಿಲ್ಲೆಯಲ್ಲಿ ಈ ಸಲ ಬೆಳೆಯಲಾದ ಪೂರ್ಣ ಕಬ್ಬನ್ನು Co-operative Sugar Factories ಗಳ ಮೂಲಕ ಅರೆಯಲಾಗುತ್ತದೆ, ಹೆಚ್ಚುವರಿಯಾಗಿ ಯಾವುದೇ ಕಬ್ಬು ಉಳಿಯುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ ಆದರೆ ನಿನ್ನೆ ಮಾನ್ಯ ಉಸ್ತುವಾರಿ ಸಚಿವರಾದ ಮಾನ್ಯ ಬಂಡೆಪ್ಪನವರ ನೇತೃತ್ವದಲ್ಲಿ Sugar Factory MD, Chairmanಗಳ ಜೊತೆ ಸಭೆ ನಡೆಯಿತು ಅದರಲ್ಲಿ ನಾವೆಲ್ಲರೂ ಭಾಗವಹಿಸಿದ್ದೆವು ನಿನ್ನೆ ನೀಡಲಾದ ಮಾಹಿತಿ ಪ್ರಕಾರ ಬೀದರ್ ಜಿಲ್ಲೆಯಲ್ಲಿ ಹೆಚ್ಚುವರಿಯಾಗಿ ಒಂದೂವರೆ ಲಕ್ಷ ಟನ್ ಕಬ್ಬು ಉಳಿಯುತ್ತದೆ ಆ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಮತ್ತು

electronic mediaಗಳಲ್ಲಿ highlight ಮಾಡಲಾಗಿದೆ ಆದರೆ ಇವತ್ತು ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಹೆಚ್ಚುವರಿಯಾಗಿ ಕಬ್ಬು ಉಳಿಯುವುದಿಲ್ಲ ನಾವು ಪೂರ್ಣವಾಗಿ ಕಬ್ಬನ್ನು ಅರೆಯುತ್ತೇವೆ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಈ ಅಂಕಿ ಅಂಶಗಳು ಸರಿಯಿಲ್ಲ ಇದರ ಹಿನ್ನೆಲೆ ಏನಿದೆ ಎಂಬುದನ್ನು ನಾನು ಹೇಳುತ್ತೇನೆ ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ದಿವಸಗಳಿಂದ ಕಬ್ಬು ಒಯ್ಯುವುದರಲ್ಲಿ ತಾರತಮ್ಯ ಮಾಡುತ್ತಿದ್ದಾರೆ ನವೆಂಬರ್-ಡಿಸೆಂಬರ್ ತಿಂಗಳುಗಳಲ್ಲೇ ಕಬ್ಬು ಒಯ್ಯುತ್ತಿದ್ದ Sugar Factory ಗಳ management ನವರು ಇವತ್ತಿನವರೆಗೂ ಕಬ್ಬನ್ನು ಒಯ್ದಿಲ್ಲ 4-5 ತಿಂಗಳು ಲೇಟ್ ಮಾಡಿರುವುದರಿಂದ maturity period ಹೆಚ್ಚಾಗಿ ಆ ಕಬ್ಬೆಲ್ಲಾ ಇವತ್ತು ಒಣಗಿ ಹೋಗುತ್ತಿದೆ ಅಂತಹ ಪ್ರಕರಣಗಳ ಬಗ್ಗೆ, ಉದಾಹರಣೆ ಸಹಿತ, ಲಿಖಿತ ಮೂಲಕ Sugar Director ರವರಿಗೆ ದೂರು ನೀಡಲಾಗಿದೆ ಇವತ್ತಿನವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಆ ಬಗ್ಗೆ tv9 ಸೇರಿದಂತೆ ಎಲ್ಲಾ electronic mediaಗಳು ಮತ್ತು ಪತ್ರಿಕೆಯವರು ವರದಿ ಮಾಡಿದ್ದಾರೆ ಬೀದರ್ ಜಿಲ್ಲೆಯ ಎಲ್ಲಾ ರೈತ ಸಂಘಟನೆಗಳೂ ಇದರ ಬಗ್ಗೆ ಹೋರಾಟ ಮಾಡಿವೆ ನಿ... ಸ್ಪಷ್ಟವಾಗಿ ಅಲ್ಲಿ ಹೇಳಿದರು ಏನೆಂದರೆ, ಒಂದು ಟನ್ ಕಬ್ಬು ಕಡಿಯಬೇಕಾದರೆ, ...ar factory labourers ಒಂದು ನೂರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ರೈತರಿಗೆ ಹೆಚ್ಚಾಗಿ ಹಣವೇ ಸಿಕ್ಕಿಲ್ಲ ನಮ್ಮಲ್ಲಿ ಅಂದಾಜು 12 ಲಕ್ಷ ಟನ್‌ಗಳಷ್ಟು ಕಬ್ಬು crush ಆಗಿದೆ ಒಂದು ಟನ್‌ಗೆ 100 ರೂಪಾಯಿಗಳಂತೆ ಒಟ್ಟು 12 ಕೋಟಿ ರೂಪಾಯಿಗಳು ರೈತರ ಜೇಬಿನಿಂದ sugar factory ಯಲ್ಲಿ ಕಬ್ಬು ಕಟಾವು ಮಾಡುವ labourers ಕಿಸೆಗೆ ಹೋಗಿದೆ ಒಂದು ಟನ್‌ಗೆ 100 ರೂಪಾಯಿಗಳಂತೆ ಲೆಕ್ಕ ಹಾಕಿದರೂ, ಇವತ್ತು ಅಂದಾಜು 12 ಕೋಟಿ ರೂಪಾಯಿಗಳು ಕಬ್ಬು ಬೆಳೆಗಾರನ ಕಿಸೆಯಿಂದ ಹೋಗಿದೆ ನಿನ್ನೆ ರೈತ ಸಂಘದ ಅಧ್ಯಕ್ಷರಾದ ವಿಶ್ವನಾಥ್ ಪಾಟೀಲ್‌ರು, 200 ರೂಪಾಯಿಗಳ ಖರ್ಚು ಬರುತ್ತಿದೆ ಎಂದು ಹೇಳುತ್ತಿದ್ದರು ಈ ರೀತಿ ಶುಗರ್ ಫ್ಯಾಕ್ಟರಿ ನಡೆಸಿದರೆ, ರೈತರ ಜೇಬಿಗೆ ಹಣ ಬರುವುದು ಬಿಟ್ಟು, ರೈತರ ಜೇಬಿನಿಂದಲೇ ಹಣ ಹೋಗುತ್ತಿದೆ ಇದರ ಬಗ್ಗೆ CoD enquiry ಮಾಡಿಸಬೇಕು

ಅಧ್ಯಕ್ಷರು – ಮಾನ್ಯ ಖಂಡ್ರೆಯವರೆ, ತಾವು ಈ ರೀತಿ ಕೇಳಿದರೆ ಮಾನ್ಯ ಸಚಿವರಿಗೆ ಹೇಗೆ ಅರ್ಥವಾಗುತ್ತದೆ? ಅವರು ಉತ್ತರ ಕೊಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಪ್ರಕಾಶ್ ಖಂಡ್ರೆ.- ರೈತರಲ್ಲಿ ಕಬ್ಬು ಒಯ್ಯುವುದಿಲ್ಲ ಎನ್ನುವಂತಹ ಭಯದ ವಾತಾವರಣವನ್ನು ಮೂಡಿಸಿದ್ದಾರೆ ರೈತರು ಆ ವಾತಾವರಣಕ್ಕೆ ಹೆದರಿ ಪ್ರತಿ ಟನ್‌ಗೆ minimum 100 ರೂಪಾಯಿಗಳನ್ನು ಕಟಾವು ಮಾಡುವ ಸಲುವಾಗಿ ಕೊಡುತ್ತಿದ್ದಾರೆ ಇದರ ಬಗ್ಗೆ CoD enquiry ಆಗಬೇಕು ಈ ರೀತಿಯಾಗಿ sugar factory managementನವರಿಂದ ಕಬ್ಬು ಬೆಳೆಗಾರರ ಮೇಲೆ ಶೋಷಣೆ ಏನು ನಡೆಯುತ್ತಿದೆಯೋ, ಇದರ ಬಗ್ಗೆ CoD enquiry ಆಗಲೇಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಎಸ್ ಎ ರವೀಂದ್ರನಾಥ್ - ಮಾನ್ಯ ಅಧ್ಯಕ್ಷರೆ, ಈ ವರ್ಷ ರಾಜ್ಯದಲ್ಲಿ ಹೆಚ್ಚಿನ ಕಬ್ಬನ್ನು ಬೆಳೆಯಲಾಗಿದೆ ಇಡೀ ರಾಜ್ಯದಲ್ಲಿ ನಾವು ಇಲ್ಲಿಯವರೆಗೆ 140 ಲಕ್ಷ ಟನ್ ಕಬ್ಬನ್ನು ಅರೆದಿದ್ದೇವೆ ಇನ್ನೂ ಅಂದಾಜು 84ಲಕ್ಷ ಟನ್ ಕಬ್ಬು ಅರೆಯುವುದು ಬಾಕಿ ಇದೆ ಮಾರ್ಚ್ ತಿಂಗಳೊಳಗೆ 30 ಲಕ್ಷ ಟನ್, ಏಪ್ರಿಲ್‌ನಲ್ಲಿ 30 ಲಕ್ಷ ಟನ್ ಮತ್ತು ಮೇ ತಿಂಗಳಿನಲ್ಲಿ 24 ಲಕ್ಷ ಟನ್ ಅರೆಯಲು ಉದ್ದೇಶಿಸಲಾಗಿದೆ ಈ ರೀತಿಯಾಗಿ ಪೂರ್ತಿಯಾಗಿ ಯಾವುದೇ ಕಬ್ಬು ಉಳಿಯದಂತೆ ಅರೆಯಬೇಕೆಂದು ಎಲ್ಲಾ ಶುಗರ್ ಕಂಪೆನಿಗಳಿಗೆ ಸುತ್ತೋಲೆಯನ್ನು ಕೊಟ್ಟಿದ್ದೇವೆ ಎಲ್ಲಾ ಸಕ್ಕರೆ ಕಂಪೆನಿಗಳನ್ನು ಕರೆದು, ಮಾತನಾಡಿ ಸರ್ಕಾರದಿಂದ ಏನು ಮಾಡಬಹುದೋ ಅದನ್ನು ಮಾಡಿದ್ದೇವೆ ಆದ್ದರಿಂದ ಯಾವುದೇ ಕಬ್ಬು ಉಳಿಯುವುದಿಲ್ಲ ಬೆಳೆದಿರುವ ಎಲ್ಲಾ ಕಬ್ಬನ್ನೂ ನುರಿಸುವಂಥದ್ದನ್ನು ನಾವು ಮಾಡುತ್ತೇವೆ

ಶ್ರೀ ಪ್ರಕಾಶ್ ಖಂಡ್ರೆ.- ಮಾನ್ಯ ಅಧ್ಯಕ್ಷರೆ, ಯಾರು Sugar Directorರವರಿಗೆ ಮತ್ತು ಮಾನ್ಯ ಮಂತ್ರಿಗಳಿಗೆ ಅಲಿಗೇಷನ್ ಮಾಡಿ ದೂರನ್ನು ಕೊಟ್ಟರೋ, ಅವರ ಕಬ್ಬೇ ಇನ್ನೂ ಹೋಗಿಲ್ಲ ಇದು ಏಕೆ ಆಗುತ್ತಿದೆ ಎಂದರೆ, ಇದಕ್ಕೊಂದು ಹಿನ್ನೆಲೆ ಇದೆ ಅದೇನೆಂದರೆ, ಒಂದು ಟನ್‌ಗೆ 100ರಿಂದ 200 ರೂಪಾಯಿಗಳವರೆಗೆ ಕಬ್ಬು ಬೆಳೆಗಾರರಿಂದ ತೆಗೆದುಕೊಳ್ಳುತ್ತಿದ್ದಾರೆ ನಿಮ್ಮ ಪ್ರಕಾರ 12 ಲಕ್ಷ ಟನ್ ಕಬ್ಬು crushing ಆಗಿದೆ ಇನ್ನೂ 6 ಲಕ್ಷ ಟನ್ ಕಬ್ಬನ್ನು crushing ಮಾಡುತ್ತೇವೆಂದು ನೀವು ಹೇಳುತ್ತಿದ್ದೀರಿ ಒಟ್ಟಾರೆಯಾಗಿ 18 ಲಕ್ಷ ಟನ್ crushing ಆದಂತಾಗುತ್ತದೆ ಪತ್ರಿಕೆಗಳಲ್ಲಿ ಮತ್ತು electronic mediaದಲ್ಲಿ ವರದಿಯಾಗಿದೆ ಈ ಬಗ್ಗೆ ಎಲ್ಲರೂ ಹೇಳುತ್ತಿದ್ದಾರೆ 18 ಲಕ್ಷ ಟನ್‌ಗೆ ಟನ್ ಒಂದಕ್ಕೆ 100 ರೂಪಾಯಿಗಳಂತೆ ಲೆಕ್ಕ ಹಾಕಿದರೂ 18 ಕೋಟಿ ರೂಪಾಯಿಗಳು ರೈತರ ಜೇಬಿನಿಂದ ಹೋಗುತ್ತಿದೆ ಇದರ ಬಗ್ಗೆ CoD enquiry ಆಗಬೇಕು ಸರ್ಕಾರ ಇವತ್ತು ಸುಮ್ಮನೆ ಕುಳಿತಿದೆ ಇವತ್ತು ಸಂಪೂರ್ಣವಾಗಿ ರೈತರಿಗೆ ಹಣವೂ ಸಿಕ್ಕಿಲ್ಲ, ಕಬ್ಬೂ ಕೂಡ ಅರೆಯುತ್ತಿಲ್ಲ ರೈತರು ತಮ್ಮ ಮನೆಗಳಲ್ಲಿದ್ದ ಬಂಗಾರ ಮಾರಿ ಕಬ್ಬು

ಕಟಾವು ಮಾಡಲು ಲೇಬರ್ಸ್‌ಗೆ ಹಣವನ್ನು ಕೊಡುತ್ತಿದ್ದಾರೆ ಇದನ್ನು ನಾನು ಒಪ್ಪುವುದಿಲ್ಲ ಇದರ ಬಗ್ಗೆ CoD enquiry ಆಗಲೇಬೇಕು

ಅಧ್ಯಕ್ಷರು – ಮುಂದಿನ ಪ್ರಶ್ನೆ ಮಾನ್ಯ ಶ್ರೀಮತಿ ಭಾಗೀರಥಿಯವರದು

ಶ್ರೀ ಪ್ರಕಾಶ್ ಖಂಡ್ರೆ– ಮಾನ್ಯ ಅಧ್ಯಕ್ಷರೆ, ಮೈಕ್ ಚಾಲೂ ಇದ್ದಿರಲಿಲ್ಲವಾದ್ದರಿಂದ ಮಾನ್ಯ ಸಚಿವರ ಉತ್ತರ ನಮಗೆ ಕೇಳಿಸಲಿಲ್ಲ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು – ಸಮಸ್ಯೆಗಳು ಎಲ್ಲರದೂ ಇವೆ ಅದಕ್ಕಾಗಿ ಒಂದು ಇಡೀ ದಿನ ಪ್ರಶ್ನೋತ್ತರವೆಂದು ಹಾಕಿಕೊಳ್ಳೋಣ ಬಿಡಿ

ಶ್ರೀ ಪ್ರಕಾಶ್ ಖಂಡ್ರೆ– ಮಾನ್ಯ ಅಧ್ಯಕ್ಷರೆ, ಮೈಕ್ ಚಾಲೂ ಇರಲಿಲ್ಲ, ಆದ್ದರಿಂದ ನಮಗೆ ಮಾನ್ಯ ಸಚಿವರ ಉತ್ತರ ಕೇಳಿ ಬರಲಿಲ್ಲ

ಶ್ರೀ ಧರ್ಮಸಿಂಗ್ [ವಿರೋಧ ಪಕ್ಷದ ನಾಯಕರು] – ಮಾನ್ಯ ಅಧ್ಯಕ್ಷರೆ, ಬೆಳಗಾಂನಲ್ಲಿ ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲೂ ಕೂಡ ಕಬ್ಬು ಬೆಳೆಗಾರರು ತಮಗೆ ಸರಿಯಾದ ರೀತಿಯಲ್ಲಿ ಬೆಲೆ ಸಿಗುತ್ತಿಲ್ಲವೆಂದು ಪ್ರತಿಭಟನೆ ಮಾಡಿದ್ದರು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ನಾವು ಒಂದು ತಿಂಗಳೊಳಗಾಗಿ ಇದನ್ನು ಸರಿಪಡಿಸುತ್ತೇವೆ ಎನ್ನುವಂತಹ ಮಾತನ್ನು ಆಗ ಹೇಳಿದ್ದರು ತದನಂತರ ಸದನದಲ್ಲೂ ಕೂಡ ಆ ಬಗ್ಗೆ ಬಹಳಷ್ಟು ಸಲ ಪ್ರಸ್ತಾಪವಾಯಿತು ಇವತ್ತು ಏನು ಸ್ಥಿತಿಯಾಗಿದೆ ಎಂದರೆ, ಮಾನ್ಯ ಸದಸ್ಯರಾದ ಎಂ ಐ ಪಾಟೀಲ್‌ರವರು ಹೇಳಿದರು, ಗುಲ್ಬರ್ಗಾ ಜಿಲ್ಲೆಯಲ್ಲಿರತಕ್ಕಂಥ ಆಳಂದ sugar factory ಕೆಲಸ ಮಾಡುತ್ತಿರಲಿಲ್ಲ, ರೇಣುಕಾ sugar factoryಯವರು ತೆಗೆದುಕೊಂಡಿದ್ದರು ನಾನೇ ಅಲ್ಲಿನ Chairmanಗೆ ಎಷ್ಟೋ ಸಲ ಫೋನ್ ಮಾಡಿ ಹೇಳಿದ್ದೇನೆ ಅವರು ನಮ್ಮ machines ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು ಬೀದರ್ ಜಿಲ್ಲೆಯಲ್ಲಿ ಎಲ್ಲಾ ಶುಗರ್ ಫ್ಯಾಕ್ಟರಿಗಳಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಟನ್‌ಗೆ 200–300 ರೂಪಾಯಿಗಳನ್ನು ಕೊಡಲಿಕ್ಕೆ ರೈತರು ತಯಾರಾಗಿದ್ದಾರೆ ಇಂತಹ ಪರಿಸ್ಥಿತಿ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಸರ್ಕಾರದ ಬೊಕ್ಕಸದಿಂದ ಹೆಚ್ಚು ಸಬ್ಸಿಡಿಯನ್ನು ಕೊಡುತ್ತೇವೆಂದು ಭರವಸೆ ನೀಡಿದ್ದರು ಮೊನ್ನೆ ಮಾನ್ಯ ಶರದ್ ಪವಾರ್‌ರವರು ಬಂದಿದ್ದರು, ಅವರೂ ಕೂಡ ರಾಷ್ಟ್ರ ಮಟ್ಟದಲ್ಲಿ ಇಂತಹ ಸಮಸ್ಯೆ ಇದೆ ಎಂದು ಹೇಳಿದ್ದರು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಕೇವಲ ಬಜೆಟ್ ಘೋಷಣೆ ಮೂಲಕ ಅಥವಾ ಕರಪತ್ರದ ಮುಖಾಂತರ ಹೇಳತಕ್ಕದ್ದಲ್ಲ ಇವತ್ತು ರಾಜ್ಯದಲ್ಲಿ ರೈತರಿಗೆ ಇರತಕ್ಕಂಥ ಸಂಕಟ ಏನಿದೆ, ಅದನ್ನು ಪರಿಹರಿಸಬೇಕು ಕಬ್ಬು

ಬೆಳೆಗಾರರು ಗೊಬ್ಬರ ಹಾಕಿ ಕಷ್ಟಪಟ್ಟು ಕಬ್ಬನ್ನು ಬೆಳೆದಿದ್ದಾರೆ ಇವತ್ತು ಅವರಿಗೆ ಸರಿಯಾದ ಬೆಲೆ ಸಿಗದೇ ಅವರ ಪರಿಸ್ಥಿತಿ ಬಹಳಷ್ಟು ಕಡೆ ಸರಿಯಾಗಿಲ್ಲ ಮಾನ್ಯ ಸಚಿವರಾದ ರವೀಂದ್ರನಾಥ್‌ರವರು ಸರಿಯಾದ ರೀತಿಯಲ್ಲಿ ಸಮಾಲೋಚನೆ ಮಾಡಿಲ್ಲ ಮಾನ್ಯ ಮುಖ್ಯಮಂತ್ರಿಗಳ ಜೊತೆ ಅವರು ಮಾತನಾಡಬೇಕು ಇವತ್ತು ಸರ್ಕಾರ ಏನು ಮಾಡಬೇಕಾಗಿದೆಯೋ ಅದನ್ನು ಮಾಡಬೇಕು ಮಾನ್ಯ ಪ್ರಕಾಶ್ ಖಂಡ್ರೆಯವರು ಆ ಭಾಗದಲ್ಲಿರತಕ್ಕ ಶುಗರ್ ಫ್ಯಾಕ್ಟರಿಯ ಅವ್ಯವಸ್ಥೆ ಬಗ್ಗೆ ಹೇಳಿದ್ದಾರೆ ಇವತ್ತು ಮಹಾರಾಷ್ಟ್ರದಲ್ಲೂ ಕೂಡ ಅದೇ ಪರಿಸ್ಥಿತಿ ಇದೆ ಗಡಿ ಭಾಗದ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲಿ, ಗಡಿ ಪ್ರದೇಶದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಮಾತನ್ನು ಸರ್ಕಾರ ಹೇಳಿತ್ತು ಆದರೆ ಅದು ಇದುವರೆವಿಗೂ ಆಗಿಲ್ಲ ಈ ಸರ್ಕಾರ ರೈತರ ವಿರುದ್ಧ ಇದೆ ರೈತರ ಸಾಲ ಮನ್ನಾ ಮಾಡತಕ್ಕ ವಿಚಾರ ಬೇರೆ ಅದರ ಬಗ್ಗೆ ನಾಳೆ ನಾನು, ಸಿದ್ದರಾಮಯ್ಯನವರು ಮತ್ತು ದೇಶಪಾಂಡೆಯವರು ಮಾತನಾಡುತ್ತೇವೆ ಆದರೆ ಇವತ್ತು ರೈತರಿಗೆ ಸರ್ಕಾರ ಮಾಡಿರತಕ್ಕ ಅನುಕೂಲತೆಗಳೇನು? ಕಬ್ಬು ಬೆಳೆಗಾರರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ, ಅವರು ಬೆಳೆದ ಕಬ್ಬನ್ನು ಖರೀದಿ ಮಾಡುತ್ತಿಲ್ಲ ಇದರ ಬಗ್ಗೆ ಸರ್ಕಾರ ತನ್ನ ಸ್ಪಷ್ಟವಾದ ನಿರ್ಧಾರವನ್ನು ರಾಜ್ಯದ ಜನತೆಗೆ ತಿಳಿಸಬೇಕೆಂದು ಆಗ್ರಹಿಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಅಧ್ಯಕ್ಷರೆ, ಈ ವರ್ಷ ಕಬ್ಬು crushing late ಆಗಿ ಶುರುವಾಯಿತು ಹಲವಾರು ಕಡೆ ರೈತ ಸಂಘಟನೆಗಳು ಮತ್ತು ಸಕ್ಕರೆ ಕಾರ್ಖಾನೆಗಳ ನಡುವೆ ಯಾವ ರೇಟ್ ಕೊಡಬೇಕೆಂಬ ಬಗ್ಗೆ ಹೊಂದಾಣಿಕೆ ಆಗಿರಲಿಲ್ಲ ಕಬ್ಬಿನ ಬೆಳೆಯೂ ಕೂಡ ಈ ವರ್ಷ ಬಹಳ ಹೆಚ್ಚಾಗಿದೆ ಇನ್ನೂ ಕಬ್ಬು ಸಾಕಷ್ಟು ಇದೆ ಪರಿಸ್ಥಿತಿ ಸಾಕಷ್ಟು ಕೆಟ್ಟದಾಗಿದೆ ನಾನೇ ನನ್ನ ಜೀವನದಲ್ಲಿ ಯಾವಾಗಲೂ ಹೋಗಿರಲಿಲ್ಲ ನಮ್ಮ ಭಾಗವಾದ ಹಳಿಯಾಳ, ಅಳ್ನಾವರ್ ಮತ್ತು ಧಾರವಾಡದ ಏರಿಯಾಗಳಲ್ಲಿ ಕಬ್ಬು ಹೆಚ್ಚಾಗಿ ಬೆಳೆದಿದ್ದಾರೆ 20 ದಿವಸಗಳ ಹಿಂದೆ ನಾನು ನಾಲ್ಕೈದು ಶುಗರ್ ಫ್ಯಾಕ್ಟರಿಗಳಿಗೆ ಹೋಗಿ ಬಂದೆ ಸಂಜೀವಿನಿ, ಮಲಪ್ರಭಾ, ಮಾರಿಕಾಂಬಾ ಮುಂತಾದ ಶುಗರ್ ಫ್ಯಾಕ್ಟರಿಗಳಿಗೆ ಸ್ವತಃ ಹೋಗಿ ಬಂದೆ ಅಲ್ಲಿನ ರೈತರ ಆಕ್ರೋಶ ನೋಡಲಿಕ್ಕೆ ನಮ್ಮಿಂದಾಗಲಿಲ್ಲ ಅಲ್ಲಿ ಕಬ್ಬು ಸಾಗಾಣಿಕೆಯಾಗುತ್ತಿಲ್ಲ

ಮೇ ತಿಂಗಳವರೆಗೆ ನಾವು ಕ್ರಶ್ ಮಾಡುತ್ತೇವೆಂದು ಶುಗರ್ ಫ್ಯಾಕ್ಟರಿಯವರು ಒಪ್ಪಿಕೊಂಡಿದ್ದಾರೆ ಮೇ ತನಕವಾದರೂ ಸಾಕಾಗುವುದಿಲ್ಲ ಕರ್ನಾಟಕ ರಾಜ್ಯದಲ್ಲಿ ರೈತರು ಕಬ್ಬನ್ನು ಸುಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಹಾಗಾಗಿ ಇದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ ರೈತರು ಬಹಳ ಕಷ್ಟದಲ್ಲಿದ್ದಾರೆ, ಇದರ ಬಗ್ಗೆ ಬೇಕಾದರೆ ಒಂದು ಸಭೆ ಮಾಡಿ, ಮಾನ್ಯ

ಹಣಕಾಸಿನ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಿ, ಕೇಂದ್ರ ಸರ್ಕಾರದೊಡನೆ ಚರ್ಚೆ ಮಾಡಿ ಯಾವ ರೀತಿ ಈ ಕಬ್ಬನ್ನು ಸಾಗಾಣಿಕೆ ಮಾಡಲು ಸಾಧ್ಯವೆಂಬ ಬಗ್ಗೆ ಸಕ್ಕರೆ ಕಾರ್ಖಾನೆಯವರನ್ನು ಕರೆಯಿಸಿ ಸಭೆ ಮಾಡಿ ಎಂದು ಸಲಹೆ ಕೊಡುತ್ತೇನೆ ಒಂದು ವೇಳೆ ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೆಂದರೆ ರೈತರ ತಪ್ಪಲ್ಲ ಹಾಗಾಗಿ ಆ ರೈತರಿಗೆ ಪರಿಹಾರವನ್ನು ಕೊಡುವುದು ಸಹ ಸರ್ಕಾರದಿಂದ ಆಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಪ್ರಕಾಶ್ ಖಂಡ್ರೆ, ಮಾನ್ಯ ಅಧ್ಯಕ್ಷರೆ, ನಮ್ಮ ಪ್ರಶ್ನೆಗೆ ಉತ್ತರವೇ ಬಂದಿಲ್ಲ

ಅಧ್ಯಕ್ಷರು ಹೌದು ಸ್ವಾಮಿ, ಎಲ್ಲರೂ ಪ್ರಶ್ನೆ ಹೇಳಿದರೆ, ಒಂದೊಂದು ಪ್ರಶ್ನೆಗೆ ಅರ್ಧ ಗಂಟೆಯಾದರೆ ಹೇಗೆ ಹೇಳಿ?

ಶ್ರೀ ಶಿವಾನಂದ ಪಾಟೀಲ್ ನಮ್ಮ ಜಿಲ್ಲೆಯಲ್ಲೂ ಕೂಡ ಸದ್ಯಕ್ಕೆ 6 ಲಕ್ಷ ಟನ್ ಸರ್‌ಪ್ಲಸ್ ಇದೆ ಕಳೆದ ಸಾರಿ ಇದೇ ಕಬ್ಬಿನ ಬೆಲೆ ಹದಿಮೂರುನೂರು ರೂಪಾಯಿ ಕೊಟ್ಟಿದ್ದರು ಈ ವರ್ಷ ಫ್ಯಾಕ್ಟರಿಯವರು ಇದುವರೆವಿಗೂ ರೇಟ್ ಡಿಕ್ಲೇರ್ ಮಾಡಿಲ್ಲ, ಎಂಟು ನೂರು ರೂಪಾಯಿಗಳನ್ನು ಕೊಡುತ್ತಾರೆನ್ನುವ ಭರವಸೆ ನಮ್ಮಲ್ಲಿ ಇಲ್ಲ ಅವರೇ ಹೇಳಲಿ, ಯಾವುದಾದರೂ ಒಂದು ಕಬ್ಬಿನ ಫ್ಯಾಕ್ಟರಿಯವರು ರೂ 800/- ಆದರೂ ಕನಿಷ್ಟ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆಯೇ ಎಂದು ಸಚಿವರಿಗೆ ಕೇಳಿ ಈಗ ಇವರು ಕೊಬ್ಬರಿಗೆ 40 ಕೋಟಿ ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಟ್ಟರು ಆದರೆ, ಕಬ್ಬಿನವರಿಗೆ 10 ಪೈಸೆಯನ್ನು ಕೊಡತಕ್ಕಂತಹ ಸೌಜನ್ಯವನ್ನು ತೋರಿಸುತ್ತಿಲ್ಲ, ಕೊನೇ ಪಕ್ಷ ನುರಿಸುತ್ತೇವೆನ್ನುವ ಬರವಸೆಯನ್ನು ಕೊಡುವುದಿಲ್ಲ ಸರ್, ರಾಜ್ಯದಲ್ಲಿ 70 ಲಕ್ಷ ಟನ್ ಕಬ್ಬು ಹೆಚ್ಚಿಗೆ ಇದೆ ಕಳೆದ ವರ್ಷ ಪ್ರತಿ ಟನ್‌ಗೆ ಹದಿಮೂರು ನೂರು ರೂಪಾಯಿಗಳನ್ನು ತೆಗೆದುಕೊಂಡವರು, ನಿಮಗೆ ಬದ್ಧತೆ ಇದೆ, ಕೊನೆಯ ಪಕ್ಷ ರೂ 800/-ಗಳನ್ನಾದರೂ ಕೊಡಿಸುತ್ತೀರಾ? ಕೊನೆಯ ಪಕ್ಷ ಅದನ್ನಾದರೂ ಹೇಳಿ

ಶ್ರೀ ಪ್ರಕಾಶ್ ಖಂಡ್ರೆ, ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವೇ ಬಂದಿಲ್ಲ ಮಂತ್ರಿಗಳು ಉತ್ತರವನ್ನು ಸದನದಲ್ಲಿ ಹೇಳಬೇಕಾಗುತ್ತದೆ ಬಹಳ ಗಂಭೀರವಾದ ಆರೋಪವಿದೆ ಇವತ್ತು ಕಬ್ಬನ್ನು ಕಟಾವ್ ಮಾಡುವ ಲೇಬರ್‌ಗೆ ರೈತರ ಕಿಸೆಯಿಂದ ಹಣ ಹೋಗಿದೆ ಇದನ್ನು ನಾನು ಹೇಳುತ್ತಿಲ್ಲ, ಎಲ್ಲಾ ರೈತ ಸಂಘಟನೆಗಳು, ಎಲ್ಲಾ ಪತ್ರಿಕೆಗಳವರು ಮತ್ತು ಎಲ್ಲಾ ಎಲೆಕ್ಟ್ರಾನಿಕ್ ಮಿಡಿಯದವರು ಹೇಳಿದ್ದಾರೆ ಅದು ಅಲ್ಲದೇ ಉಸ್ತುವಾರಿ ಮಂತ್ರಿಗಳಾಗಿದ್ದೀರಿ ಪ್ರತಿದಿನ ಎಲ್ಲಾ ಪತ್ರಿಕೆಗಳಲ್ಲೂ ಬರುತ್ತಿದೆ ಇದಕ್ಕೇನಾದರೂ ಕಡಿವಾಣ ಹಾಕಬೇಕಾಗುತ್ತದೆ ತಾವು ಸಿಒಡಿ ತನಿಖೆ ಮಾಡಿಸುತ್ತೀರಾ, ಏನು ಮಾಡಿಸುತ್ತೀರಾ, ಏನು ಕ್ರಮ ತೆಗೆದುಕೊಳ್ಳುತ್ತೀರಾ? ಈ ರೀತಿ

ರೈತರ ಕಬ್ಬನ್ನು ಕಟಾವ್ ಮಾಡಿಸುವುದಕ್ಕೆ ಹಣ ತೆಗೆದುಕೊಂಡಿರುವುದು, ಗಂಭೀರ ಆರೋಪವಾಗಿದೆ ಈ ಬಗ್ಗೆ ತಾವು ಹೇಳಿಕೆ ಮಾಡಬೇಕಾಗುತ್ತದೆ

ಶ್ರೀ ಎಸ್ ಎ ರವೀಂದ್ರನಾಥ್ ಮಾನ್ಯ ಅಧ್ಯಕ್ಷರೆ, ಈ ವರ್ಷ ಇಡೀ ರಾಜ್ಯದ ತುಂಬ ಜಾಸ್ತಿ ಕಬ್ಬನ್ನು ಬೆಳೆದಿದ್ದಾರೆ ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚಿಗೆ ಇದ್ದ ಕಬ್ಬನ್ನು ಬಾಗಲಕೋಟೆ, ಬೆಳಗಾಂ ಜಿಲ್ಲೆಗಳ ಫ್ಯಾಕ್ಟರಿಗಳಿಗೆ ಒಯ್ಯುವಂತೆ ಡೈವರ್ಟ್ ಮಾಡಿ, ಇಷ್ಟಿಷ್ಟು ಕಬ್ಬನ್ನು ಅರೆಯಬೇಕು ಎಂದು ಎಲ್ಲಾ ಫ್ಯಾಕ್ಟರಿಗಳ ಮತ್ತು ರೈತರನ್ನು ಕರೆದು ನಿರ್ದೇಶನವನ್ನು ಕೊಟ್ಟಿದ್ದೇವೆ ಅದೇ ರೀತಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಉಳಿಯುವ ಕಬ್ಬನ್ನು ಮೇ ತಿಂಗಳವರೆಗೆ ಒತ್ತಾಯ ನುರಿಸಬೇಕು, ಯಾವುದೇ ಕಾರಣದಿಂದ ಕಬ್ಬು ಉಳಿಯಬಾರದು ಎಂದು ವ್ಯವಸ್ಥೆ ಮಾಡಿದ್ದೇವೆ

ಶ್ರೀ ಶಿವಾನಂದ ಪಾಟೀಲ್ ಬಿಜಾಪುರ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಯಾವುದಾದರೂ ಒಂದು ಟನ್ ಕಬ್ಬು ಹೋಗಿದ್ದರೆ ಇವತ್ತು ನಾನು ರಾಜೀನಾಮೆ ಕೊಡುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ್ ಸರ್, ಅವರು ಯಾವಾಗಲೂ ರಾಜೀನಾಮೆ ಕೊಡುತ್ತೇನೆಂದು ಹೇಳುತ್ತಾರೆ, ನಾನೇನೂ ಮಾಡುವುದಕ್ಕಾಗುವುದಿಲ್ಲ ಆದರೆ ಇರುವಂತಹದ್ದನ್ನು ಹೇಳುತ್ತಿದ್ದೇನೆ, ಅಲ್ಲಿ, ಜಿಲ್ಲಾಧಿಕಾರಿಗಳು ಏನಾದರೂ ನ್ಯೂನತೆ ಮಾಡಿದ್ದರೆ ಹಾಗೂ ಫ್ಯಾಕ್ಟರಿ ಮಾಲೀಕರು ರೈತರಿಗೆ ತೊಂದರೆ ಮಾಡುತ್ತಿದ್ದರೆ, ತಪ್ಪು ಮಾಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಮಾಡಿ ಇನ್ನು ಹೆಚ್ಚಿನ ವಿಷಯಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ

ಶ್ರೀ ವೈಜನಾಥ ಪಾಟೀಲ್ ಮಾನ್ಯ ಅಧ್ಯಕ್ಷರೆ, ಇದು ರಾಜ್ಯದಲ್ಲಿ ದೊಡ್ಡ ಸಮಸ್ಯೆಯಾಗಿದ್ದು ಚರ್ಚೆಯಾಗಲಿಲ್ಲ, 1992 ರಲ್ಲಿ, ತಾವು, ಅಧ್ಯಕ್ಷರು ಗುಲ್ಬರ್ಗಾ ಜಿಲ್ಲೆಗೆ ಬಂದಿರಿ, ಆಗ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾಗ, ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು

ಅಧ್ಯಕ್ಷರು ಮಾನ್ಯ ವೈಜನಾಥ ಪಾಟೀಲರೆ, ಅವರು ಪ್ರಶ್ನೆ ಕೇಳಿದ್ದಾರೆ ಅವರು ಉತ್ತರವನ್ನು ಹೇಳಿದ್ದಾರೆ ಈಗ ನೀವು ಮಾತನಾಡಿದರೆ ಹೇಗೆ? No no, ಸರಿ ಇಲ್ಲ, ಅವರೇನು ಹೇಳಿದರೂ ರೆಕಾರ್ಡ್‌ಗೆ ಹೋಗಕೂಡದು, ಏನಾದರು ಹೇಳಿಕೊಳ್ಳಲಿ

ಶ್ರೀ ವೈಜನಾಥ ಪಾಟೀಲ್ ನಾವು unparliamentary word use ಮಾಡಿದ್ದೇವೆಯೆ? ರೆಕಾರ್ಡ್‌ಗೆ ಹೋಗಬಾರದಂತಹದ್ದನ್ನು ಏನು ಮಾಡಿದ್ದೇವೆ? ಸಿಕ್ಕಾಪಟ್ಟೆ ಮಾತನಾಡಿದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ ರೆಕಾರ್ಡ್‌ಗೆ ಹೋಗಬಾರದೆಂದು ಹೇಳುವುದೇಕೆ?

ಅಧ್ಯಕ್ಷರು ನೀವು ಕುಳಿತುಕೊಳ್ಳಿ, ಎದ್ದು ನಿಂತುಕೊಂಡು ನಿಮಗೆ ಇಷ್ಟ ಬಂದಂತೆ ನಡೆದುಕೊಂಡರೆ ಇದೇನು ನಿಮ್ಮ ಪಂಚಾಯಿತಿ ಏನು? ಈ ಸದನ ನಿಮ್ಮ ಚಿಂಚೊಳ್ಳಿ ಪಂಚಾಯಿತಿ ಅಲ್ಲ

ಭದ್ರಾ ಮೇಲ್ದಂಡೆ ಯೋಜನೆಗಳಿಗೆ ಹಣ ಬಿಡುಗಡೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 221(1335)

ಸದಸ್ಯರ ಹೆಸರು ಶ್ರೀಮತಿ ಭಾಗೀರಥಿ ಟ (ಕೊಟ್ಟೂರು)

ಉತ್ತರಿಸುವ ಸಚಿವರು ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ನಿರ್ಧರಿಸಿದೆಯೇ,

ನಿರ್ಧರಿಸಿದೆ

ಆ) ಹಾಗಿದ್ದಲ್ಲಿ, ಈ ಯೋಜನೆಯಡಿಯಲ್ಲಿ ಕೈಗೊಳ್ಳಲಿರುವ ಯೋಜನೆಗಳು ಯಾವುವು,

ಈ ಯೋಜನೆಯಡಿ ಕೈಗೊಳ್ಳಲಿರುವ ಮುಖ್ಯ ಕಾರ್ಯಗಳು ಈ ಕೆಳಗಿನಂತಿದೆ

1 ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 15 ಟಿ ಎಂ ಸಿ ನೀರೆತ್ತುವುದು

2 ಭದ್ರಾ ಜಲಾಶಯದಿಂದ ಅಜ್ಜಂಪುರ ಬಳಿ ನಿರ್ಮಿಸಲು ಯೋಜಿಸಿರುವ ಸುರಂಗದ ಬಳಿಯ ಡೆಲಿವರಿ ಛೇಂಬರ್‌ವರೆಗೆ 21 50 ಟಿ ಎಂ ಸಿ ನೀರೆತ್ತುವುದು

3 ಚಿತ್ರದುರ್ಗ ಬ್ರಾಂಚ್ ಕಾಲುವೆ ಮುಖಾಂತರ ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ತಾಲ್ಲೂಕುಗಳಿಗೆ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಹಿರಿಯೂರು, ಚಿತ್ರದುರ್ಗ ಮತ್ತು ಚಳ್ಳಕೆರೆ ತಾಲ್ಲೂಕುಗಳಿಗೆ ನೀರಾವರಿಗಾಗಿ ನೀರು ಒದಗಿಸುವುದು

4 ಚಿಕ್ಕಮಗಳೂರು, ಚಿತ್ರದುರ್ಗ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಒಟ್ಟು 156 ಕೆರೆಗಳಿಗೆ ನೀರು ತುಂಬಿಸುವುದು

5 ಕೋಲಾರ ಮತ್ತು ತುಮಕೂರು ತಾಲ್ಲೂಕುಗಳಿಗೆ ಕುಡಿಯುವ ನೀರು ಯೋಜನೆ

6 ಭದ್ರಾ ನಾಲೆ ಆಧುನೀಕರಣ ಕಾಮಗಾರಿ

7 ತುಂಗ, ಗೋಂಧಿ ಮತ್ತು ವಿಜಯನಗರ ನಾಲೆಗಳ ಆಧುನೀಕರಣ

8 ವೇದವತಿ ಕೊಳ್ಳದಲ್ಲಿ ಬ್ಯಾರೇಜ್ ನಿರ್ಮಾಣ

ಇ) ಇದರಿಂದ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿಯಾಗುತ್ತದೆ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು ತಾಲ್ಲೂಕುಗಳಲ್ಲಿ 16,398 ಎಕರೆ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹಿರಿಯೂರು ಚಿತ್ರದುರ್ಗ ಮತ್ತು ಚಳ್ಳಕೆರೆ

ತಾಲ್ಲೂಕುಗಳಲ್ಲಿ ಒಟ್ಟು 2,37,625 ಎಕರೆ ಅಂದರೆ ಒಟ್ಟು 2,54,023 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ

ಈ) ಈ ಸಾಲಿನಲ್ಲಿ ಮೇಲ್ಕಂಡ ಯೋಜನೆಗಳಿಗೆ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ,

2006-07ನೇ ಸಾಲಿನಲ್ಲಿ ಈ ಯೋಜನೆಗೆ ರೂ 50 00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ

ಉ) ಕೈಗೆತ್ತಿಕೊಂಡಿರುವ ಯೋಜನೆಗಳು ಯಾವುದು? (ವಿವರ ನೀಡುವುದು)

ಈ ಕೆಳಗಿನ ಮೂರು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ

1) ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 15 ಟಿ ಎಂ ಸಿ ನೀರೆತ್ತುವುದು (ಅಂದಾಜು ಮೊತ್ತ ರೂ 125 00 ಕೋಟಿ)
2) ಭದ್ರಾ ಜಲಾಶಯದಿಂದ ಡೆಲಿವರಿ ಛೇಂಬರ್ ಅಜ್ಜಂಪುರ ಬಳಿ/ವರೆಗೆ 21 50 ಟಿ ಎಂ ಸಿ ನೀರೆತ್ತುವುದು (ಅಂದಾಜು ಮೊತ್ತ ರೂ 550 00 ಕೋಟಿ)
3) ಅಜ್ಜಂಪುರ ಬಳಿ ಸುರಂಗ ನಿರ್ಮಾಣ (ಅಂದಾಜು ಮೊತ್ತ ರೂ 150 00 ಕೋಟಿ)

ಶ್ರೀಮತಿ ಟಿ ಬಾಗೀರಥಿ ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ಇದಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಬೇರೆ ರೀತಿಯ ಉತ್ತರವನ್ನು ಕೂಡ ಕೊಟ್ಟಿದ್ದಾರೆ ಆದರೆ ಇಲ್ಲಿ ನನ್ನ ಮೂಲಭೂತವಾದ ಪ್ರಶ್ನೆ, ಏನೆಂದರೆ ನಮ್ಮ ಹಿರಿಯರು ಹೇಳಿದ ಹಾಗೆ, ನಮ್ಮ ರೈತಬಾಂಧವರು ಹೇಳಿದ ಹಾಗೆ, ಈ ಯೋಜನೆಯ ವ್ಯಾಪ್ತಿಗೆ ನಮ್ಮ ಬಳ್ಳಾರಿ ಜಿಲ್ಲೆಯು ಕೂಡ ಸೇರಿದೆ, ಆದರೆ ಈ ಯೋಜನೆಯಿಂದ ನಮ್ಮ ಜಿಲ್ಲೆಯನ್ನು ಏತಕ್ಕೆ ಕೈಬಿಟ್ಟಿದ್ದಾರೆ ಎನ್ನುವುದು ನನಗೆ ಅರ್ಥವಾಗಲಿಲ್ಲ ನಮ್ಮ ಬಳ್ಳಾರಿ ಜಿಲ್ಲೆಯನ್ನು ಏತಕ್ಕೆ ಕೈಬಿಟ್ಟಿದ್ದೀರಿ ಎಂಬುದು ನನ್ನ ಮೊದಲನೆ ಪ್ರಶ್ನೆ ಎರಡನೆಯದಾಗಿ, ಅತ್ಯಂತ ಹಿಂದುಳಿದ ತಾಲ್ಲೂಕಾಗಿರತಕ್ಕಂತಹ, ನೀರಾವರಿಯಿಂದ ವಂಚನೆಯಾಗಿರತಕ್ಕಂತಹ, ಇವತ್ತಿನವರೆಗೂ ಕೂಡ ಕುಡಿಯುವ ನೀರಿಗಾಗಿ ಪರದಾಡುತಿರತಕ್ಕಂತಹ ನನ್ನ ಕೂಡ್ಲಿಗಿ ತಾಲ್ಲೂಕನ್ನು, ನನ್ನ ಮಾಹಿತಿಯ ಪ್ರಕಾರ ಈ ಯೋಜನೆಯ ವ್ಯಾಪ್ತಿಯ ಒಳಗೆ ಒಳಪಡಿಸಲು ಸಾಧ್ಯತೆ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಮೂರನೆಯದಾಗಿ, ಈ ಬಾರಿ ನಂಜುಂಡಪ್ಪ ವರದಿಯ ಪ್ರಕಾರ, ಅತ್ಯಂತ ಹಿಂದುಳಿ ತಾಲ್ಲೂಕುಗಳಿಗೆ ನಮ್ಮ ಆಯವ್ಯಯದಲ್ಲಿ ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ ಈ ಯೋಜನೆಗೆ ಹೆಚ್ಚಿನ ಒತ್ತನ್ನು ಕೊಟ್ಟು ನಮ್ಮ ಕೂಡ್ಲಿಗಿ ತಾಲ್ಲೂಕನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಬೇಕೆಂದು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ಈ ಕೂಡ್ಲಿಗಿ ತಾಲ್ಲೂಕು ನೀರಿನ ಸಮಸ್ಯೆ ಅನುಭವಿಸುತ್ತಿದೆ ಎಂದು ಮಾನ್ಯ ಶಾಸಕರು ಹೇಳುತ್ತಿರುವ ಸಂದರ್ಭದಲ್ಲಿ, ಏತಕ್ಕೆ ಬಿಟ್ಟಿದ್ದಾರೆಂಬುದು ನನಗೆ ಗೊತ್ತಿಲ್ಲ ನಾನು ತಜ್ಞನಲ್ಲ ವರದಿ ಏನಿದೆ ಅದನ್ನು ಜಾರಿಮಾಡುವಂತಹ ಕೆಲಸವನ್ನು ಸರ್ಕಾರದಿಂದ ಮಾಡುತ್ತಿದ್ದೇವೆ ಇದೆ ರೀತಿ ನಾನು ಆಗಲೇ ಪ್ರಸ್ತಾಪ ಮಾಡಿದಂತೆ, ಅನೇಕ ಕ್ಷೇತ್ರದ ಶಾಸಕರು, ಅವರವರ ಕ್ಷೇತ್ರವನ್ನು ಕೈಬಿಟ್ಟಿರುವುದರಿಂದ ಇದನ್ನು ಸೇರಿಸಬೇಕೆಂಬ ಎಲ್ಲಾ ಪ್ರಯತ್ನವನ್ನು ನಡೆಸುತ್ತಿದ್ದಾರೆ ವಿಶೇಷವಾಗಿ ಮತ್ತೊಂದು ಕ್ಷೇತ್ರವನ್ನು ಇದರ ಜೊತೆಗೆ ಸೇರಿಸುವಂತಹ ಪ್ರಯತ್ನ ನನಗನಿಸುವಂತೆ ಇದು ಕಾರ್ಯಸಾಧುವಲ್ಲ ಅವರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿ, ನಂಜುಂಡಪ್ಪ ವರದಿಯ ಪ್ರಕಾರ ಇದಕ್ಕೆ ಒತ್ತು ಕೊಡುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದಾರೆ, ಈ ಒಂದು ಯೊಜನೆಯ ಮುಖಾಂತರವಾಗುವುದಿಲ್ಲ ಬೇರೆ ಮುಖಾಂತರ ಏನು ಪ್ರಯತ್ನ ಮಾಡಬೇಕೊ, ಖಂಡಿತ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀಮತಿ ಟಿ ಬಾಗೀರಥಿ ತಮ್ಮಿಂದ ಈ ರೀತಿಯ ಉತ್ತರವನ್ನು ನಾನು ಬಯಸಿರಲಿಲ್ಲ ತಾವು ತಜ್ಞರಲ್ಲದೆ ಇದ್ದರೂ ಕೊನೆಯ ಪಕ್ಷ ಈ ವರದಿಯನ್ನು ನೋಡುತ್ತೇನೆ, ಇದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಉತ್ತರವನ್ನು ನಾನು ಬಯಸಿದ್ದೆ, ಆದರೆ ತಾವು ಉತ್ತರವನ್ನು ಹೇಳಿದ್ದೀರಿ ದಯಮಾಡಿ, ಇದಕ್ಕೆ ಸಾಕಷ್ಟು ಅವಕಾಶ ಕೂಡ ಇದೆ ಭದ್ರಾ ಮೇಲ್ದಂಡೆ ಯೋಜನೆ ನಮ್ಮ ಪಕ್ಕದ ಜಿಲ್ಲೆಗೆ ಬರುತ್ತದೆ, ನಮ್ಮ ಜಿಲ್ಲೆಗೆ ಬರುವುದಿಲ್ಲ 29 ಕೆರೆಗಳಿಗೆ ನೀರನ್ನು ಉಣಿಸುತ್ತಾರೆ, ನಮ್ಮ ತಾಲ್ಲೂಕಿನ ಪಕ್ಕದಲ್ಲೇ ಯೋಜನೆ ಬರುತ್ತಿದೆ ಆದರೆ ನಮ್ಮ ತಾಲ್ಲೂಕು ಸೇರ್ಪಡೆಯಾಗುತ್ತಿಲ್ಲ ಇಂತಹ ಸಂದರ್ಭದಲ್ಲಿ, ತಾವು ನಂಜುಂಡಪ್ಪ ವರದಿಗೆ ಹೆಚ್ಚಿನ ಒತ್ತನ್ನು ಕೊಡುವುದೇ ಆದರೆ ಈ ಯೋಜನೆಗೆ ಹೆಚ್ಚಿನ ಒತ್ತನ್ನು ಕೊಟ್ಟು ನಮ್ಮ ತಾಲ್ಲೂಕನ್ನು ಸೇರಿಸಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಈಗಾಗಲೆ ನನಗೆ ಉತ್ತರವನ್ನು ಕೊಟ್ಟಿದ್ದೀರಿ, ಈ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣವನ್ನು ಇಡಲಾಗಿದೆ ಎಂಬುದನ್ನು ಕೂಡ ನಾನು ಕೇಳಬಯಸುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ನಾನು ಈಗಾಗಲೇ ತಿಳಿಸಿದಂತೆ, ಚಿಕ್ಕನಾಯಕನಹಳ್ಳಿ, ಹೊಳಲ್ಕೆರೆ ತರಿಕೆರೆ ಈ ರೀತಿ ಹೋಗುತ್ತಿರುವಂತಹ ಕಡೆ ಬಹಳ ತಾಲ್ಲೂಕುಗಳು ಬಿಟ್ಟುಹೋಗಿವೆ ಇದರಲ್ಲೇನು ಅನುಮಾನವಿಲ್ಲ ಆ ಪ್ರಕಾರ ಕೂಡ್ಲಗಿನೂ ಬಿಟ್ಟು ಹೊಗಿದೆ ಹೀಗಾಗಿ ಎಲ್ಲರಿಗೂ ಕೂಡ ನಾನು ಬಂದು ನೋಡುತ್ತೇನೆ, ನಾನು ಮಾಡುವ ಪ್ರಯತ್ನವನ್ನು ಮಾಡುತ್ತೇನೆಂದು ಸುಳ್ಳು ಆಶ್ವಾಸನೆ ಕೊಡುವುದಕ್ಕೆ ನನಗಂತೂ ಆಸಕ್ತಿ ಇಲ್ಲ ಅದಕ್ಕೋಸ್ಕರ ನಾನು ಹೇಳಿದ್ದು, ಯಾವುದೇ ಕಾರಣಕ್ಕೂ

ನಿಮ್ಮ ಕ್ಷೇತ್ರವನ್ನು ಕೈಬಿಡುವಂತಹ ಪ್ರಶ್ನೆ ಇಲ್ಲ ಬೇರೆ ಯಾವ ರೂಪದಲ್ಲಿ ಅನುಕೂಲವಾಗುತ್ತದೆಯೋ ಆ ರೀತಿ ಪ್ರಯತ್ನ ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಈಗಾಗಲೆ ಈ ಭದ್ರಾ ಮೇಲ್ದಂಡೆ ಯೋಜನೆಗೆ, modernisation ದೃಷ್ಟಿಯಿಂದ ಮೊನ್ನೆ ಈಗಾಗಲೇ 82 ಕೊಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಜೊತೆಗೆ 389 ಕೋಟಿ ರೂಪಯಿಗಳಿಗೆ ಈಗಾಗಲೆ ಟೆಂಡರ್ ಅನ್ನು ಕರೆದಿದ್ದೇವೆ ಇದಲ್ಲದೇ ಈ ಬಾರಿಯೂ ಕೂಡ, ಉಳಿದ ಕಾಮಗಾರಿಯನ್ನು ಮಾಡಬೇಕೆನ್ನುವುದಕೋಸ್ಕರ, ಈಗ ತುಂಗಾದಿಂದ ಭದ್ರಾ ಡ್ಯಾಮ್ ತನಕ ಒಂದು ಲಿಫ್ಟ್‌ಗೆ ರೂ 125 ಕೋಟಿ ಟೆಂಡರ್ ನ್ನು ಈಗಾಗಲೇ ಕರೆದಿದೇವೆ ಭದ್ರಾ ಡ್ಯಾಂ ನಿಂದ, ಆ ಸುರಂಗ ಮತ್ತು ಉಳಿದ ಭಾಗಗಳಲ್ಲಿ ಕೆಲಸ ಮಾಡಲು ರೂ 550 ಕೋಟಿ ಟೆಂಡರ್ ಅನ್ನು ಕರೆದಿದ್ದೇವೆ ಮತ್ತೆ ಅಲ್ಲಿಂದ ಮುಂದಿನ ಚಾನಲ್‌ಗೂ ರೂ 150 ಕೋಟಿ ಟೆಂಡರ್ ಕರೆದಿದ್ದೇವೆ ಒಟ್ಟು ಮೂರು ಟೆಂಡರ್ ನಿಂದ ರೂ 825 ಕೋಟಿಗಳ ಟೆಂಡರ್ ಅನ್ನು ಈಗಾಗಲೇ ಕರೆದಿದ್ದೇವೆ ಈ ವರ್ಷದಲ್ಲಿ ಅದೆಷ್ಟು ಪ್ರಗತಿ ಮಾಡುವುದಕ್ಕೆ ಸಾಧ್ಯವೋ ಅಷ್ಟು ಪ್ರಗತಿಯನ್ನು ನಾವು ಮಾಡಿಕೊಂಡು ಹೋಗುತ್ತೇವೆ ಇದು ನಿಗಮದ ಮುಖಾಂತರವಾಗುತ್ತಿರುವುದರಿಂದ ನಮಗೆ ಹಣದ ಕೊರತೆ ಬರುವುದಿಲ್ಲ

ಶ್ರೀ ಎನ್ ಧರ್ಮ್‌ಸಿಂಗ್(ವಿರೋಧ ಪಕ್ಷದ ನಾಯಕರು)· ಮಾನ್ಯ ಅಧ್ಯಕ್ಷರೆ, ಶ್ರೀಮತಿ ಭಾಗಿರಥಿ ಮರುಳಸಿದ್ಧನಗೌಡರವರು ಅವರ ಕ್ಷೇತ್ರಕ್ಕೆ ಮತ್ತು ಎಲ್ಲಾ ಕಡೆಗೆ ಕೂಡ ಬಜೆಟ್‌ನಲ್ಲಿ ಅನುದಾನವನ್ನು ಸೇರಿಸಬೇಕೆಂಬ ಮಾತನ್ನು ಹೇಳಿದ್ದಾರೆ ಮೊನ್ನೆ ಮಾನ್ಯ ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದ್ದಾರೆ ಮಾನ್ಯ ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದಾಗ ನಾವು ಹೇಳುವುದಲ್ಲ ಅವರ ಮಿತ್ರ ಪಕ್ಷದವರಿಂದಲೇ ಸಾಕಷ್ಟು ಪ್ರತಿಕ್ರಿಯೆಗಳು ಹೊರಗಡೆ ಬಂದಿವೆ ಮಾನ್ಯ ಸಿದ್ಧರಾಮಯ್ಯನವರು 2005ರಲ್ಲಿ ಬಜೆಟ್ ಮಂಡನೆ ಮಾಡಿದರು ಆಗ ನಾವು irrigationಗೆ 29% ಕೊಟ್ಟಿದ್ದೆವು ಮತ್ತೆ ಹೋದ ಸಾರಿ ಮಾನ್ಯ ಯಡಿಯೂರಪ್ಪನವರು 26% ಇಟ್ಟಿದ್ದರು ಈ ಸಲ irrigation project ಗೆ you have provided only 17% ಹೇಗೆ ಮಾಡುತ್ತೀರಿ? ಗುಡಿಗುಂಡಾರಗಳಿಗೆ ಎಲ್ಲಾ ಕಡೆಗೆ ಸುಣ್ಣ ಬಣ್ಣ ಹಚ್ಚುವುದರಿಂದ ದೇಶದ ಪ್ರಗತಿ ಆಗುತ್ತದಾ? ರೈತರ ಬಗ್ಗೆ ಕಳಕಳಿ ಇರತಕ್ಕಂತಹ ಸರ್ಕಾರ ನೀರಾವರಿಯ whole sector ಗೆ ಎಷ್ಟು ಇಟ್ಟಿದೆ? ಮಾನ್ಯ ಪ್ರಕಾಶ್‌ರವರೇ, 26% ಅವರು ಕೊಟ್ಟಿದ್ದರು, 26% ಇದ್ದುದು 29% ಆಯಿತು, ಮತ್ತೆ 26% ಆಯಿತು ಈಗ 17% ಆಯಿತು ಇದು ನಿಮ್ಮ ಬಜೆಟ್ಟಾ? ನೀವು ಎಲ್ಲಾ ಕಡಗೆ ಹೇಗೆ ಮಾಡುತ್ತೀರಿ ನೀವು ಪ್ರಾಜೆಕ್ಟ್ ಹೇಗೆ complete ಮಾಡುತ್ತೀರಿ? ನೀವು ನೀರಾವರಿ ಸಚಿವರಾಗಿ ಸರಿಯಾದ ರೀತಿಯಲ್ಲಿ ತಿಳಿದುಕೊಂಡು, ಈ ರಾಜ್ಯದಲ್ಲಿ ನೀರಾವರಿ ಮತ್ತು ವಿಶೇಷವಾಗಿ ಬರಗಾಲ ಪ್ರದೇಶದಲ್ಲಿ ಯಾವ ರೀತಿಯಾಗಿ ಕೆಲಸ

ಮಾಡಬೇಕೆನ್ನುವುದು ಸುಮ್ಮನೆ ಹೇಳಿಕೆ ಮುಖಾಂತರ ಹೇಳುವುದಲ್ಲ ನೀವು ಯಾವ ರೀತಿಯಾಗಿ ಹಣ ಖರ್ಚು ಮಾಡುತ್ತೀರಿ, ಎಷ್ಟು ಹಣ ಇಟ್ಟಿದ್ದೀರಿ ಎನ್ನುವಂತಹ ಮಾತನ್ನು ಕೂಡ ಹೇಳಬೇಕು

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ನೀರಾವರಿಗೆ ಇಟ್ಟಿರತಕ್ಕಂತಹ ಹಣವನ್ನು ಸಂಪೂರ್ಣ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳಿ ಕಳೆದ ಬಾರಿ ಇಟ್ಟಂತಹ ಹಣವನ್ನು ಸಂಪೂರ್ಣ ಉಪಯೋಗ ಮಾಡಿಕೊಂಡು ಒಂದು ಪೈಸೆಯೂ ಉಳಿಸದೇ ಇರುವಂತಹ ಇಲಾಖೆ ನಮ್ಮದಾಗಿದೆ ಅವರು ಕೊಟ್ಟಂತಹ ಹಣ ಸಾಕಾಗದೇ ಮತ್ತೇ supplementary budgetನಲ್ಲಿ ಮತ್ತೆ ಹಣವನ್ನು ತೆಗೆದುಕೊಂಡು ಅದನ್ನು ಕೂಡ 39 projectಗಳಲ್ಲಿ 34 project ಗಳನ್ನು ಮುಗಿಸಿದ್ದೇವೆ ಜೊತೆಗೆ ಇನ್ನು ಉಳಿದ ನಾಲ್ಕು ಯೋಜನೆಗಳನ್ನು ತೆಗೆದುಕೊಂಡಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೂಡ ಗೊತ್ತಾಗಿದೆ ನಾನು ಅದಕ್ಕೋಸ್ಕರ ಹೇಳುತ್ತಿರುವುದು, ಈಗ ನಮ್ಮ ಇಲಾಖೆಗೆ ಎಷ್ಟು ಹಣವನ್ನು ಇಟ್ಟಿದ್ದಾರೆ ಎಂಬ ಬಗ್ಗೆ ನಾನು ನಮ್ಮ ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡುತ್ತಿದ್ದೇನೆ ಯಾವ ಯಾವ ನಿಗಮಗಳಿಗೆ ಎಷ್ಟೆಷ್ಟು ಹಣ ಹಾಕಬೇಕು, ಯಾವ ಯಾವ projectಗಳಿಗೆ ಎಷ್ಟೆಷ್ಟು ಹಣ ಹಾಕಬೇಕು, ಹೊಸದಾಗಿ ನಾವು ಕಾವೇರಿ ವಿಭಾಗದಲ್ಲಿ ನ್ಯಾಯಾಧೀಕರಣದಿಂದ ಬಹಳ ಅನ್ಯಾಯವಾಗಿರುವುದನ್ನು ಗಮನಿಸಿರುವುದರಿಂದ ಅಲ್ಲಿಯು ಕೂಡ 1353 ಕೆರೆಗಳು, ಇವುಗಳನ್ನಾದರೂ ಎರಡು ವರ್ಷಗಳಲ್ಲಿ ಅಭಿವೃದ್ಧಿಪಡಿಸಬೇಕೆಂದು ಇದ್ದೇವೆ ಜೊತೆಗೆ ಬಾಂದಾರ್‌ಗಳಿಗೆ ಹಿಂದೆ ರಾಜ್ಯ ಸರ್ಕಾರ 75% ಕೊಟ್ಟು 25% local ಜನ ಹಾಕಬೇಕೆಂದು ಆಗಿತ್ತು ನಿಮಗೇ ಗೊತ್ತಿದೆ ನಿಮ್ಮ ಸರ್ಕಾರದಲ್ಲಿ 25%ನ್ನು ಹಾಕುವುದಕ್ಕೆ ಒಬ್ಬರೂ ಮುಂದೆ ಬರಲಿಲ್ಲ ಆ ಕಾರಣದಿಂದ ಎಲ್ಲ ಯೋಜನೆಗಳು ಹಾಗೆಯೇ ಬಿದ್ದಿವೆ 100% ಹಣವನ್ನು ಕೂಡ ರಾಜ್ಯ ಸರ್ಕಾರವೇ ಹಾಕಿಕೊಂಡು ಆ ಬಾಂದರ್‌ಗಳನ್ನು ಒಂದು ರೂಪಕ್ಕೆ ತರಬೇಕೆಂದು ಪ್ರಯತ್ನ ನಡೆಯುತ್ತಿದೆ ಜೊತೆಗೆ ನೀರು ಬಳಕೆದಾರರ ಸಂಘಗಳನ್ನು ಕೂಡ ಬಳಸಿಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ ಹೀಗಾಗಿ ಯಾವ ಯಾವ ಯೋಜನೆಗಳನ್ನು ನಾವು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೋ, ಆ ಯೋಜನೆಗಳೆಲ್ಲವನ್ನು ನಾವು ತೆಗೆದುಕೊಳ್ಳುತ್ತೇವೆ ನಾವು ಹೇಳಿರುವಂತಹ ಯೋಜನೆಗಳನ್ನು ತೆಗೆದುಕೊಂಡು ಪೂರ್ಣಗೊಳಿಸಿ ನಿಮ್ಮ ಮುಂದಿಡುತ್ತೇವ

ಶ್ರೀ ಹೆಚ್ ಆಂಜನೇಯ ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಬದ್ರಾ ಮೇಲ್ದಂಡೆ ಯೋಜನೆ ಬರುತ್ತಿದೆ ಈ ಯೋಜನೆಗೆ ಈಗಿನ ಬಜೆಟ್‌ನಲ್ಲಿ ಹಣವೇ ಇಟ್ಟಿಲ್ಲವೆಂದು 24ನೇ ತಾರೀಖು ಚಿತ್ರದುರ್ಗ ಜಿಲ್ಲೆಯ ಬಂದನ್ನು ಕರೆದಿದ್ದಾರೆ ಮಾನ್ಯ ನೀರಾವರಿ ಸಚಿವರ ಗಮನಕ್ಕೆ ಈಗಾಗಲೇ ಹೋಗಿರಬಹುದು ತಾವು ತಮ್ಮ ಉತ್ತರದಲ್ಲಿ ರೂ 825 ಕೋಟಿ ರೂಪಾಯಿಗಳನ್ನು ಈ ಭದ್ರಾ ಮೇಲ್ದಂಡೆ ಯೋಜನೆ

ಅನುಷ್ಠಾನಕ್ಕೆ ತರಲಿಕ್ಕೆ ವಿವಿಧ ಕಾಮಗಾರಿಗಳಿಗೆ ಟೆಂಡರನ್ನು ಕರೆದಿದ್ದೇವೆಂದು ಹೇಳಿದಿರಿ ಮತ್ತೊಂದು ಕಡೆಗೆ ಕೇವಲ ಬರೀ ವರ್ಷದ ಬಜೆಟ್‌ನಲ್ಲಿ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಡಲಾಗಿದೆ ಎಂದು ಹೇಳುತ್ತಿದ್ದೀರಿ ಈ 50 ಲಕ್ಷ ರೂಪಾಯಿಗಳಲ್ಲಿ ಏನಾಗುತ್ತದೆ? ಆದ್ದರಿಂದ ತಾವು ದಯಮಾಡಿ 24ನೇ ತಾರೀಖು ಚಿತ್ರದುರ್ಗ ಜಿಲ್ಲೆಯಾದ್ಯಂತ ಉಗ್ರವಾದ ಚಳುವಳಿ ಆಗತಕ್ಕಂತಹ ಸಂಭವ ಇರುವುದರಿಂದ ಈ ಬಗ್ಗೆ ತಾವು ಸ್ಪಷ್ಟನೆ ಕೊಡಬೇಕು ಭದ್ರಾ ಮೇಲ್ದಂಡೆ ಯೋಜನೆಯನ್ನು ನಾವು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದೇವೆ, ಅದನ್ನು ಅನುಷ್ಠಾನಕ್ಕೆ ತಂದೇ ತರುತ್ತೇವೆನ್ನುವಂತಹ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ತಾವು ಇಲ್ಲಿ ಹೇಳಬೇಕು ಚಿತ್ರದುರ್ಗ ಜಿಲ್ಲೆ ಬಂದ್ ಆಗತಕ್ಕಂತಹ ವಿಷಯ ತಮ್ಮ ಗಮನಕ್ಕೆ ಬಂದಿರಬಹುದು ಆ ಚಳುವಳಿಗಾರರನ್ನು ಕೂಡಲೇ ಕರೆದು ಮಾತುಕತೆ ಮೂಲಕ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಅವರಿಗೆ ಹೇಳಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ನಾನು ತಮ್ಮ ಮೂಲಕ ಅವರಿಗೆ ಒತ್ತಾಯ ಮಾಡುತ್ತೇನೆ

ಶ್ರೀ ಎ ವಿ ಉಮಾಪತಿ ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಚಿತ್ರದುರ್ಗ ಜಿಲ್ಲೆಗೆ ಬಂದಾಗ ಈ ಸಾರಿಯ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ನಾವು ಇಡುತ್ತೇವೆಂದು ಹೇಳಿದ್ದರು ಆದರೆ ಇವತ್ತು ಅವರು ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಇಟ್ಟಿರತಕ್ಕಂತಹ ಹಣ ಯಾವುದಕ್ಕೂ ಉಪಯೋಗವಾಗುವುದಿಲ್ಲ ತಾವು ಭದ್ರಾ ಮೇಲ್ದಂಡೆ ಯೋಜನೆಯನ್ನು ನಾವು ಜಾರಿಗೆ ತಂದೇ ತರುತ್ತೇವೆಂದು ನೀವು ತೀರ್ಮಾನ ತೆಗೆದುಕೊಂಡಿದ್ದೀರಿ ಆದರೆ ಹಣ ಇಲ್ಲದೆ ನೀವು ಹೇಗೆ ಜಾರಿಗೆ ತರುತ್ತೀರಿ? ಅದಕ್ಕೆ ಎಷ್ಟು ಹಣವನ್ನು ತಾವು ನಿಗದಿ ಮಾಡಿದ್ದೀರಿ, ಈ ಬಜೆಟ್‌ನಲ್ಲಿ ಹಣವೇ ಇಟ್ಟಿಲ್ಲ ತಾವು ನಮ್ಮ ಚಿತ್ರದುರ್ಗ ಜಿಲ್ಲೆಗೆ ಬಂದಾಗ ಹೇಳಿದಂತಹ ಮಾತನ್ನು ತಾವು ಉಳಿಸಿಕೊಳ್ಳಬೇಕು ಅದರ ಬಗ್ಗೆ ತಾವು ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ಈ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯನ್ನು ಕಳೆದ ವರ್ಷದಿಂದ ನಾವು ಪ್ರಾರಂಭ ಮಾಡಿದ್ದೇವೆ ಹಾಗಾಗಿ specific ಆಗಿ ಈ ವರ್ಷ ನಾವು ಎಷ್ಟು ಹಣವನ್ನು ಇಡುತ್ತೇವೆ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂಬ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ ಆ ಭಾಗದ ಹೋರಾಟಗಾರರು ಕೂಡ ನನಗೆ ಫೋನ್ ಮಾಡಿದ್ದರು ನಾವು 23 ಹಾಗು 24ನೇ ತಾರೀಕು ಬಂದ್ ಮಾಡುತ್ತಿದ್ದೇವೆಂದು ಹೇಳಿದರು ನಿಮ್ಮ ಹಾಗೆ ಅವರು ಕೂಡ ತಪ್ಪು ತಿಳಿದುಕೊಂಡಿದ್ದಾರೆ ಈ ಯೋಜನೆಯನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಕೈ ಬಿಡುವುದಿಲ್ಲ ಈ ಕಾಮಗಾರಿಯನ್ನು ನಾವು ತೆಗೆದುಕೊಂಡಿದ್ದೇವೆ ಇನ್ನು ಮುಂದುವರೆಸುತ್ತೇವೆ ಎಷ್ಟೆಷ್ಟು ಹಣ ಬೇಕೆಂಬ ಬಗ್ಗೆ ಈಗಾಗಲೇ ಸರ್ವೇ ಮಾಡುತ್ತಾರೆ ಸರ್ವೇ ಪ್ರಕಾರ ಈ ವರ್ಷ ಎಷ್ಟು ಕಾಮಗಾರಿ ಮಾಡುವುದಕ್ಕೆ

ಅವರಿಗೆ ಶಕ್ತಿ ಇದೆಯೋ ಅದರ ಮೇಲೆ ಭದ್ರಾ ಮೇಲ್ದಂಡೆ ಯೋಜನೆಗೆ ಆದ್ಯತೆ ಮೇಲೆ ಹಣವನ್ನು ಇಟ್ಟು ಕಾಮಗಾರಿಗಳನ್ನು ಮಾಡುತ್ತೇವೆ

ರಾಜೀವ್‌ಗಾಂಧಿ ಆಶ್ರಯ ವಸತಿ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ · 222/1569
ಸದಸ್ಯರ ಹೆಸರು ಶ್ರೀಮತಿ ಶಕುಂತಲಾ ಟಿ ಶೆಟ್ಟಿ
ಉತ್ತರಿಸುವ ಸಚಿವರ ಹೆಸರು ಶ್ರೀ ಪಿ ಟಿ ಜಯಕುಮಾರ್(ವಸತಿ ಸಚಿವರು)

ಅ) ರಾಜೀವ್‌ಗಾಂಧಿ ಆಶ್ರಯ ವಸತಿ ಯೋಜನೆಗೆ ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಲು ತುರ್ತಾಗಿ ಮಾಡುವುದರಿಂದ ಅನರ್ಹ ಫಲಾನುಭವಿಗಳು ಸೇರಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಗ್ರಾಮೀಣ ಆಶ್ರಯ ವಸತಿ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಮಾತ್ರ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲು ಈ ಕೆಳಗಿನ ನಿಯಮಗಳನ್ನು ಪಾಲಿಸಲು ಸೂಚಿಸಲಾಗಿರುತ್ತದೆ

ಅ) ಫಲಾನುಭವಿಗಳು 2003ರ ಮೇ-ಜೂನ್ ತಿಂಗಳಲ್ಲಿ ಕೈಗೊಳ್ಳಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರ ಪಟ್ಟಿ ಈಗಾಗಲೇ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿದ್ದು, ಈ ಪಟ್ಟಿಯಿಂದಲೇ ಫಲಾನುಭವಿಗಳನ್ನು ಆಯ್ಕೆ ಮಾಡಲು ಸೂಚಿಸಲಾಗಿರುತ್ತದೆ

ಆ) ಈ ಪಟ್ಟಿಯಲ್ಲಿ ಒಂದು ವೇಳೆ ಅನರ್ಹರು ಸೇರ್ಪಡೆಯಾಗಿದ್ದಲ್ಲಿ ಅಂತಹ ಪಲಾನುಭವಿಗಳನ್ನು ಗ್ರಾಮಸಭೆಯಲ್ಲಿ ರರಾವು ಹೊರಡಿಸಿ ಫಲಾನುಭವಿವಾರು ಕಾರಣವನ್ನು ನೀಡಿ ಕೈಬಿಡಲು ಅವಕಾಶವಿರುತ್ತದೆ

ಇ) ಗ್ರಾಮಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಜಾಗೃತಿ ಸಮಿತಿಯ ಮುಂದಿಟ್ಟು ಅನುಮೋದನೆ ಪಡೆದುಕೊಳ್ಳಬೇಕಿರುತ್ತದೆ ಈ ಹಂತದಲ್ಲಿಯೂ ಸಹ ಫಲಾನುಭವಿಗಳನ್ನು ಅನರ್ಹರೆಂದು ಕಂಡು ಬಂದಲ್ಲಿ ಅಂತಹ ಫಲಾನುಭವಿಗಳನ್ನು ಕೈಬಿಡಲು ಅವಕಾಶವಿರುತ್ತದೆ

ಆ) ಅನರ್ಹ ಫಲಾನುಭವಿಗಳು ಆಯ್ಕೆಯಾಗಿ ನೋಂದಣಿ ಸಮಯದಲ್ಲಿ ಬಿಟ್ಟು ಹೋಗುವುದರಿಂದ ಪಂಚಾಯತ್‌ಗೆ ಗುರಿ ಸಾಧಿಸುವುದು ಸಾಧ್ಯವಾಗದಿರುವುದು ನಿಜವಲ್ಲವೇ,

ಆಯ್ಕೆಯಾದ ಫಲಾನುಭವಿಗಳು ನೋಂದಣಿ ಸಮಯದಲ್ಲಿ ಅನರ್ಹರೆಂದು ಕಂಡು ಬಂದಲ್ಲಿ ಅಂತಹವರದನ್ನು ಕೈಬಿಡಲಾಗುತ್ತಿದೆ

ಇ) ನೊಂದಣಿ ಸಮಯದಲ್ಲಿ ಅನರ್ಹ ಫಲಾನುಭವಿಗಳನ್ನು ಬಿಟ್ಟು ಹೊಸ ಫಲಾನುಭವಿಗಳ ಸೇರ್ಪಡೆಗೆ ಅವಕಾಶವಿದೆಯೇ,

ಈ ಅನರ್ಹ ಫಲಾನುಭವಿಗಳ ಬದಲಿಗೆ ನಿಗದಿತ ಸಮಯದೊಳಗೆ ಅರ್ಹ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಮರು ಆಯ್ಕೆ ಮಾಡಲು ಅವಕಾಶವಿರುತ್ತದೆ

ಈ) ಇಲ್ಲದಿದ್ದರೆ, ಅದಕ್ಕೆ ಕಾರಣವೇನು

ಗ್ರಾಮೀಣ ಆಶ್ರಯ 2006-07ನೇ ಸಾಲಿಗೆ ಸಂಬಂಧಿಸಿದಂತೆ ಗ್ರಾಮ ಸಭೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಗಡುವನ್ನು ದಿನಾಂಕ 31 03 2007ರ ವರೆಗೆ ವಿಸ್ತರಿಸಲಾಗಿರುತ್ತದೆ

ಉ) ಪಂಚಾಯತ್‌ನಲ್ಲಿ ಅರ್ಹ ಫಲಾನುಭವಿಗಳು ಸಿಗದಿದ್ದರೆ ಬೇಡಿಕೆ ಇರುವ ಪಂಚಾಯತ್‌ಗಳ ಅರ್ಹ ಪಲಾನುಭವಿಗಳಿಗೆ ಅವಕಾಶ ಕಲ್ಪಿಸಲಾಗುವುದೇ?

ಗ್ರಾಮ ಪಂಚಾಯಿತಿಗೆ ನೀಡಲಾದ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಲಭ್ಯವಿಲ್ಲದಿರುವ ಬಗ್ಗೆ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ರರಾವು ಹೊರಡಿಸಬೇಕಾಗಿರುತ್ತದೆ ಈ ರೀತಿಯಲ್ಲಿ ರರಾವು ಹೊರಡಿಸಿದ ನಂತರ ಸದರಿ ಗ್ರಾಮ ಪಂಚಾಯಿತಿಯಲ್ಲಿ ಬಳಕೆಯಾಗದಿರುವ ಗುರಿಯನ್ನು ಬೇರೆ ಗ್ರಾಮ ಪಂಚಾಯಿತಿಗೆ ವರ್ಗಾಯಿಸುವ ಬಗ್ಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಪ್ರಸ್ತಾವನೆಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ದೃಢಿಕರಣದೊಂದಿಗೆ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತಕ್ಕೆ ಸಲ್ಲಿಸಿದ್ದಲ್ಲಿ ನಿಗಮದಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ

ಶ್ರೀಮತಿ ಶಕುಂತಲ ಟಿ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಆಶ್ರಯ ವಸತಿ ಯೋಜನೆಯಡಿಯಲ್ಲಿ ತುರ್ತಾಗಿ 60-60 ಮನೆಗಳಿಗೆ ಹೆಸರುಗಳನ್ನು ಕೊಡಬೇಕೆಂದು ಕೇಳಿದರು ಪೂರ್ತಿ ಉತ್ತರವನ್ನು ಓದುವಷ್ಟು ಸಮಯಾವಕಾಶ ಇಲ್ಲ 60-60 ಹೆಸರುಗಳನ್ನು ಕಳುಹಿಸಿದರೆ registration ಆಗುವಂತಹ ಸಂದರ್ಭದಲ್ಲಿ ಅಲ್ಲಿ ಎಲ್ಲೋ objection ಆಗಿ ಎಲ್ಲ ವಾಪಸ್ ಹೋಗುತ್ತಿವೆ ಆದರೆ ಕೆಲವು ಪಂಚಾಯಿತಿಗಳಲ್ಲಿ ಮನೆಗಳ ಸಂಖ್ಯೆ ಅಷ್ಟು ಇರುವುದಿಲ್ಲ ಬೇರೊಂದು ಕಡೆಗೆ ಕೊಡುವಂತಹ ಅವಕಾಶ ನಮಗೆ ಇಲ್ಲ ಬೇರೆ ಪಂಚಾಯಿತಿಗಳಲ್ಲಿ ಎಲ್ಲಿ ಅವಶ್ಯಕತೆ ಇಲ್ಲವೋ ಅಲ್ಲಿಯ ಮನೆಗಳನ್ನು ಬೇರೆ ಪಂಚಾಯಿತಿಗೆ ವರ್ಗಾಯಿಸುವಂತಹ ಅವಕಾಶವನ್ನು ಶಾಸಕರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ನಮ್ಮ ಕಡೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮರದ ರೇಟ್ ಹಾಗೂ ಸಿಮೆಂಟ್ ರೇಟ್ ಸಮಾನವಾಗಿದ್ದ ಕಾರಣ ಹೆಚ್ಚಾಗಿ ಎಲ್ಲರೂ ತಾರಸಿ ಮನೆಯನ್ನೇ ಬಯಸುತ್ತಿದ್ದಾರೆ ಆದರೆ ಅದಕ್ಕೆ ಬಿಲ್ ಆಗುತ್ತಿಲ್ಲ ಇಲಾಖೆಯಿಂದ ಅದು ಹೆಂಚಿನ ಮನೆ ಆಗಬೇಕೆಂದು ಹೇಳುತ್ತಿದ್ದಾರೆ ಅದಕ್ಕಾಗಿ ತಾರಸಿ ಮನೆ ಕಟ್ಟಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಕೇಳುತ್ತಿದ್ದೇನೆ ಇನ್ನು ಮೂರನೆಯದಾಗಿ ಪ್ರತಿಯೊಂದು ಮನೆಯ ಬಿಲ್ ಆಗಬೇಕೆಂದರೆ ಪಿಎ ಹೋಗಿ ಕಾರ್ಯದರ್ಶಿಯವರು ನಿಂತು ಫೋಟೋ ತೆಗೆಸಿ ಕೊಟ್ಟು ಬಿಲ್ ಮಾಡಿಸಬೇಕೆಂದು ಇದರಲ್ಲಿ ಇದೆ ಆದರೆ ಒಂದು ಮನೆಗೆ ನಾಲ್ಕು

ಬಾರಿ ಬಿಲ್ ಆಗುತ್ತಿದೆ ತುಂಬಾ ಮನೆ ಇರುವಂತಹ ಕಡೆ ಅಂತಹ ತೊಂದರೆ ಬರುವುದಿಲ್ಲ ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ತೊಂದರೆ ಇದೆ ನಮ್ಮಲ್ಲಿ ಒಂದು ಮನೆಗೆ ಹೋಗಬೇಕೆಂದರೆ ಅವರು ಮದ್ಯಾಹ್ನ ಅಥವಾ ಸಂಜೆಯವರೆಗೆ ಬಸ್ಸಿನಲ್ಲಿ ಬಂದು ಇಳಿದು, ಒಂದೆರಡು ಕಿ ಮಿ ನಡೆದು ಅಲ್ಲಿಗೆ photographer ನ್ನು ಕರೆದುಕೊಂಡು ಹೋಗಿ ಆ ಜಾಗದ ಫೋಟೋ ತೆಗೆಸಿಕೊಂಡು ಬರುವಾಗ ಬಹುಶ ಕಾರ್ಯದರ್ಶಿ ವರ್ಷ ಪೂರ್ತಿ 240 ಬಾರಿ ಅವರು ಫೋಟೋ ಕ್ಯಾಮರಾ ಹಿಡಿದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ ಅದರ ಬದಲು ಒಂದು ಬಾರಿ ಪೂರ್ತಿ ಮನೆ ಆದ ಮೇಲೆ ಕಾರ್ಯದರ್ಶಿ ನಿಂತು ಫೋಟೋ ತೆಗೆಯುವಂತಹ ವ್ಯವಸ್ಥೆ ಇದ್ದರೆ ಸಾಕು ಅದರ ಮೊದಲು ಆ ಮನೆಯವರೇ ತೆಗೆಸಿ ಕೊಟ್ಟ ಫೋಟೋ ಮೇಲೆ ಬಿಲ್ ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ತಿಳಿಸುತ್ತೇನೆ

ಶ್ರೀ ಕೆ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೆ, ಮನೆಗಳ ವಿಚಾರದಲ್ಲಿ ಆಗಿಂದಾಗ್ಗೆ ಎಲ್ಲರೂ ಪ್ರಶ್ನೆಗಳನ್ನು ಹಾಕುತ್ತಲೇ ಇರುತ್ತೇವೆ ಗುರಿ ಏನಿದೆ, ಡಿಮಾಂಡ್ ಏನಿದೆ ಎಂದು ಪ್ರಶ್ನೆ ಮಾಡುತ್ತಲೇ ಇರುತ್ತೇವೆ ಅದರಲ್ಲಿ ಆಗುತ್ತಿರತಕ್ಕಂತಹ ತೊಂದರೆಗಳು ಇಲ್ಲಿ ಚರ್ಚೆ ಆಗುತ್ತಲೇ ಇರುತ್ತವೆ ತಮ್ಮ ಮೂಲಕ ನಾನು ಸಚಿವರಿಗೆ ಸಲಹೆ ಮಾಡುವುದೇನೆಂದರೆ, ಹಿಂದೆ ಇದ್ದಂತೆ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗಳನ್ನು ಮಾಡಿ ಮನೆಗಳನ್ನು ಕ್ಷೇತ್ರಕ್ಕೆ ಇಷ್ಟು ಎಂದು ಗುರಿಯನ್ನು ಕೊಟ್ಟರೆ ಆಗ ಎಲ್ಲ ಸಮಸ್ಯೆ ಕೂಡ ಬಗೆಹರಿಯುತ್ತದೆ ಈ ವಿಚಾರದಲ್ಲಿ ಎಲ್ಲ ವಿರೊಧ ಪಕ್ಷದವರು ಇದಕ್ಕೆ ಸಹಾಯ ಮಾಡುತ್ತಾರೆ ಆದ ಕಾರಣ ಇದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತಂದು ಶಾಸಕರ ಅಧ್ಯಕ್ಷತೆಯಲ್ಲಿಯೇ ಆಶ್ರಯ ಸಮಿತಿಗಳನ್ನು ಮಾಡಿ ಕ್ಷೇತ್ರಕ್ಕೆ ಗುರಿಯನ್ನು ನಿಗಧಿ ಮಾಡತಕ್ಕಂಥದ್ದರ ಬಗ್ಗೆ ಸರ್ಕಾರ ಯೋಚನೆಯನ್ನು ಮಾಡುತ್ತಿದಯೇ ಅಥವಾ ಇಲ್ಲವೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕೆಂದು ನಾನು ತಮ್ಮ ಮೂಲಕ ಕೇಳ ಬಯಸುತ್ತೇನೆ

ಶ್ರೀ ಹೆಚ್ ಆಂಜನೇಯ – ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡ ಬಯಸುತ್ತೇನೆ ಕಳೆದ ಸರ್ಕಾರ ಬರುವುದಕ್ಕೆ ಮುಂಚೆ ಹಿಂದಿನ ಸರ್ಕಾರ ಇದ್ದಾಗ, ಈ ವಸತಿಯಲ್ಲಿ ದೊಡ್ಡ ಸಾಧನೆಯನ್ನೇ ಮಾಡಿದ್ದರು ಸುಮಾರು ಏಳರಿಂದ ಎಂಟು ಲಕ್ಷ ಜನರಿಗೆ ಮನೆಯನ್ನು ಕೊಟ್ಟರು ಆಶ್ರಯ ಮನೆಗಳಾಯಿತು ಈಗ ಇಲ್ಲಿಯವರೆವಿಗೂ ಕೂಡ ಏಕೆ ಆಗಿಲ್ಲವೆಂದರೆ, ಫಲಾನುಭವಿಗಳ ಆಯ್ಕೆಯಲ್ಲಿ ಆಗಿರತಕ್ಕಂಥ ವಿಳಂಬವೇ ಕಾರಣವಾಗಿದೆ ಶಾಸಕರಿಗೆ ಪ್ರತಿಯೊಂದು ಹಳ್ಳಿಯೂ ಗೊತ್ತಿರುತ್ತದೆ, ಪ್ರತಿಯೊಂದು ಮನೆ ಬಾಗಿಲು ಕೂಡ ಗೊತ್ತಿರುತ್ತದೆ ಯಾರು ಹುಲ್ಲು ಗುಡಿಸಲಿನಲ್ಲಿದ್ದಾರೆಂದೂ ಕೂಡ ಶಾಸಕರಿಗೆ ಗೊತ್ತು ಅವುಗಳ ಬಗ್ಗೆ ಎಲ್ಲ ಶಾಸಕರು ಲಿಸ್ಟ್ ಕೂಡ ಮಾಡಿಟ್ಟುಕೊಂಡಿರುತ್ತಾರೆ ಆದುದರಿಂದ ಅವರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡಿದರೆ ಖಂಡಿತವಾಗಿಯೂ ಕೂಡ ನಿಮ್ಮ ಸರ್ಕಾರದ ಗುರಿ ಏನಿದೆಯೋ ಆ ಗುರಿ ಈಡೇರುತ್ತಿತ್ತು ಒಂದು ತಿಂಗಳಲ್ಲಿ

ಫಲಾನುಭವಿಗಳ ಆಯ್ಕೆಯನ್ನು ಮಾಡಬಹುದು ಇನ್ನೂ ಬೇಗ ಎಂದರೆ 15 ದಿವಸಗಳಲ್ಲಿಯೇ ಫಲಾನುಬವಿಗಳ ಆಯ್ಕೆಯನ್ನು ಮಾಡಬಹುದು ಎಲ್ಲಾ ಜನರನ್ನು, ಸದಸ್ಯರನ್ನು ಸಂಪರ್ಕ ಮಾಡಿ ಕೇವಲ 15 ದಿವಸಗಳಲ್ಲಿ ಫಲಾನುಭವಿಗಳ ಅಯ್ಕೆ ಪಟ್ಟಿಯನ್ನು ಮಾಡಬಹುದು ಅಂಥ ಸಂಪರ್ಕದ ಶಕ್ತಿ ಶಾಸಕರಿಗೆ ಇರುತ್ತದೆ ಆದುದರಿಂದ ಈ ಬಗ್ಗೆ ಮಾನ್ಯ ವಿರೋದ ಪಕ್ಷದ ನಾಯಕರು ಬೇಲೂರಿನ ಘೋಷಣೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರಿಕರಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೇವೆಂದು ಹೇಳುವುದು ನಿಜ ಒತ್ತು ಕೊಟ್ಟಿದ್ದೇವೆ ಗ್ರಾಮ ಪಂಚಾಯಿತಿಗೆ ಹೆಚ್ಚು ಶಕ್ತಿಯನ್ನು ಕೊಡೋಣ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡಿ ಕಾಲ ಕಾಲಕ್ಕೆ ನೀವು ಕೊಟ್ಟಿರತಕ್ಕಂಥ ಗುರಿ ಏನಿದೆ ಅದನ್ನು ಒಂದು ತಿಂಗಳಲ್ಲಿ ತಲುಪುವುದಕ್ಕೆ ಸಾಧ್ಯತೆ ಇದೆ ಅದನ್ನು ಬಿಟ್ಟು ನೀವು ಈಗಿರುವ ರೀತಿಯಲ್ಲಿಯೇ ಮಾಡಿಕೊಂಡು ಹೋದರೆ ಒಂದು ಲಕ್ಷ ಮನೆಯಗಳನ್ನೂ ಕೂಡ ಕಟ್ಟುವುದಕ್ಕೆ ಆಗುವುದಿಲ್ಲ ಆದುದರಿಂದ ಮಾನ್ಯ ಅಧ್ಯಕ್ಷರು ದಯಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡುವುದಕ್ಕೆ ಮಾನ್ಯ ಸಚಿವರಿಗೆ ಸೂಚನೆಯನ್ನು ಕೊಡಬೇಕೆಂದು ನಿಮ್ಮಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ

ಅಧ್ಯಕ್ಷರು – ನಿಮ್ಮ ಸಲಹೆ ಬಹಳ ದೊಡ್ಡದಾಗಿದೆ

ಶ್ರೀ ಶಿವರಾಜ್ ಸಜ್ಜನರ್– ಮಾನ್ಯ ಅಧ್ಯಕ್ಷರೆ,

ಅಧ್ಯಕರು – ಈಗಾಗಲೇ ಇಬ್ಬರೂ ಮೂವರು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ ಮೊದಲು ಸಚಿವರು ಉತ್ತರವನ್ನು ಹೇಳಲಿ ಅನಂತರ ಕೇಳುವಿರಂತೆ

ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು) – ನಾನು ಮೊದಲು ಉತ್ತರ ಹೇಳಿಬಿಡುತ್ತೇನೆ ಅನಂತರ ಕ್ಲಾರಿಫಿಕೇಶನ್ ಕೇಳುವಿರಂತೆ

ಶ್ರೀ ಶಿವರಾಜ್ ಸಜ್ಜನರ್(ಹಾವೇರಿ) – ಮಾನ್ಯ ಅಧ್ಯಕ್ಷರೆ, ಗ್ರಾಮಸಭೆಗಳು ಸರಿಯಾಗಿ ನಡೆಯದೇ ಇರುವುದರಿಂದ ಅಲ್ಲಿ ಮನೆಗಳ ಆಯ್ಕೆ ಸುಗಮವಾಗಿ ನಡೆಯುತ್ತಿಲ್ಲ ಅಲ್ಲಿ ಕೋರ್ಟ್‌ಗೆ ಹೋದರು, ಸ್ಟೇ ಆಯಿತು, ಮತ್ತೆ 31,03,2007 ರೊಳಗಾಗಿ ಗ್ರಾಮ ಸಭೆ ಮಾಡಬೇಕೆಂದು ಸರ್ಕಾರ ಒಂದು ಆದೇಶವನ್ನು ಮಾಡಿದೆ ಈ ಗ್ರಾಮಸಭೆಗಳೂ ಕೂಡ ಆಗುವುದಿಲ್ಲ ಈಗ ಗ್ರಾಮ ಸಭೆ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ ಎಲ್ಲಾ ಕಡೆ ಇವೊತ್ತು ಗ್ರಾಮಸಭೆಯನ್ನು ನಡೆಸಲಾರದಷ್ಟು ತೊಂದರೆಯಾಗುತ್ತಿದೆ ಅದಕ್ಕಾಗಿ ದಯವಿಟ್ಟು ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡಿ ತಕ್ಷಣ ಈ ಸಮಿತಿಯಿಂದ ಯಾದಿಯನ್ನು ಪಡೆದುಕೊಂಡು ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆ ಅದನ್ನು ಬಿಟ್ಟು ನೀವು ಗ್ರಾಮಸಭೆಗೆ ಕೊಟ್ಟರೆ ಅಲ್ಲಿ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ ದಯವಿಟ್ಟು ಈ ಬಗ್ಗೆ ಪರಿಶೀಲನೆಯನ್ನು ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡಬೇಕು

ಶ್ರೀ ಎಂ ಮಹದೇವು – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಮುಂಚೆ ಒಂದು ನಿಮಿಷದಲ್ಲಿ ನಾನು ಹೇಳುವುದೇನೆಂದರೆ, ಕಳೆದ ಬಾರಿ ನಾನೇ ಒಂದು ಕಾಲಿಂಗ್ ಅಟೆನ್‌ಶನ್ ಹಾಕಿದ್ದೆ ಮಾನ್ಯ ಸಚಿವರು ಅದರ ಬಗ್ಗೆ ಗಮನಿಸುತ್ತೇವೆ ಎಂದು ಹೇಳಿದ್ದರು ಈಗಾಗಲೇ ಇದು ಎಲ್ಲರ ಅನುಭವ ಎಲ್ಲರ ಅನುಭವ ಏನೆಂದರೆ, ಮನೆ ಕೊಡುವುದಕ್ಕೆ ಪಂಚಾಯಿತಿಯವರಿಗೆ ಅಧಿಕಾರ ಕೊಟ್ಟು, ವಿಜಿಲೆನ್ಸ್ ಕಮಿಟಿ ಎಂದು ಮಾಡಿ ಅದರ ಆಧಾರದ ಮೇಲೆ ತಪ್ಪಾಗಿದ್ದರೆ ಅದನ್ನು ನೀವು ತಿದ್ದಿ ಎಂದು ಹೇಳಿದ್ದಿರಿ ನಾವು ಎಲ್ಲಾ ಕಡೆ ವಿಜಿಲೆನ್ಸ್ ಕಮಿಟಿ ಆಧಾರದ ಮೇಲೆ ಪಂಚಾಯಿತಿಗಳಲ್ಲಿ ನಾವು ಮನೆಗಳ ಫೋಟೋ ಹೊಡೆಸಿದ್ದೇವೆ, ಹಾಗೆ ಫೋಟೋ ಹೊಡೆಸಿ, ಕೊಡುವ ಮನೆ, ಇರುವ ವಾಸದ ಮನೆ, ಅವನು ಕಟ್ಟಬೇಕಾದ ಮನೆ ಬಗ್ಗೆ ನೋಡಿದ್ದೇವೆ ಸೆಕ್ರೆಟರಿಗಳು ಸುಳ್ಳು ಫೋಟೋ ಹೊಡೆದುಕೊಂಡು ಬರುತ್ತಾರೆ ಇವೊತ್ತಾದರೂ ಕೂಡ ದಯವಿಟ್ಟು ಸರ್ಕಾರದಲ್ಲಿ ಒಂದು ಇಚ್ಛಾಶಕ್ತಿ ಇರಬೇಕು ಈ ಹೌಸಿಂಗ್ ಪಾಲಿಸಿ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬರಬೇಕಾದರೆ, ಕೇವಲ ಇದರ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ ಯಾರೋ ಕಿರುಚಾಡುವುದಿಲ್ಲ ಮಾನ್ಯ ವಸತಿ ಸಚಿವರು ಎಲ್ಲರನ್ನೂ ಕರೆದು ಅವರ ಸಲಹೆ ತೆಗೆದುಕೊಳ್ಳಬೇಕು ಏಕೆಂದರೆ ಸರ್ಕಾರಕ್ಕೂ ಈಗ ಬಾರಿ ಕೆಟ್ಟ ಹೆಸರು ಬರುತ್ತಿದೆ, ಶಾಸಕರುಗಳಿಗೂ ಕೆಟ್ಟ ಹೆಸರು ಬರುತ್ತಿದೆ ತಮಗೆ ರಾಜಕೀಯ ಇಚ್ಛಾಶಕ್ತಿ ಇದ್ದರೂ ಕೂಡ ಅಧಿಕಾರಿಗಳು ಎಲ್ಲೋ ಒಂದು ಹಂತದಲ್ಲಿ ತಮ್ಮನ್ನು ಮಿಸ್‌ಗೈಡ್ ಮಾಡುತ್ತಿದ್ದಾರೋ, ಯಾವುದೋ ಪಾಲಿಸಿ ಹೇಳುತ್ತಿದ್ದಾರೋ ಎನ್ನುವ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ ದಯವಿಟ್ಟು ಈ ವಿಚಾರದಲ್ಲಿ ಮಾನ್ಯ ವಸತಿ ಸಚಿವರು ಹೇಳಬೇಕು ದಯವಿಟ್ಟು ತಾವು ಎಲ್ಲರನ್ನೂ, ಎಲ್ಲಾ ಪಕ್ಷದವರನ್ನೂ ತಮ್ಮ ಕೊಠಡಿಗೆ ಕರೆದು ಈ ವಿಚಾರದಲ್ಲಿ ದಯವಿಟ್ಟು ಒಂದು ಕ್ಲಾರಿಟಿ ಬರುವಂತೆ ಮಾಡಬೇಕು, ಇವೊತ್ತು ಪಂಚಾಯಿತಿ ಸೆಕ್ರೆಟರಿಗಳಿಗೆ ಫೋಟೋ ಹೊಡೆಸಿಕೊಂಡು ಕೊಡಿ ಎಂದು ಹೇಳಿದರು, ನನಗೆ ಸುಳ್ಳು ಫೋಟೋವನ್ನು ತಂದುಕೊಡುತ್ತಾರೆ ಯಾವುದೋ ಮುಂಡ ಮನೆ ಮುಂದೆ ನಿಂತುಕೊಂಡಿರುವ ಫೋಟೋ ತಂದುಕೊಟ್ಟು ನೋಡಿ ಸಾರ್ ಇವರಿಗೆ ಮನೆ ಇಲ್ಲಾ ಎಂದು ಹೇಳುತ್ತಾರೆ

ಅಧ್ಯಕ್ಷರು – ಮಾನ್ಯ ಸಚಿವರು ಉತ್ತರ ಕೊಡಿ

ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ಶಕುಂತಲಾ ಶೆಟ್ಟಿಯವರು ಏನು ಪ್ರಶ್ನೆಯನ್ನು ಹಾಕಿದ್ದಾರೆ, ಅದರಲ್ಲಿ ಸ್ವಲ್ಪ ಅರ್ಥ ಇದೆ ಏಕೆಂದರೆ ಈಗಾಗಲೇ ಅವರೆ ಅಧ್ಯಕ್ಷರಾಗಿದ್ದಾರೆ ಈಗ ಗ್ರಾಮಸಭೆಯಲ್ಲಿ ಆಯ್ಕೆ ಮಾಡಿದಂಥ ಫಲಾನುಭವಿಗಳ ಪಟ್ಟಿಯಲ್ಲಿ ಅನರ್ಹರು ಯಾರಾದರೂ ಇದ್ದರೆ ಅವರನ್ನು ತೆಗೆದು ಹಾಕುವಂತೆ ಹೇಳಲು ಶಾಸಕರ ಅಧ್ಯಕ್ಷತೆಯಲ್ಲಿ ಇರುವ ವಿಜಿಲೆನ್ಸ್ ಕಮಿಟಿಗೆ ಅದಿಕಾರವಿದೆ ನೀವು ನಿಮ್ಮ ಅಧಿಕಾರವನ್ನು ಚಲಾಯಿಸಿ ಗ್ರಾಮ ಸಭೆಗೆ ತಿಳಿಸಬಹುದು

(ಗೊಂದಲ)

ಅಧ್ಯಕ್ಷರು– ಮಾನ್ಯ ವಸತಿ ಸಚಿವರೆ, ಅವರು ಕೇಳುತ್ತಿರುವುದು ಇಷ್ಟೆ ಇನ್ನೇನೂ ಇಲ್ಲಾ ಅವರೆಲ್ಲಾ ಕೇಳುತ್ತಿರುವುದರಲ್ಲಿ ಸಾರಾಂಶ ಏನೆಂದರೆ, ಆಶ್ರಯ ಸಮಿತಿ ಶಾಸಕರ ಅಧ್ಯಕ್ಷತೆಯಲ್ಲಿ ಅಗಬೇಕು ಎಂಬುದೊಂದೆ ಅದಕ್ಕೇನು ಉತ್ತರ ಹೇಳುತ್ತೀರಿ, ನೀವು ಮಾಡುತ್ತೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ

ಶ್ರಿ ಡಿ ಟಿ ಜಯಕುಮಾರ್– ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲೂ ಕೂಡ ಈ ಬಗ್ಗೆ ಚರ್ಚೆ ಆಗಿದೆ ಇದೇ ಸದನದಲ್ಲಿ ಚರ್ಚೆಯಾಗಿ ಎಂ ಎಲ್ ಎ ಗಳು ಅಧ್ಯಕ್ಷರಾಗಬೇಕೋ, ಗ್ರಾಮ ಪಂಚಾಯತಿ ಅಧ್ಯಕ್ಷರು ಅಧ್ಯಕ್ಷರಾಗಬೇಕೋ ಎನ್ನುವ ವಿಚಾರದಲ್ಲಿ ಬಹಳ ಚರ್ಚೆಯಾಗಿ ಕಡೆಗೆ ಬೇಲೂರು ಘೋಷಣೆ ಪ್ರಕಾರ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಎಂದಾಯಿತು

(ಗೊಂದಲ)

ಅಧ್ಯಕ್ಷರು– ಏಕೆ ಈ ರೀತಿ ಕೂಗಾಡುತ್ತೀರಿ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಸುಮ್ಮನಿರಿ

ಶ್ರೀ ಡಿ ಟಿ ಜಯಕುಮಾರ್– ದಯಮಾಡಿ ನನಗೆ ಒಪ್ಪಿಗೆ ಇದೆ ಈ ಸದನ ಒಪ್ಪುವುದಾದರೆ ತಿದ್ದುಪಡಿಯನ್ನು ತಂದು ಎಂ ಎಲ್ ಎ ಗಳೇ ಅಧ್ಯಕ್ಷರಾಗುವುದಕ್ಕೆ ಪ್ರಯತ್ನ ಮಾಡುತ್ತೇವೆ

(ಗೊಂದಲ)

ಅಧ್ಯಕ್ಷರು– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಮಾನ್ಯ ವಸತಿ ಸಚಿವರೆ, ನೀವು ಎಲ್ಲಾ ಪಕ್ಷದ ಮುಖಂಡರನ್ನು ಕರೆದು ಇದರ ಬಗ್ಗೆ ಏನಾದರೂ ಒಂದು ಪರಿಹಾರವನ್ನು ಕಂಡುಕೊಳ್ಳಿ ಪ್ರತಿ ಅಧಿವೇಶನದಲ್ಲೂ ಇದು ಬರುತ್ತದೆ ದೊಡ್ಡ ಗಲಾಟೆಯಾಗುತ್ತದೆ ಅಲ್ಲಿ ಸರಿಯಾದ ರೀತಿಯಲ್ಲಿ ಬಡವರಿಗೆ ಮನೆಗಳು ಹಂಚಿಕೆಯಾಗುತ್ತಿಲ್ಲವೆನ್ನುವ ಕೂಗು ಬರುತ್ತಿದೆ ಈ ರೀತಿಯಾದರೆ ಏನೂ ಪ್ರಯೋಜನವಾಗುವುದಿಲ್ಲ ಇದಕ್ಕೆ ಏನಾದರೂ ಒಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ತಾವು ಬರಬೇಕು ಅದಕ್ಕಾಗಿ ಎಲ್ಲರನ್ನೂ ಈ ಅಧಿವೇಶನದಲ್ಲಿಯೇ ಕರೆದು ಸ್ಪಷ್ಟವಾದ ಅಭಿಪ್ರಾಯಕ್ಕೆ ಬನ್ನಿ

ಶ್ರೀ ಡಿ ಟಿ ಜಯಕುಮಾರ್– ಮಾನ್ಯ ಅಧ್ಯಕ್ಷರೆ, ತಾವು ಹೇಳುವುದರಲ್ಲಿ ಅರ್ಥವಿದೆ ಇದೇ ಜಿಜ್ಞಾಸೆಯಿಂದ 9 ತಿಂಗಳಾದರೂ ಯಾವುದೇ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಆಗಲಿಲ್ಲ

ಅಧ್ಯಕ್ಷರು– ಅದಕ್ಕೇ ನಾನು ಹೇಳುತ್ತಿರುವುದು ಈಗ ನಾನು ಹೇಳಿದಂತೆ ಪ್ರಯತ್ನ ಮಾಡಿ

ಶ್ರೀ ಡಿ ಟಿ ಜಯಕುಮಾರ್– ತಿದ್ದುಪಡಿ ಮಾಡುವುದರಿಂದ ಸಾಧ್ಯವಿದೆ ಆ ರೀತಿ ತಿದ್ದುಪಡಿ ತರೋಣ

ಅಧ್ಯಕ್ಷರು – ಅಷ್ಟುಮಾಡಿ

ಶ್ರೀ ಹೆಚ್ ಅಂಜನೇಯ – ಮಾನ್ಯ ಅಧ್ಯಕ್ಷರೆ, ಇದೇ ಅದಿವೇಶನದಲ್ಲಿ ಮಾಡುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು

ಅಧ್ಯಕ್ಷರು – ನೋಡಿ, ಎಲ್ಲರನ್ನೂ ಒಂದು ಮೀಟಿಂಗ್‌ಗೆ ಕರೆದು ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇನೆ ಎಂದು ಹೇಳಿದ್ದಾರೆ ಇನ್ನೂ ಏನು ಹೇಳಬೇಕು ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ಹೆಚ್ ಆಂಜನೇಯ – ಮಾನ್ಯ ಸಚಿವರೆ, ಈಗಾಗಲೇ ತಿದ್ದುಪಡಿ ಮಾಡುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ಡಿ ಟಿ ಜಯಕುಮಾರ್ – ತಿದ್ದುಪಡಿಯಾಗಬೇಕಾದರೂ ಅದಕ್ಕಾಗಿಯೇ ಕೆಲವು ವಿದಿ ವಿಧಾನಗಳಿವೆ ಅದನ್ನು ಪರಿಶೀಲನೆ ಮಾಡಿ ನೋಡುತ್ತೇವೆ

(ಗೊಂದಲ)

ಅಧ್ಯಕ್ಷರು – ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನೋಡಿ ಈ ತರಹ ಮಾಡಿದರೆ ಯಾರಿಗೂ ಗೌರವ ಬರುವುದಿಲ್ಲ ನಾನು ಬೆಳಿಗ್ಗೆಯಿಂದ ಒಂದೇ ಸಮನೆ ನೋಡುತ್ತಿದ್ದೇನೆ ಈ ರೀತಿ ಒಟ್ಟೊಟ್ಟಿಗೆ ಗುಂಪು ಗುಂಪಾಗಿ ನಿಂತುಕೊಳ್ಳುವುದು, ಬಾಯಿಗೆ ಬಂದಂತೆ ಮಾತನಾಡುವುದು, ಕೂಗಾಡುವುದು, ಇದೇನಿದು, ಅವರು ಉತ್ತರ ಕೊಟ್ಟಿದ್ದಾರೆ ನಾನು ಕೂಡ ಎಲ್ಲ ಶಾಸಕರನ್ನು ಕರೆದು ಒಂದು ತೀರ್ಮಾನಕ್ಕೆ ಬನ್ನಿ ಎಂದು ಸೂಚನೆಯನ್ನು ಕೊಟ್ಟಿದ್ದೇನೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಎಲ್ಲ ಶಾಸಕರನ್ನು ಕರೆಯುವುದು ಬೇಡ ರೂಲಿಂಗ್ ಪಾರ್ಟಿಯವರನ್ನು ಕರೆದು ಸಲಹೆ ಕೇಳಲಿ

ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 224 (1332)
ಸದಸ್ಯರ ಹೆಸರು ಶ್ರೀ ನರಸಿಂಹ ನಾಯಕ್ (ರಾಜೂಗೌಡ) (ಸುರಪುರ), ವಿದಾನ ಸಭಾ ಸದಸ್ಯರು
ಉತ್ತರಿಸುವ ಸಚಿವರು ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ನೀರಾವರಿ ಇಲಾಖೆಯಲ್ಲಿರುವ ಮುಖ್ಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಮತ್ತು ಅಧಿಕಾರಿಗಳ ಸಂಖ್ಯೆಗಳೆಷ್ಟು (ಹುದ್ದೆವಾರು ವಿವರ ಒದಗಿಸುವುದು)

1 ಮುಖ್ಯ ಇಂಜಿನಿಯರ್ ಹುದ್ದೆಗಳು –15

2 ಸಹಾಯಕ ಕಾರ್ಯಪಾಲಕ ಇಂಜಿನಿಯರ್ – 666 ಹುದ್ದೆಗಳು

3 ಸಹಾಯಕ ಇಂಜಿನಿಯರ್ ಹುದ್ದೆಗಳು – 2684

4 ಅಧಿಕಾರಿ ಹುದ್ದೆಗಳ ಸಂಖ್ಯೆ – 494

ಹುದ್ದೆಗಳ ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ

ಆ) ಕೃಷ್ಣ – ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಕಾರ್ಯನಿರ್ವಹಿಸುತ್ತಿರುವವರೆ ಮುಖ್ಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರುಗಳು ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು

ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿರುವ ಹುದ್ದೆಗಳ ಸಂಖ್ಯೆ

1)ಮುಖ್ಯ ಇಂಜನಿಯರ್ ಹುದ್ದೆಗಳು –04

2) ಸಹಾಯಕ ಕಾರ್ಯಪಾಲಕ ಇಂಜನಿಯರ್ –130 ಹುದ್ದೆಗಳು

3) ಸಹಾಯಕ ಇಂಜಿನಿಯರ್ ಹುದ್ದೆಗಳು –507

4) ಅಧಿಕಾರಿ ಹುದ್ದೆಗಳ ಸಂಖ್ಯೆ – 111

ಹುದ್ದೆಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ

ಇ) ಈ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳು ಯಾವುವು ಹಾಗೂ ಈ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ನಿಗಮದಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ–3 ರಲ್ಲಿ ವಿವರಿಸಲಾಗಿದೆ ಮುಖ್ಯ ಇಂಜನಿಯರ್ ಹುದ್ದೆಗಳು ಕೆಲವು ಆಡಳಿತಾತ್ಮಕ ಕಾರಣಗಳಿಂದ ಖಾಲಿಯಿದ್ದು ಇವುಗಳನ್ನು ಭರ್ತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಕೋರಲಾಗಿದೆ ಇನ್ನುಳಿದ ವೃಂದದ ಹುದ್ದೆಗಳನ್ನು ವರ್ಗಾವಣೆ/ನಿಯೋಜನೆ ಮೇಲೆ ಭರ್ತಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

ಅನುಬಂಧ–1

1	ಪೋಲೀಸ್ ಮಹಾ ನಿರೀಕ್ಷಕರು	01
2	ಪ್ರಧಾನ ಇಂಜನಿಯರ್	01
3	ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಪ್ರಧಾನ ಇಂಜನಿಯರ್ ವೃಂದ)	01
4	ವ್ಯವಸ್ಥಾಪಕ ನಿರ್ದೇಶಕರು (ಪ್ರಧಾನ ಇಂಜನಿಯರ್ ವೃಂದ)	03
5	ಆಡಳಿತಾಧಿಕಾರಿಗಳು (ಪ್ರಧಾನ ಇಂಜನಿಯರ್ ವೃಂದ)	06
6	ನಿರ್ದೇಶಕರು (ಮುಖ್ಯ ಇಂಜಿನಿಯರ್ ವೃಂದ)	02
7	ಅಧೀಕ್ಷಕ ಇಂಜನಿಯರ್	46
8	ಕಾರ್ಯಪಾಲಕ ಇಂಜಿನಿಯರ್	157
9	ಜಂಟಿ ನಿಯಂತ್ರಕರು (ಲೆಕ್ಕ)	01
10	ಕೆಮಿಕಲ್ ಇಂಜನಿಯರ್	04
11	ಕಂಪ್ಯೂಟರ್ ಇಂಜಿನಿಯರ್	02
12	ಕಂಪ್ಯೂಟರ್ ಪ್ರೊಗ್ರಾಮರ್	07

13	ನಿರ್ದೇಶಕರು (ಜಿಯಾಲಜಿಸ್ಟ್)	01
14	ಖಸ್ಸೈನ್ ಇಂಜಿನಿಯರ್	04
15	ಪ್ರಧಾನ ಮುಖ್ಯ ಲೆಕ್ಕಾಧಿಕಾರಿಗಳು	01
16	ಮುಖ್ಯ ಲೆಕ್ಕಾಧಿಕಾರಿಗಳು	04
17	ಜಂಟಿ ನಿರ್ದೇಶಕರು (ಸಾಂಖ್ಯಿಕ)	02
18	ಉಪ ನಿರ್ದೇಶಕರು (ಸಾಂಖ್ಯಿಕ)	01
19	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	02
20	ಆರ್ಥಿಕ ತಜ್ಞರು	01
21	ನಿಬಂಧಕರು	37
22	ಪ್ರಧಾನ ವ್ಯವಸ್ಥಾಪಕರು	01
23	ಮುಖ್ಯ ಆಡಳಿತಾಧಿಕಾರಿ	02
24	ಲೆಕ್ಕಾಧಿಕಾರಿಗಳು	03
25	ಲೆಕ್ಕ ಅಧೀಕ್ಷಕರು/ ಲೆಕ್ಕಪರಿಶೋಧನಾಧಿಕಾರಿ	173
26	ಉಪ ಅರಣ್ಯ ಸಂರಕ್ಷಣಾಧಿಕಾರಿ	01
27	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	02
28	ವಲಯ ಅರಣ್ಯಾಧಿಕಾರಿ	07
29	ಹಿರಿಯ ಆರೋಗ್ಯಾಧಿಕಾರಿ	01
30	ಆರೋಗ್ಯಾಧಿಕಾರಿ	13
31	ವೈದ್ಯಾಧಿಕಾರಿಗಳು	04
32	ಸಹಾಯಕ ಎಂಟಮಾಲಜಿಸ್ಟ್	03
	ಒಟ್ಟು	494

ಅನುಬಂಧ-2

1	ವ್ಯವಸ್ಥಾಪಕ ನಿರ್ದೇಶಕರು ಪ್ರದಾನ ಇಂಜಿನಿಯರ್ ವೃಂದ)	01
2	ಅಧೀಕ್ಷಕ ಇಂಜಿನಿಯರ್	08
3	ಕಾರ್ಯಪಾಲಕ ಇಂಜಿನಿಯರ್	32
4	ಪ್ರಧಾನ ವ್ಯವಸ್ಥಾಪಕರು	01
5	ಪ್ರಧಾನ ಮುಖ್ಯ ಲೆಕ್ಕಾಧಿಕಾರಿಗಳು	01
6	ಮುಖ್ಯ ಲೆಕ್ಕಾಧಿಕಾರಿಗಳು	01
7	ಲೆಕ್ಕಾಧಿಕಾರಿಗಳು	01
8	ಲೆಕ್ಕಪರಿಶೋಧನಾಧಿಕಾರಿ	35

9	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	01
10	ಕಂಪ್ಯೂಟರ್ ಪ್ರೋಗ್ರಾಮರ್	01
11	ನಿಬಂಧಕರು	06
12	ಉಪ ಅರಣ್ಯ ಸಂರಕ್ಷಣಾಧಿಕಾರಿ	01
13	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	02
14	ವಲಯ ಅರಣ್ಯಾಧಿಕಾರಿ	05
15	ಹಿರಿಯ ಆರೋಗ್ಯಾಧಿಕಾರಿ	01
16	ಆರೋಗ್ಯಾಧಿಕಾರಿ	04
17	ವೈದ್ಯಾಧಿಕಾರಿಗಳು	07
18	ಸಹಾಯಕ ಎಂಟಮಾಲಜಿಷ್ಟ್	03
	ಒಟ್ಟು	111

ಅನುಬಂಧ-3

1	ಮುಖ್ಯ ಇಂಜಿನಿಯರ್	04
2	ಅಧೀಕ್ಷಕ ಇಂಜಿನಿಯರ್	03
3	ಕಾರ್ಯಪಾಲಕ ಇಂಜಿನಿಯರ್	03
4	ಸಹಾಯಕ ಕಾರ್ಯಪಾಲಕ ಇಂಜಿನಿಯರ್	02
5	ಸಹಾಯಕ ಇಂಜಿನಿಯರ್	232
6	ನಿಬಂಧಕರು	04
7	ಆರೋಗ್ಯಾಧಿಕಾರಿಗಳು	02
8	ವೈದ್ಯಾಧಿಕಾರಿಗಳು	03
9	ಸಹಾಯಕ ಎಂಟಮಾಲಜಿಷ್ಟ್	02
	ಒಟ್ಟು	255

ಶ್ರೀ ನರಸಿಂಹ ನಾಯಕ್ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ನಾನು ಕೇಳಿರುವಂತಹ ಪ್ರಶ್ನೆ, ಒಟ್ಟು ಕೃಷ್ಣ ಭಾಗ್ಯ ಜಲ ನಿಗಮದಲ್ಲಿರುವ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದರೆ ಅದಕ್ಕೆ ಎಷ್ಟು ಎಂದು ಸಂಖ್ಯೆಯನ್ನು ಕೊಟ್ಟಿದ್ದಾರೆ ಮುಖ್ಯ ಅಭಿಯಂತರರ ಹುದ್ದೆಗಳು 4, ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳು 130, ಸಹಾಯಕ ಅಭಿಯಂತರರ ಹುದ್ದೆಗಳು 507 ಮತ್ತು ಒಟ್ಟು ಅಧಿಕಾರಿಗಳ ಸಂಖ್ಯೆ 111 ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 255 ಎಂದು ಕೊಟ್ಟಿದ್ದಾರೆ ಹಾಗಾದರೆ 144 ಹುದ್ದೆಗಳು ಯಾವ department ನಿಂದ ಇವರ departmentಗೆ ಬಂದವು? ಇವರು Irrigation Department ನಿಂದ ತಂದು ತೋರಿಸುತ್ತಾರಾ?

ಅಥವಾ Education Department ನಿಂದ ತಂದು ತೋರಿಸುತ್ತಾರಾ? ನಮ್ಮಲ್ಲಿ ಮುಖ್ಯ ಅಭಿಯಂತರರ post ಇರುವುದು 4, ಅದರಲ್ಲಿ ನಾಲ್ಕೂ ಖಾಲಿ ಇವೆ ಹಾಗಾದರೆ ಯಾವ ರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆ? ಇವತ್ತು ಯಾವುದೇ ಒಂದು departmentನಲ್ಲಿ ತೆಗೆದುಕೊಳ್ಳಿ, ಯಾವುದಾದರೂ officeನಲ್ಲಿ Executive Engineer ಇದ್ದರೆ, AEE ಇರುವುದಿಲ್ಲ AEE ಇದ್ದರೆ JE ಇರುವುದಿಲ್ಲ JE ಇದ್ದರೆ work Inspector ಇರುವುದಿಲ್ಲ ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ, ಕೃಷ್ಣ ಭಾಗ್ಯ ಜಲ ನಿಗಮವನ್ನು ಮುಚ್ಚಿಬಿಡಿ ಏಕೆಂದರೆ ಅಲ್ಲಿ ಯಾರು ಅಧಿಕಾರಿಗಳು ಇಲ್ಲವೆಂದರೆ, ಯಾರು ಕೆಲಸ ಮಾಡುತ್ತಾರೆ? ಇವತ್ತು 232 Assistant Engineer ಹಾಗು ಕಾರ್ಯಪಾಲಕ ಇಂಜಿನಿಯರ್ 03 ಹುದ್ದೆಗಳು ಖಾಲಿ ಇದೆ ಎಂದು ತೋರಿಸುತ್ತಿದ್ದೀರಿ ನನ್ನ ಮತ ಕ್ಷೇತ್ರದಲ್ಲೇ ಸುಮಾರು 07 Engineers ಇಲ್ಲ ಅಲ್ಲಿ postings ಜಾಸ್ತಿ ಇದೆ ಅಲ್ಲಿ Minister transfer ಮಾಡಿದರೂ ಕೂಡ ಯಾವ ಅಧಿಕಾರಿಗಳು ಬರುತ್ತಿಲ್ಲ ಅದಕ್ಕೋಸ್ಕರ ದಯಮಾಡಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯನ್ನು ವಿವರವಾಗಿ ಕೊಡಬೇಕು ಎಂದು ಮಾನ್ಯ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪ್ರಶ್ನೆ ಇದೆ ಈಗ ಮಾನ್ಯ ರಾಜುಗೌಡರು ಕೇಳಿರತಕ್ಕಂಥ ಪ್ರಶ್ನೆಗೆ ಬೆಂಬಲಿಸುತ್ತಾ, ಅಲ್ಲಿ ಮುಖ್ಯ ಅಭಿಯಂತರರ postಗಳನ್ನು in charge ಮೂಲಕ ಇಟ್ಟಿದ್ದಾರೆ ಅವರನ್ನು ಅಲ್ಲಿ in chargeನಲ್ಲಿ ಇಟ್ಟಿರುವುದರಿಂದ ಅವರಿಗೆ ಯಾವುದೇ ಅಧಿಕಾರ ಇಲ್ಲ ಏನಾದರೂ ಒಂದು decision ತೆಗೆದುಕೊಳ್ಳಬೇಕೆಂದರೆ ಅವರು ಸರ್ಕಾರಕ್ಕೆ ಅಥವಾ MDಯವರಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಾರೆ ಒಂದು ಸಣ್ಣ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಕೂಡ ಮುಖ್ಯ ಅಭಿಯಂತರರಿಗೆ ಅಧಿಕಾರ ಇಲ್ಲ ಆದುದರಿಂದ, ಸರ್ಕಾರ ಕೂಡಲೇ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ, ಅಲ್ಲಿ permanent ಅಗಿ ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೋ ಇಲ್ಲವೋ ಎಂದು ಹೇಳಬೇಕು ಮುಖ್ಯ ಅಭಿಯಂತರರು ಎರಡು ವರ್ಷದ ಹಿಂದಿನಿಂದ in charge ಮೇಲೆ ಕೆಲಸ ಮಾಡುತ್ತಿದ್ದಾರೆ ಅವರಿಗೆ ಏನೂ ಅಧಿಕಾರ ಇಲ್ಲ ಆದುದರಿಂದ ಅವರನ್ನು ಅಲ್ಲಿ ಏಕೆ ಇಡಬೇಕು? ದಯವಿಟ್ಟು ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ಮತ್ತೊಮ್ಮೆ ನಾನು ಹೇಳುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕ ಮಿತ್ರರ ಕಳಕಳಿ ನನಗೆ ಅರ್ಥವಾಗುತ್ತಿದೆ ಅವರ ಭಾವನೆ ಏನಿದೆ ಅದೂ ನನ್ನ ಭಾವನೆಯಾಗಿದೆ ನಾನು ಮಂತ್ರಿಯಾದ ತಕ್ಷಣ ಖಾಲಿ ಹುದ್ದೆಗಳು ಎಷ್ಟಿದೆ ಎಂದು ಹುಡುಕಿದಾಗ, ಮುಖ್ಯ ಅಭಿಯಂತರರ ಒಟ್ಟು 19 ಹುದ್ದೆಗಳಲ್ಲಿ 15 ಹುದ್ದೆಗಳು ಖಾಲಿ ಇತ್ತು

ಅದರಲ್ಲಿ 04 ಜನ ಮಾತ್ರ ಇದ್ದಾರೆ 15 ಹುದ್ದೆಗಳು in charge ತೆಗೆದುಕೊಂಡಿದ್ದು, ಹೇಗೆ ಕೆಲಸ ಮಾಡಬೇಕೆಂದು ಬಹಳ ದೊಡ್ಡ ಸಮಸ್ಯೆಯಾಗಿತ್ತು ಮೊನ್ನೆ Supreme Court judgment ಬಂದಿದೆ ಆ ಪ್ರಕಾರ ಏನೇನು ಮಾಡಬೇಕೆಂದು ಪ್ರಯತ್ನಗಳನ್ನು ಮಾಡಿ, ಅದಷ್ಟು ಬೇಗ ಅವರಿಗೆ promotion ಕೊಟ್ಟು ಹಂಚುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಸಹಾಯಕ ಇಂಜಿನಿಯರ್ ಒಟ್ಟು 766 ಬಾಕಿ ಇರುವುದು ಕಿರಿಯ ಇಂಜಿನಿಯರ್ 624 ಇವೆ ಈ ಎರಡು ಹುದ್ದೆಗಳನ್ನು ಆದಷ್ಟು ಬೇಗ KPSC ಮುಖಾಂತರ ತುಂಬಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ, ಈ ವಿಚಾರವನ್ನು Cabinetನಲ್ಲಿ ತರುವಂತಹ ಪ್ರಯತ್ನ ಮಾಡುತ್ತಿದ್ದೇವೆ ಆದಷ್ಟು ಬೇಗ ಇವರನ್ನು ತುಂಬಿಸಿಕೊಳ್ಳುತ್ತೇವೆ ಅಲ್ಲದೆ ಯಾರ್ಯಾರಿಗೆ promotion ಕೊಡುವಂತಹ ಅವಕಾಶಗಳು ಇವೆ, ಅವರಿಗೆ promotion ಕೊಟ್ಟು ಖಾಲಿ ಇರುವಂತಹ ಜಾಗಗಳನ್ನು ಕೂಡ ಭರ್ತಿ ಮಾಡಿಕೊಳ್ಳುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ Chief Engineerಗೆ promotion ಮಾಡುವ ಅಧಿಕಾರ ತಮಗೆ ಇದೆಯೋ PWDಗೆ ಇದೆಯೋ? PWD ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೆ? ಮೂರು ವರ್ಷದಿಂದ ಈ ರಾಜ್ಯದಲ್ಲಿ ಏಕೆ Chief Engineersಗೆ promotion ಕೊಟ್ಟಿಲ್ಲ ಎಂದು ತಾವು ಈ ಸಭೆಗೆ ಅವರನ್ನು consult ಮಾಡಿ ಹೇಳುತ್ತಿದ್ದೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ Chief Engineerಗೆ ಸಂಬಂಧಪಟ್ಟ ವಿಚಾರ, Supreme Courtಗೆ ಹೋಗಿತ್ತು ಮೊನ್ನೆತಾನೆ ಅದರ judgment ಬಂದಿದೆ PWD Minister ಮತ್ತು ನಾವು ಮೊನ್ನೆ ತಾನೆ ಚರ್ಚೆ ಮಾಡಿದ್ದೇವೆ ನಾನು ಮಾನ್ಯ PWD ಮಂತ್ರಿಗಳು ಹಾಗೂ ಮಾನ್ಯ ಗೃಹಮಂತ್ರಿಗಳು ಮೂರು ಜನ ಸೇರಿದಂತೆ ಒಂದು ಉಪಸಮಿತಿ ಈಗಾಗಲೇ ಆಗಿದೆ Promotions ಭರ್ತಿ ಮಾಡುವ ವಿಚಾರದಲ್ಲಿ ಕೂಡ ನಾನು ಅವರ ಜೊತೆ ಚರ್ಚೆ ಮಾಡುತ್ತಿದ್ದೇನೆ ಆದಷ್ಟು ಬೇಗ ಅದನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, Supreme Court promotion ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ Promotion ಕೊಡಬೇಕಾದರೆ ಇಂತಿಂಥವರನ್ನು ಪರಿಗಣಿಸಿ ಎಂದು ಹೇಳಿದೆ ಇದನ್ನೆಲ್ಲಾ ನಾವು PWD Minister ಹತ್ತಿರ ಚರ್ಚೆ ಮಾಡಿ ಬಿಟ್ಟಿದ್ದೇವೆ ನಾವು promotion ಕೊಟ್ಟಾಗ ಅವರನ್ನು consider ಮಾಡುತ್ತೇವೆ, ಈಗ ನಾವು ಕೊಡುತ್ತಿಲ್ಲವಲ್ಲ ಎನ್ನುವ ಉತ್ತರ ತೆಗೆದುಕೊಂಡು ಬಿಟ್ಟಿದೇವೆ ಹಾಗಾಗಿ, ಮಾನ್ಯ ಈಶ್ವರಪ್ಪನವರಿಗೆ

ಏನಾದರೂ ಮಾಹಿತಿ ಇದೆಯಾ? ಏಕೆಂದರೆ Chief Engineer promotion ಕೊಡುವುದು ಅವರಲ್ಲ, PWDಯವರು ಕೊಡಬೇಕು ಆದುದರಿಂದ ಸನ್ಮಾನ್ಯ PWD Ministerರವರನ್ನು ಒಪ್ಪಿಸುವಷ್ಟು ಶಕ್ತಿ ತಮಗೆ ಇದೆಯಾ ಎಂದು ತಮ್ಮನ್ನು ಕೇಳುತ್ತಿದ್ದೇವೆ

ಶ್ರೀ ಕೆ ಎಸ್ ಈಶ್ವರಪ್ಪ ಇದರಲ್ಲಿ ಒಪ್ಪಿಸುವುದು, ಒಪ್ಪಿಸದೇ ಇರುವುದು ಅಲ್ಲ ಯಾರೋ ಒಬ್ಬರದೇ ಅಭಿಪ್ರಾಯ ಒಂದು ಸರ್ಕಾರ ಇರುವುದಕ್ಕೆ ಸಾಧ್ಯವಿಲ್ಲ ಮೂರು ಜನರ ಒಂದು ಉಪಸಮಿತಿ ಮಾಡಿದ್ದೇವೆ ಅದರ ಬಗ್ಗೆ ಚರ್ಚೆ ಕೂಡ ಮಾಡಿದ್ದೇನೆ ಅದನ್ನು ಆದಷ್ಟು ಬೇಗ ಭರ್ತಿ ಮಾಡುತ್ತೇವೆ

ಶ್ರೀ ಶಿವಾನಂದ ಎಸ್ ಪಾಟೀಲ್ Irrigation Sectorಗೆ separate Cadre and Strength ಅನ್ನು approve ಮಾಡಿದರೆ ತಪ್ಪೇನಿದೆ? ನೀವು ಆ ರೀತಿ ಮಾಡಿ ಎಂದು Estimate Committee ಯವರು ಶಿಫಾರಸ್ಸು ಮಾಡಿದ್ದಾರೆ Irrigation ಗೆ ವರ್ಷಕ್ಕೆ 3000 ದಿಂದ 4000 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಅದನ್ನು PWDನಲ್ಲೇ ಏಕೆ ಇಡಬೇಕು? ಅದಕ್ಕೆ separate Cadre and Strength ಅನ್ನು ನೀವು ಏಕೆ ಮಾಡಬಾರದು?

ಶ್ರೀ ಕೆ ಎಸ್ ಈಶ್ವರಪ್ಪ ಆ ರೀತಿ ಮಾಡಬೇಕೆಂದು ಪ್ರಯತ್ನ ಇತ್ತು

ಶ್ರೀ ಶಿವಾನಂದ ಎಸ್ ಪಾಟೀಲ್ ಪ್ರಯತ್ನ ಇತ್ತು ಎಂದು ಎಲ್ಲರೂ ಹೇಳುತ್ತಾರೆ, ನೀವಾದರೂ ಮಾಡಿ ತೋರಿಸಿ

ಶ್ರೀ ಕೆ ಎಸ್ ಈಶ್ವರಪ್ಪ ಕೇಳಿ, Case No 61-62ರ ಪ್ರಕಾರ KAT ನಲ್ಲಿ ಆಗಸ್ಟ್ 2005 ರಲ್ಲಿ Engineers Associationನವರು ಹೋಗಿ stay ಅನ್ನು ದಿನಾಂಕ 10 02 2006 ರಲ್ಲಿ ಕೂಡ ತೆಗೆದುಕೊಂಡಿದ್ದಾರೆ ಹೀಗಾಗಿ ಅದನ್ನು ಹೇಗೆ ಪರಿಹಾರ ಮಾಡಬೇಕು ಎಂದು ಕೂಡ ಪ್ರಯತ್ನ ಮಾಡುತ್ತಿದ್ದೇವೆ

ಶ್ರೀ ನರಸಿಂಹ ನಾಯಕ್ ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಮಾನ್ಯ ಖರ್ಗೆಯವರು ಮಂತ್ರಿಯವರಾಗಿದ್ದಾಗ ನಾವು ಅವರನ್ನು ಭೇಟಿಯಾಗಿ ನಾರಾಯಣಪುರ ವಲಯಕ್ಕೆ ಒಟ್ಟು ಏಳು AEEಗಳನ್ನು ಹಾಕಿಸಿದ್ದೇವೆ ಇವರು Engineers ಅನ್ನು transfer ಮಾಡುತ್ತಾರೆ ಆದರೆ ಅವರು charge ತೆಗೆದುಕೊಳ್ಳುವುದಿಲ್ಲ ಏಕೆಂದರೆ charge ತೆಗೆದುಕೊಂಡರೆ ನೀರಿನ ತೊಂದರೆಯಾಗುತ್ತದೆ, ರೈತರು ಬರುತ್ತಾರೆ, ಎಲ್ಲಿಯೋ ಜಿಲ್ಲಾ ಪಂಚಾಯತ್‌ನಲ್ಲಿ ದುಡ್ಡು ಹೊಡೆಯಬೇಕು ಎಂದು ಇಲ್ಲಿಗೆ ಯಾರು ಬರುತ್ತಿಲ್ಲ ಆದುದರಿಂದ ಸರ್ಕಾರದಿಂದ ಕಡ್ಡಾಯವಾಗಿ ಅಲ್ಲಿ ಅಧಿಕಾರಿಗಳನ್ನು ಹಾಕುವಂತಹ ವ್ಯವಸ್ಥೆ ಮಾಡಬೇಕು ಇನ್ನು ಅಲ್ಲಿ damನ gate ರಕ್ಷಣೆ ಮಾಡಬೇಕಾದರೆ, ಅಲ್ಲಿ Civil

Engineers ಹಾಕಿದ್ದೀರಿ ಆದರೆ ಅಲ್ಲಿಗೆ dam repairಗೆ Mechanical Engineers ಬೇಕು Civil Engineersಗೆ building ಕಟ್ಟುವುದು ಗೊತ್ತಿರುತ್ತದೆ, Mechanical Engineersಗೆ repair ಮಾಡುವುದು ಗೊತ್ತಿರುತ್ತದೆ ಆದರೆ ನಮ್ಮ ನಾರಾಯಣಪುರ damಗೆ ಯಾವ Engineers ಇದ್ದಾರೆ ಎಂದು ಗೊತ್ತಿಲ್ಲ ಎಲ್ಲಾ Engineers, Civil Engineers ಆಗಿ ಇದ್ದಾರೆ, Mechanical Engineers ಒಬ್ಬರೂ ಇಲ್ಲ ಇದರಿಂದ 5,00,000 ಎಕರೆ ನೀರಾವರಿ ಆಗುವಂತಹ ಪ್ರದೇಶದಲ್ಲಿ ಇವತ್ತು ಬಹಳ ಚಿಂತಾಜನಕ ಪರಿಸ್ಥಿತಿ ಇದೆ ಆದುದರಿಂದ ಆದಷ್ಟು ಬೇಗ ಅಲ್ಲಿ Mechanical Engineers ಹಾಕುವ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ ಸರ್ಕಾರಕ್ಕೆ ಇನ್ನೊಂದು ವಿನಂತಿ ಮಾಡುತ್ತೇನೆ ಅಲ್ಲಿಗೆ ನೀವು ಯಾವ ಅಧಿಕಾರಿಗಳನ್ನು transfer ಮಾಡುತ್ತೀರಿ, ಅವರು ಅಲ್ಲಿ ಇದ್ದು ಕೆಲಸ ಮಾಡುವ ಹಾಗೆ ಮಾಡಬೇಕು ಅದು ಬಿಟ್ಟು ಅಲ್ಲಿ ರಾಜಕಾರಣಿಗಳು ಅಲ್ಲಿಂದ transfer ಮಾಡಿ ಮತ್ತೆ ಆ ಹುದ್ದೆಯನ್ನು ಖಾಲಿ ಇಡುವಂತಹ ಕೆಲಸವನ್ನು ಮಾಡಬಾರದೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ ಯಾವ Engineers ಅನ್ನು ನಾವು ಎಲ್ಲೆಲ್ಲಿ ಹಾಕುತ್ತೇವೆ, ಆ ದಿಕ್ಕಿನಲ್ಲಿ ಹೋಗುವಂತಹ ಪ್ರಯತ್ನಗಳು ಮುಂಚಿನಿಂದಲೂ ಕೂಡ ಸಾಕಷ್ಟು ಆಗುತ್ತಿವೆ ಆ ರೀತಿ ವ್ಯತ್ಯಾಸ ಆಗಿ report ಮಾಡಿಕೊಳ್ಳದೇ ಇದ್ದರೆ ಅವರ ಮೇಲೆ ಖಂಡಿತವಾಗಿ ಕ್ರಮ ತೆಗೆದು ಕೊಳ್ಳುತ್ತೇವೆ, ಅಲ್ಲಿ ಕೆಲಸಗಳು ಆಗುವ ದಿಕ್ಕಿನಲ್ಲಿ ಕೂಡ ಗಮನ ಕೊಡುತ್ತೇವೆ

ಶ್ರೀ ನರಸಿಂಹ ನಾಯಕ್ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ

ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 225(1399)
ಸದಸ್ಯರ ಹೆಸರು ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)
ಉತ್ತರಿಸುವ ಸಚಿವರು ಶ್ರೀ ಎಸ್ ಎ ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2004-05, 2005-06 ಹಾಗೂ 2006-07 ಸಾಲಿನಲ್ಲಿ ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯಕ್ಕೆ ರಾಜ್ಯ ಸರ್ಕಾರ ನಿಗದಿಪಡಿಸಿದ, ಬಿಡುಗಡೆಗೊಳಿಸಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು,

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ವಲಯದಡಿ ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ಬಾಬ್ತಿಗಾಗಿ ನಿಗದಿಪಡಿಸಿದ, ಬಿಡುಗಡೆಯಾದ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿದೆ

(ರೂ ಕೋಟಿಗಳಲ್ಲಿ)

ವರ್ಷ	ಹಂಚಿಕೆ	ಬಿಡುಗಡೆಯಾದ ಅನುದಾನ	ವೆಚ್ಚ
2004–05	103 54	103 54	99 04
2005–06	170 63	205 00	205 00
2006–07 (ಮಾರ್ಚ್ 07ರವರೆಗೆ)	94 32	200 75	100 34 (ಫೆಬ್ರವರಿ 07ರವರೆಗೆ)

ಆ) ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಮೂಲಕ ಈ ಉದ್ದೇಶಕ್ಕೆ 2004–05, 2005–06 ಹಾಗೂ 2006–07 ಸಾಲಿನಲ್ಲಿ ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣ ಎಷ್ಟು,

ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ಬಾಬ್ತಿನಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿವೆ

(ರೂ ಕೋಟಿಗಳಲ್ಲಿ)

ವರ್ಷ	ಬಿಡುಗೆಯಾದ ಅನುದಾನ	ವೆಚ್ಚ
2004–05	169 66	155 57
2005–06	271 79	251 75
2006–07 (ಮಾರ್ಚ್ 07ರವರೆಗೆ)	277 54 (ಸ್ವಜಲಧಾರ ಮತ್ತು ಸಂಪೂರ್ಣ ಸ್ವಚ್ಛತಾ ಆಂದೋಲನ ಸೇರಿ)	207 76 (ಫೆಬ್ರವರಿ 07ರವರೆಗೆ)

ಇ) 2006–07 ಸಾಲಿನಲ್ಲಿ ನೀರು ಸರಬರಾಜು ಹಾಗೂ ನೈರ್ಮಲ್ಯಕ್ಕೆ ವಿವಿಧ ಯೋಜನೆಯಡಿ ಮಂಜುರಾದ ಕಾಮಗಾರಿ, ನಿಗದಿ ಪಡಿಸಿದ ಹಣ ಹಾಗೂ ಇದುವರೆಗೆ ಬಿಡುಗಡೆಯಾದ ಹಣ ಎಷ್ಟು? (ಕಾಮಗಾರಿವಾರು, ತಾಲ್ಲೂಕುವಾರು ವಿವರ ನೀಡುವುದು)?

2006–07ರ ಸಾಲಿನಲ್ಲಿ, ರಾಜ್ಯ, ಕೇಂದ್ರ ಮತ್ತು ವಿದೇಶಿ ನೆರವಿನ (ಜಲನಿರ್ಮಲ) ಯೋಜನೆ ಗಳಡಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾಮಗಾರಿಗಳಿಗಾಗಿ ಒಟ್ಟು ರೂ 629 64 ಕೋಟಿ ವಿನಿಯೋಗವಾಗಿದೆ

ಯೋಜನಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ-1, 2 ಮತ್ತು 3ರಲ್ಲಿ ನೀಡಲಾಗಿದೆ

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿರುವುದು ಹಾಗೂ ಖರ್ಚು ಮಾಡಿರುವುದನ್ನು ನೋಡಿದಾಗ, ತುಂಬಾ ವ್ಯತ್ಯಾಸ ಇದೆ 2006-07ನೇ ಇಸವಿಯಲ್ಲಿ ರಾಜ್ಯ ವಲಯದಲ್ಲಿ 200 75 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಅದರೆ ಫೆಬ್ರವರಿ 7ನೇ ತಾರೀಖಿನವರೆಗೆ 100 34 ಕೋಟಿ ರೂಪಾಯಿ ಖರ್ಚಾಗಿದೆ ಕೇಂದ್ರ ವಲಯದಲ್ಲಿ 277 54 ಕೋಟಿ ರೂಪಾಯಿ ಬಿಡುಗಡೆಯಾದರೆ, 207 76 ಕೋಟಿ ರೂಪಾಯಿ ಖರ್ಚಾಗಿದೆ ಒಂದು ಕಡೆ ನಾವು ಕುಡಿಯುವ ನೀರಿಗೆ ದುಡ್ಡಿಲ್ಲವೆಂದು ಹೇಳುತ್ತೇವೆ ಆದರೆ ದುಡ್ಡು ಇದ್ದರೂ ಕೂಡ ಅದನ್ನು ನಾವು ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ ನಾನು ಮಾನ್ಯ ಸಚಿವರನ್ನು ಏನೂ ಅನ್ನುವುದಿಲ್ಲ, ಏಕೆಂದರೆ ಇದು ಪೂರ್ತಿ ಹಣ ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯಿತಿಗೆ ಹೋಗುತ್ತದೆ ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ ಬಳ್ಳಾರಿಯಲ್ಲಿ ರಾಜ್ಯ ವಲಯದಲ್ಲಿ 648 ಲಕ್ಷ ರೂಪಾಯಿ ಬಿಡುಗಡೆ ಮಾಡಿದರೆ ಇದುವರೆಗೆ ಖರ್ಚಾಗಿರುವುದು 137 ಲಕ್ಷ ರೂಪಾಯಿ ಅದೇ ಜಿಲ್ಲೆಯಲ್ಲಿ ಕೇಂದ್ರ ವಲಯದಲ್ಲಿ 1453 ಲಕ್ಷ ರೂಪಾಯಿ ಬಿಡುಗಡೆಯಾಗಿದ್ದರೆ ಕೇವಲ 488 ಲಕ್ಷ ರೂಪಾಯಿ ಖರ್ಚಾಗಿದೆ ಇದೇ ರೀತಿ ಬರುತ್ತದೆ ಈ ರೀತಿಯಾಗಿ ಒಂದು ವರ್ಷದಲ್ಲಿ ನಾವು ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಇದು ತುಂಬಾ ದುರದೃಷ್ಟಕರ ಸಂಗತಿ ಈಗ ನಾವು ಮಾರ್ಚ್ ಕೊನೆಯಲ್ಲಿದ್ದೇವೆ ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ನಾವ್ಯಾರು ಶಾಸಕರು ಊರಿನಲ್ಲಿರುವಂತಹ ಪರಿಸ್ಥಿತಿಯಲ್ಲಿ ಇರುವುದಿಲ್ಲ ಮೊನ್ನೆ ನನ್ನ ಕ್ಷೇತ್ರದಲ್ಲಿ ಇದ್ದಕ್ಕಿದ್ದ ಹಾಗೆ bore well ಹಾಳಾಗಿ ಕುಡಿಯುವ ನೀರಿನ ವ್ಯವಸ್ಥೆ ನಿಂತು ಹೋಯಿತು ಅದರ ನೀರು ಇದ್ದಕ್ಕಿದ್ದ ಹಾಗೆ dry ಆಯಿತು ಹಬ್ಬ ಮಾಡುವ ಹಾಗೆ ಇಲ್ಲ ಅಲ್ಲಿ tankerನಲ್ಲಿ ನೀರು ಹೊಡೆದು ಕೊಟ್ಟೆವು ಇಂತಹ ಒಂದು ಪರಿಸ್ಥಿತಿ ಇದೆ ಜಿಲ್ಲಾ ಪಂಚಾಯತ್‌ಗಳು ಹಾಗೂ ಗ್ರಾಮ ಪಂಚಾಯತ್‌ಗಳು ಹಣವನ್ನೇ ಖರ್ಚು ಮಾಡದೇ ನಮ್ಮ ರಾಜ್ಯದಲ್ಲಿ ಹಾಗೆ ಇಟ್ಟುಕೊಂಡಿವೆ ಎಂದರೆ ಅರ್ಥವೇ ಇಲ್ಲ ಮಾನ್ಯ ಸಚಿವರು ಇದನ್ನು withdraw ಮಾಡುತ್ತಾರಾ ಎಂದು ಹೇಳಬೇಕು ಇದಕ್ಕೆ ಬೇರೆ ಏನಾದರೂ agency ಗಳನ್ನು fix ಮಾಡಿ ಆ ಹಣವನ್ನು ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಇನ್ನು Task Force Committee ಗಳನ್ನು ರದ್ದು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ ಶಾಸಕರ ನೇತೃತ್ವದ Task Force Committeeಗಳು ಏನು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಇದ್ದವು, ಇವುಗಳ ಕೈಯಲ್ಲಿ ಸ್ವಲ್ಪ ಹಣವನ್ನು ಕೊಡದೇ ಹೋದರೆ ನಾನು ಇನ್ನು ಮೂರು ತಿಂಗಳು ಇರುವುದಕ್ಕೆ ಆಗುವುದಿಲ್ಲ, ಕಷ್ಟವಾಗುತ್ತದೆ ಆದುದರಿಂದ Task Force

Committee ಯನ್ನು ಪುನರ್ರಚನೆ ಮಾಡಬೇಕು ಇವುಗಳ ಕೈಯಲ್ಲಿ ಈ ಬೇಸಿಗೆಯ ಮೂರು ತಿಂಗಳಲ್ಲಿ ಕನಿಷ್ಟ 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ ತತ್‌ಕ್ಷಣ ಅಲ್ಲಿ ಧಾವಿಸಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮಾನ್ಯ ಸಚಿವರು ಇದಕ್ಕೆ ಏನಾದರೂ ಉತ್ತರವನ್ನು ಹೇಳಬೇಕು

ಶ್ರೀ ಎಸ್ ಎ ರವಿಂದ್ರನಾಥ್ ಮಾನ್ಯ ಅಧ್ಯಕ್ಷರೆ, 2006-07ನೇ ಸಾಲಿನಲ್ಲಿ 938 ಕೊಳವೆ ಬಾವಿ ನೀರು ಸರಬರಾಜು ಮತ್ತು 1,682 ಕಿರು ನೀರು ಸರಬರಾಜು 7,363 ಕೈ ಪಂಪ್ ಕೊಳವೆ ಬಾವಿ ಯೋಜನೆಗಳನ್ನು ಮಾಡಿದ್ದೇವೆ ಈಗ ಇನ್ನು ಶೇ 40ರಷ್ಟು ಹಣ ಹಿಂದಿನ ತಿಂಗಳಿನ ವರದಿಯ ಪ್ರಕಾರ ಖರ್ಚು ಆಗಿಲ್ಲ ಈ ತಿಂಗಳು ಸಾಕಷ್ಟು ಕೆಲಸಗಳನ್ನು ಮಾಡಿ, ಪೂರ್ತಿ ಹಣ ಖರ್ಚು ಮಾಡುವ ಕೆಲಸವನ್ನು ಮಾಡುತ್ತೇವೆ

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ಸತ್ಯನಾರಾಯಣರವರು ಸಚಿವರಾಗಿ ಇದ್ದಾಗ, Task Forceಗಾಗಿ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿದ್ದರು ಇದರಲ್ಲಿ ಯಾವುದೇ ಸ್ಕೀಮ್ ಇರಲಿ, ಅದು Central scheme ಇರಲಿ, State Scheme ಇರಲಿ, Task Forceಗೆ ಹಣವನ್ನು ಉಪಯೋಗ ಮಾಡುವಂಥಾದಕ್ಕೆ ಅವಕಾಶವನ್ನು ಕಲ್ಪಿಸಿ ಒಂದು ಆದೇಶ ಸರ್ಕಾರದಿಂದ ಬಂದಿತ್ತು ಅದು ದಿನಾಂಕ 25 2 2006 ರಂದು ಆ ಆದೇಶ ಬಂತು ಆ ಆದೇಶವನ್ನು subsequent ಆಗಿ ವಾಪಸ್ಸು ತೆಗೆದುಕೊಂಡಿದ್ದರು ಈಗಲೂ ಕೂಡ ಹಿಂದೆ ಕೊಟ್ಟಂತಹ ಆದೇಶ ಏನು ಇತ್ತು, ಅದು Central Sector ದು ಇರಲಿ, State Sectorದು ಇರಲಿ, ಈ Task Forceಗೆ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಇದರ ಜೋತೆಗೆ ಇಲ್ಲದೇ, ನಾವು ಮಾಡುವಂಥಾದ್ದು ಏನು ಇತ್ತು? ಆ Task Forceಗೆ ಮತ್ತೆ ಪುನರುಜ್ಜೀವನವನ್ನು ಕೊಟ್ಟು, ಈ ಬೇಸಿಗೆಯಲ್ಲಿ ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತೇನೆ, ಇಲ್ಲವೆಂದರೆ ನಾವು ಯಾರು ನಮ್ಮ ಕ್ಷೇತ್ರಗಳಲ್ಲಿ ತಿರುಗಾಡುವ ಹಾಗೆ ಇಲ್ಲ ನಮ್ಮ ಜಿಲ್ಲೆಯಲ್ಲಿರುವಷ್ಟು ಬರಗಾಲ ಯಾವ ಜಿಲ್ಲೆಯಲ್ಲೂ ಇಲ್ಲ, ಹಾಗಾಗಿ ಇಡೀ ರಾಜ್ಯಕ್ಕೆ ಕುಡಿಯುವ ಸಮಸ್ಯೆ ಇರುವ ಹಿನ್ನಲೆಯಲ್ಲಿ, ಎಲ್ಲಾ ಕಡೆಗಳಲ್ಲೂ Task Force ಅನ್ನು ಮತ್ತೆ ಪುನರುಜ್ಜೀವನ ಮಾಡಿ, ಈ ಎಲ್ಲಾ ಹಣವನ್ನು ಅದರಲ್ಲಿ ಖರ್ಚು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ ಮಾನ್ಯ ಅಧ್ಯಕ್ಷರೆ, ನಾನು ಕೂಡ ಅದನ್ನೇ ಒತ್ತಾಯ ಮಾಡುತ್ತೇನೆ, ಏಕೆಂದರೆ ಈ Task Force Committee ಇಲ್ಲದೇ ಹೋದಂತಹ ಸಂದರ್ಭದಲ್ಲಿ ಯಾವ ಸಭೆಗಳನ್ನು ಕರೆದರೂ ಯಾವ ಸಭೆಗಳಿಗೂ ಬರುವುದಿಲ್ಲ ಕೆಲವು ಕಡೆಗಳಂತೂ ವಿರೋಧ ಪಕ್ಷದವರು ನಿಜವಾಗಿಯೂ ಅಲ್ಲಿ ಕೆಲಸ ಮಾಡಿದರೆ

ಗೊತ್ತಾಗುತ್ತದೆ ಆ ಕಾರಣಕೋಸ್ಕರ Task Foice ಸಮಿತಿಗೆ ಮತ್ತ ಪುನರುಜ್ಜೀವನ ಕೊಡಬೇಕು ಅಲ್ಲಿ ಮತ್ತೆ ಶಾಸಕರುಗಳಿಗೆ ಅಧಿಕಾರವನ್ನು ಕೊಟ್ಟರೆ, ನಾವು ಈ ಮೂರು ತಿಂಗಳು ಉಳಿಯುವುದಕ್ಕ ಸಾಧ್ಯವಾಗುತ್ತದೆ, ಏಕೆಂದರೆ ಬೆಂಗಳೂರು ಗ್ರಾಮಾಂತರದ ನಮ್ಮಂಥ ತಾಲ್ಲೂಕುಗಳಲ್ಲಿ ಸಾವಿರ ಅಡಿ ಕೆಳಗೆ ಬೋರ್ ಕೊರೆದರೂ ನೀರು ಸಿಗುವುದಿಲ್ಲ, ಬೋರ್‌ವೆಲ್‌ಗಳನ್ನು ಕೊರೆಸಿದರೂ ಮುಂದೆಯೂ ನೀರು ಸಿಗುವುದಿಲ್ಲ ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ, ಆದಕೋಸ್ಕರ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಲಿಚ್ಛಿಸುತ್ತೇನೆ, ನಾನು ಒತ್ತಾಯ ಮಾಡಿ ಈ ವಿಷಯವನ್ನು ಹೇಳಲಿಚ್ಛಿಸುತ್ತೇನೆ

ಶ್ರೀ ಎ ಟಿ ರಾಮಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಕುಡಿಯುವ ನೀರನ್ನು ಕೊಡುವಂಥಾದ್ದು, ಸರ್ಕಾರದ ಬಹು ಮುಖ್ಯವಾದ ಜವಾಬ್ದಾರಿಯಾಗಿರುತ್ತದೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಹಣಕಾಸನ್ನು ಏನು ಒದಗಿಸುತ್ತಾರೆ ಅದನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು ಕುಡಿಯುವ ನೀರನ್ನು ಒದಗಿಸುವುದರಲ್ಲಿ ವಿಫಲವಾಗಿದ್ದಾರೆಂಬುದಕ್ಕೆ ಇವರ ಅಂಕಿ ಅಂಶಗಳನ್ನು ನೋಡಿದಾಗ ನನಗನಿಸುತ್ತದೆ ಇವರು ಒಂದು ಕಡೆ 277ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ, 207ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ ಆದರ ಅನುಬಂಧವನ್ನು ನೋಡಿದಾಗ, ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳನ್ನು ಮಾತ್ರ ಉದಾಹರಣೆಗೆ ಹೇಳುತ್ತೇನೆ, 648ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದು, 137ಲಕ್ಷ ರೂಪಾಯಿಗಳನ್ನು ರಾಜ್ಯ ವಲಯದ್ದು ಖರ್ಚು ಮಾಡಿದ್ದಾರೆ ಕೇಂದ್ರ ವಲಯದ್ದು 1,463ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ, 488ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ರಾಯಚೂರು ಜಿಲ್ಲೆಯದು 440 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದು, ಬರೀ 16ಲಕ್ಷ ರೂಪಾಯಿಗಳನ್ನು ರಾಜ್ಯ ವಲಯದ್ದು ಖರ್ಚು ಮಾಡಿದ್ದಾರೆ ಇದನ್ನು ಮಾನ್ಯ ಮಂತ್ರಿಯವರು ಗಮನಿಸುತ್ತಿದ್ದಾರಾ? ಪರಿಶೀಲನೆ ಮಾಡುತ್ತಿದ್ದಾರಾ? ಕೇಂದ್ರ ವಲಯದ್ದು 911 ಲಕ್ಷ ರೂಪಾಯಿಗಳಲ್ಲಿ ಬರೀ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಕುಡಿಯುವ ನೀರಿಗೆ ದೊಡ್ಡ ಹಾಹಾಕಾರವೆದ್ದಿದೆ ಇದಕ್ಕೆ ಕೊಟ್ಟಿರುವ ದುಡ್ಡನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು, ಜನರಿಗೆ ಕುಡಿಯುವ ನೀರನ್ನು ಕೊಡುವುದಕ್ಕ ಆಗುವುದಿಲ್ಲವೆಂದರೆ, ಸರ್ಕಾರ ಏಕೆ ಇರಬೇಕು? ಹೇಳಿ, ಮಂತ್ರಿಗಳು ಏಕೆ ಇರಬೇಕು? ಹೇಳಿ ಇವತ್ತು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಇದೆ ಇದನ್ನು ಅನುಷ್ಠಾನ ಮಾಡುವುದಕ್ಕೆ ಸಂಪೂರ್ಣ ವಿಫಲವಾಗುತ್ತಿದೆ ಅದಕ್ಕೆ ಪರಿಣಾಮಕಾರಿಯಾಗಿ ಕುಡಿಯುವ ನೀರನ್ನು ಬೇಸಿಗೆಯಲ್ಲಿ ಕೊಡಲೇ ಬೇಕಾಗುತ್ತದ ಅದಕ್ಕೆ Task Force Committeeಯನ್ನು ಮಾಡಿ, ನಮಗೆ ಇರುವಂಥ ಜವಾಬ್ದಾರಿಯನ್ನು ನಾವು ನಿರ್ವಹಣೆ ಮಾಡಬೇಕು ಶಾಸಕರು ಸುಮ್ಮನೆ ಹೋಗಿ ನೋಡಿಕೊಂಡು ಬರುವುದಕ್ಕ ಆಗುವುದಿಲ್ಲ ನಮ್ಮನ್ನು

ಜನರು ಕುಡಿಯುವ ನೀರು ಬೇಕೆಂದು ಕೇಳಿದರೆ, "ಜಿಲ್ಲಾ ಪಂಚಾಯತ್‌ನವರನ್ನು ಕೇಳಿ," 'ಗ್ರಾಮ ಪಂಚಾಯತ್‌ನವರನ್ನು ಕೇಳಿ," ಎಂದು ಹೇಳುವುದಕ್ಕಾಗುತ್ತದಾ? ದಯಮಾಡಿ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಉತ್ತರ ಹೇಳಬೇಕು Task Force Committeeಯನ್ನು ಮಾಡುತ್ತಿರೊ, ಅಥವ ಇಲ್ಲವೋ? ಕುಡಿಯುವ ನೀರಿನ ತೊಂದರೆ ಏನು ಇದೆ, ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಸ್ಪಂದಿಸುತ್ತದೊ, ಇಲ್ಲವೊ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು

ಶ್ರೀ ಎಂ ಪಿ ವೆಂಕಟೇಶ್ ಮಾನ್ಯ ಅಧ್ಯಕ್ಷರೆ, ಹಿಂದೆ ಶಾಸಕರ ಅವಧಿಯಲ್ಲಿ Task Force Committee ಇದ್ದಾಗ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಎಲ್ಲಾ ಇಲಾಖೆಯವರನ್ನು ಕರೆದು, ಅದನ್ನು ಜಾರಿಗೊಳಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದರು, ಶಾಸಕರುಗಳಿಗೆ ಅವಕಾಶವಿಲ್ಲದಾಗ, ಆ order ಅನ್ನು withdraw ಮಾಡಿರುವುದರಿಂದ, ಗ್ರಾಮ ಪಂಚಾಯತ್‌ನವರು ಅಧಿಕಾರಿಗಳನ್ನು ಕರೆದು ಮಾಡುವುದಕ್ಕೆ ತೊಂದರೆಯಾಗುತ್ತಿದೆ ಅದನ್ನು ಸಮರ್ಪಕವಾಗಿ ಮಾಡುವುದಕ್ಕೆ ಆಗುತ್ತಿಲ್ಲ ಹಿಂದೆ ಶಾಸಕರ ಅಧಿಕಾರದಲ್ಲಿ ಏನು ಇತ್ತೊ, ಅದನ್ನು ಮತ್ತೆ ಜಾರಿಗೊಳಿಸಬೇಕು

ಶ್ರೀ ಶಿವರಾಜ್ ಸಜ್ಜನರ್ ಮಾನ್ಯ ಅಧ್ಯಕ್ಷರೆ, Task Force Committeeಯನ್ನು ರಚನೆ ಮಾಡದೇ ಹೋದರೆ, ಬಹಳ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಇದು ಕಳೆದ ವರ್ಷವೂ ಇತ್ತು, ಆದರ ಹಿಂದಿನ ವರ್ಷವೂ ಇತ್ತು ನಮಗೆ ಆಗ ಅಷ್ಟು ಸಮಸ್ಯೆಗಳು ಇರಲಿಲ್ಲ ಈಗ Task Force Committee ಇಲ್ಲದೇ ಇರುವುದರಿಂದ, ನಾವು ಎಲ್ಲಿ ನೀರಿನ ಹಾಹಾಕಾರವಿರುತ್ತದೆ, ಅಲ್ಲಿ ಬೊರ್‌ವೆಲ್‌ಗಳನ್ನು ಕೊರೆಸುವುದಕ್ಕೂ ಸಾಧ್ಯವಾಗುತ್ತಿಲ್ಲ, ಮತ್ತು ಪೈಪ್, ಪಂಪ್‌ಗಳನ್ನೂ ಕೊಡುವುದಕ್ಕೂ ಆಗುತ್ತಾ ಇಲ್ಲ ಅದುದರಿಂದ ದಯವಿಟ್ಟು ತಕ್ಷಣ Task Force Committeeಯನ್ನು ಮಾಡಿ, ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು ಅದು ಅಲ್ಲದೆ? ಅದಕ್ಕೆ ದುಡ್ಡು ಇಲ್ಲ ಕಳೆದ ವರ್ಷ ನಾವು task forceನಲ್ಲಿ ಹಾಕಿರುವಂತಹ ಬೋರ್‌ವೆಲ್‌ಗಳ ದುಡ್ಡನ್ನು ಇವತ್ತಿಗೂ ಕೊಟ್ಟಿಲ್ಲ ಈಗ ಆ Task Force Committee ರಚನೆಯೂ ಆಗಿಲ್ಲ ತಾವು Task Force Committeeಯನ್ನು ಮುಂದುವರೆಸುತ್ತೇವೆಂದು ಹೇಳಿಕೆಯನ್ನು ಕೊಡುತ್ತಿರಾ? ನಮಗೆ ಬಹಳ ಸಮಸ್ಯೆಯಾಗುತ್ತಿದೆ ಈಗ ಒಂದು ಬೋರ್‌ವೆಲ್ ಕೆಟ್ಟರೂ ನಮಗೆ ಹೇಳುತ್ತಾರೆ, ಕರೆಂಟ್ ಇಲ್ಲವೆಂದರೂ ನಮಗೆ ಹೇಳುತ್ತಾರೆ ನೀರು ಇಲ್ಲವೆಂದರೂ ನಮಗೆ ಹೇಳುತ್ತಾರೆ, ಪಂಚಾಯತ್‌ಗೆ ನೀವು ಏನು ಅಧಿಕಾರವನ್ನು ಕೊಟ್ಟಿದ್ದೀರಿ,

ಅದೆಲ್ಲವೂ ದುರುಪಯೋಗವಾಗುತ್ತಿದೆ ದಯವಿಟ್ಟು Task Force Committeeಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ರಚನೆ ಮಾಡಿ ಅಧಿಕಾರವನ್ನು ಕೊಡಿ

ಅಧ್ಯಕ್ಷರು ಅಯಿತು, ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ

ಡಾ ಎಂ ಸಿ ಸುಧಾಕರ್ ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್‌ಗಳನ್ನು drill ಮಾಡುವುದಕ್ಕೆ ಯಾರೂ ಬರುತ್ತಿಲ್ಲ ಇವತ್ತು 800 ಅಡಿಯವರೆಗೂ drill ಮಾಡುತ್ತಾರೆ, ಆದರೂ ನಮಗೆ ನೀರು ಸಿಗುತ್ತಿಲ್ಲ ನಾವು 1000ಅಡಿಗೆ drill ಮಾಡಿಯೆಂದು ಹೇಳಿದರೆ, ಯಾರು ಬರುತ್ತಿಲ್ಲ ಅದು ನಗರಪ್ರದೇಶವಿರಬಹುದು, ಗ್ರಾಮೀಣಪ್ರದೇಶವಿರಬಹುದು ಈ Task Force Committeeಯದು ಒಂದು ಕಡೆಯಾದರೆ, ಬೊರ್‌ವೆಲ್‌ಗಳನ್ನು drill ಮಾಡುವುದಕ್ಕೆ ಯಾರೂ ತಯಾರಿಲ್ಲ ಕಳೆದ ವರ್ಷ ಮಳೆ ಸಂಪೂರ್ಣವಾಗಿ ವಿಫಲವಾಗಿದೆ ಇವತ್ತು ನಾವು ಬಹಳ ಭೀಕರವಾದ ಬರಗಾಲವನ್ನು ಎದುರಿಸುತ್ತಿದ್ದೇವೆ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆಯನ್ನು ಮಾಡದೇ ಹೋದರೆ, ನಾವು ಯಾರೂ ಆ ಕಡೆ ಓಡಾಡುವುದಕ್ಕೆ ಆಗುವುದಿಲ್ಲ ದಯವಿಟ್ಟು, ಸರ್ಕಾರ ಬೋರ್‌ವೆಲ್‌ಗಳನ್ನು drill ಮಾಡುವ ಬಗ್ಗೆ ಚಿಂತನೆ ಮಾಡಬೇಕು ಇವತ್ತು ಕರ್ನಾಟಕದಲ್ಲಿ ಯಾರೂ ಬೋರ್‌ವೆಲ್‌ಗಳನ್ನು drill ಮಾಡುವುದಕ್ಕೆ ಬರುತ್ತಿಲ್ಲ ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು

ಶ್ರೀ ಕೆ ಪದ್ಮನಾಭ ಕೊಟ್ಟಾರಿ ಮಾನ್ಯ ಅಧ್ಯಕ್ಷರೆ, ಹಿಂದೆ Task Force Committee ಇದ್ದಾಗ ಕೆಲಸ ಮಾಡಿರುವಂಥಾದ್ದು, ಆ ಬಿಲ್‌ನ ಹಣ ಬರದೇ ಬಾಕಿ ಇದೆ ಈಗ ಜನರು ಶಾಸಕರ ಬಳಿ ಬಂದು ನೀರು ಇಲ್ಲವೆಂದು ಹೇಳುತ್ತಾರೆ, ಕೊಳವೆಬಾವಿಗಳು ಬತ್ತಿ ಹೋಗಿವೆಯೆಂದು ಹೇಳುತ್ತಿದ್ದಾರೆ ನಮಗೆ ನೀರು ಬರುವುದಿಲ್ಲವೆಂದು ಅವರು ಶಾಸಕರನ್ನು ಬಂದು ಕೇಳುತ್ತಾರೆಯೇ ವಿನಾ ಅವರು ಗ್ರಾಮಪಂಚಾಯತ್‌ಗಳನ್ನು ಜಿಲ್ಲಾಪಂಚಾಯತ್‌ಗಳನ್ನು ಕೇಳುವುದಿಲ್ಲ ಅದಕ್ಕಾಗಿ task Force Committeeಯನ್ನು ಪುನರ್ ರಚನ ಮಾಡಬೇಕು ಇದಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಕೆಲಸ ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು, ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಎ ಟಿ ರಾಮಸ್ವಾಮಿಯವರು ಮಾತನಾಡುವಾಗ ನಾವೆಲ್ಲರೂ ಗಮನಿಸಿದೆವು, ನಮಗೆ ಎಷ್ಟು ನೋವಾಗಿದೆ, ಈ ಸದನದ ಪರಿಸ್ಥಿತಿ ಏನೆಂಬುದು ತಮಗೂ ಅರ್ಥವಾಗಿದೆ ಮಾನ್ಯ ಎ ಟಿ ರಾಮಸ್ವಾಮಿಯವರು ಅತ್ಯಂತ ನೋವಿನಿಂದ ಈ ಸರ್ಕಾರ ಇದೆಯೇ ಎನ್ನುವ ಮಟ್ಟಕ್ಕೆ ಅವರು ಮಾತನಾಡಿದರು ನಮಗೆ ಅವರ ಮಾತು ನಿಜಕ್ಕೂ ಇಷ್ಟವಾಯಿತು ನಾನು ಒಂದು ಮಾತನ್ನು ಹೇಳುತ್ತೇನೆ ಕಳೆದ ಬಾರಿ ಇದೇ ಸದನದಲ್ಲಿ ಮಂತ್ರಿಯಾಗಿದ್ದಾಗ, ಮಾನ್ಯ ಸತ್ಯನಾರಾಯಣರವರು ತೆಗೆದುಕೊಂಡಂತಹ

ನಿರ್ಧಾರವನ್ನು ಇವತ್ತು ನಾವೆಲ್ಲರೂ ಮುಕ್ತ ಕಂಠದಿಂದ, ಇಡೀ ಸದನವೂ ಮಾನ್ಯ ಸತ್ಯನಾರಾಯಣರವರ ಬಗ್ಗೆ ಅಭಿಮಾನವನ್ನು ಪ್ರಾಮಾಣಿಕವಾಗಿ ತೋರಿಸಿದ್ದೇವೆ ಈಗ ಬರುವ ಮೂರು ತಿಂಗಳುಗಳು ಏನು ಇವೆ, ಈ ಸಮಯದಲ್ಲಿ ರಾಜ್ಯದಲ್ಲಿ ಭೀಕರವಾದಂತಹ ಬರಗಾಲ ಪರಿಸ್ಥಿತಿ ಬರುತ್ತದೆ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಜನರು ಬಂದು ಯಾರನ್ನು ಕೇಳುತ್ತಾರೆಂದರೆ, ಶಾಸಕರನ್ನು ಕೇಳುತ್ತಾರೆ ಅವರು ಬಂದು ನಮ್ಮ ಊರಿಗೆ ಒಂದು ಕೊಳವೆ ಬಾವಿ ಬೇಕು, ನಾವು ಕುಡಿಯುವ ನೀರಿನ ತೊಂದರೆಯಲ್ಲಿ ಇದ್ದೇವೆಂದು ಹೇಳುತ್ತಾರೆ ನಾವು ತಕ್ಷಣ Task Force Committee ಇದ್ದಾಗ ಎಲ್ಲಾ ಕಡೆ ಜನರು ಎಲ್ಲೆಲ್ಲಿ ಕೇಳುತ್ತಾರೆ ಎಲ್ಲೆಲ್ಲಿ ನೀರು ಬೇಕಾಗಿತ್ತು, ಅಲ್ಲಿ ಎಲ್ಲಾ ಕಡೆಗಳಲ್ಲೂ ನಾವು ಕೊಳವೆ ಬಾವಿಗಳನ್ನು ತೆಗೆಸಿದ್ದೇವೆ ಇನ್ನು ಆದರ ಸಾಲ ತೀರಿಲ್ಲ, ಅದು ತೀರಲಿ, ಆದರೂ ಚಿಂತೆ ಇಲ್ಲ, ಸಾಲ ಕೊಡುವ ಗ್ಯಾರಂಟಿ ಸರ್ಕಾರ ಕೊಟ್ಟಿದೆ, ಆ ಪ್ರಶ್ನೆ ಬೇರೆ ಈಗ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ತಾವು ಸುಮ್ಮನೆ ಅಂಕ ಸಂಖ್ಯೆಯನ್ನು ಕೊಡುವಂಥಾದ್ದು, ದುಡ್ಡನ್ನು ಕೊಟ್ಟಿದ್ದೇವೆಂದು ಹೇಳಿದರೆ ಆಗುವುದಿಲ್ಲ ಈ ಮೂರು ತಿಂಗಳಿಗೆ ಶಾಸಕರುಗಳ ಅಧ್ಯಕ್ಷತೆಯಲ್ಲಿ Task Force Committee ಮಾಡಿ, ಹಣವನ್ನು ಬಿಡುಗಡೆ ಮಾಡುತ್ತೇವೆ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ, ಅಲ್ಲಿ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆಂಬ ಉತ್ತರವನ್ನು ಕೊಟ್ಟರೆ ಅದು ಸಮಂಜಸವಾಗುತ್ತದೆ ಆ ರೀತಿಯಾಗಲಿಲ್ಲವೆಂದರೆ ಅದು ಸಮಂಜಸವಾಗುವುದಿಲ್ಲ ಅದುದರಿಂದ ತಾವು ನೇರವಾಗಿ ಹೇಳಬೇಕು, ನೀವು ಅಷ್ಟು ಹಣ ಕೊಟ್ಟಿದ್ದೇವೆ, ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುವುದಕ್ಕೆ ಹೋಗಬೇಡಿ ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ ತಾವು ಈಗ ದಯಮಾಡಿ ತೀರ್ಮಾನ ಮಾಡಬೇಕು

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ Rajiv Gandhi Drinking Water Schemeಗೆ ರಾಜ್ಯ ಸರ್ಕಾರಕ್ಕೆ ಹತ್ತು ಕೋಟಿ ರೂಪಾಯಿಗಳು ಬಂದಿವೆ ಈ ಹತ್ತು ಕೋಟಿ ರೂಪಾಯಿಗಳನ್ನು ಮಾರ್ಚ್ 31ನೇ ತಾರೀಖಿನೊಳಗೆ ಖರ್ಚು ಮಾಡಬೇಕಾಗಿದೆ ಈ ಹಣದಲ್ಲಿ ಒಂದು ಪೈಸೆಯನ್ನು ಎಲ್ಲೂ ಖರ್ಚು ಮಾಡಿಲ್ಲ ಅದಕ್ಕೆ they have not prepared the action plan ಇವತ್ತು ಮಾನ್ಯ ಎಂ ಪಿ ಪ್ರಕಾಶ್‌ರವರು ಇದ್ದಾರೆ, ಅವರು ಹೇಳಬೇಕು ಕೇಂದ್ರ ಸರ್ಕಾರದಿಂದ ಆ ಹಣ ಬಂದಿದೆಯಾ, ಇಲ್ಲವಾ, ಎಂಬುದನ್ನು ಹೇಳಬೇಕು ಆ ಹಣ ಬಂದಿದ್ದರೆ ಎಷ್ಟು ಬಿಡುಗಡೆ ಮಾಡಿದ್ದೀರಿ? ಏಕೆ ಬಿಡುಗಡೆ ಮಾಡಿಲ್ಲ? ಕೇಂದ್ರ ಸರ್ಕಾರದ ಮಂತ್ರಿಯವರು ಹೇಳಿದ್ದಾರೆ ಕೇಂದ್ರ ಸರ್ಕಾರದಿಂದ ಬಂದಂತಹ ಹತ್ತು ಕೋಟಿ ರೂಪಾಯಿಗಳನ್ನು 31 3 2007ರೊಳಗೆ ಖರ್ಚು ಮಾಡಬೇಕಾಗಿದೆ ಎಲ್ಲೆಲ್ಲಿ drinking water problem ಇದೆ, ಅಲ್ಲಿಗೆ ಹಣವನ್ನು ಬಿಡುಗಡೆ

ಮಾಡಬೇಕಾಗಿದೆ ಆದರೆ, ಇನ್ನೂ ಯಾವ ಕೆಲಸವು ಆಗುತ್ತಿಲ್ಲ ಮಾನ್ಯ ಪ್ರಕಾಶ್‌ರವರೆ, ತಾವು scracity ಉಸ್ತುವಾರಿ ಸಚಿವರಾಗಿದ್ದೀರಿ ಕರ್ನಾಟಕ ರಾಜ್ಯದ ಎಲ್ಲ ಕಡೆಗಳಲ್ಲಿ drinking water ಬಗ್ಗೆ ಹಾಹಾಕಾರ ಎದ್ದಿದೆ ಅದಕ್ಕಾಗಿ, ಮುಂದೆ ಬರತಕ್ಕಂಥ ಮೂರು ತಿಂಗಳಿಗೆ prepare ಆಗಬೇಕಾಗಿದೆ ನಾವ್ಯಾರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕಾಗುವುದಿಲ್ಲ, ಸಿಟಿಗಳಿಗೆ ಹೋಗುವುದಕ್ಕಾಗುವುದಿಲ್ಲ ಅಂಥ ಪರಿಸ್ಥಿತಿ ಇದೆ ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದವರು ಏನು ಮಾಡುತ್ತೀರಿ? ಕೇಂದ್ರ ಸರ್ಕಾರದಿಂದ ಬಂದಂದ ಹಣವನ್ನಾದರೂ ತಾವು ಖರ್ಚು ಮಾಡಿ

ಶ್ರೀ ಎಸ್ ಎ ರವೀಂದ್ರನಾಥ್ ಸನ್ಮಾನ್ಯ ಅಧ್ಯಕ್ಷರೇ, ಯಾವ ಯಾವ ಯೋಜನೆಗಳನ್ನು ಮಾಡಬೇಕು ಎನ್ನುವುದನ್ನು ಜಿಲ್ಲಾ ಪಂಚಾಯಿತಿಯವರು ಡಿಸೆಂಬರ್ ತಿಂಗಳಾದರೂ ಸಹ approval ಮಾಡಿಕೊಟ್ಟಿರಲಿಲ್ಲ ನಾವು ಆ ಬಗ್ಗೆ ಒತ್ತಾಯ ಮಾಡಿದ ಮೇಲೆ approval ಕೊಟ್ಟಿದ್ದಾರೆ, ಈಗ ಸಾಕಷ್ಟು ಸ್ಪೀಡಾಗಿ ಕೆಲಸ ಮಾಡುವಂಥಾದ್ದನ್ನು ಮಾಡಿದ್ದೇವೆ ಈ ಮೊದಲು RWS Scheme ಅನ್ನು ಪಂಚಾಯಿತಿಗಳಿಗೆ ಕೊಡುವಂತೆ ಮಾಡಿದ್ದೆವು ಈಗ ಅದನ್ನು withdraw ಮಾಡಿ, ಅದನ್ನು ಜಿಲ್ಲಾ ಪಂಚಾಯಿತಿಗಳಿಗೇ ಕೊಡುವಂಥಾದ್ದನ್ನು ಮಾಡಿದ್ದು, ಜಿಲ್ಲಾ ಪಂಚಾಯಿತಿಗಳ engineerಗಳೇ ಆ ಕೆಲಸ ಮಾಡುವಂತೆ ಸಾಕಷ್ಟು ಒತ್ತಾಯ ಮಾಡಿ ಕೆಲಸ ಮಾಡಿಸಲಿಕ್ಕೆ ಪ್ರಾರಂಭ ಮಾಡಿದ್ದೇವೆ ಎಲ್ಲ ಯೋಜನೆಗಳು ಸಹ ತ್ವರಿತಗತಿಯಲ್ಲಿ ಕೆಲಸ ಮಾಡುತ್ತಿವೆ ಇವರೆಲ್ಲ ಹೇಳಿರುವುದು ನಿಜ, ಯಾವುದೂ ಸುಳ್ಳಲ್ಲ ನಾನೂ ಸಹ ಎಲ್ಲ ಜಿಲ್ಲೆಗಳಿಗೆ ಹೋಗಿ, ಅಧಿಕಾರಿಗಳನ್ನು ಕರೆದು, ಈ ಕೆಲಸಗಳನ್ನು ತುರ್ತಾಗಿ ಮಾಡಬೇಕು, ಪೂರ್ಣ ಹಣವನ್ನು ಮಾರ್ಚ್ 31ರೊಳಗಾಗಿ ಖರ್ಚು ಮಾಡಬೇಕು ಮತ್ತು ಕೆಲಸಗಳನ್ನು ಸರಿಯಾಗಿ ಮಾಡಬೇಕು ಎಂದು ತಿಳಿಸಿದ್ದೇನೆ ಅದರ ಜೊತೆಗೆ, ಈ ಬಗ್ಗೆ task force ಮಾಡುವಂಥಾದ್ದನ್ನು ಮಾಡುತ್ತೇವೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳನ್ನು 125 ಕೋಟಿ ರೂಪಾಯಿಗಳ ಹಣವನ್ನು ಬರಗಾಲದ ಪ್ರಯುಕ್ತ ಕೇಳಿದ್ದೇವೆ ಅವರೆಷ್ಟು ಕೊಡುತ್ತಾರೆ ಎನ್ನುವುದನ್ನು ನೋಡಿ, ಆದಷ್ಟು ಬೇಗ task force committeeಗಳನ್ನು ಮಾಡಿ ಹಣ ಕೊಡುವಂಥಾದ್ದನ್ನು ಮಾಡುತ್ತೇವೆ

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಒಂದೇ ಒಂದು ಉಪ ಪ್ರಶ್ನೆ ಇದು ಇಡೀ ರಾಜ್ಯಕ್ಕೇ ಸಂಬಂಧಪಟ್ಟಂಥಾದ್ದು

ಅಧ್ಯಕ್ಷರು ನಿಮಗೆ ಸಹಾಯಕವಾಗಿ ಎಲ್ಲರೂ ಪ್ರಶ್ನೆಗಳನ್ನು ಕೇಳಿಬಿಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ Task force committeeಗಳನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಿಬಿಡಿ ಏಕೆಂದರೆ, ಅದು ಬಹಳ ಮುಖ್ಯವಾಗಿದೆ ಆ ಬಗ್ಗೆ ತಾವು ಸದನದ ಅಭಿಪ್ರಾಯವನ್ನು ಕೇಳಿದ್ದೀರಿ

ಸದನದ ಈ ಕಡೆ ಮತ್ತು ಆ ಕಡೆ ಇರುವ, ಎಲ್ಲ ಸದಸ್ಯರೂ ಒತ್ತಾಯ ಮಾಡುತ್ತಿದ್ದಾರೆ ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಕುಳಿತಿದ್ದಾರೆ ಸದನದ ಎಲ್ಲ ಸದಸ್ಯರೂ ಒಕ್ಕೊರಲಿನಿಂದ ಹೇಳುತ್ತಿದ್ದಾರೆ, task force committeeಗಳನ್ನು ತಕ್ಷಣ ಮಾಡಬೇಕು, ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಬೇಕು, ಕನಿಷ್ಟ ಜೂನ್‌ವರೆವಿಗಾದರೂ ಅಂದರೆ ಮೂರು ತಿಂಗಳ ಕಾಲ task forceಅನ್ನು ಮಾಡಿ ಎಂದು ಎಲ್ಲ ಕಡೆಯ ಸದಸ್ಯರೂ ಕೂಡ ಸರ್ಕಾರವನ್ನು ಕೇಳುತ್ತಿದ್ದಾರೆ ರಾಜ್ಯದಲ್ಲಿ ನೀರಿಗೆ ಹಾಹಾಕಾರ ಎದ್ದಿದೆ ದಿನಬೆಳಗಾದರೆ ಜನರು ಶಾಸಕರ ಮನೆಗಳ ಹತ್ತಿರ ಬರುತ್ತಿದ್ದಾರೆ ಅವರು ಜಿಲ್ಲಾ ಪಂಚಾಯಿತಿಗಳ ಸದಸ್ಯರ ಮನೆಗಳ ಹತ್ತಿರ ಹೋಗುವುದಿಲ್ಲ ಹೀಗಾಗಿ ನಮಗೆ ಬಾರಿ ಹಿಂಸೆಯಾಗಿದೆ ದಯವಿಟ್ಟು ಮೂರು ತಿಂಗಳಿಗಾದರೂ, ಆ ಕಮಿಟಿಯನ್ನು ಮಾಡಿ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು Task force committeeಯನ್ನು ತಕ್ಷಣ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳಿಕೆ ಕೊಡಬೇಕು

ಶ್ರೀ ಕೆ ಜಯಪ್ರಕಾಶ ಹೆಗ್ಡೆ Task forceಅನ್ನು ಮಾಡುವುದರ ಜೊತೆಗೆ, ಹಣವನ್ನು ನೇರವಾಗಿ task forceಗಳಿಗೇ ಬಿಡುಗಡೆ ಮಾಡುವಂಥಾದ್ದನ್ನು ಮಾಡಬೇಕು ತಾವು ಹಣವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದರೆ ಆಗುವುದಿಲ್ಲ ಮಾನ್ಯ ಸತ್ಯನಾರಾಯಣರವರು ಮಂತ್ರಿಗಳಾಗಿದ್ದಾಗ, ಇದಕ್ಕೆ ಸಾಕಷ್ಟು ಹಣವಿದೆ ಎಂದು ಹೇಳಿದ್ದರೂ, ಇವತ್ತಿಗೂ ಹಣ ಬಿಡುಗಡೆಯಾಗಿಲ್ಲ ನಂತರ ಕಾರಜೋಳರವರು ಬಂದರು ಅವರು ಹಣವನ್ನು ಬಿಡುಗಡೆ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದರು ನಂತರ ರವೀಂದ್ರನಾಥ್‌ರವರು ಬಂದರು ಆದರೆ ಇವತ್ತಿಗೂ ಹಣ ಬಿಡುಗಡೆಯಾಗಿಲ್ಲ ದಯವಿಟ್ಟು task force ಮಾಡಿ, task forceಗೇ ನೇರವಾಗಿ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಇದುವರೆಗೂ ಹಣ ಬಿಡುಗಡೆಯಾಗಿಲ್ಲ ಹಣವನ್ನು ಬಿಡುಗಡೆ ಮಾಡದಿದ್ದರೆ ಕೆಲಸವಾಗುವುದಿಲ್ಲ Task force committeeಯನ್ನೂ ಮಾಡಬೇಕು, ಹಣವನ್ನೂ ಬಿಡುಗಡೆ ಮಾಡಬೇಕು ಇವೆರಡನ್ನೂ ಮಾಡಬೇಕು

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, task force committeeಗಳಿಗೆ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳನ್ನೂ ಸದಸ್ಯರನ್ನಾಗಿ ಮಾಡಿ ಆಗ co-ordinationನಿಂದ ಕೆಲಸ ಮಾಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ಸಂಬಂಧಪಟ್ಟ ಸಚಿವರು ನಿಮ್ಮನ್ನು ಕೇಳುತ್ತೇನೆ ಎಂದು ಹೇಳಿದರು ಈಗ ನೀವು ಸದನದಲ್ಲಿದ್ದೀರಿ ನೀವು ಹೇಳಬೇಕು ಇದು ಯಾವತ್ತೋ ತೆಗೆದುಕೊಳ್ಳುವ

ನಿರ್ಧಾರವಲ್ಲ ಏಕೆಂದರೆ, ತಕ್ಷಣ ಬೋರ್ ಹಾಕಿಸಬೇಕಾಗಿದೆ, ಒತ್ತಡ ಇದೆ Task force ಮಾಡುತ್ತೇವೆ, Chief Minister ರವರನ್ನು consult ಮಾಡುತ್ತೇನೆ ಎಂದು ಮಂತ್ರಿಗಳು ಹೇಳಿದರು ತಾವು ಈಗ ಸಭೆಯಲ್ಲಿದ್ದೀರಿ ತಾವು ಏನಾದರೂ ಒಂದು ಮಾತನ್ನು ಹೇಳಿ

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರಲ್ಲಿ ಭಾಗವಹಿಸಿದರೆ ತುಂಬ ಒಳ್ಳೆಯದು ಏಕೆಂದರೆ, ಮೂರು ತಿಂಗಳುಗಳ ಕಾಲ ಇದು ಇಡೀ ರಾಜ್ಯವನ್ನು ಕಾಡುವಂಥ ಸಮಸ್ಯೆ ಎಲ್ಲ ಮಾನ್ಯ ಸದಸ್ಯರುಗಳು ತಮ್ಮ ಪಕ್ಷ ಪಂಗಡವನ್ನು ಮರೆತು ಇದರಲ್ಲಿ ಭಾಗವಹಿಸಿದ್ದಾರೆ Task forceಅನ್ನು ಪುನರುಜ್ಜೀವನ ಮಾಡುವಂಥಾದ್ದು ಮತ್ತು ಅದಕ್ಕೆ ಸಾಕಷ್ಟು ಹಣವನ್ನು ಕೊಡುವಂಥಾದ್ದು ಆಗಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಸಚಿವರು ಒಂದು ನೀತಿಯನ್ನು ಹೇಳಿದರು ನಾವು task force ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ, ಮುಖ್ಯಮಂತ್ರಿಗಳನ್ನು ಕೇಳಿ ಮಾಡುತ್ತೇವೆ, ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡಬೇಕು ಎನ್ನುವುದನ್ನು ಹೇಳುತ್ತೇವೆ ಎಂದು ಹೇಳಿದರು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ ಈಗ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ ಮುಖ್ಯಮಂತ್ರಿಗಳು ನೇರವಾಗಿ ಈ ಸದನಕ್ಕೆ ಒಂದು ಭರವಸೆಯನ್ನು ಕೊಡಬೇಕು ಶಾಸಕರ ಅಧ್ಯಕ್ಷತೆಯಲ್ಲಿ task force ಇಷ್ಟು ದಿವಸದಲ್ಲಿ ಮಾಡುತ್ತೇವೆ, ಇದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಪ್ರಶ್ನೆ, ಮತ್ತು ಇಡೀ ಸದನದ ಅಭಿಪ್ರಾಯವೆಂದರೆ, ಸರ್ಕಾರದ ಗೌರವವನ್ನು ಕಾಪಾಡುವಂಥ ನಿಟ್ಟಿನಲ್ಲಿ, ಮುಂದಿನ ಮೂರು ತಿಂಗಳಲ್ಲಿ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ಕೊಡಬೇಕು ಎನ್ನುವುದು ಇದು ನಮ್ಮೆಲ್ಲರ ಆಗ್ರಹ ತಮ್ಮನ್ನು consult ಮಾಡಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ ಇದಕ್ಕೆ ಸಾಕಷ್ಟು ದೊಡ್ಡ ಮೊತ್ತದ ಹಣವನ್ನು ತೆಗೆದಿರಿಸದೇ ಹೋದರೆ ತೊಂದರೆಯಾಗುತ್ತದೆ ಅಲ್ಲದೇ, ವಿದ್ಯುತ್ ಕೂಡ ಇಲ್ಲ ವಿದ್ಯುತ್ ಇಲ್ಲದೇ ನೀರಿನ ಪಂಪುಸೆಟ್ಟುಗಳು ಚಾಲುವಾಗದೇ ಇರುವಂಥ ಕಷ್ಟವಾದ ಪರಿಸ್ಥಿತಿ ಇರುವುದರಿಂದ ಹಳ್ಳಿಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗಾಗಿ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕು ಮತ್ತು task force ಅನ್ನು ನಿರ್ಮಾಣ ಮಾಡಬೇಕು ಈ ಹಣವನ್ನು ಖರ್ಚು ಮಾಡುವುದರಲ್ಲಿ ವಿಫಲವಾಗಿರುವಂಥ ಜಿಲ್ಲಾ ಪಂಚಾಯಿತಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಏಕೆಂದರೆ, ಹಣವನ್ನು ಕೊಟ್ಟರೂ ಕೂಡ ಜಿಲ್ಲಾ ಪಂಚಾಯಿತಿಗಳು ಹಣವನ್ನು

ಖರ್ಚು ಮಾಡುವುದಿಲ್ಲ ಎಂದರೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಸಂಪೂರ್ಣವಾಗಿ ನಿರ್ನಾಮವಾಗುತ್ತದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮುಂದಿನ 2–3 ತಿಂಗಳು ಬರಗಾಲ ಬರುವ ಹಿನ್ನಲೆಯಲ್ಲಿ ಮತ್ತು ಬೇಸಿಗೆಯ ಕಾಲದ ಈ ಸಂದರ್ಭದಲ್ಲಿ, ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ಇರತಕ್ಕಂಥಾದ್ದನ್ನು ಈಗಾಗಲೇ ನಾವು ಗಮನಿಸಿದ್ದೇವೆ Task forceನ ಅವಶ್ಯಕತೆ ಇದೆ ಎನ್ನುವುದನ್ನು ಎಲ್ಲ ಸದಸ್ಯರು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ ಶಾಸಕರ ಅಧ್ಯಕ್ಷತೆಯಲ್ಲಿ task force ಮಾಡತಕ್ಕಂಥಾದ್ದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಇದರ ಬಗ್ಗೆ ತಕ್ಷಣವೇ ತೀರ್ಮಾನವನ್ನು ಮಾಡುತ್ತೇವೆ ಆದರೆ ಶಾಶ್ವತವಾದ ಕೆಲಸಗಳನ್ನು ಮಾಡತಕ್ಕಂಥಾದ್ದಕ್ಕೆ ಹಾಗೂ ಎಲ್ಲೆಲ್ಲಿ ಜರೂರು ಕೆಲಸಗಳಾಗಬೇಕಾಗಿದೆ ಅಂಥ ಕಡೆಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲು ಆದ್ಯತೆಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಶಾಸಕ ಮಿತ್ರರಲ್ಲಿ ಮನವಿಯನ್ನು ಮಾಡುತ್ತೇನೆ ಇದು ಕುಡಿಯುವ ನೀರಿನ ವಿಷಯವಾಗಿರುವುದರಿಂದ, ಯಾವುದೇ ಕಾರಣಕ್ಕೂ ಇದಕ್ಕೆ ಹಣವನ್ನು ಬಿಡುಗಡೆ ಮಾಡುವಂಥಾದ್ದರಲ್ಲಿ ಹಿಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ ಈ ವಿಷಯದಲ್ಲಿ ಸರ್ಕಾರದವರು ಸಂಪೂರ್ಣವಾಗಿ ಆದ್ಯತೆಯನ್ನು ಕೊಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಹೋದ ಸಲ task force ಮಾಡಿದ್ದಾಗ ನಗರ ಪ್ರದೇಶಗಳಲ್ಲಿ ಎಲ್ಲಿಯೂ task forceಗಳನ್ನು ಮಾಡಿರಲಿಲ್ಲ ಎಲ್ಲಾ ಕಡೆಗಳಂತೆ ಈಗ ಬೆಂಗಳೂರು ನಗರದಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆಯಾಗಿದೆ ಅದೇ ರೀತಿ ಎಲ್ಲ ನಗರ ಪ್ರದೇಶಗಳಲ್ಲಿಯೂ ಕೂಡ ಸಮಸ್ಯೆಯಿದೆ ಬೋರ್‌ವೆಲ್ ಹಾಕತಕ್ಕಂಥಾದ್ದು, motor ಹಾಕತಕ್ಕಂಥಾದ್ದು ಹೀಗೆ ಎಲ್ಲ ಸಮಸ್ಯೆಗಳಿವೆ ಆದರೆ, ಈ ನಗರ ಪ್ರದೇಶಗಳಲ್ಲಿ ಎಲ್ಲಿಯೂ task forceಗಳು ಆಗಲಿಲ್ಲ ಹಿಂದೆ ಬರೀ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ task forceಗಳ ರಚನೆಯಾಗಿತ್ತು ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ನಗರ ಪ್ರದೇಶಗಳಲ್ಲಿಯೂ ಕೂಡ ಶಾಸಕರ ಅಧ್ಯಕ್ಷತೆಯಲ್ಲಿ task force ಮಾಡುವಂಥಾದ್ದನ್ನು ಮಾಡಬೇಕು ಇಲ್ಲದೇ ಹೋದರೆ ನಮಗೆ ಬಹಳ ಸಮಸ್ಯೆಯಾಗುತ್ತದೆ ಆದ್ದರಿಂದ ದಯವಿಟ್ಟು ಅದನ್ನು ಮಾಡಿಕೊಡಬೇಕು ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಗಡ್ಡದೇವರ ಮಠ್ ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, ಇದನ್ನು ಪಟ್ಟಣ ಪಂಚಾಯಿತಿ ಮತ್ತು ಪುರಸಭೆ ಕ್ಷೇತ್ರಗಳಿಗೂ ಅನ್ವಯಿಸಬೇಕು ಅಲ್ಲಿ task force ಅನ್ನುವುದು ಇಲ್ಲವೇ ಇಲ್ಲ ಅದಕ್ಕೆ

ಅಲ್ಲಿಗೂ ಇದನ್ನು ವಿಸ್ತರಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ್ ನಗರ ಪ್ರದೇಶಗಳಲ್ಲಿ task force committee ಅನ್ನು ಮಾಡಲಿಕ್ಕೆ

ಅಧ್ಯಕ್ಷರು ನಗರ ಪ್ರದೇಶಗಳಲ್ಲಿ ಮಾಡಬೇಕೆಂದು ಕೇಳುತ್ತಿದ್ದಾರೆ ಹಿಂದೆ ರಚನೆಯಾಗಿದ್ದದ್ದು ಗ್ರಾಮಾಂತರ ಪ್ರದೇಶಕ್ಕೆ ಮಾತ್ರ, ಈಗ ನಗರ ಪ್ರದೇಶಗಳಲ್ಲೂ ಆಗಬೇಕೆಂದು ಕೇಳುತ್ತಿದ್ದಾರೆ

ಶ್ರೀ ಎಸ್ ಎ ರವೀಂದ್ರನಾಥ್ ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾಡುತ್ತೇವೆ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೇ, ಅದು ಅವರಿಗೆ ಬರುವುದಿಲ್ಲ ಅದನ್ನು ಮುಖ್ಯಮಂತ್ರಿಗಳೇ ಹೇಳಬೇಕು

ಅಧ್ಯಕ್ಷರು ಮಾನ್ಯ ಮಂತ್ರಿಗಳು ಮಾಡುತ್ತೇವೆಂದು ಹೇಳುತ್ತಿದ್ದಾರೆ ಇಲ್ಲಿಗೆ ಈ ಪ್ರಶ್ನೆ ಮುಗಿಯಿತು

* * * * *

ಅಧ್ಯಕ್ಷರು ನಿರಾಣಿ ಮುರುಗೇಶ್ ರುದ್ರಪ್ಪನವರೆ, ನಿಮ್ಮ ಪ್ರಶ್ನೆ ಸಂಖ್ಯೆ 211ಕ್ಕೆ ಉತ್ತರ ಕೊಡಲು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಗ ಇಲ್ಲಿ ಇಲ್ಲ ಆದ್ದರಿಂದ ಇನ್ನೊಂದು ದಿವಸ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಆ) <u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 20–03–2007ರ 14ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 7 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 105 ಪ್ರಶ್ನೆಗಳ ಪೈಕಿ 44 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ 21–03–2007ರ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ 47 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

<u>ಅನುಬಂಧ–1</u>

ಸಭಾಧ್ಯಕ್ಷರು ಮಂಡಿಸಲಾಯಿತು

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 9 ಮತ್ತು 10 ಹಾಗೂ ಅನುಸೂಚಿ II ಮತ್ತು IIIಕ್ಕೆ ತಿದ್ದುಪಡಿ ಮಾಡಿ ದಿನಾಂಕ 25 01 2007ರಂದು ಹೊರಡಿಸಲಾದ ಅಧಿಸೂಚನೆ

ಸಂಖ್ಯೆ ಡಿಪಿಎಆರ್ 10 ಎಸ್‌ಡಿಇ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ) ಪರವಾಗಿ -

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಪ್ರಕರಣದ ಮೇರೆಗೆ

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಅಧಿನಿಯಮದ ಪ್ರಕರಣ 5(1)ರಡಿಯ ಅಧಿಕಾರ ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ 2007ರ ಏರೋ ಇಂಡಿಯಾ ಪ್ರದರ್ಶನದ ಉದ್ದೇಶಕ್ಕಾಗಿ ಯಾವುದೇ ಅಧಿಸೂಚಿತ ಸರಕುಗಳ ಸ್ಥಳೀಯ ಪ್ರದೇಶದೊಳಗಿನ ಪ್ರವೇಶದ ಮೇಲೆ ಕೆಲವು ಷರತ್ತುಗಳಿಗೊಳಪಟ್ಟು ಯಾವುದೇ ಅಮದುದಾರರು ಪಾವತಿಸಬೇಕಾದ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 13 02 2007ರಂದು ಹೊರಡಿಸಲಾದ ಎಫ್‌ಡಿ 29 ಸಿಇಎಕ್ಸ್ 2006ನೇ ಸಂಖ್ಯೆಯ ಅಧಿಸೂಚನೆ

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ

ಹೊಸ ಕೈಗಾರಿಕಾ ನೀತಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 17 01 2007ರಂದು ಹೊರಡಿಸಲಾಧ ಎಫ್‌ಡಿ 29 ಸಿಇಟಿ 2006(1)ನೇ ಸಂಖ್ಯೆಯ ಅಧಿಸೂಚನೆ

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಪ್ರಕರಣದ ಮೇರೆಗೆ

2004ರ ಹೊಸ ಕೈಗಾರಿಕಾ ನೀತಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 17 01 2007ರಂದು ಹೊರಡಿಸಲಾದ ಎಫ್‌ಡಿ 29 ಸಿಇಟಿ 2006(2)ನೇ ಸಂಖ್ಯೆಯ ಅಧಿಸೂಚನೆ

1959ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 18ರ ಪ್ರಕರಣದ ಮೇರೆಗೆ

1959ರ ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳ ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 8 11 2006ರಂದು ಹೊರಡಿಸಲಾದ ಎಫ್‌ಡಿ 54 ಸಿಇಎಕ್ಸ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

III ಶ್ರೀ ಎಂ ಪಿ ಪ್ರಕಾಶ(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಗೂ ಸಂಸದೀಯ ವ್ಯವಹಾರಗಳ ಸಚಿವರುಗಳು) ಅವರು,

1954ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ರ ಪ್ರಕರಣದ ಮೇರೆಗೆ

ಬಳ್ಳಾರಿ ಜಿಲ್ಲೆ ದೋಣಿಮಲ್ಲೈನಲ್ಲಿರುವ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಡಿಟೋರಿಯಂನಲ್ಲಿ ಪ್ರತಿ ಶನಿವಾರ ಮತ್ತು ಭಾನುವರ ಹಾಗೂ ಸಾರ್ವತ್ರಿಕ ರಜಾ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ 01 01 2007ರಿಂದ 31 03 2007ರವರೆಗೆ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 24 01 2007ರಂದು ಹೊರಡಿಸಲಾದ ಹೆಚ್‌ಡಿ 42 ಸಿಎಸ್‌ಎ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಗೂ ಸಂಸದೀಯ ವ್ಯವಹಾರಗಳ ಸಚಿವರು–IV ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ –

2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 33(2)ರ ಪ್ರಕರಣದ ಮೇರೆಗೆ

2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿ ದಿನಾಂಕ 01 02 2007ರಂದು ಹೊರಡಿಸಲಾದ ಗ್ರಾಅಪ 41 ರಾಗ್ರಾಉ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) ಅವರು –

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾದಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ

1 ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕ ತನಿಖಾ ವರದಿ

1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ 17(1)ರ ಪ್ರಕರಣದ ಮೇರೆಗೆ

1 ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ 2005–06ನೇ ಸಾಲಿನ ಲೆಕ್ಕ ಮತ್ತು ಲೆಕ್ಕಪರಿವೀಕ್ಷಕರ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್, (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು–ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್-ಶ್ರೀ ಡಿ ಹೆಚ್ ಶಂಕರಮೂರ್ತಿ(ಉನ್ನತ ಶಿಕ್ಷಣ ಸಚಿವರು) ರವರ ಪರವಾಗಿ

2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ 50(2)ರ ಮೇರೆಗೆ

1 ಬೆಂಗಳೂರು ವಿಶ್ವವಿದ್ಯಾಲಯದ 2004-05ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್-ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) ಪರವಾಗಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1950ರ ಅಧಿನಿಯಮ 33(2) 35ರ ಪ್ರಕರಣದ ಮೇರೆಗೆ

1 ಈಶಾನ್ಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, ಗುಲ್ಬರ್ಗಾದ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ

ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು)ಅವರು

ಗೃಹ ಮಂಡಳಿ ಕಾಯ್ದೆ 1962ನೇ ಕಲಂ 55(3)ರ ಮೇರೆಗೆ

1 ಕರ್ನಾಟಕ ಗೃಹ ಮಂಡಳಿಯ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್- ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ)ಪರವಾಗಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ

1 ಹಾಸನ ಜಿಲ್ಲಾಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

2 ಕೊಡಗು ಜಿಲ್ಲಾಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

3 ಬಾಗಲಕೋಟೆ ಜಿಲ್ಲಾಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

4 ಮಂಡ್ಯ ಜಿಲ್ಲಾಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

5 ಬಿಜಾಪುರ ಜಿಲ್ಲಾಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ

6 ಧಾರವಾಡ ಜಿಲ್ಲಾಪಂಚಾಯತ್‌ನ 2004-05ನೇ ಸಾಲಿನ ಲೆಕ್ಕಗಳ ಮೇಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ

7 ಉತ್ತರ ಕನ್ನಡ ಜಿಲ್ಲಾಪಂಚಾಯತ್‌ನ 2004-05ನೇ ಸಾಲಿನ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುವುದು

ಶ್ರೀ ಎಂ ಪಿ ಪ್ರಕಾಶ್-ಶ್ರೀ ಕಟ್ಟಾಸುಬ್ರಮಣ್ಯ ನಾಯ್ದು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)ಅವರ ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಸೋಪ್ಸ್ ಅಂಡ್ ಡಿಟೆರ್ಜೆಂಟ್ಸ್, ಲಿಮಿಟೆಡ್‌ನ 2005-06ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ನಾಗರಾಜಶೆಟ್ಟಿ(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) ಅವರು

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2005-06ನೇ ಸಾಲಿನ 36ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್-ಶ್ರೀ ಶಿವಾನಂದ ಎಸ್ ನಾಯಕ (ಸಣ್ಣಕೈಗಾರಿಕಾ ಸಚಿವರು)ಅವರ ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2005-06ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ (ಅ) ಕಾವೇರಿ ವಿವಾದದ ಬಗ್ಗೆ ಮಾತುಕತೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯಾಧಿಕರಣದ ಪರವಾಗಿ ಮಾತುಕತೆಗೆ ತಮಿಳುನಾಡಿನ ಮುಖ್ಯಮಂತ್ರಿಗಳು ಒಲವನ್ನು ತೋರಿಸಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಹೇಳಿಕೆ ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಂದಿದೆ ಮತ್ತೆ ಇವತ್ತಿನ ಸಂಜೆ ಪತ್ರಿಕೆಯಲ್ಲಿ ನಾವು ಆ ಒಲವನ್ನು ತೋರಿಸಿಲ್ಲವೆಂದು ಅಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಕರುಣಾನಿಧಿಯವರು ಹೇಳಿದ್ದಾರೆ ಇದು ಯಾವ ರೀತಿ ಎಂದು ಮಾನ್ಯ ಕುಮಾರಸ್ವಾಮಿಯವರು ಈ ಸದನದಲ್ಲಿ ಹೇಳಬೇಕು ಮಾತುಕತೆ ಮೂಲಕ ಎಂದು ಯುಗಾದಿ ಹಬ್ಬದ ದಿನದಂದು ತಮಿಳುನಾಡಿನ ಮುಖ್ಯಮಂತ್ರಿಯವರಿಗೆ ಶುಭಾಷಯವನ್ನು ಕೋರುವಾಗ ಮಾತನಾಡಿದ್ದೇವೆ, ಅದಕ್ಕೆ ಅವರು ಒಲವು ತೋರಿಸಿದ್ದಾರೆಂದು ನಮ್ಮ ಮುಖ್ಯಮಂತ್ರಿಯವರು ಹೊರಗಡೆ ಹೇಳಿದ್ದಾರೆ ಅದಕ್ಕೆ ತದ್ವಿರುದ್ಧವಾಗಿ ತಮಿಳುನಾಡಿನಿಂದ ಮಾತು ಬಂದಿದೆ 'ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಯುವುದಾದರೆ ನಾವು ಸಂಪೂರ್ಣವಾಗಿ ಸಂತೋಷಪಡುತ್ತೇವೆ ಸ್ವಾಗತ ಮಾಡುತ್ತೇವೆ' ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನಾಗಿದೆ

ಎನ್ನುವ ಸ್ಪಷ್ಟವಾದ ನಿರ್ಧಾರವನ್ನು, ನಿಲುವನ್ನು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಹಾಗೆಯೇ, ಲೋಕಸಭೆಯಲ್ಲಿ ನಿನ್ನೆಯ ದಿವಸ ನಮ್ಮ ಲೋಕಸಭಾ ಸದಸ್ಯರು ಎದ್ದು ಮಾತನಾಡುವುದಕ್ಕೆ ಪ್ರಾರಂಭಿಸಿದಾಗ ತಮಿಳುನಾಡಿನ ಇಡೀ ಲೋಕಸಭಾ ಸದಸ್ಯರು ನಮ್ಮ ಲೋಕಸಭಾ ಸದಸ್ಯರ ಮೇಲೆ ದಾಳಿ ಮಾಡಿ ನಮ್ಮ ಸದಸ್ಯರು ಮಾತನಾಡದ ರೀತಿ ತಡೆಯೊಡ್ಡಿದ್ದಾರೆ ಅದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಿಲ್ಲ ಆದರೂ, ಇವತ್ತು ಮಾತುಕತೆಯ ಬಗ್ಗೆ ಏನು ಎಂದು ನಮ್ಮ ಸದನಕ್ಕೆ ತಿಳಿಸಬೇಕು ಅವರು ಕರೆದಲ್ಲಿ ನೀವು ಮಾತುಕತೆಗೆ ಹೋಗುವುದಾದರೆ ನಿಜಕ್ಕೂ ಸಂತೋಷ ತಾವು ದಯವಿಟ್ಟು ಈ ಬಗ್ಗೆ ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮಾನ್ಯ ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ನಿನ್ನೆ ತಮಿಳುನಾಡಿನ ಮುಖ್ಯಮಂತ್ರಿಗಳು ಕೆಲವು ಮಾಧ್ಯಮಗಳ ಮುಖಾಂತರ ಕಾವೇರಿಯ ವಿಷಯದಲ್ಲಿ ಮಾತುಕತೆಗಳಿಗೂ ನಾವು ಸಿದ್ಧರಿದ್ದೇವೆನ್ನುವ ಎನ್ನುವ ಕೆಲವು ವರದಿಗಳಿತ್ತು ಅದರ ಆಧಾರದ ಮೇಲೆಯೇ ನಾನು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ ಅವರು ಆ ವಿಷಯದಲ್ಲಿ ಬೇಟಿ ಮಾಡತಕ್ಕಂಥದ್ದಕ್ಕೆ ನನಗೆ ಸಕರಾತ್ಮಕವಾಗಿ ಸ್ಪಂದಿಸಿದ್ದರು ಆದರೆ, ಇವತ್ತು ಅವರ ಹೇಳಿಕೆ ಬಂದಿರತಕ್ಕಂಥದ್ದನ್ನು ಸಹ ಗಮನಿಸಿದ್ದೇನೆ ಈ ವಿಷಯ ನನ್ನ ಗಮನಕ್ಕೆ ಬಂದಿದೆ ಇದು ಮಾತುಕತೆಗಳ ಮುಖಾಂತರ ಪ್ರಯತ್ನಪಡುವುದರ ಜೊತೆಗೆ ಈಗಾಗಲೇ ನಾವೇನು ತೀರ್ಮಾನ ಮಾಡಿದ್ದೇವೆ, ಕಾನೂನು ಪ್ರಕಾರ ನಾವೇನು ಹೋಗಬೇಕಾಗುತ್ತದೆ, ಅದರ ಬಗ್ಗೆ ನಾನು ಈಗಾಗಲೇ ನಿನ್ನೆ ಹೇಳಿಕೆ ಕೊಡಬೇಕಾದರೆ ನಾವು ಕಾನೂನಿನ ವ್ಯಾಪ್ತಿಯಲ್ಲಿ ಹೋರಾಟ ಮಾಡತಕ್ಕಂಥದ್ದು ಒಂದು ಕಡೆ, ಮಾತುಕತೆ ಮುಖಾಂತರವೂ ಇದನ್ನು ಬಗೆಹರಿಸಿಕೊಳ್ಳತಕ್ಕಂಥದ್ದಕ್ಕೆ ಪ್ರಯತ್ನ ಪಡುತ್ತೇನೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ, ಇದರಲ್ಲಿ ಮಾತುಕತೆ ಮುಖಾಂತರ ಪಕ್ಕದ ರಾಜ್ಯದವರಾದ ಅವರು ಮಾತನಾಡಲಿಕ್ಕೆ ಸಿದ್ಧವಿದ್ದಾಗ, ಆ ವಿಷಯವನ್ನು ಮುಂದಿನ ದಿನಗಳಲ್ಲಿ ಎಲ್ಲ ಸರ್ವ ಪಕ್ಷಗಳ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿ ನಂತರವೇ ನಾನು ಮುಂದೆ ನಿರ್ಧಾರ ಮಾಡುತ್ತೇನೆ ಎನ್ನುವ ಮಾತನ್ನೇನು ಹೇಳಿದ್ದೇನೆ, ಅದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾತುಕತೆ ವಿಫಲವೇ? ಮಾತುಕತೆ ಆಗುವುದಿಲ್ಲವೇ? ನಾನು ತಮ್ಮಲ್ಲಿ ಬಹಳ ಸ್ಪಷ್ಟವಾಗಿ ಕೇಳುತ್ತಿದ್ದೇನೆ ನೀವು ಮಾತುಕತೆ ಬಗ್ಗೆ ಆಶಾವಾದ ವ್ಯಕ್ತಪಡಿಸಿದಿರಿ ಎಲ್ಲೋ ಒಂದು ಕಡೆ ಒಂದು ಹೊಸ ಅಧ್ಯಾಯ ಆರಂಭವಾಗಿದೆಯೆಂದು ನಮಗೆ ಸಂತೋಷವಾಗಿದೆ ಆದರೆ, ಈಗ ಅವರ ಮಾತಿನ ಪ್ರಕಾರ ಈ ಮಾತುಕತೆ ಇನ್ನಿಲ್ಲವೆಂತಲೋ ಅಥವಾ ಮುರಿದು ಬಿತ್ತು ಎನ್ನುವ

ಭಾವನೆ ತಮ್ಮಲ್ಲಿದೆಯೇ? ಅಥವಾ ಅವರು ಏನೇ ಹೇಳಿದರೂ ಅವರನ್ನು ತಾವು ಭೇಟಿ ಮಾಡುತ್ತೀರಾ? ದಯವಿಟ್ಟು ಈ ಬಗ್ಗೆ ಹೇಳಬೇಕು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಯುಗಾದಿ ಹಬ್ಬದ ಶುಭಾಷಯವನ್ನು ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು phone ಮೂಲಕ ಅವರಿಗೆ ಮಾತನಾಡಿದರು ಇದು ರಾಜ್ಯದ ಅಳಿವು ಉಳಿವಿನ ಪ್ರಶ್ನೆಯಾಗಿದೆ ಈ ರೀತಿಯಾಗಿ ಹಗುರವಾಗಿ 'ದೂರವಾಣಿ ಮುಖಾಂತರ ಮಾತನಾಡಿದ್ದೇನೆ', ಎಂದು ಹೇಳುವುದು ಸರಿಯಲ್ಲ ಒಂದು ವೇಳೆ ನಮ್ಮ ಮುಖ್ಯಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿಯಾಗುವುದಿದ್ದರೆ, ಆ ಬಗ್ಗೆ ತಮಗೇನಾದರೂ clue ಸಿಕ್ಕಿದ್ದರೆ, ಅದಕ್ಕೆ ಮುಂಚಿತವಾಗಿ ರಾಜ್ಯದ ಎಲ್ಲ ನಾಯಕರನ್ನು ಸೇರಿಸಿ ಏನು ಮಾತನಾಡಬೇಕು ಎಂದು ಸಲಹೆಗಳನ್ನು ಪಡೆದುಕೊಳ್ಳಬೇಕು ಏಕೆಂದರೆ, ಲೋಕಸಭೆಯಲ್ಲಿ, ಬೇರೆ ಕಡೆಯಲ್ಲಿ ಕೂಡ Speaker ರವರು ಹೇಳಿದರೂ ಕೂಡ ಅಲ್ಲಿ ಸ್ವಲ್ಪ ತೊಂದರೆ ಇದೆ This is an emotion issue ನೀವು ಬಹಳ ಹಗುರವಾಗಿ ಮಾತನಾಡತಕ್ಕಂಥದ್ದು ಸರಿಹೋಗುವುದಿಲ್ಲ You have got the responsibility ಮಾತನಾಡಬೇಕಾದರೆ, ಹೀಗೆಲ್ಲ ನಾನು ಕರುಣಾನಿಧಿಯವರ ಜೊತೆ ಮಾಡನಾಡುವುದಕ್ಕೆ ಹೋಗುತ್ತಿದ್ದೇನೆ ಎನ್ನುವುದು ತಪ್ಪೇನಲ್ಲ ಮಾತಿನ ಮೂಲಕ ಇತ್ಯರ್ಥವಾಗುವುದಿದ್ದರೆ We will be the happiest persons ಆದರೆ, before that you have take into confidence all the people ನಮಗೆ apprise ಮಾಡಿ, ಅದರ ಬಗ್ಗೆ ಮುಂದೆ ಹೆಜ್ಜೆ ಇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯದಲ್ಲಿ ಹಗುರವಾಗಿ ತೆಗೆದುಕೊಂಡಿದ್ದೇನೆಂದು ಯಾರೂ ಸಹ ಭಾವಿಸಬೇಕಾದ ಅವಶ್ಯಕತೆಯಿಲ್ಲ ನಾನು ನಿನ್ನೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಈ ವಿಷಯದಲ್ಲಿ ನಾನು ಸರ್ವ ಪಕ್ಷಗಳ ನಾಯಕರುಗಳ ಜೊತೆ ಚರ್ಚೆ ಮಾಡಿ, ನೀರಾವರಿ ತಜ್ಞರು ಮತ್ತು ಕಾನೂನು ತಜ್ಞರು ಜೊತೆ ಸಹ ಚರ್ಚೆ ಮಾಡಿ, ಈ ಒಂದು ವೇದಿಕೆ ಸಿದ್ಧ ಆದಂಥ ಸಂದರ್ಭದಲ್ಲಿ ಎಲ್ಲರ ವಿಶ್ವಾಸದ ಮುಖಾಂತರವೇ ನಾನು ಹೆಜ್ಜೆಯನ್ನಿಡುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ, ಇದರಲ್ಲಿ ನಾನು ಹಗುರವಾಗಿ ಮಾತನಾಡುವ ಪ್ರಶ್ನೆ ಇಲ್ಲ ಈ ವಿಷಯದಲ್ಲಿ ಯಾವುದೇ ಒಂದು ಮುಂದಿನ ಹೆಜ್ಜೆ ಇಡತಕ್ಕಂಥ ಸಂದರ್ಭದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ರಾಜ್ಯದ ಜನರ ವಿಶ್ವಾಸವನ್ನು ಪಡೆದುಕೊಂಡೇ ರಾಜ್ಯದ ಪ್ರಮುಖ ಹೋರಾಟ ಮಾಡುತ್ತಿರತಕ್ಕಂಥವರೆಲ್ಲರ ಸಲಹೆಯನ್ನು ಪಡೆದೇ ಮುಂದಿನ ಹೆಜ್ಜೆಯನ್ನಿಡುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅವರು ಏನೇ ಹೇಳಿದರೂ ಸಹ ತಾವು ಅವರನ್ನು ಭೇಟಿ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ವಿಷಯದಲ್ಲಿ ರಾಜ್ಯಕ್ಕೆ ಒಳ್ಳೆಯದಾಗತಕ್ಕಂಥ ದೃಷ್ಟಿಯಿಂದ ಸರ್ವ ಪ್ರಯತ್ನಗಳನ್ನು ಮಾಡತಕ್ಕಂಥದ್ದಕ್ಕೆ ನಾನು ಅವರಲ್ಲಿ ಏನು ಕೆಲವು ಹಿರಿಯರಿದ್ದಾರೆ, ಅವರಿಗೆ ಮನವಿ ಮಾಡಿದ್ದೇನೆ, ಈ ವಿಷಯದಲ್ಲಿ ನಾನು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುವುದಕ್ಕೆ ಗಮನ ಹರಿಸಿದ್ದೇನೆಂಬುದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ

ವಿಷಯ ಬರಪರಿಹಾರ ಕಾಯದಲ್ಲಿ ಜೆಸಿಬಿ ಯಂತ್ರಗಳನ್ನು ಉಪಯೋಗಿಸಿರುವುದರ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕ ನಾಯಕನ ಹಳ್ಳಿ) ಅಧ್ಯಕ್ಷರೇ, Scracity ಕೆಲಸ ಮಾಡಬೇಕಾದರೆ machine use ಮಾಡುತ್ತೀರಿ ಎಂದು ಹೇಳಿ ನಮಗೆಲ್ಲ ಬರೆ ಹಾಕಿಬಿಟ್ಟು, ನಮ್ಮಲ್ಲಿ Engineers strike ಮಾಡಿ ನಾವು scracity ಕೆಲಸ ಮಾಡುವುದಿಲ್ಲ, ward side ನಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆನ್ನುತ್ತಿದ್ದಾರೆ ನಮ್ಮ ಕಡೆ ಒರಟು ಭೂಮಿ ಇದೆ ಆಳುಗಳು ಸಿಗುತ್ತಿಲ್ಲ ಈ works ಎಲ್ಲ standstill ಆಗಿಬಿಟ್ಟಿದೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ ಮೇಲ್ಗಡೆ ನಾವೇನಾದರೂ JCB ನಿಂದ ಭೂಮಿಯನ್ನು ಸಡಿಲ ಮಾಡಿಕೊಂಡು ಆಮೇಲೆ ಆಳುಗಳನ್ನು ಕರೆಸುತ್ತೇವೆ ಕೆಲವು ಕಡೆ ಕೃಷಿ ಹೊಂಡ ಅಂಥವೆಲ್ಲ ಹೊಡೆಯಬೇಕಾದರೆ machine use ಮಾಡಲಿಕ್ಕೆ ಕೇಳಿದ್ದೆವು ಆದರೆ, ಇವತ್ತಿನವರೆವಿಗೂ permission ಕೊಡಲಿಲ್ಲ ನಮ್ಮ ತುಮಕೂರು DC ಯವರು notice ಕೊಟ್ಟು, ಇವತ್ತು ನಮ್ಮ ಎಲ್ಲ engineers ಕೆಲಸ ಮಾಡುವುದಿಲ್ಲವೆಂದು ನಮಗೆ ಮನವಿ ಕೊಟ್ಟಿದ್ದಾರೆ ಇದಕ್ಕೆ ತಾವೇನಾದರೂ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು ನಾವು ಇಲ್ಲಿಯೇ ನಿಂತುಕೊಂಡು ಹೇಳಿದ್ದೆವು, ಎಲ್ಲಾ ಕಡೆ ಬಳಸುತ್ತಿದ್ದಾರೆ, 6 ರೂ ಅಕ್ಕಿಯನ್ನು ತೆಗೆದುಕೊಳ್ಳುವವರೇ ದಿಕ್ಕಿಲ್ಲ, 3 ರೂ ಅಕ್ಕಿ PD system ನಲ್ಲಿ ಸಿಕ್ಕುತ್ತಿದೆ, ನಾವೇನಾದರೂ ಮಾಡಲಿಕ್ಕೆ ಅವಕಾಶ ಕೊಡಿ ಎಂದರೆ ಈವರೆಗೂ ನೀವು ಏನು ನಿಲವು ತೆಗೆದುಕೊಳ್ಳದೆ ಕೆಲಸ ಮಾಡಿರುವವರಿಗೆಲ್ಲಾ notice ಕೊಟ್ಟು ನಾವು ಹೇಳಿ ಕೆಲಸ ಮಾಡಿಸುವುದು ತಪ್ಪಿತಸ್ಥರಾಗುವಂಥ ಸ್ಥಿತಿ ನಿರ್ಮಾಣವಾಗಿದೆ ಆ ಬಗ್ಗೆ ತಾವೊಂದು ಮಾಹಿತಿ, ಹೇಳಿಕೆಯನ್ನು ಇಲ್ಲಿ ಕೊಡಬೇಕು

ಶ್ರೀ ವಾಟಾಳ್ ನಾಗರಾಜ್ JCB ಇಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ ವಸ್ತು ಸ್ಥಿತಿ ಇದೆ ಅದನ್ನು ಬಿಟ್ಟು ಸುಮ್ಮನೆ ಕೆಲಸ ಮಾಡಿ ಎಂದು ಹೇಳಿದರೆ ಇಡೀ

ರಾಜ್ಯದಲ್ಲಿ ಎಲ್ಲಿಯೂ ಕೆಲಸವಾಗುವುದಿಲ್ಲ ಆದ್ದರಿಂದ, ಸರ್ಕಾರದ ನಿರ್ಧಾರವೇನು, ಎಂದು ಸ್ಪಷ್ಟನೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) ಈ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ ಅದಕ್ಕೆ ಅವರು ಉತ್ತರ ಕೊಡುತ್ತಾರೆ ಆದರೆ, ತಮಗೆ ಗೊತ್ತಿದ್ದಂತೆ, ಕೇಂದ್ರ ಸರ್ಕಾರ ಕಳುಹಿಸಿಕೊಟ್ಟಿರತಕ್ಕಂಥ ಮಾರ್ಗದರ್ಶನ ಸೂತ್ರಗಳಲ್ಲಿ ಯಂತ್ರಗಳನ್ನು ಉಪಯೋಗಿಸಬಾರದು ಎಂದು ಹೇಳಿ ಅವರು ಅಖಿಲ ಭಾರತ ಮಟ್ಟದಲ್ಲಿ ಯೋಚನೆ ಮಾಡಿ ಕಳುಹಿಸಿದ್ದಾರೆ ಆದರೆ, ನನಗೂ ನಿಮಗೂ, ಎಲ್ಲರಿಗೂ ಗೊತ್ತಿದ್ದಂತೆ ವಾಸ್ತವವಾದ ಸಂಗತಿಯಲ್ಲಿ 69 ರೂಪಾಯಿಗಳ ಕೂಲಿಗೆ ಕೂಡ ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳಲ್ಲಿ ಅನೇಕ ಜನ ಕೆಲಸಕ್ಕೆ ಬರುವುದಿಲ್ಲ ಆಗ ಅಭಿವೃದ್ಧಿ ಪರವಾಗಿರತಕ್ಕಂಥ ಕೆಲಸಕಾರ್ಯಗಳನ್ನು ಮಾಡುತ್ತಾ ಹೋಗುತ್ತಿರುವಾಗ, ಯಂತ್ರಗಳನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲೇಬೇಕಾಗುತ್ತದೆ ಗಟ್ಟಿಯಾದಂಥ ಭೂಮಿ ಇದ್ದರೆ ಎಲ್ಲರೂ ಕೂಲಿಗೆ ಬಂದಿರತಕ್ಕಂಥವರು ಅಷ್ಟು ಪ್ರಮಾಣದಲ್ಲಿ ಮಣ್ಣನ್ನು ತೆಗೆದುಹಾಕುವುದಿಲ್ಲ ಇಂಥ ಸಂದರ್ಭಗಳು ಬಂದಾಗ ಯಂತ್ರಗಳನ್ನು ಉಪಯೋಗಿಸಿರುವ ಉದಾಹರಣೆಗಳಿವೆ ಪಕ್ಕದ ಆಂಧ್ರ ಪ್ರದೇಶ ಮೊದಲಾದ ಕಡೆಗಳಲ್ಲಿ ಯಂತ್ರಗಳನ್ನೂ ಉಪಯೊಗಿಸಿದ್ದಾರೆ, ಅಕ್ಕಿಯನ್ನೂ ಮಾರಿದ್ದಾರೆ, ಆದರ, ಯಾರೂ ಅದನ್ನು ವಿವಾದ ಮಾಡುವುದಿಲ್ಲ ಆದರೆ, ಇಲ್ಲಿ ನಾವು ವಿವಾದ ಮಾಡಿಕೊಂಡು ಹಿಂದೆ ಅನುಭವಿಸಿದ್ದೇವೆ ಸ್ಥಗಿತಗೊಳಿಸಿರತಕ್ಕಂಥದ್ದು ಇದೆ ಆ ದೃಷ್ಟಿಯಿಂದ, ಇದನ್ನು ಬಹಳ ಜಾಣ್ಮೆಯಿಂದ ಕೇಂದ್ರ ಸರ್ಕಾರದ ಮಾರ್ಗದರ್ಶನ ಸೂತ್ರಗಳಿಗೆ ನಾವು ವಿರೋಧವಾಗಿದ್ದೇವೆಂದು ಎಂದೂ ಕೂಡ ತೋರಿಸಿ ಕೊಡದೇ ಮಾನ್ಯ ಮಂತ್ರಿಗಳಿಂದ ತಾವು ಪ್ರಸ್ತಾಪ ಮಾಡಿದಂಥ ವಿಷಯಕ್ಕೆ ಈಗ ಕೂಡಲೇ ತುಮಕೂರಿನ ಜಿಲ್ಲಾಧಿಕಾರಿಗಳಯವರ ಜೊತೆ ನಮ್ಮ ಕಾರ್ಯದರ್ಶಿಯವರು ಮಾತನಾಡಿ ಕೆಲಸ ಪ್ರಾರಂಭ ಮಾಡಿಸುತ್ತಾರೆ ಆ ಸಮಸ್ಯೆ ಎಲ್ಲ ಕಡೆ ಇಲ್ಲ ತುಮಕೂರಿನಲ್ಲಿ ಬಂದಿದೆ ಅದೂ ಕೂಡ ವೈಯಕ್ತಿಕ ಕಾರಣಕ್ಕಾಗಿ ಬಂದಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಆ notice ಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಹೇಳಿ ಸರ್

ಶ್ರೀ ಎಂ ಪಿ ಪ್ರಕಾಶ್ ಆಗಬಹುದು, ಮಾತನಾಡುತ್ತೇನೆ

4 <u>ನಿಲುವಳಿ ಸೂಚನೆ ಮಂಡನೆ ಬಗ್ಗೆ ಪೂರ್ವಭಾವಿ ಚರ್ಚೆ</u>

ವಿಷಯ ಕಾನೂನು ಬಾಹಿರ ಗಣಿಗಾರಿಕೆ ಬಗ್ಗೆ ತನಿಖೆ ಮಾಡಲು ರಚಿಸಿದ್ದ ಯು ಎಲ್ ಭಟ್ ಕಮಿಷನ್‌ನ್ನು ರದ್ದು ಪಡಿಸಿರುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಈ ದಿನ ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ

ಅಧ್ಯಕ್ಷರು ಈಗ ಕಳುಹಿಸಿದ್ದೀರಿ, ಬಜೆಟ್ ಅಧಿವೇಶನದಲ್ಲೇ ತಾವು ಅದರ ಬಗ್ಗೆ ಮಾತನಾಡಬಹುದಲ್ಲವೇ?

ಶ್ರೀ ಎನ್ ಧರ್ಮಸಿಂಗ್ ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡಬೇಕಾಗುತ್ತದೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಯು ಎಲ್ ಭಟ್‌ರವರ commission ಅನ್ನು constitute ಮಾಡಿ ರದ್ದು ಮಾಡತಕ್ಕಂಥ ರೀತಿ ಇದೆ ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ ಈ ವಿಷಯವನ್ನು ಬಜೆಟ್ ಚರ್ಚೆ ಸಂದರ್ಭದಲ್ಲಿ ಹೇಗೆ ಪ್ರಸ್ತಾಪ ಮಾಡಲಿಕ್ಕೆ ಬರುತ್ತದೆ? ಇವತ್ತು 150 ಕೋಟಿ ರೂಪಾಯಿಗಳ ಲಂಚದ ಹಗರಣ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಇದೆ ಇದನ್ನು ನಾವು ಮಾಡಿದ್ದಲ್ಲ ಕಾಂಗ್ರೆಸ್ ಪಕ್ಷದ ಪರವಾಗಿ ಮಾಡಿದಂಥ ಆರೋಪ ಅಲ್ಲ ಅವರ ಮಿತ್ರ ಪಕ್ಷವಾದ BJP ಅಧ್ಯಕ್ಷರಾದಂಥ ಜನಾರ್ದನ ರೆಡ್ಡಿಯವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ, ಅವರು ಇವತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ 1958ರಿಂದ ಇಲ್ಲಿಯವರೆಗೆ ಯಾವ ಮುಖ್ಯಮಂತ್ರಿಗಳ ಮೇಲೆಯೂ ಈ ತರಹ ಆಪಾದನೆ ಬಂದಿರಲಿಲ್ಲ ಈಗ ಬಂದಿದೆ ನಾವು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ ಚರ್ಚೆ ಮಾಡಿ, ಮುಖ್ಯಮಂತ್ರಿಗಳಿಗೆ, "ನೀವು ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ, ಇವತ್ತು ತಮ್ಮ ಮೇಲೆ ಆರೋಪ ಬಂದಿದೆ, ಈ ಆರೋಪಕ್ಕೆ ತಾವು ಯಾವ ರೀತಿಯಾಗಿ ಸ್ಪಂದಿಸುತ್ತೀರಿ, ತಾವು ಇದಕ್ಕೇನು ಹೇಳುತ್ತೀರಿ," ಎಂದು ಹೇಳಿದ್ದೇವೆ ಇವತ್ತು ಜನಾರ್ಧನ ರೆಡ್ಡಿಯವರು ವಿಧಾನ ಪರಿಷತ್ತಿನಲ್ಲಿ ಘಂಟಾಘೋಷವಾಗಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡಿದ್ದಾರೆ, ಅದೊಂದು ಕಡೆ ಇದೆ ನೀವು ರಾಜ್ಯದ ಮುಖ್ಯಮಂತ್ರಿಗಳಾಗಿ ಶಪಥಗ್ರಹಣ ಸ್ವೀಕಾರ ಮಾಡಿದ್ದೀರಿ ತದನಂತರ, 4–5 ದಿವಸಗಳೊಳಗಾಗಿ ಅರಣ್ಯ ಇಲಾಖೆ ಮಂತ್ರಿಗಳಾದ ಚನ್ನಿಗಪ್ಪನವರು ಬಳ್ಳಾರಿಗೆ ಹೋಗಿ, 25,000 ಎಕರೆಯಲ್ಲಿ ಗಣಿಗಾರಿಕೆ ನಡೆಯುತ್ತಿದೆ, illegal ಆಗಿ ನಡೆಯುತ್ತಿದೆ ಮತ್ತು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ಪತ್ರಿಕೆಯ ಮುಖಾಂತರ ಬಂದ ವರದಿಗಳನ್ನಾಧರಿಸಿ, ಮುಖ್ಯಮಂತ್ರಿಗಳಿಗೆ report ಕೊಟ್ಟರು ಮುಖ್ಯಮಂತ್ರಿಗಳು, ನನಗೆ ಅರಣ್ಯ ಇಲಾಖಾ ಮಂತ್ರಿಗಳಿಂದ ಈ ತರಹದ illegal mining ನಡೆಯುತ್ತಿರುವುದಾಗಿ ವರದಿ ಬಂದಿದೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು, ಇವತ್ತು ನಮ್ಮ ರಾಜ್ಯದಲ್ಲಿ ಗಣಿಗಾರಿಕೆಗೆ ವಿಶೇಷವಾಗಿ ಇದಕ್ಕೆ ಇತ್ತೀಚಿನ ದಿನಗಳಲ್ಲಿ ದೊಡ್ಡ ಮಹತ್ವ ಬಂದಿದೆ ಅದಾದಮೇಲೆ, ನಾವು ಇಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ 150 ಕೋಟಿ ರೂಪಾಯಿಗಳ ಅಪಾದನೆ ತಮ್ಮ ಮೇಲಿದೆ, ಚನ್ನಿಗಪ್ಪನವರು ಬಳ್ಳಾರಿಗೆ ಹೋಗಿ ಬಂದು report ಏನು ಕೊಟ್ಟಿದ್ದಾರೆ, ಇದರ ಬಗ್ಗೆ ಸಂಪೂರ್ಣವಾದಂಥ ತನಿಖೆಯಾಗಬೇಕೆಂದು ಹೇಳಿದ್ದೇವೆ ನಾವು ಸದನದಲ್ಲಿ NICE ವಿಚಾರವಾಗಲಿ, ಇವತ್ತು ಗಣಿಗಾರಿಕೆಯ

ಆಪಾದನೆಯ ವಿಷಯವಾಗಲಿ ಸಮಗ್ರವಾದಂಥ ತನಿಖೆಯಾಗಬೇಕಾದರೆ CBI ನಿಂದ ಆಗಬೇಕು, CBI ಬಿಟ್ಟು ಯಾವ ತನಿಖೆಗೂ ಒಪ್ಪುತ್ತಿಲ್ಲವೆಂಬ ಮಾತನ್ನು ಸದನದಲ್ಲಿಯೂ ಹೇಳಿದ್ದೇವೆ, ಪ್ರತಿಭಟನೆ ಮಾಡಿದೆವು, ಸಾಕಷ್ಟು ಒತ್ತಡ ತರತಕ್ಕಂಥ ಪ್ರಯತ್ನ ಮಾಡಿದ್ದೇವೆ ಕೊನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ, retired High Court Judge ಆದ ಯು ಎಲ್ ಭಟ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ಮಾಡುತ್ತೇವೆ, ಆ Commission ನಿಷ್ಪಕ್ಷಪಾತ ತನಿಖೆ ಮಾಡುತ್ತದೆ ಎಂದು ಹೇಳಿದರು ತನಿಖೆ ಮಾಡತಕ್ಕಂಥ terms of referenceನ್ನು ನಾವು ನೋಡಿದಾಗ, ಅದರಲ್ಲಿ 150 ಕೋಟಿ ರೂಪಾಯಿಗಳ ವಿಷಯವನ್ನು mention ಮಾಡಿಲ್ಲವೆನ್ನುವುದು ತಿಳಿಯಿತು ಅದರ ಬಗ್ಗೆ ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ ಈ ತರಹದ ಆಯೋಗದಿಂದ ಏನೂ ಕೂಡ ನಮಗೆ ನ್ಯಾಯ ಸಿಗುತ್ತಿಲ್ಲವೆಂದು ಹೇಳಿ ನಾವು ಆಗ ಏನು decision ತೆಗೆದುಕೊಂಡೆವು ಎಂದರೆ, ಯು ಎಲ್ ಭಟ್ Commission ನಲ್ಲಿ ನಾವು participate ಮಾಡಬಾರದು ಎಂದು That was our decision ತದನಂತರ, 4 ತಿಂಗಳಾದ ಮೇಲೆ ಅದೇ ಯು ಎಲ್ ಭಟ್ Commission ನವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ ಇಂಥ ಮಹತ್ವವಾದ ಜವಾಬ್ದಾರಿಯನ್ನು ನಮ್ಮ ಮೇಲೆ ಹಾಕಿದ್ದೀರಿ, ಇವತ್ತು ನಾನು ಸಾಕಷ್ಟು ಪತ್ರಗಳನ್ನು ಅರಣ್ಯ ಇಲಾಖೆಗೆ ಬರೆದಿದ್ದೇನೆ, ಅದರಿಂದೇನೂ ಜವಾಬು ಇಲ್ಲ, Mines and Geology Department ಗೆ ಪತ್ರ ಬರೆದರೂ ಅವರಿಂದೇನೂ ಉತ್ತರವಿಲ್ಲ, ಇವತ್ತು ಪ್ರಸ್ತುತ ರಾಜ್ಯ ಸರ್ಕಾರದ ಪೋಲಿಸ್ ಇಲಾಖೆಯಿಂದ ಕೂಡ ನನಗೆ ಸಹಾಯ ಸಿಕ್ಕುತ್ತಿಲ್ಲ, ಇವತ್ತು ಮುಖ್ಯಮಂತ್ರಿಗಳ ಮೇಲೆ, ಮಂತ್ರಿಗಳ ಮೇಲಿರುವ ಆಪಾದನೆಯನ್ನು ಸಾಬೀತು ಮಾಡಬೇಕಾದರೆ CBI ಸಹಾಯ ತಮಗೆ ಬೇಕೆಂದು ಹೇಳಿದರು ರಾಜ್ಯ ಸರ್ಕಾರಕ್ಕೆ ಪತ್ರ ಕೂಡ ಬರೆದಿದ್ದಾರೆ ಇವರಿಗೆ ಸ್ವಲ್ಪ ಚುರುಕು ಮುಟ್ಟಿತು, ಏಕೋ, Bhat Commission ಅನ್ನು ನಾವು ಯಾವ ಉದ್ದೇಶದಿಂದ constitute ಮಾಡಿದ್ದೇವೆ, ಅವರು ಇದರ ಬಗ್ಗೆ ನಮಗೆ ತೊಂದರೆ ಕೊಡಬಹುದು ಎಂದು ಇತ್ತೋ, ಏನೋ ಗೊತ್ತಿಲ್ಲ, Bhat Commission ಅನ್ನು ರಚನೆ ಮಾಡಿ 4–5 ತಿಂಗಳಾಯಿತು ಈಗ ತಾವು ಸಾಕಷ್ಟು ಸಮಿತಿಗಳನ್ನು ಮಾಡಿದ್ದೀರಿ, ರಾಮಸ್ವಾಮಿ Committee ಇದೆ you have given the extension, ಎಷ್ಟೋ ಕಡೆ Committee ಗಳಿಗೆ extension ಕೊಟ್ಟಿದ್ದೀರಿ ಭಟ್ ನಮಗೇನೂ ಕೇಳಿಲ್ಲ ಭಟ್ ಕೇಳಿದ್ದು, ಸ್ಥೂಲವಾದ ತನಿಖೆಯಾಗಬೇಕಾದರೆ time extension ಕೊಡಿ ಎಂದು, ರಾಜ್ಯ ಸರ್ಕಾರಕ್ಕೆ ಸಹಾಯ ಬೇಕೆಂದು ಹೇಳಿದರು ನಿಜವಾಗಿ ಕೂಡ ಇವತ್ತು ಆರೋಪವನ್ನೇನು ಶಾಸನ ಸಭೆಯಲ್ಲಿ

ಮಾಡಿದ್ದಾರೆ, ಹೊರಗಡ ಏನು ಇವತ್ತು ಸಾರ್ವಜನಿಕರ ಮನಸ್ಸಿನಲ್ಲಿದೆ, ಬಳ್ಳಾರಿ ಜಿಲ್ಲೆಯ ಜನರ ಮನಸ್ಸಿನಲ್ಲೇನಿದೆ ಮತ್ತು ವಿಶೇಷವಾಗಿ ಜನಾರ್ದನ ರೆಡ್ಡಿಯವರ ಮೇಲೆ, ಬಳ್ಳಾರಿಗೆ ವರಲಕ್ಷ್ಮಿ ಪೂಜೆಗೆಂದೆ ಸುಷ್ಮಾ ಸ್ವರಾಜ್‌ರವರು ಬಂದಾಗ ನೀವೇಕೆ ಆರೋಪವನ್ನು withdraw ಮಾಡಲಿಲ್ಲವೆಂದು ಅವರು ಕೇಳಿದರು ಆದರೂ ಆಗಲಿಲ್ಲ ಇವತ್ತು ರಾಷ್ಟ್ರಮಟ್ಟದಲ್ಲಿ BJP ನಾಯಕರು ಕೂಡ ಇದನ್ನು withdraw ಮಾಡಿ ಎಂದರೂ ಮಾಡಲಿಲ್ಲ ಅವರ ಮೇಲೆ ಸಾಕಷ್ಟು ಒತ್ತಡ ತಂದರೂ ಕೂಡ ನಾನು ಹಿಂಜರಿಯುವುದಿಲ್ಲ, ನಾನೇನು ಇವತ್ತಿನ ದಿವಸ ಮುಖ್ಯಮಂತ್ರಿಗಳ ಮೇಲೆ ಮಾಡಿದ್ದೇನೆ, ಆ ಬಗ್ಗೆ CBI ತನಿಖೆಯಾಗಬೇಕೆಂದು ಹೇಳಿದ್ದಾರೆ ಇವತ್ತು ನಾವು ಕೇಳತಕ್ಕಂಥದ್ದು ಇಷ್ಟೇ, ಮಾನ್ಯ ಮುಖ್ಯಮಂತ್ರಿಗಳು ಯಾವ ಕಡೆ ಗಮನ ಕೊಡುತ್ತಾರೋ, ಯಾವ ರೀತಿಯಾಗಿ ಆಡಳಿತವನ್ನು ಮಾಡುತ್ತಾರೋ ನಮಗೆ ಗೊತ್ತಿಲ್ಲ ಇವತ್ತು ಏನಾಗಿದೆ, ತಮ್ಮ ಮೇಲೆ ಇಂಥ ಅಪಾದನೆಗಳು ಬಂದರೂ ಕೂಡ ತಾವು ಸುಮ್ಮನೆ ಕುಳಿತುಕೊಂಡಿದ್ದೀರಿ ಇದು ರಾಷ್ಟ್ರಮಟ್ಟದಲ್ಲಿ ಮೊದಲನೇ ಉದಾಹರಣೆ ರಾಜ್ಯದಲ್ಲಿ ಒಂದು ಆಯೋಗವನ್ನು ರಚನೆ ಮಾಡಿ ಅದನ್ನು ರದ್ದುಪಡಿಸತಕ್ಕಂಥದ್ದು ಕೂಡ ಸಂಪೂರ್ಣವಾಗಿ ನ್ಯಾಯಾಂಗಕ್ಕೆ ಅಪಮಾನ ಮಾಡಿದಂತಾಗಿದೆ It is an insult to the judiciary ಎಲ್ಲಾ ಕಡೆಗೂ ಸರ್ಕಾರ ಏಕೆ ಇಂಥ ಕೆಲಸ ಮಾಡುತ್ತಿದೆ ಎನ್ನತಕ್ಕಂಥ ಮಾತು ಕೇಳಿಬರುತ್ತಿದೆ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ ಚರ್ಚೆಯಲ್ಲಿ participate ಮಾಡುತ್ತೇವೆ ಚರ್ಚೆಯ ಸಂದರ್ಭದಲ್ಲಿ ಯಾವ್ಯಾವ ದಾಖಲೆಗಳನ್ನು ಮಂತ್ರಿಗಳಿಂದ ಕೇಳಿದ್ದಾರೆ, ಸಂಪೂರ್ಣವಾಗಿ ತನಿಖೆಯಾಗತಕ್ಕಂಥ ರೀತಿಯಲ್ಲಿ ಏನೇನು ಪುರಾವೆ ಸಲ್ಲಿಸತಕ್ಕಂಥ ರೀತಿಯಲ್ಲಿ ಭಟ್‌ರವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ, ಅವುಗಳನ್ನೆಲ್ಲಾ ನೀವು ಸದನದಲ್ಲಿ ಇಡಬೇಕಾಗುತ್ತದೆ ನಾವು ನೋಡುತ್ತೇವೆ That is the property of the House You have taken the House into confidence and constituted the commission ಪುನ ನೀವು ಅದನ್ನು ಏಕೆ ರದ್ದುಪಡಿಸಿದ್ದೀರಿ ಎನ್ನುವುದನ್ನು ಕೂಡ ಸದನಕ್ಕೆ ನೀವು ತಿಳಿಸಬೇಕಾಗುತ್ತದೆ ಇದು ಬಹಳ ಮಹತ್ವವಾದಂಥ ವಿಷಯ ಭಟ್ ಕಮಿಷನ್ ತೆಗೆದ ಮೇಲೆ ಎಲ್ಲಾ ಕಡೆಗೆ Judiciaryಗೆ ಬಹಳಷ್ಟು ಆಘಾತವಾಗಿದೆ ಪ್ರಪ್ರಥಮವಾಗಿ ನೀವು ಅದನ್ನು ಲೋಕಾಯುಕ್ತಕ್ಕೆ ವಹಿಸಿಕೊಟ್ಟಿದ್ದೀರಿ ಲೋಕಾಯುಕ್ತಕ್ಕೆ ಏನು judicial powers ಇದೆ? ಅವರಿಗೆ ಏನು ಮಾಡುವುದಕ್ಕೆ ಅಧಿಕಾರ ಇದೆ? ರಾಜ್ಯ ಸರ್ಕಾರ, ನೀವು ಅವರಿಗೆ ಏನು ಹೇಳುತ್ತೀರಿ ಅಷ್ಟೇ limited powers ಇದರ ಮೇಲೆ ಅವರು enquire ಮಾಡಿ ಸರ್ಕಾರಕ್ಕೆ ವರದಿ ಕೊಡುತ್ತಾರೆ ಯಾರ ಮೇಲೆ ಅಪಾದನೆ ಇದೆ, ಅಪಾದನೆಯಿರತಕ್ಕಂಥ ಮುಖ್ಯಮಂತ್ರಿಗಳು ಏಕಾಏಕಿಯಾಗಿ ಭಟ್ ಕಮಿಷನ್ ಅನ್ನು

abolish ಮಾಡಿ ಲೋಕಾಯುಕ್ತಕ್ಕೆ ವಹಿಸಿಕೊಡುವುದು ಸರಿಯಾದ ಕ್ರಮವಲ್ಲ ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ ಸರ್ಕಾರದ ಮೇಲೆ ಇತ್ತೀಚಿನ ದಿವಸಗಳಲ್ಲಿ ಭರವಸೆ ಹೋಗಿ ಬಿಟ್ಟಿದೆ ಸರ್ಕಾರ ಹೇಳುವುದು ಒಂದು ಮಾಡುವುದು ಒಂದು NICE ವಿಚಾರಕ್ಕೆ ಸಂಬಂಧಪಟ್ಟಹಾಗೆ Supreme Court ನವರು ಸರ್ಕಾರಕ್ಕೆ ಸಾಕಷ್ಟು ಛೀಮಾರಿ ಹಾಕಿ ದಂಡ ವಿಧಿಸಿದೆ High Court ಕೂಡ ಸಾಕಷ್ಟು ಪ್ರಕರಣಗಳಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ ಹೀಗಾಗಿ ಇವತ್ತು ಏನು ಘಟನೆ ಇದೆ, ಏನು ಈ ಪರಿಸ್ಥಿತಿಯಲ್ಲಿ ಇದ್ದೇವೆ, ಅದಕ್ಕೆ ತಮ್ಮ ಮುಖಾಂತರ ನಾವು ಮನವಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಚರ್ಚೆಯಾಗಬೇಕು ಚರ್ಚೆಗೆ ಅವಕಾಶ ಕೊಡಬೇಕು ಈ ಚರ್ಚೆಯಲ್ಲಿ ಬಹಳಷ್ಟು ಸದಸ್ಯರು ಕೂಡ ಪ್ರಸ್ತಾಪ ಮಾಡುತ್ತಾರೆ ರಾಜ್ಯ ಸರ್ಕಾರ ಕೂಡ ಅಷ್ಟೇ ಗಂಭೀರತೆಯಿಂದ ಇವತ್ತಿನ ಭಟ್ ಕಮಿಷನ್ ರಚನೆ ಏಕೆ ಮಾಡಿದಿರಿ ಎಂಬ ಬಗ್ಗೆ ಹೇಳಬೇಕು ಆ ದಿವಸ ನಾವು ರೇಸ್ ಮಾಡಿದಂಥ ಸಂದರ್ಭದಲ್ಲಿ we have constituted the Commission, ಸಿಬಿಐ ಬೇಡ, ತಮಗೆ high court judge ಮೇಲೆ ವಿಶ್ವಾಸವಿಲ್ಲವೆ, ಎಂದು ಕೇಳಿದ್ದೀರಿ ಆಗಲೂ ಕೂಡ ನಾವು silent spectator ಆಗಿ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾವು ಗಮನಿಸಿದ್ದೇವೆ ಮತ್ತು ಯಾವ ರೀತಿಯಾಗಿ ಭಟ್ ರವರು ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡಿದ್ದಾರೆಂಬುದನ್ನು ಕೂಡ ಗಮನಿಸಿದ್ದೇವೆ ನಾನು ಕೂಡ press conference ನಲ್ಲಿ ಇವತ್ತು ಸರ್ಕಾರದ ಪರವಾಗಿ ಭಟ್ ರವರಿಗೆ ಪೂರ್ಣ ಪ್ರಮಾಣದ ಸಹಕಾರ ಇಲ್ಲ, ಸಹಾಯ ಇಲ್ಲ, ಅರಣ್ಯ ಇಲಾಖೆಯವರು ಕೂಡ ಅವರಿಗೆ ವರದಿ ಸಲ್ಲಿಸುತ್ತಿಲ್ಲ, Mines and Geology Department ನವರು ಕೂಡ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡತ್ತಿಲ್ಲವೆನ್ನತಕ್ಕಂಥ ಮಾತನ್ನು ನಾವು ಹೊರಗೆ ಹೇಳಿದ್ದೇವೆ ಇವತ್ತು ಕೂಡ ಈ ಸದನದಲ್ಲಿ ನಾವು ಹೇಳುತ್ತಿದ್ದೇವೆ ಅದಕ್ಕೆ ತಮಗೆ ಕೇಳಿಕೊಳ್ಳುವುದೇನೆಂದರೆ, ಇವತ್ತು ಸರ್ಕಾರದ ಮೇಲೆ ನಾವೇನು ನಿಲುವಳಿ ಸೂಚನೆ ತಂದಿದ್ದೇವೆ, ಅದಕ್ಕೆ ನಮಗೆ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ You are a signatory to the motion and the Leader of the Opposition has mentioned that it has to be admitted ಅದ್ದರಿಂದ ತಾವು ಮನವೊಲಿಸಲಿಕ್ಕೆ ತಾವು ಮಾತನಾಡುತ್ತೀರಿ ಎಂದರೆ, ಅವರೊಬ್ಬರ ಜೊತೆಗೆ ಎಲ್ಲರೂ ಕೇಳುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ(ಹಳಿಯಾಳ) ನಾನು ಅಲ್ಲಿ ಕುಳಿತು ಕೆಲಸ ಮಾಡಿದ್ದೇನೆ ತಾವು ಕೂಡ ಕೆಲಸ ಮಾಡಿದ್ದೀರಿ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಬೇರೆಯವರು ಮಾತನಾಡಬಾರದು ಎಂದು ಇದೆಯೆ?

ಶ್ರೀ ಎಂ ಪಿ ಪ್ರಕಾಶ್ ಹಾಗೇನಿಲ್ಲ ತಾವು ಮಾತನಾಡಿ

ಶ್ರೀ ಆರ್ ವಿ ದೇಶಪಾಂಡೆ ನಾನು ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ I will not take much time ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ ಮುಖ್ಯವಾಗಿ ಈ ಸದನದಲ್ಲಿ ಈ ವಿಷಯದಲ್ಲಿ ಚರ್ಚೆಯಾದಾಗ ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೆವು ಒಂದು ಕಮಿಷನ್ ಆದರೆ ಅದು fact finding authority ಅಗುತ್ತದೆ ಹೀಗಾಗಿ ತಾವು ಸಿಬಿಐ enquiry ಮಾಡಿ ಅದಕ್ಕೆ investigating powers ಇರುತ್ತದೆ ಪಾರದರ್ಶಕವಾಗಿ one thing ನಿಮ್ಮ ಮುಂದೆ ಬರಲಿಕ್ಕೆ ಸಾಧ್ಯ ಆ ಸಮಯದಲ್ಲಿ ಸರ್ಕಾರ ಯಾವುದೇ Commission of Enquiry appoint ಮಾಡುವಾಗ, ವಿರೋಧ ಪಕ್ಷದ ನಾಯಕರ ಜೊತೆ ಚರ್ಚೆ ಮಾಡುತ್ತಾರೆ ಚರ್ಚೆ ಮಾಡಿದ ನಂತರ ಸರ್ಕಾರ Commission appoint ಮಾಡಿ ನಮಗೂ ನೋಟಿಸ್ ಬಂದಾಗ, ನಾವು ಬಹಳ ವಿನಯದಿಂದ ಕಮಿಷನ್‌ಗೆ ಹೇಳಿದೆವು, ನಿಮ್ಮ ಬಗ್ಗೆ ನಮಗೆ ಗೌರವ ಇದೆ, but we have taken a political stand as a Congress party that, though we have highest respect for the Commission, ಕಮಿಷನ್ ಮುಖಾಂತರ investigation ಮಾಡುವುದಕ್ಕೆ powers ಇಲ್ಲ ತಾವು ಯಾವುದೇ ವರದಿ ಕೊಟ್ಟರೂ ಸಹ it is the choice of the Government ಸರ್ಕಾರದ ಮುಂದೆ ವರದಿ ಬಂದಾಗ ಅದನ್ನು ಅಕ್ಸೆಪ್ಟ್ ಮಾಡಬಹುದು reject ಮಾಡಬಹುದು ಹೀಗಾಗಿ we respectfully did not agree for it ಸರ್ಕಾರ ಒಂದು ಒಳ್ಳೆಯ ಉದ್ದೇಶದಿಂದ ಮಾಡಿರಬಹುದು ನಿಜವಾದ ಸತ್ಯ ಹೊರಗೆ ಬರಬೇಕು ಏನೇನು ಆಗಿವೆ, ಪರ್ಮಿಟ್ ಕೊಡುವ ವಿಚಾರದಲ್ಲಿ ಅಥವಾ ಮೈಸೂರು ಮಿನರಲ್ಸ್ ವಿಚಾರದಲ್ಲಿ ಅಥವಾ ಮೈನಿಂಗ್ ಲೀಸ್ ಕೊಡುವ ವಿಚಾರದಲ್ಲಿ, ತಾವು ಇಷ್ಟು ತರಾತುರಿಯಿಂದ ಏಕೆ ಕಮಿಷನ್ ಅನ್ನು ವೈಂಡ್ ಅಪ್ ಮಾಡಿದಿರಿ ನಮಗೆ ಆಶ್ಚರ್ಯವಾಗುತ್ತದೆ 25 ವರ್ಷಗಳಿಂದ ನಾವು ಈ ಸದನದಲ್ಲಿ ಕೆಲಸ ಮಾಡುತ್ತೀದ್ದೇವೆ 6–7 ತಿಂಗಳೊಳಗಾಗಿ ಇಷ್ಟು ಬೇಗನೆ ಯಾವ ಒಂದು ಕಮಿಷನ್ ಅನ್ನು ವೈಂಡ್ ಅಪ್ ಆಗಿರುವಂಥ ನಿದರ್ಶನ ನಮ್ಮ ಮುಂದೆಯಿಲ್ಲ ನೀವೇ ಅಪಾಯಿಂಟ್ ಮಾಡಿದ ಕಮಿಷನ್, ನಾವು ವಾದ ಮಾಡಿದಾಗ ತಾವೇ ಹೇಳಿದಿರಿ, ಇಲ್ಲ ಇಲ್ಲ ಈ ಕಮಿಷನ್ ಮೂಖಾಂತರ ಸತ್ಯ ಹೊರಗೆ ಬರುವುದಕ್ಕೆ ಸಾಧ್ಯ ಆದರೆ ದುರ್ದೈವದಿಂದ ಯಾವ ಸರ್ಕಾರ ಅಪಾಯಿಂಟ್ ಮಾಡಿತ್ತೋ, ಅದೇ ಸರ್ಕಾರ ಇದನ್ನು ವೈಂಡ್ ಅಪ್ ಮಾಡಿತು ಏಕೆ? ಏನು ಕಾರಣ? ಮಾನ್ಯ ನಾಯಕರು ಹೇಳಿದ ಹಾಗೆ ಮೈಸೂರು ಮಿನಿರಲ್ಸ್ ಆಗಲಿ, ಫಾರೆಸ್ಟ್ ಇಲಾಖೆ ಯಾಗಲಿ, ecology environment ಇಲಾಖೆಯಾಗಲಿ, ಅವರ ಕಡೆಯಿಂದ ಇವರಿಗೆ ಸಹಕಾರ

ಸಿಕ್ಕಿಲ್ಲವೆಂದು ತಿಳಿದು ಬಂದಿರುತ್ತದೆ ಹೀಗಾಗಿ ಸರ್ಕಾರ ಮತ್ತು ಭಟ್ ಕಮಿಷನ್‌ನಲ್ಲಿ ಏನೇನು ಪತ್ರ ವ್ಯವಹಾರ ಆಯಿತು? ಅದನ್ನು ಬಹಿರಂಗವಾಗಿ ತಾವು ಸದನದ ಮುಂದೆ ಇಡಬೇಕು ನಿಜವಾದ ಸತ್ಯ ಹೊರಗೆ ಬರಬೇಕಾದರೆ ಅವಶ್ಯಕತೆ ಇದೆ ಏಕೆಂದರೆ, ಮಾನ್ಯ ಜಸ್ಟೀಸ್ ಭಟ್‌ರವರು ಒಂದು ಕಡೆ ಹೇಳುತ್ತಾರೆ In his resignation letter Justice Bhat has charged that the Government is not responding to the Commission's request for extension of time to complete the enquiry and the media reports suggested that the Government was inclined to wind-up the commission ಅವರು ತಮಗೆ ಕೋಆಪರೇಷನ್ ಕೊಟ್ಟಿಲ್ಲ ಸರ್ಕಾರದಿಂದ ಸಹಕಾರ ಸಿಕ್ಕಿಲ್ಲ ನಾನು ಡಿಸೆಂಬರ್‌ನಲ್ಲಿ ಎಕ್ಸ್‌ಟೆನ್‌ಷನ್ ಕೇಳಿದ್ದೇ, ಜನವರಿ 22ಕ್ಕೆ ಅದು ಎಕ್ಸ್‌ಪೈರಿ ಆಗುವುದಿತ್ತು, ಸರ್ಕಾರದಿಂದ ನಮಗೆ ಸಹಕಾರ ಸಿಕ್ಕಿಲ್ಲವೆಂದು ಹೇಳುತ್ತಾರೆ ಹೀಗಾಗಿ ನಮಗೆ ಗೊತ್ತಾಗಬೇಕಾಗಿದೆ, what was the correspondence between the Commission and the Government? ಯಾವ ಡಿಪಾರ್ಟ್‌ಮೆಂಟ್‌ನವರು ಇವರಿಗೆ ಏನೇನು ಸಹಕಾರ ಕೊಟ್ಟಿದ್ದಾರೆ? ಇವತ್ತು ಲೋಕಾಯುಕ್ತರವರಿಗೆ ಜವಾಬ್ದಾರಿಯನ್ನು ಕೊಡುವಾಗ ಸರ್ಕಾರದ ನೋಟಿಫಿಕೇಷನ್ ನಲ್ಲಿ ಹೇಳುತ್ತಾರೆ ಅಪೂಜಿಷನ್‌ನವರು ಕೋಅಪರೇಟಿವ್ ಮಾಡಿಲ್ಲ, ಅಪೋಜಿಷನ್ ಲೀಡರ್ಸ್ ಅಲ್ಲಿ ಹೋಗಿಲ್ಲ Our stand is very clear from day one ಕಮಿಷನ್ ಅಪಾಯಿಂಟ್ ಮಾಡುವುದಕ್ಕಿಂತ ಮುಂಚೆ ನಾವು clarify ಮಾಡಿದ್ದೇವೆ ಕಮಿಷನ್‌ನಿಂದ ಸತ್ಯ ಹೊರಗೆ ಬರಲಿಕ್ಕೆ ಸಾಧ್ಯವಿಲ್ಲ ಹೀಗಾಗಿ ನಮಗೆ ಗೊತ್ತಾಗಬೇಕಾಗಿದೆ, whether the Government is worried that the Bhat commission may trap you? ಆ ತರಹದ ಭಯ ನಿಮಗೆ ಬಂತೆ? ಯಾವ ಕಾರಣಕ್ಕಾಗಿ ನೀವು ಅದನ್ನು ವೈಂಡ್ ಅಪ್ ಮಾಡಿದಿರಿ? ಇವತ್ತು ನೀವು ಲೋಕಾಯುಕ್ತಕ್ಕೆ ವಹಿಸಿದಿರಿ ವಿವರವಾಗಿ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ನಾನು ಮಾತನಾಡುತ್ತೇನೆ ಅದರೆ ಈಗ ಒಂದರೆಡು ಅಂಶಗಳನ್ನು ಹೇಳಿ ಮುಗಿಸುತ್ತೇನೆ ಲೋಕಾಯುಕ್ತರವರಿಗೆ ಅಲೊ ಮಾಡಿದಿರಿ ಲೋಕಾಯುಕ್ತ ಸಂಸ್ಥೆಯ ಬಗ್ಗೆ ನಿಮಗೆ ಹಾಗೂ ನಮಗೂ ಗೌರವ ಇದೆ ಆದರೆ, ಲೋಕಾಯುಕ್ತರಿಗೆ ಮಿನಿಸ್ಟರ್ ಮೇಲೆ ಎನ್‌ಕ್ವಯರಿ ಮಾಡುವುದಕ್ಕೆ ಪರ್ಮಿಷನ್ ಇದೆಯೇ? Whether the Chief Minister or the Minister comes under the purview of Lokayuktha? ಬರುವುದಿಲ್ಲ, ಲೋಕಾಯುಕ್ತಗೆ ಒಬ್ಬ ಎಂಎಲ್‌ಎ ಮೇಲೆ jurisdiction ಎಂದರೆ every year assets and liabilities statement ಕೊಡಬೇಕು ಕೊಟ್ಟಿಲ್ಲವೆಂದರೆ, he can at the maximum, publish your

name in the papers ಸರ್ಕಾರದ ಅಧಿಕಾರಿಯ ಮೇಲೆ ಅವರಿಗೆ ಅಧಿಕಾರ ಇದೆ ಅದರೆ ಲೊಕಾಯುಕ್ತರವರಿಗೆ ಯಾವ ಮಂತ್ರಿಯ ಮೇಲೆ ಯಾವ ಶಾಸಕರ ಮೇಲೆ, ಯಾವ ಮುಖ್ಯಮಂತ್ರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಲ್ಲಿ ಪವರ್ ಇದೆ? ಜೊತೆಗೆ ಲೋಕಾಯುಕ್ತ ಸಂಸ್ಥೆ it is not a fact finding authority ಅದರ ರಿಪೋರ್ಟ್ ಬೈಂಡಿಂಗ್ ಇಲ್ಲ ಸರ್ಕಾರ ಇವತ್ತು ಉದ್ದೇಶಪೂರ್ವಕವಾಗಿ ಏನೂ ಮುಚ್ಚಲಿಕ್ಕೆ ಹೋಗಿದೆ, ತಮ್ಮ ಸ್ಕಿನ್ ಸೇವ್ ಮಾಡಲಿಕ್ಕೆ ಹೋಗಿದೆ, ತಾವು ಯು ಎಲ್ ಭಟ್ ಕಮಿಷನ್‌ನಲ್ಲಿ ಟ್ರ್ಯಾಪ್ ಆಗುತ್ತೇವೆ, ಸತ್ಯ ಹೊರಗೆ ಹೋಗುವ ಚಾನ್ಸ್ ಇದೆಯೆಂದು ಭಯಪಟ್ಟು ಆ ಕಮಿಷನ್‌ಅನ್ನು ವೈಂಡ್ ಅಪ್ ಮಾಡಿದ್ದಾರೆ ರಾಜ್ಯದ ಇತಿಹಾಸದಲ್ಲಿ ಇಷ್ಟು ಬೇಗನೆ 6-7 ತಿಂಗಳಲ್ಲಿ ಯಾವ ಕಮಿಷನ್ ವೈಂಡ್ ಅಪ್ ಆಗಿಲ್ಲ ಹೀಗಾಗಿ ನಾನು ನೇರವಾಗಿ ಹೇಳುತ್ತಿದ್ದೇನೆ ಸರ್ಕಾರ ಉದ್ದೇಶಪೂರ್ವಕವಾಗಿ ಯು ಎಲ್ ಭಟ್ ಕಮಿಷನ್ ಅನ್ನು ವೈಂಡ್ ಅಪ್ ಮಾಡಿದ್ದಾರೆ ಲೋಕಾಯುಕ್ತರವರಿಗೆ ಜವಾಬ್ದಾರಿ ಕೊಟ್ಟಿದ್ದಾರೆ ಆ ಜವಾಬ್ದಾರಿಯಿಂದ ಯಾವುದೂ ಸಾಧನೆ ಮಾಡಿಲಿಕ್ಕೆ ಸಾಧ್ಯವಿಲ್ಲ ಏಕೆಂದರೆ, ಮುಖ್ಯಮಂತ್ರಿಗಳ ಮೇಲಾಗಲಿ ಅಥವಾ ನನ್ನ ಮೇಲಾಗಲಿ ಲೋಕಾಯುಕ್ತರವರು action ತೆಗೆದುಕೊಳ್ಳಬೇಕಾದರೆ he has no jurisdiction Where is the jurisidiction? ಲೋಕಾಯುಕ್ತ ಕಾಯಿದೆಗೆ ಏನಾದರೂ ತಿದ್ದುಪಡಿ ಮಾಡುತ್ತೀರಾ? Again it is a long drawn process ಆ ತನಿಖೆ ಆಗಬಾರದೆಂದು ಮತ್ತು ಅದರಲ್ಲಿ ಯಾರು ಸಿಕ್ಕಿ ಬೀಳಬಾರದೆಂಬ ಉದ್ದೇಶದಿಂದ ಈ ಕೆಲಸ ಇವತ್ತಿನ ದಿವಸ ಆಗಿದೆ ಮಾನ್ಯ ರಾಮಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಗಿದೆ ಮೂರು ತಿಂಗಳವರೆಗೆ ಸದರಿ ಸಮಿತಿಯ ಅವಧಿಯನ್ನು ವಿಸ್ತರಣೆ ಮಾಡಿದ್ದಾರೆಂದು ನೆನ್ನೆ ದಿವಸ ನನಗೆ ಪತ್ರ ಬಂದಿದೆ ಇನ್ನೂ ಒಂದು ವರ್ಷ ಅವಧಿಯನ್ನು ಕೊಡಲಿ no problem ಮತ್ತೆ ಒಳ್ಳೆಯ ಕೆಲಸ ಮಾಡಲಿ ವೈದ್ಯನಾಥನ್ ಮತ್ತು ಸದಾಶಿವ ಆಯೋಗಕ್ಕೆ extension ಕೊಟ್ಟಿದ್ದೀರಿ ಆದರೆ, ಈ ಆಯೋಗಕ್ಕೆ ಏಕೆ extension ಕೊಡಲಿಲ್ಲ when he has asked for time? ಭಟ್ ಆಯೋಗ ನಮಗೆ extension ಕೊಡಿ ಎಂದು ಕೇಳಿದಾಗ ತಾವು ಅವರಿಗೆ ಏಕೆ extension ಕೊಡಲಿಲ್ಲ? ಏಕೆಂದರೆ, ತಮ್ಮ ಉದ್ದೇಶ ಸರಿಯಾಗಿರಲಿಲ್ಲ ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ See, you gave extension when every commission asked, ಮಾನ್ಯ ಮುಖ್ಯ ಮಂತ್ರಿಗಳೆ, ಪ್ರತಿಯೊಂದು ಆಯೋಗ ಕೂಡ extension ಕೇಳಿದಾಗ ತಾವು ಅವೆಲ್ಲಕ್ಕೂ ಕೂಡ extension ಕೊಟ್ಟಿದ್ದೀರಿ ಆದ್ದರಿಂದ, ಈ ಕಮಿಷನ್‌ಗೂ ಕೂಡ ಕೊಡಬೇಕಾಗಿತ್ತು

ಶ್ರೀ ಹೆಚ್ ಡಿ ಕುಮಾರ ಸ್ವಾಮಿ(ಮಾನ್ಯ ಮುಖ್ಯ ಮಂತ್ರಿಗಳು).- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಸೆಕೆಂಡ್‌ನಲ್ಲಿ ಮಾತನಾಡಿ ಮುಗಿಸುತ್ತೇನೆಂದು ಹೇಳಿ ಈಗ ಎಳೆದುಕೊಂಡು ಹೋಗುತ್ತಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ ನಾನು ಇನ್ನೂ ಮಾತನಾಡಬೇಕಾಗಿದೆ ನಾನು ಅವರ ವಿರುದ್ಧ ಹೇಳುತ್ತಿಲ್ಲ

ಶ್ರೀ ಹೆಚ್ ಡಿ ಕುಮಾರ ಸ್ವಾಮಿ – ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದೆ ಆದರೆ, ಅವರು ಮಾಡಿರತಕ್ಕಂಥ ಕೆಲಸಕ್ಕೂ ಮತ್ತು ಯು ಎಲ್ ಭಟ್ ಆಯೋಗದವರು ಮಾಡಿರುವ ಕೆಲಸಕ್ಕೂ ಹೊಂದಾಣಿಕೆಯಾಗುವುದಿಲ್ಲ ತಾವು ಅವೆರಡಕ್ಕೂ ತಾಳೆ ಮಾಡುವುದಕ್ಕೆ ಹೋಗಬೇಡಿ ನಿಮ್ಮದು ಎಷ್ಟು ಇದೆಯೋ ಅಷ್ಟು ಮಾತ್ರ ಹೇಳಿ ಆ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ ಮತ್ತೆ ನಿಮ್ಮ 150 ಕೋಟಿ ಹಗರಣಕ್ಕೆ ಸಂಬಂಧಪಟ್ಟಂತೆಯೂ ನಾನು ಉತ್ತರ ಕೊಡುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಮುಖ್ಯಮಂತ್ರಿಗಳೇ ತಾವು ಸಿಟ್ಟಾಗಬಾರದು, ನಾನು ಆ ಸಮಯದಲ್ಲಿ ತಪ್ಪಾಗಿ ಹೇಳಿಲ್ಲ ಒಳ್ಳೆಯದನ್ನು ಮಾಡಿದ್ದೀರೆಂದು ಹೇಳಿದ್ದೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ – ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನನಗೆ ಅವಕಾಶ ಕೊಡಿ ಇವರು ಪದೇ ಪದೇ 150 ಕೋಟಿ ರೂಪಾಯಿಗಳೆಂಬ ಪದವನ್ನು ಬಳಸುತ್ತಿದ್ದಾರೆ ಆದ್ದರಿಂದ, ಇವರಿಗ ಯೋಗ್ಯತೆ ಇದ್ದರೆ, ಆವತ್ತು ಅಲ್ಲಿಗೆ ಹೋಗಿ ಡಾಕ್ಯುಮೆಂಟ್ಸ್ ಕೊಡಬೇಕಾಗಿತ್ತು ನಾವು ಅವರಿಗೆ ಎಲ್ಲಾ ರೀತಿಯ ಪವರ್ಸ್ ಕೊಟ್ಟಿದ್ದೆವು ಇವತ್ತಿನ ದಿವಸ ಇವರ ಹತ್ತಿರ ಯಾವುದೇ ಡಾಕ್ಯುಮೆಂಟ್ಸ್ ಇಲ್ಲ ಸಂತೆಯಲ್ಲಿ ಮಾತನಾಡಿದ ಹಾಗೆ 150 ಕೋಟಿ ರೂಪಾಯಿ ಹಗರಣವೆಂದು, ಯಾವುದೇ ಒಂದು ಡಾಕ್ಯುಮೆಂಟ್ ಇಲ್ಲದೇ, ಇಲ್ಲಿ ಕುಳಿತುಕೊಂಡು ಚರ್ಚೆ ಮಾಡಿಕೊಂಡು ಕಾಲ ಕಳೆದಿದ್ದಾರೆ ಇವರು ನಡೆದುಕೊಳ್ಳುತ್ತಿರುವ ರೀತಿಯನ್ನು ಕಳೆದ ಒಂದು ವರ್ಷದಿಂದ ವಿಧಾನ ಸಭೆಯ ಕಲಾಪಗಳಲ್ಲಿ ನಾನು ನೋಡುತ್ತಿದ್ದೇನೆ ಪದೇ ಪದೇ 150 ಕೋಟಿ ರೂಪಾಯಿಗಳ ಹಗರಣವೆಂದು ಹೇಳುತ್ತಿದ್ದಾರೆ ಅದರೆ, ಇದಕ್ಕೆ ಸಂಬಂಧಪಟ್ಟಂತೆ ಇವರ ಹತ್ತಿರ ಏನು ಮಾಹಿತಿಗಳಿವೆಎಂಬುದನ್ನು ಇವತ್ತಿನವರೆಗೆ ಸದನದ ಮುಂದಿಟ್ಟಿಲ್ಲ

ಶ್ರೀ ಎನ್ ಧರ್ಮಸಿಂಗ್ - 150 ಕೋಟಿ ರೂಪಾಯಿಗಳ ಹಗರಣದ ಆರೋಪವನ್ನು ಯಾರು ಮಾಡಿರುವುದು? ನಮ್ಮವರು ಮಾಡಿದ್ದಾರೆಯೇ? ಕಾಂಗ್ರೆಸ್ ಪಾರ್ಟಿ ಮಾಡಿದೆಯೇ? ಇದನ್ನು ನಿಮ್ಮ ಮಿತ್ರ ಪಕ್ಷದ ಸದಸ್ಯರು ಮಾಡಿದ್ದಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮಾನ್ಯ ಮುಖ್ಯಮಂತ್ರಿಗಳು) - ಯಾರಾದರೂ ಮಾಡಲಿ ನಿಮ್ಮ ಹತ್ತಿರ ಇದರ ಬಗ್ಗೆ ಡಾಕ್ಯುಮೆಂಟ್ ಇದ್ದರೆ ಸದನದ ಮುಂದಿಡಿ

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಮುಖ್ಯಮಂತ್ರಿಗಳೇ, ಈ ದೇಶದಲ್ಲಿ ಯಾವುದಾದರೂ ಪತ್ರಿಕೆಗಳಲ್ಲಿ ಆರೋಪ ಬಂದರೆ, it is our duty to ask you, ಯಾರು ಮಾಡಿದ್ದಾರೆಯೋ ಅವರನ್ನು ಕೇಳಿ?

ಶ್ರೀ ಹೆಚ್ ಡಿ ಕುಮಾರಸ್ವಾಮಿ – ಈ ದೇಶದ ರಾಜಕಾರಣಿಯಾಗಿರುವ ಇವರಿಗೆ ಸಿ ಬಿ ಐ ತನಿಖೆ ಬಗ್ಗೆ ನಂಬಿಕೆ ಇದೆ ಸಿ ಬಿ ಐ ಸಂಸ್ಥೆ Independent body ಅಲ್ಲ ಸಿ ಬಿ ಐ ಯಾರ ಕೈ ಕೆಳಗೆ ಇದೆ ಎನ್ನತಕ್ಕಂಥದನ್ನು ಇವರು ಮೊದಲು ಅರ್ಥಮಾಡಿಕೊಳ್ಳಬೇಕು ನಾನು ಯಾವ ತನಿಖೆಗೆ ಬೇಕಾದರೂ ಸಿದ್ಧನಿದ್ದೇನೆ ಈ ವಿಷಯದಲ್ಲಿ ಹಿಂದಕ್ಕೆ ಹೆದರಿಕೊಂಡು ಹೋಗತಕ್ಕಂಥ ಪ್ರಶ್ನೆ ಇಲ್ಲ ಈ ಹಗರಣವನ್ನು ಸೃಷ್ಟಿ ಮಾಡಿರತಕ್ಕಂಥದು ನನ್ನ ಮಿತ್ರಪಕ್ಷದ ಬಿ ಜೆ ಪಿ ಯವರೇ ಇರಬಹುದು ಆ ಮನುಷ್ಯನ ಹಿಂದೆ ಇರತಕ್ಕಂಥ back ground ಏನು ಅನ್ನತಕ್ಕಂಥದನ್ನು ದಯವಿಟ್ಟು ಈ ಸದನ ಮುಂದಿಡಬೇಕಾಗುತ್ತದೆ ಆ ಮನುಷ್ಯ ಗಣಿ ಇಲಾಖೆಯೊಳಗೆ

(ಗೊಂದಲ)

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿ ಹಾದಿ ತಪ್ಪತಕ್ಕಂದದನ್ನು ಮಾಡುತ್ತಿದ್ದಾರೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜ್ – ನಿಮ್ಮ ಹತ್ತಿರ ದಾಖಲೆಗಳು ಇದ್ದಿದ್ದರೆ ಆಯೋಗದ ಮುಂದೆ ಹೋಗಬೇಕಾಗಿತ್ತು ಹಾವು ಬಿಡುತ್ತೀವೆಂದು ಹೇಳುತ್ತಾ ಹಾವಾಡಿಗರ ಆಟವನ್ನು ಆಡುತ್ತಿದ್ದೀರಾ?

(ಗೊಂದಲ)

ಅಧ್ಯಕ್ಷರು –ನೀವೆಲ್ಲರೂ ಏತಕ್ಕಾಗಿ ಈ ರೀತಿಯಾಗಿ ನಿಂತುಕೊಂಡು ಮಾತನಾಡುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ ನೀವು ಏತಕ್ಕಾಗಿ ಮಾತನಾಡುತ್ತಿದ್ದೀರಿ? ಮಾತನಾಡುವುದಕ್ಕೆ ಅವಕಾಶ ತೆಗೆದುಕೊಂಡಿದ್ದೀರಾ? ಇಲ್ಲಿ ಕೂಗಾಟ ಮಾಡುವುದಕ್ಕೆ ಬಂದಿದ್ದೀರಾ?

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜ್ – ಈ ರೀತಿ ಹೇಳತಕ್ಕಂಥ ಇವರು ನ್ಯಾಯಾಂಗ ತನಿಖೆ ಮುಂದೆ ಹೋಗಿ ಹೇಳಬೇಕಾಗಿತ್ತು

(ಗೊಂದಲ)

ಅಧ್ಯಕ್ಷರು – ಮಾನ್ಯ ಧರ್ಮಸಿಂಗ್‌ರವರೆ, ನಿಮ್ಮ ಕಡೆಯವರಿಗೆ ಸ್ವಲ್ಪ ಬುದ್ಧಿ ಹೇಳಿ, ಈ ವಿಷಯವನ್ನು ನೀವು ಪ್ರಸ್ತಾಪ ಮಾಡಿದ್ದೀರಿ ಆದರೆ, ಅವರೆಲ್ಲರೂ ಈ ರೀತಿಯಾಗಿ ಏತಕ್ಕಾಗಿ ಮಾತನಾಡುತ್ತಿದ್ದಾರೆ? ಅವರು ನಿಂತುಕೊಂಡರೆ, ಇವರೂ ಕೂಡ ನಿಂತುಕೊಳ್ಳುತ್ತಾರೆ ಹಾಗಾದರೆ, ನಿಮ್ಮವರು ಮಾತನಾಡತಕ್ಕಂಥದು ಸರಿ ಎಂದು ಹೇಳುತ್ತೀರಾ? ನೀವು ಲೀಡರ್ ಆಗಿದ್ದೀರಿ ಮತ್ತೆ ನೀವು ಈಗಾಗಲೇ ಇದರ

ಬಗ್ಗೆ ಮಾತನಾಡಿದ್ದೀರಿ ಆದ್ದರಿಂದ, ಅವರು ಏಕೆ ಮತ್ತೆ ಈ ರೀತಿಯಾಗಿ ಮಾತನಾಡುತ್ತಿದ್ದಾರೆ? ಈ ರೀತಿಯಾದರೆ ಚರ್ಚೆ ಯಾವ ರೀತಿಯಾಗುತ್ತದೆ? This is not correct (ಗೊಂದಲ) ಅವರು ಮೊದಲು ನಿಂತುಕೊಂಡಾಗ ಕುಳಿತುಕೊಳ್ಳಿ ಎಂದು ನಾನು ಹೇಳಿದ್ದೇನೆ ಆದ್ದರಿಂದ, ನನಗೆ ಅವರಾಗಲಿ ಅಥವಾ ನೀವಾಗಲಿ ಯಾರಾದರೂ ಅಷ್ಟೆ ನನಗೆ ಚರ್ಚೆ ಆಗಬೇಕಷ್ಟೆ ಅದನ್ನು ಬಿಟ್ಟು ಸುಮ್ಮನೆ ನಿಂತುಕೊಂಡು ಕೂಗಾಡಿದರೆ ಅರ್ಥ ಏನಿದೆ?

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ಮಾನ್ಯ ಅಧ್ಯಕ್ಷರೆ, ಇವರ ಹತ್ತಿರ ದಾಖಲೆಗಳಿದ್ದರೆ, ನ್ಯಾಯಾಂಗ ತನಿಖೆ ಮುಂದಿಡಬೇಕಾಗಿತ್ತು ಇಲ್ಲಿ ಪದೇ ಪದೇ ಹೇಳತಕ್ಕಂಥವರು ನ್ಯಾಯಾಂಗ ತನಿಖೆ ಮುಂದೆ ಏಕೆ ಕೊಡಲಿಲ್ಲ?

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ – ಅವತ್ತು ಚರ್ಚೆ ಆಗುವಂತಹ ಸಂದರ್ಭದಲ್ಲಿ ಇವರೆಲ್ಲರೂ ಬಹಿಷ್ಕಾರ ಮಾಡಿ ಹೊರಕ್ಕೆ ಹೋದರು ಆದರೆ, ಇವತ್ತು ಮತ್ತೆ ಮಾತನಾಡುವುದಕ್ಕೆ ಬಂದಿದ್ದಾರೆ

ಅಧ್ಯಕ್ಷರು – ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ ಅವರು ನಿಂತುಕೊಂಡರೆಂದು ಇವರು ನಿಂತುಕೊಳ್ಳುವುದು, ಇವರು ನಿಂತುಕೊಂಡರೆಂದು ಅವರು ನಿಂತುಕೊಳ್ಳತಕ್ಕಂಥ ಕೆಲಸ ಆಗಿದೆ ಇದೇನು ಶಾಸನ ಸಭೆಯೇ?

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ – ಬಟ್ ಕಮಿಷನ್ ಮಾಡಿದಾಗ ಅವರೇಕೆ ಅದನ್ನು ಸ್ವಾಗತ ಮಾಡಲಿಲ್ಲ?

(ಗೊಂದಲ)

ಅಧ್ಯಕ್ಷರು – ಯಾವುದೇ ಒಂದು ಹಿಡಿತ ಇಲ್ಲದೇ ಮಾತನಾಡುತ್ತಿದ್ದೀರಿ ಎಲ್ಲರು ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಡಾ ಕೆ ಅನ್ನದಾನಿ – ಮಾನ್ಯ ಅಧ್ಯಕ್ಷರೆ, ಅದಕ್ಕೆ ಯಾವುದೇ ರೀತಿಯ ಎವಿಡೆನ್ಸ್ ಇಲ್ಲ, ಅದಕ್ಕೆ ಯಾವುದೇ ರೀತಿಯ ಆಧಾರವಿಲ್ಲ, ಸಾಕ್ಷಿ ಇಲ್ಲ ಆದರೆ, ಮಾತೆತ್ತಿದರೆ ಅದೊಂದು ಪದ ಹಿಡಿದುಕೊಂಡು ಕುಳಿತುಕೊಳ್ಳುತ್ತಾರೆ

(ಗೊಂದಲ)

ಅಧ್ಯಕ್ಷರು – ಈ ರೀತಿಯಾಗಿ ನಡವಳಿಕೆ ಮಾಡುವುದಾದರೆ, ಈ ಸದನವನ್ನು ನಡೆಸುವುದು ಕಷ್ಟವಾಗುತ್ತದೆ ವಿರೋಧ ಪಕ್ಷದ ನಾಯಕರು ಕೇಳಿರತಕ್ಕಂಥ ಪ್ರಶ್ನೆಗೆ ಸಭಾನಾಯಕರು ಉತ್ತರ ಕೊಡುತ್ತಿರುವಾಗ ನೀವೆಲ್ಲಾ ಈ ರೀತಿಯಾಗಿ ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಜ ಸಿ ಮಾಧುಸ್ವಾಮಿ – ಮಾನ್ಯ ದೇಶಪಾಂಡೆಯವರು ಈಗಾಗಲೇ ಮಾತನಾಡಿರತಕ್ಕಂಥದರ ಬಗ್ಗೆ records straight ಆಗಿರಲೆಂದು ಮಾನ್ಯ ದೇಶಪಾಂಡೆಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಅದೇನೆಂದರೆ, ರಾಮಸ್ವಾಮಿ ಕಮಿಟಿಯನ್ನು ತಾವು ಮಾಡಿದ್ದೀರಿ ಆದ್ದರಿಂದ ಅದಕ್ಕೆ extension ತಾವು ಕೊಟ್ಟಿದ್ದೀರಿ ಆದ್ದರಿಂದ ಸರ್ಕಾರಕ್ಕೂ ಮತ್ತು ಸ್ಪೀಕರ್‌ಗೂ ಹೋಲಿಕೆ ತರಬೇಡಿ ಅದೊಂದು ಸದನ ಸಮಿತಿ ನಾನೂ ಕೂಡ ಆ ಸಮಿತಿಯ ಸದಸ್ಯನಾಗಿದ್ದೇನೆ ಸಮಿತಿ ಅವಧಿಯನ್ನು ವಿಸ್ತರಣೆಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರಲ್ಲಿ ಕೇಳಿಕೊಂಡಿದ್ದೇವೆ ಅದಕ್ಕೆ ಅವರು extension ಕೊಟ್ಟಿದ್ದಾರೆ ಆದ್ದರಿಂದ ಭಟ್ ಕಮಿಷನ್ ಬಗ್ಗೆ ಸರ್ಕಾರಕ್ಕೆ ಬಿಟ್ಟ ವಿಷಯ

ಶ್ರೀ ಆರ್ ವಿ ದೇಶಪಾಂಡೆ – ತಾವು ತಪ್ಪು ತಿಳಿದುಕೊಂಡಿದ್ದೀರಿ ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಇಷ್ಟು ಸಿಟ್ಟಾಗಬಾರದು ರಾಮಸ್ವಾಮಿ ಕಮಿಟಿಗೆ ಏಕೆ extension ಕೊಟ್ಟಿದ್ದೀರೆಂದು ನಾನು ಕೇಳಿದ್ದೇನೆಯೇ? ಅವರಿಗೆ extension ಕೊಟ್ಟಿರುವುದು ಸರಿಯಿಲ್ಲವೆಂದು ನಾನು ಹೇಳಿದ್ದೇನೆಯೇ?

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ಭಟ್ ಕಮಿಷನ್ ಬಗ್ಗೆ ಮಾತನಾಡತಕ್ಕಂಥ ನೀವು ಸದರಿ ಕಮಿಷನ್ ಮುಂದೆ ಹೋಗಿ ದಾಖಲೆಗಳನ್ನು ಕೊಡಬೇಕಾಗಿತ್ತು ಅಲ್ಲಿಗೆ ಇವರ್‍ಯಾರು ಹೋಗಲಿಲ್ಲ

(ಗೊಂದಲ)

ಅಧ್ಯಕ್ಷರು.– ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ ಇದು ಏನು ತೋರಿಸುತ್ತದೆಂದರೆ, ಈ ಕಡೆಯವರು ಅಥವಾ ಆ ಕಡೆಯವರಿಗಾಗಲಿ ಯಾರಿಗೂ ಚರ್ಚೆ ಬೇಕಾಗಿಲ್ಲ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ನಿಮ್ಮ ಹತ್ತಿರ ದಾಖಲೆಗಳಿದ್ದಿದ್ದರೆ ಭಟ್ ಆಯೋಗದ ಮುಂದೆ ಹೋಗಬೇಕಾಗಿತ್ತು ಏಕೆ ತಾವುಗಳು ಹೋಗಲಿಲ್ಲ?

(ಗೊಂದಲ)

ಅಧ್ಯಕ್ಷರು – ಈಗ ಮಾತನಾಡುವುದಕ್ಕೆ ಮಾನ್ಯ ದೇಶಪಾಂಡೆಯವರನ್ನು ಕರೆದಿದ್ದೇನೆ ಅವರು ಈಗ ಮಾತನಾಡುತ್ತಿದ್ದಾರೆ ಆದ್ದರಿಂದ, ನೀವೆಲ್ಲರೂ ದಯಮಾಡಿ ಕುಳಿತುಕೊಳ್ಳಿ ನೀವು ಮಾತನಾಡುವುದಾದರೆ, ನನ್ನ ಪರ್ಮಿಷನ್ ತೆಗೆದುಕೊಂಡು ಮಾತನಾಡಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ದಾಖಲೆಗಳನ್ನು ಇಟ್ಟುಕೊಂಡು ಮಾತಾನಾಡಲಿ, ಮಾತನಾಡುವುದು ಬೇಡವೆಂದು ಯಾರು ಹೇಳುವುದಿಲ್ಲ, ಆದರೆ, ಸುಳ್ಳು ಹೇಳುವುದು

ಬೇಡ, ದಾಖಲೆಗಳನ್ನು ಇಟ್ಟುಕೊಂಡು ಮಾತನಾಡಿದರೆ ಯಾರು ಬೇಡವೆಂದು ಹೇಳುವುದಿಲ್ಲ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – ಇದರ ಬಗ್ಗೆ ಇಚ್ಛೆ ಮತ್ತು ಸಮೀಕ್ಷೆ ಕೂಡ ಇದೆ

(ಗೊಂದಲ)

ಅಧ್ಯಕ್ಷರು – ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ

(ಗೊಂದಲ)

ಡಾ ಕೆ ಅನ್ನದಾನಿ – ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಒಂದು ಟೈಂ ಫಿಕ್ಸ್ ಮಾಡಿ ಅದನ್ನು ಬಿಟ್ಟು ಯಾರೋ ಎದ್ದು ಗಂಟೆಗಟ್ಟಲೆ ಮಾತನಾಡುತ್ತಾ ಹೋದರೆ ನಮಗೆ ಅವಕಾಶವೇ ಸಿಗುವುದಿಲ್ಲ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – ಇನ್ನೊಬ್ಬರ ಯೋಗ್ಯತೆ ಬಗ್ಗೆ ಮಾತನಾಡತಕ್ಕಂಥ ವಿಷಯ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಬರಬಾರದೆಂದು ನಾನು ಬಹಳ ವಿನಯದಿಂದ ಅವರಿಗೆ ಹೇಳುತ್ತಿದ್ದೇನೆ

(ಗೊಂದಲ)

ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು) – ಮಾನ್ಯ ಸಭಾಧ್ಯಕ್ಷರೆ, Malafide intention ಎಂದು ರೆಕಾರ್ಡ್ ಆಗಿದೆ ಅದನ್ನು ದಯವಿಟ್ಟು ರೆಕಾರ್ಡ್‌ನಿಂದ ತೆಗೆಯಬೇಕು

ಅಧ್ಯಕ್ಷರು – ಅದನ್ನು ನೋಡಿ ರೆಕಾರ್ಡ್‌ನಿಂದ ತೆಗೆಸಿ ಹಾಕಿಸುತ್ತೇನೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – Malafide intention is a parliamentary word It is not an un-parliamentary word

ಶ್ರೀ ಡಿ ಟಿ ಜಯಕುಮಾರ್ – Malafide intention ಎಂಬ ಪದವನ್ನು ದಯಮಾಡಿ ರೆಕಾರ್ಡ್‌ನಿಂದ ತೆಗೆಯಬೇಕಾಗುತ್ತದೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – If it is an un-parlimentary word, please remove it I have no objection

ಶ್ರೀ ಡಿ ಟಿ ಜಯಕುಮಾರ್ – Malafide intention ಪದವನ್ನು ರೆಕಾರ್ಡ್‌ನಿಂದ ತೆಗೆಯಬೇಕು

ಶ್ರೀ ಆರ್ ವಿ ದೇಶಪಾಂಡೆ – Mr prakash, you are Parliamentary Affairs Minister If you feel,

ಶ್ರೀ ಎಂ ಪಿ ಪ್ರಕಾಶ್ – ಅವರು Malafide ಎಂದು ಹೇಳಿರತಕ್ಕಂಥ ಪದ un-parliamentary ಪದ ಅಲ್ಲ ಅದ್ದರಿಂದ, ಅದರ ಪ್ರಶ್ನೆ ಇಲ್ಲಿಲ್ಲ ಅವರು ಏನು ಹೇಳಿದರೆಂದರೆ, ಇದು admissible ಎನ್ನತಕ್ಕಂದದರ ಬಗ್ಗೆ ಮನವೊಲಿಸುವಂಥ ವಿಷಯದ ಬಗ್ಗೆ ಮಾತ್ರ ಮಾತನಾಡಲಿ ಮೆರಿಟ್ ಆಫ್ ಕೇಸ್‌ನಲ್ಲಿ you have a malafide intention in not extending the time ಎನ್ನತಕ್ಕಂಥದ್ದು ಸರಿಯಾದುದ್ದಲ್ಲ

ಶ್ರೀ ಆರ್ ವಿ ದೇಶಪಾಂಡೆ – There is no argument ತಾವು ಅದರ ಬಗ್ಗೆ ಹೇಳಿ I have no objection ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ತರಾತುರಿಯಲ್ಲಿ ತಾವೇ ಕಮಿಷನ್ ನೇಮಕ ಮಾಡಿ ಅದಕ್ಕೆ ತಾವೇ ಕೋ–ಅಪರೇಟ್ ಮಾಡದೇ ಅಂದರೆ, extension ಕೊಡಬೇಕೆಂದು ಕೇಳಿದರೂ ಕೂಡ ನೀವು ಆ ಕಮಿಷನ್‌ನ್ನು ಏಕೆ ವೈಂಡ್ ಅಪ್ ಮಾಡಿದಿರಿ ಎನ್ನತಕ್ಕಂಥದ್ದು it it a very important question ಆದ್ದರಿಂದ ಇದರಲ್ಲಿ ಏನು ಸತ್ಯಗಾದೆ ಎನ್ನ ತಕ್ಕಂಥದ್ದು ಈ ನಾಡಿನ ಜನರಿಗೆ ಗೊತ್ತಾಗಬೇಕು Because, the truth has to be made known to the people What was the necessity? ಈಗ ಇದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೀರಿ You have to explain, how justice is going to be done What are the powers of Lokayukta? I have got respect for Lokayukta I have got respect for the institution ನಿಮ್ಮ ಮೇಲೆ ಮತ್ತು ನಮ್ಮ ಮೇಲೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಮೇಲೆ findings ಕೊಡುವುದಕ್ಕೆ ಲೋಕಾಯುಕ್ತಕ್ಕೆ ಅಧಿಕಾರವಿದೆಯೇ? Whether that finding is binding on the Government? It is again a fact finding body ಹಾಗಾಗಿ ತಾವು ಏನು ಮಾಡುತ್ತಿದ್ದೀರೆಂದರೆ, ಇದರ ಬಗ್ಗೆ ಸುತ್ತಿ ಸುತ್ತಿ, the Government does not want to find out the truth You don't want the truth to come out ಆದ್ದರಿಂದ ನಾನು ಹೇಳುವುದೇನೆಂದರೆ, the best course for you was to hand over it to the CBI ಸರಿ ಅಥವಾ ತಪ್ಪು ಎನ್ನುವ ಬಗ್ಗೆ ತನಿಖೆಯಾಗುತ್ತಿತ್ತು

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ಕಮಿಷನ್ ಪ್ರಾರಂಭವಾದಾಗಿನಿಂದ ಎಷ್ಟು ದಾಖಲೆಗಳನ್ನು ಅಲ್ಲಿಗೆ ಕೊಟ್ಟಿದ್ದೀರಿ ಎಂಬುದರ ಬಗ್ಗೆ ಮಾಹಿತಿ ಕೊಡುತ್ತೀರಾ?

ಶ್ರೀ ಎ ಟಿ ರಾಮಸ್ವಾಮಿ(ಅರಕಲಗೂಡು) ಮಾನ್ಯ ಅಧ್ಯಕ್ಷರೆ, ಈ ಗಣಿ ಲಂಚ ಪ್ರಕರಣ ಈ ವರ್ಷ ಒಂದು ದೊಡ್ಡ ಹಗರಣ ಎಂದು ಪ್ರತಿಬಿಂಬಿತವಾಗಿರತಕ್ಕಂಥದ್ದು ನಮಗೆಲ್ಲಾ ತಿಳಿದಿದೆ ಸರ್ಕಾರವು ಅನ್ಯಥಾ ಭಾವಿಸಬಾರದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಏನು ನಡೆದಿದೆ ಎನ್ನತಕ್ಕಂಥ ವಿಷಯವನ್ನು ನಾವು ತಿಳಿದುಕೊಳ್ಳಬೇಕು ಮತ್ತು ಈ ನಾಡಿನ ಜನತೆಗೂ ಕೂಡ ತಿಳಿಸಬೇಕು ದಯಮಾಡಿ ಈ ಬಗ್ಗೆ ಚರ್ಚೆಯಾಗಬೇಕು ಎನ್ನುವುದು ನನ್ನ ವಿನಂತಿ ಬಿರುಗಾಳಿ ಅನ್ನುತ್ತೀರೋ ಸುಂಟರಗಾಳಿ ಅನ್ನುತ್ತೀರೋ ಅಥವಾ ಚಂಡಮಾರುತ ಅನ್ನುತ್ತೀರೋ ಆ ಚಂಡಮಾರುತ ಎಲ್ಲಿಂದ ಹೇಗೆ ಪ್ರಾರಂಭವಾಯಿತು ಎನ್ನುವುದು ನನಗೂ ಗೊತ್ತಾಗಬೇಕು ಮತ್ತು ಈ ರಾಜ್ಯದ ಜನತೆಗು ಗೊತ್ತಾಗಬೇಕಾಗಿದೆ ಇವತ್ತು 150 ಕೋಟಿ ರೂ ಗಳನ್ನು ಆಕ್ರಮವಾಗಿ ಅವರು ಲಂಚ ಕೊಟ್ಟರು ಎಂದು ಹೇಳಬೇಕಾದರೆ, ಆ ಖದೀಮರು ಇನ್ನೆಷ್ಟು ದುಡ್ಡನ್ನು ಲಪಟಾಯಿಸಿರಬೇಕು, ನಮ್ಮ ಈ ಗಣಿಗಾರಿಕೆಯಿಂದ, ಒಂದು ನಿಮಿಷ, ಆ 150 ಕೋಟಿ ರೂ ಗಳನ್ನು ಯಾರ್ಯಾರು ಕೊಟ್ಟರು, Income taxನಿಂದ ಕದ್ದರೆ Sale taxನಿಂದ ಕದ್ದರೆ, ಅವರು ಕೊಟ್ಟಿದ್ದರೇ ಇದು ಗೊತ್ತಾಗಬೇಕಾಗಿದೆ ಇಷ್ಟೆ ಅಲ್ಲ, ಸಾರ್ವಜನಿಕ ವಲಯಕ್ಕೆ ರಾಜ್ಯದಲ್ಲಿ ಮೀಸಲಿಟ್ಟಿರುವ ಜಮೀನನ್ನು ಗಣಿಗಾರಿಕೆಗೆ ಯಾರ ಕಾಲದಲ್ಲಿ ಡೀನೋಟಿಫೈ ಮಾಡಿದರು, ಅದು ಸಹ ಗೊತ್ತಾಗ ಬೇಕು ಫೇಕ್ ಪರ್ಮಿಟ್ ಅನ್ನು ಯಾರ ಕಾಲದಲ್ಲಿ ಕೊಟ್ಟರು ಅದು ಗೊತ್ತಾಗಬೇಕು ಯಾವ ಮುಖ್ಯಮಂತ್ರಿ ಕೇಂದ್ರ ಸರ್ಕಾರಕ್ಕೆ ಗಣಿಗಾರಿಕೆಯಿಂದ, ಇಷ್ಟು ಹಣ ಲೂಟಿಯಾಗುತ್ತಿದೆ, ಈ ರಾಜ್ಯಕ್ಕೆ, ಈ ರಾಜ್ಯದ ಬೊಕ್ಕಸಕ್ಕೆ, ಇಷ್ಟು ಅನ್ಯಾಯವಾಗುತ್ತಿದೆ, ಈ ಗಣಿಗಾರಿಕೆ ನೀತಿಯನ್ನು ಬದಲಾಯಿಸಬೇಕು ಎಂದು ಹೇಳಿ, ಯಾರು ಮೊದಲು ಪತ್ರವನ್ನು ಬರೆದರು, ಮನವಿ ಮಾಡಿದರು? ಇದಾದ ಮೇಲೆ, ಇದನ್ನು ನಿಯಂತ್ರಣ ಮಾಡಲಿಕ್ಕೆ ಹೊರಟಿದ್ದೀರಿ ಎಂದು ಹೇಳಿ, ಆಪಾದನೆ ಆಮೇಲೆ ಆಯಿತಾ? ಅಥವಾ ಮೊದಲೇ ಆಪಾದನೆ ಮಾಡಿದ್ದರಾ? ಇದನ್ನು ನಿಯಂತ್ರಣ ಮಾಡಲಿಕ್ಕೆ ಹೊರಟ ಮೇಲೆ ಆಪಾದನೆ ಮಾಡಿದರಾ? ಇಲ್ಲಾ ಮೊದಲೇ ಈ ಆಪಾದನೆ ಆಗಿದೆಯೇ? ಇವು ಎಲ್ಲವೂ ಕೂಡ ರುಜುವಾತಾಗಬೇಕಾಗಿದೆ ಇವತ್ತು ಗೊಳೋ ಎನ್ನುತ್ತಿದ್ದೀರಿ, ಪಾಪ ನಿಮ್ಮ ಚರ್ಚೆಗೆ ನಾನು ಸ್ವಾಗತವನ್ನು ಮಾಡುತ್ತೇನೆ ಯು ಎಲ್ ಭಟ್ ಇದ್ದಾಗ, ಸಾಯಲಿ ಸಾಯಲಿ ಎಂದು ಹೊರಟಿದ್ದರಂತೆ, ಸತ್ತ ಮೇಲೆ ಸತ್ತ ಎಂದು ಅಳುತ್ತಾರೆ ಇದ್ದಾಗ ಹೋಗಿ ಅವರು ವಾದ ಮಾಡಬಹುದಾಗಿತ್ತು, ಮಾಹಿತಿ ಕೊಡಬಹುದಾಗಿತ್ತು, ನಮಗೂ ಗೊತ್ತಾಗಬೇಕು, ನಮಗೂ ತಿಳಿದುಕೊಳ್ಳುವ ಹಕ್ಕು ಇದೆ ದಯಮಾಡಿ ಮಾನ್ಯ ವಿರೋಧ ಪಕ್ಷ ನಾಯಕರೆ, ನಾನು ಯಾರೂ ಮಾತನಾಡುವಾಗ ಮಧ್ಯೆ ಹೋಗಿಲ್ಲ ನೀವು ಮಾತನಾಡುವಾಗ ನಾನು ಯಾವಾಗಲೂ ಏಳುವುದಿಲ್ಲ ಆಯಿತು CBI ತನಿಖೆಯಾಗಬೇಕೆಂದು ಹೇಳುತ್ತೀರಿ, ತನಿಖೆಯಾಗಲಿ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಯಾರು ಸಿಗ್ನೇಟರಿ ಇದ್ದಾರೆ ಅವರು ಮಾತನಾಡಲಿ ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಾ? ಚರ್ಚೆ ಮಾಡಲಿ

ಒಬ್ಬ ಮಾನ್ಯ ಸದಸ್ಯರು ಅವರ ಬದಲಿ ನೀವೇ Government ಆಗಿ ಬಿಡಿ

(ಗೊಂದಲ)

ಶ್ರೀ ಎ ಟಿ ರಾಮಸ್ವಾಮಿ ನಮಗೂ ನ್ಯಾಯ ಸಿಗಬೇಕು ನಮಗೂ ಮಾಹಿತಿಬೇಕು

ಅಧ್ಯಕ್ಷರು – Opposition Leader ಅವರು ಏನು ಹೇಳುತ್ತಿದ್ದಾರೆಂದರೆ, we are convincing the Charir to admit the Adjournment Motion ಎಂದು ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಎ ಟಿ ರಾಮಸ್ವಾಮಿ ನಮಗೂ ಸರ್ಕಾರದಿಂದ ಮಾಹಿತಿ ಬೇಕು ಆ ಕಾರಣದಿಂದ ನಾನು ಕೇಳುತ್ತಿದ್ದೇನೆ ಈಗ C B I ತನಿಖೆಯಾಗಬೇಕು ನಾಗಪ್ಪನವರ ಹತ್ಯೆಯಾದಾಗ C B I ತನಿಖೆಯಾಗಬೇಕೆಂದು ಶ್ರೀಮತಿ ಪರಿಮಳ ನಾಗಪ್ಪ ಅವರು ಕಣ್ಣೀರು ಸುರಿಸಿ ಓಡಾಡಿದರು, ಏಕೆ ಮಾಡಲಿಲ್ಲ ನಕಲಿ ಚಾಪಾ ಕಾಗದ ಹಗರಣದಲ್ಲಿ C B I ತನಿಖೆ ಮಾಡಬೇಕೆಂದು ಇಡೀ ರಾಜ್ಯದ ಉದ್ದಗಲಕ್ಕೂ ಒತ್ತಾಯ ಮಾಡಿದರು, ಏಕೆ C B I ತನಿಖೆ ಮಾಡಲಿಲ್ಲ ಅವರ ಮೇಲೆ ನಿಮಗೆ ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆಂದು ನಂಬಿಕೆ ಇರಲಿಲ್ಲವೆ? ಇಲ್ಲಿ ಯಾವ ಶಕ್ತಿಯು ರಾಜಕಾರಣ, ಸರ್ಕಾರ ಈ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು

(ಗೊಂದಲ)

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾಡಿ ಕೊಡಲಿ, ನಾವು ತಯಾರಾಗಿದ್ದೇವೆ

ಶ್ರೀ ಎ ಟಿ ರಾಮಸ್ವಾಮಿ ಇದು ನಮಗೂ ಗೊತ್ತಾಗಬೇಕು, ಮತ್ತು ರಾಜ್ಯದ ಜನರಿಗೂ ಗೊತ್ತಾಗಬೇಕು ಆದ್ದರಿಂದ ದಯಮಾಡಿ ಇದನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು ಅವರು ಈಗ admissibility ಬಗ್ಗೆ ಮಾತನಾಡುತ್ತಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಅನೇಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ನಾವು ಚರ್ಚೆಗೆ ಹಿಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ ಮತ್ತು ಈಗ ಎಲ್ಲರ ಅಭಿಪ್ರಾಯ ಕೂಡ ಸತ್ಯ ಹೊರಗ ಬೀಳಲೇಬೇಕೆಂದು ಆಗಿದೆ ಆದರೂ ಕೂಡ ಕೆಲವು ವಿಷಯಗಳಲ್ಲಿ ಸಂಪ್ರದಾಯಗಳು ಏನಿವೆ? ನಮ್ಮ ತೀರ್ಮಾನಗಳು ಏನಾಗಿವೆ? ಇವುಗಳನ್ನು ನಾವು ನೋಡಲೇಬೇಕಾಗಿದೆ ಈ ದೃಷ್ಟಿಕೋನದಿಂದ ನಾನು ಈ ವಿಚಾರವನ್ನು ಪ್ರಸ್ತಾಪ

ಮಾಡಿದರು ಕೂಡ, ಆಂತರಿಕವಾಗಿ ನಾವು ಅಡ್ಡಿಪಡಿಸುವುದಕ್ಕೆ ತಯಾರಿಲ್ಲ ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವಂಥದ್ದು ಈ ಭಟ್ ಆಯೋಗಕ್ಕೆ ಕೊಟ್ಟಿರುವಂಥ terms of referenceನ ಎಲ್ಲ ವಿಷಯಗಳನ್ನು ಕೂಡ ಈಗಾಗಲೇ ಸರ್ಕಾರ ಲೋಕಾಯುಕ್ತಕ್ಕೆ ವಹಿಸಿಕೊಟ್ಟಿದೆ

ಶ್ರೀ ಹೆಚ್ ಸಿ ಬಾಲಕೃಷ್ಣ ಚರ್ಚೆಯಾಗಲಿ, ಒರೀ 150 ಕೋಟಿ ರೂ ಗಳದ್ದು ಅಷ್ಟೆ ಅಲ್ಲ ಇದರ ಹಿಂದೆ ಯಾರ್‍ಯಾರ ಹಣೇಬರಹ ಏನೇನಿದೆ ಗೊತ್ತಾಗಲಿ, ಚರ್ಚೆಗೆ ಅವಕಾಶವನ್ನು ಕೊಡಿ

ಶ್ರೀ ಎಂ ಪಿ ಪ್ರಕಾಶ್ ಈ ವಿಚಾರದಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇವೆ ಕೆಲವು ವಿಚಾರಗಳಲ್ಲಿ ತಪ್ಪು ಅಭಿಪ್ರಾಯಗಳು ಆಗಬಾರದೆನ್ನುವ ಕಾರಣಕ್ಕಾಗಿ, ಸರ್ಕಾರದಿಂದ ಈಗಾಗಲೇ terms of reference ನ್ನು ಭಟ್ ಆಯೋಗಕ್ಕೆ ವಹಿಸಿಕೊಟ್ಟಿದ್ದೆವು, ಅವೆಲ್ಲವನ್ನು ಕರ್ನಾಟಕ ರಾಜ್ಯಪತ್ರದಲ್ಲಿ 12ನೇ ತಾರೀಖಿನ ದಿವಸ ಲೋಕಾಯುಕ್ತಕ್ಕೆ ವಹಿಸಿಕೊಟ್ಟಿದ್ದೇವೆ ಲೋಕಾಯುಕ್ತದವರಿಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಮೇಲೆ ತನಿಖೆ ಮಾಡಲು ಅಧಿಕಾರ ಇದೆಯೇ ಎನ್ನುವ ವಿಷಯವನ್ನು ಮಾನ್ಯ ದೇಶಪಾಂಡೆಯವರು ಹೇಳುತ್ತಿದ್ದರು, ಅವರಿಗೆ ಪ್ರಾಯಶ ಗೊತ್ತಿಲ್ಲ, ಇದರಲ್ಲಿ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ಇದರಲ್ಲಿ ತನಿಖೆ ಮಾಡಬಹುದಾದ ವಿಷಯವೆಂದು ಹೇಳಿ Section (7)ರ ಕೆಳಗಡೆ ಅವರಿಗೆ ಸಂಪೂರ್ಣ ಅಧಿಕಾರವಿದೆ "ಆ ಅಧಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ಮುಖ್ಯಮಂತ್ರಿ, ಒಬ್ಬಮಂತ್ರಿ ಅಥವಾ ಒಬ್ಬ ಕಾರ್ಯದರ್ಶಿ, ಒಬ್ಬ ರಾಜ್ಯ ವಿದಾನ ಮಂಡಲದ ಸದಸ್ಯ ಅಥವಾ ಇದರ ಪರವಾಗಿ ರಾಜ್ಯ ಸರ್ಕಾರವು ಲೋಕಾಯುಕ್ತರೊಡನೆ ಸಮಾಲೋಚನೆಯನ್ನು ನಡೆಸಿ ಅಧಿಸೂಚಿಸಿದ ಸಾರ್ವಜನಿಕ ನೌಕರನಾಗಿರುವ ಯಾವೊಬ್ಬ ಇತರ ಸಾರ್ವಜನಿಕ ನೌಕರ ಕೈಗೊಂಡಂಥ ಅಥವಾ ಸಾಮಾನ್ಯ ಅಥವಾ ವಿಶೇಷ ಅನುಭವವನ್ನು ಪಡೆದು ಕೈಗೊಂಡಂಥ ಯಾವುದೇ ಕ್ರಮದ ಕುರಿತು ಲೋಕಾಯುಕ್ತರು ಅಂತಹ ಕ್ರಮದ ಸಂದರ್ಭದಲ್ಲಿ ಒಂದು ದೂರು ಅಥವಾ ಆಪಾದನೆಯನ್ನು ಒಳಗೊಂಡ ಫಿರ್ಯಾದಿಯನ್ನು ಸಲ್ಲಿಸುವುದಾದ ಸಂದರ್ಭದಲ್ಲಿ ಅವನು ಅಂತಹ ಕ್ರಮದ ಕುರಿತು ತನಿಖೆಯನ್ನು ನಡೆಸಬಹುದು "Section (7)ರ ಕೆಳಗಡೆ ಇದರ ಬಗ್ಗೆ ಬಹಳ clear ಆಗಿದೆ ಅದೇ ರೀತಿಯಾಗಿ ಅದರಲ್ಲಿ ಅವರಿಗೆ only fact finding ಎಂದು ಹೇಳಿದರು ಅದು fact finding ಏನಲ್ಲ ಅವರು ಪೋಲೀಸ್ ಅಧಿಕಾರವನ್ನು, ಕೋರ್ಟಿನ ಅಧಿಕಾರವನ್ನು ಇಟ್ಟುಕೊಳ್ಳಬಹುದು "Enter and search of any building or a place where he has the reason to suspect that such property, document, money, jewellery or other valuable articles are being kept " ಇದರ ಬಗ್ಗೆ ಸರ್ಚ್ ಮಾಡಬಹುದು ವಾರೆಂಟ್ ಇಷೂ ಮಾಡಬಹುದು, ಇದರ ಬಗ್ಗೆ

ನಿರ್ಣಯಗಳನ್ನು ತೆಗೆದುಕೊಳ್ಳುವಂಥದ್ದು ಆಗಬಹುದು ಇವೆಲ್ಲವೂ ಕೂಡ ಲೋಕಾಯುಕ್ತದ ಕಾನೂನಿನಲ್ಲಿದೆ ಆದ್ದರಿಂದ ನಾವು ಈ ವಿಚಾರದಲ್ಲಿ ನಮ್ಮ 63ನೇ ವಿಧಿ ನಮ್ಮ Rules of Procedure ಕೆಳಗಡೆ ಬಹಳ ಸ್ಪಷ್ಟವಾಗಿದೆ "No motion which seeks to raise discussion on a matter pending before any statutory tribunal or statutory authority performing any judicial or quasi-judicial functions or any commission or court of enquiry appointed to enquire into or investigate any matter shall ordinarily be permitted to be moved Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority commission or court of enquiry " ನಮ್ಮದೆ 63ನೇ Section ಇದೆ ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಮ್ಮ ತ್ರಾಂತಿಕವಾದ ಕಾರಣಗಳು ಏನೇ ಇರಲಿ, ಈ ವಿಚಾರದಲ್ಲಿ ಭಟ್ ಆಯೋಗವನ್ನು ನಾವು ನಿರಶನಗೊಳಿಸಿದ್ದು ಅಥವಾ unnecessary ಎನ್ನುವ ಕಾರಣಗಳು ಏನಿವೆ, ಆ ಸಂದರ್ಭಗಳು ಏನಿವೆ, ಆ ಚರ್ಚೆಗೆ ಸಂಬಂಧಪಟ್ಟಂತೆ ನಾವು ಉತ್ತರವನ್ನು ಕೊಡಲು ತಯಾರಾಗಿರುವ ಕಾರಣದಿಂದ ನಮ್ಮ ರೂಲಿಂಗ್‌ಗಳು ಬೇಕಾದಷ್ಟು ಇವೆ Sub-judice ಆಗಿರ ತಕ್ಕಂಥ ವಿಷಯಗಳಲ್ಲಿ ನಾವು ಇದನ್ನು ಕೈಗೆತ್ತಿಕೊಳ್ಳಬಾರದೆಂದು ಹೇಳಿ, ಆದರೂ ಈ ಸಂದರ್ಭದಲ್ಲಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಪದೇ ಪದೇ ಇದನ್ನು ಉದ್ಧರಿಸಬಾರದು ಎನ್ನುವ ಕಾರಣಕ್ಕಾಗಿ ಸರ್ಕಾರದ ವತಿಯಿಂದ ನಾವು ಕೇಳಿಕೊಳ್ಳುತ್ತಿದ್ದೇವೆ ನಮ್ಮ ಎಲ್ಲಾ ಸದಸ್ಯರು ಮತ್ತು ನಮ್ಮ ಸದನ ಈ ವಿಚಾರದಲ್ಲಿ ಕಾತುರವಾಗಿರುವುದರಿಂದ ಭಟ್ ಆಯೋಗದ ವಿಚಾರದಲ್ಲಿ ಅವರು ಏನು ಚರ್ಚೆ ಮಾಡುತ್ತಾರೆ ಮಾಡಲಿ ಅದಕ್ಕೆ ಸರಿಯಾದಂಥ ಉತ್ತರವನ್ನು ಕೊಡಲು ನಾವು ತಯಾರಾಗಿದ್ದೇವೆ ಆದರೆ ಇದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಾರದು ಇದಕ್ಕಾಗಿ ಸರ್ಕಾರ ಒಪ್ಪಿದ್ದೇವೆ ಎನ್ನುವ ಕಾರಣಕ್ಕಾಗಿಯೇ ನೀವು ಹಿಂದೆ ಆಗಿರುವಂಥ ಒಂದು Sub-judice ನ್ನು ನೀವು ಏಕೆ ಪರವಾನಗಿ ಕೊಟ್ಟಿದ್ದೀರಿ ಎನ್ನುವ ಮಾತು ಬರಲಾರದೇ ಇದೊಂದು ಉದಾಹರಣೆಯಾಗಿ ಹೇಳದೇ ಇದರ ಬಗ್ಗೆ ಸಂಪೂರ್ಣವಾದ ಚರ್ಚೆಗೆ ತಾವು ಅವಕಾಶವನ್ನು ಕಲ್ಪಿಸಿ ಕೊಡಬಹುದು ಅದಕ್ಕೆ ನಾವು ಸರ್ಕಾರದಿಂದ ಉತ್ತರವನ್ನು ಕೊಡಲು ತಯಾರಾಗಿದ್ದೇವೆ ತಾವು ಚರ್ಚೆಯನ್ನು ಮಾಡಿ ಈಗಲೇ ಶುರು ಮಾಡಿ

ಅಧ್ಯಕ್ಷರು ಈಗ 6 ಗಂಟೆಯಾಯಿತು

ಶ್ರೀ ಎಂ ಪಿ ಪ್ರಕಾಶ್ ಈಗಲೇ ಶುರುವಾಗಲಿ

ಅಧ್ಯಕ್ಷರು ಮಾನ್ಯ ಪ್ರಕಾಶ್‌ರವರೆ, ಈಗ 6 ಗಂಟೆಯಾಗಿದೆ ಈಗ ಈ ಸದನದ ಬಹುತೇಕ ಸದಸ್ಯರು ಇದರ ಬಗ್ಗೆ ಚರ್ಚೆಯಾಗಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಅದಕ್ಕೆ ಸರ್ಕಾರದ ಪರವಾಗಿ ಮಾನ್ಯ ಸಂಸದೀಯ ಸಚಿವರು ಸಹ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದಾರೆ ಆದ್ದರಿಂದ ಇದನ್ನು ನಾನು ನಿಯಮ 69ರ ಅಡಿಯಲ್ಲಿ ಬದಲಾವಣೆಯನ್ನು ಮಾಡಿ ಇದನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ ಈಗ ನೀವು ಮಾತನಾಡಿ

ಶ್ರೀ ಎನ್ ಧರ್ಮಸಿಂಗ್ ಏನಪ್ಪಾ, ರಾಜಣ್ಣ ಏನು?

ಶ್ರೀ ಕೆ ಎನ್ ರಾಜಣ್ಣ ಮೊದಲು ಅಲ್ಲಿಂದ ಪ್ರಾರಂಭವಾಗಲಿ ಎಂದು

ಶ್ರೀ ಎನ್ ಧರ್ಮಸಿಂಗ್ ಅಲ್ಲಿಂದಲೇ ಮಾಡುತ್ತೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಹಿಂದಿನ ಸರ್ಕಾರ ಏನು ಮಾಡಿದ್ದಾರೆ ಎನ್ನುವ ಬಗ್ಗೆ ಹೇಳಬೇಕು

ಶ್ರೀ ಎನ್ ಧರ್ಮಸಿಂಗ್ ಹಿಂದಿನ ಸರ್ಕಾರದ ಬಗ್ಗೆಯೂ ಹೇಳುತ್ತೇನೆ ನಾಳೆ ಮಾತನಾಡೋಣ

ಅಧ್ಯಕ್ಷರು ಈಗ ಮಾನ್ಯ ಪ್ರಕಾಶ್‌ರವರೆ, 6 ಗಂಟೆಯಾಗಿದೆ ನಾಳೆ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ ಈಗ ಇನ್ನು 6 ಗಂಟೆ

ಅಧ್ಯಕ್ಷರು ನಾನು ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೇನೆ ಬಹಳ ಸೂಕ್ಷ್ಮವಾದ ವಿಚಾರ ಅದಕ್ಕೋಸ್ಕರ ಬಹಳ ಹೊತ್ತು ಕುಳಿತುಕೊಳ್ಳಬೇಕಾಗುತ್ತದೆ ಈಗ ತಾವು ಆರಂಭ ಮಾಡಿ ಎಷ್ಟು ಸಾಧ್ಯವೋ ನೋಡೋಣ

ಶ್ರೀ ಎನ್ ಧರ್ಮಸಿಂಗ್ ನಾಳೇ ಪ್ರಾರಂಭ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಬಹಳ ಮುಖ್ಯವಾದ ವಿಷಯವೆಂದು ತಾವು ನಿಲುವಳಿ ಸೂಚನೆಯನ್ನು ತಂದಿದ್ದೀರಿ ಆದರೆ ಈಗ

5 <u>ನಿಯಮ 69ರ ಅಡಿ ಚರ್ಚೆ</u>

ವಿಷಯ ಕಾನೂನು ಬಾಹಿರ ಗಣಿಗಾರಿಕೆ ಬಗ್ಗೆ ತನಿಖೆ ಮಾಡಲು ರಚಿಸಿದ್ದ ಯು ಎಲ್ ಭಟ್ ಕಮಿಷನನ್ನು ರದ್ದುಪಡಿಸಿರುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್(ವಿರೊದ ಪಕ್ಷದ ನಾಯಕರು) ಇಲ್ಲ, ನಾನು ಮಾತನಾಡುತ್ತೇನೆ ವ್ಯಾಖ್ಯಾನ ಬೇಡ ತಾವು ಕುಳಿತುಕೊಳ್ಳಿ ಈಗ ಬಹಳ ಮಹತ್ವವಾದಂತಹ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ ಇವತ್ತು ಕೊನೆಯದಾಗಿ ತಮ್ಮ ಡಿಸಿಷನ್ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದ್ದಾರೆ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ ಇವತ್ತು ಮಾನ್ಯ ದೇಶಪಾಂಡೆಯವರು ಮಾತನಾಡುವಂತಹ ವಿಷಯದಲ್ಲಿ, ಅವರು ಸಾಕಷ್ಟು ಸಲ ಸರ್ಕಾರಕ್ಕೆ ಪತ್ರವನ್ನು

ಬರೆದಿದ್ದಾರೆ ಇದರ ಬಗ್ಗೆ ನಿಷ್ಪಕ್ಷವಾದಂತಹ ಒಂದು ತನಿಖೆಯು ಆಗಬೇಕಾದರೆ ಸರ್ಕಾರವು ಸಹಕಾರವನ್ನು ಕೊಡಬೇಕು ಇವತ್ತು ಅವರು ಓದಿ ಹೇಳುತ್ತಾರೆ, ಇವತ್ತು ಯಾರ ಮೇಲೆ ಆರೋಪವಿದೆ? ಮಾನ್ಯ ಮುಖ್ಯಮಂತ್ರಿಗಳ ಮೇಲೆ, ಆರೋಪವಿರುವಂತಹ ಮುಖ್ಯಮಂತ್ರಿಗಳು ಏಕಾಏಕಿಯಾಗಿ ಸಂಪುಟದಲ್ಲಿ ನಿರ್ಣಯವನ್ನು ತೆಗೆದುಕೊಂಡು, ಲೋಕಾಯುಕ್ತಕ್ಕೆ ವಹಿಸಿಕೊಡಬೇಕೆಂದು ಇದೆ ಅದು ಸೆಕ್ಷನ್ 7ರಲ್ಲಿ ಹೇಳಿದೆ ಲೋಕಾಯುಕ್ತಕ್ಕೆ ಹೇಳಿದೆ ಲೋಕಾಯುಕ್ತಕ್ಕೆ what is the power? ಲೋಕಾಯುಕ್ತದವರು ತನಿಖೆಯನ್ನು ಮಾಡುತ್ತಾರೆ, ಅವರು ತನಿಖೆಯನ್ನು ಮಾಡಿ ಅಂತಿಮವಾಗಿ ಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೆ ಅದರ ಬಗ್ಗೆ ನಾವು ಪ್ರಾರಂಭದಿಂದ ಹೇಲುತ್ತಿದ್ದೇವೆ ನಮ್ಮ ಒಂದು ಪಕ್ಷದ ಪರವಾಗಿ ಈ ಸದನದಲ್ಲಿ ಇವತ್ತು ನಾನು ಪದೇಪದೇ ಹೇಳುತ್ತಿದ್ದೇನೆ ನಾವು 150 ಕೋಟಿ ರೂಪಾಯಿಗಳ ಹಗರಣವನ್ನು ಮಾಡಲಿಲ್ಲ ಮಿತ್ರಪಕ್ಷಗಳ ಅಧ್ಯಕ್ಷರು ಮಾಡಿದ್ದಾರೆ ಅವರು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ ದೆಹಲಿಗೆ ಹೋಗಿ ಹೇಳಿದ್ದಾರೆ ಅಲ್ಲಿ ಕೂಡ press conference ಮಾಡಿ ಹೇಳಿದ್ದಾರೆ ಇಲ್ಲಿ ಹೊರಗಡೆ press conference ಮಾಡಿದ್ದಾರೆ ಇವತ್ತು ರಾಜ್ಯದ ಒಬ್ಬ ಮುಖ್ಯಮಂತ್ರಿಯ ಮೇಲೆ ಈ ತರಹದ ಆಪಾದನೆಯು ಬಂದರೆ ಇದನ್ನು ನಾವು ಕೇಳಬೇಕಾಗುತ್ತದೆ ಅವರು ಇವತ್ತು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಲೇಬೇಕಾಗುತ್ತದೆ ನಾವು ಆಪಾದನೆ ಮಾಡಿದಾಗ ಅವರು ಹೇಳಿದರು, ಈಗ ಹೈಕೋರ್ಟಿನ ಒಬ್ಬ ನ್ಯಾಯಾಧೀಶರನ್ನು ನೇಮಿಸಿ, ಭಟ್ ಕಮೀಷನ್, ರಚನೆ ಮಾಡುತ್ತೇನೆಂದು ಹೇಳಿದರು ಇದರ ಬಗ್ಗೆ ಭಟ್ ಕಮಿಷನ್‌ರವರು ಸಂಪೂರ್ಣವಾದಂತಹ ತನಿಖೆಯನ್ನು ಮಾಡಿದ್ದಾರೆ ನಾವು ಏನು ಇದನ್ನು ಸಿಬಿಐಗೆ ವಹಿಸಿಕೊದಬೇಕೆಂಬ ಮಾತನ್ನು ಹೇಳಿದ್ದೇವೆ ಇವತ್ತು ಅದೇ ಹೈಕೋರ್ಟ್ ಜಡ್ಜ್ ಏನು ನಿಮ್ಮ ಅಯೋಗದ ಅಧ್ಯಕ್ಷರು ಇದ್ದಾರೆ, ಅವರು ಹೇಳಿದ್ದಾರೆ, ನನಗೆ ಸಿಬಿಐದು ಸಹಾಯ ಬೇಕೆಂದು ಅವರೇ ಹೇಳಿದ್ದಾರೆ ಇವತ್ತು ರಾಜಕೀಯ ಬೆರೆಸುವಂತಹ ಕೆಲಸವನ್ನು ಮಾಡಲಿಕ್ಕೆ ಕಾಂಗ್ರೆಸ್ಸಿನವರು ಹೊರಟಿಲ್ಲ ಇದರ ಬಗ್ಗೆ ಸಿಬಿಐ ತನಿಖೆಯಾಗಬೇಕು ಇವತ್ತು ರಾಜ್ಯ ಪೊಲಿಸರಿಂದಲೂ ಕೂಡ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಈ ಒಂದು ರಾಜ್ಯದ ಅಧಿಕಾರಿಗಳಿಂದಲೂ ಕೂಡ ಮಾಡುವುದಕ್ಕೆ ಆಗುವುದಿಲ್ಲ ನಮ್ಮ ವಾದ ಏನಿತ್ತೋ, ಅದೇ ವಾದವನ್ನು ಭಟ್‌ರವರು ಹೇಳಿದ್ದಾರೆ ಕಮಿಷನ್ ನೇಮಕ ಮಾಡಿ 4-5 ತಿಂಗಳಿನಲ್ಲಿ ಭಟ್‌ರವರು ನೊಂದ ಮನಸ್ಸಿನಿಂದ ನಮಗೆ ರಾಜ್ಯ ಸರ್ಕಾರದಿಂದ ಯಾವ ಸಹಕಾರವು ಸಿಗುತ್ತಿಲ್ಲ ಯಾವ ಇಲಾಖೆಯೂ ಕೂಡ ನಮಗೆ ಸಂಪೂರ್ಣವಾದ ವರದಿಯನ್ನು ಕೊಡುತ್ತಿಲ್ಲ ರಾಜ್ಯ ಪೋಲಿಸರಿಂದಲೂ ಕೂಡ ನಮಗೆ ಸಹಾಯ ಸಿಗುತ್ತಿಲ್ಲ ಅದಕ್ಕಾಗಿ ಸಿಬಿಐನವರಿಗೆ ವಹಿಸಿಕೊಟ್ಟರೆ ಅವರಿಂದ ಸಹಾಯ ಸಿಗುತ್ತದೆ ಇವತ್ತು ಏನಾಗಿದೆ, ಸಾಕಷ್ಟು ಒತ್ತಡವಿದೆ ಚರ್ಚೆಯಾಗಿದೆ, ಇವತ್ತು ರಾಜ್ಯದ ಮುಖ್ಯಮಂತ್ರಿಯ ಮೇಲೆ

ಆಪಾದನೆಯನ್ನು ಮಾಡಿದರೆ, ಇವತ್ತು ಭಟ್‌ರವರು ನೊಂದ ಮನಸ್ಸಿನಿಂದ ಸಹಾಯ ಸಿಗುತ್ತಿಲ್ಲವೆಂಬ ಮಾತನ್ನು ಹೇಳಿದ್ದಾರೆ ಅವರು extensionನ್ನು ಸಹ ಕೇಳಿದ್ದಾರೆ ಇವತ್ತು ಮಾನ್ಯ ದೇಶಪಾಂಡೆಯವರು ಹೇಳಿರುವುದರ ಬಗ್ಗೆ ನಾನು ಕೂಡ ಒಪ್ಪುತ್ತೇನೆ ನಮ್ಮ ಕಾಲದಲ್ಲಿ ಸದಾಶಿವ ಅಯೋಗವನ್ನು ಮಾಡಿದ್ದೆವು ಅವರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಗ್ಗೆ ಒಂದು ವರದಿಯನ್ನು ಕೊಡುವ ಬಗ್ಗೆ ಮಾಡಿದ್ದೆವು ನಾವು ಸಾಕಷ್ಟು ಕಮಿಷನ್‌ಗಳನ್ನು ಸರ್ಕಾರದ ವತಿಯಿಂದ ನೇಮಕ ಮಾಡಿದ್ದೇವೆ ಎಲ್ಲಿ ಅವರಿಗೆ ಸಮಯ ಬೇಕಾಗಿದೆ, ಅವರು ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೇಳಿದಾಗ ನಾವು extension ಕೊಟ್ಟಿದ್ದೇವೆ ಇವತ್ತು ಒಬ್ಬ ಭಟ್ ಕಮಿಷನ್ ಒಂದು sensitive ವಿಷಯವಾಗಿ ತನಿಖೆಯನ್ನು ಮಾಡುವಂತಹ ರೀತಿಯಲ್ಲಿ ಅವರು ನಮಗೆ ಕಾಲಾವಕಾಶ ಬೇಕೆಂದು ಸರ್ಕಾರಕ್ಕೆ ಕೇಳಿದಾಗ ಸ್ವಲ್ಪ ಮುಖ್ಯಮಂತ್ರಿಗಳಿಗೆ ಚುರುಕು ಮುಟ್ಟಿದೆ ಏನೋ ಒಂದು ತರಹದ ಅವರಲ್ಲಿಯೂ ಕೂಡ he as lost confidence ಇವತ್ತು ಇದರ ಬಗ್ಗೆ ಹೇಳಲೇಬೇಕು ಅಗಲಿ, ರಾಮಸ್ವಾಮಿಯವರು ಹೇಳಿದರು, ನಮ್ಮ ಬಾಲಕೃಷ್ಣರವರು ಹೇಳುತ್ತಿದ್ದಾರೆ, ಮೊದಲು ಇದು ಹೊರಬರಲಿ ಕರ್ನಾಟಕ ರಾಜ್ಯದಲ್ಲಿ ಯಾರ್‍ಯಾರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ, ಯಾರ್‍ಯಾರ ಕಾಲದಲ್ಲಿ ಏನಾಗಿದೆ, ಅವೆಲ್ಲವು ಸದನದಲ್ಲಿ ಬರಲಿ ನಾವು ಸಿದ್ಧರಿದ್ದೇವೆ, ಎಲ್ಲಾ ಕಾಲದಲ್ಲಿ ನಡೆದಿರುವುದರ ಬಗ್ಗೆ ತನಿಖೆಗೆ ನಾವು ಸಿದ್ಧರಿದ್ದೇವೆ ಇದು ಯಾವಾಗಲೂ ಕೂಡ we are in the public life ಸಾರ್ವಜನಿಕ ಜೀವನದಲ್ಲಿ ನಾವು ಯಾವಾಗ ಇಲ್ಲಿ ಬಂದು ಕುಳಿತಿದ್ದೇವೆ, ಇಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇವೆ ಯಾವಾಗ ನಾವು ವಿರೋಧಪಕ್ಷದಲ್ಲಿ ಕುಳಿತು ಆರೋಪವನ್ನು ಮಾಡುತ್ತಿದ್ದೇವೆ, ನಾವು ವಿರೋಧಪಕ್ಷದಲ್ಲಿ ಕುಳಿತು ಏನೋ ಮನಬಂದಂತೆ ಆರೊಪವನ್ನು ಮಾಡುವುದಲ್ಲ, ರಾಜ್ಯದ ಜನರ ಮನಸ್ಸಿನಲ್ಲಿರುವಂತಹ ಭಾವನೆಗಳಿಗೆ ಪ್ರತಿಸ್ಪಂದಿಸುವುದು ನಮ್ಮ ಅದ್ಯ ಕರ್ತವ್ಯವಾಗಿದೆ ನಾವು 1975ರಿಂದಲೂ ಇಲ್ಲಿ ಇದ್ದೇವೆ, ಯಾವ ರೀತಿಯಾಗಿ ಬೇರೆ ಒಬ್ಬರ ಮೇಲೆ ಹಲ್ಲೆಯಾಯಿತು ಆರೋಪಗಳು ಅದವು, ತದನಂತರ ಕರ್ನಾಟಕ ರಾಜ್ಯದ ಇತಿಹಾಸದ ಪುಟದಲ್ಲಿ ಎಷ್ಟೆಷ್ಟು progressive reactionary forces ಒಂದಾಗಿ ದೇವರಾಜ ಅರಸುರವರ ಆಡಳಿತವನ್ನು ಕೂಡ ನಾವು ನೋಡಿದ್ದೇವೆ ಮಾನ್ಯ ಪ್ರಕಾಶ್‌ರವರು ಕೂಡ ನೋಡಿದ್ದಾರೆ ಅವರು ಕೂಡ ಲೋಹಿಯಾವಾದಿಗಳಾಗಿದ್ದರು ಇವತ್ತು ಸ್ವಲ್ಪ ಸರ್ಕಾರದಲ್ಲಿ ಇಕ್ಕಟ್ಟಿಗೆ ಸಿಗಲಿಲ್ಲ ಇವತ್ತು ನಾವು ಏನು ಹೇಳುತ್ತಿದ್ದೇವೆ, ನಮ್ಮ ಸರ್ಕಾರ ಭದ್ರವಾಗಿದೆ ಎಂದು ತಾವು ಹೇಳುತ್ತಿರಿ, ನಮ್ಮ ಸರ್ಕಾರದಲ್ಲಿ ಯಾವ ರೀತಿಯಾದ ವೈಮನಸ್ಸು ಇಲ್ಲ ಇವತ್ತು ನಮ್ಮ ಬಜೆಟ್ ಸರಿಯಾಗಿದೆ ಇವತ್ತು ಬಜೆಟ್ ಮಂಡನೆಯಾದ ಮರುದಿವಸವು ಕೂಡ, ಇವತ್ತು ಭಿನ್ನಾಭಿಪ್ರಾಯಗಳನ್ನು ಮಂತ್ರಿಗಳು ಭಿನ್ನಾಭಿಪ್ರಾಯಗಳನ್ನು ಯಾವ ರೀತಿಯಾಗಿ ಮಾಡುತ್ತಿದ್ದಾರೆ, ಇದನ್ನು ಮಾನ್ಯ

ಮುಖ್ಯಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು ಇವತ್ತು ಮುಖ್ಯಮಂತ್ರಿಗಳ ಮೇಲೆ ಆಪಾದನೆ ಬಂದರೆ, ಜನಾರ್ದನರೆಡ್ಡಿಯವರನ್ನು ಕರೆಸಿ you are our party president in Bellary District, ನೀವು ಯಾರು ಅಪಾದನೆಯನ್ನು ಮಾಡುವುದಕ್ಕೆ ಎಂದು ಹೇಳಬೇಕಾಗಿತ್ತು ರಾಜಕಾರಣ ನಡೆಯುತ್ತಿದೆ, ಅದನ್ನು ನಾನು ಬಳಸುವುದಕ್ಕೆ ಹೋಗುವುದಿಲ್ಲ ರಾಜಕಾರಣವು ಕೂಡ ಸಮ್ಮಿಶ್ರ ಸರ್ಕಾರದಲ್ಲಿ ಮಾಡುತ್ತದೆ ಸಮ್ಮಿಶ್ರ ಸರ್ಕಾರ ಮುಖ್ಯಮಂತ್ರಿಯಾಗಿ ನನಗೆ ಸಿಕ್ಕಿರುವಂತಹ ಏನೊಂದು ಕಿರುಕುಳ ಇದೆ, ವೇದನೆ ಇದೆ, ಅದನ್ನು ನಾನು ಬಹಿರಂಗ ಮಾಡುವುದಕ್ಕೆ ಹೋಗುವುದಿಲ್ಲ ಇದನ್ನು ನಾನು ನೋಡಿದ್ದೇನೆ, 20 ತಿಂಗಳು ಆಗಿದೆ, ಅದಕ್ಕೆ ಅವರಿಗೂ ಕೂಡ ಸಮ್ಮಿಶ್ರ ಸರ್ಕಾರದಲ್ಲಿ ಇವತ್ತಿನ ದಿವಸ ಸಾಕಷ್ಟು ಮಿತ್ರಪಕ್ಷಗಳಿಂದ ತೊಂದರೆ ಇದೆ

ಶ್ರೀ ಬಾಲಕೃಷ್ಣ ತಾವು ಮುಖ್ಯಮಂತ್ರಿಗಳಾಗಿದ್ದಾಗ ಕಿರುಕುಳ ಇತ್ತು ಎಂದು ಅವತ್ತು ಹೇಳಲಿಲ್ಲ ಇವತ್ತು ಹೇಳುತ್ತಿದ್ದೀರಿ

ಶ್ರೀ ಎನ್ ಧರ್ಮಸಿಂಗ್ ಇವತ್ತಿನ ದಿವಸ ಗಣಿ ಹಗರಣವು ಬಂತು ಅದನ್ನು ನಾವು ಹೇಳಿದ್ದೇವಾ? ನಿಮ್ಮ ಚೆನ್ನಿಗಪ್ಪನವರು ಹೇಳಿದ ರೀತಿ ಹೆಲಿಕಾಪ್ಟರ್ ನಲ್ಲಿ ಹೋಗಿ, 25 ಸಾವಿರ illegal mining ಆಗುತ್ತಿದೆ ಎಂದು ಹೇಳಿದ್ದೇವಾ? ಶ್ರೀ ಮಾನ್ಯ ಅಧ್ಯಕ್ಷರೇ, ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನ ಪಿ ಸಿ ಎಫ್ ಅನ್ನು ಕೂಡ ಕೊಟ್ಟಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಬಹಳ ಅಲ್ಪ ಸಮಯದಲ್ಲಿ ಇದರ ಬಗ್ಗೆ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ ಮತ್ತು 20,000-00 ಕೋಟಿ ರೂಪಾಯಿಗಳ ಅವ್ಯವಹಾರವನ್ನು ನಾನು ಬಹಿರಂಗಪಡಿಸುತ್ತೇನೆಂದು ಹೇಳಿದ್ದಿರಿ ಎಲ್ಲಿ ಹೋಯಿತು ಅದು? ಇವತ್ತು ನೀವು ರಾಜ್ಯದ ಮುಖ್ಯಮಂತ್ರಿಗಳಾಗಿ 13 ತಿಂಗಳುಗಳಾಯಿತು, ಸುಮ್ಮನೆ ಮಾತನಾಡಿ ಹೋಗತಕ್ಕಂಥದ್ದಲ್ಲ, 13 ತಿಂಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಏನು ಆಡಳಿತ ನಡೆಸುತ್ತಿದ್ದೀರಿ ಯಾವ ಬಾಬತ್ತಿಗೆ, ಯಾವ ಅಭಿವೃದ್ಧಿಗೆ ಏನು ಕೆಲಸ ಆಗಿದೆ ಎನ್ನತಕ್ಕಂಥದ್ದನ್ನು ಇವತ್ತು ಹೇಳಬೇಕಾಗುತ್ತದೆ, ಇವತ್ತು ನೀವು ಇನ್ನು ಆರೋಪದಲ್ಲಿದ್ದಿರಿ ಇವತ್ತು ನಮ್ಮ ನೈಸ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕೂಡ ದಂಡ ಹಾಕುವ ರೀತಿಯಲ್ಲಿ ಛೀಮಾರಿ ಹಾಕಿದೆ ಈ ರೀತಿ ಯಾವ ಕಾಲದಲ್ಲಿಯೂ ಕೂಡ ಆಗಿಲ್ಲ ನಾವು ಮಾಡಿದ್ದೆವು, ಯಾರಿಗೋ ಉಳಿಸಬೇಕಾಗಿತ್ತು ಅವರಿಗೆ ಉಳಿಸಿದೆವು ನಾವು ಮಾತಿನ ಮಂದಿ ಇದ್ದೇವೆ, ನಾವು ಮಾತು ಕೊಟ್ಟಂಥ ರೀತಿಯಲ್ಲಿ ನೈಸ್ ವಿಚಾರದಲ್ಲಿಯೂ ಕೂಡ ಬಹಿರಂಗ ಚರ್ಚೆಗೆ ಸಿದ್ಧರಿದ್ದೇವೆ ಮಾನ್ಯ ರಾಜಣ್ಣನವರೇ, ನಮಗೇನೂ ಗೊತ್ತಿಲ್ಲವೆಂದು ತಿಳಿದು ಸುಮ್ಮನೆ ಹಗುರವಾಗಿ ಮಾತನಾಡಬೇ

ಶ್ರೀ ಕೆ ಎನ್ ರಾಜಣ್ಣ(ಕ್ಯಾತಸಂದ್ರ) – ಸರ್, ಒಂದು ನಿಮಿಷ ನಾನು ಯಾವ ವಿಚಾರದಲ್ಲಿಯೂ ಕೂಡ ಹಗುರವಾಗಿ ಮಾತನಾಡುತ್ತೇನೆಂದು ನೀವು ಭಾವನೆ ಮಾಡಿಕೊಳ್ಳಬೇಡಿ ಏಕೆಂದರೆ ನೀವು ನಾವು ಜೊತೆಯಲ್ಲಿ 25 ವರ್ಷದಿಂದ ಇದ್ದೇವೆ

ನೀವು ಯಾವ ರೀತಿ ಮಾತನಾಡುತ್ತೀರಿ ನನಗೆ ಗೊತ್ತು ನಾನು ಯಾವ ರೀತಿ ಮಾಡನಾಡುತ್ತೇನೆಂಬುದು ನಿಮಗೆ ಗೊತ್ತು ಆದ್ದರಿಂದ ನಾನು ಹಗುರವಾಗಿ ಮಾಡನಾಡುವುದಿಲ್ಲ, ನೀವು ಹಗುರವಾಗಿ ಮಾತನಾಡಬೇಡಿ

ಶ್ರೀ ಎನ್ ಧರಂಸಿಂಗ್ – ಇಲ್ಲ, ನೀವು ಏನೇನೊ ಬಿಡುತ್ತಿದ್ದಿರಿ ಅದಕ್ಕೆ ಹಾಗೆ ಬಿಡಬೇಡಿ ಎಂದು ಹೇಳಿದೆ ಈಗ ಮಾನ್ಯ ರೆಡ್ಡಿಯವರು ಕೂಡ ಆರೋಪ ಮಾಡಿದರು, ಆ ಆರೋಪವನ್ನು ಸದನದಲ್ಲಿ ನೇರವಾಗಿ ಪ್ರಸ್ತಾಪ ಮಾಡಿದ್ದೇವೆ ಮುಖ್ಯಮಂತ್ರಿಗಳಾದ ಶ್ರೀಮಾನ್ ಕುಮಾರಸ್ವಾಮಿಯವರ ಮೇಲೆ ಲಂಚದ ಅಪಾದನೆ, ಆಪಾದನೆಯು ಮುಖ್ಯಮಂತ್ರಿಯ ವಿರುದ್ಧವೇ ಇರುವುದರಿಂದ ಸಾರ್ವಜನಿಕರು ನಂಬುವಂಥ ತನಿಖೆ ಅಗತ್ಯವಿರುವುದರಿಂದ, ನಿಷ್ಪಕ್ಷಪಾತ ಮತ್ತು ನಿರ್ಭಯ ತನಿಖೆಗಾಗಿ ಸಿ ಬಿ ಐ ಅಧಿಕಾರಿಗಳ ನೆರವು ಕೋರಿ, ಭಟ್‌ರವರು ಪತ್ರ ಬರೆದಿದ್ದಾರೆ ಭಟ್‌ರವರ ಪತ್ರದಲ್ಲಿದೆ, ಇವತ್ತು ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಹಿರಿಯ ಮಂತ್ರಿಗಳ ಮೇಲೆ ಆಪಾದನೆ ಇದ್ದ ಕಾರಣ ಇವತ್ತು ಸಿ ಬಿ ಐ ನಿಂದ ನನಗೆ ಸಹಾಯ ಬೇಕು ಎಂದು ಅವರು ಹೇಳಿದ್ದಾರೆ ಶ್ರೀ ಭಟ್ ಅವರು ನೊಂದ ಮನಸ್ಸಿನಿಂದ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಸರ್ಕಾರಕ್ಕೆ ಪತ್ರ ಬರೆದ ಮೇಲೆ ಸೌಜನ್ಯತೆ ಇಲ್ಲ, ಇವತ್ತು ಮುಖ್ಯಮಂತ್ರಿಗಳಾಗಲಿ, ಗೃಹ ಸಚಿವರಾಗಲಿ, ಭಟ್ ಅವರನ್ನು ಏಕೆ ಭಟ್‌ರವರೇ, ಏನಾಗಿದೆ, ನಿಮ್ಮ ಆಯೋಗದ ಕೆಲಸ ಕಾರ್ಯಗಳಲ್ಲಿ ಏನು ಅಡತಡೆಗಳಿವೆ ಎಂದು ಸರ್ಕಾರದಿಂದ ಏನು ನಿಮಗೆ ಸಹಕಾರ ಬರಲಿಲ್ಲವೆಂದು ಕೇಳಲಿಕ್ಕಾಗಲಿಲ್ಲವೇ? ಇವತ್ತು ಶ್ರೀ ವಿ ಎಲ್ ಭಟ್‌ರವರಿಗೆ ಸರ್ಕಾರದ ಕಡೆಯಿಂದ ಎಲ್ಲಾ ರೀತಿಯ ನೆರವನ್ನು ನೀವು ಕೊಟ್ಟಿದ್ದರೆ ಸರಿಯಾಗುತ್ತಿತ್ತು ಇವತ್ತು ರಾಜ್ಯದ ಇತಿಹಾಸದಲ್ಲಿ, ಕರ್ನಾಟಕದ ರಾಜ್ಯದಲ್ಲಿ ಒಂದು ಕಮಿಷನ್ ಅನ್ನು ನೇಮಕ ಮಾಡಿ ಅದೇ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳ ನೇತೃತ್ವ ಇದ್ದಂಥ ಸರ್ಕಾರ ಆ ಭಟ್ ಕಮಿಷನ್ ರದ್ದುಪಡಿಸುವಂಥ ರೀತಿಯಲ್ಲಿ ಏನು ಮಾಡಿದ್ದಾರೆ ಇಡೀ ನ್ಯಾಯಾಂಗಕ್ಕೆ ಇವತ್ತು ಅವಮಾನ ಮಾಡಿದಂತಾಗಿದೆ This is a insult to the judiciary ಇದು ಕರ್ನಾಟಕ ರಾಜ್ಯದಲ್ಲಿ ಆಗಿದೆ ಒಬ್ಬ ರಿಟೈರ್ಡ್ ಹೈಕೋರ್ಟ ಜಡ್ಜ್ ಅನ್ನು ಸಮಗ್ರವಾಗಿ ತನಿಖೆ ಮಾಡುವ ರೀತಿಯಲ್ಲಿ, ಆತನಿಗೆ ಅವಮಾನ ಮಾಡತಕ್ಕಂಥ ಪ್ರಸಂಗ ಏನಿದೆ, ಅದಕ್ಕೆ ನಾವು ಇವತ್ತು ತಮ್ಮ ಮೂಲಕ ಸಕಾರಕ್ಕೆ ಕೇಳುತ್ತಿದ್ದೇವೆ ಹೀಗೆ ಕೇಳತಕ್ಕಂಥ ಹಕ್ಕು ನಮಗಿದೆ ಆ ಹಕ್ಕನ್ನು ಯಾರೂ ತೆಗೆದುಕೊಳ್ಳಲಿಕ್ಕಾಗುವುದಿಲ್ಲ ನಾವೂ ಕೂಡ 35 ವರ್ಷಗಳ ಕಾಲ ಒಂದೇ ಕ್ಷೇತ್ರದಿಂದ ಪ್ರತಿನಿಧಿಸುತ್ತಿದ್ದೇವೆ That requires political credibility in the political life ನಾವು ಅದನ್ನು ಮಾಡುತ್ತಿದ್ದೇವೆ, ಇವತ್ತು ವಿರೋಧ ಪಕ್ಷದಲ್ಲಿದ್ದು ಇಂಥ ಒಂದು ಘಟನೆ ನಡೆದಾಗ ಇದು ನಮ್ಮ ಕರ್ತವ್ಯವಾಗುತ್ತದೆ ಈಗಾಗಲೇ ಮಾನ್ಯ ಪ್ರಕಾಶ್‌ರವರು ಹೇಳಿದರು, ನಮಗೆ ಈಗಾಗಲೇ ಇದರಲ್ಲಿ ಸಾಕಷ್ಟು ಕೂಡ

technicalities ಇದೆ ಇವತ್ತು ಇದಕ್ಕೆ ಸಾಕಷ್ಟು ಚರ್ಚೆಗೆ ಅವಕಾಶ ಕೊಡಬಾರದು ಎನ್ನುವ ರೀತಿಯಲ್ಲಿ ಆದರು ಕೂಡ ಮುಖ್ಯಮಂತ್ರಿಗಳು ಹೇಳಿದ್ದಾರೆ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕು ನೀವು ಒಪ್ಪಿದ್ದಿರಿ ಇದರ ಬಗ್ಗೆ ಜನರ ಮನಸಿನಲ್ಲಿ ಒಂದು ರೀತಿಯ ಗೊಂದಲ ಇದೆ ನಾವು ಕೂಡ ಕಾಂಗ್ರೆಸ್ ಪಕ್ಷದ ಪರವಾಗಿ ಪ್ರತಿಯೊಂದು ಬ್ಲಾಕ್‌ನಲ್ಲಿ ಪ್ರತಿಭಟನೆ ಮಾಡಿದ್ದೇವೆ ಇವತ್ತು ಮುಖ್ಯಮಂತ್ರಿಗಳ ಮೇಲೆ ಇರತಕ್ಕಂಥ ಆಪಾದನೆಗಳಿಗೂ ಉಲ್ಲೇಖ ಹೇಳಿದ್ದೇವೆ Ours is a political party, national party ಇವತ್ತು ನಾವೆಲ್ಲರೂ ಕೂಡ ಹೇಳಿದ್ದೇವೆ ಹೇಳಿದ ಮೇಲೆ ಇವತ್ತಿನ ದಿವಸ ಭಟ್ ಆಯೋಗವನ್ನು ರದ್ದುಪಡಿಸುವ ರೀತಿಯೇನಿದೆ, ಇದು ಯಾವ ಸರ್ಕಾರಕ್ಕೂ ಶೋಭೆ ತರಕತಕ್ಕಂಥದಲ್ಲ ಸರ್ಕಾರ ಬರುತ್ತದೆ, ಹೋಗುತ್ತದ, ಮನುಷ್ಯನ ಜೀವನದಲ್ಲಿ, ಸಾರ್ವಜನಿಕ ಜೀವನದಲ್ಲಿ, ರಾಜಕೀಯ ಜೀವನದಲ್ಲಿ, ಇಂತಹ ಎಷ್ಟೋ ಘಟನೆಗಳು ಬರುತ್ತವೆ ಆದರೆ ಯಾವ ರೀತಿಯಾಗಿ ನಾವು ನಡೆಸಿಕೊಂಡು ಹೋಗುತ್ತೇವೆ, ಅದು ಬಹಳ ದಿವಸ ಇರುತ್ತದೆ, ಅದಕ್ಕೆ ನಾವು ಕೇಳುತ್ತಿದ್ದೇವೆ, ಈ ರೀತಿಯ ಅವಮಾನ ಮಾಡುವ ಅವಶ್ಯಕತೆ ಏನಿತ್ತು? ಭಟ್‌ರವರು ರಾಜ್ಯ ಸರ್ಕಾರಕ್ಕೆ ಬರೆದಂಥ ಪತ್ರಗಳೇನು? ಅವರು ಪ್ರತಿಯೊಂದು ಇಲಾಖೆಗೆ ಬರೆದಿದಾರೆ, you have constituted a comission ಭಟ್‌ರವರ ಛೇರ್ಮನ್‌ಷಿಪ್‌ನಲ್ಲಿ ಇವತ್ತು ಯಾರೂ ಕೂಡ ನಿಮ್ಮ ಇಲಾಖೆಯ ಅಧಿಕಾರಿಗಳು ಅವರ ಪತ್ರಕ್ಕೆ ಉತ್ತರ ಕೊಡುವಂಥ ಸೌಜನ್ಯತೆ ತೋರಿಸುತ್ತಿಲ್ಲ ಪೋಲೀಸ್ ಇಲಾಖೆಯವರ ಸಹಕಾರ ಇಲ್ಲ, ಅರಣ್ಯ ಇಲಾಖೆಯವರ ಸಹಕಾರ ಇಲ್ಲ ಹಾಗಾಗಿ ಆ ಕಮಿಷನ್‌ಗೆ ಇವತ್ತಿನ ದಿವಸ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸಲಿಕ್ಕೆ ಸಾಧ್ಯವಾಗಿಲ್ಲ ಇವೆಲ್ಲದರ ಕಡೆಗೆ public opinion, ಇದೇನು ಸರ್ಕಾರ ಎನ್ನುವಂಥ ರೀತಿಯಲ್ಲಿ ಎಲ್ಲಾ ಕಡೆಯಲ್ಲಿಯೂ talks ನಡೆಯುತ್ತಿದೆ ಇವತ್ತು ನಾನು ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ You are the Chief Minister of the State You have got greater responsibility ಇಂಥ ಸಂದರ್ಭದಲ್ಲಿ ಇವತ್ತು ಧೈರ್ಯವಾಗಿ ಏನು ನಿರ್ಣಯವನ್ನು ತಾವು ತೆಗೆದುಕೊಳ್ಳುತ್ತೀರಿ, ಏನು ಮಾಡುತ್ತೀರಿ ಎನ್ನುವ ಬಗ್ಗೆ ಕೂಡ ಸದನಕ್ಕೆ ತಾವು ತಿಳಿಸಬೇಕು ನಮಗೆಲ್ಲಾ ಗೊತ್ತಿದೆ ನಾನು ಎಲ್ಲಾ ವಿಷಯಗಳನ್ನು ಬಿಚ್ಚುತ್ತೇನೆ ಎಂದು ಹೇಳಿ 14 ತಿಂಗಳುಗಳು ಆಯಿತು, ಯಾವಾಗ ಬಿಚ್ಚುತ್ತಾರೋ ಗೊತ್ತಿಲ್ಲ ಗಣಿ ಹಗರಣದ ಬಗ್ಗೆ ಕೂಡ ನನಗೆಲ್ಲಾ ಗೊತ್ತಿದೆ ಎನ್ನುವ ಮಾತನ್ನು ಸಾರಾಸಗಟಾಗಿ ಹೇಳುತ್ತಿದ್ದಾರೆ ಯಾವಾಗಲೂ ಕೂಡ ತಾವು ಧೈರ್ಯ ತೋರಿಸಬೇಕು ಇವತ್ತು ಎಲ್ಲಿ ಏನಾಗಿದೆಯೆನ್ನವುದನ್ನು ಕೂಡ ತಾವು ಸ್ಪಷ್ಟವಾಗಿ ಹೇಳತಕ್ಕಂಥ ಪ್ರಯತ್ನವನ್ನು ಮಾಡಬೇಕು ಇವತ್ತು ಕೇವಲ ಬಳ್ಳಾರಿ ಜಿಲ್ಲೆಯಲ್ಲಲ್ಲ, ಬಳ್ಳಾರಿ ಜಿಲ್ಲೆಯಿಂದ ಪ್ರಾರಂಭವಾದಂಥ ಲಂಚ ಹಗರಣದ ಪ್ರಕರಣ, ವಿಧಾನಸಭೆಯಲ್ಲಿ ಪ್ರಸ್ತಾಪವಾಗಿ ದೆಹಲಿಯವರೆಗೆ ಹೋಗಿ ತಲುಪಿದೆ

ದೆಹಲಿಯಲ್ಲಿಯೂ ಕೂಡ ಇದರ ಬಗ್ಗೆ ಮಾತನಾಡುತ್ತಾರೆ ಮಾತನಾಡಿದ ಮೇಲೆ ಬೇರೆ ಶಾಸಕರು ನಿಮ್ಮ ಕಾಲದಲ್ಲಿಯೇನಾಯಿತು, ಮುಖ್ಯಮಂತ್ರಿಗಳ ಮೇಲೆ specific ಆಗಿ ಇರತಕ್ಕಂಥ ಆಪಾದನೆ ಕುರಿತು ಇವತ್ತು ಚರ್ಚೆಗೆ ಸಿದ್ಧರಾಗಿ ನಾವು ಬಂದಿದ್ದೇವೆ ಇದರ ಬಗ್ಗೆ ನಾವು ಕೇಳುತ್ತಿದ್ದೇವೆ, ಅದಕ್ಕೆ ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ Terms of referenceನಲ್ಲಿ, you have not mentioned 150 crores ಯಾವಾಗ terms of referenceನಲ್ಲಿ ಮೂಡಲಿಲ್ಲ, ನಾವು Legislature Party Meeting ನಲ್ಲಿ we have discussed it at length ಆಗ we took a decision, ಇವತ್ತು ಭಟ್ ಕಮಿಷನ್ ಬಂದ ಹಾಗೆ ನಾವು participate ಮಾಡಬಾರದು ಇದು ಕೇವಲ 150 ಕೋಟಿ ರೂಪಾಯಿಗಳ ಪ್ರಕರಣವನ್ನು ಸಿ ಬಿ ಐ ಗೆ ವಹಿಸಿಕೊಡಬೇಕಾಗಿತ್ತು, ಎನ್ನುವ ನಮ್ಮ ವಾದ ಏನಿತ್ತು, ಕೇವಲ ಇದು eye wash ಆಗಿದೆ ಅದಕ್ಕೆ ಹಾಗೆ ಮಾಡಿದೆವು ಇವತ್ತು ತಾವೇ ನೇಮಿಸಿದ ಆಯೋಗಕ್ಕೆ, ಸಹಕಾರವೂ ಕೊಡದೆ ಅವಧಿಯನ್ನು ವಿಸ್ತರಿಸದೆ, ರಾಜೀನಾಮೆಯನ್ನು ಸಹ ಅತ್ಯಂತ ಶೀಘ್ರವಾಗಿ ಅಂಗೀಕರಿಸಿ ಲೋಕಾಯುಕ್ತಕ್ಕೆ ವಹಿಸಿರುವುದು, ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಅವಮಾನ ಒಟ್ಟಾರೆ ಮುಖ್ಯಮಂತ್ರಿಗಳಿಗೆ ಗಾಬರಿಯಾಗಿರುವುದು ಸ್ಪಷ್ಟವಾಗಿದೆ ಇದು ನೈತಿಕತೆಯ ಅಧ ಪತನ ಇಡೀ ರಾಷ್ಟ್ರದಲ್ಲೇ ಇಂತಹ ನಿದರ್ಶನ ಇಲ್ಲವೆನ್ನುವ ಮಾತನ್ನು ಕೂಡ ಹೇಳಿದ್ದಾರೆ ಮುಖ್ಯಮಂತ್ರಿಗಳು ಎದುರುಗಡೆ ಕುಳಿತ್ತಿದ್ದಾರೆ ಅವರಿಗೆ ಹೇಳಲು ನಾನು ಪ್ರಯತ್ನ ಪಡುತ್ತೇನೆ ಅದಕ್ಕಾಗಿ ನಾವು ಇವತ್ತು ಗಣಿ ಲಂಚ ಪ್ರಕರಣ, ಶ್ರೀ ಯು ಎಲ್ ಭಟ್ ಅವರ ರಾಜೀನಾಮೆ, ಶ್ರೀ ಯು ಎಲ್ ಭಟ್ ರವರು ಸರ್ಕಾರಕ್ಕೆ ಬರೆದಂತಹ ಪ್ರತಿಯೊಂದು ಪತ್ರಗಳು ಮತ್ತು ಯಾವ ರೀತಿಯಾಗಿ ನಾನು ಮಂತ್ರಿಗಳ ಮೇಲೆ ತನಿಖೆ ಮಾಡಬೇಕೆನ್ನತಕ್ಕಂತಹ ವಿಷಯ, ಮತ್ತೆ ಇದರ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ ನಾವೇನು ಪ್ರಸ್ತಾಪ ಮಾಡಿದ್ದೇವೆ, ಅದಕ್ಕೆ ಪೂರ್ಣ ಪ್ರಮಾಣದಲ್ಲಿ ಚರ್ಚೆಯಾಗಬೇಕೆನ್ನತಕ್ಕಂತಹ ರೀತಿಯಲ್ಲಿ ಸದನದಲ್ಲಿ ಇವತ್ತಿನ ದಿವಸ ನಾನು ಹೇಳುತ್ತಿದ್ದೇನೆ ಇದಕ್ಕೆ ಬಹಳಷ್ಟು ವಿಷಯಗಳು ಇವೆ ಬಹಳಷ್ಟು ವಿಷಯಗಳು ಅಂದರೆ ಗಣಿ ಹಗರಣದ ಬಗ್ಗೆ ಯಾರ್‍ಯಾರ ಕಾಲದಲ್ಲಿ ಏನೇನು ಆಯಿತು ಎನ್ನತಕ್ಕಂತದ್ದು ನನ್ನ ಕಿವಿಗೆ ಬಿದ್ದಿದೆ ಆ ಬಗ್ಗೆ ಚರ್ಚೆಯಾಗಲಿ, ಅದಕ್ಕೂ ನಾವು ಸಿದ್ದರಿದ್ದೇವೆ ಇವತ್ತು ನಾವು ತಂದಂತಹ ನಿಲುವಳಿ ಸೂಚನೆ ಏನಿದೆ, ರಾಜ್ಯದ ಮುಖ್ಯಮಂತ್ರಿ ಮೇಲೆ ಇರತಕ್ಕಂತಹ ಆಪಾದನೆ ಎನಿದೆ, ಅದಕ್ಕೆ ನಾವು ಮೊದಲಿನಿಂದಲೂ ಕೂಡ ಪ್ರತಿಭಟನೆ ಮಾಡಿ well ನಲ್ಲಿ ಕುಳಿತಿದ್ದೇವೆ C B I ತನಿಖೆ ಇದಕ್ಕೆ ಉತ್ತರ, C B I ತನಿಖೆಯಿಂದಲೇ ನಮಗ ಸಂಪೂರ್ಣವಾದ ಒಂದು ಸ್ಪಷ್ಟತ ಬರುತ್ತದೆ, ಅವರು ಇದಕ್ಕೆ ಸರಿಯಾದ ರೀತಿಯಲ್ಲಿ ಉತ್ತರ ಕಂಡು

ಹಿಡಿಯುತ್ತಾರೆ ಎನ್ನತಕ್ಕಂತಹ ಮಾತನ್ನು ಹೇಳಿ, ತಾವು ಕೊಟ್ಟಂತಹ ಅವಕಾಶಕ್ಕೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎ ಕೃಷ್ಣಪ್ಪ ಮಾನ್ಯ ಅಧ್ಯಕ್ಷರೇ, ನಾಳೆ ತೆಗೆದುಕೊಳ್ಳಿ ನಾವೆಲ್ಲಾ ಮಾತನಾಡಬೇಕಾಗಿದೆ

ಅಧ್ಯಕ್ಷರು – ಈಗ ಮಾತನಾಡುವವರೆಲ್ಲ ಮಾತನಾಡಲಿ

ಶ್ರೀ ಎಂ ಪಿ ವೆಂಕಟೇಶ್ – ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯ ಇವತ್ತೆ ಚರ್ಚೆಯಾಗಲಿ ಬಹಳ ಮಹತ್ವವಾದ ವಿಷಯ, ಇವತ್ತೇ ಚರ್ಚೆಯಾಗಲಿ

(**ಗೊಂದಲ**)

ಶ್ರೀ ಎ ಕೃಷ್ಣಪ್ಪ – ಮಾನ್ಯ ಅಧ್ಯಕ್ಷರೇ, ತಮ್ಮ ಕೆಲಸ, ಸಿ ಎಂ ಕೆಲಸ ಎಲ್ಲಾ ಅವರಿಗೆ ಕೊಟ್ಟುಬಿಡಿ ಅವರೇ ಮಾಡಲಿ ಅವರಿಗೆ ಒಂದು portfolio ಮಾಡಿಕೊಟ್ಟು ಬಿಡಿ ಈತ dictator ಈ ಹೌಸ್‌ನಲ್ಲಿ, ಅವರೆಲ್ಲರ ಕೆಲಸವನ್ನು ನೀನೆ ಮಾಡಿಬಿಡು

ಶ್ರೀ ಹೆಚ್ ಸಿ ಬಾಲಕೃಷ್ಣ ಇವತ್ತೆ ಚರ್ಚೆಯಾಗಲಿ

ಶ್ರೀ ಆರ್ ವಿ ದೇಶಪಾಂಡೆ –(ಹಳಿಹಾಳ್) ಮಾನ್ಯ ಅಧ್ಯಕ್ಷರೇ, ನಾನು preliminary submission ಮಾಡುವಾಗ ಸರ್ಕಾರಕ್ಕೆ ಒಂದು ಮನವಿ ಮಾಡಿದೆ ಅದನ್ನು ಸರ್ಕಾರ ಒಪ್ಪಿಕೊಂಡಿದೆ, ಬಹಳ ಸಂತೋಷ ಈ ಬಗ್ಗೆ ಬೆಳಕು ಚೆಲ್ಲಬೇಕು ಅಂತ ಹೇಳಿ ಚರ್ಚೆಗೆ ಒಪ್ಪಿಕೊಂಡಿದ್ದೀರಿ ಅದಕ್ಕೆ ನಾನು ಅಭಿನಂದಿಸುತ್ತೇನೆ ಅದರೆ ನಾನು ಒಂದು ಮಾತು ಹೇಳಿದೆ ನಿಜವಾಗಿ ಚರ್ಚೆ ಪಾರದರ್ಶಕವಾಗಬೇಕು ನಿಜವಾದ ಸತ್ಯ ಏನು ಎಂದು ತಿಳಿದುಕೊಳ್ಳಬೇಕಾದರೆ, ಸರ್ಕಾರ ಮತ್ತು ಭಟ್ Commissionನಲ್ಲಿ ಏನು ಪತ್ರ ವ್ಯವಹಾರವಾಗಿದೆ ಅವುಗಳನ್ನು ಸದನದ ಮುಂದೆ ಇಟ್ಟರೆ ಒಳ್ಳೆಯದಾಗಬಹುದು ಎಂದು ನಾನು ಭಾವಿಸುತ್ತೇನೆ ತಾವು ಸದನದ ಮುಂಧೆ ಆ ಪತ್ರ ವ್ಯವಹಾರಗಳನ್ನು ಇಟ್ಟ ಮೇಲೆ, ಬೇಕಾದರೆ ನಾನು ಮಾತನಾಡುತ್ತೇನೆ ನಾನು ಹೇಳುವುದು ಆ ಪತ್ರ ವ್ಯವಹಾರ ಸರ್ಕಾರ ಮತ್ತು ಶ್ರೀ ಯು ಎಲ್ ಭಟ್ ನಡುವೆ ಎನು ಪತ್ರ ವ್ಯವಹಾರವಾಗಿದೆ ಅದನ್ನು ಇಡಿ ಅಂತ ನಾನು ಪತ್ರಿಕೆ ಆಧಾರ ಮಾಡಿ ಮಾತನಾಡಬಹುದು, ಆಗ ಅವರು ತಾವು ಪತ್ರಿಕೆ ಆಧಾರದ ಮೇಲೆ ಏಕೆ ಮಾತನಾಡುತ್ತೀರಿ ಎಂದು ಕೇಳಬಹುದು ಅವರು ನನಗೆ ಸರ್ಕಾರದಿಂದ cooperation ಸಿಕ್ಕಿಲ್ಲವೆಂದು ಹೇಳಿದ್ದಾರೆ ಹಾಗಾಗಿ ಆ ಪತ್ರ ವ್ಯವಹಾರ ನಮ್ಮ ಮುಂದೆ ಬಂದಾಗ, ಹೆಚ್ಚಿನ ಬೆಳಕು ಚೆಲ್ಲುವುದಕ್ಕೆ ಆ ಭಾಗದ ಸದಸ್ಯರಿಗೂ ಈ ಭಾಗದ ಸದಸ್ಯರಿಗೂ ಅನುಕೂಲವಾಗಬಹುದೆಂದು ನಾನು ಭಾವಿಸುತ್ತೇನೆ ಹಾಗಾಗಿ ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂದು ತಿಳಿದುಕೊಂಡ ನಂತರ ನಾನು ಮುಂದೆ ಮಾತನಾಡುವುದಕ್ಕೆ ಪ್ರಯತ್ನಪಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ convert ಮಾಡಿರುವುದರಿಂದ ಎಲ್ಲರೂ ಸಹಿ ಮಾಡಿರುವವರೇ ಮಾತನಾಡಬೇಕೆಂದು ಅಲ್ಲ ಯಾರು ಬೇಕಾದರೂ ಮಾತನಾಡಬಹುದು

ಶ್ರೀ ಆರ್ ವಿ ದೇಶಪಾಂಡೆ – ಚರ್ಚೆ ಮಾಡಬಹುದು, ನಾನು ಹೇಳುತ್ತಿರುವುದು ಆ ಪತ್ರ ವ್ಯವಹಾರ ಸರ್ಕಾರ ಮತ್ತು ಭಟ್ Commission ಜೊತೆ ಏನು ಪತ್ರ ವ್ಯವಹಾರವಾಯಿತಲ್ಲ ಆ ಪತ್ರ ವ್ಯವಹಾರವನ್ನು ತಾವು ಸದನದ ಮುಂದೆ ಇಟ್ಟರೆ ಒಳ್ಳೆಯದು

ಶ್ರೀ ಎಂ ಪಿ ಪ್ರಕಾಶ್ – ಉತ್ತರ ಕೊಡುವಾಗ ಹೇಳುತ್ತೇವೆ

ಶ್ರೀ ಆರ್ ವಿ ದೇಶಪಾಂಡೆ – ಅದು ನಮ್ಮ ಕೈಗೆ ಸಿಕ್ಕರೆ ಏನಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ – ತಾವು ಎಲ್ಲಾ ಪೂರ್ವ ಸಿದ್ದತೆ ಮಾಡಿಕೊಂಡು ಇವತ್ತು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ ಅದನ್ನು ಅಧ್ಯಕ್ಷರು ನಿಯಮ 69ಕ್ಕೆ convert ಮಾಡಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಗೃಹ ಸಚಿವರೆ, ಮಾನ್ಯ ಮುಖ್ಯಮಂತ್ರಿಗಳೇ, ಈಗ ನಾವೇನಾದರೂ ಪತ್ರಿಕೆ ಆಧಾರದ ಮೇಲೆ ಮಾತನಾಡಿದರೆ ಗಲಾಟೆಯಾಗುತ್ತದೆ "ಏನ್ ಸಾರ್ ನೀವು ಪತ್ರಿಕೆ ಆಧಾರದ ಮೇಲೆ ಮಾತನಾಡುತ್ತಿರಿ" ಅಂತ ಹಾಗಾಗಿ ತಾವು ಆ correspondence ಕೊಡಿ ತಾವು ಆ correspondence ಕೊಟ್ಟರೆ, ಮಾತನಾಡುವುದಕ್ಕೆ ನಮಗೂ ಅನುಕೂಲವಾಗುತ್ತದೆ ತಮಗೂ ಅನುಕೂಲವಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ – ತಾವು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಬಹುದು ನಾವು ಅದಕ್ಕೆ object ಮಾಡುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ – ಹಾಗಾದರೆ ನಾನು ಮಾತನಾಡುತ್ತೇನೆ ಈಗ ನಾನು ಮುಖ್ಯವಾಗಿ Bhat Commission ಗೆ ಸೀಮಿತವಾಗಿ ಮಾತನಾಡುತ್ತೇನೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ, ನಾವು Commission ನಿಂದ ನಿಜವಾದ ಸತ್ಯ ಬರುವುದಕ್ಕೆ ಸಾಧ್ಯವಿಲ್ಲ, ಇದನ್ನು ತಾವು C B I ಗೆ ಒಪ್ಪಿಸಿ ಎಂದು ಹೇಳಿದಾಗ, ಇಲ್ಲ Commission ನಿಂದಲೇ ನಿಜವಾದ ಸತ್ಯ ಹೊರಗೆ ಬರುವುದಕ್ಕೆ ಸಾಧ್ಯವೆಂದು ಹೇಳಿ ಸರ್ಕಾರ ಬಟ್ Commision ಅನ್ನು appoint ಮಾಡಿತು ಆದರೆ ತಾವು ಈ Commission ಅನ್ನು wind up ಮಾಡುವಾಗ ತಮ್ಮ ಸರ್ಕಾರಿ ಆದೇಶ 12 03 2007 ಇಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ ಅಂದರೆ

"Whereas the Opposition parties and the persons who have complained about irrigularities and illegalities in the mining field, refused to participate in the proceedings of the

Commission and boycotted the Commission, which resulted in the Commission being unable to function effectively Whereas, the Commission was not able to submit its interim report even after 7 1/2 months"

ಇದಕ್ಕೆ ಕಾರಣ ತಾವು ಏನು ಕೊಟ್ಟಿದ್ದೀರಿ ಅಂದರೆ ವಿರೋಧ ಪಕ್ಷದವರು ಸದಸ್ಯರು ಯಾರು complaint ಮಾಡಿದ್ದರು ಅವರು boycott ಮಾಡಿದರು, ಅದಕ್ಕೆ ನಾವು commission ಅನ್ನು wind up ಮಾಡಿದ್ದೇವೆಂದು ಹೇಳಿದಿರಿ ನಾವು ಮುಂಚೆಯೇ ಹೇಳಿದ್ದೇವೆ, ಈ ಸದನದಲ್ಲಿ ಹೇಳಿದ್ದೇವೆ Before appointment of the commission ನಾವು ಹೇಳಿದೆವು, we don't

t agree for the Commission Commision ಗೆ ನಾವು agree ಮಾಡುವುದಿಲ್ಲ ಎಂದು ಇದನ್ನು ನಾವು ಮಾಡಬೇಡಿ ಎಂದು ಹೇಳಿದಾಗ, ಈ ತರಹದ ಒಂದು ತಮ್ಮ ಸರ್ಕಾರಿ ಆದೇಶದಲ್ಲಿ, ನಾವು cooperate ಮಾಡಲಿಲ್ಲವೆಂದು commission ಅನ್ನು wind up ಮಾಡುವುದು ಸರಿಯೇ ಎಂದು ತಾವು ಒಂದು ಸಲ ಯೋಚನೆ ಮಾಡಬೇಕು Because we are not responsible ನಾವು Commission ಬೇಡವೆಂದು ಹೇಳಿದ್ದೆವು ಇದರ ಅವಶ್ಯಕತೆ ಇಲ್ಲವೆಅಂದು ನಾವು ಹೇಳಿದ್ದೆವು ಈಗ ತಾವು ನಮ್ಮನ್ನು ಕಾರಣ ಮಾಡಿಕೊಂಡು, Opposition boycott ಮಾಡಿದರು ಎಂದು ಹೇಳಿ, ತಾವು ತಮ್ಮ preamble ನಲ್ಲಿ ಹೇಳಿದಿರಿ Before passing the order the Commission shall be wound up ಇದು ನ್ಯಾಯವೇನು? ಇದು ಸರಿಯೇನು? Why are you taking shelter under the Opposition? Opposition ಮೊದಲೇ ಹೇಳಿದೆ ಈ ಸದನದಲ್ಲಿ ಚರ್ಚೆ ಮಾಡಿದಾಗ ನಾವು ಹೇಳಿದೆವು, ತಾವು Commission ಅನ್ನು appoint ಮಾಡಬೇಡಿ, ಇದರಿಂದ ಸತ್ಯ ಬರುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ Investigation powers, ಇಲ್ಲ ಕಷ್ಟವಾಗಬಹುದು ಅಂತ ಆದರೂ, ತಾವು ಮಾಡಿ ಈಗ ಪುನ ತಮ್ಮ skin save ಮಾಡಿಕೊಳ್ಳುವುದಕ್ಕೆ, ನಮ್ಮ ಮೇಲೆ ಗೂಬೆ ಕೂರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಹಾಗಾಗಿ ಇವತ್ತು ತಾವು Commission ಅನ್ನು wind up ಮಾಡುವುದಕ್ಕೆ ಯಾವ ಸಕಾರಣಗಳು ಇಲ್ಲ ಮಾನ್ಯ ಅಧ್ಯಕ್ಷರೆ Last paraದಲ್ಲಿ "Now, therefore, in exercise of the powers conferred under Clause (a) of sub-section (1) of Section 7 of the Commission of the Inquiry Act, 1952, (Central Act 60 of the 1952), the Government of Karnataka is of the opinion that the

continued existence of the Justice U L Bhat Commission is unnecessary and therefore hereby declare that the said Commission shall cease to exist with immediate effect ”

ತಾವು `continued existence is unnecessary' ಎನ್ನುವ ಅಭಿಪ್ರಾಯಕ್ಕೆ ಬರಬೇಕಾದರೆ ಕಾರಣಗಳು ಏನು? ತಮ್ಮ ಕಡೆ ಅವರು Extension of Time ಕೇಳಿದ್ದಾರೆ ಹಲವಾರು ಇಲಾಖೆಗಳಿಗೆ ಅವರು ಪತ್ರ ಬರೆದು ಮಾಹಿತಿ ಕೇಳಿದ್ದಾರೆ ಆ ಮಾಹಿತಿ ತಮ್ಮ ಕಡೆಯಿಂದ ಹೋಗಿಲ್ಲ ನನಗೆ ಗೊತ್ತಿಲ್ಲ, subject to correction, police investigation ಮಾಡಲಿಕ್ಕೆ ಪೊಲೀಸ್ ಅಧಿಕಾರಿಯನ್ನು ಕೊಡಿ ಎಂದು ಕೇಳಿದ್ದಾರೆಂದು ನಾನು ಕೇಳಿದ್ದೇನೆ ಅದರ ಮೇಲೆ ಸರ್ಕಾರ ಬೆಳಕು ಚೆಲ್ಲಬೇಕು ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಇತಿಹಾಸದಲ್ಲಿ ಇಷ್ಟು ಬೇಗನೆ ಇಷ್ಟು ತರಾತುರಿಯಿಂದ ಯಾವ ಸರ್ಕಾರ ನಿಜವಾದ ಬೆಳಕು ಚೆಲ್ಲಬೇಕು ನಿಜವಾದ ಸತ್ಯ ಹೊರಗೆ ಬರಬೇಕೆಂದು ಒಳ್ಳೆಯ ಉದ್ದೇಶದಿಂದ ಮಾಡಿದಂತಹ Commission ಅನ್ನು ತಾವು ಯಾವುದೇ ಸಕಾರಣವಿಲ್ಲದೆ wind up ಏತಕ್ಕೆ ಮಾಡಿದಿರಿ ಇದರ ಬಗ್ಗೆ ಸ್ಪಷ್ಟೀಕರಣ ಸರ್ಕಾರ ಕೊಡಬೇಕಾಗುತ್ತದೆ You were aware the day the Commission was constituted that the Opposition was going to boycott the commission ಇದೇನು ಹೊಸದಲ್ಲ ಹಾಗಾಗಿ ನಾನು ಕೇಳುತ್ತೇನೆ ನಿಮ್ಮ ಒಳ್ಳೆಯ ಉದ್ದೇಶವಿದ್ದರೆ ಒಳ್ಳೆಯ ಸದಿಚ್ಛೆಯಿದ್ದರೆ ಈ Commission ಅನ್ನು wind up ಮಾಡುವಂತಹ ಅವಶ್ಯಕತೆ ಇತ್ತೇನು, ಎನ್ನುವುದು ನನ್ನ ಪ್ರಶ್ನೆ ಈಗ ತಾವು ಲೋಕಾಯುಕ್ತರಿಗೆ order ಮಾಡುವಾಗ “In view of the fact that the commission was not able to submit its interim report even after 7-1/2 months, the Government is of the opinion that the continued existence of the commission is unnecessary” ಎಂದು ಹೇಳಿದಿರಿ ಈಗ ನಾನು ಕೇಳುತ್ತೇನೆ ಏಳೂವರೆ ತಿಂಗಳಲ್ಲಿ ಹಲವಾರು commission ಗಳು report ಕೊಟ್ಟಿಲ್ಲ Why you have not wound up those commission? ಇದರ ಅರ್ಥ ಏನು ಬರುತ್ತದೆಂದರೆ, ಈ Commission ಏನೂ ಕೆಲಸ ಮಾಡಿಲ್ಲ ಈ Commission ಬಗ್ಗೆ ನಾನು ಪತ್ರಿಕೆಯಲ್ಲಿ ಓದಿದ್ದೇನೆ Commission ನವರು ಹೇಳುತ್ತಾರೆ, ನಮಗೆ ಸರ್ಕಾರದಿಂದ co-operation ಸಿಕ್ಕಿಲ್ಲ ಎಂದು, Commission ನವರು time extend ಮಾಡಿ ಎಂದು ಕೇಳಿದ್ದಾರೆ, ಅದಕ್ಕೆ ತಾವು ಹೇಳಬೇಕಾಗಿತ್ತು ನಾವು Time extend ಮಾಡುವುದಿಲ್ಲವೆಂದು

It appeared in the press that the Government was not interested in continuing the Commission ಯಾವಾಗ ಪತ್ರಿಕೆಯಲ್ಲಿ ಹೀಗೆ ಸರ್ಕಾರಕ್ಕೆ ಮುಂದುವರೆಸುವ ಇಚ್ಛೆ ಇಲ್ಲ ಅಂತ ಬಂದಾಗ he wanted to relinquish the office You have accepted his resignation because he wanted to relinquish the office ನೀವಾಗಲಿ ನಾನಾಗಲಿ ಆತ್ಮಗೌರವ ಇರುತ್ತದೆ What is the way out for him? As a respected person, he will just quit Nobody will remain in office for a minute ಹಾಗಾಗಿ ಯಾವ ಪರಿಸ್ಥಿತಿಯಲ್ಲಿ ಸರ್ಕಾರ ಆಯೋಗವನ್ನು wind up ಮಾಡಿದೆ it becomes very suspicious ನಿಮ್ಮದೇ ಮಾತಲ್ಲಿ ಹೇಳಬೇಕಾದರೆ, the Government's bona fides are in doubt, at stake ಹಾಗಾಗಿ ಸರ್ಕಾರ ಈ ಆಯೋಗ ನೇಮಿಸಿದ್ದು ಏಕೆ? ಆಮೇಲೆ wind up ಮಾಡಿದ್ದು ಏಕೆ? ಇದರ ಬಗ್ಗೆ ತಾವೇ ಬೆಳಕು ಚೆಲ್ಲಬೇಕಾಗುತ್ತದೆ ವಿನಾ, ಆ ಪತ್ರ ವ್ಯವಹಾರ ಏನಿದೆ ನಿಮ್ಮ ಅವರ ಮಧ್ಯೆ ನಡೆದಿರುವುದು ಅದನ್ನು ಬಹಿರಂಗವಾಗಿ ಇಟ್ಟರೆ ಒಳ್ಳೆಯದೆಂದು ನಾವು ಭಾವಿಸುತ್ತೇನೆ

ತಾವು ಏನು ಹೇಳಿದ್ದೀರಿ

"In exercise of the powers conferred under section 7(2A) of the karnataka Lokayukta Act, 1984 Government in Forest Department, vide Government Order No FEE 21 FDE 2005 dated 23-06-2006, has made a reference to the Lokayukta regarding the allegations of illegal activities in the mining and transportation of Iron ore in the forest lands of Bellary, Hospet and Sandur regions and also issuance of fake permits for through investigation and submission of report to the Government with specific recommendations"

On 23 06 06 ಅರಣ್ಯ ಇಲಾಖೆ ಮುಖ್ಯಸ್ಥರು, ನಿಮ್ಮ ಗಮನಕ್ಕೆ ತಂದದ್ದು ತಾವು ಆಗಲೇ ಲೋಕಾಯುಕ್ತಕ್ಕೆ refer ಮಾಡಬೇಕಾಗಿತ್ತು ಆಗ ನಿಮಗೆ ಜ್ಞಾನೋದಯ ಆಗಲಿಲ್ಲವೇನು? ತಾವು ಭಟ್ ಆಯೋಗ ಮಾಡುವುದಕ್ಕಿಂತ you should have sent this reference to Lokayukta Why did not do it then? When it is not done naturally I have to suspect the bona fides of the Government ಹಾಗಾಗಿ the Government has to explain

Forest ಇಲಾಖೆ 23 6 2006ರಲ್ಲಿ refer ಮಾಡಿತೋ ಲೋಕಾಯುಕ್ತಕ್ಕೆ ಯಾಕೆ ಇದೇ refeiences ಮಾಡಲಿಲ್ಲ? Now terms of reference

Reference No 1

"The spurt ın the ınternatıonal prıces of steel and ıron ore durıng last 3-4 years has made the mınıng and export of hıgh qualıty ıron ore from the mınıng ın Bellary, Tumkur and Chıtradurga Dıstrıcts very lucratıve With the average cost of productıon of ıron ore at around Rs 150 pr ton and the royaletıes to be paıd to the Government beıng abysmally low at Rs 16 25 per ton for dıfferent grades there have been serıous systemıc dıstortıons due to the hıgh profit margıns Thıs has led to allegatıons of large scale corruptıon and complaınts of profiteerıng through ıllegal mınıng wıth the complıcıty of the authorıtıes ın all levels of Government"

ನಿಮ್ಮ ಅರಣ್ಯ ಸಚಿವರು 25 ಸಾವಿರ ಕೋಟಿ ನಷ್ಟವಾಗಿದೆ ಅಂತ ನಿಮಗೆ report ಕೊಟ್ಟಾಗ ಆ basıs ಮೇಲೆ Government should have ordered for an enquıry Otherwıse, what was the necessıty for the Oppositıon to raıse thıs? ಮಾಡಬೇಕಾಗಿತ್ತು When there was a report submıtted by the Forest Department ಏಕೆ ನೀವು ಮಾಡಲಿಲ್ಲ? ಎರಡನೆಯ reference, ಮುಖ್ಯಮಂತ್ರಿಗಳೇ ಇಲ್ಲಿ, You have already come to the conclusıon that there are ırregularıtıes People who are competent have not been gıven ಸರ್ಕಾರ ಒಂದು ಅಭಿಪ್ರಾಯಕ್ಕೆ ಬಂತು When thıs matter came up why the Government dıd not ınıtıate actıon? Why you wanted the Lokayukta to take actıon on thıs? ಸ್ಪಷ್ಟತೆ ಇಲ್ಲ ಪಾರದರ್ಶಕತೆ ಇಲ್ಲ ಹೀಗಿದ್ದಾಗ why do you want the help of Lokayukta ın thıs matter, when you have come to the conclusıon that there are ırregularıtıes? ತಾವೆ ತನಿಖೆ ಮಾಡಿ ಏಕೆ ಮಾಡಲಿಲ್ಲ?

"The Government ın ıts order vıde notıficatıon No CI 16 MMM 2003 and No CI 33 MMM 1994 both dated 15 03 2003, de-reserved for prıvate mınıng an area of 11620 square km ın the State, meant for state exploıtatıon/mınıng by the publıc sector and notıfied the surrender of an area of 6843 48 hectares of

prime iron ore being lands respectively, which has paved way for distribution of public assets to select private individuals/entities without regard to their profession or technical or business background" Further, "The entire exercise was undertaken in a manner so as to benefit only a select few individuals/entities"

ಸರ್ಕಾರವೇ ಹೇಳುತ್ತದೆ, ಕೇವಲ few individualsಗೆ ಸಹಾಯ ಮಾಡಬೇಕೆಂದು, ಹೀಗೆ ಮಾಡಲಾಗಿದೆ ಅಂತ, ಇದೇ ತರಹ reference ಮಾಡಿದರೆ, with due respect, I have to say Lokayukta will be prejudiced Before a finding, the Government has taken a decision to help a few individuals, Are you not trying to prejudice the Lokayukta? If you feel what you have written are correct, you take action Why do you want to refer it to Lokayukta? Don't you have courage to initiate action? Do you want the help of the Lokayukta?

ಶ್ರೀ ಹೆಚ್ ಡಿ ರೇವಣ್ಣ courage ಇಲ್ಲ ಸರ್ಕಾರಕ್ಕೆ, ಅಂತ ಕೇಳುತ್ತಿದ್ದಾರೆ ಅವರು ಹಿರಿಯ ಸದಸ್ಯರು, ಮಂತ್ರಿಗಳಾಗಿದ್ದವರು, Commission of Enquiry ಮಾಡಿದಾಗ ಏನೇನು ದಾಖಲಾತಿ ಇತ್ತೋ ಅದನ್ನೆಲ್ಲ ಕೊಡಲು ನಾವೇನಾದರೂ objection ಮಾಡಿದ್ದೇವೆಯೋ? ಮುಖ್ಯಮಂತ್ರಿಗಳ ಮೇಲಾಗಲಿ ಮಂತ್ರಿಗಳ ಮೇಲಾಗಲಿ ಆಯೋಗ ಎಲ್ಲರಿಗೂ ನೋಟಿಸ್ ಕೊಟ್ಟಿದೆ ಅಂತ ಪತ್ರಿಕೆಗಳಲ್ಲೆಲ್ಲ ಬಂತು ಇನ್ನೊಂದು, ಮಾನ್ಯ ದೇಶಪಾಂಡೆ ಅವರು ತಿಳಿದುಕೊಳ್ಳಬೇಕು ತಾವು ರಾಷ್ಟ್ರ ಪತಿಗಳಿಗೆ ಏನಂತ ಅರ್ಜಿ ಕೊಟ್ಟಿದ್ದೀರಿ? ಮಾನ್ಯ ಧರ್ಮಸಿಂಗ್ ಅವರನ್ನೇ ಕೇಳಿ, ಅದನ್ನು ಸ್ವಲ್ಪ ಓದಿ ಆಯೋಗದ ಮೇಲೆ ನಮಗೆ ನಂಬಿಕೆ ಇಲ್ಲ ಅಂತ ಕೊಟ್ಟಿರುವ ಪ್ಯಾರ ಓದಿ

ಶ್ರೀ ಆರ್ ವಿ ದೇಶಪಾಂಡೆ ನಾವು ಆಯೋಗದ ಮೇಲೆ ವಿಶ್ವಾಸ ಇಲ್ಲ ಅಂತ ಹೇಳಿಲ್ಲ ನಾವು ರಾಷ್ಟ್ರಪತಿಗೆ ಮನವಿ ಕೊಟ್ಟಿದ್ದು ನಿಜ ಅದರಲ್ಲಿ ಆಯೋಗದ ಮೇಲೆ ಅಪಾದನೆ ಮಾಡಿಲ್ಲ ಆಯೋಗಕ್ಕೆ bona fides ಇಲ್ಲ ಅಂತ ಹೇಳಿಲ್ಲ ಆಯೋಗ, with mala fide intention, ಕೆಲಸ ಮಾಡುತ್ತದೆ ಅಂತ ಹೇಳಿಲ್ಲ The Commission will not be able to come out with the truth ಅಂತ ಹೇಳಿದ್ದೇವೆ After all I am a human being ನಾನು ಜ್ಞಾಪಕದಿಂದ ಹೇಳುತ್ತಿದ್ದೇನೆ We have highest regards for the Commission

ಶ್ರೀಎಂ ಪಿ ಪ್ರಕಾಶ್. The wordings were such that you have no confidence in the Commission Therefore, we are boycotting it ಆ ಶಬ್ದಗಳನ್ನು ಬಳಸಿದ್ದೀರಿ ಉತ್ತರ ಕೊಡುವಾಗ ನಾನು ಹೇಳುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ Before the Commission was constituted we have told When it has been reported that the State has been deprived of its revenues, why do you want the assistance of Lokayukta? ಒಂದು ಸರ್ಕಾರಕ್ಕೆ ತನ್ನ ಆದಾಯ ಸೋರಿಹೋಗುತ್ತಿದೆ ಅಂತ ಗೊತ್ತಾದಾಗ are you going to take the help of Lokayuktha? ನಿಮಗೆ Forest squad ಇದೆ, Commercial Tax Department ಇದೆ, ನಿಮಗೆ Vigilance Cell ಇದೆ You take action ಅದಕ್ಕೆ ಲೋಕಾಯುಕ್ತ ವರದಿ ಏಕೆ ಬೇಕು? ತಮಗೂ ಅಧಿಕಾರವಿದೆ ಕ್ರಮ ಜರುಗಿಸುವುದಕ್ಕೆ Nobody would have stopped you from taking action for the recovery of Government dues and tighten the loopholes With regard to Mysore Minerals, there is already a report with the Hon Chief Minister Mysore Mineralsಗಳ ಬಗ್ಗೆ ಈಗಾಗಲೇ ಒಂದು ವರದಿ ಮುಖ್ಯಮಂತ್ರಿ ಹತ್ತಿರ ಇದೆ ಆ ವರದಿ ಏಳೆಂಟು ತಿಂಗಳ ಹಿಂದೆ ಬಂದಿದೆ Why action was not taken no that? Why are you not referring it to Lokayukta? ತಾವು ಗೌರವಾನ್ವಿತ ಮುಖ್ಯಮಂತ್ರಿಗಳು ತಕ್ಷಣ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇತ್ತು who stopped you? ಇವತ್ತು ರಿಪೋರ್ಟ್ ಬಂದು ಏಳೆಂಟು ತಿಂಗಳಾದ ನಂತರ, why are you referring it again to Lokayukta? ತಾವೇ action ತೆಗೆದುಕೊಳ್ಳಿ ಹಲವಾರು Corporations Boards ನಲ್ಲಿ ದುರ್ವ್ಯವಹಾರವಾದಾಗ, ಅವ್ಯವಹಾರ ಆದಾಗ you must take action Your answer is wrong ಅದಕ್ಕೆ ಲೋಕಾಯುಕ್ತರ ಸಹಾಯ ಏಕೆ ಬೇಕು? ನೀವೇ action ತೆಗೆದುಕೊಳ್ಳಬಹುದು ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ action ತೆಗೆದುಕೊಳ್ಳಬಹುದು ಅದು ಬಿಟ್ಟು ತಾವು ತಮ್ಮ ಕಡೆ ಒಬ್ಬ senior officer, IAS officer ಒಂದು ವರದಿ ಕೊಟ್ಟಿದ್ದಾರೆ, ಆ ಆಧಾರದ ಮೇಲೆ action ತೆಗೆದುಕೊಳ್ಳುವುದು ಬಿಟ್ಟು, ತಾವು ಪುನ ಅದನ್ನು you are referring to Lokayukta What does it mean? I am not able to understand ಹಲವಾರು ವಿಚಾರಗಳಲ್ಲಿ ತಾವು ಲೋಕಾಯುಕ್ತಕ್ಕೆ ರೆಫರ್ ಮಾಡುತ್ತಿದ್ದೀರಿ Government is competent to take action Government is very

competent to take action Previous Governments have taken action ನೋಡಿ, "Now, therefore the Government of Karnataka hereby refers the following issues to the Lokayukta for through investigation and submission of report to the Government " what do you want from the Lokayukta report? ನಿಮಗೆ ಲೋಕಾಯುಕ್ತರಿಂದ ರಿಪೋರ್ಟ್ ಬೇಕಾಗಿದೆಯೇ? You have told him that the limitation is to investigate and send a report He has no power to recommend action That is a fact-finding authority It has no teeth It has no powers It cannot prosecute anybody It could only be recommendatory Otherwise, why you said" Lokayuktha for through investigation and submission of report to the Government"? Why do you want only a report to the Government? ವಿಚಾರಣೆ ಮಾಡಿ ಒಂದು ವರದಿ ಸರ್ಕಾರಕ್ಕೆ ಕಳುಹಿಸಿ ಎಂದು ಹೇಳಿದಿರಿ ವರದಿ ಕಳುಹಿಸಬೇಕಾದರೆ ಲೋಕಾಯುಕ್ತ ಏಕೆ ಆರು ತಿಂಗಳು ಕಷ್ಟ ಪಡಬೇಕು? What is the necessity? I am not able to understand This is your own Government Order

(ಈ ಹಂತದಲ್ಲಿ ಶ್ರೀ ಆರಗ ಜ್ಞಾನೇಂದ್ರ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್ ಡಿ ರೇವಣ್ಣ – ಲೋಕಾಯುಕ್ತದವರು ಬಹಿರಂಗವಾದ ಹೇಳಿಕೆಯನ್ನು ಕೊಟ್ಟಿದ್ದಾರೆ ಯಾರೇ ಮುಖ್ಯಮಂತ್ರಿ ಇದ್ದರೂ ಮಾಡಿ, ಏನೇ ತನಿಖೆ ಬೇಕಾದರೂ ಮಾಡಿಸುತ್ತೇವೆಂದು ಹೇಳಿದ್ದಾರೆ ಮತ್ತೆ ಇನ್ನೇನು ಬೇಕು? ಅದನ್ನು ಅವರು ಬಹಿರಂಗವಾಗಿ ಹೇಳಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ – ತಮ್ಮ ಆರ್ಡರ್ ಇದೆಯಲ್ಲ ಅದು mandatory ಇದೆ

ಶ್ರೀ ಎಂ ಪಿ ವೆಂಕಟೇಶ್ – ಸರ್ಕಾರ ಮಾಡಿರುವುದು ಒಳ್ಳೆಯದು ಎಂದು ಈಗಲಾದರೂ ಹೇಳಿಬಿಡಿ ದಯಮಾಡಿ ಸರ್ಕಾರ ನೇಮಕ ಮಾಡಿರುವುದು ಬಹಳ ಒಳ್ಳೆಯದು ಭಟ್ ಅವರ ಕಮಿಷನ್‌ನ್ನು ಒಪ್ಪಿಕೊಳ್ಳುತ್ತೇವೆಂದು ಈಗಲಾದರೂ ಹೇಳಿಬಿಡಿ ಅದನ್ನು ಒಪ್ಪಿಕೊಂಡುಬಿಡಿ ಅವರು ಬಹಳ ಒಳ್ಳೆಯವರು, ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು, ಅವರು ತನಿಖೆ ಮಾಡುತ್ತಿದ್ದರು, ನಾವು ಒಪ್ಪಿಕೊಳ್ಳುತ್ತೇವೆಂದು ಒಂದು ಮಾತನ್ನು ಹೇಳಿಬಿಡಿ

ಶ್ರೀ ಆರ್ ವಿ ದೇಶಪಾಂಡೆ – "Government notification- Page4 "Appointment of Lokayukta - Now, therefore the Government of Karnataka hereby refers the following issues to the Lokayukta

for thorough investigation and submission of report to the Government " ಕೇವಲ ವರದಿ ಕಳುಹಿಸಿ ಇದರಲ್ಲಿ ನಿಮ್ಮ action ಬಗ್ಗೆ ಏನೂ ಇಲ್ಲ ಹೀಗೆ ಮಾಡುವುದಕ್ಕೆ ಲೋಕಾಯುಕ್ತ ಏಕೆ ಬೇಕು? Is there a necessity for all these things? ನನ್ನ ದೃಷ್ಟಿಯಲ್ಲಿ ಇದರ ಅವಶ್ಯಕತೆ ಇರಲಿಲ್ಲ ನಾನು Lokayukta Act ಗೆ ನಂತರ ಬರುತ್ತೇನೆ ನಾವು ಏನು ಹೇಳಿದ್ದೀರಿ? "Chief Minister, Ministers, all public servants are " ಎಂದು ಹೇಳಿದ್ದೀರಿ I will read it After this, 4(c) "To fix responsibility and initiate suitable action against all public servants including ministers, whether in office or otherwise, state instrumentalities or state owned companies, corporations " Where is the name of the Chief Minister here? Is it not missing Ministers ಎಂದು ಆರ್ಡರ್‌ನಲ್ಲಿ ಇದೆ This is very important Tha is a primary document On this document, the Lokayukta will be investigating Here, you have said Ministers, public servants But there is no mentioned of the Chief Minister ತಾವು Chief Minister ಸಹ ಎಂದು ಹೇಳಿದ್ದಿರಿ But there is no mention of the Chief Minister here ಹಾಗಾಗಿ ತಮ್ಮ ಗಮನಕ್ಕೆ ತಂದೆ ಹಾಗಾಗಿ, please understand that we have got lot of respect for Lokayukta We have lot of respect to this institution We feel that it will be a futile exercise ಇದರಿಂದ ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲ One time will come and again you will withdraw the reference made to Lokayukta That stage is going to come very shortly ಹಾಗಾಗಿ ನಾನು ಏನು ಹೇಳುತ್ತಿದ್ದೇನೆಂದರೆ, If you really mean, enquiry ಆಗಬೇಕು let there be some enquiry, say, CBI What wrong is there? "Comprehensively enquire into the charges, allegations, complaints of misuese, abuse of office, if any elected representatives, Ministers and officers" I am reading (f), last concluding paragraph I think you will have to throw light Section 7 is there This is an important document Here, you have only referred to yourself, Minister or R V Deshpande,

whoever it is You have to enlighten the House Why such a reference has not been made? Section 7 of Lokayukta Act - "Matters which may be investigated by the Lokayukta and Upalokayukta - subject to the provisions of the Act, the Lokayukta may investigate any action which is taken by or with the general or specific approval of the Chief Minister " I don't know whether the Chief Minister has approved this It is not possible by Ministers or Secretaries Either this should be approved by the Hon'ble Chief Minister I don't know You have to clarify as to who approved this? We don't know Government order ಮಾಡಿದ್ದು, as a Government, Cabinet decision ನ್ನೋ, ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೋ Because it says that the Chief Minister can order, Minister or the Secretary can or a member of legislature can complain So, this is complaint In real terms, it becomes a complaint Then, who is the complainant here? Is the State Government the complainant or the Chief Minister We should know about this "Any other public servant, being a public servant of a class notified by the State Government, in consultation with the Lokayukta on this behalf In any case, where a complaint involved is a grievance or an allegation made in respect of such action Subject to the provisions of the Act, not withstanding anything contained in sub-section 1 and 2, the Lokayukta or Upalokayukta may investigate any action taken by or with the general or specific approval of a public servant if it is referred to him by the State Government" Now, in this case, you have referred, restricted the scope of enquiry to the Minister, to the legislators, to the public servants How can you enquire? Reference is not there ಹಾಗಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ಇಲ್ಲಿ prejudice ಮಾಡಿಕೊಂಡು, ನಿಮ್ಮ ಮೇಲೆ ನಾವು ಆಪಾದನೆ ಮಾಡುವುದು, ನಮ್ಮ ಮೇಲೆ ನೀವು ಆಪಾದನೆ

ಮಾಡುವುದು ಆಗಬಾರದು We have to debate After all, this is a House where we have to have enlightened debate Upper House ನಲ್ಲಿ ಯಾರೋ ಅವರ ಮೇಲೆ allegation ಮಾಡಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು Yes, of course, we are happy about it You show it to us If there is truth, we will condemn that We will not hesitate to do that We have got lot of respect to the office of the Chief Minister ನಾವು ಬೇಜವಾಬ್ದಾರಿಯಿಂದ ಮಾತನಾಡುವುದಕ್ಕಾಗುವುದಿಲ್ಲ We also know our responsibilities ಹಾಗಾಗಿ, ಇವತ್ತು ಈ Lokayukta enquiry ಇದೆಯಲ್ಲ, ನನ್ನ ದೃಷ್ಟಿಯಲ್ಲಿ it will not yield any results It will be a futile exercise Ultimately, in this, only time will pass ನಾವು ಹೇಳುತ್ತೇವೆ, Passing of time is not the answer If the Government feels, ಸಮಯ ಪ್ರಶ್ನೆಗೆ ಉತ್ತರ ಕೊಡುತ್ತದೆಂದು ತಮ್ಮಲ್ಲಿ ಆ ಭಾವನೆ ಇದ್ದರೆ, then this type of enquiry will help you But, ಇದರಲ್ಲಿ ಏನು truth ಇದೆ? For example, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು Actually, he may be hurt So, ಇಂತಹ serious allegation ಆದಾಗ, I think, as a young person who has got future, who should be very frank and sane, come on, there is a truth, make an enquiry and come out What wrong is there?

ಶ್ರೀ ಎಂ ಪಿ ಪ್ರಕಾಶ್ ಸಮಯ ಕಾಲ ಕೆಡಿಸುತ್ತದೆ ಎಂದಿರಿ 'ಮಾಡಿದ್ದನ್ನೆಲ್ಲಾ ಕಾಲ ಕೆಡಿಸುತ್ತದೆ' 'ಎಲ್ಲವನ್ನೂ ನಾಲಿಗೆ ಕೆಡಿಸುತ್ತದೆ' ಎಂದು ಹೇಳುತ್ತಾರೆ

ಶ್ರೀ ಆರ್ ವಿ ದೇಶ್‌ಪಾಂಡೆ Correct I agree with you ನಾಲಿಗೆ should be in control ಅಲ್ಲವೇ? ನಾವು ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು We never, ನೀವಾಗಲಿ ನಾವಾಗಲಿ ಯಾರೇ ಆಗಲಿ, ಸದನದಲ್ಲೇ ಅಲ್ಲ ಹೊರಗಡೆ ಸಹ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕಲ್ಲವೇ? We cannot expect a good behaviour or a bad behaviour from a human being ನಾನೇನು ಅದಕ್ಕೆ support ಮಾಡುತ್ತಿಲ್ಲ ನಾನು ಈಗಾಗಲೇ ಹೇಳಿದಂತೆ this will not result into any results It will be just spending of time and energy ಮಾನ್ಯ ಗೃಹ ಸಚಿವರೆ,

ಮಾನ್ಯ ಮುಖ್ಯಮಂತ್ರಿಗಳೇ, ಒಂದು last sentence You have to reply to this question I am referring Section 8 (3) "In the case of any complaint involving a grievance, nothing in this Act shall be construed as empowering the Lokayukta or an Upalokayukta to question any administrative action involving the exercise of a discretion except where he is satisfied that the elements involved in the exercise of the discretion are absent to such an extent that the discretion can prima-facie be regarded as having been improperly exercised" Please understand The Lokayukta cannot give the C M to taken so much of discretion I don't think that he can go into that Provided, if he is convinced that you are not bona fide, ಬಹಳ difficult ಆಗುತ್ತದೆ Any administrative decision taken by the Government, any action by the Minister or the Chief Minister or a discretion, does not come under the purview of the Lokayukta for enquiry ಈ ವಿಚಾರಣೆಯ ಲಾಭ ಯಾರಿಗೆ ಹೋಗುತ್ತದೆ? ಇದರಿಂದೇನು ಸತ್ಯ ಹೊರಕ್ಕೆ ಬರುತ್ತದೆ ನನಗಂತೂ ಗೊತ್ತಾಗುತ್ತಿಲ್ಲ ಆದ್ದರಿಂದ, ನಾನು suggest ಮಾಡುತ್ತಿದ್ದೇನೆ It is unnecessarily wasting our time ಭಟ್ ಕಮಿಷನ್ ಆಯಿತು, ಲೋಕಾಯುಕ್ತವಾಯಿತು, ನಾವು ಅದೇ ಹೇಳುವುದು ನೀವು ಅದೇ ಕೇಳುವುದಕ್ಕಿಂತ it is better, the matter is referred to CBI The truth will come out, whatever it is ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಸಿದ್ಧರಾಮಯ್ಯ ನಾಳೆ ಮಾತನಾಡುತ್ತೇವೆ ಈಗಾಗಲೇ 7 ಗಂಟೆ ಆಯಿತು Adjournment Motion has been converted to matter under rule 69 ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬೇಕು ಆ ಕಡೆಯವರೂ ಚರ್ಚೆಯಲ್ಲಿ ಭಾಗ ವಹಿಸಬಹುದು ಯಾರು ಬೇಕಾದರೂ ಭಾಗವಹಿಸಬಹುದು ನಾಳೆ ತೆಗೆದುಕೊಳ್ಳಿ ಚರ್ಚೆಯನ್ನು ಮುಂದುವರೆಸೋಣ ಇವತ್ತೇ ಚರ್ಚೆ ಮಾಡಿ ಉತ್ತರವನ್ನೂ ಕೊಡಲು ಆಗುವುದಿಲ್ಲ 7 ಗಂಟೆಯಾಗಿದೆ ಇನ್ನೂ ಮಾತನಾಡುವವರೆಲ್ಲಾ ಇದ್ದಾರೆ ಜೊತೆಗೆ, it is converted to matter under rule 69 ಆಗಿರುವುದರಿಂದ, anybody can participate, Not necessarily

only the sıgnatorıes Anybody can partıcıpate It may be taken up tomorrow

ಶ್ರೀ ಎಂ ಪಿ ವೆಂಕಟೇಶ್ ಇದು ಬಹಳ ಮಹತ್ವವಿದೆ 8 ಗಂಟೆಯವರೆಗೆ ಕೇಳುತ್ತೇವೆ

ಶ್ರೀ ಸಿದ್ಧರಾಮಯ್ಯ ಈಗ tıme ಆಗಿದೆ ನಾಳೆ ಮಾಡಿ

ಚೇರ್ಮನ್ ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 30ಗಂಟೆಗೆ ಸೇರುವುದು

(ಸದನವು ಸಂಜೆ 6 ಗಂಟೆ 53 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 22ನೇ ಮಾರ್ಚ್ 2007ರ ಗುರುವಾರದಂದು ಬೆಳಿಗ್ಗೆ 10 30 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-I

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1347
ಮಾನ್ಯ ಸದಸ್ಯರ ಹೆಸರು	ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)
ಉತ್ತರಿಸುವ ದಿನಾಂಕ	20-03-2007
ಉತ್ತರಿಸುವ ಸಚಿವರು	ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು

ಅ) ಕೆ ಆರ್ ಡಿ ಸಿ ಎಲ್ ವತಿಯಿಂದ ಮುಂಡರಗಿ ಮತದಾರ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ,

ಮುಂಡರಗಿ ಮತದಾರರ ಕ್ಷೇತ್ರದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ

ಅ) ಸೇತುವೆಗಳ ನಿರ್ಮಾಣ

ಎರಡನೇ ಹಂತದ ಸೇತುವೆ ನಿರ್ಮಾಣ ಯೋಜನೆಯಲ್ಲಿ ಮುಂಡರಗಿ ಕ್ಷೇತ್ರದಲ್ಲಿ ಎರಡು ಸೇತುವೆಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ

1 ಮುಂಡರಗಿ ಹೆಮ್ಮಗಿ ರಸ್ತೆಯ 2 80ನೇ ಕಿಮೀ ಮುಕ್ತಾಪುರ ಹತ್ತಿರ ಸೇತುವೆ ನಿರ್ಮಾಣ ಅಂದಾಜು ಮೊತ್ತ ರೂ 100 00 ಲಕ್ಷಗಳು

2 ಮುಂಡರಗಿ-ಹಂದಲಗಿ ರಸ್ತೆ ಕಿಮೀ 1 00 (ಮುಂಡರಗಿ ಪಟ್ಟಣ) ರಲ್ಲಿ ಸೇತುವೆ ನಿರ್ಮಾಣ- ಅಂದಾಜು ಮೊತ್ತ ರೂ 60 00 ಲಕ್ಷಗಳು

ಮೂರನೇ ಹಂತದ ಸೇತುವೆಯ ನಿರ್ಮಾಣ ಯೋಜನೆಯಲ್ಲಿ ಕೆಳಕಂಡ 2 ಸೇತುವೆ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ

1 ಮುಂಡರಗಿ ಹೆಮ್ಮಗಿ ರಸ್ತೆಯ 11 06 ಕಿಮೀ ನಲ್ಲಿ ಸೇತುವೆ ನಿರ್ಮಾಣ- ಅಂದಾಜು ವೆಚ್ಚ ರೂ 50 00 ಲಕ್ಷಗಳು

2 ಭೈಯರಹಳ್ಳಿ-ಮುಂಡರಗಿ ರಸ್ತೆಯ (ಕಲ್ಮಲಾ-ಶಿಗ್ಗಾಂ ರಾಜ್ಯ ಹೆದ್ದಾರಿ) ಕಿಮೀ 42 90 ರಲ್ಲಿ ಸೇತುವೆ ನಿರ್ಮಾಣ- ಅಂದಾಜು ವೆಚ್ಚ ರೂ 50 00 ಲಕ್ಷಗಳು

ಆ) <u>ರಾಜ್ಯ ಹೆದ್ದಾರಿ ನಿರ್ವಹಣೆ</u>

ಮುಂಡರಗಿ ಮತದಾರ ಕ್ಷೇತ್ರದಲ್ಲಿ ಒಟ್ಟು 62 5 ಕಿಮೀ ರಸ್ತೆಯನ್ನು ರೂ 187 50 ಲಕ್ಷಗಳ ಅಂದಾಜು ಮೊತ್ತದಲ್ಲಿ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಗದಗ ಪ್ಯಾಕೇಜ್‌ಯಡಿ ನಿರ್ವಹಣೆಗಾಗಿ ಕೈಗೊಳ್ಳಲಾಗಿದೆ ರಸ್ತೆಗಳ ವಿವರ ಕೆಳಗಿನಂತಿದೆ

1) ಕಲ್ಮಲ-ಶಿಗ್ಗಾಂ ರಾಜ್ಯ ಹೆದ್ದಾರಿ- 24 9 ಕಿಮೀ

2) ಅರಬಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ-- 37 6 ಕಿಮೀ

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಮಂಜೂರಾದ ಸೇತುವೆಗಳ ಯಾವ ಯಾವ ಕೆಲಸ ಪ್ರಾರಂಭವಾಗಿದೆ ಹಾಗೂ ಪ್ರಾರಂಭವಾಗದಿರುವ ಕೆಲಸಗಳಾವುವು,

ಮೇಲಿನ ಎರಡು ಹಂತದ ಸೇತುವೆಯ ನಿರ್ಮಾಣ ಕಾಮಗಾರಿಗಳಲ್ಲಿ ಮುಂಡರಗಿ-ಹೆಮ್ಮಗಿ ರಸ್ತೆಯ 2 80 ರಲ್ಲಿನ ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಅಪ್ರೋಚ್ ರಸ್ತೆ ರಕ್ಷಣಾ ಕಾಮಗಾರಿಗಳು ಪ್ರಗತಿಯಲ್ಲಿವೆ ಉಳಿದ ಮೂರು ಸೇತುವೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಇ) ಪ್ರಾರಂಭವಾಗದಿರಲು ಕಾರಣಗಳೇನು,

ಈ ಸೇತುವೆಯ ನಕ್ಷೆ, ವಿನ್ಯಾಸ ತಯಾರಿಕೆಯ ಕಾರ್ಯಗಳು ಪ್ರಗತಿಯಲ್ಲಿವೆ ಸದರಿ ಕಾರ್ಯ ಪೂರ್ಣಗೊಂಡ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಈ) ಈ ವರ್ಷ ಯಾವ ಯಾವ ಹೊಸ ಕೆಲಸಗಳಿಗಾಗಿ ಯೋಜನೆ ತಯಾರಿಸಲಾಗಿದೆ, (ವಿವರ ನೀಡುವುದು)?

ಯಾವುದು ಇರುವುದಿಲ್ಲ

ಕರ್ನಾಟಕ ವಿಧಾನ ಸಭೆ

12ನೇ ವಿಧಾನಸಭೆ 5ನೇ ಅಧಿವೇಶನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**1552**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸುವ ದಿನಾಂಕ	**20-03-2007**
ಉತ್ತರಿಸುವ ಸಚಿವರು	**ಲೋಕೋಪಯೋಗಿ ಹಾಗೂ ಇಂಧನ ಸಚಿವರು**

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ 2007-08ನೇ ಸಾಲಿನಲ್ಲಿ ನಬಾರ್ಡ್, ಸಿಆರ್ಎಫ್ ಮುಂತಾದ ಯೋಜನೆಗಳ ಮೂಲಕ ಕೈಗೊಳ್ಳಲಿರುವ ರಸ್ತೆ ಹಾಗೂ ಸೇತುವೆ ಕಾಮಗಾರಿಗಳು ಯಾವುವು?

ನಬಾರ್ಡ್ ಯೋಜನೆಯಡಿ 2007-08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿರುವುದಿಲ್ಲ, ಸಿ ಆರ್ ಎಫ್ ಯೋಜನೆ ಅಡಿಯಲ್ಲಿಯೂ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಇನ್ನೂ ಅನುದಾನ ನಿಗದಿಪಡಿಸಿರುವುದಿಲ್ಲ ಇದಲ್ಲದೆ ಬೇರೆ ಯೋಜನೆಗಳಡಿಯಲ್ಲಿಯೂ 2007-08ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಬಗ್ಗೆ ಇನ್ನೂ ನಿರ್ಧರಿಸಿರುವುದಿಲ್ಲ

ಆ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಪೂರ್ಣಗೊಂಡಿರುವ ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಬೆಳ್ತಂಗಡಿ ತಾಲ್ಲೂಕಿನಲ್ಲಿ ನಬಾರ್ಡ್‌ನ ಆರ್ ಐ ಡಿ ಎಫ್-10ರ ಯೋಜನೆಯಡಿ ಪೆರ್ಮುಡೆ- ವೇಣೂರು ರಸ್ತೆಯ ಪೆರ್ಮುಡೆ ಬಳಿ 70 00 ಲಕ್ಷ ರೂ ಮೊತ್ತದಲ್ಲಿ ಕೈಗೊಳ್ಳಲಾಗಿರುವ ಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ ಈ ಕಾಮಗಾರಿಯನ್ನು ಮೇ-2007ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು

ಅನುಬಂಧ-I

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **073(1500)**

ಸದಸ್ಯರ ಹೆಸರು **ಶ್ರೀ ಅಂಗಾರ ಎಸ್ (ಸುಳ್ಯ)**

ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶಗಳಾದ ಗುತ್ತಿಗಾರು, ಸಂಪಾಜೆ, ಸುಬ್ರಹ್ಮಣ್ಯ ಮತ್ತು ಸವಣೂರು ಗ್ರಾಮಗಳಿಗೆ ಸರಿಯಾದ ವಿದ್ಯುತ್ ಸಂಪರ್ಕ ಒದಗಿಸಲು 33 ಕೆ ವಿ ಸಬ್-ಸ್ಟೇಷನ್‌ನ್ನು ಹಾಗೂ ಪುತ್ತೂರಿನಿಂದ ಸುಳ್ಯಕ್ಕೆ 110 ಕೆ ವಿ ಸಬ್-ಸ್ಟೇಷನ್ ಮತ್ತು ಲೈನನ್ನು ಮಂಜೂರು ಮಾಡುವ ಪ್ರಸ್ತಾವನೆ ಅಥವಾ ಉದ್ದೇಶ ಸರ್ಕಾರದ ಮುಂದಿದೆಯೇ,

ಇದೆ

ಆ) ಇದ್ದಲ್ಲಿ, ಯಾವಾಗ ಮಾಡಲಾಗುವುದು,

ಸವಣೂರು ಗ್ರಾಮದಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಮಾತ್ರ ಈಗ ಭೂಮಿ ಲಭ್ಯವಾಗಿರುತ್ತದೆ ಗುತ್ತಿಗಾರು, ಸಂಪಾಜೆ ಮತ್ತು ಸುಬ್ರಹ್ಮಣ್ಯಗಳಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಭೂಮಿಯು ಲಭ್ಯವಾಗಬೇಕಾಗಿರುತ್ತದೆ ಅಲ್ಲದೇ, ಈ ನಾಲ್ಕೂ ಉದ್ದೇಶಿತ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸುಳ್ಯದಲ್ಲಿ ಉದ್ದೇಶಿಸಲಾಗಿರುವ 110 ಕೆ ವಿ ವಿದ್ಯುತ್ ಉಪ ಕೇಂದ್ರದಿಂದಲೇ ವಿದ್ಯುತ್ ಸರಬರಾಜಾಗಬೇಕಾಗಿರುತ್ತದೆ ನೆಟ್ಲಮಡ್ನೂರಿನಿಂದ ಸುಳ್ಯಕ್ಕೆ 110 ಕೆ ವಿ ಲೈನಿನ ನಿರ್ಮಾಣಕ್ಕೆ ಬೇಕಾದ 20 5 ಹೆಕ್ಟೇರ್ ರಕ್ಷಿತಾರಣ್ಯ ಬಿಡುಗಡೆಗೊಳಿಸಬೇಕಾಗಿದ್ದು, ಈ ಬಗ್ಗೆ ಎರಡು ಹಂತಗಳಲ್ಲಿ ಅಂದರೆ ನೆಟ್ಲಮಡ್ನೂರಿನಿಂದ ಮಾಡವು ಹಾಗೂ ಮಾಡವುನಿಂದ ಸುಳ್ಯದವರೆಗಿನ ಅರಣ್ಯ ಪ್ರದೇಶಗಳಲ್ಲಿ 110 ಕೆ ವಿ ಲೈನಿನ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ

ಅರಣ್ಯ ಇಲಾಖೆಯಿಂದ ಅನುಮತಿ ದೊರೆತ ನಂತರವೇ ಸುಳ್ಯದಲ್ಲಿರುವ 33 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು 110 ಕೆ ವಿ ಗೆ ಉನ್ನತೀಕರಿಸಲು ಹಾಗೂ 110 ಕೆ ವಿ ಲೈನಿನ ಕೆಲಸಗಳಿಗೆ ಟೆಂಡರ್ ಕರೆಯಬೇಕಾಗಿರುತ್ತದೆ

ಇ) ಪ್ರಸ್ತಾವನೆ ಇಲ್ಲದಿದ್ದಲ್ಲಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಸಮಸ್ಯೆಯನ್ನು ನೀಗಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ,

ಮೇಲಿನ ಉತ್ತರದ ಹಿನ್ನಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1074(1502)**
ಸದಸ್ಯರ ಹೆಸರು	**ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸುಳ್ಯದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಕಾಮಗಾರಿ ಈಗ ಯಾವ ಹಂತದಲ್ಲಿದೆ,

ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ

ಆ) ಕಾಮಗಾರಿಯ ಅಂದಾಜು ವೆಚ್ಚ ಎಷ್ಟು ಹಾಗೂ ಈ ವರೆಗೆ ವೆಚ್ಚ ಮಾಡಿರುವ ಹಣ ಎಷ್ಟು,

ಈ ಕಾಮಗಾರಿಯ ಟೆಂಡರ್ ವೆಚ್ಚ ಸೇರಿ 55 09 ಲಕ್ಷ ರೂ ಗಳು ಮತ್ತು ಈ ವರೆವಿಗೂ 51 91 ರೂ ಗಳನ್ನು ವೆಚ್ಚ ಮಾಡಲಾಗಿದೆ

ಇ) ಕಾಮಗಾರಿ ಯಾವಾಗ ಮುಕ್ತಾಯವಾಗಲಿದೆ?

2007ನೇ ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1075(1503)**
ಸದಸ್ಯರ ಹೆಸರು	**ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸುಳ್ಯ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸರಿಯಾದ ಬಸ್ ಸಂಪರ್ಕ ಕಲ್ಪಿಸುವ ದೃಷ್ಟಿಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಡಿಪೋ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೇ,

ಹೌದು

ಆ) ಬಸ್ ಡಿಪೋ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ,

ಹೌದು

ಇ) ಬಸ್ ಡಿಪೋ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮುಂದಿನ ಕ್ರಮ ಜರುಗಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1076(1504)**
ಸದಸ್ಯರ ಹೆಸರು **ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಉಪ್ಪಿನಂಗಡಿ–ಕಡಬ–ಸುಬ್ರಹ್ಮಣ್ಯ ರಸ್ತೆಯು ತೀವ್ರ ಹದಗೆಟ್ಟಿರುವ ಕಾರಣ ಮರು ಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ಹೌದು

ಆ) ಇದ್ದಲ್ಲಿ, ಎಷ್ಟು ಸಮಯದಲ್ಲಿ ಮರು ಡಾಂಬರೀಕರಣ ಮಾಡಲಾಗುವುದು?

ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ 22 5 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1077(1474)**
ಸದಸ್ಯರ ಹೆಸರು **ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)**

ಅ) ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿಯಲ್ಲಿ 1149 ಕೋಟಿ ರೂ ಗಳ ವೆಚ್ಚದಲ್ಲಿ ಪುರಸಭೆ ಯೋಜನೆಯ ಮೂಲಕ ರಾಜ್ಯದ ಪಟ್ಟಣಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ,

ಹೌದು 1364 ಕೋಟಿ ರೂ ಗಳ ವೆಚ್ಚದಲ್ಲಿ ಕರ್ನಾಟಕ ಪೌರ ಸುಧಾರಣಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಣವೆಷ್ಟು,

ಇಲ್ಲಿಯವರೆಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ, ಬೆಂಗಳೂರು ಮಹಾ ನಗರ ಪಾಲಿಕೆಗೆ ರೂ 44 12 ಕೋಟಿ ಮತ್ತು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ರೂ 1 00 ಕೋಟಿ ಬಿಡುಗಡೆಯಾಗಿರುತ್ತದೆ

ಇ) ಈ ಯೋಜನೆಯಲ್ಲಿ ನೆಲಮಂಗಲ ಪಟ್ಟಣವು ಸೇರಿದೆಯೇ,

ಇಲ್ಲ

ಈ) ಸೇರದಿದ್ದಲ್ಲಿ ಕಾರಣವೇನು?

ಈ ಯೋಜನೆಯಡಿ ಹಣಕಾಸು ಲಭ್ಯತೆಯ ಮಿತಿಯೊಳಗೆ ಹಾಗೂ ನಿಗದಿಪಡಿಸಿದ ಅರ್ಹತಾ ಮಾನದಂಡ ಆಧಾರದ ಮೇಲೆ ಮೂಲ ಸೌಕರ್ಯ ಲಭಿವೃದ್ಧಿಗಾಗಿ ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ ಈ ಮಿತಿಯಿಂದಾಚೆ ಹೆಚ್ಚಿನ ಹಣಕಾಸು ಸೌಲಭ್ಯ ಇಲ್ಲದಿರುವುದರಿಂದ, ನೆಲಮಂಗಲ ಪಟ್ಟಣ ಸೇರಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1078(1475)**
ಸದಸ್ಯರ ಹೆಸರು	**ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಖಾಸಗಿಯವರು ಒಂದೇ ನಂಬರ್‌ನಲ್ಲಿ ಎರಡು-ಮೂರು ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಆ ರೀತಿ ಅವ್ಯವಹಾರಕ್ಕೆ ತೊಡಗಿರುವ ವಾಹನಗಳು ಎಷ್ಟು?

ಏಳು ವಾಹನಗಳು

ಇ) ಈ ವಾಹನಗಳು ಯಾರ ಮಾಲೀಕತ್ವದಲ್ಲಿದೆ?

ಸದರಿ ಏಳು ವಾಹನಗಳು ಈ ಕೆಳಕಂಡವರ ಮಾಲೀಕತ್ವದಲ್ಲಿ ಇರುತ್ತದೆ -

1 KA-01/A-9117- ಶ್ರೀ ಬಿ ಎಸ್ ಇಮ್ರಾನ್‌ಖಾನ್ ಬಿನ್ ನೂರುಲ್ಲಾ ಖಾನ್, 186, MK ರಸ್ತೆ, ಶಂಕರಪುರ, ಬೆಂಗಳೂರು

2 KA-01/B-5454-ಶ್ರೀ ಬಿ ಜಡ್ ಜಮೀರ್ ಅಹ್ಮದ್‌ಖಾನ್, ನಂ 362, TSP ರಸ್ತೆ, ಕಲಾಸಿಪಾಳ್ಯಂ, ಬೆಂಗಳೂರು-2

3 KA-05/5 53-ಶ್ರೀ ಕೆ ನಾರಾಯಣ ಬಿನ್ ಕೃಷ್ಣಪ್ಪ, ನಂ 256, 3ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು

4 KA-01/A-3051-ಶ್ರೀಮತಿ ನಿಹಾರಿಕ್ ನೂರುಲ್ಲಾ ಖಾನ್, 186, PMK ರಸ್ತೆ, ಶಂಕರಪುರ, ಬೆಂಗಳೂರು

5 ವಾಹನ ಸಂಖ್ಯೆ KA-01/B-4903 ಶ್ರೀ ಕೆ ಎಸ್ ಅಶೋಕ ಕುಮಾರ್

6 KA-02/A-88-ಶ್ರೀ ಹೆಚ್ ಎಸ್ ಮಹಾಬಲರಾವ್, ಮಾಸ್ಟರ್ ಟ್ರಾವೆಲ್ಸ್, ಬೆಂಗಳೂರು

7 KA-01/A-3051-ಶ್ರೀಮತಿ ಮಿಶಂತ್ ನೂರುಲ್ಲಾ ಖಾನ್, 180 ಪಂಪಮಹಾಕವಿ ರಸ್ತೆ, ಶಂಕರಪುರ, ಬೆಂಗಳೂರು

ಈ) ಇದರಿಂದಾಗಿ ಸರ್ಕಾರಕ್ಕೆ ಆದ ಮತ್ತು ಆಗುತ್ತಿರುವ ನಷ್ಟವೆಷ್ಟು?

ಮೇಲ್ಕಂಡ ಅನುಕ್ರಮ ಸಂಖ್ಯೆ (1) ರಿಂದ (5)ರಲ್ಲಿನ ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತವೆ, ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು ಅನುಕ್ರಮ ಸಂ (6)ರಲ್ಲಿ ಕಾಣಿಸಿರುವ ವಾಹನ ಸಂ KA-02/A-88ಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯದ ಆದೇಶದಂತೆ ಸಾರ್ವಜನಿಕ ಹರಾಜಿಗಾಗಿ ಪೋಲೀಸ್ ಇಲಾಖೆಯನ್ನು ಕೋರಲಾಗಿದೆ, ಈ ವಾಹನದ ಮೇಲೆ ರೂ 13,76,000/-ಗಳ ತೆರಿಗೆ ಬಾಕಿ ಇದೆ ಅನುಕ್ರಮ ಸಂ (7)ರಲ್ಲಿ ಕಾಣಿಸಿರುವ ವಾಹನ ಸಂ KA-01/A-3051ರ ಮೇಲೆ ಒಟ್ಟು ರೂ 10,19,000/- ತೆರಿಗೆ ಬಾಕಿ ಇದೆ ಸದರಿ ವಾಹನವನ್ನು ಈಗಾಗಲೇ ಸಾರ್ವಜನಿಕ ಬಹಿರಂಗ ಹರಾಜಿನ ಮೂಲಕ ರೂ 1,75,000/-ಗಳಿಗೆ ವಿಲೇ ಮಾಡಲಾಗಿದ್ದು, ಬಾಕಿ ಮೊತ್ತದ ವಸೂಲಾತಿಗೆ ಕ್ರಮ ವಹಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**080(1477)**
ಸದಸ್ಯರ ಹೆಸರು	**ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)**

ಅ) 2006-07ನೇ ಸಾಲಿನಲ್ಲಿ ಲೆ ಶೀ 5054ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯರಸ್ತೆಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು?

2006-07ನೇ ಸಾಲಿನಲ್ಲಿ ಲೆ ಶೀ 5054ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು ರೂ 414 07ಲಕ್ಷಗಳ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ

ಆ) ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ಪೂರ್ಣ ಮಾಹಿತಿ ನೀಡುವುದು)?

ತಾಲ್ಲೂಕುವಾರು ಬಿಡುಗಡೆ ಮಾಡಲಾದ ಹಣದ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರಸಂ	ತಾಲ್ಲೂಕುಗಳು	ಹಣ ಭರವಸೆ ಪತ್ರ
1	ಹೊಸಕೋಟೆ	17 84
2	ದೊಡ್ಡಬಳ್ಳಾಪುರ	30 57
3	ದೇವನಹಳ್ಳಿ	14 16
4	ಕನಕಪುರ	47 21
5	ರಾಮನಗರ	239 08
6	ಚೆನ್ನಪಟ್ಟಣ	39 36
7	ಮಾಗಡಿ	17 35
8	ನೆಲಮಂಗಲ	8 50
	ಒಟ್ಟು	**414 07**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1081(1478)**

ಸದಸ್ಯರ ಹೆಸರು **ಶ್ರೀ ಅಂಜನಾಮೂರ್ತಿ (ನೆಲಮಂಗಲ)**

ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)**

ಅ) ನೆಲಮಂಗಲ ಪಟ್ಟಣದ ಜನಸಂಖ್ಯೆ 35,000 ಕ್ಕೂ ಮೇಲ್ಪಟ್ಟಿದ್ದು ಕುಡಿಯುವ ನೀರಿನ ಅಭಾವ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ,

ಬಂದಿದೆ

ಆ) ಕುಡಿಯುವ ನೀರಿನ ಅಭಾವ ಶಾಶ್ವತವಾಗಿ ತಪ್ಪಿಸಲು ಪೀಣ್ಯ – ದಾಸರಹಳ್ಳಿಯಿಂದ ಕಾವೇರಿ ನೀರನ್ನು ಒದಗಿಸಲು ಸರ್ಕಾರ ಆಸಕ್ತಿ ವಹಿಸುವುದೆ?

ಬೆಂಗಳೂರು ಜಲ ಮಂಡಳಿಯು ಬೆಂಗಳೂರು ನಗರ ಪ್ರದೇಶ ಹಾಗೂ ಬೆಂಗಳೂರು ಸುತ್ತಲಿರುವ ಏಳು ನಗರಸಭೆ ಮತ್ತು ಒಂದು ಪುರಸಭೆಗಳಿಗೆ ನೀರು ಪೂರೈಸಲು ನೀರಿನ ಅಭಾವವಿರುವುದರಿಂದ ಇತರೆ ಪಟ್ಟಣಗಳಿಗೆ ಕಾವೇರಿ ನೀರು ಒದಗಿಸಲು ಸಾಧ್ಯವಾಗುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1082(1535)**
ಸದಸ್ಯರ ಹೆಸರು **ಡಾ ಅನ್ನದಾನಿ ಕೆ (ನೆಲಮಂಗಲ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ರಾಷ್ಟ್ರೀಯ ಹೆದ್ದಾರಿ 209 ರ ರಸ್ತೆಯು ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ದಳವಾಯಿ ಕೋಡಹಳ್ಳಿಯಿಂದ ಹಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನದೊಡ್ಡಿಯವರೆಗೆ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಸರ್ಕಾರದ ಗಮನಕ್ಕೆ ಬಂದಿದೆ

ಆ) ಪೂರ್ಣ ಪ್ರಮಾಣದಲ್ಲಿ ಕೆಟ್ಟಿರುವ ಈ ರಸ್ತೆಯ ದುರಸ್ತಿಗೆ ಕಳೆದ ಮೂರು ವರ್ಷಗಳಲ್ಲಿ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ?

ರಾಹೆ–209, ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373 00 ರಿಂದ ಕಿಮೀ 399 00 ರವರೆಗಿನ ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ದಳವಾಯಿ ಕೊಡಹಳ್ಳಿಯಿಂದ ಹ್ಯಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನ ದೊಡ್ಡಿವರೆಗಿನ ರಸ್ತೆ ದುರಸ್ತಿಗೆ ಕೈಗೊಂಡಿರುವ ಕ್ರಮದ ಮಾಹಿತಿಯು ಈ ಕೆಳಗಿನಂತಿದೆ

1) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373 00 ರಿಂದ ಕಿಮೀ 380 00 ರವರೆಗಿನ ರಸ್ತೆ ಅಗಲೀಕರಣ ಕಾಮಗಾರಿಯು 2006ನೇ ಫೆಬ್ರವರಿಯಲ್ಲಿ ರೂ 481 778 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯಾಗಿದ್ದು ಈ ಕಾಮಗಾರಿಯನ್ನು ಟೆಂಡರಿನ ಆಧಾರದ ಮೇಲೆ ಗುತ್ತಿಗೆಯನ್ನು ವಹಿಸಲಾಗಿದ್ದು, 2007ನೇ ಡಿಸೆಂಬರ್ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು

2) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 380 00 ರಿಂದ ಕಿಮೀ 386 00 ರವರೆಗಿನ ರಸ್ತೆ ಅಗಲೀಕರಣ ಹಾಗೂ ಪುನರ್ ನಿರ್ಮಿಸುವ ಕಾಮಗಾರಿಗೆ ರೂ 600 00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯಕ್ಕೆ ಅನುಮೋದನೆಗಾಗಿ

ಸಲ್ಲಿಸಲಾಗಿದೆ ಅನುಮೋದನೆಯು ನಿರೀಕ್ಷೆ ಹಂತದಲ್ಲಿದ್ದು ಸದ್ಯದಲ್ಲೇ ಟೆಂಡರ್ ಮುಖೇನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಈ ಭಾಗದ ರಸ್ತೆಯನ್ನು ದುರಸ್ತಿಗೊಳಿಸಿ ಸುಸ್ಥಿತಿಯಲ್ಲಿಡಲಾಗಿದೆ

3) ರಾಹೆ-209 ದಿಂಡಿಗಲ್-ಬೆಂಗಳೂರು ಭಾಗದ ಕಿಮೀ 386 00 ರಿಂದ ಕಿಮೀ 392 00 ರವರೆಗಿನ ರಸ್ತೆ ಅಗಲೀಕರಣ ಹಾಗೂ ಪುಸರ್ ನಿರ್ಮಿಸುವ ಕಾಮಗಾರಿಯು ಫೆಬ್ರವರಿ 2006 ರಲ್ಲಿ ರೂ 364 22 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯಾಗಿದ್ದು ಈ ಕಾಮಗಾರಿಯನ್ನು ಟಂಡರಿನ ಆಧಾರದ ಮೇಲೆ ವಹಿಸಲಾಗಿದೆ ಸದರಿ ಕಾಮಗಾರಿಯಲ್ಲಿ ರಸ್ತೆಯ ಅರ್ಧ ಭಾಗದ 3 ಕಿಮೀ ಉದ್ದಕ್ಕೆ ಮೆಂಟ್ಲಿಂಗ್ ಮತ್ತು ಬಿಟುಮಿನಸ್ ಮೆಕಾಡಮ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಉಳಿದ ಕಾಮಗಾರಿಯು ಪ್ರಗತಿಯಲ್ಲಿದೆ ಹಾಗೂ 2007ನೇ ಮೇ ಅಂತ್ಯದೊಳಗಾಗಿ ಪೂರ್ಣಗೊಳಿಸಲಾಗುವುದು

ರಾಹೆ-209 ದಿಂಡಿಗಲ್-ಬೆಂಗಳೂರು ಭಾಗದ ಕಿಮೀ 392 00 ರಿಂದ ಕಿಮೀ 402 00 ರವರೆಗಿನ ರಸ್ತೆ ಅಗಲೀಕರಣ (2 ಪಥ ರಸ್ತೆ ವಿಸ್ತರಣೆ) ಕಾಮಗಾರಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ 2004-05ನೇ ಸಾಲಿನ 2004ನೇ ಅಕ್ಟೋಬರ್‌ನಲ್ಲಿ ಅನುಮೋದನೆಯಾಗಿರುತ್ತದೆ ಸದರಿ ಕಾಮಗಾರಿಗೆ 2004-05ನೇ ಸಾಲಿನ ಆಗಸ್ಟ್ 2004ರಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ಪ್ರಾರಂಭದ ದಿನ 1 2 2005 ಮತ್ತು ಮುಕ್ತಾಯದ ದಿನ 29 10 2005 ಆಗಿತ್ತು ಆದರೆ ಸದರಿ ಕಾಮಗಾರಿಯನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸುವಲ್ಲಿ ಗುತ್ತಿಗೆದಾರರು ವಿಫಲರಾಗಿರುತ್ತಾರೆ ಆದಕಾರಣ, ಕಾಮಗಾರಿಯನ್ನು ಗುತ್ತಿಗೆ ಕರಾರಿನ (ಪಿಡಬ್ಲ್ಯೂಜಿ-65 ರಂತೆ) ನಿಯಮಾನುಸಾರ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ "ಜವಾಬ್ದಾರಿ ಮತ್ತು ವೆಚ್ಚ"ದಲ್ಲಿ ಜುಲೈ-2006 ರಲ್ಲಿ ರದ್ದುಗೊಳಿಸಲಾಗಿದೆ ಉಳಿಕೆ ಕಾಮಗಾರಿಯನ್ನು ಜುಲೈ 2006 ರಲ್ಲಿ ಮರುಟೆಂಡರು ಕರೆದು, ಟೆಂಡರ್ ಪ್ರೀಮಿಯಂ ಅತಿ ಹೆಚ್ಚು ಬಂದಿರುವುದರಿಂದ ಮರು ಟೆಂಡರ್ ಕರೆಯಲಾಗಿದೆ ಹಾಗೂ ಇದರ ಜೊತೆಗೆ ಪರಿಷ್ಕೃತ ಅಂದಾಜುಪಟ್ಟಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅನುಮೋದನೆ ದೊರೆಯಬೇಕಿದ್ದು, ಮಾರ್ಚ್ 2007 ರ ಅಂತ್ಯದ ವೇಳೆಗೆ ಅನುಮೋದನೆ ನಿರೀಕ್ಷಿಸಲಾಗಿದೆ ಸದರಿ ಪರಿಷ್ಕೃತ ಅಂದಾಜಿಗೆ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1084(1537)
ಸದಸ್ಯರ ಹೆಸರು	ಡಾ ಅನ್ನದಾನಿ ಕೆ (ಮಳವಳ್ಳಿ)
ಉತ್ತರಿಸುವ ಸಚಿವರು	ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಮಳವಳ್ಳಿ ತಾಲ್ಲೂಕಿನಿಂದ ರಾಮನಗರ – ಚನ್ನಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದು ನಿಜವಲ್ಲವೆ,

ಹೌದು

ಆ) ಈ ಮಾರ್ಗದ ಮಧ್ಯದಲ್ಲಿ ಬರುವ ಹಲಗೂರು – ಹೊನ್ನಾಪುರ – ಒಳಗೆರೆದೊಡ್ಡಿ – ಬೆನಮನಹಳ್ಳಿ–ನಿಟ್ಟೂರು – ಎನ್ ಹಲಸಹಳ್ಳಿ–ಕುಂತೂರು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಆದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ (ಇವುಗಳಲ್ಲಿ ಹೊನ್ನಾಪುರ, ಒಳಗೆರೆದೊಡ್ಡಿ ಸೇರಿರುವುದಿಲ್ಲ)

ಇ) ಹಾಗಿದ್ದಲ್ಲಿ, ಆ ಗ್ರಾಮಗಳಿಗೆ ಕುಡಿಯುವ ನೀರನ್ನು ಇದುವರೆವಿಗೂ ಕೊಡದಿರಲು ಕಾರಣವೇನು?

ರಾಮನಗರ–ಚನ್ನಪಟ್ಟಣ ನೀರು ಸರಬರಾಜು ಯೋಜನೆಯಡಿ ಮಾರ್ಗಮಧ್ಯೆ ಬರುವ ಹಲಗೂರು ಹಾಗೂ ಇತರ 7 ಗ್ರಾಮಗಳಾದ ಹೊನ್ನಾಪುರ, ಬೆನಮನಹಳ್ಳಿ, ನರೀಪುರ, ಕುಂತೂರು, ಬ್ಯಾಡರಹಳ್ಳಿ, ಎನ್ ಹಲಸಹಳ್ಳಿ ಹಾಗೂ ನಿಟ್ಟೂರು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ದಿನಾಂಕ 25 3 03 ಮತ್ತು 29 3 05 ರಲ್ಲಿ ರೂ 30 00 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ ಇವುಗಳಲ್ಲಿ ಕೊನ್ನಾಪುರ ಗ್ರಾಮಕ್ಕೆ ರೂ 9 60 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿದೆ ಹಾಗೂ ಹಲಗೂರು ಗ್ರಾಮಕ್ಕೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವ ರೂ 8 30 ಲಕ್ಷಗಳ ಕಾಮಗಾರಿಯನ್ನು ಮಂಡಳಿ ವತಿಯಿಂದ ಕೈಗೊಂಡು ನೀರಿನ ಸೌಕರ್ಯ ಕಲ್ಪಿಸಲಾಗಿದೆ ಬಿಡುಗಡೆಯಾದ ಹಣದಲ್ಲಿ ರೂ 9 90 ಲಕ್ಷಗಳನ್ನು ಜಿಲ್ಲಾ ಪಂಚಾಯಿತಿ, ಬೆಂಗಳೂರು ಗ್ರಾಮಾಂತರ ಇವರು ಹಿಂದೆ ಪಡೆದಿರುತ್ತಾರೆ ಇದರಿಂದಾಗಿ ಮಂಡಳಿಯಲ್ಲಿ ಕೇವಲ ರೂ 2 20 ಲಕ್ಷಗಳು ಮಾತ್ರ ಉಳಿದಿರುತ್ತದೆ ಆದುದರಿಂದ ಉಳಿದ ಕಾಮಗಾರಿಗಳಿಗೆ ನೀರು ಸರಬರಾಜು ಮಾಡಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1085(1424)**
ಸದಸ್ಯರ ಹೆಸರು **ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)**
ಉತ್ತರಿಸುವ ಸಚಿವರು **ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸಾರಿಗೆ ಇಲಾಖೆಯಲ್ಲಿ ಬೇರೆ ಇಲಾಖೆಯಿಂದ ಬಂದ (ಸೂಪರನ್ಯೂಮರಿ ಹುದ್ದೆ) ದ್ವಿದ ಸ ಹುದ್ದೆಯ ದಿನಗೂಲಿ ನೌಕರರು ಎಷ್ಟು?

ಸುಮಾರು 41 ನೌಕರರು (ಸೂಪರನ್ಯೂಮರರಿ) ಬೇರೆ ಇಲಾಖೆಯಿಂದ ದ್ವಿದ ಸ ರಾಗಿ ಸಾರಿಗೆ ಇಲಾಖೆಯಲ್ಲಿ ನೇಮಕಗೊಂಡಿರುತ್ತಾರೆ

ಆ) ಇವರಿಗೆ ದ್ವಿದ ಸ ಹುದ್ದೆಯಿಂದ ಪ್ರದ ನ ಹುದ್ದೆಗೆ ಬಡ್ತಿ ನೀಡಿರುವುದು ನಿಜವೇ?

ಇಲ್ಲ

ಇ) ಇಲಾಖೆಯ ಆಯುಕ್ತರಿಗೆ ಬಡ್ತಿ ನೀಡಲು ಅಧಿಕಾರವಿದೆಯೇ?

ಇಲಾಖೆಯಲ್ಲಿನ ಗ್ರೂಪ್-ಸಿ ಮತ್ತು ಡಿ ಹುದ್ದೆಯ ನೌಕರರಿಗೆ ಬಡ್ತಿ ನೀಡಲು ಸಾರಿಗೆ ಆಯುಕ್ತರಿಗೆ ಅದಿಕಾರವಿರುತ್ತದೆ

ಈ) ಕೆಲಸಕ್ಕೆ ಸೇರಿದಾಗಿನಿಂದಲೂ ಸಾರಿಗೆ ಆಯುಕ್ತರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಯಾರು ಯಾರು ಹಾಗೂ ಅವರನ್ನು ವರ್ಗಾವಣೆ ಮಾಡದಿರಲು ಅಧಿಕಾರವಿದೆಯೇ?

1) ಪ್ರದ ಸ – 10 ಜನ
2) ದ್ವಿದ ಸ – 06 ಜನ
3) ವಾ ಚಾಲಕರು – 03 ಜನ
4) ಬೆರಳಚ್ಚುಗಾರರು – 11 ಜನ

ವರ್ಗಾವಣೆಗಾಗಿ ಅರ್ಹರಿರುವ ನೌಕರರ ಪಟ್ಟಿಯನ್ನು ಇಲಾಖಾ ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಮಂಡಿಸಿದಾಗ, ಈ ನೌಕರರಿಗೆ ಸಂಬಂಧಿಸಿದಂತೆ ವರ್ಗಾವಣೆ ಶಿಫಾರಸ್ಸು ಮಾಡಿರುವುದಿಲ್ಲ

ಉ) ಪ್ರಾದೇಶಿಕ ಸಾರಿಗೆ ಕಛೇರಿ ಜಯನಗರದಲ್ಲಿ, ಆಟೋರಿಕ್ಷಾ ಪರವಾನಿಗೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ?

ಇಲ್ಲ

ಊ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಉದ್ಭವಿಸುವುದಿಲ್ಲ

ಋ) ಆಯುಕ್ತರ ಕಛೇರಿಯಲ್ಲಿ ಹೊಸ ವಾಹನಗಳಿಗೆ ಹೊಸ ನಂಬರ್ ಕೊಡುವುದು ನಿಜವೇ?

ಆಯುಕ್ತರ ಕಛೇರಿಯಲ್ಲಿ ಹೊಸ ವಾಹನಗಳಿಗೆ ವಿಶೇಷ ನೋಂದಣಿ ಸಂಖ್ಯೆಗಳನ್ನು ಮಾತ್ರ ನೀಡಲಾಗುತ್ತದೆ

ಎ) ಹಾಗಿದ್ದಲ್ಲಿ ಒಂದು ನಂಬರ್‌ಗೆ 25,000-00 ರೂ ಗಳನ್ನು ಕಟ್ಟಿದರೂ ಸಹ ಕಡತಗಳ ವಿಲೇವಾರಿಯಲ್ಲಿ ಒಂದು ತಿಂಗಳಾಗುತ್ತಿದೆ ಈ ವಿಳಂಬವಾಗಲು ಕಾರಣವೇನು?

ವಿಶೇಷ ಸಂಖ್ಯೆಯನ್ನು ಹಂಚಿಕೆ ಮಾಡಿದ ನಂತರ ಶುಲ್ಕ ರೂ 25,000/- ಗಳನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಪಾವತಿಸಬೇಕಾಗಿರುತ್ತದೆ ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1086(1425)**
ಸದಸ್ಯರ ಹೆಸರು	**ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ರಾಜ್ಯ ಹೆದ್ದಾರಿ ಕೆ ಐ ಎಸ್ ಪಿ ಯೋಜನೆಯಲ್ಲಿ ಅಭಿವೃದ್ಧಿಪಡಿಸಿರುವ ಶಕ್ತಿ ನಗರ ದಿಂದ ಬೂದಗುಂಪ ಕ್ರಾಸ್‌ನವರೆಗೆ ರಾಜ್ಯ ಹೆದ್ದಾರಿಯನ್ನು-23 ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಕಾರ್ಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1087(1426)**
ಸದಸ್ಯರ ಹೆಸರು	**ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ಕುಮಾರಸ್ವಾಮಿ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಮಂಜೂರಾಗಿರುವ 220 ಕೆ ವಿ ವಿದ್ಯುತ್ ನಿರ್ವಹಣೆ ಕೇಂದ್ರದ ಕಾಮಗಾರಿಗಳು ಯಾವ ಹಂತದಲ್ಲಿದೆ,

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಒಂದು 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರವು ಮಂಜೂರಾಗಿರುತ್ತದೆ ಸದರಿ ವಿದ್ಯುತ್ ವಿತರಣಾ

ಕೇಂದ್ರದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ಆ) ಈ ವಿತರಣಾ ಕೇಂದ್ರದ ಕಾಮಗಾರಿ ಪೂರ್ಣಗೊಳಿಸುವ ಹಾಗೂ 220 ಕ ವಿ ಲೈನ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ಹೌದು, ಇದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1088(1427)**
ಸದಸ್ಯರ ಹೆಸರು	**ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)**

ಅ) ಉತ್ತರ ಕರ್ನಾಟಕ 25 ಪಟ್ಟಣಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಗಳು ಯಾವ ಹಂತದಲ್ಲಿವೆ

ಉತ್ತರ ಕರ್ನಾಟಕದ 25 ಪಟ್ಟಣಗಳ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕ ನಗರ ವಿಭಾಗೀಯ ಹೂಡಿಕಾ ಕಾರ್ಯಕ್ರಮ (NKUSIP) ಯೋಜನೆಯನ್ನು ಏಷ್ಯನಾ ಅಭಿವೃದ್ಧಿ ಬ್ಯಾಂಕ್‌ನ ಸಾಲದ ನೆರವಿನೊಡನೆ ಕೈಗೆತ್ತಿಕೊಳ್ಳಲಾಗಿದೆ

ಯೋಜನೆಯ ಪ್ರಸ್ತುತ ಹಂತ ಈ ಕೆಳಕಂಡಂತಿದೆ –

ಸಮಾಲೋಚಕರ ನೇಮಕಾತಿಗಾಗಿ ದಿನಾಂಕ 12–3–2007 ರಂದು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿರುತ್ತದೆ ಪ್ರಸ್ತುತ ಪ್ರಸ್ತಾವನೆಗಳ ತಾಂತ್ರಿಕ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ

ಆ) ಈ 25 ಪಟ್ಟಣಗಳಿಗೆ ಏ ಡಿ ಬಿ ಯಿಂದ ತೆಗೆದುಕೊಂಡಿರುವ ಸಾಲದ ಮೊತ್ತವೆಷ್ಟು,

ಈ ಕಾರ್ಯಕ್ರಮದ ಒಟ್ಟು ಅಂದಾಜು ಮೊತ್ತ ಯು ಎಸ್ ಡಾಲರ್ 440 ಮಿಲಿಯನ್ ಗಳಾಗಿದ್ದು, ಯು ಎಸ್ ಡಾಲರ್ 264 ಮಿಲಿಯನ್ (ರೂ 1188 ಕೋಟಿ) ಗಳನ್ನು ಏ ಡಿ ಬಿ ಇಂದ ಸಾಲ ಪಡೆಯಲು ನಿರ್ಧರಿಸಲಾಗಿರುತ್ತದೆ

ಇ) ಮಂಜೂರಾಗಿರುವ ಈ ಯೋಜನೆಯ ಮೊದಲನೇ ಹಂತದಲ್ಲೇ ಸಿಂಧನೂರು ಪಟ್ಟಣವನ್ನು ತೆಗೆದುಕೊಳ್ಳುವ ಉದ್ದೇಶವಿದೆಯೇ,

ಕಾಮಗಾರಿಗಳ ಅನುಷ್ಠಾನಪಡಿಸುವ ಸ್ಥಿತಿಯನ್ನಾಧರಿಸಿ, ಏ ಡಿ ಬಿ ಯಿಂದ ಸಾಲವನ್ನು ಕಂತುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ ಇದರಿಂದ Transaction

ವೆಚ್ಚವನ್ನು ಕಡಿಮೆಗೊಳಿಸಬಹುದಾಗಿದೆ ಹಾಗಾಗಿ ರಾಯಚೂರು, ಹಾವೇರಿ ಮತ್ತು ಹೊಸಪೇಟೆ ಪಟ್ಟಣಗಳಲ್ಲಿ ಸ್ವಾದೀನ ಪಡಿಸಿಕೊಳ್ಳಲು ಆಯ್ಕೆ ಮಾಡಿರುವ ಭೂಮಿಗೆ ಪುನರ್ ವಸತಿ ನಕ್ಷೆಯನ್ನು ತಯಾರಿಸಲಾಗಿರುವುದರಿಂದ, ಈ ಪಟ್ಟಣಗಳನ್ನು ಮೊದಲನೇ ಕಂತಿನಲ್ಲಿ ತೆಗೆದುಕೊಳ್ಳಲಾಗುತ್ತಿದೆ ಉಳಿದ ಪಟ್ಟಣಗಳಿಗೆ, ಸಿಂಧನೂರನ್ನು ಸೇರಿಸಿ, ಕಾಮಗಾರಿಗಳ ಅನುಷ್ಠಾನಪಡಿಸುವ ಸ್ಥಿತಿಯನ್ನಧರಿಸಿ, ಮುಂದಿನ ಕಂತುಗಳಲ್ಲಿ ತೆಗೆದುಕೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1090(1520)**
ಸದಸ್ಯರ ಹೆಸರು	**ಶ್ರೀ ಬಾಲರಾಜ್ ಎಸ್(ಕೊಳ್ಳೆಗಾಲ)**
ಉತ್ತರಿಸುವ ಸಚಿವರು	**ಶ್ರೀ ಬಿ ಶ್ರೀರಾಮುಲು(ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ಕೊಳ್ಳೇಗಾಲ ಕ್ಷೇತ್ರದ ತಾಲ್ಲೂಕು ಕೇಂದ್ರ ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಿಸುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದರೆ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಹೌದು, ಶೌಚಾಲಯ ಹಾಗೂ ಇತರ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲು ಸೂಕ್ತವಾದ ನಿವೇಶನ ಹಾಗೂ ಜಮೀನುಗಳನ್ನು ಒದಗಿಸುವಂತೆ ಚಾಮರಾಜನಗರ ಜಿಲ್ಲಾಡಳಿತವನ್ನು ಕೋರಲಾಗಿದೆ ಸದರಿಯವರಿಂದ ಸೂಕ್ತ ನಿವೇಶನ ದೊರೆತ ಕೂಡಲೇ ಈ ದಿಶೆಯಲ್ಲಿ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1094(1359)**
ಸದಸ್ಯರ ಹೆಸರು	**ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ)**
ಉತ್ತರಿಸುವ ಸಚಿವರು	**ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೆ,

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯು ದಿನಾಂಕ 2 07 2005 ರಂದು ಪ್ರಾರಂಭವಾಗಿದೆ

ಆ) ಪ್ರಾರಂಭವಾಗಿದ್ದಲ್ಲಿ, ಈವರೆಗಿನ ಪ್ರಗತಿ ಏನು,

ಇದುವರೆವಿಗೂ, ರನ್‌ವೇ, ಟ್ಯಾಕ್ಸಿ ವೇ ಮತ್ತು ಏಪ್ರಾನ್ ಪ್ರದೇಶದಲ್ಲಿ ಗ್ಯಾನ್ಯುಲಾರ್ ಸಬ್ ಬೇಸ್ ಹಾಕುವ ಕಾರ್ಯವು ಸೇರಿಕೊಂಡಂತೆ ಕೆಲಸ ಪೂರ್ಣಗೊಂಡಿದೆ ರನ್ ವೇಗ ಡಾಂಬರೀಕರಣವು ಹಾಗೂ ಏಪ್ರಾನ್ ಪ್ರದೇಶಕ್ಕೆ ಕಾಂಕ್ರೀಟ್ ಪೇವ್‌ಮೆಂಟ್ ಕೆಲಸವು ಸಾಗುತ್ತಿದೆ ಹಾಗೆಯೇ, ಟರ್ಮಿನಲ್ ಕಟ್ಟಡ, ATC ಕಟ್ಟಡಗಳಿಗೆ ಕಾಂಕ್ರೀಟ್ ಹಾಕುವ/ಮೇಲ್ಛಾವಣಿ ಕೆಲಸವು ಸಹ ತ್ವರಿತಗತಿಯಲ್ಲಿ ಸಾಗಿವೆ ಮೆಕಾನಿಕಲ್ ನಿರ್ವಹಣೆ ಕಟ್ಟಡ, ಏರ್‌ಕ್ರಾಫ್ಟ್ ರಕ್ಷಣೆ ಮತ್ತು ಅಗ್ನಿ ಶಾಮಕ ಕಟ್ಟಡ, ಮುಖ್ಯ ವಿದ್ಯುಚ್ಛಕ್ತಿ ಸಬ್–ಸ್ಟೇಷನ್, ಐಟಿ ವ್ಯವಸ್ಥೆ, ಸುರಕ್ಷಿತ ಮತ್ತು ಭದ್ರತೆ ವ್ಯವಸ್ಥೆ, ವೈಮಾನಿಕ ಕ್ಷೇತ್ರಕ್ಕೆ ಬೆಳಕು ಒದಗಿಸುವ ಸಾಮಗ್ರಿ ಈ ಕಾರ್ಯಗಳೆಲ್ಲ ಪ್ರಾರಂಭಗೊಂಡಿವೆ

ಇ) ಈ ಕಾಮಗಾರಿಯು ಯಾವಾಗ ಮುಗಿಯುತ್ತದೆ ಹಾಗೂ ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಒದಗಿಸಲಾಗಿದೆ,

ಈ ಕಾಮಗಾರಿಯು ಮಾರ್ಚ್ 2008ರ ಅಂತ್ಯಕ್ಕೆ ಮುಗಿಯುತ್ತದೆ ಇದಕ್ಕಾಗಿ ಒಟ್ಟು 4006 38 ಎಕರೆ ಜಮೀನನ್ನು ಒದಗಿಸಲಾಗಿದೆ

ಈ) ಇದರಲ್ಲಿ ಸರ್ಕಾರಿ ಹಾಗೂ ಖಾಸಗೀ ಜಮೀನು ಎಷ್ಟು,

ಇದರಲ್ಲಿ 1754 ಎಕರೆ ಸರ್ಕಾರಿ ಜಮೀನು ಹಾಗೂ 2252 38 ಎಕರೆ ಖಾಸಗಿ ಜಮೀನು

ಉ) ಖಾಸಗಿ ಜಮೀನು ಮಾಲೀಕರಿಗೆ ಸರ್ಕಾರವು ಯಾವ ರೀತಿಯ ಪರಿಹಾರವನ್ನು ಒದಗಿಸಲಾಗಿದೆ ಹಾಗೂ ಇದರಿಂದ ತೊಂದರೆ ಗೊಳಗಾದ ಜಮೀನು ಮಾಲೀಕರಿಗೆ ಪರಿಹಾರವನ್ನು ಪೂರ್ಣವಾಗಿ ನೀಡಲಾಗಿದೆಯೆ

1999–2000ರಲ್ಲಿ ಮೊದಲ ಹಂತದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಖಾಸಗೀ ಜಮೀನು ಮಾಲೀಕರಿಗೆ ಸರ್ಕಾರವು ಎಕರೆ ಒಂದಕ್ಕೆ ರೂ 5 00 ಲಕ್ಷದಂತೆ ಪರಿಹಾರವನ್ನು ಒದಗಿಸಿದೆ ಇದಲ್ಲದೆ, ಜಮೀನಿನಲ್ಲಿರುವ ಮರಮುಟ್ಟುಗಳ ಹಾಗೂ ಕಟ್ಟಡಗಳಿಗೆ ಪರಿಹಾರ ಧನವನ್ನು ಸಹ ನೀಡಲಾಗಿದೆ 2006–07 ರಲ್ಲಿ ಸ್ವಾಧೀನ ಪಡಿಸಿಕೊಂಡ ಹೆಚ್ಚುವರಿ 168 ಎಕರೆ ಭೂಮಿಗೆ ಪ್ರತಿ ಎಕರೆಗೆ ಸರಾಸರಿ ರೂ 25–30 ಲಕ್ಷಗಳಷ್ಟು ಪರಿಹಾರ ಒದಗಿಸಲಾಗಿದೆ ಮೊದಲ ಹಂತದ ಭೂಸ್ವಾಧೀನಕ್ಕೆ ಸಂಪೂರ್ಣ ಹಣ ಪಾವತಿ ಮಾಡಿದ್ದು, ಹೆಚ್ಚುವರಿ ಭೂಮಿಗೆ ಪರಿಹಾರ ಪಾವತಿಯು ಅಂತಿಮ ಹಂತದಲ್ಲಿದೆ ಅಲ್ಲದೆ, ತೊಂದರೆಗೊಳಗಾದ ಜಮೀನು ಮಾಲೀಕರಿಗೆ ಸರ್ಕಾರವು ಪುನರ್ವಸತಿ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕಿನ ಸಮೀಪದ ಬಾಲೆಪುರ ಗ್ರಾಮದಲ್ಲಿ ನಿರ್ಮಿಸಿ, ಉಚಿತ ನಿವೇಶವನ್ನು ಒದಗಿಸಿ ಕೊಡಲಾಗಿದೆ

ಇದರ ಜೊತೆಗೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡ ಅಂಗನವಾಡಿ ಕಟ್ಟಡ ಮತ್ತು ಮೂರು ದೇವಸ್ಥಾನಗಳನ್ನು ಪುನರ್ ನಿರ್ಮಿಸಲಾಗಿದೆ

ಊ) ನೀಡದೆ ಇದ್ದಲ್ಲಿ, ಪರಿಹಾರ ನೀಡುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು,

ಉದ್ಭವಿಸುವುದಿಲ್ಲ

ಋ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಪಾಲೇನು (ಪೂರ್ಣ ವಿವರವನ್ನು ನೀಡುವುದು),

ಇದು ಒಂದು ಜಂಟಿ ಉದ್ಯಮ ಯೋಜನೆಯಾಗಿದ್ದು, ಇದರಲ್ಲಿ ಷೇರು ಬಂಡವಾಳದ ಪಾಲುಗೊಳ್ಳುವಿಕೆಯಂತೆ, ಭಾರತ ಸರ್ಕಾರದ ಪರವಾಗಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ರಾಜ್ಯ ಸರ್ಕಾರದ ಪರವಾಗಿ KSIIDC ಸಂಸ್ಥೆ ಮತ್ತು ಖಾಸಗಿ ಪಾಲುದಾರರುಗಳಾದ ಜರ್ಮನಿಯ ಸೀಮೆನ್ಸ್ ಯೋಜನೆ – ಉದ್ಯಮ, ಸ್ವಿಟ್ಜರ್‌ಲ್ಯಾಂಡಿನ ಯೂನಿಕ್ ಜೂರಿಕ್ ವಿಮಾನ ನಿಲ್ದಾಣ, ಭಾರತದ L&T ಸಂಸ್ಥೆಗಳು ಸೇರಿವೆ ಇದರಲ್ಲಿ ಸೀಮೆನ್ಸ್ ಯೋಜನೆ ಷೇರು–ಶೇ 40, ಯೂನಿಕ್ ಜೂರಿಕ್ ವಿಮಾನ ನಿಲ್ದಾಣದ ಷೇರು–ಶೇ 17 L&T ಸಂಸ್ಥೆಯ ಷೇರು – ಶೇ 17 ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಷೇರು–ಶೇ 13 ಮತ್ತು KSIIDC ಯ ಷೇರು–ಶೇ 13 ರಾಜ್ಯ ಸರ್ಕಾರವು ಈ ಯೋಜನೆಗೆ ರೂ 350 ಕೋಟಿಗಳಷ್ಟು ಬಡ್ಡಿರಹಿತ ರಾಜ್ಯ ಬೆಂಬಲ ಸಾಲವನ್ನು ಒದಗಿಸಿ ಇದರ ಮರು ಪಾವತಿಗೆ 20 ವರ್ಷಗಳ ಕಾಲಾವಧಿಯನ್ನು ನಿಗಧಿಪಡಿಸಿ ಮೊದಲ 10 ವರ್ಷಕ್ಕೆ ಮೊರೆಟೋರಿಯಂ ನೀಡಿರುತ್ತದೆ

ಎ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮವಾದ ಮತ್ತು ನೇರ ರೈಲು ಸಂಪರ್ಕ ಹಾಗೂ ಎಕ್ಸ್‌ಪ್ರೆಸ್ ಹೈವೇ ಮಾರ್ಗವನ್ನು ರೂಪಿಸಲು ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ?

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮವಾದ ಮತ್ತು ನೇರ ರೈಲು ಸಂಪರ್ಕ ಸ್ಥಾಪಿಸಲು ಒಂದು ಕಾರ್ಯ ಸಾಧ್ಯ / ಯೋಜನಾ ವರದಿಯನ್ನು ತಯಾರಿಸಲು ದೆಹಲಿ ಮೆಟ್ರೋ ರೈಲ್ ಕಾರ್ಪೊರೇಷನ್ ಸಂಸ್ಥೆಗೆ ವಹಿಸಲಾಗಿದೆ ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದಿಂದ ಎಕ್ಸ್‌ಪ್ರೆಸ್ ಹೈವೆ ಸ್ಥಾಪಿಸುವ ಬಗ್ಗೆ ಅಲೈನ್‌ಮೆಂಟ್ ಕಾರ್ಯ ಕೈಗೊಳ್ಳಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1098(1515)
ಸದಸ್ಯರ ಹೆಸರು ಶ್ರೀ ಆರ್ ಧ್ರುವನಾರಾಯಣ (ಸಂತೇಮರಳ್ಳಿ)
ಉತ್ತರಿಸುವ ಸಚಿವರು ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು ಎಷ್ಟು ವಿಭಾಗಗಳಿವೆ

13 ವಿಭಾಗಗಳಿವೆ

ಆ) ಈ ವಿಭಾಗಗಳ ಮುಖ್ಯಸ್ಥರನ್ನು ನಿಯೋಜಿಸಲು ಸರ್ಕಾರ ಅನುಸರಿಸುವ ಮಾನದಂಡವೇನು

ನಿಗಮದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ದರ್ಜೆ–1 ಹಿರಿಯ/ ದರ್ಜೆ–1 ಆಯ್ಕೆ ಶ್ರೇಣಿ ಅಧಿಕಾರಿಗಳನ್ನು ಈ ಹುದ್ದೆಗೆ ನಿಯೋಜಿಸಲಾಗುತ್ತದೆ

ಇ) ಎಷ್ಟು ವಿಭಾಗಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಧಿಕಾರಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಾಗಿ ನಿಯೋಜಿಸಲಾಗಿದೆ (ವಿವರ ನೀಡುವುದು)

2 (ಎರಡು)

1) ಕೆಂಪೇಗೌಡ ಬಸ್ ನಿಲ್ದಾಣ

2) ಚಿಕ್ಕಬಳ್ಳಾಪುರ

ಈ) ಓರ್ವ ಅಧಿಕಾರಿಯನ್ನು ಎಷ್ಟು ವರ್ಷಗಳ ಕಾಲ ಸತತವಾಗಿ ವಿಭಾಗೀಯ ನಿಯಂತ್ರಣಾಧಿಕಾರಿ ಹುದ್ದೆಗೆ ನಿಯೋಜಿಸಬಹುದಾಗಿದೆ

ಸರ್ಕಾರದ ವರ್ಗಾವಣಾ ನೀತಿಯಂತೆ ಹಾಗೂ ಸಂಸ್ಥೆಯ ಆಡಳಿತದ ಹಿತ ದೃಷ್ಟಿಯಿಂದ 2 ರಿಂದ 3 ವರ್ಷಗಳ ಕಾಲ ಒಂದು ವಿಭಾಗದ ವಿಭಾಗ ನಿಯಂತ್ರಣಾಧಿಕಾರಿಯಾಗಿ ನಿಯೋಜಿಸಲಾಗುವುದು ಆದರೆ ಸಂಸ್ಥೆಯ ಆಡಳಿತದ ಹಿತ ದೃಷ್ಟಿಯಿಂದ ಈ ಅವಧಿಯನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡಲಾಗುವುದು

ಉ) ಕೆಲವು ಅಧಿಕಾರಿಗಳು ವಿಭಾಗೀಯ ನಿಯಂತ್ರಣಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಭಾಗಗಳು ಸತತವಾಗಿ ನಷ್ಟ ಹೊಂದುತ್ತಿದ್ದರೂ ಅಂತಹ ಅಧಿಕಾರಿಗಳನ್ನು ಪದೇ ಪದೇ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ನಿಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇಲ್ಲ

ಊ) ಬಂದಿದ್ದರೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1099(1516)

ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್(ಸಂತೇಮರಳ್ಳಿ)

ಉತ್ತರಿಸುವ ಸಚಿವರು ಶ್ರೀ ಎನ್ ಚಲುವರಾಯಸ್ವಾಮಿ(ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಒಟ್ಟು ಎಷ್ಟು ವಾಣಿಜ್ಯ ಮಳಿಗೆಗಳಿವೆ (ವಿಭಾಗೀಯವಾರು ವಿವರ ನೀಡುವುದು),

ಒಟ್ಟು 2387 ವಾಣಿಜ್ಯ ಮಳಿಗೆಗಳಿರುತ್ತವೆ (ವಿಭಾಗೀಯ ಮಾಹಿತಿಯನ್ನು ಅನುಬಂಧ 'ಎ'ನಲ್ಲಿ ನೀಡಲಾಗಿದೆ)

ಆ) ಸದರಿ ವಾಣಿಜ್ಯ ಮಳಿಗೆಗಳಿಗೆ ಪರವಾನಗಿಯನ್ನು ಯಾವ ಆಧಾರದ ಮೇಲೆ ಎಷ್ಟು ವರ್ಷಗಳ ಅವಧಿಗೆ ನೀಡಲಾಗುತ್ತಿದೆ,

ಸದರಿ ವಾಣಿಜ್ಯ ಮಳಿಗೆಗಳಿಗೆ, ಸಂಸ್ಥೆಯ ಸ್ಥಾಯಿ ಆದೇಶ ಸಂಖ್ಯೆ 492, ದಿನಾಂಕ 23 04 2001 ಹಾಗೂ ಸಾ ಸ್ಥಾ ಆ ಸಂಖ್ಯೆ 584, ದಿ 05 11 06ಗಳ ನಿರ್ದೇಶನಗಳಂತೆ ಟೆಂಡರು/ಹರಾಜು ಮೂಲಕ ಆಯ್ಕೆ ಮಾಡಿ ಪರವಾನಗಿಯನ್ನು ನೀಡಲಾಗುತ್ತಿದೆ ಖಾಲಿ ಸ್ಥಳದಲ್ಲಿನ ವಾಣಿಜ್ಯ ಮಳಿಗೆಗಳಿಗೆ ಮೂರು ವರ್ಷ ಹಾಗೂ ಶಾಶ್ವತ ಕಟ್ಟಡಗಳಲ್ಲಿನ ಮಳಿಗೆಗಳಿಗೆ ಐದು ವರ್ಷ ಗಳಿಗೆ ಅನುಮತಿ ನೀಡಲಾಗುತ್ತಿದೆ

ಇ) ಸದರಿ ವಾಣಿಜ್ಯ ಮಳಿಗೆಗಳನ್ನು ಎಷ್ಟು ಮಂದಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಪರವಾನಗೆದಾರರನ್ನಾಗಿ ಆಯ್ಕೆ ಮಾಡಲಾಗಿದೆ,

ಪರವಾನಗಿದಾರರನ್ನು ಹರಾಜು-ಕಂ-ಟೆಂಡರ್ ಮುಖಾಂತರ ಆಯ್ಕೆ ಮಾಡಿ ಹಂಚಿಕೆ ಮಾಡುವುದರಿಂದ ಯಾರು ಬೇಕಾದರೂ ಹರಾಜು-ಕಂ-ಟೆಂಡರಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಪಡೆಯಬಹುದಾಗಿರುತ್ತದೆ ಆದಕಾರಣ ಆಯ್ಕೆಯಾದವರಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರ ಮಾಹಿತಿ ಲಭ್ಯವಿಲ್ಲ

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ವಾಣಿಜ್ಯ ಮಳಿಗೆಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಮೀಸಲಿಡುವ ಕಾನೂನು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉದ್ಭವಿಸುವುದಿಲ್ಲ

ಉ) ಬಂದಿದ್ದ ಪಕ್ಷದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1100(1517)
ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)
ಉತ್ತರಿಸುವ ಸಚಿವರು ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು)

ಅ) ಚಾಮರಾಜ ಪೇಟೆ ವಿದಾನ ಸಭಾ ಕ್ಷೇತ್ರದ ಮರು ಚುನಾವಣೆ ಸಂದರ್ಭದಲ್ಲಿ ಕೊಳಗೇರಿ ನಿವಾಸಿಗಳಿಗೆ ಅಕ್ಟೋಬರ್ 2, 2006 ಒಳಗೆ ಹಕ್ಕು ಪತ್ರಗಳನ್ನು ವಿತರಿಸುತ್ತೇವೆ ಎಂದು ನೀಡಿದ ಆಶ್ವಾಸನೆಯನ್ನು ಈಡೇರಿಸಲಾಗಿದೆಯೇ?

ಇಲ್ಲ, ಆದರೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ ಬಗ್ಗೆ ಸರ್ಕಾರವು ದಿನಾಂಕ 18-10-2004ರಲ್ಲಿ ಮಂಡಳಿಯ ಕಾಯ್ದೆಗೆ ತಿದ್ದುಪಡಿ ಮಾಡಿ ಅಂತಿಮ ಅಧಿಸೂಚನೆ ಹೊರಡಿಸಿದ್ದು ಈ ಅಧಿಸೂಚನೆಯನ್ವಯ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ ಸರ್ಕಾರದ ಪತ್ರದ ಸಂಖ್ಯೆ ವಇ/17/ಕೊಮಂಇ/2005 ದಿನಾಂಕ 4-4-2006ರ ನಿರ್ದೇಶನದಲ್ಲಿ ಸರ್ಕಾರ/ನಗರ ಸಭೆ/ಪ್ರಾಧಿಕಾರ/ಪುರಸಬೆ ಭೂ ಏಜೆನ್ಸಿಯವರೇ ಹಕ್ಕುಪತ್ರ ನೀಡಬಹುದೆಂದು ಮತ್ತು ಖಾಸಗಿ ಒಡೆತನಕ್ಕೆ ಸೇರಿರುವ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಸದರಿಯವರು ವಾಸವಾಗಿರುವ ಮನೆ/ಗುಡಿಸಲಿನ ಚೆಕ್ಕುಬಂದಿಯನ್ನು ನಮೂದಿಸಿ ಪರಿಚಯ ಪತ್ರಗಳನ್ನು ನೀಡುವಂತೆ ತಿಳಿಸಲಾಗಿರುತ್ತದೆ ಅದರಂತೆ ಮಂಡಳಿಯು ಕ್ರಮವಹಿಸಲಾಗುವುದು

ಆ) ಕೊಳಗೇರಿ ನಿವಾಸಿಗಳಿಗೆ ವಿತರಿಸಿರುವ ಸ್ವಾಧೀನ ಪತ್ರಕ್ಕೆ ಕಾನೂನಿನ ಬೆಂಬಲ ಇಲ್ಲ ಎನ್ನುವುದು ಸರಿಯೇ?

ಕೊಳಗೇರಿ ನಿವಾಸಿಗಳಿಗೆ ನೀಡಲಾಗಿರುವ ಸ್ವಾಧೀನ ಪತ್ರವು ಸದರಿಯವರು ಆ ಪ್ರದೇಶದಲ್ಲಿ ವಾಸಿಸುತ್ತಿರುತ್ತಾರೆ ಎಂಬುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಆದರೆ ಸದರಿ ನಿವಾಸಿಗಳು ವಾಸಿಸುತ್ತಿರುವ ಗುಡಿಸಲು/ಮನೆಯ ಜಾಗದ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ

ಇ) ಹಾಗಿದ್ದಲ್ಲಿ, ಅವರಿಗೆ ಹಕ್ಕುಪತ್ರಗಳನ್ನು ಯಾವಾಗ ವಿತರಿಸಲಾಗುವುದು?

ಸರ್ಕಾರದ ಪತ್ರ ಸಂಖ್ಯೆ ವಇ/17/ಕೊಮಂಇ/2005 ದಿನಾಂಕ 4-4-2006ರಲ್ಲಿ ನಿರ್ದೇಶನ ನೀಡಿರುವಂತೆ ನಿವಾಸಿಗಳು ವಾಸಿಸುತ್ತಿರುವ ಪ್ರದೇಶವು/ಜಾಗವು ಸ್ಥಳೀಯ ಸಂಸ್ಥೆಗಳ ಒಡೆತನಕ್ಕೆ ಸೇರಿದ್ದಲ್ಲಿ ಅಂತಹ ಸ್ಥಳೀಯ ಸಂಸ್ಥೆಗಳೇ ಹಕ್ಕು ಪತ್ರಗಳನ್ನು ನೀಡಬಹುದಾಗಿದೆ ಆದರೆ ಘೋಷಿತ ಖಾಸಗಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಸದರಿಯವರು ವಾಸಿಸುತ್ತಿರುವ ಮನೆ/ಗುಡಿಸಲಿನ ವಿಸ್ತೀರ್ಣದ ಚಕ್ಕುಬಂಡಿ ನಮೂದಿಸಿ ಪರಿಚಯ ಪತ್ರ ನೀಡಲು

ಸರ್ಕಾರವು ನಿರ್ದೇಶನ ನೀಡಿದ್ದು, ಅದರನ್ವಯ ಮಂಡಳಿಯು ಕ್ರಮ ವಹಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1105(1431)
ಸದಸ್ಯರ ಹೆಸರು ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಉತ್ತರಿಸುವ ಸಚಿವರು ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಜವಾಹರಲಾಲ್ ನೆಹರು ನಗರ ಪುನರ್‌ಜ್ಜೀವನ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡವರಿಗೆ ಕಟ್ಟಲಿರುವ ಮನೆಗಳ ಸಂಖ್ಯೆ ಎಷ್ಟು?

ಜೆ ಎನ್ ಎನ್ ಯು ಆರ್ ಎಂ ಯೋಜನೆಯಡಿಯಲ್ಲಿ 2006-2007ರಲ್ಲಿ ಸ್ವೀಕೃತವಾಗಿರುವ / ಅನುಮೋದನೆಯಾಗಿರುವ 2 ಯೋಜನಾ ವರದಿಗಳ (DPR) ಪ್ರಕಾರ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯವರಿಂದ ಬೆಂಗಳೂರು ನಗರದಲ್ಲಿ 11 603 ಮನಗಳು ಹಾಗೂ ಮೈಸೂರು ನಗರದಲ್ಲಿ 2,788 ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ

ಆ) ಈ ಮನೆಗಳನ್ನು ಯಾವ ಪ್ರದೇಶದಲ್ಲಿ ಕಟ್ಟಲಾಗುವುದು?

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯವರು ಬೆಂಗಳೂರು ನಗರದಲ್ಲಿ 30 ಆಯ್ದ ಕೊಳಚೆ ಪ್ರದೇಶಗಳಲ್ಲಿ ಹಾಗೂ ಮೈಸೂರು ನಗರದಲ್ಲಿ 20 ಆಯ್ದ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲಾಗುವುದು

ಇ) ಪ್ರತಿ ಮನಯ ವೆಚ್ಚವೆಷ್ಟು?

ಕರ್ನಾಟಕ ಕೊಳಚ ನಿರ್ಮೂಲನ ಮಂಡಳಿಯವರಿಂದ ನಿರ್ಮಿಸಲಾಗುವ ಮನೆಯ ವೆಚ್ಚ ರೂ 1 25 ಲಕ್ಷಗಳಾಗಿದೆ

ಈ) ಅದರಲ್ಲಿ ಫಲಾನುಭವಿಯ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು?

ನಗರಗಳು	ಅನುಷ್ಠಾನ ಸಂಸ್ಥೆ	ರಾಜ್ಯ ಸರ್ಕಾರದ ಪಾಲು	ಫಲಾನುಭವಿಗಳ ಪಾಲು	ಸ್ಥಳೀಯ ಸಂಸ್ಥೆಯ ಪಾಲು
ಬೆಂಗಳೂರು	ಕ ಕೊ ನಿ ಮ	39 37%	10 63%	-
ಮೈಸೂರು	ಕ ಕೊ ನಿ ಮ	15 75%	4 75%	-

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1106(1433)
ಸದಸ್ಯರ ಹೆಸರು	ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಉತ್ತರಿಸುವ ಸಚಿವರು	ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಡವರ ವಿದ್ಯುತ್ ಬಿಲ್ಲಿನ ಬಾಕಿ ಹಣವನ್ನು ತಡೆಹಿಡಿದು 1–4–2006 ರಿಂದ ಮುಂದಕ್ಕೆ ಬಿಲ್ಲಿನ ನಿಗದಿತ ಹಣ ಪಡೆಯಲು ಆದೇಶಿಸಿರುವುದು ನಿಜವೆ,

ಹೌದು ಬೆಂಗಳೂರು ನಗರದ ಕೊಳಚೆ ಪ್ರದೇಶದ ಪ್ರತಿ ಗೃಹ ಬಳಕೆಯ ಸ್ಥಾವರಗಳ ಲೆಕ್ಕದಲ್ಲಿರುವ ಬಾಕಿಯನ್ನು (1–4–2006 ರಲ್ಲಿದ್ದಂತೆ) ಪ್ರತ್ಯೇಕವಾಗಿ ಉಳಿಸಿಕೊಂಡು 1–4–2006 ರಿಂದ ಮುಂದಿನ ಬಿಲ್ಲಿನ ಹಣವನ್ನು ಮಾತ್ರ ಪಡೆಯಲು ಆದೇಶ ನೀಡಲಾಗಿದೆ

ಆ) ಹಾಗಿದ್ದಲ್ಲಿ, ಬೆಸ್ಕಾಂನ ಎಲ್ಲಾ ಕೌಂಟರ್‌ಗಳಲ್ಲಿಯೂ ಈ ರೀತಿ ಹಣ ಸ್ವೀಕರಿಸದಿರಲು ಕಾರಣವೇನು,

ಕೊಳಚೆ ಪ್ರದೇಶದ ನಿವಾಸಿಗಳಿಂದ ಏಪ್ರಿಲ್–06ರ ನಂತರದ ಮಾಸಿಕ ಬಿಲ್‌ಗಳನ್ನು ಮಾನ್ಯ ಮಾಡಿಕೊಂಡು ಹಣಪಾವತಿಯನ್ನು ಸ್ವೀಕರಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ

ಇ) ದಿನಾಂಕ 1–4–2006ರ ನಂತರದ ಹಣ ಪಾವತಿಸಿದ್ದಾಗ್ಯೂ ಅದಕ್ಕಿಂತ ಹಿಂದಿನ ಬಾಕಿ ಪುನಃ ಬಿಲ್ಲಿನಲ್ಲಿ ನಮೂದಾಗುತ್ತಿದ್ದು, ಅದಕ್ಕೆ ಬಡ್ಡಿ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಈ) ಹಾಗಿದ್ದಲ್ಲಿ, ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆದು ನಗರ ಪ್ರದೇಶದ ಎಲ್ಲಾ ಬಡವರ ಬಿಲ್ಲಿನ ಬಾಕಿ ಹಣದ ಮೇಲಿನ ಬಡ್ಡಿ ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ,

ಬೆಸ್ಕಾಂನಲ್ಲಿ ಬಿಲ್‌ಗಳಿಗೆ ಸಂಬಂಧಿಸಿದ ತಂತ್ರಾಂಶದಲ್ಲಿ ವಿದ್ಯುತ್ ಬಾಕಿ ಮತ್ತು ಬಡ್ಡಿಯನ್ನು ನಮೂದಿಸದೆ ಬಿಲ್ ನೀಡುವ ಸೌಲಭ್ಯವಿರುವುದಿಲ್ಲ ಅಲ್ಲದೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳ ಪ್ರಕಾರ ವಿದ್ಯುತ್ ಬಿಲ್ಲಿನಲ್ಲಿ ಬಾಕಿ ಮೊತ್ತವನ್ನು ಸತತವಾಗಿ ತೋರಿಸದೆ ಇದ್ದಲ್ಲಿ 2 ವರ್ಷಗಳ ನಂತರ ಆ ಬಾಕಿಯನ್ನು ವಸೂಲಿ ಮಾಡಲು ಅವಕಾಶವಿರುವುದಿಲ್ಲ ಆದಾಗ್ಯೂ ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಡವರ ವಿದ್ಯುತ್ ಬಿಲ್ಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1107(1547)**
ಮಾನ್ಯ ಸದಸ್ಯರ ಹೆಸರು	**ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಲಕ್ಷ್ಮೇಶ್ವರ-ಹುಬ್ಬಳ್ಳಿ ರಸ್ತೆ ತುಂಬಾ ಹದಗೆಟ್ಟಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ಈ ರಸ್ತೆ ಸುಧಾರಣೆಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ,

ಈ ರಸ್ತೆಯನ್ನು ಈಗಾಗಲೇ ರಾಜ್ಯ ಹೆದ್ದಾರಿಯ ಮೂರು ವರ್ಷದ ನಿರ್ವಹಣೆಯ ಯೋಜನೆಯ ಗದಗ ಮತ್ತು ಧಾರವಾಡ ವಿಭಾಗದಲ್ಲಿ ಒಟ್ಟು 37 ಕಿಮೀ ರಸ್ತೆಯನ್ನು ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಮತ್ತು ನಿರ್ವಹಣೆಯ ಕಾಮಗಾರಿಗಳು ಪ್ರಗತಿಯಲ್ಲಿವೆ

ಇ) ಹಾಗಿದ್ದಲ್ಲಿ, ಈ ರಸ್ತೆ ಸುಧಾರಣೆಗಾಗಿ ಈವರೆಗೇನಾದರೂ ಅನುದಾನ ಬಿಡುಗಡೆ ಮಾಡಲಾಗಿದೆಯೇ,

ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಗೆ ರೂ 115 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ

ಈ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1108(1548)**
ಸದಸ್ಯರ ಹೆಸರು	**ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ಕುಮಾರ್‌ಸ್ವಾಮಿ (ಮುಖ್ಯಮಂತ್ರಿಗಳು)**

ಅ) ಗದಗ ಜಿಲ್ಲೆ ಲಕ್ಷ್ಮೇಶ್ವರ ನಗರವು ಸುಮಾರು 40ಸಾವಿರ ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಈ ಪಟ್ಟಣದಲ್ಲಿ ಒಳಚರಂಡಿ ಯೋಜನೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ

ಆ) ಬಂದಿದ್ದಲ್ಲಿ ಈ ನಗರಕ್ಕೆ ಒಳಚರಂಡಿ ಯೋಜನೆ ಜಾರಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ,

ಲಕ್ಷ್ಮೇಶ್ವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಜಿ ಐ ಎಸ್ ಸರ್ವೇಕ್ಷಣ ಕಾಮಗಾರಿ, ವಿನ್ಯಾಸ ಮತ್ತು ಅಂದಾಜು ಪಟ್ಟಿ ತಯಾರಿಸಲು ಅವಶ್ಯವಿರುವ ಮೊತ್ತ ರೂ 6 50 ಲಕ್ಷಗಳನ್ನು ಜಲ ಮಂಡಳಿಗೆ ಭರಣಾ ಮಾಡಲು ಈಗಾಗಲೇ ಲಕ್ಷ್ಮೇಶ್ವರ ಪುರಸಭೆಯವರಿಗೆ ಕೋರಲಾಗಿದೆ ಪುರಸಭೆಯಿಂದ ಹಣ ಭರಣ ಮಾಡಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಇ) ಈ ಬಗ್ಗೆ ಸರ್ಕಾರದ ಮಾರ್ಗಸೂಚಿ ಏನಾದರೂ ಇವೆಯೇ,

ರಾಜ್ಯ ಸರ್ಕಾರದ ಮಾರ್ಗಸೂಚಿಯ ಪ್ರಕಾರ 50 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳಿಗೆ ದಿನಂಪ್ರತಿ ತಲಾ 100 ಎಲ್‌ಪಿಸಿಡಿ ನೀರನ್ನು ಸರಬರಾಜು ಮಾಡಬೇಕಾಗಿದೆ

ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ 50ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ ಪಟ್ಟಣಗಳಿಗೆ ದಿನಂಪ್ರತಿ ತಲಾ 135 ಎಲ್‌ಪಿಸಿಡಿ ನೀರನ್ನು ಸರಬರಾಜು ಮಾಡಬೇಕಾಗಿದೆ

ಹಣಕಾಸಿನ ಲಭ್ಯತೆಯ ಮೇಲೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತಿದ್ದು, ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾದ ನಗರ ನೀರು ಸರಬರಾಜು ಕಾಮಗಾರಿಯನ್ನು ತೆಗೆದುಕೊಳ್ಳಲಾಗುತ್ತಿದೆ

ಈ) ಇದ್ದಲ್ಲಿ, ಯಾವ ಮಾರ್ಗಸೂಚಿ ಪ್ರಕಾರ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1109(1549)**
ಮಾನ್ಯ ಸದಸ್ಯರ ಹೆಸರು	**ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ವಿದ್ಯುತ್ ಬಾಕಿ ಉಳಿಸಿಕೊಂಡಿರುವ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತಿಲ್ಲ

ಆ) ಬಂದಿದ್ದಲ್ಲಿ, ಬರಗಾಲದ ಅಂತಹ ಕ್ಲಿಷ್ಟಕರ ಸಂದರ್ಭದಲ್ಲಿ ರೈತರ ವಿದ್ಯುತ್ ಸಂಪರ್ಕ ಕಡಿತಗೊಳಿಸದಿರಲು ಸರ್ಕಾರ ಕ್ರಮ ಕೈಗೊಳ್ಳುವುದೇ,

ಇ) ಈ ಸಂಪರ್ಕವನ್ನು ಕಡಿತ ಗೊಳಿಸದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ,

ಇದು ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1110(1542)**
ಮಾನ್ಯ ಸದಸ್ಯರ ಹೆಸರು **ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಶರಾವತಿ ಹಿನ್ನೀರಿನ ಪ್ರದೇಶವಾದ ಹಸಿರು ಗ್ರಾಮಕ್ಕೆ ಕೇ ಬಿ ಸರ್ಕಲ್ ಮಧ್ಯೆ ಸೇತುವೆ ಇಲ್ಲದೆ ಸಾರ್ವಜನಿಕರು ಪ್ರಯಾಣಿಸಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಸೇತುವೆಯನ್ನು ಸರ್ಕಾರ ಇದುವರೆವಿಗೂ ನಿರ್ಮಿಸದಿರಲು ಕಾರಣವೇನು, ಇದಕ್ಕೆ ತಗಲುವ ವೆಚ್ಚವೆಷ್ಟು,

– ಈ ಸೇತುವೆ ನಿರ್ಮಾಣವನ್ನು ತೆಗೆದುಕೊಳ್ಳಲು ರೂ 30 00 ಕೋಟಿಗಳಾಗುವುದೆಂದು ಅಂದಾಜಿಸಲಾಗಿದ್ದು, ಅನುದಾನದ ಲಭ್ಯತೆಗನುಸಾರವಾಗಿ ತೆಗೆದುಕೊಳ್ಳಲಾಗುವುದು

ಇ) ಸೇತುವೆ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಸದರಿ ಸೇತುವೆಯನ್ನು ಅನುದಾನದ ಲಭ್ಯತೆಗನುಸಾರವಾಗಿ ತೆಗೆದುಕೊಳ್ಳಲಾಗುವುದು

ಈ) ಯಾವಾಗ ನಿರ್ಮಿಸಲಾಗುವುದು (ವಿವರ ನೀಡುವುದು)?

ಮೇಲಿನಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1112(1539)
ಸದಸ್ಯರ ಹೆಸರು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್)
ಉತ್ತರಿಸುವ ಸಚಿವರು ಶ್ರೀ ಬಿ ಶ್ರೀರಾಮುಲು(ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ಸ್ಥಳಗಳೆಂದು ಗುರುತಿಸಲಾಗಿದೆ ?

ರಾಜ್ಯದಲ್ಲಿ ಸುಮಾರು 257 ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದು ಗುರುತಿಸಲಾಗಿದೆ ಪ್ರವಾಸಿ ಸ್ಥಳಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಆ) ಕಳೆದ ಮೂರು ವರ್ಷಗಳಲ್ಲಿ ಈ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರಮುಖ ಪ್ರವಾಸಿ ಸ್ಥಳಗಳಾದ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಚಿತ್ರದುರ್ಗ, ಕಾರವಾರ, ಕೊಡಗು, ಬೆಳಗಾಮ್, ಜೋಗ್‌ಜಲಪಾತ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟ, ಬಿಜಾಪುರ ಬೀದರ್, ಗುಲ್ಬರ್ಗ, ಮೈಸೂರು, ತಲಕಾಡು, ಮಂಡ್ಯ, ಶ್ರೀರಂಗಪಟ್ಟಣ ಇತ್ಯಾದಿ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು (ಯಾತ್ರಿ ನಿವಾಸಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ) ನಿರ್ಮಿಸುವುದು ಹಾಗೂ ಉನ್ನತೀಕರಣ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಅಲ್ಲದೆ 32 ಪ್ರವಾಸಿ ಸ್ಥಳಗಳಲ್ಲಿ ಶೌಚಾಲಯಗಳನ್ನು ಸಹ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ

ಇ) ಇದಕ್ಕಾಗಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು?

ಭರಿಸಿದ ವೆಚ್ಚಗಳು	ರಾಜ್ಯದ ಅನುದಾನ ಲಕ್ಷಗಳಲ್ಲಿ	ಕೇಂದ್ರದ ಅನುದಾನ ಲಕ್ಷಗಳಲ್ಲಿ
2003–04	25	900 00
2004–05	124	4891 30
2005–06	75	1712 70
ಒಟ್ಟು	224	7504 00

ಈ) ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಹಣವೆಷ್ಟು?

ಕಳೆದ 3 ವರ್ಷಗಳಲ್ಲಿ ಕೇಂದ್ರದಿಂದ ಬಿಡುಗಡೆಯಾದ ಒಟ್ಟು ಮೊತ್ತ ರೂ 7504 00 ಲಕ್ಷಗಳು

ಉ) ರಾಜ್ಯದ ಪ್ರವಾಸಿ ತಾಣಗಳನ್ನು ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿಪಡಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ರಾಜ್ಯದ ಪ್ರಮುಖ ಪ್ರವಾಸಿ ತಾಣಗಳನ್ನು ಮೇಲ್ದರ್ಜೆಗೆ ಏರಿಸಲು ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಇಲಾಖೆಯು ಹಮ್ಮಿಕೊಂಡಿದೆ

1 ಹಾಲಿ ಇರುವ ಸೌಲಭ್ಯಗಳನ್ನು ಉನ್ನತೀಕರಣ
2 ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ನಿರ್ಮಾಣ
3 ಹೆಚ್ಚುವರಿ ವಸತಿ ಸೌಕರ್ಯ ಕಲ್ಪಿಸುವುದು
4 ಲ್ಯಾಂಡ್ ಸ್ಕೇಪಿಂಗ್ ಹಾಗು ಸೌಂದರೀಕರಣ
5 ಹೂನಲು ಬೆಳಕಿನ ವ್ಯವಸ್ಥೆ ಅಳವಡಿಸುವುದು
6 ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಇವುಗಳಿಗೆ ವಿಶೇಷ ಪ್ರಚಾರ ಕೈಗೊಳ್ಳುವುದು ಇತ್ಯಾದಿ ಕಾರ್ಯಕ್ರಮಗಳನ್ನು ಇಲಾಖೆಯು ಹಮ್ಮಿಕೊಂಡಿರುತ್ತದೆ

ಉ) ರಾಜ್ಯದ ಎಷ್ಟು ಪ್ರವಾಸಿ ಯೋಜನೆಗಳು ಕೇಂದ್ರದ ಅನುಮತಿಗಾಗಿ ಕಾದಿವೆ (ಈ ಯೋಜನೆಗಳ ಪೂರ್ಣ ವಿವರಗಳೇನು?)

ರಾಜ್ಯದ 33 ಯೋಜನೆಗಳನ್ನು ಕೇಂದ್ರದ ಧನ ಸಹಾಯಕ್ಕಾಗಿ ಸಲ್ಲಿಸಲಾಗಿದ್ದು, ಈ ತಿಂಗಳಲ್ಲಿ ಈ ಪೈಕಿ 3 ಯೋಜನೆಗಳಿಗೆ ಧನ ಸಹಾಯದ ಅನುಮತಿ ಸಿಕ್ಕಿರುತ್ತದೆ ಉಳಿದಂತೆ 30 ಯೋಜನೆಗಳು ಅನುಮತಿಗಾಗಿ ಕಾದಿರುತ್ತದೆ (ವಿವರಗಳನ್ನು ಲಗತ್ತಿಸಲಾಗಿದೆ)

ಅನುಬಂಧ

ವಿಶೇಷ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗುರುತಿಸಲಾದ ಮುಖ್ಯ ಪ್ರದೇಶಗಳು

1 ಪ್ರವಾಸಿಗಳಿಗಾಗಿ ಗುರುತಿಸಲಾದ ಸ್ಥಳಗಳು ಕೆಳಗೆ ಪಟ್ಟಿ ಮಾಡಲಾದಂತೆ ಇವೆ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಸ್ಥಳ
1	2	3	4
1	ಮೈಸೂರು	ಗುಂಡ್ಲುಪೇಟೆ	ಬಂಡಿಪುರ, ಹಿಮವದ್-ಗೋಪಾಲಸ್ವಾಮಿ ಬೆಟ್ಟ, ತೆರಕಣಾಂಬಿ
		ಟಿ ನರಸೀಪುರ	ತಲಕಾಡು, ಸೋಮನಾಥಪುರ, ಗರ್ಗೇಶ್ವರಿ
		ನಂಜನಗೂಡು	ನಂಜನಗೂಡು

		ಯಳಂದೂರು	ಬಿಳಿಗಿರಿರಂಗನ ಬೆಟ್ಟ
		ಕೊಳ್ಳೇಗಾಲ	ಮಲೆಮಹದೇಶ್ವರ ಬೆಟ್ಟ
		ಹೆಚ್ ಡಿ ಕೋಟೆ	ಖಾರಾಪುರ
		ಚಾಮರಾಜನಗರ	ಚಿಕ್ಕಹೊಳೆ ಅಣೆಕಟ್ಟು
		ಹುಣಸೂರು	ಗೊಮ್ಮಟಗಿರಿ
2	ಕೊಡಗು	ಮಡಿಕೇರಿ	ಮಡಿಕೇರಿ, ಅಬ್ಬಿಫಾಲ್ಸ್, ತಲಕಾವೇರಿ, ನಲಕನಾಡು, ಭಾಗಮಂಡಲ
		ಸೋಮವಾರಪೇಟೆ	ಹಾರಂಗಿ ಜಲಾಶಯ, ಕೂಡಿಗೆ, ಚಟ್ಟಹಳ್ಳಿ, ನಿಸರ್ಗಧಾಮ
		ವೀರಾಜಪೇಟೆ	ನಾಗರಹೊಳೆ, ಇರ್ಪು
3	ಮಂಡ್ಯ	ಮಂಡ್ಯ	ಗಾಣದಾಳು, ಹೊಸಬೂದನೂರು ಬಸರಾಳು
		ಕೆ ಆರ್ ಪೇಟೆ	ಹೊಸಹೊಳಲು, ಕಿಕ್ಕೇರಿ
		ಪಾಂಡವಪುರ	ಮೇಲುಕೋಟೆ
		ಮದ್ದೂರು	ಕೊಕ್ಕರೆ ಬೆಳ್ಳೂರು
		ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ, ಬೃಂದಾವನ ಗಾರ್ಡನ್, ರಂಗನತಿಟ್ಟು ಹುಲಿಕೆರೆ
		ಮಳವಳ್ಳಿ	ಶಿವನಸಮುದ್ರ
4	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಶಿವಗಂಗಾ
		ಮಾಗಡಿ	ಮಾಗಡಿ, ಸಾವನದುರ್ಗ ತಿಪ್ಪಗೊಂಡನಹಳ್ಳಿ
		ಕನಕಪುರ	ಮೇಕೆದಾಟು
		ಬೆಂಗಳೂರು ಉತ್ತರ	ಹೆಸರಘಟ್ಟ
		ದೊಡ್ಡಬಳ್ಳಾಪುರ	ಘಾಟಿ ಸುಬ್ರಮಣ್ಯ, ಕನಸವಾಡಿ
		ಆನೇಕಲ್	ಮುತ್ಯಾಲಮಡವು, ಬನ್ನೇರುಘಟ್ಟ

		ಬೆಂಗಳೂರು ದಕ್ಷಿಣ	ರಾಮೇನಹಳ್ಳಿ
		ಚೆನ್ನಪಟ್ಟಣ	ಚೆನ್ನಪಟ್ಟಣ
		ರಾಮನಗರ	ರಾಮನಗರ, ಕಣ್ವ ರೇವಣಸಿದ್ಧೇಶ್ವರ ಬೆಟ್ಟ
5	ತುಮಕೂರು	ತುಮಕೂರು	ಸಿದ್ಧಗಂಗ, ಕೈದಾಳ, ದೇವರಾಯನದುರ್ಗ
		ಕೊರಟಗೆರೆ	ಕೊರಟಗೆರೆ, ಸಿದ್ದರ ಬೆಟ್ಟ, ತೀತ ಜಲಾಶಯ
		ಶಿರಾ	ಶಿರಾ
		ಕುಣಿಗಲ್	ಯಡಿಯೂರು, ಮಾರ್ಕೋನ ಹಳ್ಳಿ
		ಪಾವಗಡ	ಪಾವಗಡ
		ಮಧುಗಿರಿ	ಮಧುಗಿರಿ
		ತಿಪಟೂರು	ಅರಳುಗುಪ್ಪ
		ಗುಬ್ಬಿ	ಗುಬ್ಬಿ
		ತುರುವೆಕೆರೆ	ತುರುವೆಕೆರೆ
		ಚಿಕ್ಕನಾಯಕನಹಳ್ಳಿ	ತೀರ್ಥ ರಾಮಲಿಂಗೇಶ್ವರ ಸ್ವಾಮಿ ವಜ್ರ, ಹಂದನಕೆರೆ
6	ಕೋಲಾರ	ಗೌರಿಬಿದನೂರು	ವಿದುರಾಶ್ವಥ್ಥ, ಮಿಣಕನಗುರ್ಕಿ
		ಚಿಕ್ಕಬಳ್ಳಾಪುರ	ನಂದಿಬೆಟ್ಟ, ಮುದ್ದೇನಹಳ್ಳಿ
		ಮಾಲೂರು	ಬಂಗಾರ ತಿರುಪತಿ
		ಚಿಂತಾಮಣಿ	ಕೈವಾರ, ಕುರುಡುಮಲೆ
		ಕೆ ಜಿ ಎಫ್	ಕೆ ಜಿ ಎಫ್
		ಮುಳುಬಾಗಿಲು	ಮುಳುಬಾಗಿಲು
		ಬಂಗಾರಪೇಟೆ	ಕಮ್ಮಸಂದ್ರ, ಬೇತಮಂಗಲ
		ಬಾಗೇಪಲ್ಲಿ	ಬಾಗೇಪಲ್ಲಿ
7	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ, ಚಂದ್ರವಳ್ಳಿ, ಜೋಗಿಮಟ್ಟಿ

		ಹೊಸದುರ್ಗ	ರಾಮೇಶ್ವರ
		ಚಳ್ಳಕೆರೆ	ನಾಯಕನಹಟ್ಟಿ, ದೊಡ್ಡಗುಡ್ಡ
		ಹಿರಿಯೂರು	ವಾಣಿವಿಲಾಸ ಸಾಗರ, ಮಾರಿಕಣಿವೆ
		ಹರಿಹರ	ಹರಿಹರ/
		ಮೊಳಕಾಲ್ಮೂರ್	ರಾಮಪುರ, ಜೊತಿಂಗ ರಾಮೇಶ್ವರ, ಬ್ರಹ್ಮಗಿರಿ
		ಹೊಳಲಕೆರೆ	ಹೊಳಲಕೆರೆ-ಗಣೇಶ ದೇವಾಲಯ
8	ಹಾಸನ	ಹಾಸನ	ಹಾಸನ, ಮೊಸಳೆ ಹೊಸಹಳ್ಳಿ, ಶಾಂತಿಗ್ರಾಮ, ಕೋರಮಂಗಲ, ದೊಡ್ಡ ಗದ್ದ ನಳ್ಳಿ
		ಬೇಲೂರು	ಬೇಲೂರು, ಹಳೇಬೀಡು
		ಅರಸೀಕೆರೆ	ಹಾರನಹಳ್ಳಿ
		ಸಕಲೇಶಪುರ	ಮರಗುಂದ
		ಚನ್ನರಾಯಪಟ್ಟಣ	ಶ್ರವಣಬೆಳಗೊಳ
		ಅರಕಲಗೂಡು	ರಾಮನಾಥಪುರ, ಗೊರೂರು
		ಹೊಳೆನರಸೀಪುರ	ಶ್ರೀರಾಮ ದೇವರ ಅಣೆಕಟ್ಟು
9	ಚಿಕ್ಕಮಗಳೂರು	ಚಿಕ್ಕಮಗಳೂರು	ಮುಳ್ಳಯನಗಿರಿ, ಬಾಬಾಬುಡನ್ ಗಿರಿ, ಹಿರೇಮಗಳೂರು, ಮುತ್ತೋಡಿ ಪ್ರಾಣಿ ಅಭಯಧಾಮ ಬೆಳವಾಡಿ
		ತರೀಕೆರೆ	ಕೆಮ್ಮಣ್ಣುಗುಂಡಿ, ಅಮೃತಾಪುರ ಭದ್ರಾಯೋಜನೆ
		ಮೂಡಿಗೆರೆ	ಕಳಸ, ಹೊರನಾಡು, ಕುದುರೆಮುಖ, ಅಂಗಡಿ ಬಳ್ಳಾಲರಾಯನದುರ್ಗ
		ಶೃಂಗೇರಿ	ಶೃಂಗೇರಿ, ಕಿಗ್ಗಾ
		ಕಡೂರು	ಅಯ್ಯನಕೆರೆ
		ಕೊಪ್ಪ	ಹಿರೇಕೊಡ್ಗಿ

H ೨೦-೨೫

10	ಶಿವಮೊಗ್ಗ	ಶಿವಮೊಗ್ಗ	ಗಾಜನೂರು, ಕೂಡ್ಲಿ, ತೀರ್ಥಹಳ್ಳಿ, ಕವಲೇದುರ್ಗ ಅಂಬುತೀರ್ಥ, ಆಗುಂಬೆ, ಮಂದಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚಮೃಗವಧೆ,
		ಹೊಸನಗರ	ನಗರ, ಹುಂಚ, ಕೊಡಚಾದ್ರಿ
		ಸಾಗರ	ಇಕ್ಕೇರಿ, ಜೋಗ್‌ಫಾಲ್ಸ್, ವರದಮೂಲ, ಕೆಳದಿ
		ಭದ್ರಾವತಿ	ಭದ್ರಾವತಿ
		ಶಿಕಾರಿಪುರ	ತೊಗರ್ಸಿ, ಬಳ್ಳಿಗಾವಿ ಉಡುತಡಿ
		ಚನ್ನಗಿರಿ	ಶಾಂತಿಸಾಗರ
		ಸೊರಬ	ಸೊರಬ, ಚಂದ್ರಗುತ್ತಿ
		ಹೊನ್ನಾಳಿ	ತೀರ್ಥರಾಮೇಶ್ವರ
11	ದಕ್ಷಿಣ ಕನ್ನಡ	ಕಾರ್ಕಳ	ಕಾರ್ಕಳ, ಮೂಡಬಿದ್ರಿ
		ಉಡುಪಿ	ಉಡುಪಿ, ಮಲ್ಪೆ, ಸೇಂಟ್ ಮೇರಿ ದ್ವೀಪ, ಕಾಪು
		ಕುಂದಾಪುರ	ಕುಂದಾಪುರ, ಮರವಂತೆ, ಕೊಲ್ಲೂರು
		ಮಂಗಳೂರು	ಸುರತ್ಕಲ್, ಪಣಂಬೂರ್, ಉಳ್ಳಾಲ, ಸೋಮೇಶ್ವರ, ಕಟೀಲ್
		ಬೆಳ್ತಂಗಡಿ	ಧರ್ಮಸ್ಥಳ, ವೇಣ್ಣೂರ್
		ಸುಳ್ಯ	ಸುಬ್ರಮಣ್ಯ
		ಪುತ್ತೂರು	ಬೇಂದ್ರೇತೀರ್ದ, ಶಿರಾಡಿ, ಉಪ್ಪಿನಂಗಡಿ
12	ಉತ್ತರ ಕನ್ನಡ	ಕಾರವಾರ	ಕಾರವಾರ, ಕರ್ಮಗೋಡ್, ಅಂಜದೀವ್ ದ್ವೀಪ, ದೇವಗಡ
		ಸೂಪ	ಉಳವಿ, ರಾಮನಗರ, ಕ್ಯಾಸಲ್-ರಾಕ್
		ಯಲ್ಲಾಪುರ	ಯಲ್ಲಾಪುರ, ಮಾಗೋಡು-ಜಲಪಾತ, ಲಾಲಗುಲಿ ಜಲಪಾತ

			ಹಳಿಯಾಳ, ದಾಂಡೇಲಿ
		ಹಳಿಯಾಳ	ಸಿದ್ದಾಪುರ, ಉಂಚೋಳಿ ಜಲಪಾತ
		ಸಿದ್ದಾಪುರ	ಸಿರಸಿ, ಸೊಂದಾ, ಬನವಾಸಿ
		ಸಿರಸಿ	ಗೋಕರ್ಣ, ಯಾಣ, ಧಾರೇಶ್ವರ
		ಕುಮಟಾ	ಅಂಕೋಲ
		ಅಂಕೋಲ	ಭಟ್ಕಳ, ಮುರಡೇಶ್ವರ
		ಭಟ್ಕಳ	ಬಸವರಾಜ್ ದುರ್ಗ, ಇಡಗುಂಜಿ
		ಹೊನ್ನಾವರ	
			ಹಂಪಿ, ತುಂಗಭದ್ರಾ ಅಣೆಕಟ್ಟು
13	ಬಳ್ಳಾರಿ	ಹೊಸಪೇಟೆ	ತೋರಣಗಲ್, ರಾಮಘಡ್
		ಸಂಡೂರ್	
			ಗದಗ, ಲಕ್ಕುಂಡಿ
14	ಧಾರವಾಡ	ಗದಗ	ಶಿಗ್ಗಾಂ, ಬಾಡ
		ಶಿಗ್ಗಾಂ	ನರಗುಂದ
		ನರಗುಂದ	ಹಾನಗಲ್
		ಹಾನಗಲ್	ಸಿಂಗಬಾಲೂರು
		ಮುಂಡರ್ಗಿ	ಅಬಲೂರು
		ಹಿರೇಕೆರೂರ್	ಕಾಗಿನೆಲೆ
		ಬ್ಯಾಡಗಿ	
			ಶ್ರೀಸೋಗಲ ಕ್ಷೇತ್ರ, ಕಿತ್ತೂರ್,
15	ಬೆಳಗಾಂ	ಬೈಲಹೊಂಗಲ	ದೇಗಾಂ ಅಥವಾ ದೇಗಾವಿ
			ಸೌಂದತ್ತಿ, ಮಲಪ್ರಭಾ ಅಣೆಕಟ್ಟು
		ಸೌಂದತ್ತಿ	ಗೋಕಾಕ್ ಜಲಪಾತ
		ಗೋಕಾಕ್	ಹಲಸಿ
		ಖಾನಾಪುರ	ರಾಜಹಂಸಘಡ ರಾಮತೀರ್ಥ
		ಬೆಳಗಾಂ	ಶಬರಿ ಕಣಿವೆ
		ರಾಮದುರ್ಗ	ಘಟಪ್ರಭಾ
		ಹುಕ್ಕೇರಿ	
			ರಾಯಚೂರು, ನಾರದಗುಡ್ಡ
16	ರಾಯಚೂರು	ರಾಯಚೂರು	ಮಳಿಯಾಬಾದ್

			ಮಾನ್ವಿ, ಕಲ್ಲೂರ್
		ಮಾನ್ವಿ	ಮಾಸ್ಕಿ
		ಸಿಂಧನೂರ್	ಆನೇಗುಂದಿ, ಕನಕಗಿರಿ
		ಗಂಗಾವತಿ	ಕೊಪ್ಪಳ
		ಕೊಪ್ಪಳ	ಹಟ್ಟಿ, ಮುದಗಲ್
		ಲಿಂಗಸಗೂರ್	ಇಟಗಿ, ಕುಕ್‌ನೂರ್
		ಯಲಬುರ್ಗಿ	ಗಬ್ಬೂರ್
		ದೇವದುರ್ಗ	
			ಬಿಜಾಪುರ, ತೊರವಿ
17	ಬಿಜಾಪುರ	ಬಿಜಾಪುರ	ಬಸವನ ಬಾಗೇವಾಡಿ, ಆಲಮಟ್ಟಿ
		ಬಸವನ ಬಾಗೇವಾಡಿ	ಐಹೊಳೆ, ಕೂಡಲಸಂಗಮ
		ಹುನಗುಂದ	ಬಾದಾಮಿ, ಪಟ್ಟದಕಲ್,
		ಬಾದಾಮಿ	ಬನಶಂಕರಿ, ಮಹಾಕೂಟಾ,
			ಶಿವಯೋಗಿ ಮಂದಿರ
			ಗುಲ್ಬರ್ಗ
18	ಗುಲ್ಬರ್ಗ	ಗುಲ್ಬರ್ಗ	ಆಳಂದ
		ಆಳಂದ	ಗಾಣಗಾಪುರ
		ಅಫಜಲ್‌ಪುರ	ಶೋರಾಪುರ್, ಕೆಂಬಾವಿ
		ಶೋರಾಪುರ್	ಸೇಡಂ, ಮಳಖೇಡ
		ಸೇಡಂ	ಚಿಂಚೋಳಿ, ಚಂದ್ರಂಪಳ್ಳಿ
		ಚಿಂಚೋಳಿ	ಜೇವರ್ಗಿ
		ಜೇವರ್ಗಿ	ಕಲ್ಗಿ
		ಚಿತಾಪುರ್	
			ಬೀದರ್
19	ಬೀದರ್	ಬೀದರ್	ಹುಮ್ನಾಬಾದ್, ಜಲಸಂಘಿ
		ಹುಮ್ನಾಬಾದ್	ಬಸವಕಲ್ಯಾಣ, ನಾರಾಯಣಪುರ
		ಬಸವಕಲ್ಯಾಣ	ಕಾರಂಜಿ ಯೋಜನೆ
		ಭಾಲ್ಕಿ	

ಪ್ರವಾಸ ಸ್ಥಳಗಳ ಒಟ್ಟು ಸಂಖ್ಯೆ 257

(ii) ಮಂಗಳೂರು ನಗರದ ಕಾರ್ಪೋರೇಷನ್ ಮಿತಿಗೊಳಪಟ್ಟ ಸ್ಥಳವನ್ನು ಬಿಟ್ಟು ರಾಜ್ಯದ ಪೂರಾ ಕರಾವಳಿ ಪ್ರದೇಶದಲ್ಲಿನ ಅನುಮೋದಿತ ಸ್ಥಳಗಳು

GOVERNMENT OF KARNATAKA
DEPARTMENT OF TOURISM
List of Proposals submitted to Ministry of Tourism Government of India

Estimated Cost
(Rs in Lakhs)

1 Development and upgradation of Hotel Mayura - 200 00
Bhuvaneshwari, Hampi, Kamalapur in Karnataka -

2 Sound and Light show at Golgumbaz in Bijapur - 171 46

3 Construction of Tourist Hostel at Indian Heritage- 118 00
Academy, Bangalore

4 Destination Development project at Lakkundi,
Gadag and Dambala Lakshmeshwara in Karnataka -
478 00

5 Large Revenue Generating Scheme - Development -
448 00
of Soundatti Belgaum District in Karnataka

6 Large Revenue Generating Scheme – Development -
775 00
of Chamundi Hills in Mysore in Karnataka

7 Development of Bidar under the new scheme of - 248 75
Destination Development

8 Development of Coastal Wilderness and Wellness -
539 29
Tourism in Karnataka

9 Integrated development of Nandı Hılls ın Karnataka -
3,346 00
10 Development of Bıjapur ın Karnataka under the new -
347 00
scheme of Destınatıon development scheme
11 Development of Bıjapur, Bıdar, Gulbarga, -
800 00
Pattadakal, under the Tourısm cırcuıt development
scheme – reg
12 Development of Srırangapattana, Shıvapura, -
802 52
Ramaswamy Cırcle (Mysore) under Freedom
cırcuıt scheme – reg
13 Sound and Lıght show at Kıttur Fort, Belgaum - 100 00
Dıstrıct - reg
14 Destınatıon development of Devarayanadurga, - 486 00
Sıddarabetta and Goravanahallı – reg
15 Eco-Tourısm Park at Hanumanthanagar, Maddur -
3,080 00
taluk, Mandya Dıstrıct – reg
16 Destınatıon development of Pılıkula Nısargadhama, -
500 00
near Mangalore – reg
17 Development of Wılderness Cırcuıt ın Karnataka -
698 99
under destınatıon development scheme
18 Destınatıon development at Dubare Elephant Camp -
114 25
Somawarpet Taluk, Kodagu Dıst
19 Development of Magod Jungle Camp and -
500 00

Sahasralinga Uttar Kannada

20 Preparation of master plan for development of Jain -

10 47

Tourism Circuit in Karnataka

21 Development of Endogenous Tourism Project at - 50 00

Kumar, Uttar Kannada, Karnataka

22 Development of Endogenous Tourism Project at - 50 00

Illkal Bagalkot District Karnataka

23 Development of Endogenous Tourism Project at - 50 00

Navalgunda, Dhrwad District Karnataka

24 Development of Eco-Tourism and Adventure - 60 81

Tourism facilities at Annejare and cable Car facility

from Kollur to Kodachadri in Udupi District

Karnataka

25 Development of Wilderness circuit in Karnataka - 698 99

under destination development scheme

26 Development of Endogenous Tourism and -

53 00

promotion of Artisian activities in Kodagu Dist

27 Establishment of Nagarhole trickking Camp at 60 00

Murkal in Virajpet Taluk, Kodagu District

28 Destination development at Dubare Elephant Camp -

114 26

Somawarpet Taluk, Kodagu District

29 preparation of master plan for the development of -

9 37

Hampi as an International Heritage site

30 Development of Magod Jungle Camp and -

127 00

Sahasralinga Uttar Kannada

31 Development of Mutyalamaduvu under Destination -
580 23
Development near Bangalore
32 Development of Magadi Fort Bangalore Rural - 1,647 82
District under Destination Development Scheme
33 Development of Sadhanakeri Tank and Park in - 498 73
Survey No 52/B/1A/2 if Doddanayakana Koppa
Village, Dharwad in under Destination Development
Scheme

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	(1545)
ಸದಸ್ಯರ ಹೆಸರು	ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)
ಉತ್ತರಿಸುವವರು	ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹುಬ್ಬಳ್ಳಿ – ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ 5 ದಿನಕ್ಕೊಮ್ಮೆ ನೀರು ಸರಬರಾಜುನಿಂದ ಉಂಟಾಗಿರುವ ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಹುಬ್ಬಳ್ಳಿ – ಧಾರವಾಡ ಅವಳಿ ನಗರಗಳಿಗೆ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು 195 00 ಕೋಟಿ ರೂ ಗಳ ಅಂದಾಜು ವೆಚ್ಚದಲ್ಲಿ ಮಲಪ್ರಭಾ ಜಲಾಶಯ ದಿಂದ 3ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ವರ್ಷಾಸನ ಪಾವತಿ ಆಧಾರದ ಮೇಲೆ (Annuity funds) ಕೈಗೆತ್ತಿಕೊಳ್ಳಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದಿನನಿತ್ಯ ನೀರು ಸರಬರಾಜು ಮಾಡಲಿಕ್ಕೆ ಅನುಕೂಲವಾಗುವುದರಿಂದ ಜಲ ಮಂಡಳಿಯವರು 3ನೇ ಹಂತದ ಮಲಪ್ರಭಾ ಕುಡಿಯುವ ನೀರಿನ ಯೋಜನೆಗೆ 50 ಕೋಟಿ ರೂಪಾಯಿ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವರೆ,

ಹೌದು

ಇ) ಪ್ರಸ್ತಾವನೆ ಸಲ್ಲಿಸಿದ್ದರೆ ಹಣ ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು,

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಹುಬ್ಬಳ್ಳಿ – ಧಾರವಾಡ ನಗರಪಾಲಿಕೆಯಲ್ಲಿನ ವಿತರಣಾ ವ್ಯವಸ್ಥೆಯನ್ನು ಉತ್ತಮಗೊಳಿಸಲು ಅಂದಾಜು ವೆಚ್ಚ 50 25 ಕೋಟಿ ರೂ ಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಗೆ ಸರ್ಕಾರವು ಈಗಾಗಲೇ ಅನುಮೋದನೆಯನ್ನು ನೀಡಿದೆ ಈ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಇದಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಈ) 50 00 ಕೋಟಿ ರೂಪಾಯಿ ಬಿಡುಗಡೆಯ ಪ್ರಸ್ತಾವನೆಗೆ ಅನುಮೋದನೆ ನೀಡಿ ಹಣ ಯಾವಾಗ ಬಿಡುಗಡೆ ಮಾಡಲಾಗುವುದು,

ಮೇಲಿನಂತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1115(1546)**

ಸದಸ್ಯರ ಹೆಸರು **ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಹುಬ್ಬಳ್ಳಿ – ಧಾರವಾಡ ಮಹಾನಗರದ ಮಧ್ಯದಲ್ಲಿರುವ ರಸ್ತೆಯನ್ನು ಚತುಷ್ಪತ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆಯೇ,

ಇಲ್ಲ

ಆ) ಚತುಷ್ಪತ ರಸ್ತೆಯನ್ನಾಗಿಸುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ,

ಇಲ್ಲ

ಇ) ಚತುಷ್ಪತ ರಸ್ತೆ ಅಭಿವೃದ್ಧಿಗೆ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ನಿಧಿ ಎಷ್ಟೆಷ್ಟು,

ಸದರಿ ರಸ್ತೆಯ ಅಭಿವೃದ್ಧಿಯನ್ನು 2006–07ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ 'ಯೋಜನೆ ಅಡಿ ಹೊಸೂರು ಕ್ರಾಸ್ (ಕಿಮೀ 408 80) ನಿಂದ ಉಣಕಲ್ ಕ್ರಾಸ್‌ವರೆಗೆ (ಕಿಮೀ 411 00) ಹಾಲಿ ಇರುವ ರಸ್ತೆಯನ್ನು ಚತುಷ್ಪತ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ರೂ 1 00 ಕೋಟಿ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

೧೦-೩೬

ಈ) ಇಲ್ಲವಾದಲ್ಲಿ ಕಾರಣಗಳೇನು, ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಯೋಜನಾ ವರದಿಯನ್ನು ತಯಾರಿಸುವ ಪ್ರಕ್ರಿಯೇ ಪ್ರಗತಿಯಲ್ಲಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1117(1484)**
ಸದಸ್ಯರ ಹೆಸರು	**ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸರ್ಕಾರವು ಹೊಸ ವೋಲ್ವೊ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಇದೆಯೇ, ಇದ್ದಲ್ಲಿ ಎಷ್ಟು,

ಹೌದು 2007-08ನೇ ಸಾಲಿನಲ್ಲಿ ಒಟ್ಟು 70 ವಾಹನಗಳನ್ನು ಖರೀದಿಸುವ ಯೋಜನೆ ಹೊಂದಿರುತ್ತದೆ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳು ಹೊಂದಿರುವ ವೋಲ್ವೋ ವಾಹನಗಳ ಸಂಖ್ಯೆ ಎಷ್ಟು,

KSRTC	150
BMTC	48
ಒಟ್ಟು	198

ಇ) ಈ ವಾಹನಗಳು ಲಾಭದಲ್ಲಿ ಅದವಾ ನಷ್ಟದಲ್ಲಿ ಓಡುತ್ತಿದೆಯೇ, (ಕಳೆದ 12 ತಿಂಗಳ ಲಾಭ ಅಥವಾ ನಷ್ಟದ ವಿವರವನ್ನು ನಮೂದಿಸುವುದು)

ಕಳೆದ 12 ತಿಂಗಳಿಂದ ಗಳಿಸಿರುವ ಲಾಭ/ನಷ್ಟ ದ ವಿವರ ಕೆಳಕಂಡಂತಿದೆ

1) KSRTC ರೂ 7 12ಕೋಟಿ ಲಾಭ ಗಳಿಸಿರುತ್ತದೆ

2) BMTC ರೂ 1 89ಕೋಟಿ ನಷ್ಟವಾಗಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1118(1485)**
ಸದಸ್ಯರ ಹೆಸರು **ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)**
ಸಚಿವರ ಹೆಸರು ಮತ್ತು ಪದನಾಮ **ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)**

ಅ) ಕೇಂದ್ರ ಸರ್ಕಾರದ ವತಿಯಿಂದ ಯಾವುದಾದರೂ ಅನುದಾನವನ್ನು ರಾಜ್ಯ ಸರ್ಕಾರವು ಶಾದಿಮಹಲ್/ ಸಮುದಾಯ ಭವನ್‌ಗೆ ಪಡೆದಿರುತ್ತದೆಯೇ?

ಇಲ್ಲ

ಆ) ಹೌದಾದರೆ ಕಳೆದ ಮೂರು ವರ್ಷದಲ್ಲಿ ಎಷ್ಟು ಅನುದಾನವನ್ನು ಪಡೆಯಲಾಗಿದೆ?

ಉದ್ಭವಿಸುವುದಿಲ್ಲ

ಇ) ಶಾದಿಮಹಲ್ ಸಮುದಾಯ ಬವನ್‌ಗೆ ಮೀಸಲಿಟ್ಟ ಅನುದಾನವೆಷ್ಟು? (ಕಳೆದ 3ವರ್ಷಗಳಲ್ಲಿ ಉಪಯೋಗಿಸಿದ ಅನುದಾನದ ಕುರಿತು ಮಂಡಿಸುವುದು)

ವರ್ಷ	ಅನುದಾನ	ಖರ್ಚು	ಫಲಾನು ಭವಿಗಳು
2003–04	550 00	450 00	106
2004–05	20 00	118 50	89
2005–06	3250 00	257 00	75
2006–07	350 00	550 00	77

ಈ) ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಫಲಾನುಭವಿಗಳ ಸಂಖ್ಯೆ ಎಷ್ಟು? (ಫಲಾನುಭವಿಗಳ ಪಟ್ಟಿಯನ್ನು ಮಂಡಿಸಿ)

ಅನುಬಂಧದಲ್ಲಿ ಲಗತ್ತಿಸಿದೆ

ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು,

2003–04ನೇ ಸಾಲಿನಲ್ಲಿ ಶಾದಿಮಹಲ್/ಸಮುದಾಯ ಭವನ್ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ಒಟ್ಟು ಅನುದಾನದ ಪಟ್ಟಿ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಸಮುದಾಯ	ಸಿಆರ್ ಸಂಖ್ಯೆ	ಸಿಆರ್‌ದಿನಾಂಕ	ವರ್ಷ	ಸಂಸ್ಥೆ ಹೆಸರು	ಸ್ಥಳ	1ನೇ ಕಂತು	2ನೇ ಕಂತು	ಒಟ್ಟು
1	ಬೆಂಗಳೂರು ನಗರ	ಬೆಂಗಳೂರು ದಕ್ಷಿಣ	ಮುಸ್ಲಿಂ	37/02–03 82/03–04	28–01–04 12–03–04	03–04	ಗೌಸಿಯಾ ಜಾಮೀಯಾ ಮಸೀದಿ	ತಾವರೆಕೆರೆ	3 00	1 00	4 00
2	ಬೆಂಗಳೂರು–ಗ್ರಾ	ಕನಕಪುರ	ಮುಸ್ಲಿಂ	9/3/04 82/03–04	12/3/2004	03–04	ಬಿಲಾಲ್ ಶಾದಿಮಹಲ್ ಟ್ರಸ್ಟ್	ಕನಕಪುರ	2 00	2 00	4 00
3	ಬಾಗಲಕೋಟೆ	ಮುಧೋಳ	ಮುಸ್ಲಿಂ	18/02–03 82/03–04	03–07–03 12–03–04	03–04	ಅಂಜುಮನ್–ಎ–ಇಸ್ಲಾಂ	ಮುಧೋಳ	2 00	2 00	4 00

4		ಬಾದಾಮಿ	ಮುಸ್ಲಿಂ	82/03-04	12-03-04	03-04	ಅಂಜುಮನ್-ಎ-ಎಸ್ಲಾಂ	ಬಾದಾಮಿ	3 00	1 00	4 00
5		ಹುನಗುಂದ	ಮುಸ್ಲಿಂ	82/03-04	12-03-04	03-04	ಅಂಜುಮನ್-ಇ-ಇಸ್ಲಾಂ	ಇಳಕಲ್	3 00	1 00	4 00
6		ಜಮಖಂಡಿ	ಮುಸ್ಲಿಂ	182/03-04	12-03-04	03-04	ಪೀರಂಬಾಖಾನ್ ಶಿಕ್ಷಣ ಸಂಸ್ಥೆ	ತೇರದಾಳ	3 00	1 00	4 00
7		ಬಾಗಲಕೋಟೆ	ಜೈನ್	173/03-04	09-03-04	03-04	1108 ಪಾರ್ಶ್ವನಾಥ ದಿಗಂಬರ ಜೈನ ಚೈತಾಲಯ ಮತ್ತು ಮಹಾವೀರ ಜೈನ್ ವಿದ್ಯಾರ್ಥಿನಿಲಯ ಸೇವಾ ಸಮಿತಿ	ಬಾಗಲಕೋಟೆ	5 00		5 00

8	ಬೆಳಗಾಂ	ಗೋಕಾಕ್	ಮುಸ್ಲಿಂ	12/03–04 82/03–04	18–09–03 12–03–04	03–04	ಜಾಮೀಯಾ ಮಸ್ಜೀದ್ ಮುಸ್ಲಿಂ ಜಮಾಸಾ	ಶೀಂದಿಕ ಒರ್ಬೇಟ	2 00	2 00	4 0
9		ಚಿಕ್ಕೋಡಿ	ಜೈನ್	04/03–04 82/03–04	30–10–03 12–03–04	03–04	ಶ್ರೀ ವಿದ್ಯಾ ಸಾಗರ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆ	ಬೋರಗಾಂವ್	3 00	1 00	4 00
10		ಚಿಕ್ಕೋಡಿ	ಮುಸ್ಲಿಂ	26/03–04 82/03–04	12–01–04 12–03–04	03–04	ಪಿರದಾವಲ ಮಲ್ಲಿಕ ಸಂಸ್ಥೆ	ಬೋಜಾ	3 00	1 00	4 00
11		ರಾಮದುರ್ಗ	ಮುಸ್ಲಿಂ	31/03–04 82/03–04	20–11–03 12–03–04	03–04	ಮೆಹಬೂಬ ಸುಬಾನಿ ದರ್ಗಾ ಮತ್ತು ರಬ್ಬಾನಿ ಮಸ್ಜಿದ್	ಪಡಕೋಡೆ	3 00	1 00	4 00

12		ರಾಯಭಾಗ	ಮುಸ್ಲಿಂ	05/03-04 82/03-04	14-01-04 12-03-04	03-04	ಆದರ್ಶ ಎಜುಕೇಷನ್ ಸೊಸೈಟಿ	ಸವದತ್ತಿ	3 00	1 00	4 00
13		ಖಾನಾಪುರ	ಜೈನ್	32/02-03	26-07-03 03-03-04	03-04	ಶ್ರೀ 1008 ಭಗವಾನ್ ಪಾರ್ಶ್ವನಾಧ ಟ್ರಸ್ಟ್ ಕಮಿಟಿ	ಗಂದಿಗವಾಡ	2 00	3 00	5 00
14		ಖಾನಾಪುರ	ಮುಸ್ಲಿಂ	36/02-03	05-09-03 21-02-04	03-04	ಮುಸ್ಲಿಂ ಜಮಾತ್ ಟ್ರಸ್ಟ್ ಕಮಿಟಿ	ಪಾರಿಶ್ವಾಡ	2 00	3 00	5 00
15		ಅಥಣಿ	ಜೈನ್	10/02-03	03-03-04	03-04	ಶ್ರೀ ಪದ್ಮಾವತಿ ಯುವಕರ ಮಂಡಳ	ಐನಾಮರ	5 00		5 00

16	ಬಳ್ಳಾರಿ	ಹೂವಿನಹಡ ಗಲಿ	ಮುಸ್ಲಿಂ	119/01-02 82/03-04	12-03-04	03-04	ನೂರಾನಿ ಶಾದಿಮಹಲ್ ಟ್ರಸ್ಟ್ ಸಮಿತಿ	ಹೂವಿನ ಡಗಲಿ	2 50	1 50	4 00
17		ಹೊಸಪೇಟೆ	ಮುಸ್ಲಿಂ	133/03-04 82/03-04	12-02-04 12-03-04	03-04	ಶಾದಿಮಹಲ್ ಕಟ್ಟಡ ಸಮಿತಿ	ಕಂಪ್ಲಿ	3 00	1 00	4 00
18		ಬಳ್ಳಾರಿ	ಮುಸ್ಲಿಂ	98/03-04 82/03-04	02-12-03 12-03-04	03-04	ಟಿಪ್ಪು ಸುಲ್ತಾನ ಶ್ತಾಹಿದ್ ಮಸೀದಿಕೋಟೆ	ಬಳ್ಳಾರಿ	3 00	1 00	4 00
19		ಬಳ್ಳಾರಿ	ಮುಸ್ಲಿಂ	181/03-04	12-03-04	03-04	ಶಾದಿಮಹರ್ ಕಮಿಟಿ	ಬಳ್ಳಾರಿ	5 00		5 00

20		ಹೊಸಪೇಟೆ	ಮುಸ್ಲಿಂ	/03–04		03–04	ಜಾಮೀಯಾ ಮಸ್ಜೀದ್ ಕಮಿಟಿ	ಚಿತ್ತವಾಡಿ	5 00		5 00
21	ಬೀದರ್	ಬಸವ ಕಲ್ಯಾಣ	ಮುಸ್ಲಿಂ	165/03–04 82/03–04	08–03–04 12–03–04	03–04	ದಾರಲ್ ಸಲಾಂ ವೆಲ್‌ಫೇರ್ ಟ್ರಸ್ಟ್ (ರಿ)	ಬಸವ ಕಲ್ಯಾಣ	3 00	1 00	4 00
22		ಬೀದರ್	ಮುಸ್ಲಿಂ	53/03–04 82/03–04	06–03–04 12–03–04	03–04	ಜಾಮೀಯಾ ಮಸ್ಜಿದ್ ಕಮಿಟಿ	ಹಮಿಲಾ ಪುರ	3 00	1 00	4 00
23		ಭಾಲ್ಕಿ	ಮುಸ್ಲಿಂ	138/03–04 82/03–04	12–03–04	03–04	ನೂರಾನಿ ಮಸ್ಜಿದ್ ಕಮಿಟಿ	ಭಾಲ್ಕಿ	3 00	1 00	4 00

24	ಬಿಜಾಪುರ	ಮುದ್ದೇಬಿಹಾಳ	ಮುಸ್ಲಿಂ	6/03-04 82/03-04	12-03-04	03-04	ಅಂಜುಮಾನ್ ಇಸ್ಲಾಂ ಕಮಿಟಿ	ಮುದ್ದೇ ಬಿಹಾಳ	2 00	2 00	4 00
25		ಮುದ್ದೇಬಿಹಾಳ	ಜೈನ್	85/03-04 82/03-04	27-02-04 12-03-04	03-04	ಪಾರ್ಶ್ವನಾಧ ತೀರ್ಥಂಕರ ಮತ್ತು ಪದ್ಮಾವತಿ ಸಂಸ್ಥೆ	ಮುದನಾಳ	3 00	1 00	4 00
26		ಮುದ್ದೇಬಿಹಾಳ	ಮುಸ್ಲಿಂ	181/03-04	12-03-04	03-04	ಮುಸ್ಲಿಂ ಜಮಾತ್ ಕಮಿಟಿ	ನಲತವಾಡ	5 00		5 00
27		ಬಿಜಾಪುರ	ಮುಸ್ಲಿಂ	91/00-01 82/03-04	10-03-04 12-03-04	03-04	ಅಂಜುಮಾನ್ ಇಸ್ಲಾಂ ಕಮಿಟಿ	ಹೊನವಾಡ	3 00	1 00	4 00

28		ಬಿಜಾಪುರ	ಮುಸ್ಲಿಂ	181/03-04	12-03-04	03-04	ಅಂಜುಮಾನ್ ಇಸ್ಲಾಂ	ಹೊರ್ತಿ	5 00		5 00
29		ಬಿಜಾಪುರ	ಜೈನ್	242/00-01	06-03-04	03-04	1008ನೇ ನೇಮಿನಾಥ ದಿಗಂಬರ ಜೈನ್	ನಿಡೋಣಿ	5 00		5 00
30		ಬಿಜಾಪುರ	ಮುಸ್ಲಿಂ	157/03-04	11-03-04	03-04	ಜಮಾತುಲ್ ಮುಸ್ಲಿಂ ಸಂಸ್ಥೆ	ಗುಮಂ ಜಗಲ್ಲಿ	5 00		5 00
31		ಬಸವನ ಬಾಗೇವಾಡಿ	ಮುಸ್ಲಿಂ	54/03-04 82/03-04	29-11-03 12-03-04	03-04	ಜಾಮೀಯ ಮಸ್ಜೀದ್ ಕಮಿಟಿ ಬ ಬಾಗೇವಾಡಿ		2 00	2 00	4 00

32		ಬ ಬಾಗೇವಾಡಿ	ಮುಸ್ಲಿಂ	81/00–01	09–03–04	03–04	ಅಂಜುಮಾನ್ ಇಸ್ಲಾಂ ಕಮಿಟಿ	ಕುದರಿಸಾಲವಾಡಗಿ	5 00		5 0(
33		ಬ ಬಾಗೇವಾಡಿ	ಮುಸ್ಲಿಂ	80/03–04	09–03–04	03–04	ಬಿಲಾಲ್ ಮಸ್ಜಿದ್ ಕಮಿಟಿ	ನಿಡಗುಂದಿ	5 00		5 0(
34		ಸಿಂದಗಿ	ಮುಸ್ಲಿಂ	28/03–04 82/03–04	27–02–04 12–03–04	03–04	ಭಾಗವಾನ ಜಮಾತ ಕಮಿಟಿ	ಸಿಂದಗಿ	3 00	1 00	4 0(
35		ಸಿಂದಗಿ	ಮುಸ್ಲಿಂ	102/03–04	10–03–04	03–04	ಅಂಜುಮಾನ್ ಇಸ್ಲಾಂ ಕಮಿಟಿ	ದೇವರ ಹಿಪ್ಪರಗಿ	5 00		5 0(

36	ಚಾಮರಾಜನಗರ	ಕೊಳ್ಳೆಗಾಲ	ಕ್ರಿಶ್ಚಿಯನ್	13/02-03 82/03-04	03-07-03 12-03-04	03-04	ಬೇತೆಲ್ ಲೂಥರನ್ ಚರ್ಚ್	ಕೊಳ್ಳೇಗಾಲ	2 00	1 00	3 00
37		ಕೊಳ್ಳೇಗಾಲ	ಮುಸ್ಲಿಂ	8/02-03 82/03-04	17-12-03 12-03-04	03-04	ಜಾಮೀಯೂ ಮಸೀದ್	ಕೌದಳ್ಳಿ	2 50	1 50	4 00
38		ಚಾಮರಾಜನಗರ	ಮುಸ್ಲಿಂ	182/03--04 82/03-04	12-03-04 12-03-04	03-04	ದಿ ಮುಸ್ಲಿಂ ಎಜುಕೇಷನಲ್ ಅಸೋಸಿಯೇಷನ್ ಗುಂಡ್ಲುಪೇಟೆ	ಚಾಮರಾಜನಗರ	3 00	1 00	4 00
39	ಚಿಕ್ಕಮಗಳೂರು	ಚಿಕ್ಕಮಗಳೂರು	ಮುಸ್ಲಿಂ	182/03-04	12-03-04	03-04	ಜಾಮೀಯಾ ಶಾದಿಮಹಲ್ ಗುಲ್ಲನ್	ಚಿಕ್ಕಮಗಳೂರು	5 00		5 00

40		ಮೂಡಿಗೆರೆ	ಜೈನ್	136/03–04	23–03–04	03–04	ಸರ್ವೋದಯ ಜೈನ ತೀರ್ಥ ಸಮಿತಿ	ಕೆಳಾಂಗಡಿ	2 50		2 50
41	ಚಿತ್ರದುರ್ಗ	ಮೊಳಕಾಲ್ಮೂರು	ಮುಸ್ಲಿಂ	1/02–03 82/03–04	27–08–03 12–03–04	03–04	ಅಹಲೆ ಜಮಾತ್ ಶಾದಿಮಹಲ್	ಮೊಳಕಾಲ್ಮೂರ	2 00	2 00	4 00
42		ಹೋಳಲ್ಕೆರೆ	ಮುಸ್ಲಿಂ	182/03–04 82/03–04	12–03–04 12–03–04	03–04	ಜಾಮೀಯಾ ಮಸ್ಜಿದ್	ಹೋಳ್ಲ್ಕೆರೆ	3 00	1 00	4 00
43		ಚಳ್ಳಕೆರೆ	ಮುಸ್ಲಿಂ			03–04	ಜಮೀಯಾ ಮಸ್ಜಿದ್	ಚಳ್ಳಕೆರೆ	5 00		5 00

44	ದಕ್ಷಿಣ ಕನ್ನಡ	ಸುಳ್ಯ	ಮುಸ್ಲಿಂ	86/01-02 82/03-04	07-03 12-03-04	03-04	ತರ್ಬಿಯತುಲ್ ಇಸ್ಲಾಂ ಸಮಿತಿಮೊಹಿಯುದ್ದೀನ್ ಜುಮ್ಮಾ ಮಸೀದಿ	ಸುಳ್ಯ	2 00	2 00	4 00
45		ಮಂಗಳೂರು	ಮುಸ್ಲಿಂ	145/03-04 82/03-04	06-02-04 12-03-04	03-04	ಮುಸ್ಲಿಂ ವೆಲ್‌ಫೇರ್ ಅಸೋಸಿಯೇಷನ್	ಅಡ್ಡೂರ	3 00	1 00	4 00
46		ಮಂಗಳೂರು	ಕ್ರಿಶ್ಚಿಯನ್	82/00-01	18-07-03 20-12-03	03-04	ಆವರ್ ಲೇಡಿ ಆಫ್ ಪಾಂಪೈ ಚರ್ಚ್	ಗುರುಪುರ ಕೈಕಂಬ	2 00	3 00	5 00

47		ಮಂಗಳೂರು	ಮುಸ್ಲಿಂ	17/01–02	26–07–03 20–02–04	03–04	ಪಣಂಬೂರು ಮುಸ್ಲಿಮ ಜಮಾತ್ ಜುಮ್ಮಾ ಮಸ್ಜೀದ್ ಮತ್ತು ಮದ್ರಸಾ ತುಮರಿಯಾ ಅರೇಬಿಕ್ ಸ್ಕೂಲ್	ಕಾಟಿಪಳ್ಯ	2 00	3 00	5 00
48		ಮಂಗಳೂರು	ಕ್ರಿಶ್ಚಿಯನ್	56/01–02 82/03–04	19–11–03 12–03–04	03–04	ಸೈಂಟ್ ಜೋಸೆಫ್ ಚರ್ಚ್	ಬಜಪೆ	3 00	1 00	4 00

H 20-28

49		ಮಂಗಳೂರು	ಮುಸ್ಲಿಂ	96/01–02 82/03–04	19–11–03 12–03–04	03–04	ಬದ್ರುಲ್ ಹುದಾ ಜುಮ್ಮಾ ಮಸೀದಿ ಮತ್ತು ಮದ್ರಸಾ ಕಾಂಜಲಕೋಡಿ	ಅಡ್ಡೂರ	3 00	1 00	4 00
50		ಮಂಗಳೂರು	ಕ್ರಿಶ್ಚಿಯನ್	170/03–04	20–03–04	03–04	ಸಂತ ಅಂತೋನಿ ಚರ್ಚ್	ಮಲ್ಲೂರು ಫರ್ಮಾಯಿ	2 50		2 50
51		ಬಂಟ್ವಾಳ	ಕ್ರಿಶ್ಚಿಯನ್	11/03–04	20–03–04	03–04	ಹೋಲಿ ಫ್ಯಾಮಿಲಿ ಚರ್ಚ್	ಮೇರವಜಲು	3 00		3 00

52		ಬೆಳ್ತಂಗಡಿ	ಕ್ರಿಶ್ಚಿಯನ್	95/03–04 82/03–04	17–12–03 12–03–04	03–04	ಸಂತ ಫ್ರಾನ್ಸಿಸ್ ಕ್ಲೆವಿಯರ್ ಚರ್ಚ್	ಇಂದಬೆಲ್ಟೋ ಗ್ರಾಮ	3 00	1 00	4 00
53		ಬೆಳ್ತಂಗಡಿ	ಮುಸ್ಲಿಂ			03–04	ಕರ್ನಾಟಕ ಆಡಿಟೋರಿಯಂ ಸೊಸೈಟಿ	ಪಡಾಂಗಡಿ	5 00		5 00
54		ಪುತ್ತೂರು	ಜೈನ್	60/01–02 82/03–04	02–12–03 12–03–04	03–04	ಜೈನ ವಿದ್ಯಾವರ್ಧಕ ಸಂಘ	ಪುತ್ತೂರು	3 00	1 00	4 00
55	ದಾವಣಗೆರೆ	ಹರಿಹರ	ಜೈನ್	113/03–04 82/03–04	04–03–04 12–03–04	03–04	ಭಗವಾನ ಪಾರ್ಶ್ವನಾಥ ಜೈನ ದಿಂಗಬರ್ ಟ್ರಸ್ಟ್	ಹರಿಹರ	3 00	1 00	4 00

56		ಹೊನ್ನಾಳಿ	ಮುಸ್ಲಿಂ	182/03–04 82/03–04	12–03–04 12–03–04	03–04	ಜಾಮೀಯಾ ಮಸ್ಜೀದ್	ಹೊನ್ನಾಳಿ	3 00	1 00	4 00
57		ಚನ್ನಗಿರಿ	ಮುಸ್ಲಿಂ	181/03–04	12–03–04	03–04	ಶಾಂತಿಸಾಗರ ಮೈನಾರಿಟಿ ವೆಲ್‌ಫೇರ್ ಟ್ರಸ್ಟ್	ಕೆರೆಬಿಳಚಿ	5 00		5 00
58	ಧಾರವಾಡ	ನವಲಗುಂದ	ಜೈನ್	39/02–03 82/03–04	00–07–03 12–03–04	03–04	ಭಗವಾನ ಶ್ರೀ 1008 ಆದಿನಾಥ ದಿಂಗಬರ್ ಅ ಸಂ ಜೈನ ಸಮಾಜ ಸೇವಾ ಸಂಘ	ನವಲಗುಂದ	2 00	2 00	4 00

59		ಧಾರವಾಡ	ಮುಸ್ಲಿಂ	182/03–04 82/03–04	12–03–04 12–03–04	03–04	ಜುಮ್ಮಾ ಶಾಮಕಾನಾ ಮತ್ತು ಶೇಖಸಿಲಾರ ಶಾ ದರ್ಗಾ	ಉಪ್ಪಿನ ಬೇಟಗೇರಿ	3 00	1 00	4 00
60		ಹುಬ್ಬಳ್ಳಿ	ಮುಸ್ಲಿಂ	181/03–04	12–03–04	03–04	ಗವಿ ಮೊಹಲ್ಲಾ ಮತ್ತು ಮಲಂಗ ಸಾವಲಿ ದರ್ಗಾ ಜಮಾತ್	ಹುಬ್ಬಳ್ಳಿ	5 00		5 00
61	ಗದಗ	ಶಿರಹಟ್ಟಿ	ಮುಸ್ಲಿಂ	33/02–03 82/03–04	18–10–03 12–03–04	03–04	ಹಜರತ್ ಸುಲೇಮಾನ್ ಬಾದಶಾ ಖಾದ್ರಿ	ಲಕ್ಷ್ಮೇಶ್ವರ	2 50	1 50	4 00

62		ರೋಣ	ಮುಸ್ಲಿಂ	111/01/02	00–07–03 11–03–04	03–04	ಅಂಜುಮಾನ್ ಇಸ್ಲಾಂ ಕಮಿಟಿ	ರೋಣ	2 00	3 00	5 00
63		ಗದಗ್	ಮುಸ್ಲಿಂ	52/03–04	16 01 04	03–04	ಶ್ರೀ ರಹಿಮಾನ್ ಶ್ಯಾವಲಿ ದರ್ಗಾ ಮತ್ತು ಮಸ್ಜೀದ್ ಕಮಿಟಿ	ಗದಗ್	3 00		
64	ಗುಲ್ಬರ್ಗಾ	ಆಳಂದ	ಮುಸ್ಲಿಂ	48/03–04 82/03–04	10 03 0 4 12 03 0 4	03 0 4	ಲಾಡೆಲ್ ಮೆಶ್ಯಾರ ದರ್ಗಾ	ಶಿರೋ ರ	3 00	1 00	

ಬ್ಯಾಚ್-2ರಡಿಯಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಲ್ಲದಕಲ್ ಗ್ರಾಮದಲ್ಲಿ ವೈಯಕ್ತಿಕ ಶೌಚಾಲಯಗಳು ಸರಿಯಾಗಿ ನಿರ್ಮಿಸದೆ ಇರುವ ಫಲಾನುಭವಿಗಳಿಗೆ ಸಹಾಯಧನವನ್ನು ವಿತರಿಸಲಾಗಿತ್ತು ಈ ಹಿಂದೆ ಜಿಲ್ಲಾ ನೆರವು ಘಟಕ, ರಾಯಚೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೆರವು ಸಂಸ್ಥೆ ಸ್ಟೆಮ್ ಇವರನ್ನು ಜವಾಬ್ದಾರರನ್ನಾಗಿ ಮಾಡಿ ದುರುಪಯೋಗವಾಗಿರುವ ಮೊತ್ತ ರೂ 3 00 ಲಕ್ಷಗಳನ್ನು ಸಂಸ್ಥೆಗೆ ಪಾವತಿಸಬೇಕಾಗಿದ್ದ ಅಂತಿಮ ಬಿಲ್ಲಿನಲ್ಲಿ ಕಡಿತಗೊಳಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ

ಈ) ಈ ಬಗ್ಗೆ ಎಷ್ಟು ಜನರ ಮೇಲೆ ಕ್ರಮಗಳನ್ನು ಕೈಗೊಳ್ಳಲಾಗಿದೆ

ಈ ಬಗ್ಗೆ ತನಿಖೆ ನಡೆಸಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ, ಗ್ರಾಪಂ ಮಲ್ಲದಕಲ್ ಇವರ ವಿರುದ್ಧ ಹಣ ದುರುಪಯೋಗದ ಬಗ್ಗೆ ದೇವದುರ್ಗ ತಾಲ್ಲೂಕಿನ ಗಬ್ಬುರು ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ (ಪ್ರಕರಣದ ಗುನ್ನೆ ನಂ 10/06 ಕಲಂ 409 ರ/ವಿ 34 ಐಪಿಸಿ ದಿನಾಂಕ 13-02-2006)

ಉ) ಜಲ ನಿರ್ಮಲ ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಜಲ ನಿರ್ಮಲ ಯೋಜನೆಯ ಕೆಲವು ನದಿ ನೀರು ಸರಬರಾಜು ಯೋಜನೆಗಳನ್ನು ಹೊರತುಪಡಿಸಿ ಬಾಕಿ ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವದಿಯಲ್ಲಿ ಅಂದರೆ ಡಿಸೆಂಬರ್ 2007ರೊಳಗೆ ಮುಕ್ತಾಯಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1195(1591)
ಸದಸ್ಯರ ಹೆಸರು ಶ್ರೀ ಮಲ್ಲಿಕಾರ್ಜುನ ಎಸ್ ಖೂಬಾ (ಬಸವ ಕಲ್ಯಾಣ)
ಉತ್ತರಿಸುವವರು ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಕಾರಂಜಾ ನೀರಾವರಿ ಯೋಜನೆಗೆ ವೆಚ್ಚ ಮಾಡಲಾಗಿರುವ ಹೆಚ್ಚುವರಿ ಅಂದಾಜು ಮೊತ್ತವೆಷ್ಟು

ಬೀದರ್ ಜಿಲ್ಲೆಯಲ್ಲಿ ಕಾರಂಜಾ ನೀರಾವರಿ ಯೋಜನೆಯ ಮೂಲ ಅಂದಾಜು ಮೊತ್ತ ರೂ 9 90 ಕೊಟಿಗಳಾಗಿದ್ದು, ಇಲ್ಲಿಯವರೆಗೂ ರೂ 453 57 ಕೋಟಿಗಳು ವೆಚ್ಚವಾಗಿದ್ದು ಇಲ್ಲಿಯವರೆಗೂ ರೂ 443 67 ಕೋಟಿಗಳು ಹೆಚ್ಚುವರಿ ವೆಚ್ಚ ಮಾಡಲಾಗಿದೆ

ಆ) ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಕಾಲಮಿತಿಯ ಅಗತ್ಯವಿದೆ

ಈ ಯೋಜನೆಯನ್ನು ಮಾರ್ಚ್-2007 ರ ವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಯೋಜನೆಯ ಅಡಿಯಲ್ಲಿ ಕಾರಂಜಾ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್‌ನ ಪುನಶ್ಚೇತನ ಕಾಮಗಾರಿಯನ್ನು ಜೂನ್ 2007ರ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ

ಇ) ಯೋಜನೆ ಪೂರ್ಣಗೊಂಡಾಗ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ

ಈ ಯೋಜನೆ ಪೂರ್ಣಗೊಂಡಾಗ ಬೀದರ್ ತಾಲ್ಲೂಕಿನಲ್ಲಿ 1,208 ಎಕರೆ ಹಾಗೂ ಭಾಲ್ಕಿ ತಾಲ್ಲೂಕಿನಲ್ಲಿ 55 093 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ

ಈ) ಈ ಯೋಜನೆಯ ಯಾವ ಯಾವ ಉಪ ವಿಭಾಗಗಳಿಗೆ ಕಳೆದ 3 ವರ್ಷಗಳಿಂದ ಎಷ್ಟೆಷ್ಟು ಮೊತ್ತದ ಎಲ್ ಓ ಸಿ ಯನ್ನು ಬಿಡುಗಡೆ ಮಾಡಲಾಗಿದೆ

ಕಾರಂಜಾ ಯೋಜನೆಯ ಮೂರು ವಿಭಾಗಗಳಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಉಪ ವಿಭಾಗಗಳಿಗೆ ಬಿಡುಗಡೆ ಮಾಡಿದ ಹಣ ಭರವಸೆ ಪತ್ರದ ವಿವರ ಈ ಕೆಳಗಿನಂತಿದೆ

(ರೂ ಲಕ್ಷಗಳಲ್ಲಿ)

ಬೀದರ್ ವಿಭಾಗ				
ಕ್ರ ಸ	ಉ ವಿ ಹೆಸರು	2004-05	2005-06	2006--07
1	ಕೆ ಪಿ ಸಿ ಸಿ ಉಪ ವಿಭಾಗ-2, ಹಾಲಹಳ್ಳಿ	1 10	–	–
2	ಕೆ ಪಿ ಸಿ ಸಿ ಉಪ ವಿಭಾಗ-	1.90	2 00	–

	3, ಹಾಲಹಳ್ಳಿ			
3	ಕೆ ಪಿ ಸಿ ಸಿ ಉಪ ವಿಭಾಗ- 8 ಜನವಾಡ	1 95	1 40	–
4	ಕೆ ಎಲ್ ಐ ಉಪ ವಿಭಾಗ, ಹಾಲಹಳ್ಳಿ	1 80	–	–
	ಒಟ್ಟು	6 75	3 40	–
ಭಾಲ್ಕಿ ವಿಭಾಗ				
1	ಕೆ ಪಿ ಸಿ ಸಿ ಉಪ-ವಿಭಾಗ 1, ಹಾಲಹಳ್ಳಿ	7 55	2 19	0 70
2	ಕೆ ಪಿ ಸಿ ಸಿ ಉಪ-ವಿಭಾಗ 3, ಭಾಲ್ಕಿ	7 41	2 79	1 40
3	ಕೆ ಪಿ ಸಿ ಸಿ ಉಪ-ವಿಭಾಗ 10, ಹಲಬರ್ಗಾ	7 45	1 44	0 75
	ಒಟ್ಟು	22 41	6 42	2 85
ಭಾತಂಬ್ರಾ ವಿಭಾಗ				
1	ಕೆ ಪಿ ಸಿ ಸಿ ಉಪ-ವಿಭಾಗ ನಂ-4, ಭಾಲ್ಕಿ ಕ್ಯಾಂಪ್- ಹುಮನಾಬಾದ್	13 12	3 14	8 94
2	ಕೆ ಪಿ ಸಿ ಸಿ ಉಪ-ವಿಭಾಗ ನಂ-5, ಬಾತಂಬ್ರಾ	14 55	5 20	11 75
3	ಕೆ ಪಿ ಸಿ ಸಿ ಉಪ-ವಿಭಾಗ ನಂ-7 ನಿಟ್ಟೂರ	8 35	1 60	4 58
4	ಕೆ ಪಿ ಸಿ ಸಿ ಉಪ-ವಿಭಾಗ ನಂ-9, ಡೊಣಗಾಪೂರ	11 35	0 90	5 29
5	ಕೆ ಎಲ್ ಐ ಉಪ-ವಿಭಾಗ, ಹಾಲಹಳ್ಳಿ	–	0 45	1 85
	ಒಟ್ಟು	47 37	11 29	31 41

ಉ) ಈ ಯೋಜನೆಯ ಅನುಷ್ಠಾನದಲ್ಲಿ ಇಲ್ಲಿಯವರೆಗೆ ಎಷ್ಟು ಮೊತ್ತದ ಅವ್ಯವಹಾರ ಪ್ರಕರಣಗಳು ಪತ್ತೆಯಾಗಿವೆ

ಈ ಯೋಜನೆಯ ಅನುಷ್ಠಾನದಲ್ಲಿ 3109 78 ಲಕ್ಷ ರೂ ಗಳ ಮೊತ್ತದ ಅವ್ಯವಹಾರ ಪ್ರಕರಣಗಳು ಪತ್ತೆಯಾಗಿವೆ

ಊ) ಇದರಲ್ಲಿ ಭಾಗಿಯಾಗಿರುವವರ ಮೇಲೆ ಸರ್ಕಾರ/ಕೈಗೊಂಡಿರುವ ಶಿಸ್ತಿನ ಕ್ರಮಗಳೇನು (ಭಾಗಿಯಾಗಿರುವವರ ವಿವರಗಳನ್ನು ನೀಡುವುದು)

ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ

ಅನುಬಂಧ-1

(ಪ್ರಶ್ನೆ ಸಂಖ್ಯೆ 1591 ಶ್ರೀ ಮಲ್ಲಿಕಾರ್ಜುನ ಎಸ್ ಖೂಬಾರವರ ಚುಕ್ಕೆ ರಹಿತ ಪ್ರಶ್ನೆ)

(ರೂ ಲಕ್ಷಗಳಲ್ಲಿ)

1) ಸರ್ಕಾರದ ಆದೇಶ ಸಂಖ್ಯೆ 28	1509 67
2)-ಅದೇ-ಸಂಖ್ಯೆ 148	270 98
3)-ಅದೇ-ಸಂಖ್ಯೆ 94	866 13
4)-ಅದೇ-ಸಂಖ್ಯೆ 18ರ	256 00
5)-ಅದೇ-ಸಂಖ್ಯೆ 192	22 84
6)-ಅದೇ-ಸಂಖ್ಯೆ 21	31 79
7)-ಅದೇ-ಪಿ ಡಬ್ಲ್ಯೂ ಡಿ ಸಂಖ್ಯೆ 122	0 64
8) ಸಿವಿಲ್ ದಾವೆ ಸಂಖ್ಯೆ 93	121 30
9) ಸಿವಿಲ್ ದಾವೆ ಸಂಖ್ಯೆ ಜ ಸಂ ಇ 122	1 55
10) ಕ್ರಿಮಿನಲ್ ದಾವೆ ಜ ಸಂ ಇ 157	16 52
11) ಸ್ಫೋಟಕ ವಸ್ತುಗಳ ದಾವೆ ಸಂಖ್ಯೆ -83	2 41
ಒಟ್ಟು	3109 78

ಇದರಲ್ಲಿ ಭಾಗಿಯಾಗಿರುವವರ ವಿವರ -

ಶ್ರೀಯುತರು

1	ಇಲಾಖಾ ವಿಚಾರಣೆ ಪ್ರಕರಣ ಸಂಖ್ಯೆ 137	ಸೈಯದ್ ಮಹಮೂದ ಹುಸೇನ ಕಾ ನಿ ಅ(ನಿವೃತ್ತ) ಇತ್ತೀಚಿನ ಹಂತ ವಿಚಾರಣಾ ವರದಿ ಸರ್ಕಾರದಲ್ಲಿ ಸ್ವೀಕರಿಸಿದ್ದು, ಪರಿಶೀಲನೆಯಲ್ಲಿದೆ
2	ಇಲಾಖಾ ವಿಚಾರಣೆ ಪ್ರಕರಣ ಸಂಖ್ಯೆ 28	1) ವಿ ಹೆಚ್ ಅಗರಖೇಡ್ ಅ ಅ (ನಿವೃತ್ತ) 2) ಎಸ್ ಕೆ ದೇಸಾಯಿ, ಕಾ ನಿ ಅ(ನಿವೃತ್ತ) 3) ಕೆ ದಿನಕರ ರಾವ್, ಅ ಅ (ನಿವೃತ್ತ) 4) ಎಂ ವಿ ವೆಂಕಟರೆಡ್ಡಿ ಕಾ ನಿ ಅ(ನಿವೃತ್ತ) 5) ಎಂ ಜಿ ಸದಾಶಿವಯ್ಯ, ಕಾ ನಿ ಅ(ನಿವೃತ್ತ)

		6) ಪಿ ಸಿದ್ದಪ್ಪ, ಮು ಇಂ (ನಿವೃತ್ತ) 7) ಬಿ ಶಂಕ್ರಪ್ಪ ಕಾ ನಿ ಅ(ನಿವೃತ್ತ) 8) ಕೆ ಹನುಮಂತಪ್ಪ, ಕಾ ನಿ ಅ (ನಿವೃತ್ತ) 9)ಹೆಚ್ ಪುಂಡಲಿಕರಾವ್, ಕಾ ನಿ ಅ(ನಿವೃತ್ತ) 10)ಎಸ್ ಕೆ ಗಾಯತೊಂಡ ಸ ಕಾ ನಿ ಅ(ನಿವೃತ್ತ) ಇತ್ತೀಚಿನ ಹಂತ ವಿಚಾರಣಾ ವರದಿ ಸರ್ಕಾರದಲ್ಲಿ ಸ್ವೀಕರಿಸಿದ್ದು, ಪರಿಶೀಲನೆಯಲ್ಲಿದೆ
3	ಇಲಾಖಾ ವಿಚಾರಣೆ ಪ್ರಕರಣ ಸಂಖ್ಯೆ 188	1) ಹರಿಹರ ಸದಾಶಿವರಾವ,ಕಾ ನಿ ಅ(ನಿವೃತ್ತ) 2) ಪ್ರೇಮಸಿಂಗ್, ಸ ಕಾ ನಿ 3) ಎಸ್ ಟಿ ಕೋಳೆಕರ್ ಸ ಇಂ 4) ಎಂ ಮಹ್ಮದ್ ಹುಸೇನ್ ಸ ಇಂ 5) ಶಾಹೀದ್ ಅಲಿ ಸ ಇಂ 6) ಬಿ ಎ ತಮಸಂಗೆ, ಸ ಇಂ 7) ಎಂ ಡಿ ಹಜರತ್ ಸಿದ್ದಿಕಿ, ಸ ಇಂ 8) ರಾಜೇಂದ್ರ ಸ ಇಂ 9) ಮಲ್ಲಿಕಾರ್ಜುನ ಕರಂಜಿ ಸ ಇಂ 10) ಡಿ ಆರ್ ಕುಲಕರ್ಣೀ, ಸ ಇಂ 11) ಪಬ್ಬಾ ರವಿಕಿರಣ, ಸ ಇಂ 12) ಶಫಿಯೊದ್ದೀನ್, ಸ ಇಂ 13) ಖಲಿಮುದ್ದೀನ್, ಕಿರಿಯ,ಇಂಜಿನೀಯರ್, 14) ಅಶೋಕ ಕುಮಾರ, ಕಿ ಇಂ 15) ವೈಜನಾದ ಬಂಡಾಪೂರೆ, ಕಿ ಇಂ 16) ಸಿ ಬಸವರಾಜ, ಕಿ ಇಂ 17) ರಾಜಪ್ಪ ಪಾಟೀಲ್, ಕಿ ಇಂ (ನಿವೃತ್ತ) 18) ನವಾಬೋದ್ಧೀನ್, ಕಿ ಇಂ 19) ಪಾಂಡುರಂಗ, ಕಿ ಇಂ 20) ರವಿಂದ್ರ ಕಿ ಇಂ 21) ಅರುಣ ಕುಮಾರ, ಸ ಇಂ ಇತ್ತೀಚೀನ ಹಂತ ಮುಂದುವರೆದ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
4	ಪ್ರಕರಣ ಸಂಖ್ಯೆ 192	1) ನಸರುಲ್ಲಾ ಖಾನ, ಸ ಕಾ ಅ

		2) ಎಸ್ ಎ ಶ್ರೀಪತರಾವ್, ಸ ಕಾಅ (ನಿವೃತ್ತ) 3) ಅಶೋಕ ದೈಜೊಡೆ, ಪ್ರದ ಉ ಪಾ 4) ಎನ್ ಎಸ್ ಪಾಟೀಲ್ ಸ ಕಾ ಅ 5) ದಯಾನಂದ ಸ್ವಾಮಿ, ಪ್ರದ ಉ ಪಾ 6) ಗುಂಡಣ್ಣಾ ಮಾಡಗೊಳೆ, ಲೆಕ್ಕ ಅಧೀಕ್ಷಕರು ಇತ್ತೀಚಿನ ಹಂತ ಮುಂದುವರೆದ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
5	ಪ್ರಕರಣ ಸಂಖ್ಯೆ 94	1) ಸುಧಾಕರ ಕುಲಕರ್ಣಿ, ಸ ಕಾ ಆ(ನಿವೃತ್ತ) 2) ಖಾಜಾ ಮಸೂದ ಅಹ್ಮದ್, ಸ ಕಾ ಅ(ನಿವೃತ್ತ) ಇತ್ತೀಚಿನ ಹಂತ, ವಿಚಾರಣಾ ವರದಿ ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ
6	ಪ್ರಕರಣ ಸಂಖ್ಯೆ, 83	1) ಬಸವರಾಜ ಸಲಗೆರ, ಸ ಕಾ ಅ 2) ಅಶೋಕ ದೈಖೊಡೆ, ಪ್ರದ ಉ ಪ 3) ಎಲ್ ಎ ವಿಶ್ವನಾಥ, ಕಾವಲುಗಾರ 4) ಮಹ್ಮದ್ ಖಾಜಾ, ಕಾವಲುಗಾರ 5) ಮನೋಹರ, ಕಾವಲುಗಾರ 6) ಅಬ್ದುಲ್ ಹಮೀದ್, ಕಾವಲುಗಾರ 7) ಗಣಪತಿ, ಕಾವಲುಗಾರ 8) ಹಣಮಂತ, ಕಾವಲುಗಾರ ಇತ್ತೀಚಿನ ಹಂತ ವಿಚಾರಣೆ ಪ್ರಗತಿಯಲ್ಲಿದೆ
7	ಪ್ರಕರಣ ಸಂಖ್ಯೆ 148	1) ಎನ್ ಎಲ್ ಮೈತ್ರಿ ಸ ಕಾ ಅ(ನಿವೃತ್ತ) 2) ಪಿ ಬಿ ನಂದೂರ, ಸ ಕಾ ಅ(ನಿವೃತ್ತ) 3) ಗುಲಶೀರ ಅಹ್ಮದ್ ಸ ಕಾ ಅ(ನಿವೃತ್ತ) 4) ಶಂಕ್ರಪ್ಪ ಸುರವಾರ, ಸ ಕಾ ಅ (ನಿವೃತ್ತ) 5) ಎಸ್ ಜಿ ಗುಗವಾಡ ಸ ಕಾ ಅ (ನಿವೃತ್ತ) 6) ಸಿ ನಂಜೇಗೌಡ ಸ ಕಾ ಅ 7) ಹರಿಹರ ಸದಾಶಿವರಾವ, ಸ ಕಾ ಅ(ನಿವೃತ್ತ) 8) ಎಸ್ ಎ ಶಫಿ ಅಹ್ಮದ್, ಸ ಕಾ ಅ 9) ಪಬ್ಬಾ ರವಿಕಿರಣ, ಸ ಇಂ

		10) ಲಕ್ಷ್ಮಣ, ಸ ಕಾ ಅ 11) ಎಸ್ ಆರ್ ಕೃಷ್ಣಮೂರ್ತಿ ಸ ಕಾ ಅ (ನಿವೃತ್ತ) 12) ಎಸ್ ಕೆ ಗಾಯತೊಂಡ, ಸ ಕಾ ಅ(ನಿ) 13) ಬಿ ಎಸ್ ಬೀರಾದಾರ, ಸ ಇಂ 14) ಮೋಹನ ಬಾಚಾ, ಲೆ ಅ 15) ದೇವಿಂದ್ರಪ್ಪ, ಲೆ ಅ 16) ಗುಂಡಪ್ಪ, ಲೆ ಅ 17) ವೀರಶೆಟ್ಟಿ, ಲೆ ಅ ಇತ್ತೀಚಿನ ಹಂತ ವಿಚಾರಣೆ ಪ್ರಗತಿಯಲ್ಲಿದೆ
8	ಪ್ರಕರಣ ಸಂಖ್ಯೆ 173	1) ಹರಿಹರ ಸದಾಶಿವರಾವ್, ಕಾ ನಿ ಅ(ನಿವೃತ್ತ) 2) ಎಂ ಎಸ್ ನಾಗರಾಜ, ಕಾ ನಿ ಅ 3) ಲಕ್ಷ್ಮಣ, ಸ ಕಾ ನಿ 4) ಸೂರ್ಯಕಾಂತ ಶೇಂದ್ರೆ, ಸ ಇಂ 5) ವಿಧ್ಯಾಸಾಗರ, ಸ ಇಂ 6) ಸುಭಾಷ, ಕಿ ಇಂ 7) ಅಣ್ಣಪ್ಪ, ಕಿ ಇಂ 8) ವಿ ಜಗನ್ನಾಥ ರಾವ್, ಲೆಕ್ಕ ಅಧೀಕ್ಷಕರು(ನಿ) ಇತ್ತೀಚೀನ ಹಂತ ವಿಚಾರಣೆ ಪ್ರಗತಿಯಲ್ಲಿದೆ
9	ಪ್ರಕರಣ ಸಂಖ್ಯೆ 38	1) ಅನೀಲಕುಮಾರ ಗರುಡಕರ, ಸ ಕಾ ನಿ ಅ 2) ಎಸ್ ಎ ಢಗೆ, ಲೆಕ್ಕ ಅಧೀಕ್ಷಕರು (ಪ್ರಬಾರ) ಇತ್ತಿಚಿನ ಹಂತ ವಿಚಾರಣೆ ಪ್ರಗತಿಯಲ್ಲಿದೆ
10	ಪ್ರಕರಣ ಸಂಖ್ಯೆ 89	1) ಬಸವರಾಜ ಹಾರಕುಡೆ, ಸ ಇಂ 2) ರಾಮಚಂದ್ರ ಕಿ ಇಂ ಇತ್ತೀಚೀನ ಹಂತ ವೀಚಾರಣೆ ಪ್ರಗತಿಯಲ್ಲಿದೆ
11	ಪ್ರಕರಣ ಸಂಖ್ಯೆ 181	1) ಹರಿಹರ ಸದಾಶಿವರಾವ್, ಕಾ ನಿ ಅ(ನಿವೃತ್ತ) 2) ರಾಜು ಡಾಂಗೆ, ಸ ಕಾ ಅ 3) ಎನ್ ಟಿ ಕೊಳೆಕರ್, ಸ ಇಂ ಇತ್ತೀಚಿನ ಹಂತ ವಿಚಾರಣೆ ಪ್ರಗತಿಯಲ್ಲಿದೆ
12	ಪ್ರಕರಣ ಸಂಖ್ಯೆ 185	1) ಕೆ ವಿ ಶಂಕರ್ ನಾರಾಯಣ,

	ಸರ್ಕಾರಿ ಆದೇಶ ಸಂಖ್ಯೆ 18ರ	ಮು ಇಂ (ನಿವೃತ್ತ) 2) ಬಿ ಡಿ ಪಾಂಡುಗಂಗರಾವ್, ಸೂ ಇಂ (ನಿವೃತ್ತ) 3) ಕೆ ಹನುಮಂತಪ್ಪ ಕಾ ಇಂ (ನಿ) 4) ಎ ಜಿ ಖೇಣೆಡ್, ಕಾ ಇಂ (ನಿ) 5) ಸೈಯದ್ ಮಹ್ಮದ್ ಹುಸೇನ್, ಕಾ ನಿ ಅ(ನಿ) 6) ಎಸ್ ಕೆ ಗಾಯತೊಂಡ, ಸ ಕಾ ಅ(ನಿ) ರವರ ಸಿವಿಲ್ ದಾವೆ ಇತ್ತೀಚಿನ ಹಂತ ವಿಚಾರಣೆ ಪ್ರಗತಿಯಲ್ಲಿದೆ
13	ಸಿವಿಲ್ ದಾವೆ ಸಂಖ್ಯೆ 21	1) ಬಿ ಎಸ್ ಜವಳಿ, ಅ ಅ (ನಿವೃತ್ತ)
14	ಸಿವಿಲ್ ದಾವೆ ಸಂಖ್ಯೆ 122	1) ಹೆಚ್ ಮಂಡಲಿಕರಾವ್ ಕ ನಿ ಅ(ನಿವೃತ್ತ)
15	ಸಿವಿಲ್ ದಾವೆ ಸಂಖ್ಯೆ 33	1) ವಿ ಜಿ ಖೇಣೆದ್, ಕಾ ನಿ ಅ(ನಿವೃತ್ತ) 2) ಕೆ ಹನುಮಂತಪ್ಪ ಕಾ ನಿ ಅ(ನಿವೃತ್ತ) 3) ಪಾಂಡುರಂಗ ಬಿರಾದಾರ, ಕಾ ನಿ ಅ(ನಿವೃತ್ತ)
16	ಸಿವಿಲ್ ದಾವೆ ಸಂಖ್ಯೆ 122 ಜ ಸಂ ಇ	1) ಎಸ್ ಎ ಶಫಿ ಅಹ್ಮದ್, ಕಾ ಪಾ ಅ(ನಿವೃತ್ತ) 2) ಹರಿಹರ ಸದಾಶಿವರಾವ್, ಕಾ ಪಾ ಅ(ನಿವೃತ್ತ) 3) ಸೈಯದ್ ಹುಸೇನ್, ಸ ಕಾ ಅ (ನಿವೃತ್ತ) 4) ಎಂ ಝುಡ್ ಬಾಬರ್, ಸ ಕಾ ಅ (ನಿವೃತ್ತ) 5) ವಿ ಕೆ ಬಜಂತ್ರಿ ಕಾ ಪಾ ಅ(ನಿವೃತ್ತ) 6) ಹೆಚ್ಚ ವಿ ಪರಮೇಶ್ವರಯ್ಯಾ, ಕಾ ಪಾ ಅ(ನಿವೃತ್ತ) 7)ಜ ಸಿ ಸುರಪುರ, ಕಾ ಪಾ ಅ(ನಿವೃತ್ತ) 8) ಜೆ ಎಂ ಸದಾಶಿವಯ್ಯಾ, ಕಾ ಪಾ ಅ(ನಿವೃತ್ತ) 9) ಹೆಚ್ ಪುಂಡಲಿಕ, ಕಾ ಪಾ ಅ(ನಿವೃತ್ತ) 10) ಬಿ ಎಸ್ ಶಿರವಾಳ, ಸ ಇಂ (ಮರಣ)
17	ಸರ್ಕಾರದ ಆದೇಶ ಸಂಖ್ಯೆ 157 ಕ್ರಿಮಿನಲ್	1) ಹನುಂತಪ್ಪ, ಕಾ ಪ ಅ(ನಿವೃತ್ತ) 2) ಪಾಂಡುರಂಗ್ ಬಿರಾದಾರ,

		ಕಾ ಪಾ ಅ (ನಿವೃತ್ತ) 3) ಜೆ ಸಿ ಸುರಪೂರ್, ಕಾ ಪಾ ಅ(ನಿವೃತ್ತ) 4) ವಿ ಹೆಚ್ ಅಗರಖೇಡ್, ಕಾ ಪಾ ಅ(ನಿವೃತ್ತ) 5) ಸೈಯದ್ ಹುಸೇನ್, ಸ ಕಾ ಇಂ (ನಿವೃತ್ತ) 6) ಸೂರ್ಯಕಾಂತ, ಸ ಕಾ ಇಂ

ಇದರಲ್ಲಿ 50 ಅಧಿಕಾರಿಗಳು ವಯೋನಿವೃತ್ತಿ ಹೊಂದಿರುತ್ತಾರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1196(1592)**
ಸದಸ್ಯರ ಹೆಸರು **ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವ ಕಲ್ಯಾಣ)**
ಉತ್ತರಿಸುವವರು **ಶ್ರೀ ಡಿ ಟಿ ಜಯಕುಮಾರ್(ವಸತಿ ಸಚಿವರು)**

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯ/ಕೇಂದ್ರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಎಷ್ಟು ಮನೆಗಳನ್ನು ಹಾಗೂ ನಿವೇಶನಗಳನ್ನು ಹಂಚಿಕೆ ಮಾಡುವ ಗುರಿಯನ್ನು ಹೊಂದಲಾಗಿತ್ತು,

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳಡಿಯಲ್ಲಿ 784051 ಮನೆಗಳನ್ನು ಹಾಗೂ 17768 ನಿವೇಶನಗಳನ್ನು ಹಂಚಿಕೆ ಮಾಡುವ ಗುರಿಯನ್ನು ಹೊಂದಲಾಗಿದೆ ವಿವರ ಈ ಕೆಳಕಂಡಂತಿದೆ

ಮನೆಗಳು

ಯೋಜನೆ	2004-05	2005-06	2006-07	ಒಟ್ಟು
ನಗರ ಆಶ್ರಯ	ಗುರಿ ನಿಗದಿ ಪಡಿಸಿರುವುದಿಲ್ಲ	50250	0	50250
ಗ್ರಾಮೀಣ ಆಶ್ರಯ		226080	340560	566640
ಗ್ರಾಮೀಣ ಅಂಬೇಡ್ಕರ್		24040	0	24040
ಐ ಎ ವೈ ಯೋಜನೆ	39686	50136	53299	143121
ಒಟ್ಟು	39686	350256	393859	784051

ನಿವೇಶನಗಳು

ಯೋಜನೆ	2004-05	2005-06	2006-07	ಒಟ್ಟು
ನಗರ ಆಶ್ರಯ ನಿವೇಶನ	2000	2000	4884	8884
ಗ್ರಾಮೀಣ ಆಶ್ರಯ	2000	2000	4884	8884

ನಿವೇಶನ				
ಒಟ್ಟು	4000	4000	9768	7768

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಂಡಳಿಯು ವಾಲ್ಮೀಕಿ ಅಂಬೇಡ್ಕರ್ ಆವಾಸ್ (ವಾಂಬೆ) ಯೋಜನೆಯಡಿ ಒಟ್ಟು 23950 ಮನೆಗಳನ್ನು ಹಂಚಿಕೆ ಮಾಡುವ ಗುರಿ ಹೊಂದಲಾಗಿತ್ತು ಆದರೆ ನಿವೇಶನಗಳನ್ನು ಹಂಚಿಕೆ ಮಾಡುವ ಕಾರ್ಯಕ್ರಮ ಮಂಡಳಿಯಲ್ಲಿ ಇರುವುದಿಲ್ಲ

ಆ) ಈ ಪೈಕಿ ಎಷ್ಟು ಗುರಿಯನ್ನು ಸಾಧಿಸಲಾಗಿದೆ,

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಕಳೆದ ಮೂರು ವರ್ಷಗಳಿಂದ ಹಿಂದಿನ ಶ್ರೇಣಿಯಡಿಯಲ್ಲಿ ಬಾಕಿ ಇರುವ ಮನೆಗಳನ್ನು ಒಳಗೊಂಡಂತೆ ಒಟ್ಟು 4222801 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು 17196 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ

ಮನೆಗಳು

ಯೋಜನೆ	2004–05	2005–06	2006–07	ಒಟ್ಟು
ನಗರ ಆಶ್ರಯ	11905	8961	5187	26053
ಗ್ರಾಮೀಣ ಆಶ್ರಯ	87382	78005	85486	250873
ಗ್ರಾಮೀಣ ಅಂಬೇಡ್ಕರ್	9054	6507	4796	20357
ಐ ಎ ವೈ ಯೋಜನೆ	29866	48601	39036	117503
ನಗರ ಅಂಬೇಡ್ಕರ್	351	118	17	486
ಪಿ ಎಮ್ ಜಿ ವೈ	4238	2738	553	7529
ಒಟ್ಟು	142796	144930	135075	422801

*ಫೆಬ್ರವರಿ–2007 ತಿಂಗಳ ವರೆಗಿನ ಪ್ರಗತಿ

ನಿವೇಶನಗಳು

ಯೋಜನೆ	2004–05	2005–06	2006–07	ಒಟ್ಟು
ನಗರ ಆಶ್ರಯ ನಿವೇಶನ	2379	3160	0	5539
ಗ್ರಾಮೀಣ ಆಶ್ರಯ ನಿವೇಶನ	4762	6814	81	11657
ಒಟ್ಟು	7141	9974	81	17196

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಈವರೆಗೆ 15465 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಉಳಿದ ಮನೆಗಳನ್ನು ಪೂರ್ಣಗೊಳಿಸಿದ ನಂತರ ಹಂಚಿಕೆಗೆ ಕ್ರಮ ವಹಿಸಲಾಗುವುದು

ಇ) ಬಾಕಿ ಎಷ್ಟು ಮನೆಗಳನ್ನು ನಿರ್ಮಿಸಬೇಕಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು),

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ 2006-07ನೇ ಸಾಲಿನಲ್ಲಿ ಒಟ್ಟು 393859 ಮನೆಗಳ ಗುರಿ ನೀಡಲಾಗಿದ್ದು ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿರುತ್ತದೆ ಹಿಂದಿನ ಶ್ರೇಣಿಯ 269713 ಮನೆಗಳು ವಿವಿಧ ಹಂತದಲ್ಲಿರುತ್ತವೆ ವಿವರಗಳನ್ನು ಅನುಬಂಧ 1 ರಿಂದ 4 ರವರೆಗೆ ಯೋಜನವಾರು ಹಾಗೂ ಜಿಲ್ಲಾವಾರು ನೀಡಿದೆ

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ 8485 ಮನೆಗಳನ್ನು ನಿರ್ಮಿಸಬೇಕಾಗಿದ್ದು, ಇವುಗಳ ಪೈಕಿ ಈಗಾಗಲೇ 1685 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಜಿಲ್ಲಾವಾರು ವಿವರಗಳನ್ನು ಅನುಬಂಧ–ಅ ನಲ್ಲಿ ಲಗತ್ತಿಸಿದೆ

ಈ) ಇದಕ್ಕಾಗಿ ರಾಜ್ಯ ಸರ್ಕಾರವು ಎಷ್ಟು ಹಣವನ್ನು ಖರ್ಚು ಮಾಡಿದೆ ಹಾಗೂ ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಮೊತ್ತವೆಷ್ಟು,

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ರೂ 83 248 31 ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ರಾಜ್ಯ ಸರ್ಕಾರವು ಈವರೆಗೆ ರೂ 2144 00 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಇದಕ್ಕಾಗಿ ಕೇಂದ್ರ ಸರ್ಕಾರ ದಿಂದ ಬಿಡುಗಡೆಯಾಗಿರುವ ಹಣ 1772 30 ಲಕ್ಷ ರೂಗಳು

ಉ) ಈ ಹಣದ ಪೈಕಿ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಿರುವ ಹಣದ ಮೊತ್ತವೆಷ್ಟು,

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಕೇಂದ್ರ ಪಾಲಿನ ಅನುದಾನ ರೂ 24595 67 ಲಕ್ಷಗಳು ಕೇಂದ್ರ ಸರ್ಕಾರದಿಂದ ಬಂದಿರುತ್ತದೆ

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿರುವ ಒಟ್ಟು ಹಣದ ಮೊತ್ತ ರೂ 3544 60 ಲಕ್ಷಗಳು ವಿವರಗಳನ್ನು ಅನುಬಂಧ–ಆನಲ್ಲಿ ನೀಡಲಾಗಿದೆ

ಊ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಮೇಲ್ಕಂಡ ಯೋಜನೆಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ ಹಾಗೂ ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು?

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಈ ಕೆಳಕಂಡ ಯೋಜನೆಗಳಡಿ 22549 ಗುರಿಯನ್ನು ನೀಡಲಾಗಿದ್ದು

ರೂ 2412 25 ಲಕ್ಷ ಹಣವನ್ನು ವೆಚ್ಚ ಮಾಡುವ ಗುರಿಯನ್ನು ಹೊಂದಲಾಗಿದೆ ವಿವರಗಳು ಈ ಕೆಳಕಂಡಂತಿವೆ

ಯೋಜನೆ	ಗುರಿ	ವೆಚ್ಚ ಮಾಡಲಾಗುವ ಹಣ
ಗ್ರಾಮೀಣ ಆಶ್ರಯ	10500	2100 00
ಐ ಎ ವೈ ಯೋಜನೆ	12049	312 25
ಒಟ್ಟು	22549	2412 25

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಬೀದರ್ ಜಿಲ್ಲೆಯಲ್ಲಿ ವಾಂಬೆ ಯೋಜನೆಯಡಿ 2006-07ನೇ ಸಾಲಿನಲ್ಲಿ 1071 ಮನೆಗಳನ್ನು ರೂ 428 40 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸುವ ಗುರಿ ಹೊಂದಿದೆ

Anenxure-1

Urban Ashraya			
Sl.No	District	2005-2006	
		Tobe Complete	Unstarted
1	Bangalkot	52	3133
2	Bangalore Rural	0	1750
3	Bangalore Urban	0	460
4	Belgaum	0	3230
5	Bellary	0	4565
6	Bidar	0	2520
7	Bijapur	0	1670
8	Chamarajanagar	0	855
9	Chikmagalur	0	865
10	Chitradurga	0	1815
11	Daskhinakannada	0	970
12	Davanagere	0	890
13	Dharwad	0	4315
14	Gadag	0	2865
15	Gulbarga	0	2815
16	Hassan	0	2120
17	Haveri	0	2860
18	Kodagu	0	310
19	Kolar	0	2335
20	Koppal	0	1460

21	Mandya	0	590
22	Mysore	0	2365
23	Raichur	0	1090
24	Shimoga	30	1830
25	Tumkur	0	2095
26	Udupi	0	255
27	Uttara Kannada	0	140
Total		**82**	**50168**

Anenxure-2

Rural Ashraya			
Sl No	**District**	**2005-2006**	
		Unstarted	**Tobe Completed**
1	Bagalkot	2202	4131
2	Bangalore Rural	1590	5510
3	BangaloreUrban	2709	1269
4	Belgaum	7074	10137
5	Bellary	196	4807
6	Bidar	5751	1229
7	Bijapur	4116	3090
8	Chamarajanagar	622	4089
9	Chikmagalur	2171	5428
10	Chitradurga	1078	6253
11	DakshinaKannada	2707	4329
12	Davanagere	965	3752
13	Dharwad	896	3322
14	Gadag	843	2668
15	Gulbarga	7221	5570
16	Hassan	1347	7221
17	Haveri	829	5912

18	Kodagu	2144	1362
19	Kolar	2051	9475
20	Koppal	568	4604
21	Mandya	1498	6325
22	Mysore	1497	6232
23	Raichur	3983	2039
24	Shimoga	1404	6632
25	Tumkur	1237	8213
26	Udupi	1760	2529
27	UttaraKannada	3197	4350
	Total	**61656**	**130478**

Anenxure-3
Rural Ambedkar

Sl.No.	District	2005-2006	
		Unstarted	Tobe Completed
1	Bagalkot	348	264
2	Bangalore Rural	897	823
3	BangaloreUrban	1031	123
4	Belgaum	782	187
5	Bellary	63	677
6	Bidar	441	19
7	Bijapur	469	147
8	Chamarajanagar	440	1174
9	Chikmagalur	373	95
10	Chitradurga	742	2598
11	DakshinaKannada	47	8
12	Davanagere	606	759
13	Dharwad	66	34
14	Gadag	209	82

15	Gulbarga	1040	107
16	Hassan	80	144
17	Haveri	280	40
18	Kodagu	280	0
19	Kolar	391	769
20	Koppal	74	466
21	Mandya	252	305
22	Mysore	309	656
23	Raichur	1115	387
24	Shimoga	430	305
25	Tumkur	785	1013
26	Udupi	0	
27	UttaraKannada	0	
Total		**11550**	**11182**

Annexure-4
IAY Scheme

Sl No.	District	Under progress	Unstarted
1	Bagalkot	932	274
2	Bangalore Rural	1439	144
3	BangaloreUrban	414	298
4	Belgaum	3888	2098
5	Bellary	3067	756
6	Bidar	408	0
7	Bijapur	1641	400
8	Chamarajanagar	656	3097
9	Chikmagalur	908	239
10	Chitradurga	1755	1702

11	DakshinaKannada	435	371
12	Davanagere	943	987
13	Dharwad	281	1171
14	Gadag	362	797
15	Gulbarga	1531	1791
16	Hassan	1277	57
17	Haveri	372	6
18	Kodagu	0	464
19	Kolar	4019	596
20	Koppal	80	0
21	Mandya	852	758
22	Mysore	1924	762
23	Raichur	3048	2525
24	Shimoga	992	1657
25	Tumkur	2523	946
26	Udupi	233	385
27	UttaraKannada	524	1193
Total		**34504**	**23474**

ಅನುಬಂಧ-ಅ

ವಾಂಬೆ ಯೋಜನೆಯಡಿ ನಿರ್ಮಿಸಬೇಕಾಗಿರುವ ಜಿಲ್ಲಾವಾರು ಮನೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮನೆಗಳ ಸಂಖ್ಯೆ	ಋಣದ ಮೊತ್ತ ರೂ ಲಕ್ಷಗಳಲ್ಲಿ
1	ಬೆಂಗಳೂರು ನಗರ	753	451 80
2	ಬೆಂಗಳೂರು ಗ್ರಾಮಾಂತರ	582	232 80
3	ತುಮಕೂರು	162	64 80
4	ಕೋಲಾರ	0	0,00
5	ಮೈಸೂರು	96	38 40
6	ಮಂಡ್ಯ	117	46 80
7	ಚಾಮರಾಜನಗರ	0	0 00
8	ಕೊಡಗು	0	0 00
9	ಶಿವಮೊಗ್ಗ	35	14 00

10	ಚಿತ್ರದುರ್ಗ	291	116 40
11	ದಾವಣಗೆರೆ	122	48 80
12	ಹಾಸನ	60	24 00
13	ಚಿಕ್ಕಮಂಗಳೂರು	0	0 00
14	ದಕ್ಷಿಣ ಕನ್ನಡ	0	0 00
15	ಉಡುಪಿ	0	0 00
16	ಹುಬ್ಬಳ್ಳಿ – ಧಾರವಾಡ	1203	481 20
17	ಹಾವೇರಿ	102	40 80
18	ಗದಗ	209	83 60
19	ಉತ್ತರ ಕನ್ನಡ	220	88 00
20	ಬಳ್ಳಾರಿ	563	225 20
21	ರಾಯಚೂರು	574	229 60
22	ಕೊಪ್ಪಳ	71	28 40
23	ಬಿಜಾಪುರ	572	228 80
24	ಬೆಳಗಾವಿ	845	338 00
25	ಬಾಗಲಕೋಟೆ	353	141 20
26	ಗುಲ್ಬರ್ಗಾ	484	193 60
27	ಬೀದರ್	1071	428 40
	ಒಟ್ಟು	**8485**	**3544 60**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1198(1574)**

ಸದಸ್ಯರ ಹೆಸರು **ಶ್ರೀ ಮೋಹನ ಪಿ ಸಿ (ಚಿಕ್ಕಪೇಟೆ)**

ಉತ್ತರಿಸುವವರು **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಕಳೆದ 5 ವರ್ಷಗಳಿಂದ ಸಗಟು ಪುಸ್ತಕ ಮತ್ತು ಪೀಠೋಪಕರಣಗಳು ಖರೀದಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ತನಿಖೆ ಮಾಡಲು ಸರ್ಕಾರ ಸೂಚನೆ ನೀಡಿದೆಯೆ,

ಹೌದು

ಆ) ಹಾಗಿದ್ದಲ್ಲಿ, ಯಾವ ಇಲಾಖೆಗೆ ಈ ಸೂಚನೆ ನೀಡಿದೆ, ಈ ಅಕ್ರಮ ತನಿಖೆಯಲ್ಲಿ ಇದುವರೆಗೂ ಆಗಿರುವ ಪ್ರಗತಿ ಏನು,

ಇ) ಎಷ್ಟು ಅವಧಿಯಲ್ಲಿ ಈ ತನಿಖೆ ಮುಗಿಯಲಿದೆ?

ಕರ್ನಾಟತಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕರಾದ ಶ್ರೀ ಟಿ ಎಂ ಕುಮಾರ್ ಅವರಿಗೆ ದಿ 31-10-2006ರ ಪತ್ರದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉತ್ತರ, ದಕ್ಷಿಣ, ಪೂರ್ವ ಪಶ್ಚಿಮ ಹಾಗೂ ಕೇಂದ್ರ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ 2002-03 ರಿಂದ 2006-2007ನೇ ಸಾಲಿನವರೆಗೆ ಪೀಠೋಪಕರಣಗಳ ಖರೀದಿ, ಬುಕ್ ಬೈಂಡಿಂಗ್ ಹಾಗೂ ಪುಸ್ತಕ ಖರೀದಿ ವಿಷಯಗಳ ಬಗ್ಗೆ ತನಿಖೆ ಮಾಡಿ ವರದಿ ನೀಡಲು ಕೋರಲಾಗಿತ್ತು ಅದರಂತೆ ಶ್ರೀ ಟಿ ಎಂ ಕುಮಾರ್ ಅವರು ತನಿಖೆ ಕೈಗೊಂಡು, ದಿ 8-11-2006ರಲ್ಲಿ ವರದಿ ಸಲ್ಲಿಸಿದ್ದಾರೆ- ಸದರಿ ವರದಿಯನ್ನು ಪರಿಶೀಲಿಸಿ ಮೇಲ್ನೋಟಕ್ಕೆ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆಂದು ಕಂಡು ಬಂದಿರುವ ಅಧಿಕಾರಿ/ನೌಕರರನ್ನು ಅವರು ಕಾರ್ಯನಿರ್ವಹಿಸುತ್ತಿದ್ದ ಬೆಂಗಳೂರಿನಲ್ಲಿರುವ ಗ್ರಂಥಾಲಯಗಳಿಂದ ಬೇರೆ ಸ್ಥಳಗಳಿಗೆ ವರ್ಗ ಮಾಡಿ ದಿನಾಂಕ 9-3-2007ರಂದು ಆದೇಶ ಹೊರಡಿಸಲಾಗಿದೆ ಅವ್ಯವಹಾರಗಳ ಬಗ್ಗೆ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ವಿಶೇಷ ಆಡಿಟ್ ಮಾಡಿಸಲಾಗುತ್ತಿದ್ದು, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಸಹ ಪರಿಶೀಲಿಸಲಾಗುತ್ತಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	**1199(1395)**
ಸದಸ್ಯರ ಹೆಸರು	**ಶ್ರೀ ಮುನಿಯಪ್ಪ ಎಸ್ ಎಂ (ಚಿಕ್ಕಬಳ್ಳಾಪುರ)**
ಉತ್ತರಿಸುವವರು	**ಶ್ರೀ ಸಿ ಎಂ ಉದಾಸಿ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)**

ಅ) ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ತಾಲ್ಲೂಕಿನ ಅಂತರಜಲಮಟ್ಟ ಒಂದು ಸಾವಿರ ಅಡಿಗೂ ಅಧಿಕ ಆಳಕ್ಕೆ ಕೊರೆಯುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ,

ಹೌದು

ಆ) ತಾಲ್ಲೂಕಿನಾದ್ಯಂತ ಕೆರೆಗಳು ಹೂಳು ತುಂಬಿಕೊಂಡು ನೀರು ಸಾಕಷ್ಟು ನಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಇ) ಹಾಗಿದ್ದಲ್ಲಿ, ಕೆರೆಗಳ ಹೂಳು ತೆಗೆದು ಆಧುನೀಕರಣಗೊಳಿಸಿ, ಅಂತರಜಲಮಟ್ಟ ಹೆಚ್ಚಿಸಿ ಕುಡಿಯುವ ನೀರಿನ ಮತ್ತು ಕೃಷಿ ನೀರಾವರಿ ಸುಧಾರಣೆಗಾಗಿ ಸರ್ಕಾರವು ಯಾವಯಾವ ಕ್ರಮ ಕೈಗೊಳ್ಳುತ್ತದೆ?

ಲಭ್ಯವಿರುವ ಅನುದಾನಕ್ಕನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಅಂತರ್ಜಲ ಮಟ್ಟ ಹೆಚ್ಚಿಸಲು ಸುವರ್ಣ ಆಣೆ ಎಂಬ ಕಾರ್ಯಕ್ರಮವನ್ನು ನಬಾರ್ಡ್ ಸಾಲದ ನೆರವಿನೊಂದಿಗೆ ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದಡಿ ಚಿಕ್ಕಬಳ್ಳಾಪುರ ತಾಲ್ಲೂಕಿಗೆ ರೂ 40 00 ಲಕ್ಷ ನಿಗದಿಯಾಗಿರುತ್ತದೆ ಅಲ್ಲದೆ 2007–08ರ ಬಜೆಟ್ ಭಾಷಣದಲ್ಲಿ ನೀರಾವರಿ ಕೆರೆಯ ಹೂಳು ತೆಗೆಯಲು ಹೆಚ್ಚವರಿ ಅನುದಾನ ಒದಗಿಸುವುದಾಗಿ ಪ್ರಸ್ತಾಪಿಸಲಾಗಿದ್ದು, ಸುವರ್ಣ ಆಣೆ ಕಾರ್ಯಕ್ರಮದ ಜೊತೆಗೆ ಹೆಚ್ಚುವರಿ ಅನುದಾನ ಹೂಳು ತೆಗೆಯುವ ಕಾರ್ಯಕ್ರಮಕ್ಕೆ ಲಭ್ಯವಾಗಬಹುದು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1202(1295)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಂ ವೈ(ಅಫ್ಜಲ್ ಪುರ್)
ಉತ್ತರಿಸುವವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಗುಲ್ಬರ್ಗಾ ತಾಲ್ಲೂಕಿನ ಶರಣಸಿರಸಗಿ, ಸಿಂಧಗಿ, ತಾಜ್‌ಸುಲ್ತಾನಪುರ್, ಹಿರಾಪುರ ಗ್ರಾಮಗಳು ಗುಲ್ಬರ್ಗಾ ನಗರಕ್ಕ ಹೊಂದಿಕೊಂಡಿರುವುದು ನಿಜವಲ್ಲವೇ,

ನಿಜ

ಆ) ಈ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಬಹಳಷ್ಟಿದ್ದು, ಅಲ್ಲಿನ ಕೊಳವೆ ಬಾವಿಗಳು ಬತ್ತಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಬಂದಿದೆ

ಇ) ಬಂದಿದ್ದಲ್ಲಿ, ಗುಲ್ಬರ್ಗಾ ನಗರಕ್ಕ ಕುಡಿಯುವ ನೀರಿನ 3 ಯೋಜನೆಗಳು ಲಭ್ಯವಿರುವುದರಿಂದ ಆ ಯೋಜನೆಗಳ ಮುಖೇನ ಈ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಲು ಸರ್ಕಾರ ಸಿದ್ಧವಿದೆಯೇ?

ಈ ಕುರಿತಂತೆ ಗುಲ್ಬರ್ಗಾ ಮಹಾನಗರ ಪಾಲಿಕಯೊಂದಿಗೆ ಸಮಾಲೋಚಿಸಿ ಹೆಚ್ಚುವರಿ ನೀರಿನ ಲಭ್ಯತೆಯಿದ್ದಲ್ಲಿ, ಸದರಿ ಗ್ರಾಮಗಳಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುವುದು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1203(1296)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಂ ವೈ(ಅಫ್ಜಲ್ ಪುರ್)
ಉತ್ತರಿಸುವವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು,ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಂಬೈ–ಕರ್ನಾಟಕ ಭಾಗಕ್ಕೆ ಮಾತ್ರ ಸೀಮಿತವಾಗಿರುವುದಕ್ಕೆ ಕಾರಣವೇನು,

ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಂಬಯಿ–ಕರ್ನಾಟಕ ಭಾಗಕ್ಕೆ ಸೀಮಿತವಾಗಿರದೆ, ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯಿಸುತ್ತದೆ

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಳವೆಬಾವಿ (ಬೋರ್‌ವೆಲ್) ಬತ್ತಿಹೋಗಿದ್ದರಿಂದ ಮತ್ತು ಆ ಭಾಗದಲ್ಲಿ ಪ್ಲೋರೈಡ್ ಹಾಗೂ ಇತರೆ ರಾಸಾಯನಿಕ ಮಿಶ್ರಿತ ನೀರು ಇರುವುದರಿಂದ ಅಲ್ಲಿನ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ ಸಮಸ್ಯಾತ್ಮಕ ಗ್ರಾಮಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಅಗತ್ಯವಿರುವ ಯೋಜನೆಗಳನ್ನು ಭಾರತ್ ನಿರ್ಮಾಣ್ ಕಾರ್ಯಕ್ರಮದಡಿ ರೂಪಿಸಲಾಗುತ್ತಿದೆ

ಇ) ಬೋರ್‌ವೆಲ್‌ಗಳ ಮುಖಾಂತರ ಈ ಹಿಂದೆ ಮಾಡಿದ್ದ ಕುಡಿಯುವ ನೀರಿನ ಕೊಳವೆ ಬಾವಿಗಳು ಬತ್ತಿ ಹೋಗಿರುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ,

ಹೌದು ಈಗಾಗಲೇ ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಮಿಷನ್‌ನಡಿ 5 – ಯೋಜನೆಗಳನ್ನು ರೂ 965 55 ಲಕ್ಷ ಅಂದಾಜಿನಲ್ಲಿ ಮಂಜೂರು ಮಾಡಲಾಗಿದೆ 2 – ಯೋಜನೆಗಳು ಪೂರ್ಣಗೊಂಡಿದ್ದು ಉಳಿದ 3 – ಯೋಜನೆಗಳು ಪ್ರಗತಿಯಲ್ಲಿವೆ ರೂ 1056 25 ಲಕ್ಷ ಅಂದಾಜಿನ 6 – ಹೊಸ ಯೋಜನೆಗಳಿಗೆ 2006–07ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, 2– ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯು ದೊರೆತಿದೆ ಈ ಯೋಜನೆಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ

ಈ) ಅಫಜಲಪುರ ಮತಕ್ಷೇತ್ರಕ್ಕಾಗಿ 4 ಕುಡಿಯುವ ನೀರಿನ ಯೋಜನೆಗಳನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಲಾಗಿರುವ ಯೋಜನೆಗಳನ್ನು 2006–07ನೇ ಸಾಲಿನಲ್ಲಿ ಕಾರ್ಯಗತ ಮಾಡಲಾಗುವುದೇ?

ಆಫಜಲಪುರ ತಾಲ್ಲೂಕಿನ ಬೊಬ್ಬೂರು, ಮಾಸಾಳು, ರೇವೂರು ಹಾಗೂ ಮಲ್ಲಬಾದ್ ಸೇರಿದಂತೆ 4 – ಯೋಜನೆಗಳ ಅಂದಾಜು ಪಟ್ಟಿ ತಯಾರಿಸಲಾಗುತ್ತಿದ್ದು, ಆರ್ಥಿಕ ಮತ್ತು ತಾಂತ್ರಿಕ ಕಾರ್ಯ ಸಾಧುತ್ವದ ಆಧಾರದ ಮೇಲೆ ಅನುಮೋದನೆ ನೀಡಲು ಪರಿಶೀಲಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1204(1297)**
ಸದಸ್ಯರ ಹೆಸರು	**ಶ್ರೀ ಪಾಟೀಲ್ ಎಂ ವೈ(ಆಫ್ಜಲ್ ಪುರ್)**
ಉತ್ತರಿಸುವವರು	**ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಅಫಜಲಪುರ ತಾಲ್ಲೂಕಿನಲ್ಲಿ ರೇಣುಕಾ ಸಕ್ಕರೆ ಕಾರ್ಖಾನೆ ಸ್ಥಾಪಿಸಿರುವುದು ಸರ್ಕಾರದವರಿಗೆ ಗೊತ್ತಿದೆಯೆ,

ಗೊತ್ತಿದೆ ಈ ಕಾರ್ಖಾನೆಯ ಸ್ಥಾಪನೆಗೆ ಸರ್ಕಾರದ ಆದೇಶ ಸಂಖ್ಯೆ ಸಿಐ15 ಎಸ್‌ಜಿಎಫ್ 06 ದಿನಾಂಕ 26 12 06ರಲ್ಲಿ ಅನುಮತಿ ನೀಡಲಾಗಿದೆ

ಆ) ಕಾರ್ಖಾನೆ ಸ್ಥಾಪಿಸಲು ಬೇಕಾಗುವ ಜಮೀನು ಕೃಷಿಯೇತರವನ್ನಾಗಿ(Non Agriculture) ಮಾಡಿಕೊಳ್ಳಲಾಗಿದೆಯೇ,

ಶ್ರೀ ರೇಣುಕಾ ಶುಗರ್ಸ್(ಲಿ) ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಶ್ರೀ ಸಿದ್ದರಾಮ ತಂದೆ ಮೇಳಪ್ಪ ಕಲೂತಿ ಇವರ ಹೆಸರಿನಲ್ಲಿ ಒಟ್ಟು 133 ಎಕರೆ 17 ಗುಂಟೆ ಜಮೀನನ್ನು ಖರೀದಿಸಿದ್ದು, ಇದರಲ್ಲಿ ಕೇವಲ 0 10 ಎಕರೆ ಮಾತ್ರ ಕೃಷಿಯೇತರ ಜಮೀನಾಗಿ ಪರಿವರ್ತಿಸಿಕೊಂಡಿರುತ್ತಾರೆ

ಇ) ದರ ಅನೇಕ ಕಟ್ಟಡಗಳ ನಿರ್ಮಾಣಕ್ಕಾಗಿ ಪಂಚಾಯತ್‌ಗೆ ಶುಲ್ಕ ಕಟ್ಟಿ ನೀಲಿ ನಕ್ಷೆ ತಯಾರಿಸಿ ಪಂಚಾಯಿತಿಯ ಅನುಮತಿ ಪಡೆದುಕೊಳ್ಳಲಾಗಿದೆಯೇ,

ಈ ಕಾರ್ಖಾನೆ ಕಲ್ಲೂರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದು ಕಟ್ಟಡ ನಿರ್ಮಾಣಕ್ಕಾಗಿ ಪಂಚಾಯಿತಿಗೆ ಶುಲ್ಕ ಕಟ್ಟಿಲ್ಲದಿರುವುದು ಹಾಗೂ ನೀಲಿ ನಕ್ಷೆ ತಯಾರಿಸಿ, ಪಂಚಾಯಿತಿಗೆ ಸಲ್ಲಿಸಿ ಅನುಮತಿ ಪಡೆದಿಲ್ಲದಿರುವುದು ತಿಳಿದುಬಂದಿದೆ

ಈ) ನೀರು ಬಳಕೆಯ ತೆರಿಗೆ ಮುಂತಾದವುಗಳನ್ನು ಪಂಚಾಯಿತಿಗೆ ತುಂಬಲಾಗಿದೆಯೇ,

ನೀರು ತೆರಿಗೆ ಮುಂತಾದವುಗಳನ್ನು ಪಂಚಾಯಿತಿಗೆ ತುಂಬಿಲ್ಲದಿರುವುದು ತಿಳಿದು ಬಂದಿದೆ

ಉ) ಹಾಗಿದ್ದಲ್ಲಿ, ಅಕ್ರಮವಾಗಿ ಸ್ಥಾಪನೆಗೊಂಡ ಕಾರ್ಖಾನೆಯ ಬಗ್ಗೆ ಸರ್ಕಾರದ ಕ್ರಮವೇನು?

ಕಾರ್ಖಾನೆ ಸ್ಥಾಪನೆಗೆ ಸರ್ಕಾರದ ಅನುಮತಿ ನೀಡಲಾಗಿದೆ ವ್ಯವಸಾಯ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವುದು ಕಂದಾಯ ಇಲಾಖೆಯಡಿ ಬರುತ್ತದೆ ಪಂಚಾಯಿತಿಯಿಂದ ಕಟ್ಟಡ ನಿರ್ಮಾಣದ ನಕ್ಷೆಗೆ ಅನುಮೋದನೆ ಪಡೆದುಕೊಳ್ಳುವುದು ಹಾಗೂ ನೀರಿನ ತೆರಿಗೆ ಪಾವತಿ ವಿಷಯವು ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ ನಿಯಮಗಳ ಉಲ್ಲಂಘನೆಯಾಗಿರುವ ಪ್ರಕರಣಗಳಲ್ಲಿ ಸೂಕ್ತ ಕ್ರಮವನ್ನು ಜರುಗಿಸಲು ಜಿಲ್ಲಾಧಿಕಾರಿಗಳು ಗುಲ್ಬರ್ಗಾ, ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿ ಗುಲ್ಬರ್ಗಾರವರಿಗೆ ಸೂಚನೆ ನೀಡಲಾಗಿದೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ **1205(1298)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಅಫಜಲ್‌ಪುರ್)**
ಉತ್ತರಿಸುವವರು **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಅಫಜಲಪುರ ನಗರದಲ್ಲಿ ಮಾದರಿಯ ಪ್ರಾಥಮಿಕ ಶಾಲೆ ಕಟ್ಟಡವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದ

ಇ) ವಿದ್ಯಾರ್ಥಿಗಳ ಅನುಪಾತದಲ್ಲಿ ಕೊಠಡಿಗಳಿಲ್ಲದೆ ವಿದ್ಯಾರ್ಥಿಗಳು ಬಯಲಿನಲ್ಲಿ ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ

ಈ) ಇದ್ದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಕುಸಿದರೆ ಸಾವಿರಾರು ವಿದ್ಯಾರ್ಥಿಗಳ ಪ್ರಾಣಕ್ಕೆ ಅಪಾಯ ಇರುವುದರಿಂದ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಯೋಚನೆ ಮಾಡಿದೆಯೇ?

ಸರ್ವ ಶಿಕ್ಷಣ ಅಭಿಯಾನದಡಿ ಸದರಿ ಶಾಲೆಗೆ ಈ ಕೆಳಕಂಡಂತೆ ಕೊಠಡಿಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿದೆ

2004-05 1 ಕೊಠಡಿ ನಿರ್ಮಾಣ ಕಾರ್ಯ
2005-06 1 ಕೊಠಡಿ ಪೂರ್ಣಗೊಂಡಿದೆ
2006-07 3 ಕೊಠಡಿ
[ಅದರಲ್ಲಿ ಒಂದು ಕೊಠಡಿ ಕಾರ್ಯ ಪೂರ್ಣಗೊಂಡಿದ್ದು ಉಳಿದ ಎರಡು ಕೊಠಡಿಗಳ ಕಾಮಗಾರಿ ಕಾರ್ಯವು ಲಿಂಟಲ್ ಮಟ್ಟಕ್ಕೆ ಬಂದಿರುತ್ತದೆ]

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1206(1299)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಅಫಜಲ್‌ಪುರ್)**
ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)**

1) ಅಫಜಲಪೂರ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಹಾಗೂ ನಬಾರ್ಡ್ ಯೋಜನೆಯಲ್ಲಿ ಪೂರ್ತಿಗೊಂಡ ರಸ್ತೆಗಳೆಷ್ಟು?

ಅಫಜಲಪುರ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಒಟ್ಟು ನಾಲ್ಕು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಅವುಗಳಲ್ಲಿ ಹಂತ-1ರಲ್ಲಿ ಒಂದು ಕಾಮಗಾರಿ, ಹಂತ-2ರಲ್ಲಿ ಎರಡು ಕಾಮಗಾರಿಗಳು ಮತ್ತು

ಹಂತ-3ರಲ್ಲಿ ಒಂದು ಕಾಮಗಾರಿ ಪೂರ್ಣಗೊಂಡಿರುತ್ತದೆ, ನಬಾರ್ಡ್ ಯೋಜನೆಯ ಆರ್‌ಐಡಿಎಫ್-VIIIರ ಮಾಲಿಕ ಯಡಿ ಒಂದು ಕಾಮಗಾರಿ ಪೂರ್ಣಗೊಂಡಿರುತ್ತದೆ

2) ಈ ರಸ್ತೆಗಳ ನಿರ್ವಹಣೆಯ ಅವಧಿ ಮುಗಿಯುತ್ತಿದ್ದರೂ ಕೆಟ್ಟು ಹೋದಂತಹ ರಸ್ತೆಗಳನ್ನು ದುರಸ್ಥಿ ಮಾಡದಿರಲು ಕಾರಣವೇನು?

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಹಂತ-1, ಹಂತ-2ರಲ್ಲಿ, ರಸ್ತೆಗಳು ಪೂರ್ತಿಗೊಂಡ ನಂತರ ಗುತ್ತಿಗೆದಾರರು ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು ಅದರಂತೆ ರಸ್ತೆಗಳ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ ಹಂತ-3 ರಲ್ಲಿ ನಿರ್ವಹಣೆಗಾಗಿ ಪ್ರತ್ಯೇಕವಾಗಿ ನಿರ್ವಹಣಾ ನಿಧಿಯನ್ನು ಒದಗಿಸಲಾಗಿದ್ದು 5 ವರ್ಷಗಳ ಅವಧಿಗೆ ನಿರ್ವಹಣೆಯನ್ನು ಕೈಗೊಳ್ಳಲು ಕರಾರು ಮಾಡಿಕೊಳ್ಳಲಾಗಿದ್ದು, ನಿರ್ವಹಣೆಯ ಕೆಲಸವನ್ನು ಕೈಗೊಳ್ಳುತ್ತಿದ್ದಾರೆ

ನಬಾರ್ಡ್ ಯೋಜನೆಯಡಿ ರಸ್ತೆ ಕಾಮಗಾರಿಯು ಪೂರ್ಣಗೊಂಡ ದಿನಾಂಕದಿಂದ 3 ವರ್ಷಗಳ ಅವಧಿವರೆಗೆ ಗುತ್ತಿಗೆದಾರರು ನಿರ್ವಹಣೆ ಮಾಡಬೇಕಾಗಿರುತ್ತದೆ ಇದುವರೆಗೆ ನಿರ್ವಹಣೆ ಕೆಲಸಗಳನ್ನು ಕೈಗೊಂಡಿರುವುದಿಲ್ಲ

3) ಹಾಗಿದ್ದಲ್ಲಿ ಈ ದುರಸ್ಥಿ ಕಾರ್ಯವನ್ನು ಮಾಡದಿರದ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ-1 ಮತ್ತು ಹಂತ-2ರಲ್ಲಿ ನಿರ್ವಹಣೆ ಕೆಲಸವನ್ನು ನಿಗದಿತ ಅವಧಿಯಲ್ಲಿ ಗುತ್ತಿಗೆದಾರರು ಕೈಗೊಳ್ಳದಿದ್ದಲ್ಲಿ, ಟೆಂಡರ್ ಕರಾರಿನಂತೆ ಗುತ್ತಿಗೆದಾರರ ಮುಂಗಡ ರೇವಣಿ(EMD) ಮತ್ತು ನಿಶ್ಚಿತ ಭದ್ರತಾ ರೇವಣಿ(FSD)ಗಳನ್ನು ಬಿಡುಗಡೆಗೊಳಿಸಲಾಗುವುದಿಲ್ಲ ಹಾಗೂ ಈ ಮೊತ್ತವನ್ನು ಕಟಾಯಿಸಿ ನಿರ್ವಹಣೆ ಕೆಲಸವನ್ನು ನಿರ್ವಹಿಸಲಾಗುವುದು ಹಂತ-3 ರಿಂದ ಮಂಜೂರಾದ ನಿರ್ವಹಣಾ ಅಂದಾಜಿನನ್ವಯ ಕೆಲಸ ಕೈಗೊಳ್ಳಲಾಗುವುದು

ನಬಾರ್ಡ್ ಯೋಜನೆಯಡಿ ಪೂರ್ಣಗೊಂಡ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರು ಟೆಂಡರ್ ನಿಯಮಾವಳಿಯಂತೆ ರಸ್ತೆ ನಿರ್ವಹಣೆ ಮಾಡದ ಪ್ರಯುಕ್ತ, ಗುತ್ತಿಗೆದಾರರಿಗೆ ನೋಟೀಸನ್ನು ಜಾರಿ ಮಾಡಲಾಗಿದೆ ಮತ್ತು ಟೆಂಡರ್ ಕರಾರಿನಂತೆ E M D ಮತ್ತು F S D ಗಳನ್ನು ಬಿಡುಗಡೆಗೊಳಿಸಿರುವುದಿಲ್ಲ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1207(1328)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಂ ಎಸ್(ಮುಂಡರಗಿ)
ಉತ್ತರಿಸುವವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು,ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಮುಂಡರಗಿ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಮುಂಡರಗಿ ಕ್ಷೇತ್ರದ ಸಮಸ್ಯಾತ್ಮಕ ಗ್ರಾಮಗಳಿಗೆ ತುರ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸ್ಥಳೀಯ ಅವಶ್ಯಕೆ ಆಧರಿಸಿ ಶಾಸಕರ ಅಧ್ಯಕ್ಷತೆಯಲ್ಲಿರುವ ಕಾರ್ಯಪಡೆಗಳ ಮುಖೇನ ಅಗತ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಈ ಸಲುವಾಗಿ ರೂ 16 00 ಲಕ್ಷಗಳನ್ನು ಈಗಾಗಲೇ ಬಿಡುಗಡೆಯಾಗಿದೆ ರಾಜ್ಯವಲಯದಡಿ ಗದಗ ಜಿಲ್ಲಾ ಪಂಚಾಯಿತಿಗೆ ರೂ 150 00 ಲಕ್ಷಗಳನ್ನು ಮಾರ್ಚ್ 2007ರಲ್ಲಿ ಬಿಡುಗಡೆ ಮಾಡಿದೆ 72 ಕೊಳವೆ ಬಾವಿಗಳನ್ನು ತಾಲ್ಲೂಕಿಗೆ ಮಂಜೂರು ಮಾಡಿದ್ದು ಇತರೆ ಪುನಶ್ಚೇತನ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1208(1329)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್(ಮುಂಡರಗಿ)
ಉತ್ತರಿಸುವವರು ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ವತಿಯಿಂದ ನಡೆಯುತ್ತಿರುವ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ, ಮುಂಡರಗಿ ಇವರಿಂದ ನೌಕರರ ಸಂಬಳ ನಿಲ್ಲಿಸಿರುವುದು ನಿಜವೇ,

ನಿಜ

ಆ) ಹಾಗಿದ್ದಲ್ಲಿ, ಅವರಿಗೆ ಎಷ್ಟು ತಿಂಗಳಿಂದ ನೌಕರರ ಸಂಬಳ ನಿಲ್ಲಿಸಲಾಗಿದೆ (ವಿವರ ನೀಡುವುದು)

ಸೆಪ್ಟಂಬರ್ 2006 ರಿಂದ ಫೆಬ್ರವರಿ 2007 ರವರೆವಿಗೆ ನಿಲ್ಲಿಸಲಾಗಿತ್ತು

ಇ) ಸಂಬಳ ನಿಲ್ಲಿಸಲು ಕಾರಣಗಳೇನು,

ಸದರಿ ಶಿಕ್ಷಣ ಸಂಸ್ಥೆಯವರು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಪ್ರಾಧಿಕಾರವು ಅಪೀಲು ಸಂಖ್ಯೆ ಪಿಯುಎಪಿ 16/2005ರ ಮೇಲೆ ದಿನಾಂಕ 25 07 2005 ರಂದು ನೀಡಿದ ಆದೇಶವನ್ನು ಪಾಲಿಸದೇ ಇದ್ದುದರಿಂದ ವೇತನವನ್ನು ನಿಲ್ಲಿಸಲಾಗಿತ್ತು

ಈ) ಈ ಸಮಿತಿಯ ಅಧ್ಯಕ್ಷರು ಮಾಡಿದ ತಪ್ಪಿಗೆ ದುಡಿಯುವ ನೌಕರರಿಗೆ ಶಿಕ್ಷೆ ಕೊಡುವುದು ಸರಿಯೇ,

ಮೇಲೆ ದಿನಾಂಕ 10-12-2007 ತೀರ್ಪು ನೀಡಿದೆ ಅದರಂತೆ ಅರ್ಜಿದಾರರು ನಿರ್ದೇಶಕರ ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ ಪಿಯುಎಪಿ 61/2005 ದಾಖಲಿಸಿದ್ದರು ಈ ಅಪೀಲನ್ನು ಸಕ್ಷಮ ಪ್ರಾಧಿಕಾರವು ಆಲಿಸಿ ದಿನಾಂಕ 25-07-2005ರಂದು ತೀರ್ಪು ನಿಡಿ, ಅರ್ಜಿದಾರರಾದ ಶ್ರೀ ವಿ ಸಿ ಅಲ್ಲಿಪುರ ಇವರಿಗೆ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಗೆ ತಕ್ಷಣ ಪದೋನ್ನತಿ ನೀಡುವಂತೆ ಆದೇಶಿಸಿದೆ ಈ ಆದೇಶವನ್ನು ಪ್ರಶ್ನಿಸಿ ಸರ್ಕಾರದ ಸಹ ಕಾರ್ಯದರ್ಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಇವರ ಮುಂದೆ ರಿವಿಷನ್ ಪಿಟಿಷನ್ ಸಂಖ್ಯೆ 38/2005 ದಾಖಲಿಸಿರುತ್ತಾರೆ ಸದರಿ ರಿವಿಷನ್ ಪಿಟಿಷನ್ ವಿಚಾರಣೆ ಹಂತದಲ್ಲಿದ್ದು ಅಂತಿಮ ತೀರ್ಪು ನೀಡಿದ ನಂತರ ನಿಯಾಮನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಉ) ಹೈಕೋರ್ಟ್ ಆದೇಶ ಉಲ್ಲಂಘಿಸಿರುವ ಅಧ್ಯಕ್ಷರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಲಾಗಿದೆಯೇ,

ಊ) ನೌಕರರಿಗೆ ಕೂಡಲೇ ಸಂಬಳ ಬಿಡುಗಡೆ ಮಾಡಲಾಗುವುದೇ?

ಸದರಿ ಸಂಸ್ಥೆಯ ನೌಕರರಿಗೆ ತಡೆಹಿಡಿಯಲಾದ ವೇತನವನ್ನು ಈಗಾಗಲೇ ಸರ್ಕಾರದ ಪತ್ರ ದಿನಾಂಕ 13 03 2007, ಸಂಖ್ಯೆ, ಇಡಿ 50 ಎಸ್ಒಹೆಚ್ 2007ರ ಮೂಲಕ ಬಿಡುಗಡೆ ಮಾಡಲು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಸೂಚನೆ ನೀಡಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1210(1568)
ಸದಸ್ಯರ ಹೆಸರು ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು)
ಉತ್ತರಿಸುವವರು ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪುತ್ತೂರು ತಾಲ್ಲೂಕು, ಗ್ರಾಮ ಪಂಚಾಯತ್ ಕುಡಿಯುವ ನೀರು ಪೂರೈಕೆ ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ?

ನಿರ್ವಹಿಸುತ್ತಿದೆ

ಆ) ವಿದ್ಯುತ್ ಬಿಲ್ಲು ಪಾವತಿಸಲಾಗಿದೆಯೇ?

ಪೂರ್ತಿ ಬಿಲ್ ಪಾವತಿಸಿರುವ ಗ್ರಾಮ ಪಂಚಾಯಿತಿ -4 ಭಾಗಶ ಬಿಲ್ ಪಾವತಿಸಿರುವ ಗ್ರಾಮ ಪಂಚಾಯತಿ -33

ಇ) ಇಲ್ಲದಿದ್ದರೆ ಕಾರಣಗಳೇನು?

1)ಎಸ್ಕಾಂಗಳು ವಿಧಿಸುತ್ತಿರುವ ಬಿಲ್ಲಿನ ಮೊತ್ತದ ಬಗ್ಗೆ ಭಿನ್ನಾಭಿಪ್ರಾಯವಿರುತ್ತದೆ

2) ಬೀದಿ ದೀಪಗಳಿಗೆ ಯುನಿಟ್ ಒಂದಕ್ಕೆ ರೂ 3 10 ಕುಡಿಯುವ ನೀರಿನ ಪಂಪ್ ಸೆಟ್‌ಗಳಿಗೆ ಮಾಸಿಕ ನಿಗದಿತ ದರ ರೂ 175

3) ಸೇವಾಶುಲ್ಕ ಒಟ್ಟಾರೆ ಮೊತ್ತದ ಶೇಕಡ 5ರಷ್ಟು,

4) ಪ್ರಸ್ತುತ ಬೇಡಿಕೆಯನ್ನು ಸೇರಿಸಿ ವಿಧಿಸುತ್ತಿರುವ ಬಡ್ಡಿದರ ಶೇಕಡ 2

ಮೇಲಿನ ಕಾರಣಗಳಿಂದ ವಿದ್ಯುತ್ ಬಿಲ್ಲಿನ ಮೊತ್ತ ಹೆಚ್ಚಾಗಿದ್ದು, ಇದನ್ನು ಭರಿಸಲು ಸಂಪನ್ಮೂಲದ ಕೊರತೆ ಇದೆ ಹಾಗು ಇದನ್ನು ಭರಿಸಲು ಪ್ರತ್ಯೇಕ ಅನುದಾನವಿರುವುದಿಲ್ಲ

ಈ) ಫಲಾನುಭವಿಗಳು ಕಡಿಮೆ ಇರುವುದರಿಂದ ವಿದ್ಯುತ್ ಬಿಲ್ಲನ್ನು ನಿರ್ವಹಣೆ ವೆಚ್ಚದ ಮೊಬಲಗನ್ನು ವಸೂಲು ಮಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಮನಿಸಲಾಗಿದೆ

ಉ) ವಿದ್ಯುತ್ ಬಿಲ್ಲನ್ನು ಸರ್ಕಾರದ ವತಿಯಿಂದಲೇ ಪಾವತಿಸಲು ಕ್ರಮ ಕೈಗೊಳ್ಳಲಾಗುವುದೇ?

ವಿದ್ಯುತ್ ಬಿಲ್ ಪಾವತಿಸಲು ಸರ್ಕಾರದಿಂದ ಪ್ರತ್ಯೇಕವಾದ ಅನುದಾನವನ್ನು ನಿಗದಿಗೊಳಿಸಿರುವುದಿಲ್ಲ

ಊ) ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು?

ಕರ್ನಾಟಕ ಪಂಚಾಯ್‌ರಾಜ್ ಅಧಿನಿಯಮ 93ರ ನಿಯಮ 206ರಡಿ ಗ್ರಾಮ ಪಂಚಾಯತಿಗಳಿಗೆ ನೀಡುವ ಶಾಸನಬದ್ಧ ಅನುದಾನದಿಂದ ವಿದ್ಯುತ್ ಬಿಲ್ಲನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	**1212(1571)**
ಸದಸ್ಯರ ಹೆಸರು	**ಶ್ರೀಮತಿ ಶಕುಂತಲಾ ಟಿ ಶೆಟ್ಟಿ(ಪುತ್ತೂರು)**
ಉತ್ತರಿಸುವವರು	**ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪೂಣಚ-ಪರಿಯಾಲ್ತಡ್ಕ ಅನುದಾನಿತ ಶಾಲೆಯ ಮುಖ್ಯೋಪಾಧ್ಯಾಯರ ಬಡ್ತಿಯಲ್ಲಿ ತೊಂದರೆಯಾಗಿ ನ್ಯಾಯಾಲಯಕ್ಕೆ ಹೋದದ್ದು ನಿಜವೇ,

ಹೌದು ದಿ 10 4 1991 ರಿಂದ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಯ ಬಗ್ಗೆ ವಿವಿಧ ಹಂತಗಳ ನ್ಯಾಯಾಲಯಗಳಲ್ಲಿ ಆಡಳಿತ ಮಂಡಳಿ ಮತ್ತು ಜೇಷ್ಠತೆಯಲ್ಲಿ ಹಿರಿಯರಾದ ಶಿಕ್ಷಕರ ಮಧ್ಯೆ ದಾವೆ ನಡೆಯುತ್ತಿದೆ

ಆ) ನ್ಯಾಯಾಲಯದ ತೀರ್ಪು ಬಂದಿದೆಯೇ ಹಾಗೂ ಅದನ್ನು ಜಾರಿಗೆ ತರಲಾಗಿದೆಯೇ,

ಇ) ಇಲ್ಲದಿದ್ದರೆ, ಜಾರಿಗೆ ತರದಿರಲು ಕಾರಣವೇನು,

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು, ಪೂಣಚ-ಪೆರಿಯಾಲ್ತಡ್ಕ ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಸಂದರ್ಭದಲ್ಲಿ ಸೇವಾ ಹಿರಿತನವನ್ನು ಕಡೆಗಣಿಸಿ, ಸೇವೆಯಲ್ಲಿ ಕಿರಿಯರಾದ ಶಿಕ್ಷಕರಿಗೆ ಬಡ್ತಿ ನೀಡಿರುವುದರಿಂದ, ವಿವಾದವುಂಟಾಗಿ, ಈ ವಿಚಾರವಾಗಿ ಇ ಎ ಟಿ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಸದರಿ ನ್ಯಾಯಾಲಯಗಳು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ನಿರ್ದೇಶಕರು (ಪ್ರಾ.ಶಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಲ್ಲಿ ಮೇಲ್ಮನವಿ ಸಂಖ್ಯೆ 38/2000ಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ಸೇವೆಯಲ್ಲಿ ಹಿರಿಯರಾದ ಶಿಕ್ಷಕರಿಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡುವಂತೆ ದಿ 2 4 2004ರಂದು ನಿರ್ದೇಶಕರು (ಪ್ರಾ.ಶಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಆದೇಶ ಮಾಡಿರುತ್ತಾರ

ದಿ 2 4 2004ರ ನಿರ್ದೇಶಕರ ಆದೇಶದ ವಿರುದ್ಧ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಲ್ಲಿ ಆಡಳಿತ ಮಂಡಳಿಯವರು ಮೇಲ್ಮನವಿ ಸಂಖ್ಯೆ 3/2004ನ್ನು ಸಲ್ಲಿಸಿದರು ಸದರಿ ಮೇಲ್ಮನವಿಯನ್ನು ದಿ 28 8 2006 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ನಿರ್ದೇಶಕರ ದಿ 2 4 2004ರ ಆದೇಶವನ್ನು ಎತ್ತಿಹಿಡಿದು, ಅದರಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿ ಆಡಳಿತ ಮಂಡಳಿಯವರ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ ಅನಂತರ, ಆಡಳಿತ ಮಂಡಳಿಯವರು ಆಯುಕ್ತರ ದಿ 28 8 2006ರ ಆದೇಶದ ವಿರುದ್ಧ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರುರವರ ಮುಂದೆ ಮೇಲ್ಮನವಿ ಸಂಖ್ಯೆ 40/2006ರನ್ನು ಸಲ್ಲಿಸಿರುತ್ತಾರೆ ಸದರಿ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ (ಇಡಿ 280 ಪಿಎಂಸಿ 2006)

ಈ) ಇದರಿಂದಾಗಿ ಮುಖ್ಯೋಪಾಧ್ಯಾಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು ಆಡಳಿತ ಮಂಡಳಿಯು ಇಲಾಖೆಯ ಆದೇಶಗಳನ್ನು ಪಾಲಿಸಲು ವಿಳಂಬ ಮಾಡಿರುವುದು, ಶಿಕ್ಷಕರಿಗೆ ಸಿಗುವ ಸೌಲಭ್ಯದ ಬಗ್ಗೆ ಅನಾವಶ್ಯಕ ಕಿರುಕುಳ ನೀಡುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ತಪ್ಪಿಸುವ ಸಲುವಾಗಿ ಸದರಿ ಆಡಳಿತ ಮಂಡಳಿಗೆ ವಿಶೇಷಾಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ (ಇಡಿ 439 ಪಿಎಂಸಿ 2005)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1213(1564)
ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವವರು . ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ವಿವಿಧ ನದಿಗಳಿಂದ ರಾಜ್ಯದಲ್ಲಿ ಸಿ ಡಬ್ಲ್ಯೂಸಿ(ಸೆಂಟ್ರಲ್)ಯಿಂದ ಹರಿವಿಕೆಯನ್ನು ಮೌಲ್ಯಮಾಪನ ಮಾಡತಕ್ಕಂತಹ ಕೇಂದ್ರಗಳು ಯಾವುವು? (ವಿವರ ನೀಡುವುದು)

ರಾಜ್ಯದಲ್ಲಿ ಸಿ ಡಬ್ಲ್ಯೂ ಸಿ ವತಿಯಿಂದ ಸುಮಾರು 43 ಕೇಂದ್ರಗಳಲ್ಲಿ ಮಾಪನ ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ –

ಕಾವೇರಿ ನದಿ ಕಣಿವೆ

1 ಅರ್ಕಾವತಿ ನದಿ–ಟಿ ಬೆಕುಪ್ಪೆ
2 ಶಿಂಷಾ ನದಿ–ಟಿ ಕೆ ಹಳ್ಳಿ
3 ಕಾವೇರಿ ನದಿ–ಕೊಳ್ಳೆಗಾಲ
4 ಕಬಿನಿ ನದಿ–ಟಿ ನರಸೀಪುರ
5 ಲಕ್ಷ್ಮಣ ತೀರ್ಥ ಹೊಳೆ–ಕಟ್ಟೆಮಳಲವಾಡಿ
6 ಹೇಮಾವತಿ ನದಿ–ಮುಕುಂದುರು ಹೊಸಹಳ್ಳಿ
7 ಯಗಚಿ ನದಿ–ತಿಮ್ಮನಹಳ್ಳಿ
8 ಹೇಮಾವತಿ ನದಿ–ಸಕಲೇಶಪುರ
9 ಕಾವೇರಿ ನದಿ–ಕೊಡಿಗೆ
10 ಹೇಮಾವತಿ ನದಿ–ಅಕ್ಕಿಹೆಬ್ಬಾಳ

ಕೃಷ್ಣಾ ನದಿ ಕಣಿವೆ

1 ಮುಲ್ಲಾಮಾರಿ ನದಿ–ಚಿಂಚೋಳಿ
2 ಕಾಗ್ನ ನದಿ–ಮಲಖೇಡ
3 ಭೀಮಾ ನದಿ–ಯಾದಗೀರ್
4 ಬೋರ್‌ನಾಳ ನದಿ–ಕೋಕನ್‌ಗಾಂವ್
5 ದೊಡ್ಡ ಹಳ್ಳ–ಶಿರಡಾಂನ್
6 ಘಟಪ್ರಭಾ ನದಿ–ಮುದೋಳ್
7 ಘಟಪ್ರಭಾ ನದಿ–ಗೋಕಾಕ್ ಪಾಲ್ಸ್
8 ಹಿರಣ್ಯಕೇಶಿ ನದಿ–ಗೋಟೂರು
9 ಘಟಪ್ರಭಾ ನದಿ–ದಡ್ಡಿ
10 ಮಲಪ್ರಭಾ ನದಿ–ಚೋಳಚಗುಡ್ಡ
11 ಬೆಣ್ಣೆ ಹಳ್ಳ–ನವಲಗುಂದ

12 ಘೋಣ ನದಿ–ತಾಳಿಕೋಟೆ
13 ಕೃಷ್ಣಾ ನದಿ–ಹೂವಿನಹೆಡಿಗೆ
14 ವೇದಾವದಿ ನದಿ–ಟಿ ರಾಮಪುರಂ
15 ತುಂಗಭದ್ರಾ ನದಿ–ಊಲೆನೂರು
16 ವರದಾ ನದಿ–ಮರೋಳ್
17 ತುಂಗ ಭದ್ರ ನದಿ–ಹಾರ್ಲ ಹಳ್ಳಿ
18 ತುಂಗ ಭದ್ರ ನದಿ–ಶಿವಮೊಗ್ಗ
19 ತುಂಗ ಭದ್ರ ನದಿ–ಹೊನ್ನಾಳಿ
20 ಚಿಕ್ಕಹಗರಿ ನದಿ–ಅಮಕುಂಡಿ ಸೇತುವೆ
21 ವೇದಾವತಿ ನದಿ–ಕೆಲ್ಲೋಡು
22 ದೂದ್‌ಗಂಗಾ ನದಿ–ಸದಲಗಾ
23 ಅಗ್ರಣಿ ನದಿ–ಪಾಂಡೇಗಾವ್
24 ಹರಿದ್ರಾ ನದಿ–ಬ್ಯಾಲದ ಹಳ್ಳಿ
25 ಕುಮುದ್ವತಿ ನದಿ–ಕುಪ್ಪೆಲೂರು

<u>ಗೋದಾವರಿ ನದಿ ಕಣಿವೆ</u> 1 ಮಾಪನ ಕೇಂದ್ರ

1 ಮಾಂಜ್ರ ನದಿ–ಸಾಯಿಗಾವ್

<u>ಪಶ್ಚಿಮ ವಾಹಿನಿ ನದಿಕೊಳ್ಳ</u> 6 ಮಾಪನ ಕೇಂದ್ರಗಳು

1 ಆಘನಾಶಿನಿ ನದಿ–ಸಂತೆಗುಳಿ
2 ಹಾಲಂಡಿ ನದಿ–ಹಾಲಂಡಿ
3 ಸೀತಾ ನದಿ–ಅವರ್ಸೆ
4 ಎಣ್ಣೆ ಹೊಳೆ–ಎಣ್ಣೆಹೊಳೆ
5 ಗುರ್‌ಪುರ್ ನದಿ–ಅಡ್ಡೂರು
6 ನೇತ್ರಾವತಿ ನದಿ–ಬಂಟ್ವಾಳ

<u>ಉತ್ತರ ಪೆನ್ನಾರ್ ನದಿ ಕಣಿವೆ</u> 1 ಮಾಪನ ಕೇಂದ್ರ ಉತ್ತರ

1 ಪಿನಾಕಿನಿ ನದಿ–ನಾಗಲಮಡಿಕೆ

ಆ) ಇವುಗಳಲ್ಲಿ ಎಷ್ಟು ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಕೇಂದ್ರಗಳು ಕಾರ್ಯನಿರ್ವಹಿಸುತ್ತಿಲ್ಲ?

ಮೇಲೆ ಸೂಚಿಸಿರುವ ಎಲ್ಲಾ ಮಾಪನ ಕೇಂದ್ರಗಳಲ್ಲೂ ಮಾಪನ ಕಾರ್ಯಗಳು ಮುಂದುವರಿದಿರುವುದು ಕೇಂದ್ರ ಜಲ ಆಯೋಗದ ಜಲ ವಾರ್ಷಿಕೆಯಿಂದ ತಿಳಿದುಬಂದಿದೆ

ಇ) ರಾಜ್ಯದ ಕಾವೇರಿ ಕೊಳ್ಳ ಮತ್ತು ಕೃಷ್ಣಾ ಕೊಳ್ಳಗಳಿಂದ ನೆರೆ ರಾಜ್ಯಗಳಿಗೆ ಟ್ರಿಬ್ಯೂನಲ್ ಆದೇಶದ ಅನ್ವಯ ಕೊಡಬೇಕಾಗಿರುವ ನೀರಿನ ಮೊತ್ತವೆಷ್ಟು?

1) ಕೃಷ್ಣಾ ಕೊಳ್ಳ –

ಕೃಷ್ಣಾ ಕೊಳ್ಳದಿಂದ ನೀರನ್ನು ನೆರೆರಾಜ್ಯಗಲಿಗೆ ಕೊಡಲು ಯಾವುದೇ ಟ್ರಿಬ್ಯೂನಲ್‌ನ ಆದೇಶ ಇರುವುದಿಲ್ಲ

11) ಕಾವೇರಿ ಕೊಳ್ಳ-

ಕಾವೇರಿ ನ್ಯಾಯಾಧೀಕರಣದ ದಿನಾಂಕ 25 6 1991ರ ಮಧ್ಯಂತರ ಅದೇಶದನ್ವಯ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಪ್ರತಿ ಜಲವರ್ಷದಲ್ಲಿ 205 ಟಿ ಎಂ ಸಿ ನೀರು ಲಭ್ಯವಾಗುವಂತೆ, ಕರ್ನಾಟಕವು ತನ್ನ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡಬೇಕಾಗಿದೆ

ಕಾವೇರಿ ನ್ಯಾಯಾಧಿಕರಣದ ದಿನಾಂಕ 5 2 2007ರ ಅಂತಿಮ ಆದೇಶದನ್ವಯ, ತಮಿಳುನಾಡಿಗೆ ಪ್ರತಿ ಜಲವರ್ಷದಲ್ಲಿ 192 ಟಿ ಎಂ ಸಿ ನೀರು ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಹರಿಯುವಂತೆ ಕರ್ನಾಟಕವು ತನ್ನ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡಬೇಕಾಗಿದೆ

ಈ) ಮೊತ್ತಕ್ಕಿಂತ ಹೆಚ್ಚಿಗೆ ಹರಿದು ಹೋಗಿರುವ ನೀರಿನ ಪ್ರಮಾಣ ಎಷ್ಟು? (ಟಿ ಎಂ ಸಿ ಯಲ್ಲಿ) ಕಳೆದ 3 ವರ್ಷದ ನೀರಿನ ಅಂಕಿ ಸಂಖ್ಯೆಗಳ ವಿವರ ಒದಗಿಸುವುದು

1) ಕೃಷ್ಣಾ ಕೊಳ್ಳಕ್ಕೆ ಸಂಬಂಧಿಸಿದಂತೆ, ಇದು ಉದ್ಭವಿಸುವುದಿಲ್ಲ

11) ಕಾವೇರಿ ಕೊಳ್ಳ -

1991-92 ಜಲ ವರ್ಷದಿಂದ 2005-06ರವರೆಗೆ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ನ್ಯಾಯಮಂಡಳಿಯ ಮಧ್ಯಂತರ ಅದೇಶದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚುವರಿ ನೀರು ಹರಿದಿರುವ ಜಲವರ್ಷಗಳು ಹಾಗೂ ನೀರಿನ ಪ್ರಮಾಣವನ್ನು ಅನುಬಂಧ 1ರಲ್ಲಿ ನೀಡಲಾಗಿದೆ ಕಳೆದ ಮೂರು ವರ್ಷಗಳಿಂದ ಅಂದರೆ 2003-04 ರಿಂದ 2005-06ರವರೆಗೆ ಹರಿದಿರುವ, ನೀರಿನ ಪ್ರಮಾಣವನ್ನು ಅನುಬಂಧ 2ರಲ್ಲಿ ನೀಡಲಾಗಿದೆ

ಅನುಬಂಧ-1

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ 1564ಕ್ಕೆ ಉತ್ತರಗಳು

ಜಲ ವರ್ಷ	* ಮೆಟ್ಟೂರು ಜಲಾಶಯಕ್ಕೆ ಹರಿದಿರುವ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)	ನ್ಯಾಯಾಧಿಕರಣದ ಆದೇಶದ ಅನ್ವಯ ನಿಗದಿ ಪಡಿಸಿದ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)	ನಿಗದಿತ ಮೊತ್ತಕ್ಕಿಂತ ಹೆಚ್ಚಿಗೆ ಮೆಟ್ಟೂರು ಜಲಾಶಯಕ್ಕೆ ಹರಿದಿರುವ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)
1991-1992	334 096	205 00	129 96

1992–1993	351 693	205 00	146 69
1993–1994	233 371	205 00	18 37
1994–1995	373 157	205 00	168 16
1996–1997	244 064	205 00	39 06
1997–1998	267 836	205 00	62 84
1998–1999	237 682	205 00	32 68
1999–2000	268 594	205 00	65 59
2000–2001	308 227	205 00	103 23
2005–2006	401 843	205 00	196 84

*ತಮಿಳುನಾಡಿನವರು ವರದಿ ಮಾಡಿದಂತೆ

ಅನುಬಂಧ–2

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ 1564ಕ್ಕೆ ಉತ್ತರಗಳು

ಕ್ರಮ ಸಂಖ್ಯೆ	ಜಲ ವರ್ಷ	ಕೆಆರ್ ಎಸ್ ಹಾಗೂ ಕಬಿನಿ ಜಲಾಶಯಗಳ ಹೊರ ಹರಿವು (ಟಿಎಂಸಿಗಳಲ್ಲಿ)	ಬಿಳಿಗುಂಡ್ಲು ಮಾಪನ ಕೇಂದ್ರ ಗಳಲ್ಲಿ ದಾಖಲಾದ ಹರಿವು (ಟಿಎಂಸಿಗಳಲ್ಲಿ)	ಮೆಟ್ಟೂರು ಜಲಾಶಯದಲ್ಲಿ ದಾಖಲಾದ ಒಳಹರಿವು (ಟಿಎಂಸಿಗಳಲ್ಲಿ)
1	2003–04	42 034	75,869	65 160
2	2004–05	101 298	185 548	163 172
3	2005–06	204 285	383 921	401 843

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1214(1565)**

ಸದಸ್ಯರ ಹೆಸರು **ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)**

ಉತ್ತರಿಸುವವರು **ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)**

ಅ) ಮುಂದಿನ ವರ್ಷದಿಂದ ಪ್ರತಿ ತಾಲ್ಲೂಕು ಕೇಂದ್ರಗಳಿಗೆ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆರೆಯುವ ಯೋಚನೆ ಸರ್ಕಾರದ ಮುಂದಿದೆಯೇ?

ಹೌದು

ಆ) ಹಾಗಾದರೆ, ಮುಂದಿನ ವರ್ಷ ಒಟ್ಟು ಎಷ್ಟು ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ?

90

ಇ) ಬಸವನಬಾಗೇವಾಡಿ ತಾಲ್ಲೂಕು ಕೇಂದ್ರದಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಹೌದು

ಈ) ಇದ್ದಲ್ಲಿ, ಯಾವಾಗ ತೆರೆಯಲಾಗುವುದು?

ಈ ಕುರಿತಂತೆ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1215(1400)**
ಸದಸ್ಯರ ಹೆಸರು **ಶ್ರೀ ಶಿವಶಂಕರಪ್ಪ ಟಿ.ಹೆಚ್**
ಉತ್ತರಿಸುವವರು **ಶ್ರೀ ಕೆ.ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಸರ್ವೆ ಕಾರ್ಯ ಮುಗಿದಿದೆಯೇ, ಮುಗಿಯದಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ,

ಭದ್ರಾ ಮೇಲ್ದಂಡೆ ಯೋಜನೆಯನ್ನು ಪ್ರಾಥಮಿಕ ಹಂತದಲ್ಲಿ ಟೋಪೋಶೀಟ್ ಆಧಾರದ ಮೇಲೆ ರೂಪಿಸಲಾಗಿತ್ತು ಸದರಿ ಯೋಜನೆಯ ಮುಖ್ಯ ಕಾಮಗಾರಿಗಳ ಟೆಂಡರ್‌ನ್ನು ಇ.ಪಿ.ಸಿ (ಟರ್ನ್‌ಕೀ) ಆಧಾರದ ಮೇಲೆ ವಹಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ, ಇ.ಪಿ.ಸಿ ಟೆಂಡರ್ ಗುತ್ತಿಗೆದಾರರು ವಿವರವಾದ ಸರ್ವೆ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ

ಆ) ಭದ್ರಾ ಮೇಲ್ದಂಡೆ ನಾಲೆಯು ಪ್ರಥಮವಾಗಿ ತರೀಕೆರೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹಾದುಹೋಗುವ ಎಲ್ಲಾ ಕೃಷಿ ಪ್ರದೇಶಕ್ಕೆ ಹಾಗೂ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆಯೇ

ತರೀಕೆರೆ ತಾಲ್ಲೂಕಿನಲ್ಲಿ 6 288 ಎಕರೆ ಪ್ರದೇಶಕ್ಕೆ ನೀರಾವರಿಗಾಗಿ ಹಾಗೂ ಒಂದು ಕೆರೆಗೆ ಕುಡಿಯುವ ನೀರಿಗಾಗಿ ನೀರು ತುಂಬಿಸಲು ಸದರಿ ಯೋಜನೆಯಡಿ ಉದ್ದೇಶಿಸಲಾಗಿದೆ

ಇ) ಈ ಯೋಜನೆಯಲ್ಲಿ ನೀರನ್ನು ಸುರಂಗ ಮಾರ್ಗ ಅಥವಾ ಲಿಫ್ಟ್ ಮೂಲಕ ತೆಗೆದುಕೊಂಡು ಹೋಗಲಾಗುತ್ತಿದೆಯೇ

ತುಂಗಾ ನದಿಯಿಂದ 15 ಟಿ.ಎಂ.ಸಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮೂಲಕ 15 ಕಿ.ಮೀ ಉದ್ದದ ನಾಲೆಯ ಮುಖಾಂತರ ಭದ್ರಾ ಜಲಾಶಯಕ್ಕೆ ತರಲಾಗುವುದು ನಂತರ ಭದ್ರಾ ಜಲಾಶಯದಿಂದ ಮೂರು ಲಿಫ್ಟ್‌ಗಳ ಮೂಲಕ 47 40 ಕಿ.ಮೀ ಉದ್ದದ ನಾಲೆಯ ಮುಖಾಂತರ ನೀರನ್ನು ಅಜ್ಜಂಪುರ ಬಳಿಯ ಡೆಲಿವರಿ ಛೇಂಬರ್‌ವರೆಗೆ ನೀರನ್ನು ಹರಿಸಲಾಗುವುದು 47 40 ಕಿ.ಮೀ ಉದ್ದದ ನಾಲೆಯು 6 9 ಕಿ.ಮೀ ಉದ್ದದ ಸುರಂಗವನ್ನು ಒಳಗೊಂಡಿದೆ

ಈ) ಹಾಗಿದ್ದಲ್ಲಿ, ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಆಳ ಹಾಗೂ ಉದ್ದದಲ್ಲಿ ಸುರಂಗ ಮಾರ್ಗ ಮಾಡಲಾಗುತ್ತಿದೆ

ಅಜ್ಜಂಪುರ ಬಳಿ 6 9 ಕಿ ಮೀ ಉದ್ದದ ಸುರಂಗ ನಿರ್ಮಿಸಲು ಯೋಜಿಸಲಾಗಿದೆ

ಉ) ಈ ಯೊಜನೇಯ ಸುರಂಗ ಮಾರ್ಗದ ಮೂಲಕ ನೀರು ತೆಗೆದುಕೊಂಡು ಹೋದ ಪಕ್ಷದಲ್ಲಿ ಬಾಗೂರು ನವಿಲೆಯಲ್ಲಿನ ಅಂತರ್ ಜಲದ ಅಪಾಯವು ಕ್ಷೇತ್ರದ ಜನತೆಗೆ ಕಾಡುತ್ತಿದೆಯೇ

ಪರಿಣಿತರ ಸಮೀತಿಯು ಎಲ್ಲಾ ಅಂಶಗಳನ್ನು ಪರಿಶಿಲಿಸಿತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದ್ದು ಕಾಮಗಾರಿಯ ಅನುಷ್ಟಾನದ ಸಮಯದಲ್ಲಿ ಸೂಕ್ತ ಎಚ್ಚರಿಕೆಗಳನ್ನು ಕೈಗೊಂಡು ಮುಂದುವರೆಯಲಾಗುವುದು

ಊ) ಈ ಸುರಂಗ ಮಾರ್ಗ ಬಿಟ್ಟು ಲಿಫ್ಟ್ ಮೂಲಕ ನೀರನ್ನು ಹೋಗಬಹುದಲ್ಲವೇ,

ವಿವಿಧ ಪರ್ಯಾಯಗಳನ್ನು ಪರಿಶೀಲಿಸಿದ ನಂತರವೇ ಈ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1216(1572)**
ಸದಸ್ಯರ ಹೆಸರು	**ಶ್ರೀ ಸಿದ್ದುಸವದಿ(ಜಮಖಂಡಿ)**
ಉತ್ತರಿಸುವವರು	**ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ತುಂಗಳ-ಸಾವಳಗಿ ಏತ ನೀರಾವರಿ ಯೋಜನೆಗಾಗಿ ಖರ್ಚು ಮಾಡಲು ನಿರ್ಧರಿಸಿರುವ ಒಟ್ಟು ಹಣವೆಷ್ಟು?

ಈ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಒಟ್ಟು ಹಣ ರೂ 71 35 ಕೋಟಿಗಳು

ಆ) ಇಲ್ಲಿಯವರೆಗೆ ಮಾಡಿದ ಖರ್ಚು ಎಷ್ಟು?

ಸಾವಳಗಿ-ತುಂಗಳ ಏತ ನೀರಾವರಿ ಯೋಜನೆಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ರೂ 7 90 ಕೋಟಿಗಳು

ಇ) ಈ ಕೆಲಸ ಮಂದಗತಿಯಿಂದ ಸಾಗಿರಲು ಕಾರಣವೇನು ಹಾಗೂ ಯಾವಾಗ ರೈತರಿಗೆ ನೀರು ಕೊಡಲಾಗುವುದು

ಸಾವಳಗಿ-ತುಂಗಳ ಏತ ನೀರಾವರಿ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಯು ಶೇಕಡಾ 75 ರಷ್ಟು ಪೂರ್ಣಗೊಡಿರುತ್ತದೆ ಪಶ್ಚಿಮ ಕಾಲುವೆಯು ಒಟ್ಟು 7 415 ಕಿ ಮೀ ಉದ್ದವಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಪೂರ್ವ ಕಾಲುವೆಯ ಕಿ ಮೀ 0 ರಿಂದ 10 ರವರೆಗಿನ ಕಾಲುವೆ ಕೆಲಸದ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಉಳಿದ 14 ಕಿ ಮೀಗಳು ಕಾಲುವೆಯ ಕೆಲಸದ

ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದೆ 2007–08ರ ಸಾಲಿನಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗುವುದು ಈ ಏತ ನೀರಾವರಿ ಯೋಜನೆಯನ್ನು ಇನ್ನು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ಈ) ಈ ಯೋಜನೆಗೆ ಗುರುತಿಸಲಾಗಿರುವ ಜಲ ಮೂಲವಾದ ಹಿಪ್ಪರಗಿ ಬ್ಯಾರೇಜ್ ಕಡಿಮೆ ಸಾಮರ್ಥ್ಯ ಹೊಂದಿರುವುದರಿಂದ ಮುಂದೆ ನೀರಿನ ಕೊರತೆ ಆಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿಲ್ಲ ಹಿಪ್ಪರಗಿ ಯೋಜನೆಯಡಿ ನೀರಾವರಿಗಾಗಿ ನಿಗದಿಪಡಿಸಿದ ಕ್ಷೇತ್ರದಲ್ಲಿ ರೈತರು ಯೋಜನೆಯಡಿ ಬೆಳೆಯಬೇಕಾದ ಮುಂಗಾರು / ಹಿಂಗಾರು ಬೆಳೆಗಳು ಹಾಗೂ ಬೆಳೆ ಪದ್ಧತಿಯನ್ನು ಅನುಸರಿಸಿದಲ್ಲಿ ನೀರಿನ ಕೊರತೆ ಉಂಟಾಗುವುದಿಲ್ಲ

ಉ) ಹಾಗಿದ್ದಲ್ಲಿ, ಮಂಜೂರು ಮಾಡಿರುವ ಅನುದಾನದಲ್ಲೇ ಹಿಪ್ಪರಗಿ ಬ್ಯಾರೇಜನ್ನು ಹೊರತುಪಡಿಸಿ ಅಲಮಟ್ಟಿ ಹಿನ್ನೀರಿನಿಂದ ನೀರಿನ ಸೌಲಭ್ಯವನ್ನು ಒದಗಿಸುವುದು ಸೂಕ್ತವಲ್ಲವೆ?

ಪ್ರಸ್ತುತ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1217(1386)
ಸದಸ್ಯರ ಹೆಸರು ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಉತ್ತರಿಸುವವರು ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಬೆಂಗಳೂರು ನಗರದ ಕೋರಮಂಗಲದಲ್ಲಿರುವ ಕ್ರೀಡಾ ಗ್ರಾಮದಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯಗಳ ಸಂಖ್ಯೆ ಎಷ್ಟು?

ಒಂದು (ಹದಿನಾಲ್ಕು ಬ್ಲಾಕ್‌ಗಳು)

ಆ) ಅವುಗಳಲ್ಲಿ ಒಟ್ಟು ಅಪಾರ್ಟ್‌ಮೆಂಟ್‌ಗಳೆಷ್ಟು?

2534

ಇ) ಇದುವರೆಗೂ ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ ಹಾಗೂ ಯಾವ ಆಧಾರದ ಮೇಲೆ ಮಾರಾಟ ಮಾಡಲಾಗಿದೆ,

ಎಲ್ಲಾ ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ Outright sale ಆಧಾರದ ಮೇಲೆ ಮಾರಾಟ ಮಾಡಲಾಗಿದೆ

ಈ) ಮಾರಾಟವಾಗದೆ ಖಾಲಿ ಉಳಿದಿರುವ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು

ಇಲ್ಲ

ಉ) ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ಸರ್ಕಾರಿ ನೌಕರರಿಗೆ ಒದಗಿಸಲಾಗಿದೆ?

ಇಲ್ಲ

ಟ್ಯುಡಿಸಿಲ್ ಬ್ಲಾಕ್	224
ಕೃಷ್ಣಾ ಬ್ಲಾಕ್	204
ಶರಾವತಿ ಬ್ಲಾಕ್	169
ಒಟ್ಟು	597

ಅಪಾರ್ಟ್‌ಮೆಂಟ್‌ಗಳನ್ನು ಸರ್ಕಾರಿ ನೌಕರರಿಗೆ ವಾಸಕ್ಕೆ ಹಂಚಿಕೆ ಮಾಡಲು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1218(1387)**

ಸದಸ್ಯರ ಹೆಸರು **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)**

ಉತ್ತರಿಸುವ ಸಚಿವರು **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ ಹಿಂದುಳಿಗೆ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೂರಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ ಬಂದಿದ್ದಲ್ಲಿ ಯಾವ ಯಾವ ಶಾಲೆಗಳಲ್ಲಿ ಕೊರಡಿಗಳ ಕೊರತೆ ಇದೆ

ಪ್ರಾಥಮಿಕ ಶಾಲೆಗಳಿಗೆ ಯಾವುದೇ ಕೊರಡಿ ಕೊರತೆ ಇರುವುದಿಲ್ಲ ಆದರೆ ಸರ್ಕಾರಿ ಪ್ರೌಢ ಶಾಲಗಳಿಗೆ ಕೊರಡಿ ಕೊರತೆ ಇರುತ್ತದೆ ಅದರ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರಸಂ	ಗ್ರಾಮದ ಹೆಸರು	ಸಂಖ್ಯೆ
01	ನವಲೂರು	2
02	ಮುಳ್ಳೂರು	2
03	ಕೊಳ್ಳೇಗಾಲ	5
04	ಗುಂಬಳ್ಳಿ	5
04	ಹಿರಸವಾಡಿ	5
05	ಚಾಮರಾಜನಗರ	5

ಇ ಈ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಈ ಹಾಗಿದ್ದಲ್ಲಿ ಕೊರತೆಯಿರುವ ಸದರಿ ಶಿಕ್ಷಕರುಗಳನ್ನು ನೇಮಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ,

2006–07ನೇ ಸಾಲಿಗೆ ಪ್ರೌಢ ಶಾಲಾ ಶಿಕ್ಷಕರ ಕೊರತೆ ಇದ್ದು 157 ಹುದ್ದೆಗಳಿಗೆ ಈಗಾಗಲೇ ಸಂಯುಕ್ತ ಸ್ಪರ್ದಾತ್ಮಕ ಪರೀಕ್ಷೆಯನ್ನು ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಸಂಬಂಧ ಪಟ್ಟ ಶಾಲೆಗಳಿಗೆ ನೇಮಕಾತಿ ಮಾಡಲಾಗುವುದು

ಉ ಯಾವ ಯಾವ ಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆ ಇದೆ

ಅನುಬಂಧದಲ್ಲಿ ಒದಗಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1219(1388)**
ಸದಸ್ಯರ ಹೆಸರು	**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)**
ಉತ್ತರಿಸುವ ಸಚಿವರು	**ಶ್ರೀ ಡಿ ಇಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)**

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಹೊಸದಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದೇ,

ಹೌದು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಆ) ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು,

ಇಂಜಿನಿಯರಿಂಗ್ ಕಾಲೇಜುಗಳಿಗೆ ಏರುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಕುಶಾಲನಗರ, ರಾಯಚೂರು, ಚಾಮರಾಜನಗರ ಮತ್ತು ಬಳ್ಳಾರಿಗಳಲ್ಲಿರುವ ಪಾಲಿಟೆಕ್ನಿಕ್‌ಗಳನ್ನು ಇಂಜಿನಿಯರಿಂಗ್ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿದೆ ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜಿತ ಇಂಜಿನಿಯರಿಂಗ್ ಕಾಲೇಜನ್ನು ಹಾಸನದಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಇ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಗೆ ಹೊಸದಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಲಾಗುವುದೇ,

ಚಾಮರಾಜನಗರ ಜಿಲ್ಲೆಯಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿರುವುದಿಲ್ಲ ಅದರೆ, ಚಾಮರಾಜನಗರದಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್‌ನ್ನು ಇಂಜಿನಿಯರಿಂಗ್ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಮೂಲಭೂತ ಸೌಲಭ್ಯಗಳನ್ನು ಹಾಗೂ ಅಗತ್ಯತೆಗಳನ್ನು ಆಧರಿಸಿ ಪರಿಶೀಲಿಸಲಾಗುವುದು

ಈ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಅಗತ್ಯ ಮೂಲಭೂತ ಸೌಕರ್ಯಗಳಾದ ನಿವೇಶನ, ಕಟ್ಟಡ ಇತ್ಯಾದಿಗಳ ಲಭ್ಯತೆ ಮೇರೆಗೆ ಎ ಐ ಸಿ ಟಿ ಇ ಯ ಅನುಮೋದನೆ ಪಡೆದ ನಂತರ ಈ ಬಗ್ಗೆ ಕ್ರಮ ವಹಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1220(1389)**
ಸದಸ್ಯರ ಹೆಸರು	**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)**
ಉತ್ತರಿಸುವವರು	**ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶದ ರಸ್ತೆಗಳು ದುರಸ್ತಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ರಸ್ತೆಗಳನ್ನು ಅಭಿವೃದ್ಧಿಪಡಿಸುವ ಅಗತ್ಯ ಕಂಡುಬಂದಿದೆ

ಆ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಯಾವಾಗ ಮಾಡಲಾಗುವುದು,

ಪ್ರಸ್ತುತ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗೆ ಒದಗಿಸಲಾಗುವ ಅನುದಾನದಲ್ಲಿ ಆದ್ಯತೆ ಮೇರೆಗೆ ಹಾಗೂ ನಿಯಮಾನುಸಾರ ಗ್ರಾಮೀಣ ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು

ಇ) ಚಾಮರಾಜನಗರ ಜಿಲ್ಲೆಯಲ್ಲಿ ಇರುವ ಗ್ರಾಮೀಣ ರಸ್ತೆಗಳ ವಿಸ್ತೀರ್ಣವೆಷ್ಟು,

ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ 2673 ಕಿ ಮೀ ಉದ್ದದ ಗ್ರಾಮೀಣ ರಸ್ತೆಗಳು ಒಳಪಡುತ್ತವೆ

ಈ) ದುರಸ್ತಿಗೊಳಗಾಗಿರುವ ರಸ್ತೆಗಳಾವುವು, ದುರಸ್ತಿಗೊಳ್ಳದಿರುವ ರಸ್ತೆಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು?

ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಪೈಕಿ 597 10 ಕಿ ಮೀ ಉದ್ದ ಮಾತ್ರ ಡಾಂಬರು ಮಾಡಲಾಗಿದೆ ಉಳಿಕೆ 2075 90 ಕಿ ಮೀ ಉದ್ದದ ರಸ್ತೆಗಳನ್ನು ಡಾಂಬರೀಕರಣ ಮಾಡಬೇಕಾಗಿರುತ್ತದೆ

ಅನುದಾನಕ್ಕನುಗುಣವಾಗಿ ಹಂತ ಹಂತವಾಗಿ ಗ್ರಾಮೀಣ ರಸ್ತೆಗಳನ್ನು ದುರಸ್ತಿ/ಅಭಿವೃದ್ಧಿ ಮಾಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1221(1390)**
ಸದಸ್ಯರ ಹೆಸರು **ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ)**
ಉತ್ತರಿಸುವವರ **ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಅನುದಾನಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಯಾವಾಗ ಖಾಯಂ ಮಾಡಲಾಗುವುದು,

ಸರ್ಕಾರದ ದಿ 12 4 2006ರ ಆದೇಶದಂತೆ ಮಿತವ್ಯಯ ಅದೇಶಗಳನ್ನು ಸಡಿಲಿಸಿ ಅನುದಾನಿತ ಪ್ರೌಢ ಶಾಲೆಗಳಲ್ಲಿನ 2106 ಖಾಲಿ ಹುದ್ದೆಗಳನ್ನು ತುಂಬಲು ಆಸ್ಪದ ಕಲ್ಪಸಲಾಗಿದೆ ಅವುಗಳನ್ನು ತುಂಬಲು ಪ್ರಕ್ರಿಯೆಯನ್ನು ನೇಮಕಾತಿ ಪ್ರಾದಿಕಾರಗಳಾದ ಆಯಾಯಾ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿವೆ ರಾಜ್ಯದಲ್ಲಿನ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕಡಿಮೆಯಾದ ಕಾರಣದಿಂದ ಹೆಚ್ಚುವರಿ ಶಿಕ್ಷಕರುಗಳು ಉಂಟಾಗಿದ್ದಾರೆ ಕಾರ್ಯಭಾರ ಇರುವ ಇತರೆ ಅನುದಾನಿತ ಖಾಸಗಿ ಅನುದಾನಿತ ಶಾಲೆಗಳಿಗೆ ಅವರನ್ನು ಮರುಹಂಚಿಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಹೊಸ ನೇಮಕಾತಿಗಳನ್ನು ಮಾಡಲು ಆಸ್ಪದ ಇಲ್ಲ

ಆ) ಇದುವರೆಗೂ ಎಷ್ಟು ಅನುದಾನಿತ ಶಾಲೆಗಳ ಶಿಕ್ಷಕರುಗಳನ್ನು ಖಾಯಂ ಮಾಡಲಾಗಿದೆ,

ದಿ 12 4 2006ರ ಆದೇಶದಡಿ 481 ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ ಹಾಗೂ 169 ನೇಮಕಾತಿಗಳನ್ನು ಅನುದಾನ ಸಹಿತ ಅನುಮೋದಿಸಲಾಗಿದೆ

ಇ) ಉಳಿದ ಶಿಕ್ಷಕರುಗಳನ್ನು ಖಾಯಂ ಮಾಡದಿರಲು ಕಾರಣಗಳೇನು,

(ಅ) ಗೆ ನೀಡಿದ ಉತ್ತರ ಅನ್ವಯವಾಗುತ್ತದೆ

ಈ) ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವ ಯಾವ ಸ್ಥಳಗಳಲ್ಲಿವೆ,

ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳ ಸಂಖ್ಯೆ 2830 (ಪಟ್ಟಿ ಲಗತ್ತಿಸಿದೆ)

ಅನುದಾನಿತ ಪ್ರೌಢ ಶಾಲೆಗಳ ಸಂಖ್ಯೆ 2599 ಪಟ್ಟಿ ಲಗತ್ತಿಸಿದೆ)

ಉ) ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಅನುದಾನಿತ ಶಾಲೆಗಳಿವೆ (ವಿವರ ನೀಡುವುದು)?

ಚಾಮರಾಜನಗರದಲ್ಲಿ 33 ಪ್ರೌಢ ಹಾಗೂ 37 ಪ್ರಾದಮಿಕ ಅನುದಾನಿತ ಶಾಲೆಗಳಿವೆ (ಪಟ್ಟಿ ಲಗತ್ತಿಸಿದೆ)

1 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಹಾಲಕ್ಕಿ ಒಕ್ಕಲಿಗರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 227(1307)
ಸದಸ್ಯರ ಹೆಸರು ಶ್ರೀ ದೇಶಪಾಂಡೆ ಆರ್ ವಿ (ಹಳಿಯಾಳ)
ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು)
ವಿಷಯ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವುದು

ಅ) ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಉತ್ತರ ಕನ್ನಡ ಜಿಲ್ಲೆಯ ಬಹುಸಂಖ್ಯಾತ ಅತಿ ಹಿಂದುಳಿದ ಜನಾಂಗವಾದ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲು ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲಶಾಸ್ತ್ರೀಯ ಅಧ್ಯಯನ ಮಾಡುವ ಅವಶ್ಯಕತೆ ಇರುತ್ತದೆ ಅಧ್ಯಯನ ಆಧಾರದ ಮೇಲೆ ನಿಷ್ಕರ್ಷಿಸಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಬೇಕಾಗಿರುತ್ತದೆ ಮುಂಬರುವ ದಿನಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಅಧ್ಯಯನ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು

ಆ) ಹಾಗಿದ್ದಲ್ಲಿ, ಈ ವರ್ಗದವರ ಬಹು ದಿನಗಳ ಬೇಡಿಕೆಯನ್ನು ಕಾರ್ಯಗತಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು,

ಈ ವಿಷಯದಲ್ಲಿ ಇನ್ನೂ ಕ್ರಮ ಕೈಗೊಂಡಿರುವುದಿಲ್ಲ

ಇ) ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಕುಲಶಾಸ್ತ್ರೀಯ ವರದಿಯ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗುವುದು

ಪ್ರಶ್ನೋತ್ತರ

ಅಧ್ಯಕ್ಷರು ಸಿದ್ದುಸವದಿಯವರೆ, ನಿಮ್ಮ ಪ್ರಶ್ನೆಗೆ 15 ದಿವಸ ಸಮಯ ತೆಗೆದುಕೊಂಡಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ ಸನ್ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಸಚಿವರು ಬಹಳ ಯುವಕರು, ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಆದರೆ ಈ ಪ್ರಶ್ನೆಗೆ ಈ ರೀತಿ ಉತ್ತರವನ್ನು ಯಾರು ಕೊಟ್ಟಿದ್ದಾರೋ ಗೊತ್ತಿಲ್ಲ ನಮ್ಮ ಮಾನ್ಯ ವಿಶ್ವೇಶ್ವರ ಹೆಗ್ಡೆಯವರು ಇದ್ದಾರೆ, ಅವರ ಕ್ಷೇತ್ರದಲ್ಲಿ, ಇಡೀ ಕರಾವಳಿಯಲ್ಲಿ ಕಾರವಾರದಿಂದ ಭಟ್ಕಳತನಕ ಈ ಹಾಲಕ್ಕಿ ಸಮಾಜ, ಅಂದರೆ ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ದುರ್ಬಲರಿದ್ದಾರೆ, ಹಲವಾರು ವರ್ಷಗಳಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದಾರೆ, ಮತ್ತು ಸರ್ಕಾರದ ಮುಂದೆ ಆ ಪ್ರಸ್ತಾವನೆ ಇದೆ ಮುಖ್ಯವಾಗಿ ಇದು ಬಹಳ ಸಣ್ಣ ಸಮಾಜ ಒಂದೂವರೆ ಅಥವಾ ಎರಡು ಲಕ್ಷ ಜನಸಂಖ್ಯೆ ಇರಬಹುದು ನಾನು ಆಗಲೇ ಹೇಳಿದಂತೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಅತೀ ಹಿಂದುಳಿದ ಅತೀ ದುರ್ಬಲ ಸಮಾಜ ಇದಾಗಿದೆ ಗುಡ್ಡಗಾಡು ಪ್ರದೇಶದಲ್ಲಿ ಇವರು ವಾಸಿಸುತ್ತಾರೆ 1945ನೇ ಇಸವಿಯಲ್ಲಿ ಇವರ ಬಗ್ಗೆ ದಿನಕರ ದೇಸಾಯಿರವರು ಇಂಗ್ಲೀಷ್‌ನಲ್ಲಿ Observation on North Canara District ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ ಇಂತಹ ಬಡಜನರ ಬಗ್ಗೆ ತಾವು ವಿಶಾಲ ಮನಸ್ಸನ್ನು ಇಟ್ಟುಕೊಂಡು time bound ಆಗಿ ಯಾವಾಗ ಇವರನ್ನು ಎಸ್‌ಟಿ ವರ್ಗಕ್ಕೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ? ಅದರ ಜೊತೆಗೆ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೆ, ಈ ಜೋಯಿಡಾ ತಾಲ್ಲೂಕಿನಲ್ಲಿ, ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಗೌಳಿ ಸಮಾಜ, ಸಹ ಜಂಗಲ್‌ನಲ್ಲಿ ಜೀವನ ಮಾಡುತ್ತಾರೆ ಸಿದ್ದಿ ಜನಾಂಗವನ್ನು ಈಗಾಗಲೆ ಎಸ್‌ಟಿ ವರ್ಗಕ್ಕೆ ಸೇರಿಸಲಾಗಿದೆ ಆದರೆ ಇದರ ಬಗ್ಗೆ ತಾವು ಎಷ್ಟು ದಿವಸಗಳಲ್ಲಿ, ಕ್ರಮ ತೆಗೆದುಕೊಳ್ಳುತ್ತೀರೆಂದು ನಿರ್ದಿಷ್ಟವಾದ ಉತ್ತರವನ್ನು ನನಗೆ ಕೊಡಬೇಕಾಗಿದೆ

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಮಾನ್ಯ ಸದಸ್ಯರಾದ ಆರ್ ವಿ ದೇಶಪಾಂಡೆಯವರು ಈ ಜನಾಂಗವನ್ನು ಎಸ್‌ಟಿಗೆ ಸೇರಿಸಬೇಕೆಂದು ಬೇಡಿಕೆ ಇಟ್ಟಿದ್ದಾರೆ ಹಲವಾರು ವರ್ಷಗಳಿಂದ ಈ ಬೇಡಿಕೆ ಸರ್ಕಾರದ ಮುಂದಿದೆ ಉತ್ತರ ಕರ್ನಾಟಕದ ಹಾಲಕ್ಕಿ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಉತ್ತರ ಕರ್ನಾಟಕ ಜಿಲ್ಲಾಧಿಕಾರಿಗಳು ಕರ್ನಾಟಕ

ಸರ್ಕಾರಕ್ಕೆ ದಿನಾಂಕ 3 2 2003 ರಂದು ಶಿಫಾರಸ್ಸು ಮಾಡಿದ್ದಾರೆ ಅವತ್ತಿನ ಎಸ್‌ಸಿ ಕಮಿಷನ್ ಅದರ ಬಗ್ಗೆ ಸರ್ವೇ ಮಾಡಬೇಕೆಂದು ಸರ್ಕಾರ ಅವರಿಗೆ ಒಂದು ಪತ್ರ ಬರೆದಿತ್ತು ಅದರ ನಂತರ ಎಸ್‌ಸಿ ಕಮಿಷನ್ ರದ್ದಾಯಿತು ನಂತರ ಎಸ್‌ಸಿ ಕಮಿಷನ್ ಅನ್ನು ಸರ್ಕಾರ ಹೊಸದಾಗಿ ನೇಮಕ ಮಾಡಿದೆ ಇದನ್ನು ಮಾನ್ಯ ಹಿರಿಯ ಸದಸ್ಯರ ಗಮನಕ್ಕೆ ತರುತ್ತೇನೆ ಇದನ್ನು ಎಸ್‌ಸಿ ಕಮಿಷನ್ ಮುಖಾಂತರ ಸರ್ವೇ ಮಾಡುವುದು ಕಷ್ಟವಾಗುತ್ತದೆ ಅದಕ್ಕೋಸ್ಕರ, ಏಪ್ರಿಲ್ ತಿಂಗಳಿನಲ್ಲಿ ಇದಕ್ಕೆ 10-15 ಲಕ್ಷ ರೂಪಾಯಿ ಖರ್ಚಾಗಬಹುದು, ಇದನ್ನು ಸರ್ವೇ ಮಾಡಿಸುತ್ತೇವೆ ಸರ್ವೇ ಮಾಡಿದ ನಂತರ ಇವರನ್ನು ಯಾವುದಕ್ಕೆ ಸೇರಿಸಬೇಕು ಯಾವುದರಡಿ ಸೇರಿಸಬಾರದೆಂಬುದನ್ನು ನಿರ್ಧಾರ ಮಾಡುವುದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ ಬಹಳವೆಂದರೆ ಸರ್ಕಾರದಿಂದ ಶಿಫಾರಸ್ಸು ಮಾಡಿ ಕಳುಹಿಸಬಹುದು ಅತಿ ಶೀಘ್ರವೆ ಮೂರು ತಿಂಗಳಲ್ಲಿ ಒಂದು ವರದಿಯನ್ನು ಇದರ ಬಗ್ಗೆ ತರಿಸಿ, ಸಂಪುಟದಲ್ಲಿ ಚರ್ಚೆ ಮಾಡಿ, ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಈ ಸಮಾಜದಲ್ಲಿ 2-3 ಲಕ್ಷ ಜನಸಂಖ್ಯೆ ಇದ್ದರೆ ನಿರಕ್ಷರತೆ 76% ಇದೆ, ಸರ್ಕಾರ ಸಾಕಷ್ಟು ಪ್ರಯತ್ನ ಮಾಡುತ್ತಿದೆ, ಇಲ್ಲವೆಂದಲ್ಲ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎರಡನೆಯದಾಗಿ, ಅವರ ಸುಗ್ಗಿ ಕುಣಿತ, ಪದ, ಗೀತಗಳ ಬಗ್ಗೆ ಸಾಕಷ್ಟು ಆಸಕ್ತಿಯನ್ನು ಈ ಸಮಾಜದವರು ತೆಗೆದುಕೊಂಡು, ಸಾಕಷ್ಟು ಆ ಕಲೆ ಪ್ರದರ್ಶನವನ್ನು ಮಾಡಿದ್ದು ಶ್ರೀಮತಿ ಸುಕನಿಗೌಡರವರಿಗೆ ಜನಪದ ಕೋಗಿಲೆ ಎಂದು ಸಹ ಸರ್ಕಾರದಿಂದ ಪ್ರಶಸ್ತಿ ಸಿಕ್ಕಿದೆ ಇಂತಹವರಿಗೆ ಎನ್‌ಕರೇಜ್ ಮಾಡುವುದು ಬಹಳ ಅವಶ್ಯಕತೆ ಇದೆ ನಾನು ಪ್ರಶ್ನೆ ಕೇಳಿಲ್ಲ, ಮತ್ತೊಂದು ವಿಷಯ, ಗೌಳಿ ಮತ್ತು ಕುರಬಿ ಸಮಾಜದ ಬಗ್ಗೆಯು ಸಹ ಉತ್ತರ ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ ಮಾನ್ಯ ಅಧ್ಯಕ್ಷರೆ, ಈ ಹಾಲಕ್ಕಿ ಒಕ್ಕಲಿಗ ಸಮಾಜ, ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಬಹಳ ಕಷ್ಟದ ಜೀವನವನ್ನು ನಡೆಸುತ್ತಿರುವಂತಹವರು ಹೆಚ್ಚು ಬಡವರು ಅತೀ ಬಡವರೆ ಈ ಸಮಾಜದಲ್ಲಿರುವಂತಹವರು, ಶಿಕ್ಷಣ ಹೊಂದಿದವರು ಬಹಳ ಕಡಿಮೆ ನನ್ನ ಅಂಕೋಲ ತಾಲ್ಲೂಕಿನಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ, ಕಾರವಾರ, ಕುಮಟ ಮತ್ತು ಹೊನ್ನಾವರದ ಕಡೆ ಸ್ವಲ್ಪಮಟ್ಟಿನ ಜನರು ವಾಸ ಮಾಡುತ್ತಿದ್ದಾರೆ ಇವರ ಬಗ್ಗೆ ನಿಮಗೆ ತಕ್ಷಣ ನೆನಪಾಗಬೇಕೆಂದರೆ, ಕುತ್ತಿಗೆಗೆ ಬಹಳ ಕರಿಮಣಿಯ ಸರವನ್ನು ಹಾಕಿಕೊಂಡಿರುತ್ತಾರ ಜಾನಪದ ಕಲೆಯಲ್ಲಿ ಎತ್ತಿದ ಕೈ, ಸುಕನಿಗೌಡರ ಹೆಸರನ್ನು ಹೇಳಿದರು ಕಲೆ, ಸಾಹಿತ್ಯದಲ್ಲಿ ಇವರಿಗೆ ಅದ್ಭುತವಾದ ಸಾಂಸ್ಕೃತಿಕ ಶ್ರೀಮಂತಿಕೆ ಇದೆ

ಇವರು, ಹಳ್ಳಿಯ ಗಿಡಮೂಲಿಕೆ, ವನಸ್ಪತಿ, ಆಯುರ್ವೇದಿಕ್ ಔಷಧಿಗಳನ್ನು ಕೇವಲ ಮನುಷ್ಯರಿಗೆ ಮಾತ್ರವಲ್ಲ ಪಶುಗಳಿಗು ಕೂಡ ಯಾವ ಡಾಕ್ಟರೂ ಕೊಡುವುದಕ್ಕಾಗುವುದಿಲ್ಲ, ಅಷ್ಟು ಒಳ್ಳೊಳ್ಳ ಔಷಧಿಗಳನ್ನು ಇವರು ಕೊಡುತ್ತಾರೆ ಅಂದರೆ ಅವರೆಂತಹ ಪ್ರತಿಭಾವಂತರಿದ್ದಾರೆ! ಅಂತಹ ಒಂದು ಶ್ರೀಮಂತಿಕೆ ಅವರಲ್ಲಿದೆ ಹಾಗಾಗಿ ಇವರು ಬಹಳ ಕಷ್ಟದ ಜೀವನವನ್ನು ನಡೆಸುತ್ತಿದ್ದಾರೆ, ಕಾಡಿನಲ್ಲಿದ್ದಾರೆ ಹೇಗೆ ಸಿದ್ದಿಗಳು, ಕುಣಬಿಗಳು, ಗೌಳಿಗಳು ಕಾಡಿನಲ್ಲಿದ್ದು ಜೀವನವನ್ನು ನಡೆಸುತ್ತಿದ್ದಾರೊ ಅದೇರೀತಿ ಇವರೂ ಕಾಡಿನಲ್ಲಿದ್ದಾರೆ, ಇವರು ಕೃಷಿಕರಿದ್ದಾರೆ ಕೃಷಿಯಲ್ಲಿ ಕೂಡ ಬಹಳ ಚೆನ್ನಾಗಿ ಕೆಲಸವನ್ನು ಮಾಡುತ್ತಾರೆ ಆದರೆ ಈ ಸಮಾಜದಲ್ಲಿ ಸಾರಾಯಿ ತರಹದ ಪಿಡುಗುಗಳು ಇವತ್ತು ಎಲ್ಲಾ ಕಡೆ ಆವರಿಸಿರುವಂತೆ, ಎಲ್ಲಾ ಕಡೆ ತೊಂದರೆಯಾಗಿದೆ, ಈಗ ಸಾರಾಯಿ ನಿಷೇಧದಿಂದ ಒಳ್ಳೆಯದಾಗಬಹುದೆಂಬುದಿದೆ ಇವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ತಾವು ಉತ್ತರದಲ್ಲಿ ಕುಲಶಾಸ್ತ್ರವನ್ನು ಮುಂದಿನ ತಿಂಗಳು ಅಧ್ಯಯನ ಮಾಡಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದೀರಿ `ದಯವಿಟ್ಟು, ಇಲ್ಲಿ ಹಾಲಕ್ಕಿ ಸಮಾಜದ ಜೊತೆಯಲ್ಲಿ ನಮ್ಮ ಜಿಲ್ಲೆಯ ಉಳಿದ ಆ ಕುಣಬಿ, ಗೌಳಿ ಸಮಾಜವೇನಿದೆ, ಅವುಗಳ ಬಗ್ಗೆಯೂ ಅಧ್ಯಯನ ಮಾಡಿಸುವುದಕ್ಕೆ ಈ ಸಂದರ್ಭದಲ್ಲಿ ಮಾನ್ಯ ಸಚಿವರು ಪರಿಗಣಿಸಬೇಕು ಮತ್ತೆ ಅವರಿಗೆ ಸಾಮಾಜಿಕ ಭದ್ರತೆಯನ್ನು ಮತ್ತು ಸಮಾಜದಲ್ಲಿ ಒಂದು ಗೌರವದ ಸ್ಥಾನಮಾನ ಸಿಗುವುದಕ್ಕೆ ಬೇಕಾದಂತಹ ಯೋಜನೆಯನ್ನು ಸಹ ಇಲಾಖೆ ವತಿಯಿಂದ ಹಾಕಿಕೊಳ್ಳಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ

ಶ್ರೀ ಬಾಲಚಂದ್ರ ಎಲ್ ಜಾರಕಿಹೊಳಿ ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಆರ್ ವಿ ದೇಶಪಾಂಡೆ ಮತ್ತು ವಿಶ್ವೇಶ್ವರ ಹೆಗ್ಡೆಯವರು ಕುಣಬಿ ಮತ್ತು ಗೌಳಿ ಸಮಾಜವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಹೇಳಿದರು, ನಾನು ಸ್ಪಷ್ಟವಾಗಿ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದೇನೆ ಏಪ್ರಿಲ್ ತಿಂಗಳಿನಲ್ಲಿ ಯಾವುದರಿಂದ ಸರ್ವೇ ಮಾಡಿಸಬೇಕೆಂದು ನಿರ್ಧಾರ ತೆಗೆದುಕೊಳ್ಳುತ್ತೇವೆ, ಮೂರು ತಿಂಗಳಲ್ಲಿ ಸರ್ವೇ ಮಾಡುತ್ತೇವೆ, ಸರ್ವೇ ವರದಿ ಬಂದ ನಂತರ ಇದನ್ನು ಎಲ್ಲಿಗೆ ಸೇರಿಸಬೇಕು, ಏನು ಮಾಡಬೇಕು ಎಂದು ಸಂಪುಟದಲ್ಲಿ ಚರ್ಚೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಗುರುಪಾದಪ್ಪ ನಾಗಮಾರಪಲ್ಲಿಯವರು ಬಂದಿಲ್ಲ, ಶ್ರೀಮತಿ ಟಿ ಭಾಗೀರಥಿಯವರೆ, ಪ್ರಶ್ನೆಯನ್ನು ಕೇಳಿ

ಹೊಸಹಳ್ಳಿ ಆಸ್ಪತ್ರೆ ಸುಧಾರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 228(1323)
ಸದಸ್ಯರ ಹೆಸರು ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು)
ಉತ್ತರಿಸುವ ಸಚಿವರು ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಳ್ಳಾರಿ ಜಿಲ್ಲೆಯ ಕೊಟ್ಟೂರು ಮತಕ್ಷೇತ್ರದಲ್ಲಿ ಬರುವ ಹೊಸಹಳ್ಳಿ (PHC) ಆಸ್ಪತ್ರೆ ಕಟ್ಟಡವು ತುಂಬಾ ಶಿಥಿಲಗೊಂಡಿದ್ದು, ಅಪಾಯಕರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಯಾವಾಗ ಅಭಿವೃದ್ಧಿ ಪಡಿಸಲಾಗುವುದು

ಈ ಆಸ್ಪತ್ರೆ ಕಟ್ಟಡವನ್ನು ದುರಸ್ಥಿಗೊಳಿಸಲು ಜಿಲ್ಲಾ ಪಂಚಾಯತ್ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ ಈಗಾಗಲೇ ರೂ 4 ಲಕ್ಷ ಅನುದಾನ ಬಿಡುಗಡೆಯಾಗಿದ್ದು ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ

ಇ) ಈ ಕ್ಷೇತ್ರದ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ

ಈ) ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು

ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ವೈದ್ಯಾಧಿಕಾರಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು ನೇಮಕಾತಿ ಆದೇಶ ಹೊರಡಿಸುವ ಸಮಯದಲ್ಲಿ ಕೊಟ್ಟೂರು ಮತ ಕ್ಷೇತ್ರದಲ್ಲಿ ಖಾಲಿ ಇರುವ 4 ವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿಮಾಡಲು ಪರಿಗಣಿಸಲಾಗುವುದು

ವಿಶೇಷ ನೇರ ನೇಮಕಾತಿ ಸಮಿತಿಯಿಂದ 2807 ವಿವಿಧ ವೃಂದದ ಹುದ್ದೆಗಳನ್ನು ನೇಮಕ ಮಾಡಲು ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ ಶೀಘ್ರದಲ್ಲಿಯೇ ನೇಮಕಾತಿ ಆದೇಶವನ್ನು ಹೊರಡಿಸಲಾಗುವುದು ಆದ್ಯತೆ ಮೇಲೆ ಖಾಲಿ ಹುದ್ದೆಗಳನ್ನು ತುಂಬಲಾಗುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂ 1323

ಶ್ರೀಮತಿ ಟಿ ಭಾಗೀರಥಿ ಸರ್, ಉತ್ತರವನ್ನು ಒದಗಿಸಿದ್ದೀರಿ, ಹಾಗೇ ತಮ್ಮ ಉತ್ತರ ಕೂಡ ಸರಿಯಾಗಿದೆ ತಮ್ಮ ಗಮನಕ್ಕೆ ಈ ವಿಷಯ ತಂದ ಮೇಲೆ ಕೆಲಸ

ಪ್ರಾರಂಭ ಮಾಡಿಸಿದ್ದಕ್ಕೆ ತಮಗೆ ಧನ್ಯವಾದಗಳು, ಆದರೆ ಕೇವಲ 4 ದಿವಸಗಳ ಹಿಂದಿನಿಂದ ಈ ಕೆಲಸ ಪ್ರಾರಂಭವಾಗಿದೆ ಹೊಸಹಳ್ಳಿ ಎಂಬುದು ನನ್ನ ಕ್ಷೇತ್ರದ ಅತ್ಯಂತ ದೊಡ್ಡ ಹೋಬಳಿ ಇಲ್ಲಿರುವ ಆಸ್ಪತ್ರೆಯಲ್ಲಿ ಅತ್ಯುತ್ತಮ ವೈದ್ಯರು ಕೂಡ ಕೆಲಸ ನಿರ್ವಹಿಸುತ್ತಿದ್ದಾರೆ ಈ ಸಿವಿಲ್ ಕಾಮಗಾರಿಯ ಜೊತೆಗೆ ಕರೆಂಟ್ ಸಮಸ್ಯೆಯನ್ನು ಬಹಳ ಮಾಡಿಕೊಂಡಿದ್ದಾರೆ, ಇವತ್ತಿನವರೆಗೆ ಅದು ರೆಗ್ಯುಲರ್ ಆಗಿಲ್ಲ ಪದೇ ಪದೇ ವಿಜಿಲೆನ್ಸ್‌ನವರು ಅಲ್ಲಿ ಬಂದು ಕರೆಂಟ್ ಅನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ ಕಳೆದ ವಾರ ಕೂಡ ಅಲ್ಲಿ ಈ ಕೆಲಸವನ್ನು ಮಾಡಿದ್ದಾರೆ ಆಗ ಅಲ್ಲಿರುವ ಔಷಧಿಗಳು ಹಾಳಾಗುವುದರ ಜೊತೆಗೆ ಅಲ್ಲಿ ಎಲ್ಲಾ ಕೆಲಸಗಳು ನಿಂತು ಹೋಗುವುದು ತಮ್ಮ ಗಮನಕ್ಕೆ ಬರುತ್ತದೆ ದಯವಿಟ್ಟು ಈ ಸಿವಿಲ್ ಕೆಲಸದ ಜೊತೆಗೆ ಈ ಕೆಲಸವನ್ನು ಕೂಡ ನಮಗೆ ಮಾಡಿಕೊಡಬೇಕು ಹಾಗೆ ಸಿಬ್ಬಂದಿ ಕೊರತೆಯ ಬಗ್ಗೆ ಹೇಳಿದ್ದೀರಿ, ಇಲ್ಲಿ ಇಬ್ಬರು ಸ್ಟಾಫ್ ನರ್ಸ್ ಮಾತ್ರ ಇದ್ದು ಡೆಪ್ಯುಟೇಷನ್ ಮೇಲೆ ಇದ್ದಾರೆ ಇಲ್ಲಿ ಒಬ್ಬರನ್ನು ರೆಗ್ಯುಲರ್ ನರ್ಸನ್ನು ಹಾಕಿಕೊಟ್ಟರೆ ಬಹಳ ಒಳ್ಳೆಯದು ತಾವೂ ತುಂಬುತ್ತೇವೆಂದು ಹೇಳಿದ್ದೀರಿ ಇಲ್ಲಿ ಹಳೆಯ ಮತ್ತು ದಿನಾಲೂ ಬರತಕ್ಕಂತಹ ಸುಮಾರು 100 ರೋಗಿಗಳು ಅಡ್ಮಿಟ್ ಆಗುತ್ತಾರೆ ನಮಗೆ ಇಲ್ಲಿ ಬರುವ ಸಮಸ್ಯೆ ಎಂದರೆ, ಇದು ನ್ಯಾಷನಲ್ ಹೈವೇ ಪಕ್ಕದಲ್ಲಿರುವುದಾಗಿದೆ ಚಿತ್ರದುರ್ಗ – ಕೂಡ್ಲಗಿ ನಡುವೆ ಇದೊಂದೇ ಆಸ್ಪತ್ರೆ ನಮಗಿರುವುದು ಏನಿಲ್ಲವೆಂದರೂ ಪ್ರತಿದಿವಸ 10 ಅಪಘಾತಗಳನ್ನು ನಾವು ಇಲ್ಲಿ ನೋಡುತ್ತಿದ್ದೇವೆ ದಯಮಾಡಿ, ಇಲ್ಲಿಗೆ ಒಂದು ವಾಹನವನ್ನು ಒದಗಿಸಿಕೊಟ್ಟರೆ, ಈ ಆಸ್ಪತ್ರೆ ಅತ್ಯುತ್ತಮವಾದ ಆಸ್ಪತ್ರೆಯಾಗುತ್ತದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಆರ್ ಅಶೋಕ್ ಅಧ್ಯಕ್ಷರೇ, ಆ ಕಟ್ಟಡದ ದುರಸ್ತಿಗೋಸ್ಕರ ಈಗಾಗಲೆ 4 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಕಾಮಗಾರಿ ನಡೆಯುತ್ತಿದೆ ರಾಜ್ಯದಲ್ಲಿ ಈ ತರಹ ಹಲವಾರು ಸಮಸ್ಯೆಗಳನ್ನು ನೋಡುತ್ತಿದ್ದೇವೆ PHC, CSC ಇರಬಹುದು, ತಾಲ್ಲೂಕು ಆಸ್ಪತ್ರೆಗಳು ಬಹಳ ವರ್ಷವಾದರೂ ಅದಕ್ಕೆ ಪ್ರತಿವರ್ಷ ಮೆಂಟೇನೆನ್ಸ್ ಸರಿಯಾಗಿ ಮಾಡದಿರುವುದು, ಪ್ರತಿವರ್ಷ ನೂರಾರು ಅರ್ಜಿಗಳು ಇದನ್ನು ರಿಪೇರಿ ಮಾಡಬೇಕೆಂದು ಬಂದಿರುವುದು ನಮ್ಮ ಗಮನಕ್ಕೆ ಬಂದಿದೆ ಈ ದೃಷ್ಟಿಯಿಂದ ಇವತ್ತು ಮಾನ್ಯ ಸದಸ್ಯರಾದಂತಹ ಶ್ರೀಮತಿ ಭಾಗೀರಥಿಯವರು ಸಹ ಆ ದುರಸ್ತಿ ಬಗ್ಗೆ ಹೇಳಿದ್ದಾರೆ, ಈಗಾಗಲೇ ಆ ಬಗ್ಗೆ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ ಆ ದೃಷ್ಟಿಯಿಂದ ಇನ್ನುಮುಂದೆ ರಾಜ್ಯದ ಎಲ್ಲಾ ನಮ್ಮ ಆಸ್ಪತ್ರೆಗಳಿಗೆ ದುರಸ್ತಿಗೆ ಸಂಬಂಧಪಟ್ಟಂತೆ ಈ ವರ್ಷ ಅವರಿಗೆ ನಾವು ಸುಮಾರು 80 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನ

ಮಾಡಿ ಹಣ ಬಿಡುಗಡೆ ಮಾಡುತ್ತಿದ್ದೇವೆ ಅದಕ್ಕೆ ರೂಲ್ಸ್ ಮಾಡಿದ್ದೇವೆ ಪ್ರತಿ ಉಪ ಕೇಂದ್ರಕ್ಕೆ 10,000 ರೂಪಾಯಿಗಳನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ ಪ್ರತಿ PHC ಗಳಿಗೆ 75,000 ರೂಪಾಯಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ ಪ್ರತಿ CHCಗೆ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ ಜಿಲ್ಲಾ ಮಟ್ಟಕ್ಕೆ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ ನಮ್ಮ ಎಲ್ಲ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಸಣ್ಣ ಪುಟ್ಟ ರಿಪೇರಿ ಇರಬಹುದು, maintenance ಇರಬಹುದು, electrical ಸಮಸ್ಯೆ ಬಂದಾಗ ಸಣ್ಣ ಪುಟ್ಟ ರಿಪೇರಿ ಇರಬಹುದು, doors ಆಗಿರಬಹುದು, ಕಿಟಕಿ ಬಾಗಿಲುಗಳು ಹಾಕುವುದು ಇರಬಹುದು ಅದನ್ನು ನಮಗೆ ಕೇಳದೆ ಅಲ್ಲಿಯೇ ಸ್ಥಳೀಯವಾಗಿ ಅವರೇ ರಿಪೇರಿ ಮಾಡಿಸಿಕೊಳ್ಳಬೇಕು ಅದಕ್ಕೆ ಬೇಕಾದಂತಹ ಹಣವನ್ನು ನಾನು ಈಗಾಗಲೇ ಬಿಡುಗಡೆ ಮಾಡಿದ್ದೇನೆ ಅಲ್ಲಿ ಬರತಕ್ಕಂತಹ ಆರೋಗ್ಯ ಸುರಕ್ಷಾ ಸಮಿತಿಗಳು ಏನಿವೆ ಅದರ ಮುಖಾಂತರ ಇವರು ಹಣ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ ಅದರ ಜೊತೆಗೆ ತಾವು ಹೊಸಹಳ್ಳಿ ಆಸ್ಪತ್ರೆಗೆ ನೇಮಕಾತಿ ಮಾಡುವ ವಿಷಯವಾಗಿ ಕೇಳಿದ್ದೀರಿ, ನಿಮ್ಮ ಕ್ಷೇತ್ರಕ್ಕೆ ಒಟ್ಟು 18 ವೈದ್ಯರ ಹುದ್ದೆಗಳು ಮಂಜೂರಾಗಿವೆ ಅದರಲ್ಲಿ 14 ವೈದ್ಯರು ಇದ್ದಾರೆ, ನಾಲ್ಕು shortage ಇದೆ ಈಗಾಗಲೇ ನಾವು ನೇರ ನೇಮಕಾತಿ ಅಡಿಯಲ್ಲಿ 250 doctorಗಳನ್ನು ನೇಮಕಾತಿ ಮಾಡಿಕೊಂಡಿದ್ದೇವೆ ಅವರನ್ನು posting ಮಾಡುವ ಸಂದರ್ಭದಲ್ಲಿ ನಿಮ್ಮ vacancy ಏನು ಖಾಲಿ ಇದೆ ಆ vacancy ಯನ್ನು ನಾವು fill up ಮಾಡುತ್ತೇವೆ ಅದರ ಜೊತೆಗೆ para medical staff ಕೂಡ ನಿಮ್ಮಲ್ಲಿ ಸಮಸ್ಯೆ ಇದೆ ಎಂದು ಹೇಳಿದ್ದೀರಿ ಈಗಾಗಲೇ ರಾಜ್ಯ ಸರ್ಕಾರ 2807 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಅರ್ಜಿಯನ್ನು ಕರೆದಿದ್ದೇವೆ ಅರ್ಜಿಗಳು ಬಂದಿವೆ scrutiny ನಡೆಯುತ್ತಿದೆ scrutiny ಆದ ತಕ್ಷಣ ಖಾಲಿ ಇರುವ ಆ ಎರಡೂ ಹುದ್ದೆಗಳನ್ನು ನೇಮಕಾತಿ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀಮತಿ ಭಾಗೀರಥಿ ಟಿ ಮರುಳಸಿದ್ದನಗೌಡ ಮಾನ್ಯ ಅಧ್ಯಕ್ಷರೆ, ಟ್ರಾಮ ಸೆಂಟರ್‌ಗಳನ್ನು ಇಲ್ಲಿ ಮಾಡಿದರೆ ಒಳ್ಳೆಯದು ಎಂದು ತಮ್ಮ ಗಮನಕ್ಕೆ ತಂದೆ National highway ಪಕ್ಕ ಮತ್ತು ಇಂತಹ ಆಸ್ಪತ್ರೆಗಳ ಪಕ್ಕದಲ್ಲಿ ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ ಕೊಟ್ಟೂರಿನಲ್ಲಿ ಇದರ ಕೆಲಸ ಈಗಾಗಲೇ ಪ್ರಾರಂಭವಾಗಿದೆ 80 ಕಿ ಮಿ ನಡುವೆ ನಮಗೆ ಇದು ಒಂದೇ ಆಸ್ಪತ್ರೆ ಸಿಗುವುದು ದಯಮಾಡಿ ಇಲ್ಲಿ ಕೂಡ ಒಂದು ಟ್ರಾಮ ಸೆಂಟರ್ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತಾ, ಅದರ ಜೊತೆಯಲ್ಲಿ doctors ಮತ್ತು staff ಗಳೆಲ್ಲ

ಏನಿದ್ದಾರೆ, ಇದೆಲ್ಲವನ್ನು ಕೂಡ ಬಳ್ಳಾರಿ ಜಿಲ್ಲಾ ವಿಶೇಷ package ಯೋಜನೆ ಅಡಿಯಲ್ಲಿ ಕಟ್ಟಿರತಕ್ಕಂತಹ ಸಾಕಷ್ಟು ಕಟ್ಟಡಗಳು ಇವೆ ಅಲ್ಲಿ ನಡೆಸಬಹುದು ತಮ್ಮ ಇಲಾಖೆಯ ಆಸ್ತಿ ಎಷ್ಟು ಇದೆ ಎಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ ಆದ್ದರಿಂದ ಇವರಿಗೆ ಸಾಧ್ಯವಾದಷ್ಟು ಅನುಕೂಲವಾಗುವಂತಹ ಕೆಲಸವನ್ನು ತಾವು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, Accident ಆದಂತಹ ಸಂದರ್ಭದಲ್ಲಿ ಅವರಿಗೆ ತಕ್ಷಣ ವೈದ್ಯಕೀಯ ಸೌಲಭ್ಯ ಸಿಗಬೇಕೆನ್ನುವ ದೃಷ್ಟಿಯಿಂದ ಟ್ರಾಮ ಸೆಂಟರ್‌ಗಳನ್ನು ಮಾಡುವುದಕ್ಕೆ ಈಗಾಗಲೇ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ ಒಂದೊಂದು ಟ್ರಾಮ ಸೆಂಟರ್‌ಗೆ ನಾವು 25 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೇವೆ, ಆ ಜಾಗಗಳನ್ನು identify ಮಾಡಿದ್ದೇವೆ ಆ ಸಂದರ್ಭದಲ್ಲಿ ಯಾವುದಾದರೂ ಬಿಟ್ಟು ಹೋಗಿದ್ದರೆ, ಅಥವಾ ಏನಾದರೂ ಸಮಸ್ಯೆ ಇದ್ದರೆ, ಆ ಟ್ರಾಮ್ ಸೆಂಟರ್‌ನ್ನು ನಿಮ್ಮ area ಗೆ shift ಮಾಡುತ್ತೇವೆ National highway ಇರುವುದರಿಂದ ಅಲ್ಲಿಯೂ ಅವಶ್ಯಕತೆ ಇದೆ ಎಂದು ನಮ್ಮ ಗಮನಕ್ಕೆ ಬಂದಿದೆ ಅಲ್ಲಿಯೂ ಟ್ರಾಮ ಸೆಂಟರನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಈಗಾಗಲೇ ರಾಜ್ಯ ಸರ್ಕಾರ ಸುಮಾರು 50 ambulance ಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಅದಕ್ಕೆ ಬೇಕಾದಂತಹ ಟೆಂಡರನ್ನು ಕೂಡ ಕರೆದಿದ್ದೇವೆ ಎರಡು ತಿಂಗಳೊಳಗೆ ಆ process ಎಲ್ಲ ಮುಗಿಯಬಹುದು ರೋಗಿಗಳ ಸಂಖ್ಯೆ ಅನುಸಾರ ನೋಡಿಕೊಂಡು ನಾನು Ambulance ಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಸುಮಾರು ಆಸ್ಪತ್ರೆಗಳಲ್ಲಿ DG ಸೆಟ್ ಇಲ್ಲ Minor OT ಮತ್ತು OT ಇವೆಲ್ಲಾ ಇರತಕ್ಕಂತಹ ಆಸ್ಪತ್ರೆಗಳಲ್ಲಿ ಕೂಡ DG ಸೆಟ್ ಇಲ್ಲ ಈಗ ಟ್ರಾಮ ಸೆಂಟರ್‌ಗಳನ್ನು ಕೊಡುತ್ತಿದ್ದೀರಿ ಅವುಗಳ ಏನಾದರೂ 24 ಗಂಟೆ ವಿದ್ಯುಚ್ಛಕ್ತಿ ಇರುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತೀರೋ ಹೇಗೆ ಎಂದು ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಕೊಟ್ಟೂರಿಗೆ ಈಗಾಗಲೇ ಎರಡು ambulance ಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಸುಮಾರು ರೂರಲ್ ಆಸ್ಪತ್ರೆಗಳಲ್ಲಿ 6–7 ಗಂಟೆ ಸಂಜೆ ನಂತರ ವಿದ್ಯುಚ್ಛಕ್ತಿ ಇರುವುದಿಲ್ಲ, ಆ ಎಲ್ಲಾ ಆಸ್ಪತ್ರೆಗಳಿಗೆ ಕನಿಷ್ಟ DG ಸೆಟ್ ಕೊಡುತ್ತೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ PHC ಗಳನ್ನು ಮಾಡಿದ್ದೀರಿ, CHC ಗಳನ್ನು ಮಾಡಿದ್ದೀರಿ, ಡೀಸೆಲ್ ಜನರೇಟರ್ ಏನಾದರೂ ಹಾಕಿಸಿ ಕೊಟ್ಟು

OTಗಳು ಕೆಲಸ ಮಾಡುವ ಹಾಗೆ ಮಾಡಿ ಟ್ರಾಮ ಸೆಂಟರ್ ಮಾಡಿದ ನಂತರ emergency patient ತೆಗೆದುಕೊಂಡು ಬನ್ನಿ ಎಂದು ಹೇಳಿ, ನಾವು ಅಲ್ಲಿ ರಿಜಿಸ್ಟರ್ ಮಾಡಿಕೊಳ್ಳುವುದು ಅವರು ಮುಂದಿನ ಜನರಲ್ ಆಸ್ಪತ್ರೆಗೆ refer ಮಾಡುವುದು ಈ ರಾಜ್ಯದಲ್ಲಿ ಇಷ್ಟೇ ಕೆಲಸ ಆಗುತ್ತಿರುವುದು ಏನಾದರೂ ಮಾಡಿ ವಿದ್ಯುಚ್ಛಕ್ತಿ ಇಲ್ಲದೇ ಇರುವ ಕಡೆ ಅಥವಾ ರೂರಲ್ ಫೀಡರ್ ಇರತಕ್ಕಂತಹ ಟೌನ್‌ಗಳಲ್ಲಿ ಜನರೇಟರ್‌ಗಳನ್ನು ಹಾಕಿ ಅದನ್ನು maintain ಮಾಡುವುದಕ್ಕೆ ಏನಾದರೂ ಹಣಕಾಸು ಒದಗಿಸುತ್ತೀರಾ?

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೇ, ನಾವು surprise visit ಹೋದಾಗ ಈ ತರಹದ ಸಮಸ್ಯೆಗಳು ನಮ್ಮ ಗಮನಕ್ಕೆ ಕೂಡ ಬಂದಿವೆ ಅದರ ಬಗ್ಗೆ ನಾವು ಈ ವರ್ಷದ ಬಜೆಟ್ ನೋಡಿಕೊಂಡು ಮಾಡಬೇಕೆಂದು ಗಮನದಲ್ಲಿಟ್ಟುಕೊಂಡಿದ್ದೇನೆ ಎಲ್ಲಿ ಈ ತರಹದ ವಿದ್ಯುತ್ ಸಮಸ್ಯೆ ಬಹಳಷ್ಟು ಇವೆ, ಆ ಭಾಗಗಳಲ್ಲಿ ಡೀಸೆಲ್ ಜನರೇಟರ್‌ಗಳನ್ನು ಕೊಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಜಿ ನರಸಿಂಹ ಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಅಧ್ಯಕ್ಷರೆ, ನಮ್ಮ ದೊಡ್ಡಬಳ್ಳಾಪುರದಲ್ಲಿ ಸುಮಾರು ಮೂರು ವರ್ಷಗಳಿಂದ ಸಿಬ್ಬಂದಿ ಕೊರತೆ ಇದೆ ಒಬ್ಬರೇ doctor ಅಲ್ಲಿ ನೋಡುತ್ತಿದ್ದಾರೆ ಸುಮಾರು 800 ರಿಂದ 900 out patient ಬರುತ್ತಿದ್ದಾರೆ ಆದಷ್ಟು ಬೇಗ ಅಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಸಿಬ್ಬಂದಿ ಕೊರತೆ ಆಗಿದೆ ಎಂದು ನಾವು ಈಗಾಗಲೇ ಸುಮಾರು 500 ಜನ doctor ಗಳಿಗೆ ನೇಮಕಾತಿ ಸಂದರ್ಶನ ನಡೆಸಿದ್ದೇವೆ 250 ಜನರಿಗೆ ನೇಮಕಾತಿ ಆದೇಶವನ್ನು ಸಹ ಕೊಟ್ಟಿದ್ದೇವೆ ದೊಡ್ಡಬಳ್ಳಾಪುರ ಬಗ್ಗೆ ತಾವು ಕಳೆದ ಅಧಿವೇಶನದಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದಿರಿ 250 ಜನರ ನೇಮಕಾತಿ ಏನಾಗಿದೆ ಅದರಲ್ಲಿ ನಾವು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಎಂ ಡಿ ಲಕ್ಷ್ಮೀನಾರಾಯಣ ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ರಾತ್ರಿ ವೇಳೆಯಲ್ಲಿ doctorಗಳೇ ಇರುವುದಿಲ್ಲ ನಾಲ್ಕು ಗಂಟೆಗೆ ಹೊರಟು ಹೋಗುತ್ತಾರೆ ಏನಾದರೂ emergency ಇದ್ದರೆ ಅವರಿಗೆ treat ಮಾಡುವುದಕ್ಕೆ ಯಾರೂ ಸಿಗುವುದಿಲ್ಲ ಆದ್ದರಿಂದ ಮಾನ್ಯ ಸಚಿವರು ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಒಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ ಸಾಯಂಕಾಲದ ಸಮಯದಲ್ಲಿ 4 30 ಆದ ನಂತರ 5 ಗಂಟೆಯಿಂದ 8 ಗಂಟೆಯವರೆಗೆ ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡಿದರೆ ಅವರಿಗೆ ವೇತನ ಕೊಡತಕ್ಕಂದಾದ್ದು, ಅಕಸ್ಮಾತ್ ಅವರು ಬರಲಿಲ್ಲವೆಂದರೆ, ಬೇರೆ private ನವರು ನಮ್ಮ ಆಸ್ಪತ್ರೆಗೆ ಬಂದು treatment ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಒಂದು ಕ್ರಾಂತಿಕಾರಕವಾದ ಯೋಜನೆಯನ್ನು ನಮ್ಮ ಮಾನ್ಯ ಉಪ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ ಆದ್ದರಿಂದ ಇನ್ನು ಮುಂದೆ ಸಂಜೆ 8 ಗಂಟೆಯವರೆಗೆ ನಮ್ಮ ಆಸ್ಪತ್ರೆಗಳು ಕೆಲಸ ಮಾಡುತ್ತವೆ

ಶ್ರೀ ಎಸ್ ಎಸ್ ಪಾಟೀಲ್ ತಾವು ರಾತ್ರಿ 8 ಗಂಟೆಯವರೆಗೆ ಇರುತ್ತಾರೆಂದು ಹೇಳುತ್ತೀರಿ 12 00 ಗಂಟೆ ಮೇಲೆ ಹೀಗಾದರೆ ಏನು ಮಾಡುವುದು?

ಶ್ರೀ ಜೆ ಸಿ ಮಾಧುಸ್ವಾಮಿ ಸರ್ಕಾರ ಕೊಟ್ಟಿದೆ ಎಂದು ಹೇಳಬೇಕು, ಇಲ್ಲ ನಾವು ಕೊಟ್ಟಿದ್ದೇವೆಂದು ಹೇಳಬೇಕು ಮಾತು ಮಾತಿಗೆ ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆಂದರೆ ಅವರೇನು ಅವರ ಸ್ವಂತದ್ದು ಕೊಟ್ಟಿದ್ದಾರಾ? Are you not responsible for the budget proposals?

ಅಧ್ಯಕ್ಷರು ಎಲ್ಲ ಹೀಗೆ ಎದ್ದು ನಿಂತು ಬಿಟ್ಟರೆ ಹೇಗೆ? ಗ್ರಾಮೀಣ ಆಸ್ಪತ್ರೆಗಳ ಬಗ್ಗೆ ಏನೋ ಹೆಣ್ಣುಮಗಳು ಪ್ರಶ್ನೆ ಕೇಳಿದ್ದಾರೆಂದು ಎರಡು ಮೂರು ಜನರಿಗೆ ಅವಕಾಶ ಕೊಟ್ಟರೆ ಎಲ್ಲ ಎದ್ದು ನಿಂತರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ ನಿಮ್ಮ ಇಲಾಖೆಯ ಡಿಮಾಂಡ್ಸ್‌ನ್ನು ನೀವು place ಮಾಡಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ರಾಜ್ಯ ಬಜೆಟ್ ಎಂದರೆ ಯಡಿಯೂರಪ್ಪನವರ ಬಜೆಟ್ ಆಗುತ್ತದಾ ಅದು? ಉಪ ಮುಖ್ಯ ಮಂತ್ರಿಗಳ ಬಜೆಟ್ ಆಗುತ್ತದಾ? ರಾಜ್ಯದ ಬಜೆಟ್ ಅದು ಇವರ ಮಾತಿಗೆ ಏನಾದರೂ ಅರ್ಥ ಇದೆಯಾ?

ಶ್ರೀ ಆರ್ ಅಶೋಕ್ ತಾವು ಅದನ್ನು ತಪ್ಪು ಅರ್ಥ ಮಾಡಿಕೊಳ್ಳಬೇಡಿ ನಮಗೆ ಒಂದು ಹೊಸ ಯೋಜನೆ ಮಾಡಿಕೊಡಬೇಕೆಂದು ಮಾನ್ಯ ಅರ್ಥಸಚಿವರಿಗೆ ವಿನಂತಿ ಮಾಡಿಕೊಂಡಿದ್ದೆವು ಅದನ್ನು ಅವರು ಮಾಡಿ ಕೊಟ್ಟಿದ್ದಾರೆ ಅದಕ್ಕಾಗಿ ಅವರ ಹೆಸರು ಹೇಳಿದೆ ಹೊರತು ಇದು ಆರೋಗ್ಯ ಇಲಾಖೆಯ ಬಜೆಟ್

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೇ, ಸಂಸದೀಯ ಭಾಷೆ ಬೇರೆ ಸಾರ್ವಜನಿಕ ಭಾಷೆ ಬೇರೆ ಸಂಸದೀಯ ಕಲಾಪಗಳನ್ನು ನಡೆಸುವಾಗ ನಾವು

ಬಹಳ ಜವಾಬ್ದಾರಿಯುತವಾಗಿ ಮಾತನಾಡಬೇಕಾಗುತ್ತದೆ ಇದು ಪ್ರಜಾಸತ್ತಾತ್ಮಕವಾದ ವ್ಯವಸ್ಥೆ ವ್ಯಕ್ತಿಗಳ ವೈಭವೀಕರಣ ಇಲ್ಲಿ ಮಾಡಬಾರದು Cabinet ಅದಕ್ಕೆ responsible ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ ಅದಕ್ಕೆ ಕೀರ್ತಿ ಬರುತ್ತದೆ ಮಾನ್ಯ ಮಾಧುಸ್ವಾಮಿಯವರ ಆಕ್ಷೇಪಣೆ ಏನೆಂದರೆ ಸಂಸದೀಯ ಭಾಷೆಯಲ್ಲಿ ಮಾತನಾಡಿ ಎಂದು ಅವರು ಹೇಳುತ್ತಿದ್ದಾರೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಅವರು ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ 8 ಗಂಟೆಯವರೆಗೆ ಇರುತ್ತಾರೆಂದು ನೀವು ಹೇಳಿದ್ದೀರಿ ರಾತ್ರಿ 8 ಗಂಟೆ ಮೇಲೆ ಏನಾದರೂ ಆದರೆ ಏನು ಮಾಡುವುದು? ಅದಕ್ಕೇ ನಾನು ತಮಗೆ ಕೇಳುವುದು, ಬೆಳಗಾಗುವವರೆಗೆ ಶಾಶ್ವತವಾಗಿ ಒಬ್ಬರು doctor ಇರುವಂತಹ ವ್ಯವಸ್ಥೆ ಮಾಡಬೇಕು ಹಳ್ಳಿಗಾಡಿನಲ್ಲಿ ಬಹಳ ತೊಂದರೆ ಇದೆ 8 ಗಂಟೆಯವರೆಗೆ ಇದ್ದರೆ ಏನೂ ಉಪಯೋಗವಾಗುವುದಿಲ್ಲ Doctor ಈಗ 8 ಗಂಟೆಯವರೆಗೆ ಇರುತ್ತಾರೆ

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ(ಬೆಳ್ಳಾವೆ) ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಆಸ್ಪತ್ರೆಗಳಿವೆ ಅಲ್ಲೆಲ್ಲ ಬಹುತೇಕ ಸುಸಜ್ಜಿತವಾದ quarters ಗಳು ಇವೆ ಒಬ್ಬ Doctor ಆಗಲಿ ಇನ್ನೊಬ್ಬರಾಗಲಿ ಯಾರೂ ಅಲ್ಲಿ ವಾಸ ಮಾಡುವುದಿಲ್ಲ ಇವರು KCSR ಪ್ರಕಾರ ಕೇಂದ್ರ ಸ್ಥಾನದಲ್ಲಿ ವಾಸ ಇರಬೇಕೆಂದು ನಿಯಮ ಇದೆ ಆ ನಿಯಮ ಜಾರಿ ಮಾಡಿ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿ ಅಲ್ಲಿ ವಾಸ ಮಾಡುವುದಕ್ಕೆ ಹೇಳಿ Quartersಗಳನ್ನು ಕಟ್ಟಿ buildingಗಳು ಹಾಳಾಗುತ್ತವೆ ಇದರಿಂದ ಜನರಿಗೂ ಅನಾನುಕೂಲವಾಗುತ್ತದೆ

ಅಲ್ಲಿ ಅವರಿಗೆ ವಾಸ ಮಾಡುವುದಕ್ಕೆ ಹೇಳಿ ಆ ರೀತಿ ಮಾಡದಿದ್ದರೆ ಅಲ್ಲಿ ಕಟ್ಟಿರುವ ಕ್ವಾರ್ಟ್ರಸ್ ಬಿಲ್ಡಿಂಗ್‌ಗಳು ಹಾಳಾಗುತ್ತಿರುವುದನ್ನು ತಪ್ಪಿಸಿ ಮತ್ತು ಇದರಿಂದ ಜನರಿಗೂ ಅನಾನುಕೂಲವಾಗುತ್ತದೆ

ಶ್ರೀ ಎಂ ವೈ ಪಾಟೀಲ್ ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಒಂದು ಆಸ್ಪತ್ರೆಯಲ್ಲಿ ಕಳೆದ 20 ವರ್ಷದಿಂದ ಡಾಕ್ಟರ್ ಇಲ್ಲ ಈ ವಿಷಯದಲ್ಲಿ ನಮ್ಮ ರಕ್ಷಣೆಗೆ ನೀವು ಬರಬೇಕು

ಅಧ್ಯಕ್ಷರು ಮಾನ್ಯ ಆರೋಗ್ಯ ಸಚಿವರೇ, ಅನೇಕ ಕಡೆ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ ಡಾಕ್ಟರ್ ಇದ್ದರೂ ಕೂಡ ಅವರು 3 00 ಗಂಟೆಗೇ ಹೊರಟುಹೋಗುತ್ತಾರೆ ಈ ರೀತಿ ಇರುವಾಗ ಏನು ಮಾಡುವುದು ಎಂದು ಬಹಳ ಸದಸ್ಯರ ಪ್ರಶ್ನೆಯಾಗಿದೆ ಇದರ ಬಗ್ಗೆ ನಿಖರವಾಗಿ ಏನಾದರೂ ಹೇಳಿ

ಡಾ ಹೆಚ್ ಸಿ ಮಹದೇವಪ್ಪ (ತಿ ನರಸೀಪುರ) ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿ ಡಾಕ್ಟರ್ ಇಲ್ಲ, ಸಿಬ್ಬಂದಿಗಳು ಇಲ್ಲ ಎಂದು ಹೇಳುವುದು ಹೊಸ

ವಿಷಯವೇನೂ ಅಲ್ಲ ಎಲ್ಲಾ ಕಾಲದಲ್ಲೂ ಈ ರೀತಿಯ ಸಮಸ್ಯೆಗಳು ಇದ್ದೇ ಇದೆ ಈಗ ಮೂಲಭೂತವಾದಂಥ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಏನು ಎತ್ತಿದ್ದಾರೆ, ಆರೋಗ್ಯ ಇಲಾಖೆ ಒಂದು ಪ್ರಾಮುಖ್ಯವಾದಂಥ ಇಲಾಖೆ, ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಪ್ರಾಥಮಿಕ ಆರೋಗ್ಯದ ರಕ್ಷಣೆ ಬಹಳ ಪ್ರಾಮುಖ್ಯವಾದುದು ಈ ಇಲಾಖೆಯನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಆ ಇಲಾಖೆಯಲ್ಲಿ ನಿರ್ದೇಶಕರು ರೆಗ್ಯುಲರ್ ಆಗಿ ಇರುವವರು ಇರಬೇಕು ಆದರೆ ರೆಗ್ಯುಲರ್ ಆಗಿರುವ ನಿರ್ದೇಶಕರು ಇಲ್ಲ Deputy Director is holding the post of Director ಪ್ರೋಗ್ರಾಂ ಆಫೀಸರ್ಸ್ ಇಲ್ಲ ಎಲ್ಲಾ ನ್ಯಾಶನಲ್ ಪ್ರೋಗ್ರಾಂಗಳನ್ನು ಇಂಪ್ಲಿಮೆಂಟ್ ಮಾಡಬೇಕಾಗಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯದ ಸವಲತ್ತುಗಳು ಗ್ರಾಮೀಣ ಪ್ರದೇಶದ ಜನರಿಗೆ ಸಿಗುವುದಕ್ಕೆ ಸರಿಯಾದಂಥ ಆಡಳಿತ ನಿರ್ವಹಣೆ ಮಾಡತಕ್ಕಂಥ ಜಾಗದಲ್ಲಿ ಯಾವ ಯಾವ ಸಿಬ್ಬಂದಿಗಳು ಇರಬೇಕೋ ಅದರ ಕೊರತೆಯಿಂದ ಇದು ಆಗಲಿಲ್ಲ ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಗಮನಹರಿಸಿ, ಡಿ ಪಿ ಹೆಚ್ ಗೆ ಅಂದರೆ Dispensary of Public Health ಗೆ ನೀವು ಇಂಪಾರ್ಟೆನ್ಸ್ ಕೊಡದೇ ಹೋದರೆ ಪ್ರಾಥಮಿಕ ಆರೋಗ್ಯ ರಕ್ಷಣೆ ಇಡೀ ರಾಜ್ಯದಲ್ಲಿ ಹಾಳಾಗುತ್ತದೆ ಡಿ ಪಿ ಹೆಚ್ ಗೆ ನೀವು ಏನೂ ಕೊಡಲಿಲ್ಲವೆಂದರೂ All clinics have become the Administrators for the National Programmes ಅವರು ನ್ಯಾಶನಲ್ ಪ್ರೋಗ್ರಾಂ ಅಂದರೆ ಏನು, ಮಲೇರಿಯಾ ರೋಗ ತಡೆಗಟ್ಟುವುದು ಎಂದರೆ ಏನು ಎಂದು ತಲೆಕೆಡಿಸಿಕೊಳ್ಳುವುದಿಲ್ಲ ಏಕೆಂದರೆ ಪ್ರೋಗ್ರಾಂ ಆಫೀಸರ್ಸ್ ಇರುವುದಿಲ್ಲ ಖಾಸಗಿ ಆಸ್ಪತ್ರೆಗಳವರಿಗೆ, ಮಲೇರಿಯಾ ಬಂದುಬಿಟ್ಟರೆ ಬೇಕಾದಷ್ಟು ಕಲೆಕ್ಷನ್ ಆಗುತ್ತದೆಂದು ಒಂದು ದೊಡ್ಡ ಜಾತ್ರೆ ಇದ್ದ ಹಾಗೆ, Don't you feel there is a national programme which should be implemented?

ಅಧ್ಯಕ್ಷರು ಮಹದೇವಪ್ಪನವರೆ, ಉಪಯುಕ್ತವಾದ ಒಂದೆರಡು ಸಲಹೆಗಳನ್ನು ಕೊಡಿ

ಡಾ ಹೆಚ್ ಸಿ ಮಹದೇವಪ್ಪ ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯದ ವಿಷಯ ಬಹಳ ಪ್ರಾಮುಖ್ಯವಾದಂಥ ವಿಷಯ ಸಿಬ್ಬಂದಿಗಳ ನೇಮಕ ಮಾಡುವುದಕ್ಕೆ ಅವರು ಕ್ರಮ ತೆಗೆದುಕೊಂಡಿದ್ದಾರೆ ನಾನು ಏನು ಹೇಳುತ್ತಿದ್ದೇನೆಂದರೆ ಈಗ ನ್ಯಾಶನಲ್ ಪ್ರೋಗ್ರಾಂ, ಪೋಲಿಯೋ ಕಾರ್ಯಕ್ರಮವನ್ನು ಮಾಡುತ್ತೀರಿ Cold-chain ಅನ್ನು ಮೇನ್‌ಟೇನ್ ಮಾಡದಿದ್ದರೆ ಆ ಔಷಧಿಯ ಪೊಟೆನ್‌ಶಿಯಾಲಿಟಿ ಹೇಗಿರುತ್ತದೆ? ಪವರ್ ಇಲ್ಲದಿದ್ದರೆ ಹೇಗೆ ಹೇಳಿ Cold-cahin ಮೇನ್‌ಟೇನ್

ಆಗಬೇಕಲ್ಲ ಅದಕ್ಕಾಗಿ ಸೋಲಾರ್ ಎನರ್ಜಿಯನ್ನೋ, ಬೇರೆ ಬೇರೆ ಪರ್ಯಾಯ ಮಾರ್ಗಗಳನ್ನೋ ನೀವು ಮಾಡಬೇಕಾಗುತ್ತದೆ ಇವೊತ್ತು ಆರೋಗ್ಯ ಸಚಿವರು ಉತ್ಸಾಹದಿಂದ ಕೆಲಸವನ್ನು ಮಾಡಬೇಕು ಎಂದಿರುವಾಗ ನೀವು ಮೊದಲು ಒಬ್ಬ ನಿರ್ದೇಶಕರನ್ನು ನೇಮಿಸಿಕೊಳ್ಳಬೇಕು ಹಾಲಿ Deputy Director is holding the Director post ಜೊತೆಗೆ ಅವರಿಗೆ ಸಿಬ್ಬಂದಿ ಇಲ್ಲದೇ ನಡೆಸುವುದು ಹೇಗಾಗುತ್ತದೆ? ಆದುದರಿಂದ ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಮತ್ತು ಡಿ ಪಿ ಹೆಚ್ ಗೆ ಒತ್ತನ್ನು ಕೊಟ್ಟು ಪ್ರಾಥಮಿಕ ಆರೋಗ್ಯಕ್ಕೆ ಸಂರಕ್ಷಣೆಯನ್ನು ನೀವು ಮಾಡದಿದ್ದರೆ ಜನರ ಸಂರಕ್ಷಣೆಯನ್ನು ನೀವು ಮಾಡುವುದಕ್ಕೆ ಆಗುವುದಿಲ್ಲ ಅದನ್ನು ಮಾಡಬೇಕೆಂದು ಸರ್ಕಾರಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ಸಲಹೆಯನ್ನು ಕೊಡುತ್ತಿದ್ದೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ನನಗೆ ಆರೋಗ್ಯ ಇಲಾಖೆಯಲ್ಲಿ ಇರುವ ಈ ಸಮಸ್ಯೆಯ ಬಗ್ಗೆ ಅರಿವಾಗಿದೆ ಈ ತರಹದ ಡಾಕ್ಟರ್‌ಗಳಿಗೆ ಕೆಲಸ ಮಾಡತಕ್ಕಂಥ ವ್ಯವಸ್ಥೆಯಲ್ಲಿ ನಮ್ಮ ಯಾವ ಡಾಕ್ಟರ್ ಕ್ಲಿನಿಕಲ್ ಸೈಡ್‌ಗೆ ಹೋಗಬೇಕು, ಯಾರು ಅಡ್ಮಿನಿಸ್ಟ್ರೇಶನ್ ಮಾಡಬೇಕು ಎಂಬ ಬಗ್ಗೆ ನಮ್ಮಲ್ಲಿ ಸರಿಯಾದಂಥ ಒಂದು ನೀತಿ ನಿಯಮಗಳನ್ನು ನಾವು ಮಾಡಬೇಕಾಗಿರುವಂಥ ಆವಶ್ಯಕತೆ ಇವೊತ್ತು ನಮಗೆ ಕಂಡುಬರುತ್ತಿದೆ ಆದುದರಿಂದ ಇಲಾಖೆಯಲ್ಲಿ ಈ ಬದಲಾವಣೆಯನ್ನು ತರುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ ಈಗ ಅಡ್ಮಿನಿಸ್ಟ್ರೇಶನ್‌ಗೆ ಯಾರು ಹೋಗಬೇಕು ಎಂಬ ಬಗ್ಗೆ ಸ್ಟಾರ್ಟಿಂಗ್‌ನಲ್ಲಿಯೇ ಕೆಲಸಕ್ಕೆ ನೇಮಕಾತಿಯಾದಾಗಲೇ ಅವರು ಅಡ್ಮಿನಿಸ್ಟ್ರೇಶನ್ ಕಡೆಗೋ ಅಥವಾ ಕ್ಲಿನಿಕಲ್ ಸೈಡ್ ಕಡೆಗೋ ಎಂಬ ಬಗ್ಗೆ ನಾವು ತೀರ್ಮಾನ ಮಾಡಿ ಈ ತರಹದ ಬೇರೆ ಬೇರೆ ಪೋಸ್ಟಿಂಗ್ಸ್‌ಗಳನ್ನು ನಾವು ಮಾಡುವುದೇ ಆದರೆ, ಇದರ ಬಗ್ಗೆ ನಾವು ಡಿ ಪಿ ಹೆಚ್ ನವರಿಗೆ ಇದರ ಆದ್ಯತೆಯನ್ನು ಕೊಟ್ಟರೆ, ಹೆಚ್ಚು ಪರಿಣಾಮಕಾರಿಯಾಗಿ ಇಲಾಖೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ ಮುಂದಿನ ದಿನಗಳಲ್ಲಿ ಅದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ

ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ

230(1618)

ಸದಸ್ಯರ ಹೆಸರು

ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ)

ಉತ್ತರಿಸುವ ಸಚಿವರು

ಶ್ರೀ ಆರ್ ಅಶೋಕ್

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇಲ್ಲದೆ ಸಾಗರದಿಂದ ಸುಮಾರು 75ಕಿ ಮೀ ಇರುವ ಶಿವಮೊಗ್ಗಕ್ಕೆ ಬಂದು ರಕ್ತವನ್ನು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ

ಆ) ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ತೆರೆಯಲು ಸರ್ಕಾರಕ್ಕಿರುವ ತೊಂದರೆಯೇನು?

ಇ) ಹಾಗಿದ್ದಲ್ಲಿ ಬ್ಲಡ್ ಬ್ಯಾಂಕ್ ತೆರೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು, ಯಾವಾಗ ತೆರೆಯಲಾಗುವುದು?

ಈಗ ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪಿಸಲಾಗಿದೆ, ಅಗತ್ಯತೆಗೆ ತಕ್ಕಂತೆ ಮತ್ತು ಹಣದ ಲಭ್ಯತೆಯ ಮೇಲೆ ಹಂತ ಹಂತವಾಗಿ ತಾಲ್ಲೂಕು ಆಸ್ಪತ್ರೆಗಳಿಗೆ ಬ್ಲಡ್ ಬ್ಯಾಂಕ್ ತೆರೆಯಲು ಕ್ರಮಕೈಗೊಳ್ಳಲಾಗುವುದು

ಸಂಖ್ಯೆ ಆಕುಕ 236 ಸಿಜಿಎಂ 2007

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಸಾಗರ ಕ್ಷೇತ್ರದ ನಮ್ಮ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಒದಗಿಸಿ ಎಂದು ನಾನು ಅವರನ್ನು ಕೇಳಿಕೊಂಡಿದ್ದೇನೆ ಸಾಗರದಿಂದ ಶಿವಮೊಗ್ಗಕ್ಕೆ ಹೋಗಬೇಕಾದರೆ 75 ಕಿ ಮೀ ಆಗುತ್ತದೆ, ಪಕ್ಕದಲ್ಲಿಯೇ ಸೊರಬ ತಾಲ್ಲೂಕು 20 ಕಿ ಮೀ , ಹೊಸನಗರ ತಾಲ್ಲೂಕು 20 ಕಿ ಮೀ ಇದು ಸಾಗರ ಇವುಗಳಿಗೆ ಹೆಡ್ ಕ್ವಾರ್ಟರ್ಸ್ ಆಗಿರುವುದರಿಂದ ಇಲ್ಲಿ ಒಂದು ಬ್ಲಡ್ ಬ್ಯಾಂಕ್‌ನ್ನು ಮಾಡಿದರೆ ಬಹಳ ಉತ್ತಮ ಇದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ ಎನ್ನುವ ಕಾರಣದಿಂದ ನಾನು ಆರೋಗ್ಯ ಸಚಿವರಲ್ಲಿ ಬ್ಲಡ್ ಬ್ಯಾಂಕ್ ಮಾಡುವಂತೆ ಕೇಳಿದ್ದೇನೆ ಅವರು ಮಾಡುತ್ತೇವೆಂದು ಹೇಳಿದ್ದಾರೆ ಆದರೆ ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು

ಏಕೆಂದರೆ ಅಲ್ಲಿ ಮೂಲ ಸೌಲಭ್ಯಗಳಾದ ಡಾಕ್ಟರ್‌ನ್ನು ಕೊಟ್ಟಿದ್ದೀರಿ, ಟೆಲಿಮೆಡಿಸಿನ್ ಕೊಟ್ಟಿದ್ದೀರಿ ಆ ಆಸ್ಪತ್ರೆ ತುಂಬಾ ಚೆನ್ನಾಗಿದೆ ಆದುದರಿಂದ ಬ್ಲಡ್ ಬ್ಯಾಂಕ್‌ನ ಸೌಲಭ್ಯವನ್ನು ತಾವು ಒದಗಿಸಿಕೊಟ್ಟರೆ ಖಂಡಿತ ನಮ್ಮ ಕ್ಷೇತ್ರದ ಜನರಿಗೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ **ಆರ್ ಅಶೋಕ್** ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಿವಮೊಗ್ಗ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇದೆ ಆದರೆ ಬ್ಲಡ್ ಸ್ಟೋರೇಜ್‌ನ್ನು ಸಾಗರ ಆಸ್ಪತ್ರೆಯಲ್ಲಿ ನಾವು ಮಾಡಿದ್ದೇವೆ ಆದರೂ ನಿಮ್ಮ ಕ್ಷೇತ್ರದಲ್ಲಿ ಬ್ಲಡ್ ಬ್ಯಾಂಕ್ ಮಾಡಬೇಕೆಂದು ಮನವಿಯನ್ನು ನಮ್ಮಲ್ಲಿ ಮಾಡಿಕೊಂಡಿದ್ದೀರಿ ಅದನ್ನು ನಾವು ಆದ್ಯತೆ ಮೇಲೆ ಪರಿಶೀಲನೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಬ್ಲಡ್ ಬ್ಯಾಂಕ್‌ನ್ನು ಮಾಡಲಾಗಿದೆ ಕೆಲವು ತಾಲ್ಲೂಕುಗಳ ಮಟ್ಟಕ್ಕೂ ಹೋಗಬೇಕೆನ್ನುವ ಉದ್ದೇಶ ನಮಗೂ ಇದೆ ಇದಲ್ಲದೇ ನಮ್ಮ ಉದ್ದೇಶ ಇರತಕ್ಕಂಥಾದ್ದು ಹೆರಿಗೆ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಬಹಳ ಇರುವುದರಿಂದ ಎಲ್ಲೆಲ್ಲಿ ನಮ್ಮ ಪ್ರಾಥಮಿಕ ಆರೋಗ್ಯಗಳಿಗೆ ಮೇಲ್ಪಟ್ಟು, ಅಂದರೆ ಸಿ ಹೆಚ್ ಸಿ ಗಳು ಬರುತ್ತದೆ, ತಾಲ್ಲೂಕು ಆಸ್ಪತ್ರೆಗಳು ಬರುತ್ತವೆ, ಈಗಾಗಲೇ ಅಂಥ ತಾಲ್ಲೂಕು ಆಸ್ಪತ್ರೆಗಳಲ್ಲಿ ಬ್ಲಡ್ ಸ್ಟೋರೇಜ್‌ಗಳನ್ನು ನಾವು ಮಾಡಿದ್ದೇವೆ ಇದನ್ನು ಸಿ ಹೆಚ್ ಸಿ ಗಳಿಗೂ ತೆಗೆದುಕೊಂಡು ಹೋಗಬೇಕು ಎನ್ನುವುದು ಇದೆ ಇದನ್ನು ಸಿ ಹೆಚ್ ಸಿ ಗಳಲ್ಲೂ ಕೂಡ ಬ್ಲಡ್ ಸ್ಟೋರೇಜ್‌ಗಳನ್ನು ಮಾಡುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ

ಇನ್ನು ತಾವೇನು ಕೇಳಿದ್ದೀರಿ ಅದರ ಅವಶ್ಯಕತೆ ಬಗ್ಗೆ ಪರಿಶೀಲನೆಯನ್ನು ಮಾಡಿ ಅಲ್ಲಿ ಬ್ಲಡ್ ಬ್ಯಾಂಕ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಕಿಮ್ಸ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 231(1617)
ಸದಸ್ಯರ ಹೆಸರು ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)
ಉತ್ತರಿಸುವ ಸಚಿವರು ಶ್ರೀ ಡಾ||ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೋಗಿಗಳು ದಾಖಲಾಗುತ್ತಿರುವುದರಿಂದ ಈಗಿರುವ ಹಾಸಿಗೆಗಳೊಂದಿಗೆ ಇನ್ನೂ 300 ಹಾಸಿಗೆಗಳನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ,

ಹೌದು

ಆ) ಈ ಆಸ್ಪತ್ರೆಯಲ್ಲಿ ಇನ್ನೂ 6 ಶಸ್ತ್ರ ಚಿಕಿತ್ಸಾ ಕೊಠಡಿಗಳನ್ನು ಕಲ್ಪಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ,

ಹೌದು

ಇ) ಬಂದಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು,

ಅಂದಾಜು ರೂ 10 ಕೋಟಿ

ಈ) ಸರ್ಕಾರ ಈವರೆಗೆ ಬಿಡುಗಡೆ ಮಾಡಿದ ಹಣವೆಷ್ಟು? (ವಿವರ ಒದಗಿಸುವುದು)

ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಈ ಸಾರಿ ನಮ್ಮ ಭಾಗದ ಕಿಮ್ಸ್ ಆಸ್ಪತ್ರೆಗೆ 100 ಕೋಟಿ ರೂಪಾಯಿಗಳ ಗ್ರ್ಯಾಂಟ್ ಕೊಡುತ್ತೇವೆಂದು ಬಜೆಟ್‌ನಲ್ಲಿ ತೋರಿಸಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಆದರೆ ಕೆಲವು ಪ್ರಶ್ನೆಗಳನ್ನು ನಾನು ಕೇಳಿದ್ದೇನೆ ಅದರಲ್ಲಿ 6 ಶಸ್ತ್ರ ಚಿಕಿತ್ಸಾ ಕೊಠಡಿಗಳ ವಿಷಯ ಅವರ ಗಮನಕ್ಕೂ ಬಂದಿದೆ ಮುಂದಿನ ವರ್ಷ ತಾವು ಗೋಲ್ಡನ್ ಜ್ಯುಬಿಲಿ ಫಂಕ್ಷನ್ ಮಾಡುವುದಕ್ಕೆ ಹೊರಟಿದ್ದೀರಿ ಅದಕ್ಕಿಂತ ಮೊದಲು 6 ಶಸ್ತ್ರ ಚಿಕಿತ್ಸಾ ಕೊಠಡಿಗಳನ್ನು ಮಾಡಬೇಕು ಇವುಗಳನ್ನು ಮಾಡಿ ಗೋಲ್ಡನ್ ಜ್ಯುಬಿಲಿ ಫಂಕ್ಷನ್ ಮಾಡಿದರೆ ಉತ್ತಮವೆಂದು ನನಗೆ ಅನ್ನಿಸುತ್ತಿದೆ ಈ ಕಿಮ್ಸ್ ಆಸ್ಪತ್ರೆ ಉತ್ತರ ಕರ್ನಾಟಕದ ಭಾಗದಲ್ಲಿಯೇ ಅತಿ ದೊಡ್ಡ ಆಸ್ಪತ್ರೆ, ಇದು 50 ವರ್ಷದಿಂದ ಇದೆ ಇವೊತ್ತಿನ ಪರಿಸ್ಥಿತಿಯಲ್ಲಿ ನೋಡುವುದಾದರೆ ಪ್ರತಿ ದಿವಸ ಎರಡು ಸಾವಿರದಿಂದ ಎರಡೂವರೆ ಸಾವಿರ ಪೇಶೆಂಟ್‌ಗಳು ಆಸ್ಪತ್ರೆಗೆ ಬರುತ್ತಾರೆ ಆದರೆ ಆಸ್ಪತ್ರೆಯಲ್ಲಿ ಕೇವಲ 1200 ಬೆಡ್‌ಗಳು ಮಾತ್ರ ಇವೆ ನಾನೇ ಇತ್ತೀಚೆಗೆ ಹೋಗಿ ನೋಡಿದ್ದೇನೆ, ಕನಿಷ್ಟ ಏಳೆಂಟು ನೂರು ರೋಗಿಗಳು ನೆಲದ ಮೇಲೆಯೇ ಮಲಗಿಕೊಳ್ಳುತ್ತಾರೆ 300 ಬೆಡ್‌ಗಳ ವಿಚಾರ ನಿಮ್ಮ ಗಮನಕ್ಕೆ ಬಂದಿದೆ ಇದನ್ನು ಯಾವಾಗ ತಾವು ಮಾಡಿಸುತ್ತೀರಿ ಎಂಬುದು ಒಂದು ವಿಚಾರ ಇನ್ನು ಎರಡನೆಯದಾಗಿ ಅಲ್ಲಿ ಸುತ್ತಮುತ್ತಲಿನ ಭಾಗಗಳಲ್ಲಿ ಬಹಳಷ್ಟು ಅಪಘಾತಗಳಾಗಿ ಬಹಳಷ್ಟು ರೋಗಿಗಳು ಇದ್ದಾರೆ ಆದರೆ ಅದಕ್ಕೆ ಚಿಕಿತ್ಸೆ ಇಲ್ಲದಿರುವುದರಿಂದ, ಆ ತರಹದ ಸೌಲಭ್ಯ ಅಲ್ಲಿ ಇಲ್ಲದಿರುವುದರಿಂದ ಅವರು ಸಾಯುತ್ತಿದ್ದಾರೆ ಆದುದರಿಂದ ಇದರ ಬಗ್ಗೆಯೂ ಒಂದು ಸೆಟಪ್ ಅನ್ನು ಗೋಲ್ಡನ್

ಜ್ಯುಬಿಲಿಗೆ ಮುಂಚೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ ಇನ್ನು ಮೂರನೆಯದಾಗಿ ಈ ಟ್ರಾಮಾ ಸೆಂಟರ್ ವಿತ್ ಎಂಆರ್ಐ ಮಿಶನ್ ಸೌಲಭ್ಯ ನಮ್ಮ ಸುತ್ತಮುತ್ತಲೂ ಎಲ್ಲಿಯೂ ಇಲ್ಲವೇ ಇಲ್ಲ ವೈದ್ಯಕೀಯ ಶಿಕ್ಷಣದೊಳಗೆ ವಿಶೇಷವಾಗಿ ಡಾಕ್ಟರ್‌ಗಳು ಯಾವ ರೀತಿ ಇದ್ದಾರೆಂದರೆ ಈ ಮೆಶಿನ್‌ಗಳು, ಇನ್‌ಸ್ಟ್ರುಮೆಂಟ್ಸ್‌ಗಳು ಇಲ್ಲವೆಂದರೆ ಅವರ ತಲೆಯೊಳಗೆ ಏನೂ ಹೋಗುವುದಿಲ್ಲ ಮೊದಲೇ ಎಲ್ಲವನ್ನೂ ಇವುಗಳ ಮೂಲಕ ಚೆಕಪ್ ಮಾಡಿಕೊಂಡು ಬರಬೇಕು, ಆಮೇಲೆ ಅದನ್ನು ನೋಡಿಕೊಂಡು ಚಿಕಿತ್ಸೆ ಕೊಡುವುದು ಆದರೆ ಅಷ್ಟು ದೊಡ್ಡ ಆಸ್ಪತ್ರೆಯೊಳಗೆ ಇಂಥ ಯಾವುದೇ ಸವಲತ್ತು ಇಲ್ಲ ಆದುದರಿಂದ ಎಂಆರ್ಐ ಸೆಂಟರ್ ಸೆಟಪ್ ತಾವು ಮಾಡಬೇಕು ಇನ್ನು ಬಜೆಟ್‌ನಲ್ಲಿ 100 ಕೋಟಿಯೊಳಗೆ ಕೇವಲ 20 ಕೋಟಿ ರೂಪಾಯಿಗಳನ್ನು ಈ ವರ್ಷ ಕೊಡುತ್ತೇವೆಂದು ಹೇಳಿದ್ದೀರಿ ವರ್ಷ ವರ್ಷ 20 ಕೋಟಿ ಎಂದು ಹೇಳಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ ಆದುದರಿಂದ ನಾನು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುವುದೇನೆಂದರೆ 50 ಕೋಟಿ ರೂಪಾಯಿಗಳನ್ನಾದರೂ ಗೋಲ್ಡನ್ ಜ್ಯುಬಿಲಿ ಆಚರಿಸುವ ಮೊದಲೇ ತಾವು ಕೊಟ್ಟರೆ ನಮ್ಮ ಭಾಗಕ್ಕೆ ತಾವು ಸಹಾಯ ಮಾಡಿದಂತಾಗುತ್ತದೆ ಎಂದು ನಾನು ತಮ್ಮನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ

ಡಾ ವಿ ಎಸ್ ಆಚಾರ್ಯ(ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೆಲವು ವಿಷಯಗಳನ್ನು ಹೇಳಿದರೋ ಆ ಬಗ್ಗೆ ನನ್ನ ಸಹಮತಿ ಇದೆ ನಾನು ಹೇಳುವುದನ್ನು ಕೇಳುವುದಕ್ಕೆ ಅವರಿಗೆ ಸಂತೋಷವಾಗಬಹುದು ಅಲ್ಲೊಂದು Cathlab ಅದೇ ರೀತಿ Trauma Centre ಮತ್ತು Specialist Ward Centre ಇವೆಲ್ಲವನ್ನೂ ಮಾಡಬೇಕೆಂದು ದೃಷ್ಟಿಯಲ್ಲಿಟ್ಟುಕೊಂಡು ಸುಮಾರು 102 ಕೋಟಿ ರೂಪಾಯಿಗಳ ಒಂದು ಅಂದಾಜು ಪತ್ರವನ್ನು ತಯಾರಿಸಿ ಅದರಂತೆ ಮೊನ್ನೆ ಬಜೆಟ್‌ನಲ್ಲಿ ನಮ್ಮ ಇಲಾಖಾ ಬೇಡಿಕೆಯಂತೆ ಸುಮಾರು 100 ಕೋಟಿ ರೂಪಾಯಿಗಳಿಗೆ ಅವರು ಒಪ್ಪಿದ್ದಾರೆ ಪ್ರಥಮ ಹಂತದಲ್ಲಿ ಸುಮಾರು 20 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುತ್ತಾರೆ ತಾವು ಹೇಳಿದ ಪ್ರಕಾರ cathlab ಬಂದ ನಂತರ MRI ಬರುತ್ತದೆ ಈಗಾಗಲೇ ಅಲ್ಲಿ C T scan ಬಂದಿದೆ ಒಂದು Trauma center ತಾವೇನು ಕೇಳಿದ್ದೀರಿ, ಅದೂ ಕೂಡ ಇದರಲ್ಲಿ ಅಂತರ್ಗತವಾಗಿದೆ Trauma center ಎಂದರೆ multi discipline specialities, ಅದು Neuro surgeon, neuro physician, orthopaedic surgery ಮತ್ತು general surgery ಇಂಥದೆಲ್ಲಾ

ಬಲಪಡಿಸಬೇಕಾಗುತ್ತದೆ Trauma is unplanned torture ಹಾಗಾಗಿ ಬೇರೆ ಬೇರೆ ಇಲಾಖೆಯ specialist ಗಳು ಬೇಕಾಗುತ್ತದೆ ಅದನ್ನೆಲ್ಲಾ ಮಾಡುವುದಕ್ಕೆ 20 ಕೋಟಿ ರೂಪಾಯಿ ಎಂದು ಬೇಕು ಹೇಳಿದ್ದಾರೆ ಕೆಲಸ ಮುಂದುವರೆದ ಹಾಗೆ supplementaryನಲ್ಲಿ ಕೊಡುವುದಕ್ಕೆ ಅವಕಾಶ ಇದೆ ತಾವು ಏನು ಹೇಳಿದ್ದೀರಿ, ಎಲ್ಲಾ ವಿಚಾರಗಳ ಬಗ್ಗೆ ಗಮನಹರಿಸುತ್ತಿದ್ದು, ಈಗಾಗಲೇ ನಾನು ಆರೇಳು ಬಾರಿ ಹುಬ್ಬಳ್ಳಿಯ KIMS College ಗೆ ಭೇಟಿ ಕೊಟ್ಟಿದ್ದೇನೆ ಅದು ತಮಗೂ ಗೊತ್ತಿದೆ ನಾನು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೂಡ ಇದ್ದರು ಹಾಗಾಗಿ ಹುಬ್ಬಳ್ಳಿಯ ಒಂದು ಪ್ರತಿಷ್ಠಿತ ವೈದ್ಯಕೀಯ ಶಿಕ್ಷಣ ಹಾಗೂ ಚಿಕಿತ್ಸಾ ಸಂಸ್ಥೆಯಾದಂತಹ KIMC up gradation ಗೆ ಮತ್ತು ಅದಕ್ಕೆ ಕೊಡಬೇಕಾದಂತಹ ಕಾಯಕಲ್ಪವನ್ನು ಕೊಡುವುದಕ್ಕೆ ನಮ್ಮ ಎಲ್ಲಾ ಪ್ರಯತ್ನ ನಡೆಯುತ್ತದೆ ಆ ದಿಸೆಯಲ್ಲಿ ಯಾವ ರೀತಿಯಲ್ಲಿ ಹಣದ ಆಡಚಣೆ ಆಗುವುದಿಲ್ಲವೆಂದು ತಮ್ಮ ಮುಖಾಂತರ ನಾನು ಅವರಿಗೆ ಹೇಳಬಯಸುತ್ತೇನೆ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ನಾನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ನನ್ನ ಅಭಿನಂದನೆ ಸಲ್ಲಿಸುತ್ತೇನೆ

ಕೈ ಗಡಿಯಾರಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 232(1603)
ಸದಸ್ಯರ ಹೆಸರು ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್)
ವಿಷಯ ರಿಸ್ಟ್ ವಾಚುಗಳನ್ನು ವಿತರಿಸಿರುವ ಬಗ್ಗೆ
ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಮಾನ್ಯ ಮುಖ್ಯಮಂತ್ರಿಗಳ ಜನ್ಮದಿನದ ಅಂಗವಾಗಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿತರಿಸಿರುವ ಕೈ ಗಡಿಯಾರಗಳ ಸಂಖ್ಯೆ ಎಷ್ಟು?

ಮಾನ್ಯ ಮುಖ್ಯಮಂತ್ರಿಗಳ ಜನ್ಮ ದಿನದ ಅಂಗವಾಗಿ ಡಾ, ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಕೈ ಗಡಿಯಾರಗಳನ್ನು ವಿತರಿಸಿರುವುದಿಲ್ಲ

ಆ) ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತವೆಷ್ಟು,

ಉದ್ಭವಿಸುವುದಿಲ್ಲ

ಇ) ಈ ಕೈ ಗಡಿಯಾರಗಳನ್ನು ಯಾರಿಗೆ ವಿತರಿಸಲಾಗಿದೆ? (ವ್ಯಕ್ತಿಗಳ ಪಟ್ಟಿಯನ್ನು ಒದಗಿಸುವುದು)

ಉದ್ಭವಿಸುವುದಿಲ್ಲ

ಶ್ರೀ ಎಸ್ ರಾಜೇಂದ್ರನ್ ಉತ್ತರ ಒದಗಿಸಿದ್ದಾರೆ The number of wrist watches distributed by the Ambedkar Development Corporationನಿಂದ ಎಂದು ಕೇಳಿದ್ದೇನೆ ನಮ್ಮ ಮಾನ್ಯ ಮಂತ್ರಿಗಳು ವಿತರಿಸಿರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ ಎರಡನೆಯದಾಗಿ, total amount spent on this ಎನ್ನುವ ಪ್ರಶ್ನೆಗೆ, ಅದನ್ನು Development Corporationನಿಂದ ಕೊಟ್ಟಿದ್ದೀರಾ? ಎಂದರೆ Does not arise ಎಂದಿದೆ ಎಷ್ಟೆಷ್ಟು ಜನಕ್ಕೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂದರೆ does not arise ಎಂದು ಉತ್ತರ ಕೊಟ್ಟಿದ್ದಾರೆ Vague ಆಗಿ ಈ ರೀತಿ ಉತ್ತರ ಕೊಟ್ಟರೆ it amounts to breach of privilege C M photo ಹಾಕಿ watch ಕೊಟ್ಟಿರುವುದು ನಿಜ ಆದರೆ ಇವರು ಇಲ್ಲವೆಂದು ಹೇಳುತ್ತಾರೆ ನನ್ನ ಕೈಯಲ್ಲಿ watch ಇದೆ ಅದರಲ್ಲಿ C M photo ಇದೆ ಅದರಲ್ಲಿ manufacture company ಹೆಸರು ಇಲ್ಲ, made in China, Japan, Tokyo, India, Bangalore ಎಂದು ಏನೂ ಇಲ್ಲ ಹಾಲಿ ಬರಿ 09,03,06 ಎಂದು ಮತ್ತು ಒಂದು ಚಿತ್ರ ಇದೆ ನಮಗೆ ಸಂತೋಷ ಇದು ನಮ್ಮ ಕ್ಷೇತ್ರದಲ್ಲಿ 1,000 ಅಥವಾ 2,000 ಕೊಟ್ಟರೆ ನಮ್ಮ ಜನಗಳು ಯಾವಾಗಲೂ ಕೈಯಲ್ಲಿ ಇಟ್ಟುಕೊಂಡು ನಮ್ಮ C M watch ಎಂದು ಹೇಳುವುದಕ್ಕೆ ನಮಗೆ ಸಂತೋಷವಾಗುತ್ತದೆ ನಮ್ಮ floor leadersಗೆಲ್ಲಾ ಸಾವಿರ ಸಾವಿರ ಕೊಟ್ಟರೆ ಇನ್ನೂ ಸಂತೋಷ ಆ ಸತ್ಯಾಂಶವನ್ನು ಹೇಳಿ ಎಂದರೆ straight away it does not arise ಎಂದು ಹೇಳಿದ್ದಾರೆ ತಾವು ಹಿರಿಯರು ನೋಡಿ, ಮಾನ್ಯ ಮಾಧುಸ್ವಾಮಿಯವರೆ ನೋಡಿ, ಇಷ್ಟು vague ಆಗಿ ನೀವು ಉತ್ತರ ಕೊಟ್ಟರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಮೊದಲು ಇದು ಕೊಟ್ಟಿದ್ದಾರೋ ಇಲ್ಲವೋ ಎನ್ನುವುದು ಇತ್ಯರ್ಥವಾಗಬೇಕು ಶಾಸನಸಭೆ ಮುಂದೆ ಇಲ್ಲವೆಂದ ಮೇಲೆ it amounts to breach of privilege ಮೊದಲು ಅದು ಇತ್ಯರ್ಥವಾಗಬೇಕು Watch ಅನ್ನು ಅವತ್ತು ಕೊಟ್ಟಿದ್ದಾರೋ ಇಲ್ಲವೋ? ಕೊಟ್ಟಿದ್ದರೆ ಯಾವ ಖರ್ಚು ಹಾಕಿ ಕೊಟ್ಟಿದ್ದಾರೆ? ಯಾರಿಗೆ ಕೊಟ್ಟಿದ್ದಾರೆ? ಇದು ಹುಡುಗಾಟಕ್ಕೆ ತೆಗೆದುಕೊಳ್ಳುವಂತಹ ಪ್ರಶ್ನೆಗಳಲ್ಲ ಶಾಸನಸಭೆ ಮುಂದೆ ನಾವೇನೂ ಕೊಟ್ಟಿಲ್ಲ, ಪ್ರಶ್ನೆ ಏನೂ ಉದ್ಭವವಾಗುವುದಿಲ್ಲವೆಂದು ಹೇಳಿ, ಸನ್ಮಾನ್ಯ ಸದಸ್ಯರು ಕೈಯಲ್ಲಿ watch ಇಟ್ಟುಕೊಂಡು ನಮಗೆಲ್ಲಾ ತೋರಿಸುತ್ತಿದ್ದಾರೆ ಎಂದರೆ ಈ ಸಭೆಗೆ ಗೌರವ ಎಲ್ಲಿದೆ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದಂತಹ ಪರಿಸ್ಥಿತಿ ಈ ಒಂದು ಗಡಿಯಾರದಲ್ಲಿ ಮಾನ್ಯ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಚಿತ್ರ ಇದೆ ಈ ಗಡಿಯಾರ ಮಾಡಿದ company ಯಾವುದು ಎಂದು ಗೊತ್ತಿಲ್ಲ ಇದು ಯಾವ ಇಲಾಖೆಯಿಂದ ಕೊಟ್ಟಿದೆ ಎಂದು ಕೂಡ ಗೊತ್ತಿಲ್ಲ ಸುಮ್ಮನೆ ಇದು

ಬೇವಾರ್ಸಿ ಗಡಿಯಾರ ಇದ್ದಹಾಗೆ ಇದೆ ಇದಕ್ಕೆ ಹಿಂದೆ ಮುಂದೆ ಏನೂ ಇಲ್ಲ ಆದರೆ ಅದರಲ್ಲಿ ಮಾನ್ಯ ಮುಖ್ಯಮಂತ್ರಿಯವರ ಚಿತ್ರ ಮಾತ್ರ ಇದೆ ಇದನ್ನು ಲಘುವಾಗಿ ತೆಗೆದುಕೊಳ್ಳುವಂಥಾದ್ದಲ್ಲ ಇದನ್ನು ನಿಜವಾಗಿ ಇಲಾಖೆಯಿಂದ ಕೊಟ್ಟಿದ್ದರೆ ಇದು ಅತ್ಯಂತ ದೊಡ್ಡ ವಿಷಯ ನೇರವಾಗಿ ಸದನದ ಹಕ್ಕುಚ್ಯುತಿ ಆಗುತ್ತದೆ ಇದಕ್ಕೆ SC ST Corporationನಿಂದ ದುಡ್ಡನ್ನು ಕೊಟ್ಟಿರುವಂಥಾದ್ದು ಇದು ಹುಡುಗಾಟವಲ್ಲ, ಇದು ಯಾರಿಗೋಸ್ಕರ ಕೊಡತಕ್ಕಂಥಾದ್ದು? ಇದರ ಬಗ್ಗೆ ಸಮಗ್ರವಾಗಿ ಚಿಂತನೆಯಾಗಬೇಕು ಇದು ತನಿಖೆಯಾಗಬೇಕಾಗುತ್ತದೆ ಅದನ್ನು ಸರ್ಕಾರ ಯಾವುದಾದರೂ ತನಿಖೆಗೆ ಕೊಡಬೇಕಾಗುತ್ತದೆ

ಅಧ್ಯಕ್ಷರು ಈಗ ಇದರ ಬಗ್ಗೆ ಚರ್ಚೆ ನಡೆಸುವುದು ಅಗತ್ಯವಿಲ್ಲ ಈಗ ಏನಾಗಿದೆ ಎಂದರೆ ಮಾನ್ಯ ಸಚಿವರು ಖಡಾಖಂಡಿತವಾಗಿ ಇಲ್ಲವೆಂದು ಹೇಳಿದ್ದಾರೆ ಇದ್ದರೆ ಒಂದು ತನಿಖೆ ಮಾಡಿಸಲಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೆ ಇದ್ದಾರೆ, ಇದು ಅವರ ಗಮನಕ್ಕೆ ಬಂದಿದೆಯಾ? ಅವರ photo ಹಾಕಿ ಈ watch ಅನ್ನು ವಿತರಣೆ ಮಾಡಿದ್ದಾರೆ ಎನ್ನುವ ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯಾ ಎನ್ನುವುದನ್ನು ತಿಳಿಸಬೇಕಾಗುತ್ತದೆ ಏಕೆಂದರೆ ಅವರ photo ಇದರಲ್ಲಿ ಇದೆ ಇದನ್ನು ಅವರ ಗಮನಕ್ಕೆ ತಾರದೆ ಕೊಟ್ಟಿದ್ದಾರಾ? ಅಥವಾ ಅವರ ಗಮನಕ್ಕೆ ತಂದು ಕೊಟ್ಟಿದ್ದಾರಾ ಎಂದು ಹೇಳ ಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಇದನ್ನು ತಮ್ಮ ಜನ್ಮ ದಿನಾಚರಣೆ ದಿವಸ SC/ST Corporationನವರು ತಮ್ಮ ಚಿತ್ರವನ್ನು ಹಾಕಿ ಸಾವಿರಾರು ಗಡಿಯಾರವನ್ನು ಹಂಚಿದ್ದಾರೆ ಈ ಗಡಿಯಾರದಲ್ಲಿ ಹಿಂದೆ ಇಲ್ಲ, ಮುಂದೆ ಇಲ್ಲ, ಹೆಸರಿಲ್ಲ, ಸರ್ಕಾರದ ಗುರುತು ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ SC/STಗೆ ಇಟ್ಟಿರುವ ದುಡ್ಡನ್ನು ಈ ರೀತಿಯಾಗಿ ಹಾಳು ಮಾಡುವುದಾದರೆ ಈ ರಾಜ್ಯದ ಗತಿಯೇನು?

ಅಧ್ಯಕ್ಷರು ಆಯಿತು, ಅವರು ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ ಅದರ ಬಗ್ಗೆ ತನಿಖೆ ಮಾಡಲಿ

(ಗೊಂದಲ)

ಶ್ರೀ ಎಂ ಸಿ ವೆಂಕಟೇಶ್ ಈಗ watchಗಳನ್ನು ಅವರ ಅಭಿಮಾನಿಗಳು ಕೊಟ್ಟಿರುತ್ತಾರೆ, ಅದನ್ನು ನೀವು ಕೊಟ್ಟಿದ್ದೀರಿ ಎಂದು ಹೇಳಿದರೆ, ಹೇಗೆ? ಹುಟ್ಟುಹಬ್ಬದ ದಿವಸ ಅವರ ಅಭಿಮಾನಿಗಳು ಯಾರೋ ಭಾಗವಹಿಸಿರುತ್ತಾರೆ

ಶ್ರೀ ಎಸ್ ರಾಜೇಂದ್ರನ್ ಅದಕ್ಕೆ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆ

ಶ್ರೀ ಹೆಚ್ ಆಂಜನೇಯ ಮಾನ್ಯ ಸಮಾಜ ಕಲ್ಯಾಣ ಸಚಿವರು ಲಿಖಿತವಾದ ಉತ್ತರದಲ್ಲಿ ಅದನ್ನು ನಾವು SC/ST Corporationನಿಂದ ಕೊಟ್ಟಿಲ್ಲವೆಂದು ಹೇಳಿದ್ದಾರೆ ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಭಿಮಾನಿಗಳು ಲಕ್ಷಾಂತರ ಜನ ಇದ್ದಾರೆ ಅವರು ಮಾಡಿಸಿ ಕೊಟ್ಟಿರಬಹುದು

(ಗೊಂದಲ)

ಅಧ್ಯಕ್ಷರು ತನಿಖೆ ಮಾಡಲಿ, ತನಿಖೆಯಿಂದ ಸತ್ಯ ಹೊರಬರಲಿ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಬದಲು ಸದಸ್ಯರೇ ಸದನದಲ್ಲಿ ಉತ್ತರ ಕೊಡಲು ಪ್ರಾರಂಭ ಮಾಡಿದರೆ ಅದು ಏನರ್ಥ?

ಶ್ರೀ ಹೆಚ್ ಡಿ ಬಸವರಾಜ್ ನೀವು ಉಪಪ್ರಶ್ನೆ ಕೇಳಬಹುದು, ಆದರೆ ಇಲ್ಲಿ ಇನ್ನು ಯಾರೂ ಬೇರೆಯವರು ಮಾತನಾಡುವ ಹಾಗೆ ಇಲ್ಲವೇ? ಈ ಪ್ರಶ್ನೆಯನ್ನು ಮೂಲಭೂತವಾಗಿ ಕೇಳಿದ್ದು ಮಾನ್ಯ ರಾಜೇಂದ್ರನ್‌ರವರು ಅವರನ್ನು ಹೊರತುಪಡಿಸಿ ನೀವು ಹೇಗೆ ಮಾತನಾಡುತ್ತಿದ್ದೀರಿ? ಮಾನ್ಯ ರಾಜೇಂದ್ರನ್‌ರವರನ್ನು ಹೊರತುಪಡಿಸಿ ನೀವು ಮಾತನಾಡಬಹುದು, ಇನ್ನು ಬಾಕಿಯವರು ಯಾರೂ ಮಾತನಾಡುವುದು ಬೇಡವೇ? ಇದು ಯಾವ ನ್ಯಾಯ?

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಮಾನ್ಯ ಮಂತ್ರಿಗಳು ಜವಾಬ್ದಾರಿಯುತವಾಗಿ ಇಲ್ಲವೆಂದು ಹೇಳಿದ್ದಾರೆ ನಾವು ಉತ್ತರವನ್ನು ಪ್ರಶ್ನೆ ಮಾಡುತ್ತಿಲ್ಲ ಅವರು ಹೇಳಿರುವ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ ಆದರೆ ಬಹಳ ಜವಾಬ್ದಾರಿಯಿಂದ ಸದನದ ಗೌರವಾನ್ವಿತ ಸದಸ್ಯರು ಈ ಪ್ರಶ್ನೆಯನ್ನು ಕೇಳಿದ್ದಾರೆ ಹಾಗಾದರೆ ಈ watch ಎಲ್ಲಿಂದ ಬಂತು? ಇದನ್ನು ಯಾರು ಕೊಟ್ಟರು? ವಿಚಾರಣೆಯಾಗುವುದು ಬೇಡವೇ?

ಅಧ್ಯಕ್ಷರು ಅದನ್ನೇ ವಿಚಾರಣೆ ಮಾಡಲಿ ಎಂದು ಹೇಳುತ್ತಿದ್ದೇನಲ್ಲ, ಕೊನೆಗೆ ಮಾಡುವುದು ಅಷ್ಟೆ, ಇನ್ನೇನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ತರಹದ ಸತ್ಯಕ್ಕೆ ದೂರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕೆ ಸದಸ್ಯರ ಮೇಲಾದರೂ ನೀವು ಕ್ರಮ ತೆಗೆದುಕೊಳ್ಳಿ ಇಲ್ಲ ಸದಸ್ಯರು ಹೇಳಿರುವ ಮಾತು ಗಂಭೀರವಾಗಿದೆ, ಸರ್ಕಾರ ಇದನ್ನು ನಿರಾಕರಿಸಿದೆ ಏಕೆ ಇದು ಉದ್ಭವವಾಯಿತು?

ಹೇಗೆ ಉದ್ಭವವಾಯಿತು? ಎನ್ನುವುದಕ್ಕೆ ಒಂದು ವಿಚಾರಣೆಗೆ ವ್ಯವಸ್ಥೆ ಮಾಡಿ ಒಂದು, House Committee ಗೆ ಹೇಳುವುದೊ, ಮತ್ತೊಂದು, ಇನ್ನೊಂದು ಹೇಳಿ ಇಲ್ಲದೆ ಹೋದರೆ it becomes a serious matter of privilege ದಯಮಾಡಿ do not take it lightly

ಶ್ರೀ ಬಾಲಚಂದ್ರ ಜಾರಕಿಹೊಳಿ ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರುಗಳಾದ ಮಾನ್ಯ ರಾಜೇಂದ್ರನ್‌ರವರು, ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ರಮೇಶ್ ಕುಮಾರ್‌ರವರು SC/ST Corporationನಿಂದ ಈ watch ಅನ್ನು ವಿತರಣೆ ಮಾಡಿದ್ದಾರೆ ಹಾಗೂ ಇದಕ್ಕೆ SC/ST ದುಡ್ಡನ್ನು ಬಳಕೆ ಮಾಡಿದ್ದಾರೆ ಎಂದು ತಾವು ಹೇಳಿದಿರಿ ಇದಕ್ಕೆ ನಾವು SC/ST Corporationನ ದುಡ್ಡನ್ನು ಖರ್ಚು ಮಾಡಿಲ್ಲ ಹಾಗೂ ಎಲ್ಲೂ ಇಲಾಖೆಯ accountನಲ್ಲಿ watch ಕೊಟ್ಟಿದ್ದೇವೆಂದು ಇಲ್ಲ ಯಾರೋ ಒಬ್ಬರು ಕೊಟ್ಟಿರುವುದಕ್ಕೆ ಅವರು ಕೊಟ್ಟಿದ್ದಾರೆ, ಇವರು ಕೊಟ್ಟಿದ್ದಾರೆ ಎಂದರೆ ತಪ್ಪಾಗುತ್ತದೆ ಏಕೆಂದರೆ ಕರ್ನಾಟಕದಲ್ಲಿರುವ ಐದೂವರೆ ಕೋಟಿ ಜನರೆಲ್ಲರನ್ನು ಯಾರು watch ಕೊಡುತ್ತಿದ್ದಾರೆ ಎಂದು ನಾನು ನೋಡುವುದಕ್ಕೆ ಆಗುವುದಿಲ್ಲ ಆದುದರಿಂದ ದಯಮಾಡಿ ಇದನ್ನು ಇಷ್ಟು ಗಂಭೀರವಾಗಿ ತೆಗೆದುಕೊಳ್ಳಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ ಏಕೆಂದರೆ ತಾವು SC/ST Corporation ನಿಂದ ಕೊಟ್ಟಿದ್ದೀರಿ ಎಂದು ಹೇಳುತ್ತೀರಿ, ಆದರೆ ನಾವು SC/ST Corporation ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇವೆ ಇದನ್ನು ಯಾರೋ ಮಾಡಿದ್ದರೆ, ಅದನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆ ಅಥವಾ SC/ST Corporation ಮೇಲೆ ತಾವು ಈ ರೀತಿ ಆರೋಪ ಮಾಡುವುದು ತಪ್ಪು

ಶ್ರೀ ಹೆಚ್ ಡಿ ಬಸವರಾಜ್ ಕೊಟ್ಟಿಲ್ಲವೆಂದ ಮೇಲೆ ತನಿಖೆ ಏಕೆ ಬೇಕು? ಅವರು ಯಾರೋ ಏನೋ ಮಾಡಿಕೊಳ್ಳುತ್ತಾರೆ ಎಂದರೆ ಈ ಸದನದಲ್ಲಿ ಚರ್ಚೆಯಾಗಬೇಕಾಗಿದೆಯಾ?

ಶ್ರೀ ಜೆ ಸಿ ಮಾಧುಸ್ವಾಮಿ ನಾವು ತನಿಖೆಯಾಗಲಿ ಎಂದು ಕೇಳಿದ್ದೇವೆ

(ಗೊಂದಲ)

ಅಧ್ಯಕ್ಷರು ಆಯಿತು, ತನಿಖೆ ಮಾಡಲಿ ಇದನ್ನು ತನಿಖೆ ಮಾಡಿಸಿ ಸತ್ಯಾಸತ್ಯತೆಗಳು ಬರಲಿ ನೀವು SC/ST Corporationನಿಂದ ಹಂಚಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೀರಿ ಸುಮ್ಮನೆ ಒಂದು ತನಿಖೆ ಮಾಡಿಸಿ ಆಯಿತು, let us go to next question ಎ ಎಸ್ ಬಸವರಾಜು ಕೇಳಿ

ಶ್ರೀ ಎಸ್ ರಾಜೇಂದ್ರನ್ ನಾನು ಒಂದು sub question ಕೇಳುತ್ತೇನೆ

ಶ್ರೀ ಹೆಚ್ ಡಿ ಬಸವರಾಜು ತನಿಖೆ ಯಾವಾಗ ಮಾಡಬೇಕು ಎಂದರೆ ಆ ನಿಗಮದ ವತಿಯಿಂದ ಹಂಚಿಕೆಯಾಗಿದೆ, ಈ ರೀತಿ ನಿಗಮದವರೇ ಕೊಟ್ಟಿದ್ದಾರೆ ಎನ್ನುವಂತಹ ದಾಖಲೆಗಳು ನನ್ನ ಹತ್ತಿರ ಇವೆ, ಆದ್ದರಿಂದ ಇದು ತನಿಖೆಯಾಗಬೇಕು ಎಂಬಂತಹ ಮಾಹಿತಿಗಳು ಇದ್ದರೆ ಅದನ್ನು ಸಭೆ ಮುಂದೆ ಇಡಲಿ ಆಗ ನಾವು ತನಿಖೆ ಮಾಡಿಸಬಹುದು ಯಾರೋ ಕೊಟ್ಟಿದ್ದಾರೆ ಎನ್ನುವ ಊಹಾಪೋಹದ ಮಾತನ್ನು ಇಟ್ಟುಕೊಂಡು ತನಿಖೆ ಮಾಡಿಸಿ ಎನ್ನುವುದು ಸಮಂಜಸವೇ?

ಅಧ್ಯಕ್ಷರು ಬಸವರಾಜುರವರೇ ಈ ವಿಚಾರವನ್ನು ಮಾನ್ಯ ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅದನ್ನು ಬೇರೆಯವರು ಮಾಡಿರಬಹುದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಆದರೆ ಅವರು SC/ST Corporation ನಿಂದ ಕೊಟ್ಟಿದ್ದಾರೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ ಅದನ್ನು ಇಲಾಖಾ ಮಂತ್ರಿಗಳು ಸ್ಪಷ್ಟವಾಗಿ ನಿರಾಕರಣೆ ಮಾಡಿದ್ದಾರೆ ಅದು ಯಾರು ಮಾಡಿದ್ದಾರೆ, ಯಾರ mischief ಏನು ಎಂದು ಒಂದು ತನಿಖೆ ಮಾಡುವುದರ ಮೂಲಕ ಗೊತ್ತಾಗಲಿ

ಇಲಾಖಾ ಮಂತ್ರಿಯವರು ಸ್ಪಷ್ಟವಾಗಿ ನಿರಾಕರಣೆ ಮಾಡಿದ್ದಾರೆ ಅದನ್ನು ಯಾರು ಮಾಡಿದ್ದಾರೆ? ಯಾರ mischief ಎಂಬುದು ತನಿಖಾ ವರದಿಯಿಂದ ಗೊತ್ತಾಗಲಿ

ಶ್ರೀ ಎಸ್ ರಾಜೇಂದ್ರನ್ ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ವಿಚಾರದಲ್ಲಿ ಸತ್ಯಾಂಶ ಇದೆ ನಮಗೂ ಮಾನ್ಯ ಮುಖ್ಯಮಂತ್ರಿಯವರ ಮೇಲೆ ಗೌರವವಿರುವುದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ ನಮಗೆ ಅವರ ಮೇಲೆ ಪ್ರೀತಿ ಇರುವುದಕ್ಕೋಸ್ಕರ ನಮಗೂ ಒಂದು ಸಾವಿರ ವಾಚ್ ಅನ್ನು ಕೊಡಿ, ನಮ್ಮ ಊರಿನ ಜನರಿಗೆ ನಾವು ಕೊಡುತ್ತೇವೆ ನಮಗೆ ಅದು ಸಂತೋಷವೇ, ಮಾನ್ಯ ಮುಖ್ಯಮಂತ್ರಿಯವರ ಫೋಟೊ ಹಾಕಿದರೆ ನಮಗೆ ಏನು ನೋವಾ? ಇಲ್ಲ ನನಗೆ ಮಾನ್ಯ ಮುಖ್ಯಮಂತ್ರಿಯವರ ಮೇಲೆ ಅಪಾರವಾದ ಪ್ರೀತಿ ಇದೆ ಇದರಲ್ಲಿ ಏನೂ doubt ಇಲ್ಲ ನನಗೇನೆಂದರೆ C M ಯವರ ಫೋಟೊ ಹಾಕಿರುವ ವಾಚ್‌ನ manufacturer ಹೆಸರು ಇಲ್ಲ ಅಂದ ಮೇಲೆ Commercial Tax officers ಏನು ಮಾಡುತ್ತಿದ್ದಾರೆ? ಇದು ಎಲ್ಲಿಂದ ಬಂದಿದೆ? ಇದು ಹೊರಗಡೆಯಿಂದ ಬಂದಿದೆಯಾ? ನಾಳೆ ದಿವಸ ಇದು ಒಬ್ಬ terrorist ಕೈಯಲ್ಲಿ ಇದೆಯೆಂದರೆ, ಇದಕ್ಕೆ ಉತ್ತರವನ್ನು ಕೊಡುವವರು ಯಾರು? ತಾವು ಇದನ್ನು ಯೋಚನೆ ಮಾಡಿ, ಒಬ್ಬ criminal ಕೈಯಲ್ಲಿ ಹೋದರೆ ಏನು ಆಗುವುದು? ಅದಕ್ಕೋಸ್ಕರ ಮಾಡಿರುವವರು ಸರಿಯಾಗಿ ಮಾಡಬೇಕು ಇದರ manufacture ಎಲ್ಲಿ ಆಗಿದೆ ಅದು Made in

India ನಾ, Made in Karnataka ನಾ, Made in Japan ಎಂದು ಏನಾದರೂ ಈ ವಾಚ್‌ನಲ್ಲಿ ಇದೆಯಾ? ಅದು ಏನೂ ಇಲ್ಲ ಅದಕ್ಕೋಸ್ಕರ ಇದನ್ನು ಯಾರು ಮಾಡಿದ್ದು? ಇದನ್ನು ಮಾಡುವವರು ಧೈರ್ಯವಾಗಿ ಮಾಡಬೇಕು ಮುಖ್ಯಮಂತ್ರಿ is the Chief Minister of the state We are proud of him ಮಾಡಿ ಒಂದು ಹತ್ತು ಸಾವಿರ ವಾಚ್ ಮಾಡಿ ಕೊಡಲಿ, ನಾವು ಜನರಿಗೆ ಕೊಡುತ್ತೇವೆ ಮಾನ್ಯ ಮುಖ್ಯಮಂತ್ರಿಯವರ ಫೋಟೋ ಇರುವ ವಾಚ್ ಜನರ ಕೈಯಲ್ಲಿ ಇರಲಿ ಅದಕ್ಕೋಸ್ಕರವೇ ನಾವು ಇದನ್ನು ಕೇಳಿದ್ದು, Commercial Tax officers ಸಂಬಳವನ್ನು ತೆಗೆದುಕೊಂಡು ಮಹಾರಾಜರ ರೀತಿಯಲ್ಲಿ ಕುಳಿತಿದ್ದಾರೆಯೇ? ಎಲ್ಲಿ manufacture ಆಗಿದೆ ಎಂದು ಇಲ್ಲ ನಾವು ಬಜೆಟ್ ಮೇಲೆ, ವ್ಯಾಟ್ ಮೇಲೆ, ಟ್ಯಾಕ್ಸ್ ಮೇಲೆ ಮಾತನಾಡುತ್ತೇವೆ ಏನು ಪ್ರಯೋಜನ ಇದೆ? ಅದಕ್ಕೆ ಉತ್ತರವನ್ನು ಕೊಡಿ ಇದನ್ನು ಯಾರು ಮಾಡಿದ್ದಾರೆಂಬುದನ್ನು ತನಿಖೆ ಮಾಡಿ ಇದರಿಂದ ನಿಜ ಏನೆಂಬುದು ಗೊತ್ತಾಗುತ್ತದೆ

ಅಧ್ಯಕ್ಷರು ತನಿಖೆ ಮಾಡಿಯೆಂದು ಹೇಳಿದ್ದೇವಲ್ಲಾ ಮಾಡಿಸುತ್ತಾರೆ, ಬಿಡಿ ಇನ್ನು ಮುಂದಿನ ಪ್ರಶ್ನೆ ಶ್ರೀ ಎ ಎಸ್ ಬಸವರಾಜುರವರೆ, ಕೇಳಿ

ಪಶುವೈದ್ಯ ಕೇಂದ್ರ ಹಾಗೂ ಸಿಬ್ಬಂದಿಗಳ ಕೊರತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 233(1324)
ಸದಸ್ಯರ ಹೆಸರು ಶ್ರೀ ಬಸವರಾಜ ಎ ಎಸ್ (ಅರಸೀಕೆರೆ)
ಉತ್ತರಿಸುವ ಸಚಿವರು ಶ್ರೀ ರೇವುನಾಯಕ್ ಬೆಳಮಗಿ
(ಮಾನ್ಯ ಪಶುಸಂಗೋಪನೆ ಸಚಿವರು)

(ಅ) ಅರಸೀಕೆರೆ ತಾಲ್ಲೂಕಿನಲ್ಲಿ ಇರುವ ಪಶುವೈದ್ಯ ಚಿಕಿತ್ಸಾಲಯಗಳು ಹಾಗೂ ಪಶು ಘಟಕಗಳ ಸಂಖ್ಯೆ ಎಷ್ಟು?

ಅರಸೀಕೆರೆ ತಾಲ್ಲೂಕಿನಲ್ಲಿ 11 ಪಶು ಚಿಕಿತ್ಸಾಲಯಗಳು ಸೇರಿದಂತೆ ಒಟ್ಟು 34 ಪಶು ವೈದ್ಯ ಸಂಸ್ಥೆಗಳಿವೆ ಅವುಗಳ ವಿವರ ಈ ಕೆಳಗಿನಂತಿವ

1	ಪಶು ಆಸ್ಪತ್ರೆ	01
2	ಪಶುಚಿಕಿತ್ಸಾಲಯಗಳು	11
3	ಸಂಚಾರಿ ಪಶು ಚಿಕಿತ್ಸಾಲಯಗಳು	01
4	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	16
5	ಕೃತಕ ಗರ್ಭದಾರಣ ಕೇಂದ್ರ	05
ಒಟ್ಟು		34

(ಆ) ಈ ಚಿಕಿತ್ಸಾಲಯ ಹಾಗೂ ಘಟಕಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಮುಂದಾಗಿದೆಯೇ?

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಹಾಗೂ ಪಶು ಚಿಕಿತ್ಸಾಲಯಗಳನ್ನಾಗಿಯೇ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇಲಾಖೆಯಲ್ಲಿರುತ್ತದೆ ಇದಕ್ಕೆ ಯಾವುದೇ ಕಾಲಮಿತಿ ನಿಗಧಿ ಪಡಿಸಿರುವುದಿಲ್ಲ ಹಂತಹಂತವಾಗಿ ಅವಶ್ಯಕತೆಗೆ ಅನುಗುಣವಾಗಿ ಮಾಡಲಾಗುತ್ತಿದೆ

(ಇ) ಹಾಗಿದ್ದಲ್ಲಿ, ಎಷ್ಟು ಕೇಂದ್ರ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗುವುದು? ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಪಶುವೈದ್ಯ ಪಧವೀದರರ ತಾಂತ್ರಿಕ ಸೇವೆಯನ್ನು ಎಲ್ಲ ಪಶುವೈದ್ಯ ಸಂಸ್ಥೆಗಳಿಗೆ ಒದಗಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿಯೇ ಹಂತಹಂತವಾಗಿ ಮೇಲ್ದರ್ಜೆಗೇರಿಸುವುದು ಈ

ಹಿನ್ನೆಲೆಯಲ್ಲಿ ಪ್ರಸ್ತುತ 50 ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿಯೂ 150 ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭದಾರಣ ಕೇಂದ್ರಗಳನ್ನು ಹಾಗೂ ಪಶು ಚಿಕಿತ್ಸಾಲಯಗಳನ್ನಾಗಿಯೇ ಉನ್ನತೀಕರಿಸುವ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿದ್ದು, ಉನ್ನತೀಕರಣ ಮಾಡುವಾಗ ಅರಸೀಕೆರೆ ತಾಲ್ಲೂಕಿನ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳನ್ನು ಸಹ ಉನ್ನತೀಕರಿಸಲು ಪರಿಗಣಿಸಲಾಗುವುದು

(ಈ) ಈ ಚಿಕಿತ್ಸಾಲಯದಲ್ಲಿ ಅಗತ್ಯ ಸಿಬ್ಬಂದಿ ವರ್ಗ ಇದೆಯೇ?

ಹೌದು, ಅವಶ್ಯಕವಾದ ಸಿಬ್ಬಂದಿ ಈ ಪಶು ಚಿಕಿತ್ಸಾಲಯಗಳಿಗೆ ಮಂಜೂರು ಆಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ ಆದರೂ ಕೆಲವು ಹುದ್ದೆಗಳು ಖಾಲಿ ಇರುತ್ತವೆ ಅವುಗಳ ವಿವರ ಈ ಕೆಳಗಿನಂತೆ ಇರುತ್ತದೆ

ಕ್ರ.ಸಂ	ಹುದ್ದೆಯ ಹೆಸರು	ಮಂಜೂರು	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	01	01	00
2	ಪಶುವೈದ್ಯಾಧಿಕಾರಿಗಳು	13	10	03
3	ಪಶುವೈದ್ಯಕೀಯ ಮೇಲ್ವಿಚಾರಕರು	01	00	01
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	20	20	00
5	ಪಶುವೈದ್ಯಕೀಯ ಪರೀಕ್ಷಕರು	09	05	04
6	ಪಶುವೈದ್ಯಕೀಯ ಸಹಾಯಕರು	23	23	00
7	ವಾಹನ ಚಾಲಕರು	01	01	00
8	ಡಿ ದರ್ಜೆ ನೌಕರರು	45	32	13
ಒಟ್ಟು		113	92	21

(ಉ) ಇಲ್ಲದಿದ್ದಲ್ಲಿ ಸಿಬ್ಬಂದಿ ನೇಮಕಕ್ಕೆ ಸರ್ಕಾರ ಯಾವ ಕ್ರಮದಲ್ಲಿ ಅನುಕರಿಸುವುದು? (ಅಗತ್ಯಕ್ಕನುಗುಣವಾಗಿ ಬೇಕಾಗಿರುವ ಸಿಬ್ಬಂದಿ ವಿವರಗಳನ್ನು ಚಿಕಿತ್ಸಾಲಯ, ಕೇಂದ್ರ, ಘಟಕಗಳವಾರು ವಿವರ ಒದಗಿಸುವುದು)

ಶೇಕಡಾ 90ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10ರಷ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು, 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ

ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದಿಂದ-41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ - ನೀಡಬೇಕಾಗಿದೆ ಮತ್ತೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನುನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು, ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು, ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು, ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ-ದರ್ಜೆ ನೌಕರರ ಹುದ್ದೆಗಳನ್ನು ಔಟ್‌ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಪಶುಚಿಕಿತ್ಸಾಲಯವಾರು, ಘಟಕವಾರು ಹುದ್ದೆವಾರು

ಮಂಜೂರಾಗಿರುವ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ಸಲ್ಲಿಸಿದೆ

ಅನುಬಂಧ-1 ಪ್ರಶ್ನೆ ಸಂಖ್ಯೆ-1324

ಕ್ರ ಸಂ	ಪಶುವೈದ್ಯಕೀಯ ಸಂಸ್ಥೆಗಳ ಮತ್ತು ಸ್ಥಳಗಳ ಹೆಸರು	ಸಹಾಯಕ ನಿರ್ದೇಶಕರು			ಪಶುವೈದ್ಯಾಧಿಕಾರಿಗಳು			ಪ ವೈ ಮೇಲ್ವಿಚಾರಕರು			ಹಿರಿಯ ಪಶುಪರೀಕ್ಷಕರು			ಪಶುಪರೀಕ್ಷಕರು			ಪಶು ವೈದ್ಯಕೀಯ ಸಹಾಯಕರು			ಪ್ರದ ಸ			ದ್ವಿದ ಸ			ವಾಹನ ಚಾಲಕರು			ಡಿ ದರ್ಜೆ ನೌಕರರು		
		ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ
	ಅರಸೀಕೆರೆ ತಾಲ್ಲೂಕು																																	
1	ಪಶುಆಸ್ಪತ್ರೆ ಅರಸೀಕೆರೆ	1	1	0	1	1	0	1	0	1	0	0	0	0	0	0	0	0	0	0	0	0	0	0	0	0	0	0	2	1	1			
2	ಪ ಚಿ ಬಾಣಾವಾರ	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	2	2	0			
3	ಪ ಚಿ ಗಂಡಸಿ	0	0	0	1	1	0	0	0	0	0	0	0	1	1	0	1	1	0	0	0	0	0	0	0	0	0	0	1	1	0			
4	ಪ ಚಿ, ಡಿ ಎಂ ಕುರ್ಕೆ	0	0	0	1	1	0	0	0	0	1	1	0	0	0	0	1	1	0	0	0	0	0	0	0	0	0	0	2	2	0			
5	ಪ ಚಿ ಕೆಂಕೆರೆ	0	0	0	1	1	0	0	0	0	1	1	0	0	0	0	1	1	0	0	0	0	0	0	0	0	0	0	2	1	1			

6	ಪ ಚಿ ಜಾವಗಲ್	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	2	2	0
7	ಪ ಚಿ ಕರಗುಂದ	0	0	0	1	1	0	0	0	0	1	1	0	0	0	0	1	1	0	0	0	0	0	0	0	0	0	0	2	1	1
8	ಪ ಚಿ ಕಣಕಟ್ಟೆ	0	0	0	1	0	1	0	0	0	1	1	0	0	0	0	0	0	0	0	0	0	0	0	0	0	0	0	2	1	1
9	ಪ ಚಿ, ಬಾಗೀವಾಳು	0	0	0	1	1	0	0	0	0	1	1	0	0	0	0	0	0	0	0	0	0	0	0	0	0	0	0	2	1	1
10	ಪ ಚಿ, ಬೆಳಗುಂಬ	0	0	0	1	0	1	0	0	0	0	0	0	1	0	1	0	0	0	0	0	0	0	0	0	0	0	0	2	1	1
11	ಪ ಚಿ ಹಾರನಹಳ್ಳಿ	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	2	1	1
12	ಪ್ರಾ.ಪ ಚಿ ಹಿರಿಯೂರು	0	0	0	0	0	0	0	0	0	0	0	0	1	0	1	1	1	0	0	0	0	0	0	0	0	0	0	1	1	0
13	ಪ್ರಾ.ಪ ಚಿ ಬಾಳೇನಹಳ್ಳಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
14	ಪ ಚಿ ಜೆ ಸಿ ಪುರ	0	0	0	1	1	0	0	0	0	0	0	0	1	1	0	1	1	0	0	0	0	0	0	0	0	0	0	1	1	0
15	ಪ್ರಾ.ಪ ಚಿ ಅಗ್ಗುಂದ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
16	ಪ್ರಾ.ಪ ಚಿ ಕೊಂಡವಾಗಿಲು	0	0	0	0	0	0	0	0	0	0	0	0	1	0	1	1	1	0	0	0	0	0	0	0	0	0	0	1	1	0
17	ಪ್ರಾ.ಪ ಚಿ ಕಲ್ಗುಂಡಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0

18	ಪ್ರಾಪ ಚಿ ಬ್ಯಾಡರಹಳ್ಳಿ	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	1	0	1
19	ಪ್ರಾಪ ಚಿ ಗೊಲ್ಲರಹಟ್ಟಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
20	ಕೃ ಗ ಕೇಂದ್ರ, ಅರಕೆರೆ	0	0	0	0	0	0	0	0	0	0	0	0	1	1	0	0	0	0	0	0	0	0	0	0	0	0	0	1	1	0
21	ಪ್ರಾಪ ಚಿ ಬೇವಿನಹಳ್ಳಿ	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	1	1	0
22	ಪ್ರಾಪ ಚಿ ಗಂಡಸಿ ಸರ್ಕಲ್	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
23	ಪ್ರಾಪ ಚಿ ಯಡುವನಹಳ್ಳಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
24	ಕೃ ಗ ಕೇಂದ್ರ, ಮುದುಡಿ	0	0	0	0	0	0	0	0	0	0	0	0	1	1	0	0	0	0	0	0	0	0	0	0	0	0	0	1	1	0
25	ಪ್ರಾಪ ಚಿ ರಾಂಪುರ	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	1	1	0
26	ಪ್ರಾಪ ಚಿ ಕಿತ್ತನಕೆರೆ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	0	1

27	ಪ್ರಾ.ಪ ಚಿ ಕಾಮಸಮುದ್ರ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
28	ಪ್ರಾ.ಪ ಚಿ ಕೋಳಗುಂದ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
29	ಪ್ರಾ.ಪ ಚಿ ಉಂಡಿಗನಾಳು	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	0	1
30	ಪ್ರಾ.ಪ ಚಿ ಕಲ್ಕಾಡಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	1	0
31	ಪ್ರಾ.ಪ ಚಿ ದೇಶಾಣಿ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	0	1
32	ಕೃ ಗ ಕೇಂದ್ರ, ನೇರ್ಲಿಗೆ	0	0	0	0	0	0	0	0	0	0	0	0	1	1	0	0	0	0	0	0	0	0	0	0	0	0	0	1	1	0
33	ಪ್ರಾ.ಪ ಚಿ ತೊಳಲುತೊರೆ	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	1	0	1
34	ಕೃ ಗ ಕೇಂದ್ರ, ಬಾಗೇಶಪುರ	0	0	0	0	0	0	0	0	0	0	0	0	1	0	1	0	0	0	0	0	0	0	0	0	0	0	0	1	1	0
35	ಸಂ ಪ ಚಿ ಅರಸೀಕೆರೆ	0	0	0	1	1	0	0	0	0	0	0	0	0	0	0	0	0	0	0	0	0	0	0	0	1	1	0	1	1	1
	ಒಟ್ಟು-	1	1	0	13	10	3	1	0	1	20	20	0	9	5	4	23	23	0	0	0	0	0	0	0	1	1	0	45	33	12

ಪ್ರಶ್ನೆ 233(1324)

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ದೊರೆತಿದೆ ಆದರೆ ಸಮರ್ಪಕವಾಗಿಲ್ಲದೇ ಇರುವುದರಿಂದ ಈ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ ಅರಸೀಕೆರೆ ತಾಲ್ಲೂಕಿನಲ್ಲಿ ಇರುವ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸಬೇಕೆಂದು ಹತ್ತು ವರ್ಷಗಳಿಂದಲೂ ಆಗ್ರಹ ಮಾಡಿದ್ದೇವೆ ಆದರೆ ಗಂಡಸಿ, ಬಾಣಾವರ, ಡಿ ಎಂ ಕುಡಿಕೆ, ಜಾವಗಲ್‌ನಲ್ಲೂ ಕೂಡ ಪಶು ಆಸ್ಪತ್ರೆಗಳನ್ನು ಮಾಡಬೇಕೆಂದು ಕೇಳಿದ್ದರೂ ಕೂಡ ಅಲ್ಲಿ ಇವತ್ತಿನವರೆಗೂ ಕೂಡ ಆಗಿಲ್ಲ ಅದೇ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೂ ಪಶು ಚಿಕಿತ್ಸಾಲಯಗಳನ್ನು ಮಾಡುವುದಕ್ಕೆ ಕಳೆದ ಐದು ವರ್ಷಗಳಿಂದಲೂ ನಾವು ಕಳುಹಿಸಿಕೊಡುತ್ತಿದ್ದೇವೆ ಹಾಗೆ ಹಗ್ಗುಂದ, ಹಿರಿಯೂರು, ಕೋಳಗುಂದ, ಬಾಗೇಶಪುರ, ಕಾಮಸಮುದ್ರ, ಕಲ್ಲುಂಡಿ, ಈ ಆರು ಸ್ಥಳಗಳನ್ನು ಕಳೆದ ಐದು ವರ್ಷಗಳಿಂದಲೂ ಮೇಲ್ದರ್ಜೆಗೇರಿಸುವ ಪ್ರಯತ್ನವನ್ನು ಮಾಡಿದ್ದೇವೆ ಆದರೂ ಇವತ್ತಿನವರೆಗೂ ಕೆಲಸವಾಗಿಲ್ಲ, ಹಾಗೆ ಹೊಸದಾಗಿ ಪಶು ಘಟಕಗಳನ್ನು ತೆಗೆಯಬೇಕೆಂದು ನಿಶ್ಚಯ ಮಾಡಿರುವಂತಹ ಬೆಂಡೆಕೆರೆ, ರಂಗಾಪುರ, ಮುರುಂಡಿ, ದುಮ್ಮೆನಳ್ಳಿ, ಸಾನೆಗೆರೆ, ಈ ಐದು ಸ್ಥಳಗಳಿಗೆ ಸುಮಾರು ಮೂರು ವರ್ಷಗಳಿಂದ ಪ್ರಯತ್ನವನ್ನು ಮಾಡಿದ್ದೇವೆ ಇದು ಸಹ ಇವತ್ತಿನ ವರೆಗೂ ಆಗಿಲ್ಲ, ನಮ್ಮಲ್ಲಿ ಪಶು ವೈದ್ಯಾಧಿಕಾರಿಗಳ ಹುದ್ದೆ ಕಳೆದ ಹತ್ತು ವರ್ಷಗಳಿಂದಲೂ ಖಾಲಿ ಇದೆ ಇದಕ್ಕೆ ಸರಿಯಾದಂಥ ಉತ್ತರ ಬಂದಿಲ್ಲ 'ಡಿ' ದರ್ಜೆಯ ನೌಕರರ ಹುದ್ದೆ ಖಾಲಿ ಇದೆ ಅರಸೀಕೆರೆ ತಾಲ್ಲೂಕು ದೊಡ್ಡ ಕ್ಷೇತ್ರವಾಗಿದ್ದು, ಇಲ್ಲಿ ಒಂದು ಜೀಪ್ ಇಲ್ಲ, ಚಾಲಕನೂ ಇಲ್ಲ ಇಲ್ಲಿ ಔಷಧಗಳ ವಿತರಣೆ, ವೀರ್ಯ ವಿತರಣೆ, ಬೀಜಗಳ ವಿತರಣೆ ಮಾಡಬೇಕಾದರೆ, ನಮ್ಮಲ್ಲಿ ಯಾವುದೇ ವಾಹನ ಸೌಲಭ್ಯವಿಲ್ಲವೆಂದು ಹೇಳುತ್ತಿದ್ದಾರೆ ಅಲ್ಲಿಗೆ ತುರ್ತಾಗಿ ಒಂದು ವಾಹನ ಬೇಕು, ಚಾಲಕರು ಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ರಾಜ್ಯದಲ್ಲಿ ಎಷ್ಟು ಕೇಂದ್ರ ಘಟಕಗಳು ಇವೆ? ಇವುಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಎಂದು ಪ್ರಶ್ನೆಯನ್ನು ಕೇಳಿದ್ದಾರೆ ಇದಕ್ಕೆ ಪಶುವೈದ್ಯ ಪದವಿಧರರ ತಾಂತ್ರಿಕ ಸೇವೆಯನ್ನು ಎಲ್ಲ ಪಶುವೈದ್ಯ ಸಂಸ್ಥೆಗಳಿಗೆ ಒದಗಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿಯೇ ಹಂತಹಂತವಾಗಿ ಮೇಲ್ದರ್ಜೆಗೇರಿಸಲಾಗುವುದು ಈ ಹಿನ್ನೆಲೆಯಲ್ಲಿ ಪ್ರಸ್ತುತ 50 ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿಯೂ ಮತ್ತು 150 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಹಾಗೂ ಪಶು

ಚಿಕಿತ್ಸಾಲಯಗಳನ್ನಾಗಿಯೇ ಉನ್ನತೀಕರಿಸುವ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿದ್ದು, ಉನ್ನತೀಕರಣ ಮಾಡುವಾಗ ಅರಸೀಕೆರೆ ತಾಲ್ಲೂಕಿನ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳನ್ನು ಸಹ ಉನ್ನತೀಕರಿಸಲು ಪರಿಗಣಿಸಲಾಗುವುದು ಇನ್ನು ಚಿಕಿತ್ಸಾಲಯದಲ್ಲಿ ಅಗತ್ಯ ಸಿಬ್ಬಂದಿ ವರ್ಗ ಇದೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದಾರೆ ಹೌದು, ಅವಶ್ಯಕವಾದ ಸಿಬ್ಬಂದಿ ಈ ಪಶು ಚಿಕಿತ್ಸಾಲಯಗಳಿಗೆ ಮಂಜೂರು ಆಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ ಆದರೂ ಕೆಲವು ಹುದ್ದೆಗಳು ಖಾಲಿ ಇರುತ್ತವೆ ಅವುಗಳ ವಿವರಗಳನ್ನು ಕೊಡಲಾಗಿದೆ ಇನ್ನು ಸಿಬ್ಬಂದಿ ನೇಮಕಕ್ಕೆ ಸರ್ಕಾರ ಯಾವ ಕ್ರಮವನ್ನು ಅನುಸರಿಸಿದೆಯೆಂದು ಕೇಳಿದ್ದಾರೆ ಅಗತ್ಯಕ್ಕನುಗುಣವಾಗಿ ಬೇಕಾಗಿರುವ ಸಿಬ್ಬಂದಿ ವಿವರಗಳನ್ನು ಚಿಕಿತ್ಸಾಲಯ ಕೇಂದ್ರ ಘಟಕಗಳವಾರು ವಿವರ ಒದಗಿಸಬೇಕೆಂದು ಕೇಳಿದ್ದಾರೆ ಇದಕ್ಕೆ ಉತ್ತರ ಶೇಕಡಾ 90ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10ರಷ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು, ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ ಸುಮಾರು ವರ್ಷಗಳಿಂದ ಬಹಳಷ್ಟು ಹುದ್ದೆಗಳು ಖಾಲಿ ಇವೆ ಇದನ್ನು ಹಂತ ಹಂತವಾಗಿ ತುಂಬಬೇಕೆಂಬ ಪ್ರಯತ್ನವನ್ನು ಮಾಡುತ್ತಿದ್ದೇವೆ ಇದೇ ಸದಸ್ಯರು ಕೇಳಿದಂತೆ, ಅರಸೀಕೆರೆ ತಾಲ್ಲೂಕನ್ನು ಹಂತ ಹಂತವಾಗಿ ಮೇಲ್ದರ್ಜೆಗೆ ಏರಿಸುವುದಾಗಿ, ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ಔಷಧಿಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ ಅದು ಕಾಲು ಜ್ವರವಿರಬಹುದು, ಲಸಿಕೆ ಇರಬಹುದು, ಸಾಕಷ್ಟು

ಔಷಧಿಗಳನ್ನು ವಿತರಣೆ ಮಾಡದೇ ಇರುವಂಥಾದ್ದು ಇದೆ ದಯವಿಟ್ಟು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಇದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ದಲಿತರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 234(1613)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್(ಮುಂಡರಗಿ)
ವಿಷಯ ದಲಿತರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವುದು
ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಲ ಜಾರಕಿಹೊಳಿ
(ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ದಲಿತರ ಮೇಲಾದ ದೌರ್ಜನ್ಯ ಪ್ರಕರಣವೆಷ್ಟು (ಕಳೆದ ಐದು ವರ್ಷಗಳ ವಿವರ ನೀಡುವುದು),

ಕಳೆದ 5 ವರ್ಷಗಳಲ್ಲಿ ದಲಿತರ ಮೇಲೆ ನಡೆದಿರುವ ದೌರ್ಜನ್ಯಗಳು

ವರ್ಷ		ಪ್ರಕರಣಗಳು
2002	–	1232
2003	–	1293
2004	–	1232
2005	–	1306
2006	–	1162

ಆ) ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ಸರ್ಕಾರ ಕೈಕೊಂಡ ಕ್ರಮಗಳೇನು?

ದೌರ್ಜನ್ಯ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಈ ಕೆಳಗೆ ವಿವರಿಸಲಾಗಿದೆ,

1 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಯಮ 1989ರ ಕಲಂ 14ರ ರೀತ್ಯಾ ಮೈಸೂರು, ಬೆಳಗಾಂ, ಬಿಜಾಪುರ, ರಾಯಚೂರು, ಕೋಲಾರ, ಗುಲ್ಬರ್ಗಾ ಮತ್ತು ತುಮಕೂರು ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿರುತ್ತದೆ ಅದೇ ರೀತ್ಯಾ ತ್ವರಿತಗತಿಯಲ್ಲಿ ಪ್ರಕರಣಗಳ ವಿಲೇವಾರಿಗಾಗಿ ಉಳಿದ ಜಿಲ್ಲೆಗಳಲ್ಲಿನ ಜಿಲ್ಲಾ ಸತ್ರ ನ್ಯಾಯಾಲಯಗಳನ್ನು ಕಲಂ 14ರ

ಮೇಲ್ಕಂಡ ಅದಿನಿಯಮದಡಿ ವಿಶೇಷ ನ್ಯಾಯಾಲಯಗಳನ್ನಾಗಿ ನಾಮಕರಣ ಮಾಡಲಾಗಿರುತ್ತದೆ

2 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಯಮ 1989ರ ಕಲಂ 15ರ ರೀತ್ಯಾ ವಿಶೇಷ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಅಭಿಯೋಜಕರನ್ನು ವಿಶೇಷ ಸರ್ಕಾರಿ ಅಭಿಯೋಜಕರೆಂದು ನಾಮಕರಣ ಮಾಡಲಾಗಿದೆ

3 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ನಿಯಮಗಳ 1995ರ ನಿಯಮ 9ರ ರೀತ್ಯಾ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (ಕಾನೂನು ಮತ್ತು ಸುವ್ಯವಸ್ಥೆ)ರವರನ್ನು ಸಮನ್ವಯ (ನೋಡಲ್) ಅಧಿಕಾರಿಯನ್ನಾಗಿ ನೇಮಿಸಲಾಗಿದೆ

4 ದೌರ್ಜನ್ಯ ಪ್ರಕರಣಗಳ ಪರಿಪೂರ್ಣ ಅಭಿಯೋಜನೆಗಾಗಿ ನೊಂದವರಿಗೆ ಮತ್ತು ಸಾಕ್ಷಿಗಳಿಗೆ ಪ್ರವಾಸ ಭತ್ಯೆ, ದಿನಭತ್ಯೆ ಮತ್ತು ನಿರ್ವಹಣೆ ಭತ್ಯೆಯನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ

5 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ನಿಯಮಗಳು 1995ರ ನಿಯಮ 12ರ ರೀತ್ಯಾ ನೊಂದವರಿಗೆ ಪರಿಹಾರಧನ ನೀಡುವುದರ ಜೊತೆಗೆ ಇನ್ನಿತರೆ ಸಹಾಯ ಮತ್ತು ಪುನರ್‌ವಸತಿ ಸೌಕರ್ಯ ಒದಗಿಸಲು ಜಿಲ್ಲಾ ಆಡಳಿತವನ್ನು ಉತ್ತೇಜಿಸಲಾಗಿದೆ

6 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ನಿಯಮಗಳು 1995ರ ನಿಯಮ 15ರ ರೀತ್ಯಾ ಪರಿಣಾಮಕಾರಿಯಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯನ್ನು ಜಾರಿಗೊಳಿಸಲು ಕರ್ನಾಟಕ ಸರ್ಕಾರದ ಮಾದರಿ ಸಂಭವನೀಯ ಯೋಜನೆಯನ್ನು ತಯಾರಿಸಿ ಗಜೆಟ್‌ನಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ ಈ ಸಂಭವನೀಯ ಯೋಜನೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯನ್ನು ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅವರುಗಳ ಪಾತ್ರ ಮತ್ತು ಜವಾಬ್ದಾರಿಯನ್ನು ಸ್ಪಷ್ಟವಾಗಿ ಹೇಳಲಾಗಿದೆ

7 ನಿಯಮ 16ರಡಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ರಚಿಸಲಾಗಿದೆ

8 ನಿಯಮ 17ರ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟರ ನೇತೃತ್ವದಲ್ಲಿ ಒಂದು ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯನ್ನು ಸಂಯೋಜಿಸಲಾಗಿದೆ

9 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ನಿಯಮಗಳ ನಿಯಮ 7ರ ಅಡಿ ಈ ದೌರ್ಜನ್ಯ ಪ್ರಕರಣಗಳನ್ನು ತನಿಖೆ ಮಾಡಲು ಆರಕ್ಷಕ

ಉಪಾಧೀಕ್ಷಕರ ಹುದ್ದೆಯ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತದೆ ಅವರುಗಳು ಈ ಪ್ರಕರಣಗಳಲ್ಲಿ ತನಿಖೆಯನ್ನು 30 ದಿವಸಗಳಲ್ಲಿ ಮುಗಿಸಲು ಸುತ್ತೋಲೆಗಳನ್ನು ನೀಡಲಾಗಿರುತ್ತದೆ

10 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರನ್ನು ಶಿಕ್ಷಿಸಲು ಕರ್ನಾಟಕ ಎಸ್‌ಸಿ ಎಸ್‌ಟಿ ಬ್ಯಾಕ್‌ವರ್ಡ್ ಕ್ಲಾಸ್ (ರಿಸರ್ವೇಷನ್ ಆಫ್ ಅಪಾಯಿಂಟ್‌ಮೆಂಟ್) ಆಕ್ಟ್ 1990 ಮತ್ತು ನಿಯಮ 2000 ಗಳನ್ನು ಜಾರಿಗೆ ತರಲಾಗಿದೆ ಈ ಕಾಯಿದೆಯಡಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯನ್ನು ಸಂಯೋಜಿಸಲಾಗಿದೆ ಈ ಸಮಿತಿ ಇಂತಹ ಪ್ರಕರಣಗಳ ಜಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ‑ತೆಗೆದುಕೊಳ್ಳುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಮೊದಲನೇ ಪ್ರಶ್ನೆ ರಾಜ್ಯದಲ್ಲಿ ದಲಿತರ ಮೇಲಾದ ದೌರ್ಜನ್ಯ ಪ್ರಕರಣಗಳೆಷ್ಟು? ಕಳೆದ ಐದು ವರ್ಷಗಳ ವಿವರವನ್ನು ನೀಡಬೇಕೆಂದು ಕೇಳಿದ್ದೆ ಆದರ ವಿವರವನ್ನು ಕೊಟ್ಟಿದ್ದಾರೆ ಇದರ ವಿವರಗಳನ್ನು ನೋಡಿದರೆ, ಅದು ಏನೂ ಕಡಿಮೆಯಾಗಿಲ್ಲ, ಒಂದು ಲೆಕ್ಕದಲ್ಲಿ ಅಷ್ಟೆ, ಎನ್ನುವ ಲೆಕ್ಕದಲ್ಲಿ ಇದೆ ನಿಮಗೆ ಗೊತ್ತಾಗಿರುವಂಥಾದ್ದು ಅಷ್ಟೆ, ಇನ್ನು ಗೊತ್ತಿಲ್ಲದೇ ಇರುವಂಥಾದ್ದು ಹಳ್ಳಿಗಳಲ್ಲಿ ತಾನೇ ತಾನಾಗಿ ಮುಚ್ಚಿ ಹೋಗಿರುತ್ತವೆ ಇನ್ನು ಎರಡನೆಯದಾಗಿ ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂಬ ಪ್ರಶ್ನೆಗೆ ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ ನಾನು ಅದೆಲ್ಲವನ್ನು ಓದುವುದಕ್ಕೆ ಹೋದರೆ, ಬಹಳ ಸಮಯವಾಗುತ್ತದೆ ನಾನು ಇನ್ನೂ ಒಂದು ಪ್ರಶ್ನೆಯನ್ನು ಹಾಕಿದ್ದೆ ಬಹುಶಃ ಅದು un-starred question ಆಗಿರಬೇಕು ರಾಜ್ಯದಲ್ಲಿ ಇಂದಿಗೂ ಕೂಡ ಅಸ್ಪೃಶ್ಯತೆ ಅಚರಣೆ ಇದೆ ನಾನು ಇದೆಯಾ? ಎಂದು ಪ್ರಶ್ನೆ ಕೇಳಿದ್ದೆ ಅದಕ್ಕೆ ತಾವು ಏನು ಉತ್ತರವನ್ನು ಕೊಟ್ಟಿದ್ದೀರೆಂಬುದನ್ನು ನೋಡುತ್ತೇನೆ ಇವತ್ತಿಗೂ ಕೂಡ ರಾಜ್ಯದಲ್ಲಿ ಅಸ್ಪೃಶ್ಯತೆಯ ಆಚರಣೆ ಹೋಗಿಲ್ಲ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಇನ್ನೂ ಇದನ್ನು ತಡೆಯುವುದಕ್ಕೆ ಆಗಿಲ್ಲ ಇದನ್ನು ತಡೆಯುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಜನರಲ್ಲಿ ತಿಳುವಳಿಕೆ ಮೂಡಿಸುವಂಥಾದ್ದಕ್ಕೆ, ತಾವು ಇಲ್ಲಿ ಏನು ಹೇಳಿದ್ದೀರೆಂದರೆ, ತಾವು ಒಂದು ಕಮಿಟಿಯನ್ನು ಮಾಡಿದ್ದೀರಿ ನಿಯಮ 17ರ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟರ ನೇತೃತ್ವದಲ್ಲಿ ಒಂದು ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯನ್ನು ನಿಯೋಜಿಸಲಾಗಿದೆಯೆಂದು ಹೇಳಿದ್ದಾರೆ ಆ ಕಮಿಟಿಗಳು ಕೆಲಸ ಮಾಡುತ್ತದೆಯೇ? ಏನೂ ಕೆಲಸವನ್ನು ಮಾಡುವುದಿಲ್ಲ,

ಎಲ್ಲೂ ಹೋಗುವುದಿಲ್ಲ ಜಾಗೃತಿಯನ್ನು ಮೂಡಿಸುವುದಿಲ್ಲ, ಅವರು ಓಡಾಡುವುದಿಲ್ಲ, ತಿಳುವಳಿಕೆಯನ್ನು ಕೊಡುವುದಿಲ್ಲ ಇದನ್ನು ತಡೆದ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇರೆ ಇವರು ಇಲ್ಲಿ ಏನು ಹೇಳಿದ್ದಾರೆ ಕಂಬಾಲಪಲ್ಲಿ ಕೇಸಿನಲ್ಲಿ ತೀರ್ಪು ಬಿಡುಗಡೆಯಾಗಿದೆ ಅದು ಆದಮೇಲೆ ಸಾಕ್ಷಿಗಳು, ಪುರಾವೆಗಳು ಏನು ಆಗುತ್ತವೆಯೋ ಅದು ಬೇರೆ ಆ ರೀತಿಯಾಗದ ಹಾಗೆ ತಾವು ಏನು ಕ್ರಮವನ್ನು ತಂದಿದ್ದೀರಿ? ಜನರಲ್ಲಿ ಸಾಮರಸ್ಯವನ್ನು ಮೂಡಿಸಿ, ಅವರೆಲ್ಲರೂ ಒಂದಾಗಿ ಬಾಳುವಂತೆ ತಾವು ಸರ್ಕಾರದ ವತಿಯಿಂದ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಮತ್ತೆ ಅಸ್ಪೃಶ್ಯತೆ ಆಚರಣೆಯನ್ನು ನಿಲ್ಲಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ರಾಜ್ಯದಲ್ಲಿ ಅಸ್ಪೃಶ್ಯತೆಯ ಆಚರಣೆ ಇದೆಯೋ, ಇಲ್ಲವೋ ಎಂಬುದನ್ನು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ

ಡಾ ಹೆಚ್ ಸಿ ಮಹದೇವಪ್ಪ ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ದಲಿತರ ಮೇಲೆ ನಡೆಯತಕ್ಕಂಥ atrocities ದಿನೇದಿನೇ ಹೆಚ್ಚಾಗುತ್ತಿದೆ ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಉತ್ತರದಲ್ಲಿ ಪ್ರಕರಣಗಳ ವಿವರಗಳನ್ನು ಕೊಟ್ಟಿದ್ದಾರೆ ಮಾನ್ಯ ಪಾಟೀಲರು ಹೇಳಿದ ಹಾಗೆ, ಅವರ ಜಿಲ್ಲೆಯಾದ ಗದಗ್‌ನಲ್ಲಿಯೇ ದೌರ್ಜನ್ಯ ನಡೆದಿದೆ, ಕೊಲೆಯೂ ಆಗಿ ಹೋಯಿತು ಅದನ್ನು mention ಮಾಡಿಲ್ಲ ಕಡಕೋಳ ಗ್ರಾಮದಲ್ಲಿ ಕೆರೆ ನೀರು ತೆಗೆದುಕೊಳ್ಳುವ ವಿಚಾರದಲ್ಲಿ ದೌರ್ಜನ್ಯವಾಯಿತು ಬೀದರ್‌ನಲ್ಲಿ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ವಿಷಯದಲ್ಲಿ ಒಂದು ದೊಡ್ಡ ಗಲಾಟೆಯೇ ಆಯಿತು ಈ ರೀತಿಯ ಘಟನೆಗಳು ದಿನನಿತ್ಯ ನಡೆಯುತ್ತಿದ್ದು, ಆ ಜನರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಮೇಲೆತ್ತುವ ಕಡೆ ಸರ್ಕಾರ ಗಮನಹರಿಸಬೇಕು ಈ ರೀತಿಯ ಗಲಾಟೆಗಳು, ಜಾತಿ ವೈಷಮ್ಯಗಳು, ಅಸಮಾನತೆಗಳು ನಡೆದಾಗ ಸರ್ಕಾರ ನಿರ್ದಿಷ್ಟವಾದ ಮತ್ತು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಹಿಂದೆ, 1985ನೇ ಇಸವಿಯಲ್ಲಿ ರಾಮಕೃಷ್ಣ ಹೆಗಡೆಯವರ ಸರ್ಕಾರವಿದ್ದಾಗ, S C /S T ಗಳ ಮೇಲೆ ದೌರ್ಜನ್ಯ ಪ್ರಕರಣಗಳಾದರೆ ಅದಕ್ಕೆ ಜಿಲ್ಲಾ S P ಮತ್ತು D C ಯವರನ್ನು ಹೊಣೆಗಾರರನ್ನಾಗಿ ಮಾಡುತ್ತಿದ್ದರು ಅವರೇ ಅದಕ್ಕೆ ನೇರವಾಗಿ ಜವಾಬ್ದಾರರಾಗುತ್ತಿದ್ದರು ಈಗ ಆ ರೀತಿಯ ಒಂದು ಕ್ರಮವಿಲ್ಲ ಸಾಮಾಜಿಕ ಬಹಿಷ್ಕಾರಕ್ಕೇ atrocity ಸೀಮಿತವಾಗುವುದಿಲ್ಲ ಸರ್ಕಾರ ನಿಗದಿ ಮಾಡಿದಂಥ S C/S T ಯವರ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು, ಮತ್ತು ಅದರ ಹಣವನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದು, ದುರುಪಯೋಗ ಮಾಡುವುದು, lapes ಮಾಡಿದರೂ ಸಹ they also amount to practice of untouchablity under the Constitution ಇವುಗಳನ್ನೆಲ್ಲ ನೀವು

ಆಚರಣೆಗೆ ತರುವುದರ ಜೊತೆಗೆ, ಆ ಜನರಿಗೆ ಸೂಕ್ತವಾದಂಥ ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಕಾರ್ಯಕ್ರಮಗಳನ್ನು ಮಾಡುವುದು ಆಗಬೇಕು Chief Ministerರವರ ಅಧ್ಯಕ್ಷತೆಯಲ್ಲಿ High Power Committee ಇದೆ ಆದರೆ ಆ High Power Committee meet ಆಗುವುದೇ ಇಲ್ಲ ಅವರ developments ಬಗ್ಗೆ, ಅವರ ಮೇಲೆ ನಡೆಯತಕ್ಕಂಥ ದೌರ್ಜನ್ಯಗಳ ಬಗ್ಗೆ ಮತ್ತು ಅವರ ಬಗೆಗಿನ ಕಾರ್ಯಕ್ರಮಗಳ ಬಗ್ಗೆ ನೋಡಲು ಇರುವ High Power Committeeಗೆ Chief Minister is the Chairman This High Power Committee has never met ಈ ರೀತಿಯ ತಾತ್ಸಾರದ ಭಾವನೆಗಳು ಈ ಜನರಿಗೆ ಯಾವ ರೀತಿಯ ಧೈರ್ಯವನ್ನು ತುಂಬುತ್ತವೆ? ಮತ್ತು ಸರ್ಕಾರದವರು ಅವರಿಗೆ ಯಾವ ರೀತಿಯ ಆರ್ಥಿಕ ಕಾರ್ಯಕ್ರಮಗಳನ್ನು ಕೊಡುತ್ತಾರೆ ಆರ್ಥಿಕ ಕಾರ್ಯಕ್ರಮದಡಿಯಲ್ಲಿ ಇವರಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಕೊಟ್ಟಿದ್ದೀರಿ ಅದು implement ಆಗಿದೆಯೇ? ಈ ಯೋಜನೆಯಡಿ ಕೊರೆದಂಥ ಕೊಳವೆಬಾವಿಗಳಿಗೆ energize ಆಗಿದೆಯೇ ಎನ್ನುವುದನ್ನು ನೋಡಬೇಕು ಈ ರೀತಿಯ ಅನೇಕ ಕಾರ್ಯಕ್ರಮಗಳಿವೆ ಅವರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮೇಲೆತ್ತುವ ಕಾರ್ಯಕ್ರಮಗಳನ್ನು ಒಂದು ಕಡೆಯಲ್ಲಿ ಮಾಡುತ್ತಿದ್ದರೆ, ಇನ್ನೊಂದು ಕಡೆಯಲ್ಲಿ ಅವರನ್ನು ಬದುಕುವುದಕ್ಕೇ ಬಿಡದಿರತಕ್ಕಂಥ ಹೀನಾಯ ಪರಿಸ್ಥಿತಿ ಕರ್ನಾಟಕದಂಥ ಅಭಿವೃದ್ಧಿ ಪರ ರಾಜ್ಯದಲ್ಲಿದೆ ಅದರ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಸರ್ಕಾರ S C /S T ಯವರ ಕಾರ್ಯಕ್ರಮಗಳಿಗೋಸ್ಕರ ಕೊಡುವ ಹಣವನ್ನು ಉಪಯೋಗ ಮಾಡದೇ ಅದನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದರೆ, ಅದರ ದುರ್ಬಳಕೆಯಾದರೆ, it should be considered as the practise of untouchability and serious action such practices should be taken against ಅದನ್ನು ಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಆರ್ ಧ್ರುವನಾರಾಯಣ್ (ಸಂತೇಮರಳ್ಳಿ) ಮಾನ್ಯ ಅಧ್ಯಕ್ಷರೇ, ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದರೆ, ದೌರ್ಜನ್ಯಗಳಾಗಿರತಕ್ಕಂಥ ಪ್ರಕರಣಗಳನ್ನು ಯಾವರೀತಿ ವಿಲೇವಾರಿ ಮಾಡಬೇಕು ಎನ್ನುವುದಕ್ಕೆ ತಾವು ಉತ್ತರ ಕೊಟ್ಟಿದ್ದೀರಿ ಆದರೆ, ಇಂಥ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕೆ ಜನಜಾಗೃತಿ ಸಭೆಗಳನ್ನು ನಡೆಸತಕ್ಕಂಥಾದ್ದು, ಅವರಿಗೆ ಧೈರ್ಯ ತುಂಬತಕ್ಕಂಥಾದ್ದು, ಅಸ್ಪೃಶ್ಯತಾ ನಿವಾರಣಾ ಕ್ರಮವಾಗಿ ಇನ್ನಿತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕಂಥಾದ್ದನ್ನು ತಾವು ಉತ್ತರದಲ್ಲಿ mention

ಮಾಡಿಲ್ಲ ದೌರ್ಜನ್ಯ ಪ್ರಕರಣಗಳು ದಾಖಲಾದಾಗ, ಅವುಗಳನ್ನು ಯಾವ ರೀತಿ ಮಾಡಬೇಕು ಎನ್ನತಕ್ಕಂಥಾದ್ದಕ್ಕೆ ಮಾತ್ರ ತಾವು ಉತ್ತರ ಕೊಟ್ಟಿದ್ದೀರಿ ದಯಮಾಡಿ ಈ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ಕಠಿಣವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು ತಾವು ಐದು ವರ್ಷದ data ಕೊಟ್ಟಿದ್ದೀರಿ ಪ್ರತಿವರ್ಷ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗುತ್ತಿವೆಯೇ ವಿನಃ ಕಡಿಮೆಯಾಗುತ್ತಿಲ್ಲ ಆದ್ದರಿಂದ, ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕೆ ಯಾವರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಾವು ಈ ಸದನಕ್ಕೆ ತಿಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ ಸನ್ಮಾನ್ಯ ಸಭಾಧ್ಯಕ್ಷರೇ, ಹಿರಿಯ ಸದಸ್ಯರಾದ ಶ್ರೀ ಎಸ್ ಎಸ್ ಪಾಟೀಲ್‌ರವರು ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯದ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಮಾನ್ಯ ಡಾ ಮಹದೇವಪ್ಪನವರು ಮತ್ತು ಧ್ರುವನಾರಾಯಣ್‌ರವರು ಆ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳಿದ್ದಾರೆ ಕರ್ನಾಟಕ ರಾಜ್ಯದಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಸರ್ಕಾರ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ ಎಂದು ಕೇಳಿದರು ಅಸ್ಪೃಶ್ಯತೆ ನಿವಾರಣೆ ಬಗ್ಗೆ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಇದೆ ಅದು ಕೆಲಸ ಮಾಡುತ್ತಿದೆ ಕರ್ನಾಟಕದಲ್ಲಿ ಅಸ್ಪೃಶ್ಯತೆ ಸಂಪೂರ್ಣವಾಗಿ ನಿಂತಿದೆ ಎಂದು ನಾನು ಹೇಳುವುದಿಲ್ಲ ಈ ಬಗ್ಗೆ ನಾನು ಸದನದಲ್ಲಿ ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ ಆದರೆ, ಅದರ ಪ್ರಮಾಣ ಮೊದಲಿಗಿಂತ ಕಡಿಮೆಯಾಗಿದೆ ಅದನ್ನು ಇನ್ನೂ ಕಡಿಮೆ ಮಾಡಲು ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ High Power Committee ಸಭೆ ಸೇರಿಲ್ಲ ಎಂದು ಡಾ ಮಹದೇವಪ್ಪನವರು ಹೇಳಿದರು ಕಳೆದ ಡಿಸೆಂಬರ್‌ನಲ್ಲಿ High Power Committee ಸಭೆ ಸೇರಿದೆ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಆ ಸಮಿತಿಯ ಸಭೆ ಕಳೆದ ಐದು ವರ್ಷದ ಹಿಂದೆ ಆಗಿತ್ತು, ಐದು ವರ್ಷಗಳ ನಂತರ 2006ರ ಡಿಸೆಂಬರ್‌ನಲ್ಲಿ ಆ ಸಮಿತಿ ಸಭೆ ಸೇರಿ ಅನೇಕ ವಿಷಯಗಳನ್ನು ಚರ್ಚೆ ಮಾಡಿದೆ ಅಲ್ಲಿ ಈ ಸದನದ ಅನೇಕ ಹಿರಿಯ ಮಾನ್ಯ ಸದಸ್ಯರುಗಳಿದ್ದರು ಆಗ ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದೇವೆ ಮಾನ್ಯ ಧ್ರುವನಾರಾಯಣ್‌ರವರು ಹೇಳಿದರು, ದೌರ್ಜನ್ಯ ಪ್ರಕರಣಗಳನ್ನು ಯಾವ ರೀತಿ ವಿಲೇವಾರಿ ಮಾಡುತ್ತೇವೆ ಎನ್ನುವುದನ್ನು ಮಾತ್ರ ಕೊಟ್ಟಿದ್ದಾರೆ, ಅದನ್ನು ತಡೆಗಟ್ಟುವುದಕ್ಕೆ ಮತ್ತು ಆ ಜನರಲ್ಲಿ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದರು ಏಪ್ರಿಲ್ ತಿಂಗಳಲ್ಲಿ ಆ ರೀತಿಯ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ ಜಿಲ್ಲಾ ಮಟ್ಟದಲ್ಲಿ

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿ ಅದು ಹಳ್ಳಿಹಳ್ಳಿ ಗಳಲ್ಲಿ ಅರಿವು ಮೂಡಿಸುವಂಥ ಕಾರ್ಯಕ್ರಮಗಳನ್ನು ನಾವು ಖಂಡಿತವಾಗಿ ಹಾಕಿಕೊಳ್ಳುತ್ತೇವೆ 2006-07ನೇ ಸಾಲಿನಲ್ಲಿ ದೌರ್ಜನ್ಯ ಪ್ರಕರಣಗಳಿಗೆ ನಾವು 8 ಕೋಟಿ ರೂಪಾಯಿಗಳನ್ನು ಜಿಲ್ಲಾ ವಲಯಗಳಿಗೆ ಬಿಡುಗಡೆ ಮಾಡಿದ್ದೇವೆ ಜಿಲ್ಲಾಧಿಕಾರಿಗಳ accountನಲ್ಲಿ 8 ಕೋಟಿ ರೂಪಾಯಿಗಳಿವೆ ಕಡಕೋಳು ಗ್ರಾಮದಲ್ಲಿ, ಬೀದರ್‌ನಲ್ಲಿ ಗಲಾಟೆಯಾಯಿತು ಎಂದು ಮಾನ್ಯ ಮಹದೇವಪ್ಪನವರು ಹೇಳಿದರು ಎಲ್ಲೆಲ್ಲಿ ಗಲಾಟೆಯಾಗಿದೆ, ಅಲ್ಲಿಗೆಲ್ಲ ನಮ್ಮ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು visit ಮಾಡಿದ್ದಾರೆ ಎಲ್ಲಾ ಪ್ರಕರಣಗಳಲ್ಲಿ, ತುಳಿತಕ್ಕೊಳಗಾದವರಿಗೆ ಸರ್ಕಾರ ಪರಿಹಾರವನ್ನು ಕೊಟ್ಟಿದೆ ಸಂಖ್ಯಾ ದೃಷ್ಟಿಯಿಂದ ನೋಡಿದರೆ, ಈ ವರ್ಷದಲ್ಲಿ ದೌರ್ಜನ್ಯದ ಪ್ರಮಾಣ ಸ್ವಲ್ಪ ಕಡಿಮೆಯಾಗಿರಬಹುದು ಆದರೆ, ಇದು ಸಂಪೂರ್ಣವಾಗಿ ನಿವಾರಣೆಯಾಗಬೇಕಾದರೆ, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ

ಡಾ ಹೆಚ್ ಸಿ ಮಹದೇವಪ್ಪ ಆ ರೀತಿಯ ದೌರ್ಜನ್ಯ ಪ್ರಕರಣಗಳು ನಡೆದರೆ ಅದಕ್ಕೆ ಅಲ್ಲಿಯ S P, D C ಯವರನ್ನು ಹೊಣೆಗಾರರನ್ನಾಗಿ ಮಾಡುತ್ತೇವೆ ಎನ್ನುವುದನ್ನು ಸರ್ಕಾರ ಹೇಳಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೇ, ನಾನು ಹೇಳುವುದನ್ನು ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಗೃಹಮಂತ್ರಿಗಳು ಕೇಳಿದರೆ ಒಳ್ಳೆಯದು ಏಕೆಂದರೆ, ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಬಾಲಚಂದ್ರರವರು ತಮ್ಮದೇನು ಪ್ರಯತ್ನವಿದೆ ಅದನ್ನು ಮಾಡಬಹುದು ಮತ್ತು welfare schemeಗಳನ್ನು implement ಮಾಡಲು ಸಾಧ್ಯವಾದಷ್ಟು ಪ್ರಯತ್ನವನ್ನು ಅವರು ಮಾಡಬಹುದು ಆದರೆ ದೌರ್ಜನ್ಯಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಈ ವಿಚಾರದಲ್ಲಿ ಹಿಂದೆ, ನಮ್ಮಿಂದಲೂ ಲೋಪವಾಗಿರಬಹುದು, ಇನ್ನೊಬ್ಬರಿಂದಲೂ ಲೋಪವಾಗಿರಬಹುದು ಆದರೆ ಪದೇಪದೇ ಅದನ್ನೇ ಹೇಳಿಕೊಂಡು ನಿಮ್ಮಿಂದ ಲೋಪವಾಗಿದೆ, ನಾವು ಅದನ್ನೇ ಮಾಡುತ್ತೇವೆ, ನೀವು ತಪ್ಪು ಮಾಡಿದ್ದೀರಿ, ನಾವೂ ತಪ್ಪು ಮಾಡುತ್ತೇವೆ ಎಂದು ಹೇಳಿಕೊಂಡು ಹೋಗತಕ್ಕಂಥಾದ್ದು ಸಮಂಜಸವಲ್ಲ ಇಂಥ ದೌರ್ಜನ್ಯಗಳನ್ನು ತಡೆಗಟ್ಟಬೇಕು ಮತ್ತು ಸಾಮಾಜಿಕ ನ್ಯಾಯ ಸಿಗಬೇಕು ಎನ್ನುವ ದೃಷ್ಟಿಯಿಂದ ಹಿಂದೆ, ಪ್ರತಿ ಜಿಲ್ಲೆಯಲ್ಲಿರುವ ಮೂರು executive postಗಳಲ್ಲಿ ಒಂದು postನಲ್ಲಾದರೂ S C /S T ಗೆ ಸಂಬಂಧಪಟ್ಟ ಅಧಿಕಾರಿಗಳು ಇರಬೇಕು ಎಂದು ಇತ್ತು ಆ ರೀತಿ

ಅಧಿಕಾರಿಗಳನ್ನು ಹಾಕಬೇಕು ಎಂದು D P A R ಮತ್ತು Government of India guidelines ಇತ್ತು ಉದಾಹರಣೆಗೆ, ಅಂಥ Deputy Commissioner ಇರಬೇಕು ಅವರಿಲ್ಲದಿದ್ದರೆ S P ಇರಬೇಕು ಇವರಿಬ್ಬರೂ ಇರಲಿಲ್ಲವೆಂದರೆ at least, Chief Executive Officer, Zilla Panchayat ಇವರು ಇರಬೇಕು ಈ ಮೂರರಲ್ಲಿ ಯಾವುದಾದರೂ ಒಂದು ಹುದ್ದೆಯಲ್ಲಿ ಅವರಿದ್ದರೆ, ಆಡಳಿತದಲ್ಲಿ ದಲಿತರಿಗೆ ಧ್ವನಿಯಿರುತ್ತದೆ ಮತ್ತು ಅವರ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಅಧಿಕಾರಿಗಳನ್ನು ಹಾಕುತ್ತಿದ್ದರು ಈ ಸರ್ಕಾರದಲ್ಲಿ ಆ ಪದ್ಧತಿಯಂತೂ complete ಹೋಗಿಬಿಟ್ಟಿದೆ ಆ ರೀತಿಯ norm ಒಂದೂ ಪಾಲನೆಯಾಗುತ್ತಿಲ್ಲ ಹಿಂದೆ ಇದ್ದಂಥ ಯಾವುದೋ ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ನೀವೂ ಹಾಗೆ ಮಾಡಿದ್ದಿರಿ ಎಂದು ಹೇಳಬಹುದೇ ಹೊರತು, ಇವರು ಸಾರಾಸಗಟಾಗಿ ತಮಗೆ ಯಾರು ಬೇಕೋ ಅದೇ ಅಧಿಕಾರಿಗಳನ್ನು ಹಾಕುವುದು ಮಾಡುತ್ತಿದ್ದಾರೆ ಅವರು committed ಇದ್ದಾರೋ, ಇಲ್ಲವೋ, ಸಾಮಾಜಿಕ ನ್ಯಾಯದ ಬಗ್ಗೆ ಅವರಿಗೆ ಮಾಹಿತಿ ಇದೆಯೋ, ಇಲ್ಲವೋ, D P A R guidelines ಏನಿದೆ, Government of India guidelines ಏನಿದೆ ಅದ್ಯಾವುದನ್ನೂ ಇವರು ನೋಡುವುದಿಲ್ಲ ಹಾಗಾಗಿ, ಅನೇಕ ಕಡೆಗಳಲ್ಲಿ atrocity ಮಾಡುವುದಕ್ಕೆ ಇದರಿಂದ ಪ್ರಚೋದನೆ ಸಿಕ್ಕಿದೆ Atrocity Act ಪ್ರಕಾರ ಇಂಥ ಪ್ರಕರಣಗಳನ್ನು ಕೇವಲ Sub Inspector register ಮಾಡತಕ್ಕಂಥಾದ್ದಲ್ಲ ಈ Act ಕೆಳಗೆ ಇಂಥ ಪ್ರಕರಣಗಳಿಗೆ Dy S P ಯವರೇ Enquiry Officer ಎಂದು ಇರುವ ಕಾರಣ Assistant Commissioner ನೇತೃತ್ವದಲ್ಲಿ Sub Division ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಇರಬೇಕು ಇಂಥ ಪ್ರಕರಣಗಳು ನಡೆದಾಗ ಅವರಿಗೆ T A /D A ಕೊಡಬೇಕು, Courtಗೆ ಹೋಗಲೂ ಅವರಿಗೆ ಸಹಾಯ ಮಾಡಬೇಕು, in advance, District Social Welfare Officerರವರಿಂದ ಹಣ ಪಡೆದುಕೊಂಡು ಅವರು ಕೋರ್ಟ್ ಕೇಸ್‌ಗಳಿಗೆ attend ಆಗಲು ಸಹಾಯ ಮಾಡಬೇಕು ಎಂದು ಇದೆ ಅದೂ ಕೂಡ ಆಗುತ್ತಿಲ್ಲ ಮೊನ್ನೆ ನಾವು ಒಂದು ಪತ್ರ ಬರೆದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು, Social Welfare Minister ಎಲ್ಲರೂ ಸೇರಿ ಕಂಬಾಲಪಲ್ಲಿ ವಿಷಯ ಮತ್ತು ಬೇರೆ ಬೇರೆ ವಿಷಯದಲ್ಲಿ ಒಂದು meeting ಮಾಡಿದರು ಅಂಥ atrocity ನಡೆದಂಥ ಕಂಬಾಲಪಲ್ಲಿ ಕೇಸ್‌ನಲ್ಲಿಯೇ evidence ಕೊಡುವುದಕ್ಕೆ ಯಾರೂ ಬರಲಿಲ್ಲ ಎಂದು ಅದರ ಮೇಲೆಯೇ ತೀರ್ಮಾನವಾಯಿತು ಜಸ್ಸಿಕಾ ಲಾಲ್ ಪ್ರಕರಣವನ್ನು ಎಲ್ಲಾ ಮಾಧ್ಯಮಗಳೂ, Highlight ಮಾಡಿ, ಪುನಃ ಅದು re-trial ಆಗುವಂಥ ಪರಿಸ್ಥಿತಿಗೆ ಬಂತು ಆದರೆ, ಇಲ್ಲಿ 6-8 ಜನರನ್ನು ಬರ್ಬರವಾಗಿ

ಕೊಲೆ ಮಾಡಿದ್ದನ್ನು ಸರ್ಕಾರದವರು ಅಂದರೆ prosecution side ನವರೂ serious ಆಗಿ ತೆಗೆದುಕೊಳ್ಳಲಿಲ್ಲ ಮತ್ತು ಪೋಲೀಸಿನವರೂ ಕೂಡ ಅದರ evidence ಕೊಡತಕ್ಕಂಥಾವರಿಗೆ ಧೈರ್ಯ ಕೊಟ್ಟು ಕೆಲಸ ಮಾಡತಕ್ಕಂಥಾದ್ದನ್ನು ಮಾಡಿಲ್ಲ ನನ್ನ ಮನವಿ ಏನೆಂದರೆ, ಜಿಲ್ಲಾ ಮಟ್ಟದಲ್ಲಿ ಒಬ್ಬನಾದರೂ sub division ಅಧಿಕಾರಿ ಇರಬೇಕು ಅದು ನಿಮಗೆ ಬೇಕಾದವರು ಯಾರೇ ಆಗಲಿ, but atleast he should be impartial, one committed officer, ಅವನು ಬಂದಕೂಡಲೇ ಎಲ್ಲವನ್ನೂ ಚೆನ್ನಾಗಿ ಮಾಡುತ್ತಾನೆಂದು ನಾನು ಹೇಳುವುದಿಲ್ಲ ಆದರೆ, ಏನೋ ಒಂದು ಧೈರ್ಯ ಇರುತ್ತದೆ ಒಂದು moral courage ಪ್ರತಿ 3 ತಿಂಗಳಿಗೊಮ್ಮೆ meeting ಕರೆಯಬೇಕೆಂದು Act ನಲ್ಲಿದೆ ಈ state level ನಿಂದ district level ಮತ್ತು sub division ವರೆಗೆ meeting ಕರೆದು ಮಾಡಬೇಕು ಆದರೆ, ಅದನ್ನು ಕೂಡ ಮಾಡುವುದಿಲ್ಲ ಹಾಗೆಯೇ, Secretary ಯವರನ್ನು nodal officer ಎಂದು appoint ಮಾಡುತ್ತಾರೆ Sometimes, Home Secretary nodal officer ಆಗಿರುತ್ತಾರೆ, sometimes Social Welfare Secretary nodal officer ಆಗಿರುತ್ತಾರೆ ಈಗ Social Welfare Secretary ಯವರಿಗೆ ನೀವು nodal officer ಎಂದು appoint ಮಾಡಿದರೆ ಅಥವಾ ADGP(Law and order) ಗೆ ನೀವು ಏನಾದರೂ nodal officer ಮಾಡಿದರೆ, ಅವರು every month meeting ಮಾಡಿ review ಮಾಡಬೇಕು ಆಗ ಕನಿಷ್ಠಪಕ್ಷ ಈ meeting instructions ಜಿಲ್ಲಾಧಿಕಾರಿಗಳಿಗೆ ಗೊತ್ತಾಗುತ್ತದೆ ಬಹಳಷ್ಟು ಸಲ Chief Minister ರವರಿಗೆ ಪುರುಸೊತ್ತು ಇರುವುದಿಲ್ಲ, Social Welfare Minister ರವರು ಒಂದು ಸಲ ಅಲ್ಲ ಹತ್ತು ಸಲ ಕೇಳಿಕೊಳ್ಳಬಹುದು ಕೇಳಿಕೊಂಡ ತಕ್ಷಣವೇ ಮುಖ್ಯಮಂತ್ರಿಗಳು ಇರಲಿಲ್ಲವೆಂದರೆ meeting ಆಗುವುದಿಲ್ಲ ಯಾವ meetingನಲ್ಲಿ ಮುಖ್ಯಮಂತ್ರಿಗಳು ಇರುವುದಿಲ್ಲವೋ ಆ meeting ಅನ್ನು serious ಆಗಿ ಯಾವ ಅಧಿಕಾರಿಗಳೂ ತೆಗೆದುಕೊಳ್ಳುವುದಿಲ್ಲ ಆದ್ದರಿಂದ, ದಯವಿಟ್ಟು ಈ ಎರಡು ಕೆಲಸಗಳನ್ನು ನೀವು ತಕ್ಷಣ ಮಾಡಿದರೆ ಸ್ವಲ್ಪ ಮಟ್ಟಿಗೆ situation control ಗೆ ಬರುತ್ತದೆ, ಭಯ ಬರುತ್ತದೆ, ಎಲ್ಲಿಯಾದರೂ atrocity ಮಾಡಬೇಕೆಂದು ಹೇಳಿ ಅತ್ಯಂತ ಗೂಂಡಾಗಿರಿ ಮಾಡತಕ್ಕಂಥವರು ಹೆದರುತ್ತಾರೆ ದಯವಿಟ್ಟು ಅದನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಉತ್ತಮವಾದ ಸಲಹೆಯನ್ನು ಮಾನ್ಯ ಖರ್ಗೆಯವರು ಕೊಟ್ಟಿದ್ದಾರೆ ಈ ತರಹದ ದೌರ್ಜನ್ಯಗಳ

ಪ್ರಕರಣಗಳು ಆದಂಥ ಸಂದರ್ಭದಲ್ಲಿ ಸಾಮಾಜಿಕ ವ್ಯವಸ್ಥೆ ಇನ್ನೂ ಕೂಡ ಬದಲಾವಣೆಗಳು ಆಗದಿರತಕ್ಕಂಥ ಕಾರಣಗಳಿಗಾಗಿ ಕಾನೂನಿನಲ್ಲಿ ಅಂಥ ಒಂದು ಭಯ ಮತ್ತು ಆ ಪ್ರಕಾರವಾಗಿ ನೀವು ನಿಷ್ಪಕ್ಷಪಾತನದಿಂದ ವರ್ತಿಸುತ್ತೇವೆನ್ನುವಂಥ ರೀತಿಯಲ್ಲಿ ಅವರಿಗೆ ನಂಬಿಕೆ ಹುಟ್ಟುವಂಥ ರೀತಿಯ ಅಧಿಕಾರಿಗಳನ್ನು ಹಾಕಬೇಕೆನ್ನುವಂಥಾದ್ದು ಈಗಾಗಲೇ ಒಪ್ಪಿಗೆಯಾಗಿರುವಂಥ ನೀತಿ, ನಿರ್ಧಾರ ಕೂಡ ಆಗಿದೆ ಆ ದೃಷ್ಟಿಯಿಂದ ನಮ್ಮಲ್ಲಿ ಅನೇಕ ಕಡೆಗೆ ಈ ತರಹ ಮಾಡಿದ್ದೇವೆ ಈಗ ಅವರು ಹೇಳಿದಂತೆ ಕೆಲವು ಜಿಲ್ಲೆಗಳಲ್ಲಿ ಆಗದಿರತಕ್ಕಂಥಾದ್ದು ಏನಾದರೂ ಇದ್ದರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ತರುತ್ತೇನೆ ಈಗ ಕಂಬಾಲಪಲ್ಲಿ ವಿಚಾರದಲ್ಲಿ ತಾವು ಹೇಳಿದಿರಿ ನಮ್ಮ ಇಲಾಖೆಯವರು, ಅಭಿಯೋಜನಾ ಇಲಾಖೆಯವರು ಇದರ ಪರವಾಗಿ ಸಂಪೂರ್ಣವಾಗಿರತಕ್ಕಂಥ ಕೆಲಸ ಮಾಡಿದ್ದಾರೆ ಅದರೆ, ಅಲ್ಲಿ ವ್ಯತಿರಿಕ್ತವಾದಂಥ ಸಾಕ್ಷಿ, hostile withnesses, ಎನ್ನುವ ಕಾರಣಕ್ಕಾಗಿಯೇ ಒಬ್ಬರೂ ಸಹ ಸರಿಯಾದ ರೀತಿಯಲ್ಲಿ ಸಾಕ್ಷಿಯನ್ನು ನುಡಿಯಲಿಲ್ಲವೆಂದು ಬಿಟ್ಟರು ಜೆಸ್ಸಿಕಾ ಲಾಲ್ case ನಲ್ಲಿ, Best Bakery case ನಲ್ಲಿ Supreme Court ನವರು ಮಾಡಿದಂಥ ನಿರ್ಣಯದ ಹಿನ್ನೆಲೆಯಲ್ಲಿ hostile witnesses ಅನ್ನು ಕೂಡ, ವ್ಯತಿರಿಕ್ತ ಸಾಕ್ಷಿಗಳನ್ನು ಕೂಡ ನಾವು ಪರಿಗಣಿಸಬೇಕಾದಂಥದ್ದು ಇಲ್ಲ, ಅದು ಬೇರೆ ರೀತಿಯಲ್ಲಿ ಕೂಡ, ಅದು ಸಾಂದರ್ಭಿಕ ಸಾಕ್ಷಿಗಳನ್ನು ಕೂಡ ನಾವು ಉಲ್ಲೇಖಿಸಬಹುದು ಎಂದು ಹೇಳಿ Supreme Court ನ ನಿರ್ಣಯವಾಗಿದೆ ಆ ಕಾರಣಕ್ಕಾಗಿಯೇ ಅದಕ್ಕೆ ಮೇಲ್ಮನವಿಯನ್ನು ಸಲ್ಲಿಸಬೇಕೆಂದು ಮಾಡಿದ್ದೇವೆ ಅದರ ಪ್ರಕಾರವೇ ಕ್ರಮ ಕೈಗೊಂಡಿದ್ದೇವೆ ಯಾರನ್ನು ನೇಮಕಾತಿ ಮಾಡಬೇಕೆನ್ನುವ ವಿಚಾರದಲ್ಲಿ ಕೂಡ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು 'ನೀವು ಹೇಳಬೇಕೆಂದು' ನಮ್ಮ ಕಾರ್ಯದರ್ಶಿಯವರನ್ನು ಸಹ ಕಳುಹಿಸಿಕೊಟ್ಟಿದ್ದೆವು ಏಕೆಂದರೆ, ಒಬ್ಬ ವಕೀಲರನ್ನು ನಾವು ಏರ್ಪಾಡು ಮಾಡುವ ಸಂದರ್ಭದಲ್ಲಿ ಅವರ ಬಗ್ಗೆ ಏನಾದರೂ ಪೂರ್ವಗ್ರಹ ದೃಷ್ಟಿಕೋನ ಇರಬಹುದೇನೋ ಎನ್ನುವ ಮಾತುಗಳು ಬರಬಹುದು ಇವರಲ್ಲದೆ ಬೇರೆಯವರನ್ನು ಕೂಡ ಹೇಳಿದ್ದರು ಒಳ್ಳೆಯವರನ್ನು ಯಾರನ್ನಾದರೂ ಹಾಕಿ ಎಂದು ಅವರು ಕೂಡ ಸಲಹೆ ಕೊಟ್ಟರು ಅದಾದ ಮೇಲೆ ನಾವು M C Nanaiah ನವರನ್ನು ಬೇರೆಯವರನ್ನೆಲ್ಲ ಕೇಳಿಕೊಂಡೆವು ಅದು ಯಾವ್ಯಾವುದೋ ಕಾರಣಗಳಿಂದ ಒಪ್ಪದಿದ್ದಂಥ ಸಂದರ್ಭದಲ್ಲಿ ಪ್ರೊ।ರವಿವರ್ಮಕುಮಾರ್‌ರವರನ್ನು ನೇಮಕಾತಿ ಮಾಡಿ ಈಗಾಗಲೇ ಮೇಲ್ಮನವಿಯನ್ನು ಹಾಕಿದ್ದೇವೆ ಆ ಒಂದು ದೃಷ್ಟಿಕೋನದಿಂದ ಕಂಬಾಲಪಲ್ಲಿ ವಿಚಾರದಲ್ಲಿ ಸರ್ಕಾರಕ್ಕೆ ಸಂಪೂರ್ಣವಾದ ಬದ್ಧತೆ

ಇದೆ Supreme Court ನಿರ್ಣಯದ ಪ್ರಕಾರ ಇದು ನಡೆಯುತ್ತದೆ ಉದಾಹರಣೆಗೆ ಹೇಳಬೇಕಾಗಿದ್ದರೆ, ನಮ್ಮ sub division ನಲ್ಲಿ ಹೊಸಪೇಟೆಯಲ್ಲಿರತಕ್ಕಂಥ Assistant Commissionerರವರು ಕೂಡ ಪರಿಶಿಷ್ಟ ಜಾತಿಯವರು, ಅಲ್ಲಿರುವ Dy SP ಯವರು ಪರಿಶಿಷ್ಟ ಜಾತಿಯವರು, ನಮ್ಮ ಹಡಗಲಿಯಲ್ಲಿರತಕ್ಕಂಥ Dy SP ಯವರು ಪರಿಶಿಷ್ಟ ಪಂಗಡದವರು 3 ಜನ sub inspector ಗಳಿದ್ದು ಅವರೆಲ್ಲರು ಪರಿಶಿಷ್ಟ ಜಾತಿಯವರು, Circle Inspector ರವರು ಸಹ ಪರಿಶಿಷ್ಟ ಜಾತಿಯವರು ಈ ತರಹದಲ್ಲಿ ಕೆಲವು ಕಡೆಗೆ ಬದ್ಧತೆ ಇರತಕ್ಕಂಥ ಅಧಿಕಾರಿಗಳನ್ನು ಹಾಕಿಕೊಂಡಿದ್ದೇವೆ ಆದರೆ, ತಾವು ಹೇಳಿದಂತೆ ಸಾರ್ವತ್ರಿಕ ಸೂತ್ರವಾಗಿ ಬರಬೇಕೆನ್ನತಕ್ಕಂಥಾದ್ದಕ್ಕೆ ನಮ್ಮ ಒಪ್ಪಿಗೆ ಇದೆ ನಾನು ಮುಖ್ಯ ಮಂತ್ರಿಗಳ ಜೊತೆಗೆ ಕೂಡ ಮಾತನಾಡಿ ಈ ಸರ್ಕಾರ ಯಾವುದೇ ದೃಷ್ಟಿಯಿಂದ ದೌರ್ಜನ್ಯಕ್ಕೊಳಗಾಗತಕ್ಕಂಥ ಜನಗಳ ಪರವಾಗಿ ಕಾನೂನಿನ ರೀತಿಯಲ್ಲಿ ಏನೆಲ್ಲಾ ಸಹಕಾರವನ್ನು ಕೊಡಬೇಕೋ ಅದನ್ನು ಕೊಡುತ್ತೇವೆ ಮಾನ್ಯ ಸಮಾಜ ಕಲ್ಯಾಣ ಇಲಾಖೆಯವರು ಕೂಡ ಈ ಬಗ್ಗೆ ಕಳಕಳಿಯನ್ನು ತೋರಿಸಿದ್ದಾರೆನ್ನುವಂಥ ಮಾತನ್ನು ಕೂಡ ತಮ್ಮಲ್ಲಿ ಅರಿಕೆ ಮಾಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಇನ್ನೂ ಸಹ ಉತ್ತರ ಬಂದಿಲ್ಲ

ಅಧ್ಯಕ್ಷರು ಮಾನ್ಯ ಪಾಟೀಲರೆ, ಒಂದೊಂದು ಪ್ರಶ್ನೆಗೆ ಎಷ್ಟು ನಿಮಿಷ ತೆಗೆದುಕೊಳ್ಳುವುದಕ್ಕಾಗುತ್ತದೆ?

ಶ್ರೀ ಎಸ್ ಎಸ್ ಪಾಟೀಲ್ ಒಂದೇ ಪ್ರಶ್ನೆಗೆ ಬಹಳ ಹೊತ್ತಾಯಿತು ಆದರೆ, ಇದು ಆಗಬೇಕು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿ ಕಾಯಿದೆ ಮಾಡಿದರೂ ಅದು ನಿಂತಿಲ್ಲ

ಅಧ್ಯಕ್ಷರು ಆಗಬೇಕೆಂದು ನೀವು ಹೇಳುತ್ತೀರಿ ಅವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ ಇಷ್ಟೂ ಹೊತ್ತು ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ಆದರೂ ಪುನಃ ಪುನಃ ಇದೇ ಪ್ರಶ್ನೆಯನ್ನು ಮುಂದುವರಿಸುತ್ತಾ ಹೋಗುವುದು ಸರಿಯಲ್ಲ ದಯಮಾಡಿ ಕುಳಿತುಕೊಳ್ಳಿ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ

ಹೆಚ್ ಐ ವಿ/ಏಡ್ಸ್ ನಿಯಂತ್ರಣ ಕಾರ್ಯಕ್ರಮ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 235(1325)

ಸದಸ್ಯರ ಹೆಸರು ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಉತ್ತರಿಸುವ ಸಚಿವರು ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ	
I	ಕರ್ನಾಟಕದಲ್ಲಿ ಹೆಚ್‌ಐವಿ/ಏಡ್ಸ್ ಕಾರ್ಯಕ್ರಮದ ವಿವಿಧ ಚಟುವಟಿಕೆಗಳಿಗೆ ನಿಗದಿಪಡಿಸಿರುವ ಅನುದಾನ ಮತ್ತು ಇದುವರೆಗೆ ಮಾಡಿರುವ ವೆಚ್ಚ	ರೂ ಲಕ್ಷಗಳಲ್ಲಿ ಅನುದಾನ (2006–07)	(ವೆಚ್ಚ 28–2–2007 ರವರೆಗೆ)
ಅ	ಉದ್ದೇಶಿತ ಕಾರ್ಯಕ್ರಮ	392 00	140 27
ಆ	ಮಾಹಿತಿ, ಶಿಕ್ಷಣ ಸಂಪರ್ಕ	439 00	145 25
ಇ	ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ (ಐ ಸಿ ಟಿ ಸಿ)	138 72	103 42
ಈ	ಕಾಂಡೋಮ್ ಬಳಕೆಯ ಉತ್ತೇಜನ ಮತ್ತು ಪರೀಕ್ಷಾ ಕೇಂದ್ರ	165 34	
ಉ	ರಕ್ತ ಸುರಕ್ಷತೆ ಮತ್ತು ಪರೀಕ್ಷಾ ಕೇಂದ್ರ	309 06	207 78
ಊ	ಮೇಯಿನ್ ಸ್ಟ್ರೀಮಿಂಗೆ / ಶಾಲಾ ಏಡ್ಸ್ ಶಿಕ್ಷಣ ಕಾರ್ಯಕ್ರಮ	452 00	143 00
ಋ	ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ ಮತ್ತು ಐ ಸಿ ಟಿ ಸಿ	165 00	71 37

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಒದಗಿಸಿಲ್ಲ ಕೊಟ್ಟಂಥ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಹೇಳಬಯಸುತ್ತೇನೆ ಏಕೆಂದರೆ, ಅಧಿಕಾರಿಗಳು ಮಾನ್ಯ ಸಚಿವರಿಗೆ ಸರಿಯಾದ guidance ಕೊಟ್ಟಿಲ್ಲ AIDS ಗೋಸ್ಕರ ನಿಗದಿಪಡಿಸಿದ ಅನುದಾನ ಎಷ್ಟು? ಎಂದು ಪ್ರಶ್ನೆ ಕೇಳಿದ್ದೇನೆ ನನಗೆ ಕೇಂದ್ರ ಸರ್ಕಾರದಿಂದ ಬಂದಿರುವ ಮಾಹಿತಿ ಇದೆ ಆದರೆ, ಇಲ್ಲಿ ಕೊಟ್ಟಿರುವ ಮಾಹಿತಿಯಲ್ಲಿ ಬೇರೆ ಬೇರೆ Head of Accounts ನಲ್ಲಿ ಸುಮಾರು 20 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಇದು ಬಿಡುಗಡೆ ಮಾಡಿರುವ ಅನುದಾನವಾಗಿದೆ ಇದು ನಿಗದಿಪಡಿಸಿರುವ ಅನುದಾನವಲ್ಲ ಇದರಲ್ಲಿ ವ್ಯತ್ಯಾಸವಿದೆ ನಮ್ಮ ರಾಜ್ಯಕ್ಕೆ ಸುಮಾರು 40 ಕೋಟಿಯಷ್ಟು ಹಣ ನಿಗದಿಯಾಗಿತ್ತು ಅದರಲ್ಲಿ 8 ಕೋಟಿ ರೂ ಗಳು ಮಾತ್ರ ಬಳಕೆಯಾಗಿದೆ ಅಂದರೆ ಶೇಕಡ 20 ರಷ್ಟು ಮಾತ್ರ ಹಣ ಬಳಕೆಯಾಗಿದೆ ಇಷ್ಟೊಂದು ಕಡಿಮೆ ಹಣ ಬಳಕೆಯಾಗಿದ್ದಕ್ಕೆ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ರಾಮದಾಸ್‌ರವರು ಒಂದು ಪತ್ರವನ್ನು ನಮ್ಮ ರಾಜ್ಯದ ಮಾನ್ಯ ಆರೋಗ್ಯ ಸಚಿವರಿಗೆ ಬರೆದು 'ನಿಮ್ಮ ರಾಜ್ಯದಲ್ಲಿ ನಿಮ್ಮ ಮುಖ್ಯಮಂತ್ರಿಯವರು AIDS ಪೀಡಿತ ಮನೆಗೆ ಹೋಗಿ ವಾಸ್ತವ್ಯ ಹೂಡಿದ್ದನ್ನು ಕೇಳಿ ಬಹಳ ಖುಷಿ ಆಯಿತು ಆದರೆ, ನಿಮ್ಮ ರಾಜ್ಯದಲ್ಲಿ ನೀವು ಎಷ್ಟು ಹಣವನ್ನು ಬಳಕೆ ಮಾಡಿದ್ದೀರಿ ಎನ್ನುವುದನ್ನು ನೀವು ಗಮನಿಸಿ ನೋಡಿದ್ದೀರಾ?' ಎಂದು ಕೇಳಿದ್ದಾರೆ ಕೇಂದ್ರ ಸರ್ಕಾರ AIDS prevention, ಸಲುವಾಗಿ ಮುಂದೆ ಬರತಕ್ಕಂಥ ದಿನಗಳಿಗೋಸ್ಕರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿಟ್ಟಿದ್ದಾರೆ ಆದರೆ, ಇವತ್ತು ನಮ್ಮ ರಾಜ್ಯದಲ್ಲಿ 20 percent ಹಣ ಸಹ ಬಳಕೆಯಾಗಿಲ್ಲ ಬಳಕೆಯಾಗಿಲ್ಲ ಏಕೆ? 'ನಮ್ಮ Karnataka State AIDS Prevention Society ಗೆ permanent ಆಗಿ ಒಬ್ಬ Project Director ಅನ್ನು ನಿಮ್ಮಿಂದ ನೇಮಕ ಮಾಡಲಿಕ್ಕೆ ಆಗಲಿಲ್ಲವೆಂದು' ಕೇಂದ್ರ ಸರ್ಕಾರದ ಮಂತ್ರಿಗಳು ಹೇಳಿದ್ದಾರೆ ಅದರಿಂದ, ನಮ್ಮ ರಾಜ್ಯದ ಮೇಲೆ ಪರಿಣಾಮ ಏನು ಬೀರಿದೆ ಎಂದರೆ, ಇಡೀ ದೇಶದಲ್ಲಿ prevalence rate 3% ಗಿಂತ ಜಾಸ್ತಿ ಇರತಕ್ಕಂಥ 9 ಜಿಲ್ಲೆಗಳು ಇದ್ದರೆ, ಅದರಲ್ಲಿ 5 ಜಿಲ್ಲೆಗಳು ನಮ್ಮ ರಾಜ್ಯದಲ್ಲಿಯೇ ಇವೆ ಅದು ಏಕೆ ಹೀಗಾಗಿದೆ ಎಂದು ಇವತ್ತು ಕೇಂದ್ರ ಸರ್ಕಾರದ Secretary ಯವರು ಮತ್ತು ಮಂತ್ರಿಯವರು ಒಂದು ಪತ್ರ ನಮ್ಮ ರಾಜ್ಯಕ್ಕೆ ಬರೆದಿದ್ದಾರೆ ಏನೆಂದರೆ, ನೀವು ಸರಿಯಾಗಿ ಹಣ ಬಳಕೆ ಮಾಡದಿರುವುದರಿಂದ ಇವತ್ತು ನಿಮ್ಮ ಕರ್ನಾಟಕ ರಾಜ್ಯದಲ್ಲಿ prevalence rate ಜಾಸ್ತಿಯಾಗುತ್ತಿದೆ Alarming ಆಗಿದೆ ಎಂದು ಹೇಳಿದ್ದಾರೆ 27 ಜಿಲ್ಲೆಗಳಲ್ಲಿ 19

ಜಿಲ್ಲೆಗಳು ಇವತ್ತು high prevalence rate ನಲ್ಲಿವೆ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳು AIDS ಪೀಡಿತರ ಮನೆಗೆ ಹೋಗಿ ಅಲ್ಲಿ ವಾಸ ಮಾಡುತ್ತಾರೆ ಇದು ಪ್ರಚಾರಕ್ಕೋಸ್ಕರ ಮಾಡುತ್ತಿದ್ದಾರೆಯೇ? ಕೇಂದ್ರದಿಂದ ಬಂದಂಥ ಹಣದಲ್ಲಿ 20% ಹಣ ಸಹ ಅಲ್ಲಿ ಬಳಕೆಯಾಗುತ್ತಿಲ್ಲ ಇದನ್ನು ಯಾರು ಸಹ ನೋಡುತ್ತಿಲ್ಲ ಪ್ರಮುಖವಾಗಿರತಕ್ಕಂಥ ಸ್ಥಾನಗಳಲ್ಲಿ Project Director ಅನ್ನು ಹಾಕುವುದಕ್ಕೆ ಸರ್ಕಾರದಿಂದ ಆಗುತ್ತಿಲ್ಲವೇಕೆ? Joint Director ಗಳು programe implementation ನೋಡುವುದಕ್ಕಾಗುತ್ತಿಲ್ಲ ಇದಕ್ಕೆ ಹೊಣೆಗಾರರು ಯಾರು? ಏಕೆಂದರೆ, ಇವತ್ತು ನೀವು ಸಭೆಗೆ ಸರಿಯಾದ ಮಾಹಿತಿಯನ್ನು ಸಹ ಕೊಡುತ್ತಿಲ್ಲ ನಿಗದಿತವಾಗಿರುವ ಅನುದಾನದಲ್ಲಿ ಬಿಡುಗಡೆಯಾಗಿರುವ ಅನುದಾನ ಬಿಡುಗಡೆ ಏಕೆ ಆಗಿಲ್ಲವೆಂದರೆ, ನೀವು utilisation certificate ಕಳುಹಿಸಿದ್ದರೆ ಹಣ ಬಿಡುಗಡೆಯಾಗುತ್ತಿತ್ತು ಆ ರೀತಿ ಆಗದಿದ್ದರಿಂದ ರಾಜ್ಯಕ್ಕೆ ನಷ್ಟವಾಯಿತು ಈಗ ನಮ್ಮ ರಾಜ್ಯದಲ್ಲಿರುವ ಜನರಲ್ಲಿ AIDS prevalence ಜಾಸ್ತಿಯಾಗಿದ್ದರಿಂದ ಯಾರು ಇದಕ್ಕೆ ಉತ್ತರ ಕೊಡಬೇಕು? ಏಕೆಂದರೆ, ಕೇವಲ ಪ್ರಚಾರಕ್ಕೋಸ್ಕರ ನಾವು AIDS ಪರ ಇದ್ದೇವೆಂದು ಹೇಳುವುದಲ್ಲ ಇರತಕ್ಕಂಥ ಹಣವನ್ನು ಯಾವ ರೀತಿ ಉಪಯೋಗಿಸಿದ್ದೀರಿ? Budget ನಲ್ಲಿ ನಿಮ್ಮದೇನು commitment ಇದೆ? ಕೇಂದ್ರ ಸರ್ಕಾರ ಹಣ ಕೊಡುತ್ತಿದ್ದರೂ ಅದನ್ನು ಉಪಯೋಗ ಮಾಡುವುದಕ್ಕೆ ರಾಜ್ಯ ಸರ್ಕಾರದಿಂದ ನೀವು ತಯಾರಿಲ್ಲ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು ಬಹಳ ದೀರ್ಘವಾಗಿ ಪ್ರಶ್ನೆ ಕೇಳುತ್ತಿದ್ದೀರಿ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, AIDS ಪೀಡಿತರ ಸಮುದಾಯ ಯಾವುದಿದೆ, ಅವರಿಗೆ ಸಮಾಜದಲ್ಲಿ ಬಾಳುವಂಥ ಹಕ್ಕಿದೆ, ಅದಕ್ಕೋಸ್ಕರ ಅವರಿಗೊಂದು ಸ್ಥೈರ್ಯ ತುಂಬುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೋಗಿ ಅಲ್ಲಿ ವಾಸ್ತವ್ಯ ಮಾಡಿದ್ದಾರೆಯೇ ಹೊರತು ಪ್ರಚಾರಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಹೋಗಿ ವಾಸ್ತವ್ಯ ಮಾಡಿಲ್ಲವೆಂದು ಅವರಿಗೆ clarification ಕೊಡುತ್ತಿದ್ದೇನೆ ಕೇಂದ್ರ ಸಚಿವರು ಪತ್ರ ಬರೆದಿರುವುದು ನಿಜ ಆ ಪತ್ರವನ್ನು ನಾನು ನಮ್ಮ ಅಧಿಕಾರಿಗಳಿಗೆ ಕೊಟ್ಟು ಸವಿಸ್ತಾರವಾದ ವರದಿಯನ್ನು ಕೊಡಬೇಕೆಂದು ತಿಳಿಸಿದ್ದೇನೆ ನಾನು review ಸಹ ಮಾಡುತ್ತಿದ್ದೇನೆ ಆದರೆ, ಈ ವರ್ಷ ನಮಗೇನು budget allocation ಆಗಿದೆ, ಅದರಲ್ಲಿ ನಮ್ಮ ಈ ವರ್ಷದ ಅಂತ್ಯಕ್ಕೆ ನಾವು 95% achieve ಮಾಡುತ್ತೇವೆನ್ನುವ ವಿಶ್ವಾಸ ನಮಗಿದೆ ಈಗಾಗಲೇ ಅಧಿಕಾರಗಳ ಸಭೆ ಕರೆದಿದ್ದೇನೆ 95% achieve ಮಾಡುತ್ತೇವೆಂದು ಅವರು ಬರವಸೆ ಕೊಟ್ಟಿದ್ದಾರೆ ಯಾವ್ಯಾವ head ನಲ್ಲಿ ಏನು

ಖರ್ಚು ಮಾಡಬೇಕಾಗಿತ್ತು ಆ ಖರ್ಚು ಮಾಡುವುದಕ್ಕೆ ಏನೇನು percentage ಬಂದಿದೆ ಎಂಬುದನ್ನು ಈಗಾಗಲೇ ನಾನು ತಮಗೆ ಕೊಟ್ಟಿದ್ದೇನೆ ಕೇಂದ್ರ ಸರ್ಕಾರ ಮಾಹಿತಿ ಮತ್ತು ಶಿಕ್ಷಣ ಸಂಪರ್ಕಕ್ಕೆ ಏನು ಹಣ ಬಿಡುಗಡೆ ಮಾಡಬೇಕಾಗಿದೆ ಆ ಹಣ ಬಿಡುಗಡೆ ಮಾಡುವುದರಲ್ಲಿ ಅವರು delay ಮಾಡಿದ್ದಾರೆ ನಮಗೆ ಡಿಸೆಂಬರ್‌ನಲ್ಲಿ ಹಣ ಬಂದಿದೆ ಅದರಿಂದ ನಾವು 3 ತಿಂಗಳಲ್ಲಿ ಖರ್ಚು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ, ನಾನು ಅಧಿಕಾರಿಗಳಿಗೆ, ಈ ಮಾರ್ಚ್‌ನೊಳಗೆ ಹಣವೇನು ಬಂದಿದೆ ಅದರ 95% ಖರ್ಚಾಗಬೇಕು ಎಂದು ಹೇಳಿದ್ದೇನೆ ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ AIDS ಪೀಡಿತರೇನಿದ್ದಾರೆ, HIV ಪೀಡಿತರೇನಿದ್ದಾರೆ, ಅವರಿಗೆ ಯಾವುದೇ ರೀತಿ ಔಷಧಿ ಸಿಗುವುದಾಗಬಹುದು, counseling ಮಾಡುವುದಾಗಬಹುದು, ಅವರಿಗೇನು ಆರೈಕೆ ಮಾಡಬೇಕಾಗಿದೆ ಅದರಲ್ಲಿ ಯಾವುದೇ ರೀತಿಯ ಕೊರತೆಯಾಗದ ಹಾಗೆ ನಾವು ಮಾಡಿದ್ದೇವೆ ಈಗಾಗಲೇ ರಾಜ್ಯ ಸರ್ಕಾರ ಕಳೆದ ವರ್ಷಕ್ಕಿಂತ ಈ ಸಾರಿ counseling centers ಇರಬಹುದು, ಅನುದಾನದಲ್ಲಿಯೂ ಅಷ್ಟೇ 2004-05ರಲ್ಲಿ ನಾವು 45% ಮಾತ್ರ reach ಆಗಿದ್ದೇವೆ ಈ ಸಾರಿ 95%ಕ್ಕಿಂತ ಮೇಲ್ಪಟ್ಟು reach ಆಗುವಂಥ ವಿಶ್ವಾಸ ನಮಗಿದೆ ಅದರ ಜೊತೆಗೆ, ತಮ್ಮಲ್ಲಿ ಹೇಳುವುದೇನೆಂದರೆ, ಕಳೆದ ಬಾರಿ ನಮ್ಮಲ್ಲಿ ART centers 4 ಇದ್ದವು ನಾವು ಅದನ್ನು ಈಗ ಒಂದೇ ವರ್ಷದಲ್ಲಿ 12 centers ಅನ್ನು ಮಾಡಿದ್ದೇವೆ ಅದರ ಜೊತೆಗೆ, ಹೆಚ್ಚುವರಿಯಾಗಿ 15 ವರ್ಷದೊಳಗಿನ ಮಕ್ಕಳ ಬಗ್ಗೆ ಹೆಚ್ಚು ಆರೈಕೆ ಮಾಡಬೇಕು, ಅವರ ಬಗ್ಗೆ ವಿಶೇಷವಾದಂಥ ಗಮನವನ್ನು ಕೊಡಬೇಕೆಂದು ಹೇಳಿ ಬೆಂಗಳೂರಿನ Bowring hospital and KIMS, Hubli ಆಸ್ಪತ್ರೆಯಲ್ಲಿ ART centers ಅನ್ನು ತೆರೆಯುವುದಕ್ಕೆ ಯೋಚನೆ ಮಾಡಿದ್ದೇವೆ ಮೊದಲು ಮಕ್ಕಳ ಬಗ್ಗೆ ಅಷ್ಟಾಗಿ ಕಾಳಜಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ ಈ ಬಾರಿ 15 ವರ್ಷದ ಮಕ್ಕಳಿಗೆ ಹೆಚ್ಚು ಆರೈಕೆ ಸಿಗಬೇಕೆಂದು ಹೇಳಿ ಈಗ 2 ಭಾಗಗಳಲ್ಲಿ, ಉತ್ತರ ಕರ್ನಾಟಕದಲ್ಲೊಂದು ಮತ್ತು ದಕ್ಷಿಣ ಕರ್ನಾಟಕದಲ್ಲಿ ಮಾಡಬೇಕೆಂದು ಹೇಳಿ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಅದರ ಜೊತೆಗೆ, ಬೆಂಗಳೂರಿನಲ್ಲಿ additional ಆಗಿ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಸಹ ಒಂದು center ಅನ್ನು ತೆಗೆದು, ಈ ಮಕ್ಕಳ ಆರೈಕೆಯನ್ನು ಮಾಡಬೇಕೆಂದು ನಾವು ಕ್ರಮ ತೆಗೆದುಕೊಂಡಿದ್ದೇವೆ ನಾನು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ ನಮ್ಮ ಕೇಂದ್ರದ ಅನುದಾನವಿರಬಹುದು ಅಥವಾ ವಿಶ್ವಬ್ಯಾಂಕ್ ಅನುದಾನವಿರಬಹುದು ಯಾವುದೇ ರೀತಿ lapse ಆಗದಹಾಗೆ ನೋಡಿಕೊಳ್ಳಬೇಕು ಎಂದು ಹೇಳಿ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ February end ವರೆಗೆ ನೀವು 20% ಖರ್ಚು ಮಾಡಿದ್ದೀರಿ ಇನ್ನು ಒಂದು ತಿಂಗಳಲ್ಲಿ ನೀವು 80% ಖರ್ಚು ಮಾಡುವುದಕ್ಕೆ ಆಗುತ್ತದೆಯೇ? ಇನ್ನೊಂದು ನಾಚಿಕೆಪಡುವಂಥ ವಿಷಯವೆಂದರೆ, proper ಆಗಿ ಹಣ ಉಪಯೋಗವಾಗಲಿಕ್ಕೆ ಇವತ್ತು ನಮ್ಮ ರಾಜ್ಯದ NGO federation ನವರಾದ ಸಾವಿತ್ರಿ ಜೇರ್‌ಮಲಾನಿ ಮತ್ತು ಕೃಷ್ಣಭಟ್‌ರವರು High Court ನಲ್ಲಿ Public Interest Litigation ಹಾಕಿದ್ದಾರೆ ಏನೆಂದರೆ, AIDS prevention ನಲ್ಲಿ ಇವತ್ತು ಸರ್ಕಾರ ವಿಫಲವಾಗುತ್ತಿದೆ, proper ಆಗಿ ಹಣ ಉಪಯೋಗವಾಗುತ್ತಿಲ್ಲ ಎಂದು ಹೇಳಿದ್ದಾರೆ ಇದರಿಂದ ಜನರಿಗೆ ತೊಂದರೆಯಾಗುತ್ತಿದೆ, ಇವತ್ತು ಇದು ಇಷ್ಟರಮಟ್ಟಿಗೆ ಹೋಗಬೇಕಾದರೆ ಮಾನ್ಯ ಸಚಿವರು ಸ್ಪಷ್ಟವಾಗಿರುವಂಥ ನಿಲುವೇನು ಹೇಳಬೇಕೆಂದರೆ ಇದಕ್ಕೆ Project Director ಏನಿದ್ದಾರೆ, Karnataka Aids Prevention Society ಗೆ ನೀವು ನಿರ್ದಿಷ್ಟವಾಗಿರುವ, ದಕ್ಷವಾಗಿರುವಂಥ, ಪ್ರಾಮಾಣಿಕವಾಗಿರುವಂಥ ಅಧಿಕಾರಿಯನ್ನು ನೇಮಿಸಲಿಕ್ಕೆ ಸಿದ್ಧವಿದ್ದೀರಾ? ಏಕೆಂದರೆ, ಇವತ್ತು ಮಾನ್ಯ ಆರೋಗ್ಯ ಸಚಿವರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ, ಏನೆಂದರೆ, ಮುಂದಿನ ವರ್ಷದಿಂದ AIDS ಗೆ allocation ನಲ್ಲಿ four fold increase ಆಗುವುದಿದೆ, ನಿಮ್ಮ ಕಡೆಯಿಂದ proper planning ಮತ್ತು demand ಕೇಳದಿದ್ದರೆ ನಿಮಗೆ ಬರತಕ್ಕಂಥ ಹಣದಲ್ಲಿ ಕಡಿತವಾಗುತ್ತದೆ ಅದಕ್ಕೆ ಅವರು request ಮಾಡಿದ್ದಾರೆ ಒಬ್ಬ ಒಳ್ಳೆಯ, ದಕ್ಷ, ಪ್ರಾಮಾಣಿಕ Project Directorರವರನ್ನು ಕೊಟ್ಟರೆ, ನೀವು ಅದನ್ನು ಉಪಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆ ಆದರೆ, ಮಾನ್ಯ ಸಚಿವರು ಅದರ ಬಗ್ಗೆ ಹೇಳಲಿಲ್ಲ ನಾಲ್ಕು ತಿಂಗಳಿಗೊಂದು ಸಾರಿ Project Director ರನ್ನು change ಮಾಡಿದರೆ ಯಾವ ರೀತಿಯಾಗುತ್ತದೆ? ಇದಕ್ಕೆ ನೀವು ಸಮರ್ಪಕವಾಗಿ ಉತ್ತರ ಕೊಡಬೇಕು ಒಂದು ತಿಂಗಳಲ್ಲಿ 80% ಖರ್ಚು ಮಾಡಬೇಕೆಂದರೆ ಹಣ ಬಳಕೆ ಮಾಡಿಕೊಳ್ಳುತ್ತೀರೋ, ದುರ್ಬಳಕೆ ಆಗುತ್ತದೆಯೋ ಎಂದು ಯಾರು ನಿಗಾ ವಹಿಸುತ್ತಾರೆ? ಒಂದು ತಿಂಗಳಲ್ಲಿ ನೀವು 80% ಬಜೆಟ್ ಉಪಯೋಗ ಮಾಡುತ್ತೇವೆಂದರೆ, ಇದರಲ್ಲಿ ಉಪಯೋಗವಾಗಿರುವಂಥ ಹಣ ಅದು ಈ ವರ್ಷದ್ದಲ್ಲ, ಕಳೆದ ವರ್ಷದ್ದನ್ನು ಕೂಡ ಇಲ್ಲಿ ತೋರಿಸಿದ್ದಾರೆ ಕೇವಲ 10% ಬಜೆಟ್ ಈ ವರ್ಷ ಖರ್ಚಾಗಿದೆ ಇವತ್ತು ರಾಜ್ಯದಲ್ಲಿ ಯಾರೂ ಹೇಳುವವರು, ಕೇಳುವವರು ಇಲ್ಲವೇ? ಇದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕು Review ಮಾಡಬೇಕು ದಕ್ಷ ಅಧಿಕಾರಿಗಳನ್ನು ಸಮರ್ಪಕವಾದ ಸ್ಥಾನಗಳಿಗೆ ತರಬೇಕು ಇದು ಬಹಳ ಗಂಭೀರವಾದ ವಿಷಯ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅವರು ಕೇಳತಕ್ಕಂಥ ಪ್ರಶ್ನೆ ಇಷ್ಟೇ, ಈಗಾಗಲೇ ಇಲ್ಲಿಯವರೆಗೆ ಕೇವಲ 10% ಬಜೆಟ್ ಮಾತ್ರ ಖರ್ಚಾಗಿದೆ, 15 ದಿವಸಗಳಲ್ಲಿ ಅಥವಾ 1 ತಿಂಗಳಲ್ಲಿ 90% ಬಜೆಟ್ ಅನ್ನು ಖರ್ಚು ಮಾಡುವುದಕ್ಕೆ ಸಾಧ್ಯವೇ? ಎರಡನೆಯದಾಗಿ, ದಕ್ಷ ಮತ್ತು ಒಳ್ಳೆಯ Project Director ರವರು ಎಲ್ಲಿ ಕೆಲಸ ಮಾಡುತ್ತಿದ್ದರು, ಯಾವ Project Director execute ಮಾಡುತ್ತಿದ್ದರು, ಅವರನ್ನು 4 ತಿಂಗಳಲ್ಲಿ ಅಲ್ಲಿಂದ ತೆಗೆದು ಬದಲಿಗೆ ಅಲ್ಲಿ ಒಳ್ಳೆಯ, ದಕ್ಷ officer ಹಾಕಲಿಲ್ಲ ಹೀಗಾದರೆ, ಇದನ್ನು ಯಾವ ರೀತಿಯಾಗಿ implement ಮಾಡುತ್ತೀರಿ? ಒಂದು ಕಡೆ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರಲಿಲ್ಲವೆಂದು ಹೇಳುತ್ತೀರಿ ಇನ್ನೊಂದು ಕಡೆ, ಹಣ ಬಂದಿದ್ದರಲ್ಲಿ ನೀವು 10, 20% ಕೂಡ ಖರ್ಚು ಮಾಡುವುದಿಲ್ಲ ಇಂಥ HIV ಮತ್ತು AIDS programme ಗಳಿಗೆ NGO ನಿಂದ ಹಿಡಿದು Government ಎಲ್ಲರೂ ಕೂಡ support ಮಾಡುತ್ತಿದ್ದಾರೆ ಆದರೆ, ಇದಕ್ಕೆ seriousness ಇಲ್ಲ ಬಂದ ಹಣ ಖರ್ಚು ಮಾಡತಕ್ಕಂಥ ಶಕ್ತಿ ಇಲ್ಲವೆಂದರೆ ಮತ್ತೆ ಏನು ಕೆಲಸ ನೀವು ಮಾಡುವುದು? ಇದರ ಬಗ್ಗೆ ದಯವಿಟ್ಟು ಸ್ಪಷ್ಟವಾದ ಉತ್ತರ ಹೇಳಿ

ಶ್ರೀ ಆರ್ ಅಶೋಕ್ ಈಗಾಗಲೇ ನಾನು ಅವರಿಗೆ ಉತ್ತರದಲ್ಲಿ ವಿವರ ಕೊಟ್ಟಿದ್ದೇನೆ ನಮ್ಮ ಉದ್ದೇಶಿತ ಕಾರ್ಯಕ್ರಮಗಳಿಗೆ 392 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿತ್ತು, ಅದರಲ್ಲಿ 140 ಲಕ್ಷ ರೂಪಾಯಿ ಖರ್ಚಾಗಿದೆ, 439 ಲಕ್ಷ ರೂಪಾಯಿಗಳಲ್ಲಿ 145 ಲಕ್ಷ ರೂಪಾಯಿಗಳು ಖರ್ಚಾಗಿದೆ, 138 ಲಕ್ಷ ರೂಪಾಯಿಗಳಲ್ಲಿ 103 ಲಕ್ಷ ರೂಪಾಯಿಗಳು ಖರ್ಚಾಗಿದೆ, 309 ಲಕ್ಷ ರೂಪಾಯಿಗಳಲ್ಲಿ 207 ಲಕ್ಷ ರೂಪಾಯಿಗಳು ಖರ್ಚಾಗಿದೆ, 452 ಲಕ್ಷ ರೂಪಾಯಿಗಳಲ್ಲಿ 143 ಲಕ್ಷ ರೂಪಾಯಿಗಳು ಖರ್ಚಾಗಿದೆ 165 ಲಕ್ಷ ರೂ ಗಳಲ್ಲಿ 71 ಲಕ್ಷ ರೂ ಗಳು ಖರ್ಚಾಗಿದೆ ಎಂದು ಏನು ಪಟ್ಟಿ ಕೊಟ್ಟಿದ್ದೇವೆ ಅದು ಹತ್ತು ಪರ್ಸೆಂಟ್ ಏನೂ ಬರುವುದಿಲ್ಲ ಕೇಂದ್ರ ಸಚಿವರು ಪತ್ರ ಬರೆದಿರುವುದು, ನೀವು ಅಲ್ಲಿ ಅಧಿಕಾರಿಗಳನ್ನು ಪದೇ ಪದೇ change ಮಾಡಬೇಡಿ ಎನ್ನುವ ಬಗ್ಗೆ ಹೆಚ್ಚು ಒತ್ತು ಕೊಟ್ಟು ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಿ ಎಂದು ಪತ್ರ ಬರೆದಿದ್ದಾರೆ ಅಲ್ಲಿನ ಅಧಿಕಾರಿಗಳು ಪದೇ ಪದೇ change ಆಗಿರುವುದು ಸತ್ಯ ಆದ್ದರಿಂದ, ಈಗ ಅಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಅವರಿಗೆ ನಿರ್ದೇಶನ ಕೊಟ್ಟಿದ್ದೇನೆ ಮುಂದೆ ಈ ತರಹ ಆಗದ ಹಾಗೆ ಈಗೇನಾಗಿದೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೂಳ್ಳುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೀವು ಕೊಟ್ಟಿರುವ figures ಪ್ರಕಾರ ನಾವು ಹೋದರೂ ಕೂಡ it won't exceed more than 30%

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಬೇಕಿದ್ದರೆ ನಾನು ಮಾಹಿತಿ ಕೊಡುತ್ತೇನೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಮಾತ್ರ ಅವರು ಹೇಳುತ್ತಿದ್ದಾರೆ Central Government ನಿಂದ ಬಂದಿರುವ allocated funds ವಿವರ ನನ್ನ ಹತ್ತಿರ ಇದೆ ರಾಜ್ಯ ಸರ್ಕಾರದಿಂದ utilisation certificate ಕಳುಹಿಸಿಲ್ಲವೆಂದು ಬಿಡುಗಡೆಯಾಗಿದ್ದಕ್ಕೆ ಇವರು ಖರ್ಚು ತೋರಿಸುತ್ತಿದ್ದಾರೆ ಈ ಉದ್ದೇಶಕ್ಕಾಗಿ ಇನ್ನೂ double ಹಣ ಇತ್ತು

ಶ್ರೀ ಆರ್ ಅಶೋಕ್ ಪದೇ ಪದೇ Aids Prevention Society ಯ ಅಧಿಕಾರಿ change ಆಗುತ್ತಿರುವುದರಿಂದ ಅಲ್ಲಿ ಸುಮಾರು 4–5 ತಿಂಗಳು ಆ post ಖಾಲಿ ಇದ್ದುದ್ದರಿಂದ ಈ ಸಮಸ್ಯೆ ಆಗಿದೆ ಈಗ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ ಒಳ್ಳೆಯ ಕೆಲಸ ಆಗುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ

ಚಾಮರಾಜನಗರದಲ್ಲಿ ವೈದ್ಯಕೀಯ ಕಾಲೇಜ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **236(1624)**
ಸದಸ್ಯರ ಹೆಸರು **ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)**
ಉತ್ತರಿಸುವ ಸಚಿವರು **ಡಾ ವಿ ಎಸ್ ಆಚಾರ್ಯ**
(ವೈದ್ಯಕೀಯ ಶಿಕ್ಷಣ ಸಚಿವರು)

ಅ) ರಾಜ್ಯದ ಗಡಿಭಾಗವಾದ ಚಾಮರಾಜನಗರ ಜಿಲ್ಲೆಗೆ ವೈದ್ಯಕೀಯ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಹಾಗಿದ್ದಲ್ಲಿ, ಹೊಸ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು?

ಹೊಸ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ ಆದಾಗ್ಯೂ ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರದ ಅನುಮೋದನೆ ಮತ್ತು ಸಂಯೋಜನೆಯನ್ನು ಪಡೆಯುವ ಷರತ್ತಿಗೊಳಪಟ್ಟು 500 ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸಲು ಕಂಚಿ ಕಾಮಕೋಟಿ ಪೀಠಂ, ಕಾಂಚೀಪುರಂ ಇವರಿಗೆ ರಾಜ್ಯ ಸರ್ಕಾರವು ಪತ್ರ ಬರೆದಿದೆ

ಶ್ರೀ ವಾಟಾಳ್ ನಾಗರಾಜ್ ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಗ ವೈದ್ಯಕೀಯ ಕಾಲೇಜು ಮಂಜೂರು ಮಾಡಬೇಕೆಂದು ನಾವು ಬಹಳ ವರ್ಷಗಳಿಂದ ಒತ್ತಾಯ ಮಾಡಿದ್ದೇವೆ ಅವರನ್ನೂ ಸಹ ನಾನು 2–3 ಸಲ ಭೇಟಿ ಮಾಡಿ ಕೇಳಿದ್ದೇನೆ ಆದರೆ, ಇವತ್ತು ಅವರು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲವೆಂದು ಹೇಳುತ್ತಾರೆ ಇದು ಏಕೆ? ಒಂದೊಂದು ಜಿಲ್ಲೆಯನ್ನು ಒಂದೊಂದು ರೀತಿ ಇವರು ಕಾಣುತ್ತಿರುವುದು ಸರಿಯೇ? ಅದು ನ್ಯಾಯವೇ? ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವವಿದೆ ಹಿಂದುಳಿದ ಗಡಿ ಪ್ರದೇಶವಾದ ನಮ್ಮ ಜಿಲ್ಲೆಯನ್ನು ಇಷ್ಟೊಂದು ಕಡೆಗಾಣಿಸಿರತಕ್ಕ ಉದ್ದೇಶ, ಕಾರಣವೇನೆಂಬುದನ್ನು ತಾವು ತಿಳಿಸಬೇಕು

ಡಾ ಎ ಎಸ್ ಆಚಾರ್ಯ ರಾಜ್ಯದಲ್ಲಿ 36 medical colleges ಇವೆ ಇದರಲ್ಲಿ ಸರ್ಕಾರದ ಕಡೆಯಿಂದ ಸಧ್ಯ 7 ಕಾಲೇಜುಗಳಿವೆ ಉಳಿದದ್ದು ಖಾಸಗಿ ಕಾಲೇಜುಗಳು 36 college ಗಳಿದ್ದರೂ ರಾಜ್ಯದ 27 ಜಿಲ್ಲೆಗಳಲ್ಲಿ ಖಾಸಗಿ ಅಥವಾ ಸರ್ಕಾರಿ medical ಕಾಲೇಜುಗಳು ಇಲ್ಲ ಅಂಥ 7 ಜಿಲ್ಲೆಗಳನ್ನು ಗುರುತಿಸಲಾಗಿದೆ ಅದರಲ್ಲಿ ಚಾಮರಾಜನಗರವೂ ಒಂದು ಎಂಬುದನ್ನು ನಾನು ಒಪ್ಪುತ್ತೇನೆ ಅದು ಗಡಿ ಜಿಲ್ಲೆ ಅಲ್ಲಿಗೆ Medical college ಬರಬೇಕು ಆ ಬಗ್ಗೆ ನಿಮ್ಮಷ್ಟೇ ಆಸೆ ನನಗೂ ಇದೆ ಆದರೆ, ಇವತ್ತಿನ ದಿವಸ ದುಬಾರಿ ವೆಚ್ಚದ ಸಂದರ್ಭದಲ್ಲಿ ಮತ್ತು Medical Council of India ರವರ ತೀವ್ರವಾದಂಥ ಕಠಿಣವಾದ ಕೆಲವು ಷರತ್ತುಗಳ ಹಿನ್ನೆಲೆಯಲ್ಲಿ, ನಮಗೆ ಅಧ್ಯಾಪಕರನ್ನು ಎಲ್ಲ ಕಡೆ ನೇಮಕ ಮಾಡುವಂಥಾದ್ದು ಎಷ್ಟು ಕಷ್ಟ ಎನ್ನುವುದು ತಮಗೂ ಕೂಡ ಗೊತ್ತಿದ ಹಾಗಾಗಿ, ಈ ಒಂದು ದೊಡ್ಡ ಜವಾಬ್ದಾರಿಯನ್ನು ಒಂದೇ ಸಮನೆ ನಿಭಾಯಿಸಬೇಕಾಗಿದೆ ಏಕೆಂದರೆ, ಈಗ ಆರು Medical College ಪ್ರಾರಂಭ ಮಾಡಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಮಾಡಿದ್ದರಲ್ಲಿ ಆಗಲೇ ನಾವು ಮಂಡ್ಯ, ಹಾಸನ, ಬೆಳಗಾವಿ ಕಾಲೇಜುಗಳನ್ನು ಕಳೆದ ವರ್ಷ ಪ್ರಾರಂಭಿಸಿ, ಪಾಠ ಪ್ರವಚನಗಳು ಪ್ರಾರಂಭವಾಗಿವೆ ಇನ್ನು, ಬೀದರ್, ರಾಯಚೂರು, ಶಿವಮೊಗ್ಗ ಕಾಲೇಜುಗಳು ಈ ವರ್ಷ ಪ್ರಾರಂಭವಾಗಬೇಕು ಇದೇ ಒಂದು ದೊಡ್ಡ ಕೆಲಸವಿರುವಾಗ ಅಂದರ ಕಠಿಣ ಸಂದರ್ಭ ಇರುವಾಗ ಹೊಸ medical colleges ಅನ್ನು ಈ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಘೋಷಣೆ ಮಾಡುವಂಥಾದ್ದು ಯಾವುದೇ ಸರ್ಕಾರಕ್ಕಾದರೂ ಬಹಳ ಕಷ್ಟದ ಕೆಲಸವಾಗಿದೆ ಆ ದೃಷ್ಟಿಯಿಂದ Medical college ಗಳು ಇಲ್ಲದ 7 ಜಿಲ್ಲೆಗಳಾದ ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಗದಗ, ಹಾವೇರಿ, ಉತ್ತರ ಕನ್ನಡ ಮತ್ತು ಕೊಪ್ಪಳಗಳಲ್ಲಿ ಖಾಸಗಿಯವರು ಮುಂದ ಬಂದರೆ ಅವರಿಗೆ ನಾವು ಕೆಲವು ಸೌಕರ್ಯಗಳನ್ನು

ಕೊಡುತ್ತೇವೆ ಅದರಿಂದ ನಮಗೆ ಒಂದು ಸೀಟಿಗೆ 35 ಸಾವಿರ ರೂ ಗಳಂತೆ 40% seat ಸಿಗುತ್ತವೆ ಅದೇ ರೀತಿಯಾಗಿ ನಮ್ಮ ಜನರಿಗೆ ಬೇಕಾದಂಥ ಶುಶ್ರೂಷೆಗೆ ನಲವತ್ತು ಪರ್ಸೆಂಟ್ ಫ್ರೀ ಸೀಟ್ ಮೆಂಟೇನ್ ಮಾಡಬೇಕೆಂದು ಇದೆ ಅದರ ಜೊತೆಗೆ ನಮ್ಮ ಕೆಲವು ವಿದ್ಯಾರ್ಥಿಗಳಿಗೆ ವಿದ್ಯಾದಾನ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಕೇಳಿದಾಗ ಕಂಚಿ ಕಾಮಕೋಟಿ ಟ್ರಸ್ಟ್ ನವರು ಮೊದಲು ಚಿಕ್ಕಮಗಳೂರಿನ ಬಗ್ಗೆ ಆಸಕ್ತಿ ತೋರಿಸಿದರು ಆದರೆ ಚಿಕ್ಕಮಗಳೂರಿನಲ್ಲಿ ಇನ್ನೊಬ್ಬರು ಅದಕ್ಕೆ ಆಸಕ್ತಿ ತೋರಿಸಿದ್ದರಿಂದ ಚಾಮರಾಜನಗರದಲ್ಲಿ ಆಗಬಹುದು ಎಂದು ಹೇಳಿದ್ದರಿಂದ ಅವರಿಗೊಂದು Letter of Intent, Pre-Essentiality Certificate ಕೊಟ್ಟಿದ್ದೇವೆ ಈಗ ಅಲ್ಲಿ ಐದೂನೂರು ಹಾಸಿಗೆಗಳ ಆಸ್ಪತ್ರೆಯನ್ನು ನಿರ್ಮಾಣ ಮಾಡಿದರೆ Medical Council of India and Government of India ದವರ ಒಪ್ಪಿಗೆಯ ಮೇಲೆ ಕೊಡಬಹುದು ಎಂದು ಹೇಳುವಂಥ ಒಂದು ಆಶಯ ಪತ್ರವನ್ನು ಕೊಟ್ಟಿದೆ ಆ ದೃಷ್ಟಿಯಿಂದ ಇಲ್ಲಿ ಅಷ್ಟರಮಟ್ಟಿಗೆ progress ಆಗಿದೆ ಅದನ್ನು ತರಿಸಿ ಮುಂದೆ ಏನು ಎಂದು ಕೇಳಬಹುದು ಮತ್ತು ನಮ್ಮ ಹಿತಾಸಕ್ತಿ ಕಾದುಕೊಂಡು ನಮ್ಮ ಹುಡುಗರಿಗೆ ಬೇಕಾದಂಥ ಪ್ರವೇಶಾವಕಾಶ, ನಮ್ಮ ಜನರಿಗೆ ಬೇಕಾದಂತಹ treatment ನಮ್ಮವರಿಗೆ ಉದ್ಯೋಗ ಈ ಎಲ್ಲಾ ಅಂಶಗಳನ್ನು ಗಮನಿಸಬೇಕಾಗಿದೆ

ಶ್ರೀ ಆರ್ ಧ್ರುವನಾರಾಯಣ (ಸಂತೇಮರಳ್ಳಿ) ಖಾಸಗಿಯವರು ಯಾವಾಗಲೂ ಹಿಂದುಳಿದ ಪ್ರದೇಶಗಳಿಗೆ ಬರುವುದಿಲ್ಲ ಅವರೆಲ್ಲ ಮುಂದುವರೆದ ಪ್ರದೇಶಕ್ಕೆ ಹೋಗುವುದು ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು ಕಳೆದ ವರ್ಷ ತಾವೇನು ಐದು ಮೆಡಿಕಲ್ ಕಾಲೇಜು ತೆರೆದಿರಲ್ಲಾ ಎಲ್ಲಾ ಮುಂದುವರಿದ ತಾಲ್ಲೂಕು ಜಿಲ್ಲೆಗಳಲ್ಲಿ ತೆರೆಯುತ್ತೀರಾ? ಡಾ ನಂಜುಂಡಪ್ಪನವರ ವರದಿಯನ್ನು ಸುಮ್ಮನೆ ಜಪ ಮಾಡುವುದಕ್ಕೆ ಮಾತ್ರ ಓದತಕ್ಕಂಥಾದ್ದು ಆಗಬಾರದು ಆ ವರದಿಯ ಪ್ರಕಾರ ಚಾಮರಾಜನಗರ ಅತ್ಯಂತ ಹಿಂದುಳಿದ ತಾಲ್ಲೂಕು ದಯಮಾಡಿ ತಾವು ಅಂಥ ತಾಲ್ಲೂಕನ್ನು ಪರಿಗಣಿಸಬೇಕು

ಡಾ ವಿ ಎಸ್ ಆಚಾರ್ಯ ಶೈಕ್ಷಣಿಕ ವರ್ಷದಲ್ಲಿ ಮೂರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದು ನಮ್ಮ ಪ್ರಥಮ ಆದ್ಯತೆ ದಯಮಾಡಿ ತಾವು ಗಮನಿಸಬೇಕು ನನ್ನ ಪಕ್ಕದಲ್ಲಿ ಕುಳಿತಿದ್ದಾರೆ ನೋಡಿ, ನಿಮ್ಮ ಪರವಾಗಿ ಸರ್ಕಾರದೊಳಗೆ ಇದ್ದಾರೆ

ಶ್ರೀ ವಾಟಾಳ್ ನಾಗರಾಜ್ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕಾದರೆ ನೀತಿ ಏನು? ಇದಕ್ಕೆ ಏನಾದರೂ ನೀತಿ ಬೇಕಲ್ಲವೆ? ಯಾವುದೇ ಜಿಲ್ಲೆಯಲ್ಲಿ ಯಾವುದೇ ಪ್ರದೇಶದಲ್ಲಿ ವೈದ್ಯಕೀಯ ಕಾಲೇಜುಗಳನ್ನು

ಸ್ಥಾಪನೆ ಮಾಡಬೇಕಾದರೆ ಅದಕ್ಕೊಂದು ನೀತಿ ಬೇಕಲ್ಲವೆ? ಆ ನೀತಿ ಏನು ಎನ್ನತಕ್ಕಂಥಾದ್ದನ್ನು ತಾವು ಮೊದಲು ಸ್ಪಷ್ಟಪಡಿಸಬೇಕು ಎರಡನೆಯದಾಗಿ 5–6 ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಹೇಳಿದಿರಿ ಇದು ಏನಾಗಿದೆ ಎಂದರೆ, ಯಾವ ಜಿಲ್ಲೆಯಿಂದ ಯಾರು ಮುಖ್ಯಮಂತ್ರಿಯಾಗಿ ಬರುತ್ತಾರೆ ಎಲ್ಲಾ ಸಂಪೂರ್ಣವಾಗಿ ಆ ಜಿಲ್ಲೆಗೇ ಕರ್ನಾಟಕಕ್ಕೆ ಅವರು ಮುಖ್ಯಮಂತ್ರಿಯಲ್ಲ, ಕೆಲವರು ಬಂದರೆ ಆಯಾಯ ಜಿಲ್ಲೆಗಳಿಗೆ ಮುಖ್ಯಮಂತ್ರಿಗಳು ಇಡೀ ರಾಜ್ಯಕ್ಕಲ್ಲ ಇದು ಬಹಳ ಅತ್ಯಂತ ಅಪಾಯಕಾರಿ ಬೆಳವಣಿಗೆ ಇಡೀ ಸದನದಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳನ್ನು ಆಯ್ಕೆ ಮಾಡಕೊಂಡು ಬಿಟ್ಟಿದ್ದಾರೆ ಆ ಮಂತ್ರಿಗಳು ಆ ಜಿಲ್ಲೆಗೆ ಅನುಕೂಲ ಮಾಡಬೇಕು ಆ ಮಂತ್ರಿಗಳು ಅವರಿಗೆ ಅನುಕೂಲ ಮಾಡಿಕೊಡಬೇಕು ಈ ರೀತಿಯಾಗಿ ಇದು ದುರುಪಯೋಗವಾಗಿ ತಮಗೆ ಇಚ್ಛೆ ಬಂದ ಹಾಗೆ ತಮ್ಮ ಸ್ವಾರ್ಥಕೋಸ್ಕರವಾಗಿ ಇದನ್ನು ವಿಪರೀತವಾಗಿ ಮಾಡಿದ್ದಾರೆ ಮಾಡಿರತಕ್ಕಂಥಾದ್ದು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ ಆ ಜಿಲ್ಲೆಗಳಲ್ಲಿ ಆಗಲಿ ಆದರೆ, ಈ ಜಿಲ್ಲೆಗೆ ಚಾಮರಾಜ ನಗರ ಜಿಲ್ಲೆಗೆ ಏಕೆ ಹೀಗೆ? ಇಲ್ಲಿಗೆ ಮುಖ್ಯಮಂತ್ರಿಯವರು ಬರುವುದಿಲ್ಲ ಬಿಡಿ, ಬನ್ನಿ ಎಂದು ನಾನೇನು ಅವರಿಗೆ ಕೈ ಮುಗಿಯುವುದಿಲ್ಲ ಬರುವುದು ಬಿಡುವುದು ಅವರಿಗೆ ಸೇರಿದ್ದು ಉಪ ಮುಖ್ಯಮಂತ್ರಿಯವರು ಬರುವುದಿಲ್ಲ ಇವರು ಯಾರು ಬರುವುದಿಲ್ಲವೆನ್ನುವುದರ ಬಗ್ಗೆ ನನ್ನ ತಕರಾರು ಇಲ್ಲ ನಾವ್ಯಾರೂ ಅವರು ಬರಲಿಲ್ಲವೆಂದು ಅಳುತ್ತಿಲ್ಲ ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ನೀವು ಈ ಜಿಲ್ಲೆಯನ್ನು ಕರ್ನಾಟಕ ರಾಜ್ಯದಲ್ಲಿ ಕಡೆಗಣಿಸಿದ್ದೀರಿ ಕರ್ನಾಟಕದ ಭೂಪಟದಲ್ಲಿ ಕೊನೆಯ ಜಿಲ್ಲೆಯನ್ನಾಗಿ ಮಾಡಿದ್ದೀರಿ ಆದುದರಿಂದ ನಿಮ್ಮ ನೀತಿ ಏನು? ಆದುದರಿಂದ ಕನಿಷ್ಟ ಪಕ್ಷ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಕೊಡುವುದಕ್ಕೆ ನೀವು ನಮಗೆ ಸ್ಪಷ್ಟ ಭರವಸೆ ಈ ಸಂದರ್ಭದಲ್ಲಿ ಕೊಡಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಕನಿಷ್ಟ ಅಷ್ಟು ಆಗಲಿಲ್ಲವೆಂದರೆ ಅವರ ಜಿಲ್ಲೆಗೆ ಮುಖ್ಯಮಂತ್ರಿಗಳು at least ಒಂದು ರಾತ್ರಿ ಅಲ್ಲಿಗೆ ಹೋಗಿ ಮಲಗುವ ಹಾಗೆಯಾದರೂ ಮಾಡಿ,

ಶ್ರೀ ವಾಟಾಳ್ ನಾಗರಾಜ್ ಅವರು ಬಂದು ಮಲಗುವುದು ಬೇಡ ಏಕೆಂದರೆ, ಅವರು ಬಂದು ನಿದ್ರೆ ಮಾಡಿದರೆ ಇಡೀ ಜಿಲ್ಲೆ ನಿದ್ರೆ ಹೋಗಿಬಿಡುತ್ತದೆ ಚಾಮರಾಜ ನಗರಕ್ಕೆ ನೀವು ಬರುತ್ತೀರೋ ಇಲ್ಲವೋ ಸ್ಪಷ್ಟಪಡಿಸಿ ಚಾಮರಾಜನಗರ ಒಂದೇ ಅಲ್ಲ ಇಡೀ ಗಡಿಭಾಗದ ಜಿಲ್ಲೆಗಳು

ಅಧ್ಯಕ್ಷರು ಆಯಿತು ಬಿಡಿ ಅವರು ಉತ್ತರ ಹೇಳುತ್ತಾರೆ

ಶ್ರೀ ಹೆಚ್ ಡಿ ರೇವಣ್ಣ ಬರುತ್ತೇವೆ ಎನ್ನುವವರನ್ನು ಕರೆಯುವುದಿಲ್ಲ ಬಾರದೇ ಇರುವವರನ್ನು ಬನ್ನಿ ಬನ್ನಿ ಎಂದು ಕರೆಯುತ್ತಾರೆ, ಅವರು ಬರಲಿ ಅದಕ್ಕೆ ನನ್ನ ಅಭ್ಯಂತರವಿಲ್ಲ

ಶ್ರೀ ಆರ್ ಧ್ರುವನಾರಾಯಣ ಬೆಳಗಾವಿಯಲ್ಲಿ ನಡೆದಂಥ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಚಾಮರಾಜ ನಗರ ಜಿಲ್ಲೆಗೆ ಒಂದು ತಿಂಗಳೊಳಗೆ ಬರುತ್ತೇವೆಂದು ಹೇಳಿದ್ದರು ಆದರೆ ಇದುವರೆಗೆ ಬಂದಿಲ್ಲ

ಡಾ ವಿ ಎಸ್ ಆಚಾರ್ಯ ನಾನು ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅಯ್ಯೋ ಧ್ರುವನಾರಾಯಣರವರೆ ಅವರು ಬರದಿದ್ದರೂ ಚಿಂತೆಯಿಲ್ಲ ಬಿಡಿ

ಡಾ ವಿ ಎಸ್ ಆಚಾರ್ಯ ಈಗ ನಮ್ಮಲ್ಲಿರತಕ್ಕಂಥ ಆರು ಮೆಡಿಕಲ್ ಕಾಲೇಜುಗಳಲ್ಲಿ ಎರಡನೇ ಹಂತದಲ್ಲಿ ಮೂರು ಹೊಸದಾಗಿ ಪ್ರಾರಂಭವಾಗಬೇಕು ಅದಕ್ಕೆ ಅನುಮತಿ ಬೇಕು ಇದರ ಬಗ್ಗೆ ನಾವು ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೇವೆ ಆ ನಂತರ ಮಾನ್ಯ ಸದಸ್ಯರು ಹೇಳಿದಂಥ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಅದರ ಬಗ್ಗೆ ಏನು ಮಾಡಬಹುದು ಅದನ್ನು ನೋಡುತ್ತೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ವಾಟಾಳ್ ನಾಗರಾಜ್ ರವರ ಪ್ರಶ್ನೆ ಇಷ್ಟೆ private medical services ಅನ್ನು ಯಾರೋ ಸ್ಥಿತಿವಂತರು ಬರುತ್ತಾರೆ, ತೆರೆಯುತ್ತಾರೆ, ಹೋಗುತ್ತಾರೆ Government medical colleges ನ್ನು ಪ್ರಾರಂಭ ಮಾಡುವುದರಿಂದ ಸಾರ್ವಜನಿಕರಿಗೆ ಬಹಳ ಪ್ರಯೋಜನವಾಗುತ್ತದೆ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ನೀವು ಮನಸ್ಸೋ ಇಚ್ಛೆ ಮಾಡುತ್ತೀರೋ? ಅಥವಾ ಏನಾದರೂ specific pronounced policy ಇದೆಯೇ ಎಂದು ಅವರು ಕೇಳುತ್ತಿದ್ದಾರೆ ಏಕೆಂದರೆ, ಇದುವರೆವಿಗೂ ನಡೆದುಕೊಂಡು ಬಂದಿರತಕ್ಕಂಥ ರೀತಿ ಯಾರಿಗೆ ಅದೃಷ್ಟವಶಾತ್ ಅವಕಾಸ ಸಿಕ್ಕಿತೋ ಅವರಿಗೆ ಖುಷಿ ಬಂದ ಹಾಗೆ ಆಗುತ್ತದೆಯೇ ಹೊರತು ಇದಕ್ಕೆ ವೈಜ್ಞಾನಿಕವಾದಂಥ ನೀತಿ ಇಲ್ಲ ನಿಮ್ಮಲ್ಲಿ ನೀತಿ ಇದೆಯೆ? ಇದ್ದರೆ ಆ ನೀತಿ ಏನು? ಇಲ್ಲದಿದ್ದರೆ ನಿಮಗೆ ಖುಷಿ ಬಂದ ಹಾಗೆ ಮಾಡುತ್ತೀರಾ? ಇಷ್ಟೆ ಅವರ ಪ್ರಶ್ನೆ

ಡಾ ವಿ ಎಸ್ ಆಚಾರ್ಯ ನೀತಿಯ ಬಗ್ಗೆ ವಿಸ್ತಾರವಾಗಿ ಹೇಳತಕ್ಕಂಥ ಸಂದರ್ಭ ಪ್ರಶ್ನೋತ್ತರ ವೇಳೆಯಲ್ಲಿ ಸಾಧ್ಯವಿಲ್ಲ ನಮ್ಮ ಕರ್ನಾಟಕ ಏಕೀಕರಣವಾಗಿ ಕೊನೆಯ ಮೆಡಿಕಲ್ ಕಾಲೇಜ್ ನಲವತ್ತೈದು ವರ್ಷಗಳ ಹಿಂದೆ ಬಳ್ಳಾರಿ ಮೆಡಿಕಲ್

ಕಾಲೇಜು ಆಯಿತು ಹಿಂದೆ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರ ಅವರದೇ ಆದಂಥ ಮಾನದಂಡ ಅಲ್ಲಿರುವಂಥ infrastructure ಬೇರೆ ಇತರೆ ಅವಶ್ಯಕತೆಗಳನ್ನು ಯೋಚನೆ ಮಾಡಿ, ಆರು ಮೆಡಿಕಲ್ ಕಾಲೇಜು ತರಬೇಕೆಂದು ಪ್ರಾರಂಭಿಸಿದರು ಅದಕ್ಕೆ ಬೀಜಾಂಕುರ ಹಾಕಿದರು ಆಮೇಲೆ ಅದರ ಬಗ್ಗೆ ಬಹಳ ಪ್ರಯತ್ನಪಟ್ಟು ಕಳೆದ ವರ್ಷ ಮೂರು ಕಾಲೇಜುಗಳು ಪ್ರಾರಂಭವಾಯಿತು ಈ ವರ್ಷ ಮತ್ತೆ ಮೂರು ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಗಮನ ಕೊಟ್ಟಿದ್ದೇವೆ ಆದರೆ ಬಹಳ ದೊಡ್ಡ ಜವಾಬ್ದಾರಿ ಏನೆಂದರೆ, ಭಾರತ ದೇಶದಲ್ಲಿ ಯಾವುದೇ ಒಂದು ರಾಜ್ಯ ಸರ್ಕಾರ ಒಂದೇ ವರ್ಷದಲ್ಲಿ ಮೂರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದಿಲ್ಲ ಆದರೆ, ಸರ್ಕಾರದ ನೆರವಿನಿಂದ ಮೂರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದು ಕರ್ನಾಟಕ ಇದನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು ಕಳೆದ ವರ್ಷದಲ್ಲಿ ಪ್ರಾರಂಭ ಮಾಡಿರುವಂಥಾದ್ದು ಅಖಿಲ ಭಾರತದ ಮಟ್ಟದಲ್ಲಿ ಇದೊಂದು ದಾಖಲೆ ಹೀಗಾಗಿ ನಾವು ಮತ್ತೆ ಈ ವರ್ಷದಲ್ಲಿ ಮತ್ತೊಂದು ದಾಖಲೆಗೆ ಹೋಗುವುದಕ್ಕೆ ಮೂರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾವು ತಮ್ಮನ್ನು ಬಹಳ diligent, vigilant and intelligent minister ಎಂದು ತಿಳಿದುಕೊಂಡಿದ್ದೇನೆ please don't talk about anything else ನಮ್ಮ specific question ಇಷ್ಟೆ ಸರಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಬೇಕಾಗಿದ್ದರೆ, ಅದಕ್ಕೆ ಸರಕಾರದಲ್ಲಿ ಯಾವುದಾದರೂ ಒಂದು ಸ್ಥಿರವಾದಂಥ ನೀತಿ ಇದೆಯೇ? ಇಲ್ಲವೆ? ಅಷ್ಟೇ ನಮ್ಮ ಪ್ರಶ್ನೆ

ಶ್ರೀ ಧರ್ಮಸಿಂಗ್ 1966 ನಲ್ಲಿ ಬಳ್ಳಾರಿಯಲ್ಲಿ ಒಂದೇ ಒಂದು ಕಡೆ ಮೆಡಿಕಲ್ ಕಾಲೇಜು ಆಯಿತು ಎಂದು ಅವರು ಹೇಳಿದರು ನಮ್ಮ ಸಮ್ಮಿಶ್ರ ಸರಕಾರ ಬಂದಾಗ ರೂರಲ್ ಏರಿಯಾ ಸ್ಟೂಡೆಂಟ್ಸ್‌ಗೆ ಅನ್ಯಾಯವಾಗುತ್ತಿದೆ ಪ್ರಸ್ತುತ ಇರುವ ಮೆಡಿಕಲ್ ಮತ್ತು ಇಂಜಿನಿಯರ್ ಕಾಲೇಜ್‌ಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ಸಿಕ್ಕುತ್ತಿಲ್ಲ ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಮೊಟ್ಟಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ಆರು ಮೆಡಿಕಲ್ ಕಾಲೇಜುಗಳನ್ನು ತೆರೆಯತಕ್ಕಂಥಾದ್ದಕ್ಕೆ ಪ್ರಯತ್ನಪಟ್ಟೆವು ಈಗ ಅವರು ಯಾರ್ಯಾರು ಮುಖ್ಯಮಂತ್ರಿಗಳಾಗಿದ್ದರು ಅವರು ತೆಗೆದುಕೊಂಡರು ಎಂದು ಹೇಳಿದರು ನಾವು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗುಲ್ಬರ್ಗಾದಲ್ಲಿ ಮೆಡಿಕಲ್ ಕಾಲೇಜ್ ತೆಗೆದುಕೊಂಡಿಲ್ಲ ಬೀದರ್‌ಗೆ, ರಾಯಚೂರಿಗೆ

ಹಾಗೂ ಗಡಿಭಾಗದಲ್ಲಿ ಬೆಳಗಾವಿಗೆ ಮತ್ತು ಹಾಸನಕ್ಕೆ ಕೊಟ್ಟಿದ್ದೇವೆ ನಿಮ್ಮ ಉಪ ಮುಖ್ಯಮಂತ್ರಿಗಳು ಬಂದರು, ಆಗ ಶಿವಮೊಗ್ಗಕ್ಕೆ ಮತ್ತು ಮಂಡ್ಯಕ್ಕೆ ಕೊಟ್ಟಿದ್ದೇವೆ ಈ ರೀತಿಯಾಗಿ ಆಗ ಕೊಡಲಾಗಿದೆ ಇವತ್ತು ನೀವು ಇಂತಹಂಥ ವಿಚಾರಗಳನ್ನು ಹೇಳುತ್ತಿಲ್ಲ What is your policy? ಅವರು ಚಾಮರಾಜನಗರ ಗಡಿಭಾಗದಲ್ಲಿರತಕ್ಕಂಥ ಪ್ರದೇಶ ಹೀಗಾಗಿ ಅಲ್ಲಿ ಮೆಡಿಕಲ್ ಕಾಲೇಜು ತೆರೆಯುತ್ತೀರಾ ಇಲ್ಲವೆ ಎಂದು ಕೇಳುತ್ತಿದ್ದಾರೆ ನಮ್ಮ ಕಾಲದಲ್ಲಿ ಪ್ರಾರಂಭಿಸಿದಂಥ ಆರು ಮೆಡಿಕಲ್ ಕಾಲೇಜ್‌ಗಳ ಬಗ್ಗೆ ಹೇಳತಕ್ಕಂಥ ಅವಶ್ಯಕತೆ ಇಲ್ಲ ಅದಕ್ಕೆ ನೀವು ಬೇಕಾದ infrastructure ಮಾಡಬಹುದು ಇವತ್ತಿನ ಸಮ್ಮಿಶ್ರ ಸರಕಾರ ಏನಿದೆ, ಜನರ ಪರವಾಗಿ ಬಜೆಟ್ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ, ಮಾನ್ಯ ಆಚಾರ್ಯರವರು ತಾವು ಡಾಕ್ಟರ್ ಆಗಿದ್ದೀರಿ ಇದರ ಬಗ್ಗೆ ನಿಮ್ಮ ಸರಕಾರದಲ್ಲಿ ಏನಾದರೂ ಪರಿಶೀಲನೆ ಇದೆಯ? ಜೊತೆಗೆ ಬೇರೆ ಪ್ರದೇಶದಲ್ಲಿ ಮೆಡಿಕಲ್ ಕಾಲೇಜ್‌ಗಳನ್ನು ತೆರೆಯತಕ್ಕಂಥಾದ್ದು ಏನಾದರೂ ಇದೆಯೇ ಎಂದು ಅವರು ಕೇಳಿದ್ದಾರೆ ಅದಕ್ಕೆ ನೀವು ನೇರವಾಗಿ ಉತ್ತರ ಕೊಡಬೇಕು That requires a political will ಅಲ್ಲಿಯವರೆಗೆ ಈ ರಾಜ್ಯದಲ್ಲಿರತಕ್ಕಂಥ ಬಡ ವಿದ್ಯಾರ್ಥಿಗಳಿಗೆ ಏನಾಗುತ್ತಿದೆ ಎಂಬುದನ್ನು ನೋಡಬೇಕು ಇವತ್ತು ಸಂಪೂರ್ಣವಾಗಿ ಎಲ್ಲಾ ಕಡೆಗೆ ಶಿಕ್ಷಣ ಕ್ಷೇತ್ರದಲ್ಲಿ ಖಾಸಗೀಕರಣವಾಗಿದೆ ರೂರಲ್ ಏರಿಯಾದಲ್ಲಿರುವಂತಹ ಮಕ್ಕಳಿಗೆ ಎಲ್ಲಿಯೂ ಪ್ರವೇಶ ಸಿಕ್ಕುತ್ತಿಲ್ಲ ಇವತ್ತು ನಮ್ಮ ಮಂಗಳೂರಿನಲ್ಲಿದೆ, ಬೇರೆ ಕಡೆ ಇದೆ ಎಂದು ಕೇವಲ ಕಾಲೇಜ್ ಗಳ ಮಾತು ಹೇಳಿದರೆ ಆಗುವುದಿಲ್ಲ ಅದಕ್ಕಾಗಿ ನಮ್ಮ ರಾಜ್ಯದ ಬಡ ವಿದ್ಯಾರ್ಥಿಗಳಿಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಾವು ಆರು ಮೆಡಿಕಲ್ ಕಾಲೇಜ್ ತೆರೆದ ಮೇಲೆ 350 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ಸಿಕ್ಕತಕ್ಕಂಥ ಅವಕಾಶವನ್ನು ನಾವು ಮಾಡಿದ್ದೇವೆ ಅದರ ಬಗ್ಗೆ ನಿಮ್ಮ ಚಿಂತನೆ ಏನು ಇದೆ ಅದನ್ನು ತಾವು ಹೇಳಬೇಕು

ಡಾ ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶ ಅವಕಾಶ ಸಿಗುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕಾಗಿದೆಯೋ ಅವೆಲ್ಲವನ್ನು ನಾವು ಮಾಡುತ್ತಿದ್ದೇವೆ ಹಿಂದೆ ಫ್ರೀ ಸೀಟ್ 35% ಇತ್ತು ಆದರೆ, ಈ ಬಾರಿ 40% ಸೀಟ್‌ಗಳನ್ನು ಖಾಸಗಿ ಕಾಲೇಜುಗಳಲ್ಲಿ ನಾವು ಪಡೆದುಕೊಂಡಿದ್ದೇವೆ 35,000 ರೂಪಾಯಿ ಕೊಟ್ಟರೆ 1 ಸ್ಥಾನ ಖಾಸಗಿ ಕಾಲೇಜಿನಲ್ಲಿ ಸಿಗುವಂತಹ ಅವಕಾಶ ಆಗಿದೆ ಒಂದು ಹೆಜ್ಜೆ ಮುಂದೆ ಹೋಗಿದ್ದು, ಅಂದರೆ ಹೋದ ವರ್ಷಕ್ಕಿಂತಲೂ ಹೆಚ್ಚಿನ ಅನುಕೂಲತೆ ಈ ವರ್ಷ ಮೆಡಿಕಲ್ ಕಾಲೇಜಿಗೆ ಹೋಗುವವರಿಗೆ ಸಿಕ್ಕಿದ ಮಾನ್ಯ ವಾಟಾಳ್‌ನಾಗರಾಜ್‌ರವರು

ಮತ್ತು ಸದನದ ಇತರೇ ಸನ್ಮಾನ್ಯ ಸದಸ್ಯರೆಲ್ಲರೂ ಹೇಳಿರುವಂಥ ಭಾವನೆಗಳಿಗೆ ಮನ್ನಣೆಕೊಟ್ಟು, ಅವರು ತಿಳಿಸಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಾವು ವಿಚಾರ ಮಾಡುತ್ತೇವೆ

ಅಧ್ಯಕ್ಷರು ಈಗ ಮುಂದಿನ ಪ್ರಶ್ನೆ ಮಾನ್ಯ ವಾಟಾಳ್‌ನಾಗರಾಜ್‌ರವರೆ, ಈಗಾಗಲೇ ಅವರು ಉತ್ತರ ಹೇಳಿದ್ದಾರೆ ಆದ್ದರಿಂದ, ಮತ್ತೆ ಎಷ್ಟು ಸಮಯ ತೆಗೆದುಕೊಳ್ಳುವುದು? ತೌಡು ತೌಡು ಕೆಲಸವನ್ನು ಸುಮ್ಮನೆ ಮಾಡುವಂಥದು ಬೇಡ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ನಂಜುಂಡಪ್ಪನವರು ವರದಿ ಪ್ರಕಾರ ಚಾಮರಾಜನಗರ ಜಿಲ್ಲೆ ಹಿಂದುಳಿದ ಪ್ರದೇಶವಾಗಿದೆ

ಅಧ್ಯಕ್ಷರು ನೀವು ಕೇಳಿರುವುದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಅವರು ಅಲ್ಲಿಗೆ ಕಾಲೇಜನ್ನು ಕೊಡಲೇ ಬೇಕು ಇದರ ಬಗ್ಗೆ ಅವರು ಇಲ್ಲಿ ಭರವಸೆ ಕೊಡದಿದ್ದರೆ ನಾನು ಇಲ್ಲಿ ಧರಣಿ ಮಾಡುತ್ತೇನೆ ಇದು ಸರಿಯಲ್ಲ, ಇದರ ಬಗ್ಗೆ ನಾನು ಮೊದಲಿನಿಂದ ಹೇಳುತ್ತಾ ಬರುತ್ತಿದ್ದೇನೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಆರ್ ಧ್ರುವನಾರಾಯಣ್‌ರವರು ಧರಣಿ ಮಾಡಲು ಸದನ ಬಾವಿಗೆ ಆಗಮಿಸಿದರು)

ಅಧ್ಯಕ್ಷರು ಇಲ್ಲಿ ಏನಾಗಿದೆ ಎಂದರೆ, ಮಂತ್ರಿಗಳ ಆಶ್ವಾಸನೆಗಳೆಂದು ಜನರು ಮಾತನಾಡಿಕೊಳ್ಳುತ್ತಾರೆ ಅಂದರೆ, ಮಂತ್ರಿಗಳು ಆಶ್ವಾಸನೆ ಕೊಡುವ ಹಾಗೆ ಆಗಬಾರದೆಂದು ಮಾತನಾಡುತ್ತಾರೆ ಆದ್ದರಿಂದ ಆಶ್ವಾಸನೆಗಳನ್ನು ಬೇಕಾದಷ್ಟು ಕೊಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳಬೇಕಾಗುತ್ತದೆ ಇವರು ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಒಂದು ಪಾಲಿಸಿಯನ್ನು ಇಟ್ಟುಕೊಳ್ಳಬೇಕು ಇವತ್ತಿನ ದಿವಸ ಮೆಡಿಕಲ್ ಕಾಲೇಜು ಇರುವ ಕಡೆಯೇ ಇನ್ನೊಂದು ಮೆಡಿಕಲ್ ಕಾಲೇಜು ಕೊಡುತ್ತೀರಿ ಮೂಲಭೂತ ಸೌಕರ್ಯಗಳು ಇಲ್ಲದ ಕಡೆ ಮತ್ತೆ ಹಿಂದುಳಿದ ಪ್ರದೇಶಗಳ ಕಡೆ ಕೊಡಿ ಎಂದು ಕೇಳುತ್ತಿದ್ದೇವೆ ಇಂಥ ಕಡೆ ನಾಳೆ ದಿವಸ ಮಾಡುತ್ತೇವೆಂಬುದರ ಬಗ್ಗೆ ಒಂದು ಪಾಲಿಸಿ ಮಾಡುವುದಕ್ಕೆ ಆಗುವುದಿಲ್ಲವೆ? 6 ಕಾಲೇಜು ಮಾಡಿರುವ ಬಗ್ಗೆ ಮೂರು ವರ್ಷಗಳಿಂದ ಹೇಳುತ್ತಿದ್ದೀರಿ ಆದ್ದರಿಂದ, What is your future policy? 6 ಕಾಲೇಜು ಮಾಡಿರುವ ಬಗ್ಗೆ ಮೂರು ವರ್ಷಗಳಿಂದ ಉತ್ತರ ಹೇಳಿರುವುದು ಆಗಿದೆ ಇನ್ನು ಮುಂದಾದರು ಹಿಂದುಳಿದ ಜಿಲ್ಲೆಗಳನ್ನು ಆಯ್ಕೆ ಮಾಡಿ ಅಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಿ ಕ್ಲಿನಿಕಲ್ ಫೆಸಿಲಿಟಿಯನ್ನು ಜನಗಳಿಗೆ ಕೊಡತಕ್ಕಂಥ ಕೆಲಸ ಮಾಡುತ್ತೀರಾ? ಬೆಳಗಾಂನಲ್ಲಿ ಈಗಾಗಲೇ ಮೆಡಿಕಲ್

ಕಾಲೇಜ್ ಇದೆ ಆದರೂ ಮತ್ತೆ ಬೆಳಗಾಂಗೆ ಮತ್ತೆ ಕೊಟ್ಟಿದ್ದೀರಿ, ಮತ್ತೆ ಮಂಡ್ಯದಲ್ಲಿ ಈಗಾಗಲೇ ಮೆಡಿಕಲ್ ಕಾಲೇಜ್ ಇದೆ ಆದರೆ, ಮತ್ತೆ ಅಲ್ಲಿಗೆ ಇನ್ನೊಂದು ಮೆಡಿಕಲ್ ಕಾಲೇಜು ಕೊಟ್ಟಿದ್ದೀರಿ ಆದ್ದರಿಂದ, ಈಗಾಗಲೇ ಇರುವ ಕಡೆ ಸರ್ಕಾರಿ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಿ ಅಸೆಂಬ್ಲಿಯಲ್ಲಿ ದೊಡ್ಡದಾಗಿ ಶಭಾಷ್‌ಗಿರಿ ಹೇಳಿಕೊಂಡು ಕುಳಿತುಕೊಂಡಿದ್ದೀರಿ ಈ ರಾಜ್ಯದಲ್ಲಿ ಬೇರೆ ಎಲ್ಲಿಯೂ ಜಾಗವಿರಲಿಲ್ಲವೇ? ನೀವು ಕೊಡದಿದ್ದರೆ ಆ ಜಿಲ್ಲೆಯ ಬಗ್ಗೆ ಮಾತನಾಡಬೇಡಿ ಬೇರೆ ಜಿಲ್ಲೆಯ ಬಗ್ಗೆ ಮಾತ್ರ ಮಾತನಾಡಿ

ಅಧ್ಯಕ್ಷರು ಆಯಿತು ನಾನು ಮುಂದಿನ ಪ್ರಶ್ನೆಯನ್ನು ಮಾನ್ಯ ಕೃಷ್ಣಪ್ಪನವರು ಕೇಳುವುದಕ್ಕೆ ಈಗಾಗಲೇ ಹೇಳಿದ್ದೇನೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿ

ಡಾ.ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ, ಈ ಚರ್ಚೆಯ ವೇಳೆಯಲ್ಲಿ ಅವರು ಹೇಳಿರತಕ್ಕಂಥ ಭಾವನೆಗಳಿಗೆ ಮನ್ನಣೆ ಕೊಟ್ಟು 15 ದಿವಸದೊಳಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚಾಮರಾಜನಗರ ಜಿಲ್ಲೆಯ ಎಲ್ಲಾ ಶಾಸಕರುಗಳ ಒಂದು ಸಭೆ ಕರೆದು ಇದರ ಬಗ್ಗೆ ಯಾವ ರೀತಿಯಾಗಿ ಮುಂದೆ ಹೋಗಬಹುದೆಂಬುದರ ಬಗ್ಗೆ ಚರ್ಚೆ ಮಾಡುತ್ತೇವೆ

ಅಧ್ಯಕ್ಷರು ಆಯಿತು ತಾವುಗಳು ತಮ್ಮ ಸ್ಥಾನಕ್ಕೆ ಹೋಗಿ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಆರ್ ಧ್ರುವನಾರಾಯಣ್‌ರವರು ತಮ್ಮಗಳ ಸ್ಥಾನಕ್ಕೆ ವಾಪಸ್ಸು ಹೋದರು)

ಪಶುವೈದ್ಯ ಶಾಖೆ ಮತ್ತು ಕೇಂದ್ರಗಳ ಮಂಜೂರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**238(1600)**
ಸದಸ್ಯರ ಹೆಸರು	**ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ)**
ಉತ್ತರಿಸುವ ಸಚಿವರು	**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)**

(ಅ) ತುರುವೇಕೆರೆ ತಾಲ್ಲೂಕಿಗೆ 1974ರ ನಂತರ ಎಷ್ಟು ಪಶುವೈದ್ಯ ಶಾಲೆ ಮತ್ತು ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ?

ತುರುವೇಕೆರೆ ತಾಲ್ಲೂಕಿನಲ್ಲಿ 1974ರ ನಂತರ 3 ಪಶು ಚಿಕಿತ್ಸಾಲಯ ಮತ್ತು 9 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮಂಜೂರು ಆಗಿರುತ್ತವೆ ಅವುಗಳ ಈ ಕೆಳಕಂಡ ಗ್ರಾಮಗಳಲ್ಲಿ ಮಂಜೂರು ಆಗಿವೆ

ಪಶು ಚಿಕಿತ್ಸಾಲಯ		ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ
1	ದಬ್ಬೆಘಟ್ಟ	ಚಾಕುವಳ್ಳಿಪಾಳ್ಯ
2	ಮಾವಿನಕೆರೆ	ಮಾಚೇನಹಳ್ಳಿ
3	ಅಂಚಿಹಳ್ಳಿ	ಕೊಂಡಜ್ಜಿ
4	---	ಮಣೀಚೆಂಡೂರು
5	---	ಲೋಕಮ್ಮನಹಳ್ಳಿ
6	---	ಆನಕೆರೆ
7	---	ಮುತ್ತಗದಹಳ್ಳಿ
8	---	ಹುಲ್ಲೇಕೆರೆ
9	---	ಕುಣಿಕೇನಹಳ್ಳಿ

(ಆ) ಮಂಜೂರು ಮಾಡಿದ ನಂತರ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ?

ಹೌದು, ಮಂಜೂರು ಆದ ನಂತರ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ

ಶ್ರೀ ಎಂ ಟಿ ಕೃಷ್ಣಪ್ಪ - ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ ಆದರೆ, ನನ್ನ ಪ್ರಶ್ನೆಗೆ ಅವರೂ ಕೊಟ್ಟಿರುವ ಉತ್ತರ ಸಂಬಂಧವಿಲ್ಲದಂತಾಗಿದೆ ತುರುವೇಕೆರೆಗೆ ಪಶುವೈದ್ಯ ಶಾಲೆ ಮತ್ತು ಕೇಂದ್ರಗಳನ್ನು ಮಂಜೂರು ಮಾಡುತ್ತೀರಾ ಎಂದು ಕೇಳಿದ್ದೇನೆ ಮತ್ತೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂದು ಕೇಳಿರುವ ಪ್ರಶ್ನೆಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಉತ್ತರ ಕೊಟ್ಟಿದ್ದಾರೆ ಅಲ್ಲಿ ಕೇವಲ ಬೋರ್ಡ್ ಇದೆ, ಡಾಕ್ಟರ್ ಇಲ್ಲ ವೆಟರ್ನರಿ ಇನ್‌ಸ್ಪೆಕ್ಟರ್ ಮೊದಲೇ ಇಲ್ಲ ಒಬ್ಬ ಪಿವನ್ ಇದ್ದಾನೆ ಆದ್ದರಿಂದ, ಇದು ಸಮರ್ಪಕವಾದ ಆಸ್ಪತ್ರೆಯನ್ನು ನಡೆಸುವ ರೀತಿಯೇ? ಒಂದು ಹಸು ತೆಗೆದುಕೊಂಡು ಜೀವನ ಮಾಡತಕ್ಕಂಥ ಬಡ ಹೆಣ್ಣು ಮಗಳ ಹಸುವಿಗೆ ನೀವು ಔಷಧಿ ಕೊಡದೆ ಆ ಹಸು ಸತ್ತು ಹೋದಾಗ ಅಲ್ಲಿರತಕ್ಕಂಥ ಆಸ್ಪತ್ರೆ ಸಮರ್ಪಕವಾಗಿ ಹೇಗೆ ಕೆಲಸ ನಿರ್ವಹಿಸುತ್ತದೆಂದು ತಾವು ಹೇಳುತ್ತೀರಾ? ಆದ್ದರಿಂದ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೆಡಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ನೇಮಕ ಮಾಡುತ್ತಿರುವ ಹಾಗೆ ಇಲ್ಲಿಯೂ ಕೂಡ ವಿಶೇಷವಾದಂಥ ಒಂದು ಕಾನೂನು ಮಾಡಿ ಡಾಕ್ಟರ್ ಮತ್ತು ಸಂಬಂಧಪಟ್ಟಂಥ ಸಿಬ್ಬಂದಿಗಳನ್ನು ನೇಮಕಾತಿ ಮಾಡಿದಾಗ ಮಾತ್ರ ಸಮರ್ಪಕವಾದ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಅಲ್ಲಿ ಆಸ್ಪತ್ರೆ ಇದೆ ಎಂದು ಕೇವಲ ಒಂದು

ಬೋರ್ಡ್ ಹಾಕುವುದರಿಂದ ಅರ್ಥವಿಲ್ಲ ನಮಗೆ ಮತ್ತೆ ಮೂರ್ನಾಲ್ಕು ಆಸ್ಪತ್ರೆಗಳನ್ನು ಕೊಡಿ ಎಂದು ಕೇಳಿದ್ದೇವೆ ಆದರೆ, ಅದರ ಬಗ್ಗೆ ತಾವು ಏನೂ ವ್ಯಾಖ್ಯಾನ ಮಾಡಿಲ್ಲ ಇವತ್ತಿನ ದಿವಸ ಬರಗಾಲ ಬಂದಿದ್ದರಿಂದ ನಮ್ಮಲ್ಲಿರುವ ತೆಂಗಿನ ತೋಟ ಒಣಗಿದೆ ಆದ್ದರಿಂದ, ಹೆಚ್ಚಾಗಿ ದನ ಕರುಗಳನ್ನು ಸಾಕುವುದಕ್ಕೆ ಅನುಕೂಲವಾದರೆ ಅವರ ಜೀವನಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ ಔಷಧಿಯನ್ನು ಕೊಡದಿದ್ದರೆ ಮತ್ತು ಅಲ್ಲಿ ಡಾಕ್ಟರ್ ಇಲ್ಲದಿದ್ದರೆ ಆಸ್ಪತ್ರೆ ಇರತಕ್ಕಂಥದು ವ್ಯರ್ಥವಾಗುತ್ತದೆಂಬುದು ಮೂಲ ಭೂತ ಪ್ರಶ್ನೆಯಾಗಿದೆ ಜೊತೆಗೆ ಔಷಧಿಯನ್ನು ಕೂಡಲೇ ಬೇಕು ಔಷಧಿ ಕೊಡದಿದ್ದರೆ ಆಸ್ಪತ್ರೆಗಳನ್ನು ಏಕೆ ಇಟ್ಟುಕೊಳ್ಳುತ್ತೀರಿ? ಡಾಕ್ಟರ್ ಇಲ್ಲದೆ ಆಸ್ಪತ್ರೆಗಳನ್ನು ಓಪನ್ ಮಾಡತಕ್ಕಂಥ ಅವಶ್ಯಕತೆ ಇದೆಯೇ? ಆದ್ದರಿಂದ ವಿಶೇಷವಾದಂಥ ನೇಮಕಾತಿಗೆ ತಿದ್ದುಪಡಿಯನ್ನು ತಂದು ನೇಮಕಾತಿಯನ್ನು ಮಾಡಿಕೊಳ್ಳಬೇಕೆಂಬುದು ನನ್ನ ವಿನಂತಿ ಮತ್ತೆ ನನ್ನ ಕ್ಷೇತ್ರಕ್ಕೆ ನಾಲ್ಕು ಯುನಿಟ್‌ಗಳನ್ನು ಕೇಳಿದ್ದೆ ಆದ್ದರಿಂದ ಅದನ್ನು ಮಂಜೂರು ಮಾಡಿ ಕೊಡುವುದಕ್ಕೆ ಆಗುತ್ತದೆಯೇ? ಅಥವಾ ಅದಕ್ಕೆ ಏನಾದರೂ ಅಡಚಣೆ ಇದೆಯೇ ಎಂಬುದರ ಬಗ್ಗೆ ದಯಮಾಡಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಿ ಕೊಡಲಾಗಿದೆ. 1974ರ ನಂತರ ಎಷ್ಟು ಸ್ಯಾಂಕ್ಷನ್ ಆಗಿದೆ ಎಂಬುದರ ಬಗ್ಗೆ ವಿವರವಾಗಿ ಅವರಿಗೆ ಲಿಖಿತದ ಮೂಲಕ ಮಾಹಿತಿ ಕೊಟ್ಟಿದ್ದೇನೆ ತುರುವೇಕೆರೆ ತಾಲ್ಲೂಕು ಪ್ರಾದೇಶಿಕ ಅಸಮತೋಲನ ನಿವಾರಣಾ ವರದಿ ಪ್ರಕಾರ ಅತೀ ಹಿಂದುಳಿದ ತಾಲ್ಲೂಕು ಆಗಿದೆ ಈ ತಾಲ್ಲೂಕಿನಲ್ಲಿ ಪ್ರಸ್ತುತ 70,841 ಪಶುಗಳಿವೆ ಆದರೆ, ಕೇಂದ್ರೀಯ ಕೃಷಿ ನೀತಿ ಪ್ರಕಾರ 5 ಸಾವಿರ ಘಟಕಕ್ಕೆ ಒಂದು ಪಶುವೈದ್ಯ ಆಸ್ಪತ್ರೆ ಇರಬೇಕೆಂದು ನಿಯಮ ಇದೆ ಆದರೆ, ತುರುವೇಕೆರೆ ತಾಲ್ಲೂಕಿನಲ್ಲಿ 70,841 ಪಶುಗಳಿರುವ ಕಾರಣ 14 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿದೆ ಆದರೆ, ಅಲ್ಲಿ 21 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಇವುಗಳ ವಿವರಗಳನ್ನು ಮತ್ತು ಕಾರ್ಯನಿರ್ವಹಿಸುತ್ತಿರುವ ಅಂಕಿ-ಅಂಶಗಳ ಮಾಹಿತಿಗಳನ್ನು ಕೂಡ ಅವರಿಗೆ ಒದಗಿಸಿಕೊಟ್ಟಿದ್ದೇನೆ ಒಟ್ಟಾರೆ ಮಂಜೂರಾಗಿರತಕ್ಕಂಥ ಹುದ್ದೆಗಳು 78, ಆದರೆ, ಈಗ ಕೆಲಸ ಮಾಡುತ್ತಿರುವುದು 60 ಹುದ್ದೆಗಳಲ್ಲಿ, ಇನ್ನೂ 18 ಹುದ್ದೆಗಳು ಖಾಲಿ ಇವೆ ತಾವು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಸರಿಯಾದ ಅಂಕಿ-ಅಂಶಗಳ ವಿವರಗಳನ್ನು ಲಗತ್ತಿಸಿದ್ದೇನೆ

ಶ್ರೀ ಎಂ ಟಿ ಕೃಷ್ಣಪ್ಪ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು 9 ಮಾತ್ರ ಕೊಟ್ಟಿದ್ದೀರಿ ಆದ್ದರಿಂದ 14 ಹೇಗೆ ಬಂತು? ತಾವು 14 ಇವೆ ಎಂದು ಹೇಳುತ್ತಿದ್ದೀರಿ

ಆದರೆ, ಇಲ್ಲಿ ಕೇವಲ 9 ಇವೆ ಆದ್ದರಿಂದ, ಇದರ ಬಗ್ಗೆ ತಾವು ಪರಾಂಬರಿಸಬೇಕು You are given only nine, not fourteen

ಶ್ರೀ ರೇವೂ ನಾಯಕ್ ಬೆಳಮಗಿ ನಾನು ಸರಿಯಾಗಿ ಉತ್ತರ ಕೊಟ್ಟಿದ್ದೇನೆ 1974ರ ನಂತರ ಎಷ್ಟು ಪಶುವೈದ್ಯ ಶಾಲೆ ಮತ್ತು ಕೇಂದ್ರಗಳು ಮಂಜೂರಾಗಿವೆ ಎಂದು ಕೇಳಿದ್ದೀರಿ ಅದರ ಬಗ್ಗೆ ನಾನು ವಿವರವಾಗಿ ಹೇಳಿದ್ದೇನೆ

ಶ್ರೀ ಎಂ ಟಿ ಕೃಷ್ಣಪ್ಪ ನಮ್ಮ ತಾಲ್ಲೂಕಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಮಾಹಿತಿ ಕೊಡಿ 9 ಎಂದು ನೀವು ಮಾಹಿತಿ ಕೊಟ್ಟಿದ್ದೀರಿ

ಶ್ರೀ ರೇವೂ ನಾಯಕ್ ಬೆಳಮಗಿ ನಾನು ಕೊಟ್ಟಿರುವ ಮಾಹಿತಿ ಏನೆಂದರೆ, ತುರುವೇಕೆರೆ ತಾಲ್ಲೂಕಿನಲ್ಲಿ 1974ರ ನಂತರ 3 ಪಶು ಚಿಕಿತ್ಸಾಲಯ ಮತ್ತು 9 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮಂಜೂರು ಆಗಿರುತ್ತವೆ ಅವುಗಳು ಈ ಕೆಳಕಂಡ ಗ್ರಾಮಗಳಲ್ಲಿ ಮಂಜೂರಾಗಿವ ಈ ಗ್ರಾಮಗಳ ಹೆಸರುಗಳನ್ನು ಸಹ ಮಾಹಿತಿಯಲ್ಲಿ ಹೇಳಿದ್ದೇನೆ ಒಟ್ಟಾರೆ ಕೇಂದ್ರ ಕೃಷಿ ನೀತಿ ಪ್ರಕಾರ 5000 ಜಾನುವಾರಗಳ ಘಟಕಕ್ಕೆ ಒಂದು ದವಾಖಾನೆ ಇರಬೇಕೆಂದು ನೀತಿ ಇದೆ ಆದರೆ, ನಿಮ್ಮ ತಾಲ್ಲೂಕಿನಲ್ಲಿ 70,841 ಪಶುಗಳಿವೆ ಇದಕ್ಕೆ 14 ಮಾತ್ರ ಸೀಮಿತವಾಗಬೇಕು ಆದರೆ, 21 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಅಂಕಿ-ಅಂಶಗಳನ್ನು ನಾನು ಕೊಟ್ಟಿದ್ದೇನೆ ಖಾಲಿ ಇರುವ ಬಗ್ಗೆ ಕೂಡ ಕೇಳಿದ್ದೀರಿ, ಅದರ ಬಗ್ಗೆ ಕೂಡ ಮಾಹಿತಿ ಕೊಟ್ಟಿದ್ದೇನೆ 78 ಮಂಜೂರಾದ ಹುದ್ದೆಗಳಿದ್ದು ಇದರಲ್ಲಿ 60 ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ ಇನ್ನೂ 18 ಹುದ್ದೆಗಳು ಖಾಲಿ ಇವೆ ಈ ಸದರಿ ಹುದ್ದೆಗಳು ಸುಮಾರು ವರ್ಷಗಳಿಂದ ಖಾಲಿ ಇವೆ ಇವುಗಳನ್ನು ಹಂತ ಹಂತವಾಗಿ ನೇಮಕಾತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ

ಶ್ರೀಮತಿ ಜೆ ಸುನೀತ ವೀರಪ್ಪಗೌಡ ನಿಜಕ್ಕೂ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಸುಮಾರು 100 ಹುದ್ದೆಗಳು ಖಾಲಿ ಇವೆ ಮೂರು ವರ್ಷಗಳಿಂದ ಇದೇ ಉತ್ತರವನ್ನು ಹೇಳುತ್ತಿದ್ದಾರೆ ಆದ್ದರಿಂದ ಈಗಲಾದರೂ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದನ್ನು ಹೇಳಬೇಕು

ಶ್ರೀ ರೇವೂ ನಾಯಕ್ ಬೆಳಮಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಗಂಗಾಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ವಿದ್ಯುದ್ಧೀಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **239 (1616)**

ಸದಸ್ಯರ ಹೆಸರು ಶ್ರೀ ಶಿವರಾಮ ಬಿ (ಗಂಡಸಿ)

ವಿಷಯ ಗಂಗಾಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ವಿದ್ಯುದ್ಧೀಕರಣ

ಸಚಿವರ ಹೆಸರು ಮತ್ತು ಪದನಾಮ ಶ್ರೀ ಬಾಲಚಂದ್ರಲ ಜಾರಕಿಯಹೋಳಿ (ಸಮಾಜ ಕಲ್ಯಾಣ ಸಚಿವರು)

1 ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳಿಗೆ ವಿದ್ಯುದೀಕರಣದ ವ್ಯವಸ್ಥೆಯನ್ನು ಪೂರ್ಣವಾಗಿ ಒದಗಿಸುವ ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು (ವರ್ಷಾವಾರು ಮತ್ತು ಜಿಲ್ಲಾವಾರು ಮಾಹಿತಿ ಒದಗಿಸುವುದು)

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯ ಸಾಮೂಹಿಕ ಹಾಗೂ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಪ್ರಾರಂಭದಿಂದ ಕೊರೆಯಲಾದ ಕೊಳವೆ ಬಾವಿಗಳು ಹಾಗೂ ವಿದ್ಯುದ್ಧೀಕರಣಗೊಂಡ ಮತ್ತು ವಿದ್ಯುದ್ಧೀಕರಣಕ್ಕೆ ಬಾಕಿ ಇರುವ ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿದೆ

ಯೋಜನೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಹೊಂದಿದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುವ ಕೊಳವೆ ಬಾವಿಗಳು
ಸಾಮೂಹಿಕ	2220	1556	664
ವೈಯಕ್ತಿಕ	3727	963	2764

ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುವ ಕೊಳವೆ ಬಾವಿಗಳ ಜಿಲ್ಲಾವಾರು ಮತ್ತು ವರ್ಷಾವಾರು ಮಾಹಿತಿಯನ್ನು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುದ್ಧೀಕರಣಗೊಳಿಸದೇ ಬಾಕಿ ಇರುವ ಫಲಾನುಭವಿಗಳ ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿ ಪ್ರಾರಂಭದಿಂದ ದಿ 28 02 2007ರ ಅಂತ್ಯದವರೆಗೆ ಕೊಳವೆ ಬಾವಿ ಕೊರೆದು, ವಿದ್ಯುದ್ಧೀಕರಣಕ್ಕೆ ಬಾಕಿ ಇರುವ ಕೊಳವೆಬಾವಿಗಳ ವಿವರ ಈ ಕೆಳಕಂಡಂತಿದೆ

ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳ ಸಂಖ್ಯೆ	13878
ಸಾಮೂಹಿಕ ನೀರಾವರಿ ಕೊಳವೆ ಬಾವಿಗಳ ಸಂಖ್ಯೆ	161
ಒಟ್ಟು	14039

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ

2 ವಿದ್ಯುದ್ಧಿಕರಣಕ್ಕೆ ಫಲಾನುಭವಿಗಳು ಏನಾದರು ವಂತಿಗೆಯನ್ನು ತುಂಬುವ ವ್ಯವಸ್ಥೆ ಇದೆಯೇ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸಾಮೂಹಿಕ ನೀರಾವರಿ ಯೋಜನೆಯ ನಿಯಮಾನುಸಾರ ಈ ಯೋಜನೆಯಲ್ಲಿ ಪ್ರತಿ ಕೊಳವೆ ಬಾವಿಗೆ 25,000/–ರೂ ಗಳಂತೆ ಭದ್ರತಾ ಠೇವಣಿ ಮೊತ್ತವನ್ನು ನಿಗಮದಿಂದಲೇ ಪಾವತಿಸಲಾಗುತ್ತಿದೆ ವೈಯಕ್ತಿಕ ನೀರಾವರಿ ಯೋಜನೆಯ ನಿಯಮಾನುಸಾರ ಫಲಾನುಭವಿಗಳು ವಿದ್ಯುತ್ ಠೇವಣಿ ಪಾವತಿಸಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿರುತ್ತದೆ ವೈಯಕ್ತಿಕ ಯೋಜನೆಯ ನಿಯಮಾನುಸಾರ ಪ್ರವರ್ಗ 1 ಹಾಗೂ 2ಎ ಗೆ ಸೇರಿದ ಫಲಾನುಭವಿಗಳಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಕೊಡಲಾಗುತ್ತಿದೆ ಈ ವರ್ಗದ ಫಲಾನುಭವಿಗಳು ಸಣ್ಣ ಮತ್ತು ಅತಿಸಣ್ಣ ರೈತರಾಗಿದ್ದು, ಆರ್ಥಿಕವಾಗಿ ಸಬಲರಾಗಿಲ್ಲದ ಕಾರಣ, ಅವರುಗಳು ವಿದ್ಯುತ್ ಠೇವಣಿ (ವೈ ಎಂ ಡಿ ಮತ್ತು ಎಂ ಎಸ್ ಡಿ) ಯನ್ನು ಪಾವತಿಸದೇ ಇರುವುದರಿಂದ ಈ ಯೋಜನೆಯಲ್ಲಿ ಕೊರೆದ ಹೆಚ್ಚಿನ ಕೊಳವೆ ಬಾವಿಗಳು ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುತ್ತವೆ ಈ ಸಮಸ್ಯೆಯ ತೀವ್ರತೆಯನ್ನು ಮನಗಂಡು 2006–07ನೇ ಸಾಲಿನಿಂದ ವೈಯಕ್ತಿಕ ಯೋಜನೆ ಘಟಕವೆಚ್ಚವನ್ನು 75,000/– ರೂ ಗಳಿಂದ 1 00 ಲಕ್ಷ ರೂ ಗಳಿಗೆ ಹೆಚ್ಚಿಸಲಾಗಿರುವುದರಿಂದ ಆ ವೆಚ್ಚದಲ್ಲಿ ವಿದ್ಯುತ್ ಠೇವಣಿ

ಮೊತ್ತವನ್ನು ಪಾವತಿಸಲಾಗುತ್ತದೆ ಇದಲ್ಲದ, ಹಿಂದಿನ ಸಾಲುಗಳಲ್ಲಿ ವಿದ್ಯುದ್ಧೀಕರಣಕ್ಕೆ ಬಾಕಿ ಉಳಿದ ಎಲ್ಲಾ ಕೊಳವೆ ಬಾವಿಗಳಿಗೆ ಸರ್ಕಾರದಿಂದಲೇ ಫಲಾನುಭವಿಗಳ ಪರವಾಗಿ ವಿದ್ಯುತ್ ರೇವಣಿ ಪಾವತಿಸಲು, ಈ ನಿಗಮಕ್ಕೆ 157 11 ಲಕ್ಷ ರೂ ಗಳ ಮಂಜೂರಾತಿ ನೀಡಿರುತ್ತದೆ ಈ ಮೊತ್ತದಿಂದ ವಿದ್ಯುತ್ ರೇವಣಿ ಪಾವತಿಸಿ ವಿದ್ಯುದ್ಧೀಕರಣ ಮಾಡಿಸಲು ಕ್ರಮವಹಿಸಲಾಗಿರುತ್ತದೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

2006-07ನೇ ಸಾಲಿನವರೆವಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಘಟಕ ವೆಚ್ಚ ರೂ 65,000ಗಳನ್ನು ನಿಗದಿಪಡಿಸಲಾಗಿರುತ್ತದೆ ಈ ಮೊತ್ತದಲ್ಲಿ ಕೊಳವೆಬಾವಿ ಕೊರೆಯುವಿಕೆ ಹಾಗೂ ಪಂಪ್‌ಸೆಟ್ ಅಳವಡಿಕೆ ಮಾಡಲಾಗುತ್ತಿದೆ ವಿದ್ಯುದ್ಧೀಕರಣ ವೆಚ್ಚವನ್ನು ಫಲಾನುಭವಿಗಳೆ ಭರಿಸಬೇಕಾಗಿತ್ತು ಕಲವೊಂದು ಫಲಾನುಭವಿಗಳು ಬಹಳ ಕಷ್ಟದಲ್ಲಿದ್ದು ಇವರುಗಳು ವಿದ್ಯುದ್ಧೀಕರಣ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂಬುದನ್ನು ಅರಿತು, ಫಲಾನುಭವಿಗಳು ಭರಿಸಬೇಕಾದ ರೇವಣಿ ಮೊತ್ತವನ್ನು ಭರಿಸಲು ಈ ನಿಗಮಕ್ಕೆ ರೂ 62,86ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರ ಸದರಿ ಮೊತ್ತವನ್ನು ಕೆ ಪಿ ಟಿ ಸಿ ಎಲ್‌ಗೆ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ 2006-07ನೇ ಸಾಲಿಗೆ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿಯಲ್ಲಿ ಘಟಕ ವೆಚ್ಚವನ್ನು ರೂ 1 00 ಲಕ್ಷಗಳವರೆವಿಗೆ ಹೆಚ್ಚಿಸಿದೆ (ರೂ 86,000ಗಳ ಸಹಾಯಧನ ಮತ್ತು ರೂ 14,000ಗಳ ಸಾಲ) ಈ ಮೊತ್ತದಲ್ಲಿ ವಿದ್ಯುದ್ಧೀಕರಣ ರೇವಣಿ ಹಣವನ್ನು ಸಹ ನಿಗಮದಿಂದಲೆ ಭರಿಸಲಾಗುತ್ತದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿ ನಿಗದಿಪಡಿಸಿದ ರೂ 65,000 ಸಹಾಯಧನ ಮತ್ತು ರೂ 15,000ಗಳ ಅವಧಿಸಾಲ, ಒಟ್ಟು ರೂ 75,000ಗಳ ಘಟಕ ವೆಚ್ಚದ ಮಿತಿಯೊಳಗೆ ಕೊಳವಬಾವಿ ಕೊರೆದು, ಪಂಪ್ ಅಳವಡಿಸಿ, ವಿದ್ಯುದ್ಧೀಕರಣಗೊಳಿಸಬೇಕಾಗಿದ್ದು, ನಿಗದಿಪಡಿಸಿದ ಘಟಕ ವೆಚ್ಚದ ಮಿತಿಗಿಂತ ಹೆಚ್ಚಾದ ಪ್ರಕರಣಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ವೈ ಎಂ ಡಿ ಎಂ ಎಸ್ ಡಿ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಾದ ಪ್ರಮೇಯ ಇತ್ತು ಆದರೆ ಸರ್ಕಾರ ದಿ 08 02 2007 ರಂದು ವೈ ಎಂ ಡಿ ಎಂ ಎಸ್ ಡಿ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಿ, ವಿದ್ಯುದ್ಧೀಕರಣಗೊಳಿಸಲು ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ರೂ 506 84ಲಕ್ಷಗಳನ್ನು ಹಾಗೂ ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ರೂ 212 64ಲಕ್ಷಗಳನ್ನು ಬಿಡುಗಡೆ ಮಾಡಿದೆ ಈ ಹಿನ್ನೆಲೆಯಲ್ಲಿ ಇನ್ನು ಮುಂದೆ

ಫಲಾನುಭವಿಗಳು ಯಾವುದೇ ವಂತಿಗೆಯನ್ನು ವಿದ್ಯುದೀಕರಣಕ್ಕಾಗಿ ತುಂಬುವ ಅವಶ್ಯಕತೆ ಇರುವುದಿಲ್ಲ

3 ಹಾಗಿದ್ದಲ್ಲಿ, ಈ ಯೋಜನೆಗಳ ಕೊಳವೆ ಬಾವಿಗಳಿಗೆ ವಿದ್ಯುದೀಕರಣಗೊಳಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು?

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ನಿಗಮದಿಂದಲೇ ವಿದ್ಯುತ್ ರೇವಣಿ ಪಾವತಿಸುತ್ತಿರುವುದರಿಂದ, ಸಾಮೂಹಿಕ ನೀರಾವರಿ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳ ವಿದ್ಯುದೀಕರಣದಲ್ಲಿ ಸಮಸ್ಯೆ ಇರುವುದಿಲ್ಲ ವೈಯಕ್ತಿಕ ಯೋಜನೆಯಲ್ಲಿ ಫಲಾನುಭವಿಗಳೇ ವಿದ್ಯುತ್ ರೇವಣಿ ಪಾವತಿಸಬೇಕಾಗಿದ್ದ ಕಾರಣದಿಂದ ಹಾಗೂ ಫಲಾನುಭವಿಗಳು ವಿದ್ಯುತ್ ರೇವಣಿ ಪಾವತಿಸದೇ ಇದ್ದ ಕಾರಣದಿಂದ ಈ ಯೋಜನೆಯಲ್ಲಿ ವಿದ್ಯುದೀಕರಣಕ್ಕೆ ಹೆಚ್ಚಿನ ಬಾಕಿ ಉಳಿದಿರುತ್ತದೆ ಪ್ರಸ್ತುತ, ಸರ್ಕಾರದಿಂದ ಫಲಾನುಭವಿಗಳ ಪರವಾಗಿ ವಿದ್ಯುತ್ ರೇವಣಿ ಪಾವತಿಸುತ್ತಿರುವುದರಿಂದ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುದೀಕರಣ ಮಾಡಿಸಿ ಪ್ರಗತಿ ಸಾಧಿಸಲಾಗುತ್ತಿದೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ

ಫಲಾನುಭವಿಗಳು ರೇವಣಿ ಮೊತ್ತವನ್ನು ಕಟ್ಟದೆ ಇರುವುದರಿಂದ ವಿದ್ಯುದೀಕರಣ ವಿಳಂಬವಾಗಿರುತ್ತದೆ ಈಗ ರೇವಣಿ ಮೊತ್ತವನ್ನು ಭರಿಸುತ್ತಿರುವುದರಿಂದ, ವಿದ್ಯುದೀಕರಣ ಕಾಮಗಾರಿಕೆ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಮೇಲಿನ ಆದೇಶದನ್ವಯ ದಿನಾಂಕ 16 03 2007ರಂದು ನಿಗಮಕ್ಕೆ ಹಣ ಬಿಡುಗಡೆ ಮಾಡಿದ್ದು ಸದರಿ ಮೊಬಲಗನ್ನು ಕೇಂದ್ರ ಕಛೇರಿಯಿಂದ ಎಲ್ಲಾ ಜಿಲ್ಲೆಗಳಿಗೆ ಅಂದೇ ಬಿಡುಗಡೆ ಮಾಡಿ ವಿದ್ಯುತ್ ಸರಬರಾಜ ಕಂಪೆನಿಗಳಿಗೆ ಪಾವತಿಸಿದ್ದು, ವಿದ್ಯುದ್ಧಿಕರಣಕ್ಕೆ ಬಾಕಿ ಇರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುದ್ಧಿಕರಣಗೊಳಿಸಲು ಸೂಚನೆ ನೀಡಲಾಗಿದೆ ಅದರಂತೆ ಇನ್ನೂ ಮುಂದೆ ವಿದ್ಯುದ್ಧಿಕರಣದ ವಿಳಂಬಕ್ಕೆ ಆಸ್ಪದ ಇರುವುದಿಲ್ಲ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು-20

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಿ ಶಿವರಾಮು (ಗಂಡಸಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ–1616ರ (ಅ) ಪ್ರಶ್ನೆಗೆ ಅನುಬಂಧ–1

ಗಂಗಾ ಕಲ್ಯಾಣ ಸಾಮೂಹಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು

ಎಸ್ಕಾಂಹೆಸರು	ಕ್ರಸಂ	ಜಿಲ್ಲೆಯ ಹೆಸರು	1996-97			1998-99			1999-2000		
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕವಾದ ಕೊ ಬಾ ಸಂ	ಬಾಕಿ ಉಳಿದಿರುವ ಕೊ ಬಾ ಸಂ	ಕೊರೆದ ಕೊ ಬಾ ಸಂ	ವಿದ್ಯುತ್ ಸಂಪರ್ಕವಾದ ಕೊ ಬಾ ಸಂ	ಬಾಕಿ ಉಳಿದಿರುವ ಕೊ ಬಾ ಸಂ	ಕೊರೆದ ಕೊಳವೆ ಬಾವಿಗಳ ಸಂಖ್ಯ	ವಿದ್ಯುತ್ ಸಂಪರ್ಕ ವಾದ ಕೊ ಬಾ ಸಂ	ಬಾಕಿ ಉಳಿದಿರುವ ಕೊ ಬಾ ಸಂ
	1	2	3	4	5	6	7	8	9	10	11
BESCOM	1	ಬೆಂ (ನಗರ)	8	8	0	11	11	0	7	7	0
	2	ಬೆಂ (ಗ್ರಾ)	32	32	0	19	19	0	0	0	0
	3	ತುಮಕೂರು	4	4	0	17	17	0	3	3	0
	4	ಚಿತ್ರದುರ್ಗ	0	0	0	16	16	0	23	23	0
	5	ಕೋಲಾರ	9	9	0	10	10	0	6	6	0
	6	ದಾವಣಗೆರೆ	18	18	0	18	18	0	17	17	0
		ಒಟ್ಟು	**71**	**71**	**0**	**91**	**91**	**0**	**56**	**56**	**0**

CESCOM	7	ಮೈಸೂರು	7	7	0	26	26	0	7	7	0
	8	ಮಂಡ್ಯ	2	2	0	13	13	0	22	22	0
	9	ಚಾ ರಾ ನಗರ	0	0	0	5	5	0	18	18	0
	10	ಹಾಸನ	0	0	0	12	12	0	12	12	0
		ಒಟ್ಟು	**9**	**9**	**0**	**56**	**56**	**0**	**59**	**59**	**0**
GESCOM	11	ಗುಲ್ಬರ್ಗಾ	0	0	0	40	40	0	30	30	0
	12	ಬೀದರ್	1	1	0	20	20	0	0	0	0
	13	ರಾಯಚೂರು	0	0	0	0	0	0	30	30	0
	14	ಕೊಪ್ಪಳ	0	0	0	0	0	0	11	11	0
	15	ಬಳ್ಳಾರಿ	0	0	0	0	0	0	9	[illegible]	0
ಮಂಜೂರಾಗಿರುವ 52 ವಿದ್ಯಾರ್ಥಿನಿಲಯಗಳಲ್ಲಿ ಡಿಸೆಂಬರ್ 2006ರವರೆಗೆ 49 ವಿದ್ಯಾರ್ಥಿನಿಲಯಗಳು ಕಾರ್ಯನಿರತವಾಗಿರುತ್ತವೆ ಈ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ

3 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಮಂಜೂರಾಗಿರುವ 24 ವಿದ್ಯಾರ್ಥಿನಿಲಯಗಳಲ್ಲಿ ಡಿಸೆಂಬರ್ 2006ರವರೆಗೆ 10 ವಿದ್ಯಾರ್ಥಿನಿಲಯಗಳು ಕಾರ್ಯನಿರತವಾಗಿರುತ್ತವೆ ಈ ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ

ಇ) ಈ ವಿದ್ಯಾರ್ಥಿ ನಿಲಯಗಳ ಮಂಜೂರಾತಿಗೆ ಅನುಸರಿಸಲಾದ ಮಾನದಂಡವೇನು?

ವಸತಿನಿಲಯಗಳನ್ನು ಮಂಜೂರು ಮಾಡಲು ಅಯವ್ಯಯದಲ್ಲಿ ಒದಗಿಸಿದ ಅನುದಾನ, 5 ಕಿ ಮೀ ಗಿಂತ ಹೆಚ್ಚು ದೂರದಿಂದ ಶಾಲೆ/ಕಾಲೇಜುಗಳಿಗೆ ಬಂದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ, ಕಟ್ಟಡ ನಿರ್ಮಾಣ ಮಾಡಲು ನಿವೇಶನದ ಲಭ್ಯತೆ, ಬೇಡಿಕೆ, ಅವಶ್ಯಕತೆಗಳು, ಗಡಿನಾಡು ತಾಲ್ಲೂಕು ಹಾಗೂ ಡಾ ನಂಜುಂಡಪ್ಪ ರವರ ವರದಿಯಲ್ಲಿ ಗುರುತಿಸಲಾದ ಅತ್ಯಂತ ಹಿಂದುಳಿದ, ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕು ಇವೇ ಮುಂತಾದ ಮಾನದಂಡಗಳನ್ನು ಅನುಸರಿಸಲಾಗುವುದು

ಈ) ಡಾ ನಂಜುಂಡಪ್ಪನವರ ವರದಿ ಪ್ರಕಾರ ಅತಿ ಹಿಂದುಳಿದ ಜಿಲ್ಲೆಗಳಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆಯೇ?

ಹೌದು

ಅನುಬಂಧ-A

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬಸವರಾಜ್ ರಾಯರೆಡ್ಡಿ (ಯಲಬರ್ಗಾ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1321

ಕ್ರ ಸಂ	ಜಿಲ್ಲೆಯ ಹೆಸರು	ಸಮಾಜ ಕಲ್ಯಾಣ ಇಲಾಖೆ ಮಂಜೂರಾದ ಹಾಸ್ಟೆಲ್‌ಗಳ ಸಂಖ್ಯೆ		ಹಿಂದುಳಿದ ವರ್ಗಗಳ ಇಲಾಖೆ ಮಂಜೂರಾದ ಹಾಸ್ಟೆಲ್‌ಗಳ ಸಂಖ್ಯೆ		ಪರಿಶಿಷ್ಟ ವರ್ಗಗಳ ಇಲಾಖೆ ಮಂಜೂರಾದ ಹಾಸ್ಟೆಲ್‌ಗಳ ಸಂಖ್ಯೆ	
		ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
1	**2**	**3**	**4**	**5**	**6**	**7**	**8**
1	ಗುಲ್ಬರ್ಗಾ	3	–	2	1	–	1
2	ಬೆಳಗಾಂ	3	2	2	2	–	1
3	ಮಂಡ್ಯ	1	1	5	1	–	–
4	ಚಿಕ್ಕಮಗಳೂರು	3	2	2	–	–	–
5	ದಾವಣಗೆರೆ	2	–	–	–	–	–
6	ಬಳ್ಳಾರಿ	3	–	–	1	3	1
7	ಬೀದರ್	2	–	2	–	–	–
8	ತುಮಕೂರು	4	1	1	–	1	3
9	ಬೆಂಗಳೂರು(ಗ್ರಾ)	3	–	3	1	–	–
10	ಹಾಸನ	1	1	4	3	1	–
11	ಬಾಗಲಕೋಟೆ	3	–	2	–	–	–
12	ಕೋಲಾರ	2	–	–	–	1	–
13	ಮೈಸೂರು	2	–	–	–	–	–
14	ಶಿವಮೊಗ್ಗ	2	–	1	5	–	–
15	ಕಾರವಾರ(ಉ ಕ)	1	–	2	–	–	–
16	ಧಾರವಾಡ	1	–	–	–	–	3
17	ಚಾಮರಾಜನಗರ	3	–	–	–	2	–
18	ಬಿಜಾಪುರ	2	–	2	–	–	–
19	ರಾಯಚೂರು	2	–	1	–	–	1
20	ದಕ್ಷಿಣ ಕನ್ನಡ	1	–	1	3	–	–
21	ಕೊಡಗು	–	–	1	1	–	–

22	ಹಾವೇರಿ	–	–	2	–	–	–
23	ಬೆಂಗಳೂರು(ನ)	–	–	–	–	–	4
24	ಗದಗ	–	–	–	–	1	1
25	ಉಡುಪಿ	–	–	–	1	–	–
	ಒಟ್ಟು	44	7	33	19	9	15

ಮೂಲಪ್ರಶ್ನಕರ್ತರು ಶ್ರೀ ಬಸವರಾಜ ರಾಯರೆಡ್ಡಿ[ಯಲಬುರ್ಗ]

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ, ಅಧ್ಯಕ್ಷರೇ, ಇದರಲ್ಲಿ ಏನಾಗಿದೆ ಅಂದರೆ ಹಾಸ್ಟೆಲ್‌ಗಳು ಹಿಂದುಳಿದ ಜಿಲ್ಲೆಗಳಿಗೆ ಕೊಟ್ಟಿಲ್ಲ ಔರಾದಗೂ ಕೊಟ್ಟಿಲ್ಲ, ಕುಷ್ಟಗಿಗೂ ಇಲ್ಲ, 39 ತಾಲ್ಲೂಕಿನಲ್ಲಿ ಎಲ್ಲೂ ಕೊಟ್ಟಿಲ್ಲ ಶಿವಮೊಗ್ಗೆಗೆ 5, ಹಾಸನ್ ಗೆ 8 ಬಿಟ್ಟರೆ ಬೇರೆ ಜಿಲ್ಲೆಗಳಿಗೆಲ್ಲ ಒಂದು ಎರಡು, ಈ ರಾಜ್ಯದಲ್ಲಿ ಶಿವಮೊಗ್ಗ ಹಾಸನ ಬಿಟ್ಟು ಬೇರೆ ಜಿಲ್ಲೆ ಇಲ್ಲವೇ? ಇದರರ್ಥ ನನಗೆ ತಿಳಿಯುತ್ತಿಲ್ಲ ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಪ್ರದೇಶಕ್ಕೆ ಹಾಸ್ಟೆಲ್ ಕೊಡಬೇಕು 39 ತಾಲ್ಲೂಕು ಖಾಲಿ ಬಿಟ್ಟಿದ್ದಾರ ಯಾಕೆ ಕೊಟ್ಟಿಲ್ಲ ಅಂತ ಹೇಳಬೇಕು

ಶ್ರೀ ಬಾಲಚಂದ್ರ ಜಾರಕೀಹೊಳಿ ಅಧ್ಯಕ್ಷರೇ ಹಾಸ್ಟೆಲ್ ಕೊಡುವಾಗ ನಂಜುಂಡಪ್ಪ ವರದಿ ಗಮನದಲ್ಲಿಟ್ಟುಕೊಂಡೇ ಕೊಟ್ಟಿದ್ದೇವೆ ಹಿಂದುಳಿದ 39 ತಾಲ್ಲೂಕುಗಳಲ್ಲಿ SC – 15, BCM – 8, ST – 8 ಹಾಸ್ಟೆಲ್ ಕೊಟ್ಟಿದ್ದೇವ ಅದಾದನಂತರ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 16, 9, 2 ಕೊಟ್ಟಿದ್ದೇವೆ ಹೀಗೆ ಒಟ್ಟು SCಗೆ 38, BCMಗೆ 28, STಗೆ 14 – ಹೀಗೆ ನಂಜುಂಡಪ್ಪ ವರದಿ ಪ್ರಕಾರವೇ ಕೊಟ್ಟಿದ್ದೇವೆ

ಶ್ರೀ ಸಿದ್ದರಾಮಯ್ಯ Aurad is most backward taluk, ಅವರದು, ಅದು ಬರುತ್ತದ ನೀವು ಕೊಟ್ಟಿರುವುದರಲ್ಲಿ ಎಂಬುದು ಅವರ ಪ್ರಶ್ನೆ

ಶ್ರೀ ಬಾಲಚಂದ್ರ ಜಾರಕೀಹೊಳಿ ಹೋದ ಸಲ ಕೆಲವು ತಾಲ್ಲೂಕು ಬಿಟ್ಟಿದ್ದರೂ ಈ ಸಾರಿ ನಮಗೆ 160 ಹಾಸ್ಟೆಲ್ ಬಂದಿದೆ ನಂಜುಂಡಪ್ಪ ವರದಿ ಆಧರಿಸಿಯೇ ಹಿಂದುಳಿದ ಪ್ರದೇಶಗಳಿಗೆ ಯೋಗ್ಯ ಕ್ರಮ ಕೈಗೊಳ್ಳುತ್ತೇವೆ ಅದರ ಬಗ್ಗೆ ಆತಂಕಪಡಬೇಕಾದ ಅವಶ್ಯಕತೆಯಿಲ್ಲ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಅಧ್ಯಕ್ಷರೇ ಹಿಂದುಳಿದ ತಾಲ್ಲೂಕುಗಳಿಗೆ ಕಡ್ಡಾಯವಾಗಿ ಕೊಡಲೇಬೇಕು ಹೋದ ಸಾರೀನೂ ಬರೀ BJP JDS ಶಾಸಕರಿದ್ದ ಕಡೇನೆ ಕೊಟ್ಟಿದ್ದರು ಅದರಲ್ಲೂ ತಾರತಮ್ಯ ಮಾಡಿದರು

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ

ಶ್ರೀ H D ಬಸವರಾಜು ಗೌರವಾನ್ವಿತ ಸದಸ್ಯರು ಆರೋಪ ಮಾಡುವ ಮುಂಚೆ ತಾರತಮ್ಯ ಮಾಡಿರುವ ಪಟ್ಟಿ ಇದ್ದರೆ ಅದನ್ನು ಕೊಡಬೇಕು

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ ಪಟ್ಟಿ ಇದೆ

ಪಶುವೈದ್ಯ ಇಲಾಖೆಯಲ್ಲಿ ಔಷದಿಗಳಿಗೆ ವೆಚ್ಚಮಾಡಿರುವ ಹಣ

ಚುಕ್ಕೆ ಗುರುತಿನ ಪ್ರಶ್ನೆ 228(1607)

ಸದಸ್ಯರ ಹೆಸರು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಉತ್ತರಿಸುವ ಸಚಿವರು ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುವೈದ್ಯಕೀಯ ಇಲಾಖೆಯಿಂದ ಜಾನುವಾರು ಔಷಧಿಗಳಿಗಾಗಿ ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಲಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಕಳೆದ ಮೂರು ವರ್ಷದಲ್ಲಿ ಪಶುವೈದ್ಯ ಇಲಾಖೆಯಿಂದ ಜಾನುವಾರು ಔಷಧಿಗಳಿಗಾಗಿ 3999 81 ಲಕ್ಷ ರೂ ಗಳನ್ನು ವೆಚ್ಚ ಮಾಡಲಾಗಿದೆ ವರ್ಷಾವಾರು, ಜಿಲ್ಲಾವಾರು ಅನುಬಂಧ–1 ರಲ್ಲಿ ಸಲ್ಲಿಸಿದೆ

ಆ) ರಾಜ್ಯದ ಪಶುವೈದ್ಯ ಆಸ್ಪತ್ರೆಗಳಲ್ಲಿ ಮತ್ತು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ?

ಹೌದು ರಾಜ್ಯದ ಪಶುವೈದ್ಯ ಆಸ್ಪತ್ರೆಗಳಲ್ಲಿ ಮತ್ತು ಪಶು ಚಿಕಿತ್ಸಾಲಯಗಳಲ್ಲಿ ಔಷದಿ ಕೊರತೆ ಇದೆ

ಇ) ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರಸ್ತುತ ಇಲಾಖೆಗ ಔಷಧಿ ಸರಬರಾಜು ಮಾಡಲು ನಿಗದಿಪಡಿಸಿರುವ ಅನುದಾನ ಶೇ 25% ರಿಂದ 30% ರಷ್ಟು ಬೇಡಿಕೆಯನ್ನು ಪೂರೈಸಬಹುದಾಗಿದೆ ಈ ಬಗ್ಗೆ ಹೆಚ್ಚು ಅನುದಾನ ನಿಗದಿಪಡಿಸಿ ಔಷಧಿ ಕೊರತೆ ಸರಿಪಡಿಸಲು ಕ್ರಮ ವಹಿಸಲಾಗುತ್ತಿದ

ಪ್ರಸ್ತುತ ಇಲಾಖೆಯಲ್ಲಿನ ಔಷಧಿ ಖರೀದಿಯಲ್ಲಿ ಯಾವುದೇ ಅವ್ಯವಹಾರ ಆಗಿರುವುದಿಲ್ಲ ಆದ್ದರಿಂದ ಯಾವುದೇ ಪ್ರಕರಣ ಇರುವುದಿಲ್ಲ

ಉ) ಈ ಪ್ರಕರಣದಲ್ಲಿ ಭಾಗಿಯಾಗಿರುವವರು ಯಾರು ಹಾಗೂ ಈ ಹಗರಣದಲ್ಲಿ ಎಷ್ಟು ಮೊತ್ತದ ಅವ್ಯವಹಾರವಾಗಿದೆ?

ಯಾವುದೇ ಅವ್ಯವಹಾರದ ಪ್ರಕರಣ ಇಲ್ಲದೆ ಇರುವ ಪ್ರಯುಕ್ತ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಹಾಗಿದ್ದಲ್ಲಿ, ಈ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರಶ್ನೆ ಉದ್ಭವಿಸುವುದಿಲ್ಲ

ಕಳೆದ 3 ವರ್ಷಗಳಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಜಿಲ್ಲಾವಾರು ಔಷದಿ ಖರೀದಿಸಿದ ವಿವರ

ಪ್ರಶ್ನೆ ಸಂಖ್ಯೆ 1607 ಶ್ರೀ ಗುರುಪಾದಪ್ಪ ನಾಗರ ಮಾಪಲ್ಲಿ (ಔರಾದ್ ಕ್ಷೇತ್ರ)

(ರೂ ಲಕ್ಷಗಳಲ್ಲಿ)

ಕ್ರಸಂ	ಜಿಲ್ಲೆಯ ಹೆಸರು	2004-05	2005-06	2006-07
1	ಬೆಂಗಳೂರು ನಗರ	23 46	32 16	28 31
2	ಬೆಂಗಳೂರು ಗ್ರಾ	44 81	71 82	73 06
3	ತುಮಕೂರು	54 52	77 46	82 11
4	ಚಿತ್ರದುರ್ಗ	35 80	53 79	58 38
5	ದಾವಣಗೆರೆ	33 47	52 01	62 26
6	ಕೋಲಾರ	40 46	64 91	76 08
7	ಶಿವಮೊಗ್ಗ	50 32	83 57	74 99
8	ಮೈಸೂರು	41 53	56 09	63 36
9	ಚಾಮರಾಜನಗರ	21 09	29 63	35 51
10	ದಕ್ಷಿಣಕನ್ನಡ	27 26	34 90	48 59
11	ಉಡುಪಿ	21 63	29 54	45 37
12	ಹಾಸನ	47 45	64 68	84 19
13	ಚಿಕ್ಕಮಗಳೂರು	33 68	46 14	51 13
14	ಮಂಡ್ಯ	53 59	79 05	67 58
15	ಕೊಡಗು	16 76	28 25	27 71
16	ಬೆಳಗಾವಿ	63 24	104 6	116 96
17	ಬಿಜಾಪುರ	27 35	43 17	50 90

18	ಬಾಗಲಕೋಟೆ	34 16	63 65	58 31
19	ಧಾರವಾಡ	34 37	46 13	46 78
20	ಗದಗ	21 15	27 54	27 88
21	ಹಾವೇರಿ	29 41	43 05	46 75
22	ಉತ್ತರ ಕನ್ನಡ	27 79	37 52	46 61
23	ಗುಲ್ಬರ್ಗಾ	56 10	70 46	104 49
24	ಬಳ್ಳಾರಿ	48 69	72 98	78 22
25	ಬೀದರ್	36 12	41 09	56 19
26	ರಾಯಚೂರು	24 33	38 22	54 71
27	ಕೊಪ್ಪಳ	23 51	29 67	39 25
	ಒಟ್ಟು	**972 05**	**1422 08**	**1605 68**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅಧ್ಯಕ್ಷರೇ ಸಚಿವರು ಉತ್ತರದಲ್ಲಿ ಯಾವುದೇ ಔಷಧಿ ಇಲ್ಲ ಅಂತ ಒಪ್ಪಿಕೊಂಡಿದ್ದಾರೆ ಔಷಧಿ ಇಲ್ಲದಿದ್ದರೆ ದವಾಖಾನೆಗಳು ಯಾಕಿರಬೇಕು? ದನದ ಆಸ್ಪತ್ರೆಗಳಲ್ಲಿ ಔಷಧವಿಲ್ಲ, ಮನುಷ್ಯರ ಆಸ್ಪತ್ರೆಗೆ ವೈದ್ಯರಿಲ್ಲ ಯಾವ ಸ್ಥಿತಿಗೆ ಬಂತು ನಮ್ಮ ಸರ್ಕಾರ ಔಷದ ಸರಬರಾಜನ್ನು 25ರಿಂದ 30% ಪೂರೈಸುತ್ತೇವೆ ಎಂದಿದ್ದಾರೆ, ಉಳಿದವರು ಎಲ್ಲಿಗೆ ಹೋಗಬೇಕು? ಇವರು ಕೊಟ್ಟಿರುವ ಉತ್ತರ ನನಗೆ ತಿಳಿಯುವ ಹಾಗಿಲ್ಲ

ಶ್ರೀ ರೇವೂ ನಾಯಕ್ ಬೆಳಮಗಿ [ಪಶುಸಂಗೋಪನೆ ಸಚಿವರು] ಅಧ್ಯಕ್ಷರೇ ಅವರು ಕೇಳಿದ ಪ್ರಶ್ನೆಗೆ ಉತ್ತರ ಒದಗಿಸಿದ್ದೇನೆ ಔಷಧಿ ಕೊರತೆ ಇದೆಯೆಂದು ನಾನು ಒಪ್ಪಿಕೊಂಡಿದ್ದೇನೆ, ಆದರೆ ಇಡೀ ರಾಜ್ಯದಲ್ಲಿ ನಾನು ಪ್ರವಾಸ ಮಾಡಿದಾಗ ಜಿಲ್ಲಾ ಪಂಚಾಯಿತಿ, ಜಿಲ್ಲಾಧಿಕಾರಿ ಮತ್ತು ರಾಜ್ಯವಲಯದ ನಮ್ಮ ಮೂಲಕ ಔಷಧವನ್ನು ಟೆಂಡರ್ ಮೂಲಕ ಸರಬರಾಜು ಮಾಡುತ್ತೇವೆ ನೀವು ಹಿರಿಯ ಸದಸ್ಯರು, ಮಾಜಿ ಸಚಿವರು, ಒಂದನ್ನು ಮೆಚ್ಚಿಕೊಳ್ಳಬೇಕು ನೀರಡಿಕೆಯಾದಾಗ ನೀರು ಕೇಳೋಲ್ಲ, ಹಸಿವಾದಾಗ ಊಟ ಕೇಳೊಲ್ಲ, ಜ್ವರ ಬಂದಾಗ ಮದ್ದು ಕೇಳೋಲ್ಲ, ಅಂತಹ ಮುಗ್ಧ ಪ್ರಾಣಿ ವಿಷಯದಲ್ಲಿ ಹಿಂದೆಯೆಲ್ಲ ಪ್ರತಿ ವರ್ಷ ಸರ್ಕಾರ ಏನು ಅನುದಾನ ಕೊಟ್ಟಿತೋ ಅದೆಲ್ಲ ಲ್ಯಾಪ್ಸಾಗಿದೆ ಈ ವರ್ಷ 18 ಕೋಟಿ ನಮಗೆ ಅನುದಾನವಿದ್ದು ಮಾರ್ಚಿಯೊಳಗೆ ಸಂಪೂರ್ಣ ಬಳಸಿಕೊಂಡಿದ್ದೇವೆ ಇಡೀ ರಾಜ್ಯವೆಲ್ಲ ಪ್ರವಾಸ ಮಾಡಿ ಔಷಧ ಸರಬರಾಜು ಮಾಡುತ್ತಿದ್ದೇವೆ ಒಟ್ಟಿನಲ್ಲಿ ಪ್ರಾಣಿಗಳಿಗೆ ಕೊರತೆಯಾಗದಂತೆ ನಮ್ಮ ಸರ್ಕಾರ ಗಮನಹರಿಸುತ್ತದೆ

ಅಧ್ಯಕ್ಷರು ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಹೇಳಿಬಿಟ್ಟಿದ್ದಾರೆ

ಡಾ ವೈ ನಾಗಪ್ಪ, ಇದು ಸ್ಪಷ್ಟವಾದ ಉತ್ತರವಲ್ಲ This is not a development work to utilize the money within March ಇದು it is

a question of life and death of the animal ಅದಕ್ಕೇನು ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ?

ಅಧ್ಯಕ್ಷರು ನಾಗಪ್ಪನವರೆ, ಅವರು ಪ್ರಶ್ನೆಯನ್ನು ಕೇಳಿದ್ದಾರೆ ಉತ್ತರವನ್ನು ಹೇಳಿದ್ದಾರೆ

ಡಾ ವ್ಯ ನಾಗಪ್ಪ ಮಾನ್ಯ ಅಧ್ಯಕ್ಷರೇ, ಇದು development ಕೆಲಸವಲ್ಲ ಇದು ಪ್ರಾಣಿಗಳಿಗೆ ಖಾಯಿಲೆ ಬಂದಾಗ ಔಷಧಿಯನ್ನು ಕೊಡುವುದು ಮಾರ್ಚ್ ತಿಂಗಳಲ್ಲಿ ನಾವು ಎಲ್ಲ utilize ಮಾಡುತ್ತೇವೆಂದರೆ ಏನರ್ಥ? ಖಾಯಿಲೆ ಎಲ್ಲ ಬರೀ ಮಾರ್ಚ್ ತಿಂಗಳಲ್ಲಿಯೇ ಬರುತ್ತದಾ?

ಶ್ರೀ ರೇವುನಾಯಕ್ ಬೆಳಮಗಿ ಔಷಧಿ ಬಗ್ಗೆ ಹಿರಿಯ ಸದಸ್ಯರು ಕೇಳುತ್ತಿದ್ದಾರೆ ಇಡೀ ರಾಜ್ಯದಲ್ಲಿ ನಾನು ಪ್ರವಾಸ ಕೂಡ ಮಾಡಿದ್ದೇನೆ ಎಲ್ಲಿಯೂ ಔಷಧಿ ಕೊರತೆ ಇಲ್ಲ ಆದರ ಇರುವ ಅಂಕಿಅಂಶವನ್ನು ನಾನು ಹೇಳಿದ್ದೇನೆ 25 ಪರ್ಸೆಂಟಟೊ ಹೇಳಿದ್ದೇನೆ ಚಿಕ್ಕ ಸಂಸಾರ, ಚೊಕ್ಕ ಸಂಸಾರ ರೀತಿ ಮಾಡಬೇಕೆಂದು ಚೆನ್ನಾಗಿಯೇ ನಮ್ಮ ಸರ್ಕಾರ ಮಾಡಿಕೊಂಡು ಹೋಗುತ್ತಿದೆ ಎಲ್ಲಿಯೂ ಕೊರತೆಯಾಗಿಲ್ಲ, ಕೊರತಯಾದರೂ ಕೂಡ ಡಿಸಿ ಮುಖಾಂತರ, ಮತ್ತು ಜಿಲ್ಲಾ ಪಂಚಾಯಿತಿ ಮುಖಾಂತರ ಮತ್ತು ವಿಶೇಷ ಫಂಡ್‌ನ್ನು ಕೊಟ್ಟು ನಾವು arrangement ಮಾಡುತ್ತಿದ್ದೇವೆ ಔಷಧಿ ಬಗ್ಗೆ ಎಲ್ಲಿಯೂ ಕೊರತೆ ಇಲ್ಲ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರು ಕೊರತೆ ಇಲ್ಲವೆಂದು ಹೇಳಿದ್ದಾರೆ ಇಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ ಇಲ್ಲಿ ಪ್ರಶ್ನೆ 'ರಾಜ್ಯದ ಪಶುವೈದ್ಯ ಆಸ್ಪತ್ರೆಗಳಲ್ಲಿ ಮತ್ತು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ? ಅದಕ್ಕೆ ಅವರು 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದರೆ ಇದರದಾ ಅರ್ಥವೇನು? ಹೌದು ಎಂದರೆ ಇದೆ ಎಂದು ಅರ್ಥವೇ? ಅವರು ಕೊರತೆ ಇಲ್ಲವೆಂದು ಹೇಳುತ್ತಿದ್ದಾರೆ ಇಲ್ಲಿ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ

ಅಧ್ಯಕ್ಷರು ಅವರು ಕೊರತೆ ನೀಗಿಸುತ್ತಿದ್ದೇವೆಂದು ಹೇಳಿದ್ದಾರೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಈ ರೀತಿ ಆದರೆ ಹೇಗೆ?

ಶ್ರೀ ಸಿದ್ದರಾಮಯ್ಯ ಮಾನ್ಯ ಮಂತ್ರಿಗಳು ಪ್ರವಾಸ ಮಾಡಿದ್ದೇವೆಂದು ಹೇಳಿದರು ಬಹಳ ಸಂತೋಷ ಎಲ್ಲ ಇಲಾಖೆಯನ್ನು ನೋಡಿಕೊಂಡು ಬಂದಿದ್ದೇವೆ, ಪಶುವೈದ್ಯ ಶಾಲೆಗಳನ್ನೆಲ್ಲ ನೋಡಿಕೊಂಡು ಬಂದಿದ್ದೇವೆಂದು ಹೇಳಿದ್ದಾರೆ ಔಷಧಿ ಕೊರತೆ ಇಲ್ಲವೆಂದು ಹೇಳಿದ್ದೀರಿ ಆದರೆ ನಿಮ್ಮ ಉತ್ತರದಲ್ಲಿ ಅವರು ಏನು ಕೇಳಿದ್ದಾರೆಂದರೆ ಪ್ರಶ್ನೆ 'ಆ' ದಲ್ಲಿ ' ರಾಜ್ಯದ ಪಶುವೈದ್ಯ ಆಸ್ಪತ್ರೆಗಳಲ್ಲಿ ಮತ್ತು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ?' ಎಂದಿದ್ದಕ್ಕೆ ನೀವೇನು ಹೇಳಿದ್ದೀರಿ, ಔಷಧಿ ಕೊರತೆ ಇದೆ ಎಂದು ಅದನ್ನು ಒಪ್ಪಿಕೊಂಡಿದ್ದೀರಿ ಅದರಿಂದ ಕೊರತೆ ನೀಗಿಸುವುದಕ್ಕಾಗಿಲ್ಲವೆನ್ನತಕ್ಕಂಥದ್ದು ಸ್ಪಷ್ಟ ಹಾಗೆ ಮುಂದಕ್ಕೆ

ಪ್ರಸ್ತುತ ಇಲಾಖೆಗೆ ಔಷಧಿ ಸರಬರಾಜು ಮಾಡಲು ನಿಗದಿಪಡಿಸಿರುವ ಅನುದಾನ ಶೇ 25 ರಿಂದ 30% ಬೇಡಿಕೆಯನ್ನು ಪೂರೈಸಬಹುದಾಗಿದೆ ಅಂದರೆ ಇನ್ನು 70-75% ಪೂರೈಸುವುದಕ್ಕಾಗಿಲ್ಲ ಎನ್ನುವುದು ಇದರ ಅರ್ಥ ನಿಮ್ಮ ಇಲಾಖೆಗೆ ಎಷ್ಟು ಔಷಧಿ ಬೇಡಿಕೆ ಇದೆ, ಅಷ್ಟು ಬೇಡಿಕೆಯನ್ನು ನಮ್ಮ ಕೈಯಲ್ಲಿ ಪೂರೈಸುವುದಕ್ಕಾಗುತ್ತಿಲ್ಲ, ನಾವು ಬರೀ 25 ರಿಂದ 30% ಮಾತ್ರ ಬೇಡಿಕೆಯನ್ನು ಪೂರೈಸುತ್ತಿದ್ದೇವೆ ಎಂದು ಹೇಳಿದ ಮೇಲೆ ಸರ್ಕಾರಿ ಆಸ್ಪತ್ರೆಗಳಲ್ಲಿ ದನಗಳಿಗೆ ಔಷಧಿಯನ್ನು ಕೊಡದೇ ಹೋದರೆ ಹೇಗೆ? ಸರ್ಕಾರ ಆ ರೀತಿ ಹೇಳಲು ಬರುವುದಿಲ್ಲ ನಿಮಗೆ ಯಾರೋ ಅಧಿಕಾರಿಗಳು ಸರಿಯಾಗಿ ಬರೆದುಕೊಟ್ಟಿಲ್ಲ ಎಲ್ಲ ಆಸ್ಪತ್ರೆಗಳಲ್ಲೂ ಕೂಡ ಔಷಧಿಯನ್ನು ಅಲ್ಲಿಗೆ ಎಷ್ಟು ಬೇಕೊ ಅಷ್ಟನ್ನು ಒದಗಿಸಿಕೊಡಬೇಕು This is a priority programme ಈಗ ಕಾಲುಬಾಯಿ ಜ್ವರ ಬರುತ್ತದೆ ಆ ಜ್ವರ ಬಂದಾಗ ಅದಕ್ಕೆ ಔಷಧಿಯನ್ನು ಕೊಡದೇ ಹೋದರೆ ಆ ಖಾಯಿಲೆಯನ್ನು ಹೇಗೆ ವಾಸಿ ಮಾಡುತ್ತೀರಿ? ಅವುಗಳು ಸತ್ತುಹೋಗುತ್ತವೆ ಕೊರತೆ ಇಲ್ಲವೆಂದು ಉತ್ತರದಲ್ಲಿ ಹೇಳಿಬಿಟ್ಟಿದ್ದೀರಿ ನಾನು ಪಶುಸಂಗೋಪನಾ ಸಚಿವನಾಗಿದ್ದೆ ನೀವು ಆಗಿದ್ದಿರಿ ಮಾನ್ಯ ಅಧ್ಯಕ್ಷರೆ ನಾನು ಪಶುಸಂಗೋಪನಾ ಸಚಿವನಾಗಿದ್ದಾಗ ಪ್ರತಿ ಆಸ್ಪತ್ರೆಯಲ್ಲೂ ಪಟ್ಟಿಯನ್ನು ಇಡಬೇಕಾಗಿತ್ತು ನಮಗೆ ಇಂಥ ಔಷಧಿಗಳು ದೊರಕುತ್ತಿವೆ, ಇಂಥ ಔಷಧಿಗಳು ಸಿಗುತ್ತಿಲ್ಲ ಎಂದು ಹೇಳಿ ಪಟ್ಟಿ ಮಾಡಿ ಜನಗಳು ಅಲ್ಲಿಗೆ ಹೋದಾಗ ಜಾನುವಾರುಗಳನ್ನು ಅಲ್ಲಿಗೆ ತೆಗೆದುಕೊಂಡು ಹೋದಾಗ ಇಂಥ ಔಷಧಿ ಇದೆ, ಇಂಥ ಔಷಧಿ ಇಲ್ಲವೆಂದು ಅವರಿಗೆ ಗೊತ್ತಾಗಬೇಕು ಅದನ್ನು ಮಾಡಿಕೊಡುತ್ತಿದ್ದೆವು ಈಗ ನೀವು ಅದನ್ನು ಏಕೆ ತೆಗೆಸಿದ್ದೀರೊ ನನಗೆ ಗೊತ್ತಿಲ್ಲ ಅದು ಯಾವಾಗ ನಿಂತುಹೊಯಿತೋ ನನಗೆ ಗೊತ್ತಿಲ್ಲ ಔಷಧಿ ಬಗ್ಗೆ ನಾನು ಹಣಕಾಸು ಮಂತ್ರಿಯಾಗಿದ್ದಾಗಲೂ ಕೂಡ ಔಷಧಿ ಮಾತ್ರ ಮೊದಲ ಆದ್ಯತೆ ಎಂದು ಕೊಡುತ್ತಿದ್ದೆವು ಈಗೆಲ್ಲೊ ತಪ್ಪಾಗಿರಬೇಕು ಔಷಧಿಗಳನ್ನು ಸಾಕಷ್ಟು ಕೊಂಡುಕೊಂಡಿಲ್ಲ ಅಥವಾ ಹಣವನ್ನು ಕೊಟ್ಟಿಲ್ಲ ಆ ಕಾರಣದಿಂದ ಕೊರತೆ ಇದೆ ಈ ಕೊರತೆ ನೀಗಿಸುವ ಕೆಲಸವನ್ನು ನೀವು ಸರ್ಕಾರ ಮಾಡಲೇಬೇಕು ಇಲ್ಲ ನಾವು ಮಾಡುವುದಿಲ್ಲ, 25% ಅನುದಾನ ನಮ್ಮಲ್ಲಿ ಇರುವುದು ಎಂದು ಹೇಳಲು ಬರುವುದಿಲ್ಲ

ಶ್ರೀ ರೇವುನಾಯಕ್ ಬೆಳಮಗಿ, ಹಿರಿಯ ಸದಸ್ಯರಾದ ಸಿದ್ದರಾಮಯ್ಯನವರು ಹೇಳಿದ ಸಲಹೆಯನ್ನು ನಾನು ಸ್ವೀಕರಿಸುತ್ತೇನೆ ಆದರೆ ಹಿಂದಿನ ವರ್ಷ ನಾಲ್ಕು ವರ್ಷಕ್ಕೆ ಹೋಲಿಸಿದರೆ

ಶ್ರೀ ಸಿದ್ದರಾಮಯ್ಯ ಅವರು ತಪ್ಪು ಮಾಡಿದ್ದಾರೆಂದು ನೀವು ಮಾಡುವುದಕ್ಕೆ ಹೋಗಬೇಡಿ ಬೆಳಮಗಿಯವರೇ ನೀವು ಕೆಳ ಹಂತದಿಂದ ಬಂದಿರುವವರು ರೈತರ ಜೊತೆ ಬಂದಿರುವವರು ಅವರ್‍ಯಾರೊ ತಪ್ಪು ಮಾಡಿದ್ದಾರೆಂದು ನೀವು ಏಕೆ ಮಾಡುವುದಕ್ಕೆ ಹೋಗುತ್ತೀರಿ?

(ಗೊಂದಲ)

ಅಧ್ಯಕ್ಷರು ಅವರು ಏನು ಹೇಳುತ್ತಿದ್ದಾರೆಂದರೆ ನೀವೇನು ಕೇಳುತ್ತಿದ್ದೀರಿ, ಅದನ್ನು ಕೇಳುವುದಕ್ಕೆ ನಿಮಗೆ ನೈತಿಕ ಹಕ್ಕಿಲ್ಲವೆಂದು indirect ಆಗಿ ಹೇಳುತ್ತಿದ್ದಾರೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನಾವು ತಪ್ಪು ಮಾಡಿರುವುದರಿಂದ ಇಲ್ಲಿ ಕುಳಿತಿದ್ದೇವೆ

ಶ್ರೀ ಸಿದ್ದರಾಮಯ್ಯ ಅದಕ್ಕೆ ಇಟ್ಟ ಹಣವನ್ನು ಖರ್ಚು ಮಾಡಿಬಿಟ್ಟಿದ್ದೇವೆ, ಅದನ್ನು ನಾವು achieve ಮಾಡಿದ್ದೇವೆ, ಆದರೆ ಔಷಧಿ ಎಷ್ಟು ಎನ್ನುವುದನ್ನು ನಾವು ಊಹಿಸಲಿಲ್ಲ That is his answer ಅಷ್ಟೆ ಅಲ್ಲವೇ ರೇವುನಾಯಕರೇ ಎಷ್ಟು ಅನುದಾನ ಇತ್ತು, ಅದನ್ನು ಮಾರ್ಚ್ ಒಳಗಡೆ ಖರ್ಚುಮಾಡಿದ್ದೇವೆ ಆದರೆ ಔಷದಿ ಎಷ್ಟು ಬೇಕೋ, ಆ demand ಅನ್ನು ಮಾತ್ರ fulfill ಮಾಡಲು ಆಗಲಿಲ್ಲ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡಲು ಸ್ವಲ್ಪ ಅವಕಾಶವನ್ನು ಕೊಡಿ

ಶ್ರೀ ರೇವುನಾಯಕ್ ಬೆಳಮಗಿ ನಾನು 10-12 ವರ್ಷ ರೈತಾಪಿ ಕೆಲಸವನ್ನು ಮಾಡಿದ್ದೇನೆ

ಶ್ರೀ ಮಿರಾಜುದ್ದೀನ್ ಪಟೇಲ್. ಮಾನ್ಯ ಸಚಿವರು ಹಿಂದೆ ಇದ್ದ ತೊಂದರೆ ಈಗ ಇಲ್ಲವೆಂದು ಹೇಳಿದರು ಧರ್ಮಸಿಂಗ್ ಸರ್ಕಾರದಲ್ಲಿ ಆಗಿನಿಂದ ಹಿಡಿದು 5 ಕೋಟಿ ಇದ್ದ ಬಜೆಟ್ ಅಮೌಂಟ್‌ನ್ನು 10 ಕೋಟಿ ಎಂದು ಆಗ ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯನವರು ಮಾಡಿದ್ದರು ಉಚಿತವಾಗಿ ಔಷದಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ

(ಗೊಂದಲ)

ಅಧ್ಯಕ್ಷರು. ಅವರು ನಿಮಗೆ certificate ಅನ್ನು ಕೊಡುತ್ತಿದ್ದಾರೆ

ಶ್ರೀ ಧರ್ಮಸಿಂಗ್ ಈಗ ಮಿರಾಜುದ್ದೀನ್ ಪಟೇಲರು ಕೂಡ ಈ ಖಾತೆಯ ಮಂತ್ರಿಗಳಾಗಿ ಹೇಳಿದ್ದಾರೆ ಈಗಾಗಲೇ ಸಿದ್ದರಾಮಯ್ಯನವರೂ ಒಪ್ಪಿಕೊಂಡಿದ್ದಾರೆ

(ಗೊಂದಲ)

ಶ್ರೀ ಮಿರಾಜುದ್ದೀನ್ ಪಟೇಲ್ ನೀವು ಹತ್ತು ಕೋಟಿ ಮಾಡಿ ಕೊಟ್ಟಿರಿ ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ಈ ಖಾತೆಯ ಸಚಿವನಾಗಿದ್ದಾಗ ಇವೆಲ್ಲ ತೀರ್ಮಾನವನ್ನು ತೆಗೆದುಕೊಂಡು ಎಲ್ಲ ಔಷಧಿಗಳನ್ನು ಉಚಿತವಾಗಿ ಕೊಡಬೇಕೆಂದು ಮಾಡಿದ್ದೆವು ಈಗಲೂ ಉಚಿತವಾಗಿ ಕೊಡುತ್ತಿದ್ದೀರಿ

ಅಧ್ಯಕ್ಷರು. ಅವರು ಧರ್ಮಸಿಂಗ್ ಅವರಿಗೆ ಮತ್ತು ಸಿದ್ದರಾಮಯ್ಯನವರಿಗೆ certificate ಅನ್ನು ಕೊಟ್ಟರು ಅದಕ್ಕಿಂತ ಹಿಂದೆ ಹಿಂದಿನ ಕತೆಯನ್ನು ಹೇಳಿದ್ದಾರೆ

ಶ್ರೀ ಧರ್ಮಸಿಂಗ್ ಮಾನ್ಯ ಸಿದ್ದರಾಮಯ್ಯನವರು ಕೂಡ ಒಪ್ಪಿದ್ದಾರೆ ಅವರು ಈ ಖಾತೆಯ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ ತಾವು ಕೂಡ ಈ ಖಾತೆಯ ಮಂತ್ರಿಯಾಗಿ ಸುಮ್ಮನೆ ಕೂತಿದ್ದೀರಲ್ಲ ತಮಗೆ ಗೊತ್ತಿರುವುದನ್ನೆಲ್ಲ ಹೇಳಿ ನಿಮಗೆ ಅವಕಾಶ ಕೊಡುತ್ತೇನೆ ತಾವು ಪಶುಸಂಗೋಪನಾ ಸಚಿವರಾಗಿದ್ದವರು ನನಗೇನು ಗೊತ್ತೇ ಇಲ್ಲವೆನ್ನುವ ರೀತಿಯಲ್ಲಿ ತಾವು ಕೂತಿದ್ದೀರಿ ತಾವು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕು

ಶ್ರೀ ರೇವುನಾಯಕ್ ಬೆಳಮಗಿ ಹಿಂದಿನ ಸರ್ಕಾರ ಮಾಡಿದ್ದು ಹೇಳಬಾರದೆಂದು ಸಿದ್ದರಾಮಯ್ಯನವರು ಹೇಳಿದರು ಆದರೆ ಅದನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ ಹಿಂದೆ 11 ಕೋಟಿ ಇಟ್ಟಿದ್ದರೆ ಈಗಿನ ನಮ್ಮ ಸರ್ಕಾರ 18 ಕೋಟಿ ರೂಪಾಯಿಗಳನ್ನು ಇಟ್ಟಿದೆ ಜಿಲ್ಲಾ ಪಂಚಾಯಿತಿ ಮತ್ತು ಡಿಸಿ ಮುಖಾಂತರ ಅದನ್ನು arrange ಮಾಡುತ್ತಿದ್ದೇವೆ ಆ ಮೂಕ ಪ್ರಾಣಿಗೆ ಔಷಧಿ ಕೊರತೆ ಮಾಡದಿರುವಂತೆ ಚಿಂತನೆಯನ್ನು ಮಾಡುತ್ತದೆ ಕ್ರಮ ತೆಗೆದುಕೊಳ್ಳುತ್ತದೆ ಅದರಲ್ಲಿ ಎರಡನೇ ಮಾತೇ ಇಲ್ಲ

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ, ಕೊರತೆ ಇಲ್ಲ ಎಂದು ಹೇಳಿದ್ದಾರೆ ಇಲ್ಲಿ ಕೊರತೆ ಇದೆ ಎಂದು ಉತ್ತರ ಕೊಟ್ಟರೆ ಹೇಗೆ? ಯಾವ ಉತ್ತರ ಇದು? ಇಂದಿನ ಸರ್ಕಾರ 18 ಕೋಟಿ ಕೊಟ್ಟರೆ ಮತ್ತೆ ಹಣ ಎಲ್ಲಿಗೆ ಹೋಯಿತು?

ಅಧ್ಯಕ್ಷರು ಈಗ ಪ್ರಶ್ನೋತ್ತರವನ್ನು ಮುಗಿಸೋಣ ಈಗ ಪ್ರಶ್ನೋತ್ತರ ಮುಗಿದಿದೆ ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಚೆಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 22 03 2007ರಂದು 16ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 24 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ ಇವತ್ತು ಅಂತರ್ ರಾಷ್ಟ್ರೀಯ ಜಲ ದಿವಸ ಇವತ್ತು ಕರ್ನಾಟಕ Ground Water Regulation Control Bill ಸರ್ಕಾರದಲ್ಲಿದೆ ದಯಮಾಡಿ ನಾನು ಆ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ತಾವು ಶೂನ್ಯ ವೇಳೆಯಲ್ಲಿ ಅವಕಾಶವನ್ನು ಕೊಟ್ಟರೆ ಅದನ್ನು ತರಲು ಇಚ್ಛಿಸುತ್ತೇನೆ

ಅಧ್ಯಕ್ಷರು ನಿನ್ನೆ, ಬಹುಶ ಮುಕ್ಕಾಲು ದಿನ ಪ್ರಶ್ನೋತ್ತರವಿತ್ತು ಇವತ್ತು ಅರ್ಧ ದಿವಸ ಪ್ರಶ್ನೋತ್ತರವಾಗಿದೆ ಇನ್ನು ಮೇಲೆ ಒಂದೇ ಒಂದು ಗಂಟೆ ಕಾಲ ಎಲ್ಲಿಗೆ ಎಷ್ಟು ಪ್ರಶ್ನೆಗಳು ಮುಗಿಯುತ್ತದೋ, ಅಷ್ಟು ಪ್ರಶ್ನೆಗಳು ಮಾತ್ರ, ದಯಮಾಡಿ ಎಲ್ಲರೂ ಸಹಕರಿಸಬೇಕೆಂದು ನಾನು ವಿನಂತಿಸುತ್ತೇನೆ

ಅ) <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>

ವಿಷಯ 1996ರ Karnataka Ground Water Regulation and Control Bill ಅನ್ನು ಕಾಯ್ದೆಯನ್ನಾಗಿಸಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಬಿ ಆರ್ ಪಾಟೀಲ್(ಆಳಂದ್) ಮಾನ್ಯ ಅಧ್ಯಕ್ಷರೆ, ಇಡೀ ಜಗತ್ತಿನಲ್ಲಿ ಇವತ್ತು ನೀರಿನ ಸಮಸ್ಯೆ ಉದ್ಭವಿಸಿದ್ದು, ಎಲ್ಲಾ ಕಡೆ ವಿಜ್ಞಾನಿಗಳು, ಚಿಂತಕರು, ಪರಿಸರವಾದಿಗಳು ಬಹಳ ಚಿಂತೆಗೀಡಾಗಿದ್ದಾರೆ ನಮ್ಮ ರಾಜ್ಯದಲ್ಲೂ ಕೂಡ ನೀರಿನ ಸಮಸ್ಯೆ ಬಹಳ ಗಂಭಿರವಾಗಿದೆ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಕೂಡ ಬಹಳ ಮುಕ್ತವಾಗಿ ಎಲ್ಲಾ ಸದಸ್ಯರು ನೀರಿನ ಅಭಾವದ ಬಗ್ಗೆ ಚಿಂತನೆ ಮಾಡಿದ್ದಾರೆ ಇವತ್ತು ಬಹಳ ಜರೂರಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಕೇಂದ್ರ ಸರ್ಕಾರ 1996ರಲ್ಲಿ ಏನು ಒಂದು ಮಾದರಿ ಕಾನುನನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿದೆ, ಅಂದಿನಿಂದ ಇಂದಿನವರೆಗೂ ಕೂಡ ಆ ಬಿಲ್ ಸರ್ಕಾರದ ಎದುರುಗಡೆ ಇದೆ Karnataka Ground Water Regulation and Control Bill, 1996ರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಈ ಬಿಲ್ ಬಹಳ ದಿವಸಗಳಿಂದ ಸರ್ಕಾರದ ಮುಂದೆ ಪೆಂಡಿಂಗ್ ಇದೆ ಕೇಂದ್ರದಿಂದ ಒಂದು ಮಾದರಿ ಬಿಲ್ ಅನ್ನು ಈಗಾಗಲೇ ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆ ಮಹಾರಾಷ್ಟ್ರ ಸರ್ಕಾರ ಈ ಶಾಸನವನ್ನು ಜಾರಿಗೆ ತಂದು ಅಲ್ಲಿ ಅಂತರ್ಜಲವನ್ನು ಹೆಚ್ಚು ಮಾಡುವ ಮೂಲಕ ಇವತ್ತು ನೀರಿನ ಬವಣೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದೆ ಮಹಾರಾಷ್ಟ್ರದ ನಂತರ ಕರ್ನಾಟಕದಲ್ಲಿ ಇವತ್ತು ನೀರಿನ ಸಮಸ್ಯೆ ಉದ್ಭವವಾಗಿದೆ ದಯಮಾಡಿ ಈ ಸರ್ಕಾರ ಕೂಡ ಆದಷ್ಟು ಬೇಗ ಆ ಬಿಲ್ ಅನ್ನು ಕಾಯಿದೆ ಮಾಡಿ, ಇವತ್ತು ಏನು ನೀರಿನ ಸಮಸ್ಯೆಗೆ ನಾವು ಒಳಗಾಗಿದ್ದೇವೆ, ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಆ ಕಾನೂನನ್ನು ಇದೇ ಅಧಿವೇಶನದಲ್ಲಿ ತಂದು ಕಾಯಿದೆಯಾಗಿ ಪಾಸ್ ಮಾಡುವ ಮೂಲಕ ಈ Bill ಅನ್ನು ತರಬೇಕೆನ್ನುವಂತಹ ಒತ್ತಾಯವನ್ನು ಶೂನ್ಯ ವೇಳೆಯಲ್ಲಿ ತಮ್ಮ ಅನುಮತಿ ಕೋರಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಬಿ ಆರ್ ಪಾಟೀಲರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಈ ಜಲನೀತಿ ಬಗ್ಗೆ ಸರಿಯಾದ ನಿರ್ಣಯಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ ಅಂತರ್ಜಲದ ಮಟ್ಟ ಇವತ್ತು ಏನು ಕಡಿಮೆಯಾಗುತ್ತಿದೆ, ಅದರ ಬಗ್ಗೆ ನಿಜವಾಗಿಯೂ ಹೆಚ್ಚಿನ ಚಿಂತನೆಯನ್ನು ನಾವು ಮಾಡಬೇಕಾಗಿದೆ ಈಗ ಪಾಟೀಲರು ಏನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಕೇಂದ್ರ ಸರ್ಕಾರದವರು ಆ ಮಸೂದೆ ಬಗ್ಗೆ draft ಮಾಡಿ ಕಳುಹಿಸಿದ್ದು, ಅದನ್ನು ವಿಧಾನಸಭೆಯಲ್ಲಿ

ಮಂಡಿಸುವ ಬಗ್ಗೆ ಆದಷ್ಟು ಬೇಗ ಈ ಸರ್ಕಾರ ಒಂದು ನಿರ್ಣಯವನ್ನು ಕೈಗೊಳ್ಳುತ್ತದೆಂಬ ಮಾತನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ

ಆ) ವಿಷಯ ಪರೀಕ್ಷಾ ಸಮಯವಿರುವುದರಿಂದ ಸಂಜೆ ಆರೂವರೆ ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆವರೆಗೆ ವಿದ್ಯುತ್ ಕಡಿತಗೊಳಿಸದಿರುವಂತೆ ಕ್ರಮ ಕೈಗೊಳ್ಳುವುದು

ಶ್ರೀ ಆರ್ ಧ್ರುವನಾರಾಯಣ(ಸಂತೇಮರಹಳ್ಳಿ). ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ನಿರಂತರವಾಗಿ ವಿದ್ಯುತ್ ಕಡಿತವುಂಟಾಗುತ್ತಿದೆ ತಮಗೆ ಗೊತ್ತಿರುವಂತೆ, ಈಗ SSLC ಪರೀಕ್ಷೆ ನಡೆಯುತ್ತಿದೆ ವಿದ್ಯಾರ್ಥಿಗಳಿಗೆ ಇದು ಪರೀಕ್ಷಾ ಸಮಯ ಸಾಯಂಕಾಲದ ವೇಳೆ ಸುಮಾರು 6 ರಿಂದ ರಾತ್ರಿ 11 ಗಂಟೆವರೆಗೂ ಬಹಳಷ್ಟು ಸಲ ವಿದ್ಯುತ್ ಕಡಿತವುಂಟಾಗುತ್ತಿದೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವ ಈ ಸಮಯದಲ್ಲಿ ತಾವು ದಯವಿಟ್ಟು ನಿರಂತರವಾಗಿ ವಿದ್ಯುತ್ ಕೊಡಬೇಕು ಏಕೆಂದರೆ, ತಮಗೆ ಗೊತ್ತಿದೆ BPL ಪಟ್ಟಿಯಲ್ಲಿ ಕೂಡ ಬಡವರಿಗೆ ಇವತ್ತು ಸರಿಯಾದ ರೀತಿಯಲ್ಲಿ ಕಾರ್ಡುಗಳನ್ನು ಕೊಟ್ಟಿಲ್ಲ ಸೀಮೆಎಣ್ಣೆಯೂ ಸಮರ್ಪಕವಾಗಿ ವಿತರಣೆಯಾಗಿಲ್ಲ ಈ ದಿಸೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಾತ್ರಿ ವೇಳೆ ಕತ್ತಲಿನಲ್ಲಿ ಓದುವುದಕ್ಕಾಗುವುದಿಲ್ಲ ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹಳಷ್ಟು ಸಮಸ್ಯೆಯಾಗಿದೆ ದಯಮಾಡಿ ಈ ವಿದ್ಯುತ್ ಕಡಿತವನ್ನು ತೆಗೆಯಬೇಕು ಪರೀಕ್ಷಾ ಸಮಯವಾಗಿರುವುದರಿಂದ ಸಾಯಂಕಾಲದ ಸಮಯದಲ್ಲಿ ಆರೂವರೆ ಗಂಟೆಯಿಂದ ರಾತ್ರಿ ಹನ್ನೊಂದು ಗಂಟವರೆಗೂ ನಿರಂತರವಾಗಿ ವಿದ್ಯುತ್ ಒದಗಿಸತಕ್ಕಂಥ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ ಏಪ್ರಿಲ್ ತಿಂಗಳಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಕಡಿತವಾಗುವುದರಿಂದ ಅವರುಗಳಿಗೆ ತೊಂದರೆಯಾಗುತ್ತದೆಂಬ ಭಾವನೆಗಳನ್ನು ಅವರು ವ್ಯಕ್ತಪಡಿಸಿದ್ದಾರೆ ಇವತ್ತು ವಿದ್ಯುತ್ ಮಂತ್ರಿಗಳ ಜೊತೆ ಮಾತನಾಡಿ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ

ಇ) ವಿಷಯ ಬೆಂಗಳೂರು ನಗರದಲ್ಲಿ **Posters, Cutouts** ಹಾಕುವುದನ್ನು ನಿಷೇಧಿಸುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ವಿಧಾನಸೌಧದ ಸುತ್ತಮುತ್ತ ಮತ್ತು ಬೆಂಗಳೂರು ನಗರದಲ್ಲಿ posters, cut outs ಏನು ಹಾಕುತ್ತಾರೆ, ಅದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿದ್ದೇನೆ ಅದಕ್ಕೆ ಉತ್ತರವನ್ನು ಒದಗಿಸಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ತಕ್ಷಣ ಇಡೀ ಬೆಂಗಳೂರು ನಗರದಲ್ಲಿ cut outs ಹಾಕುವುದನ್ನು ನಿಷೇಧಿಸುತ್ತೇವೆ, ನಿಲ್ಲಿಸುತ್ತೇವೆಂದು ಹೇಳಿದ್ದರು ಆದರೆ, ಇವತ್ತಿನವರೆಗೂ ನಿಂತಿಲ್ಲ ನಾವು ಅನೇಕ ಸಂದರ್ಭಗಳಲ್ಲಿ ನೋಡಬಹುದು ಯಾರೋ ಒಬ್ಬ ವ್ಯಕ್ತಿ ಬೇಕಾದರೆ, ಅವನ ಫೋಟೋ ಹಾಕಿಕೊಳ್ಳಲಿ ಆದರೆ, cut outs ಹಾಕಿಕೊಳ್ಳುವಾಗ ಅದರಲ್ಲಿ ಮುಖ್ಯಮಂತ್ರಿಗಳ photo ಜೊತೆಯಲ್ಲಿ ಹಾಕಿಸಿಕೊಳ್ಳುವುದು, ಉಪಮುಖ್ಯಮಂತ್ರಿಗಳ photo ಜೊತೆಯಲ್ಲಿ ಇಡೀ ನಗರದಲ್ಲಿ ಹಾಕಿಕೊಳ್ಳುವಂಥಾದ್ದು ನಡೆದಿದೆ ಇನ್ನು ಹುಟ್ಟುಹಬ್ಬ ಅದು ಅವರವರ private affair ಎಂದು ನಾನು ತಿಳಿದಿದ್ದೇನೆ ಅದನ್ನು ಅವರವರ ಮನೆ-ಮನೆಗಳಲ್ಲಿ ಆಚರಿಸಿಕೊಳ್ಳಲಿ ಈಗ ವಿಧಾನಸೌಧದ ಸುತ್ತಮುತ್ತಲೂ ತಾವೇನು ಕಬ್ಬಿಣದ ಬೇಲಿ ಮಾಡಿಸಿಕೊಂಡಿದ್ದೀರಿ, ಅದು cut outs ಕಟ್ಟುವುದಕ್ಕೇ ಆಗಿಹೋಗಿದೆ!

ಶ್ರೀ ಜೆ ಸಿ ಮಾಧುಸ್ವಾಮಿ, ಅಲ್ಲಿರುವವರು ಯಾರಾದರೂ criminals, convict ಆಗಿದ್ದಲ್ಲಿ, ಆ ಮಂತ್ರಿಗಳ ಮೇಲೆ action ತೆಗೆದುಕೊಳ್ಳಬಹುದೇ ಎಂದು ಇಲ್ಲಿ ತೀರ್ಮಾನವಾಗಬೇಕು ಇದರ ಜೊತೆ cut outನಲ್ಲಿ ಹಾಕಿರುತ್ತಾರಲ್ಲ, ಅದರಲ್ಲಿ ಯಾರಾದರೂ criminals, convicts ಇದ್ದರೆ, ಯಾರ ಹೆಸರಿನಲ್ಲಿ ಅವರು cut outs ಮಾಡಿಸಿದ್ದಾರೋ, ಆ minister ಜವಾಬ್ದಾರರೆಂದು ಆಗುತ್ತಾರೋ ಇಲ್ಲವೇ ಎಂದು ಇಲ್ಲಿ ನಮಗೆ ಹೇಳಬೇಕು

ಶ್ರೀ ವಾಟಾಳ್ ನಾಗರಾಜ್ ಜನ್ಮ ದಿನಾಚರಣೆ ಹಾವಳಿಯನ್ನು ಮಾತ್ರ ತಡೆಯಲೇಬೇಕು ಅದೇನು ಜನ್ಮ ದಿನಾಚರಣೆ?

ಶ್ರೀ ಜೆ ಸಿ ಮಾಧುಸ್ವಾಮಿ ಇದಕ್ಕೆ ಉತ್ತರವನ್ನು ನೀವು ಕೊಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಈಗ ಎಲ್ಲಾ ತರಹದ posters ಬರುವುದಕ್ಕೆ ಶುರುವಾಗಿದೆ ಶಾಸಕರ ಭವನದ ಸುತ್ತಲೂ ಎಲ್ಲಾ ಜನರ posters ಇದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಭಾರೀ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ ದಯವಿಟ್ಟು ಈ ವಿಧಾನಸೌಧದ ಸುತ್ತಲೂ ಇರುವ

fencingಗೆ ಪೋಸ್ಟರ್ ಹಾಕುವುದನ್ನಾದರೂ ನಿಲ್ಲಿಸಿಬಿಡಿ ಅದೇನು ಆ ಫೋಟೋಗಳು! ಅವರು ಯಾರ್‍ಯಾರೋ? ಅವರ ಮುಖಗಳನ್ನು ನೋಡಿದರೆ ಹೆದರಿಕೆಯಾಗುತ್ತದೆ! ಅವರುಗಳ background ಏನೇನು ಎಂಬುದು ನಮಗೆ ಗೊತ್ತಿಲ್ಲ

ಅಧ್ಯಕ್ಷರು ಅವರ ಮುಖಗಳನ್ನು ನೋಡಿ ನಿಮಗೆ ಹೆದರಿಕೆಯಾದರೆ ಹೇಗೆ? ಇಷ್ಟು ಹೆದರಿಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ ಇನ್ನೊಂದು ನೀವು ನೋಡಬೇಕು ಬ್ರಹ್ಮ, ವಿಷ್ಣು, ಮಹೇಶ್ವರ, ಈ ಮೂವರು ಒಬ್ಬರಿಗೆ ಆಶೀರ್ವಾದ ಮಾಡುತ್ತಿದ್ದಾರೆ! ಇದನ್ನು ನಾನು ಎಲ್ಲಿಯೂ ನೋಡಿಲ್ಲ, ಬ್ರಹ್ಮ, ವಿಷ್ಣು, ಮಹೇಶ್ವರರಾದ ಈ ಮೂವರು ಕೆಳಗಡೆ ಇರುವವರಿಗೆ ಮೇಲಿನಿಂದ ಹೂಗಳನ್ನು ಸುರಿಸುತ್ತಿದ್ದಾರೆ ಇದೇನು ಹುಡುಗಾಟ? ಯಾರದು ಜನ್ಮ ದಿನಾಚರಣೆ? ಮಹಾತ್ಮಗಾಂಧಿಯ ಜನ್ಮ ದಿನಾಚರಣೆ ಇಲ್ಲ, ಅಂಬೇಡ್ಕರ್‌ರವರ ಜನ್ಮ ದಿನಾಚರಣೆ ಇಲ್ಲ, ಯಾರದ್ದೂ ಇಲ್ಲ ಹಾದಿ-ಬೀದಿಗಳಲ್ಲಿ ಏನಿದು ವಿಚಿತ್ರ? ಏನಿದು ಹುಡುಗಾಟ? ಇದು ಸರಿಯಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಈ ರೋಗ ಇಲ್ಲಿಗೇ ನಿಂತಿಲ್ಲ ಈಗ ಹಳ್ಳಿ ಹಳ್ಳಿಗೂ ಈ ಕಾಯಿಲೆ ಬಂದುಬಿಟ್ಟಿದೆ ಅಪಾಯವೇನೆಂದರೆ, anti-social elements

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ನೀವೇ ಎಲ್ಲರನ್ನೂ ಎಳೆದುಕೊಂಡು ಬರುತ್ತಿದ್ದೀರಿ ಬೆಂಗಳೂರು ತನಕ ಬರೆಸಿಕೊಂಡು ಬಂದದ್ದು ನೀವೇ ರವಿ ಮೇಲ್ಪಂಕ್ತಿ ಹಾಕಿಕೊಟ್ಟವರು ಅವರಲ್ಲ, ತಾವು ಇವರೇ ಮೇಲ್ಪಂಕ್ತಿ ಹಾಕಿಕೊಟ್ಟವರು ಬೆಂಗಳೂರಿಗೆ ಯಾರೂನಡೆಯುವುದೇ ಇಲ್ಲವೇ?

ಶ್ರೀ ಕೆ ಆರ್ ರಮೇಶ್‌ಕುಮಾರ್ ಈಗ ಯಾರು ಹಿರಿಯರೋ, ಯಾರು ಕಿರಿಯರೋ ಗೊತ್ತಿಲ್ಲ, ರವಿಯವರೆ, ಸಾರ್ವಜನಿಕ ಜೀವನದಲ್ಲಿರುವವರು, ರಾಜಕಾರಣಿಗಳು, ಅಂದರೆ, ನಾವು ನಗೆಪಾಟಲಿನ ವಸ್ತುವಾಗಿದ್ದೇವೆ ಬಹಳ ಲಘುವಾಗಿ, ಅಸಹ್ಯವಾಗಿ ನಮ್ಮ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ ಇದು ಹಳ್ಳಿಗಳಲ್ಲೆಲ್ಲಾ ಪ್ರಾರಂಭವಾಗಿ ಬಿಟ್ಟಿದೆ ನಮಗೇ ಗೊತ್ತಿರುವುದಿಲ್ಲ ನಮ್ಮ ಊರಿನಲ್ಲಿ ನನ್ನನ್ನೂ ಸೇರಿಸಿ ಹಾಕಿಬಿಟ್ಟಿದ್ದರು ನಾನು ನಮ್ಮ Sub Inspectorಗೆ ಫೋನ್ ಮಾಡಿ ಹೇಳಬೇಕಾಯಿತು 'ನೋಡಿ ನನ್ನ ಅನುಮತಿ ಇಲ್ಲದೆ ಹಾಕಿದ್ದಾರೆ, ತಕ್ಷಣ ತೆಗೆಸಿ' ಎಂದು ಹೇಳಬೇಕಾಯಿತು Sub Inspectorರವರ ಸಹಾಯ ತೆಗೆದುಕೊಂಡು ನಾನು ಅದನ್ನು ನಿಲ್ಲಿಸಬೇಕಾಯಿತು ನಮ್ಮ ಫೋಟೋವನ್ನೇ ಹಾಕಿಬಿಡುತ್ತಾರೆ ಯಾರ್‍ಯಾರ ಜೊತೆಗೋ ಹಾಕಿಬಿಡುವುದು! ಅಧ್ಯಕ್ಷರೆ, ಇದು ತೀರಾ ಅಗೌರವ ಎಲ್ಲೋ ಒಂದು ಕಡೆ ಒಂದು ಸಣ್ಣ ಶಾಸನವಾದರೂ ಮಾಡಬೇಕು

ಭೂಮಿ ಕದ್ದವರು illicit liquor ಮಾರುವವರೂ smuggling ಮಾಡುವವರೂ ಅಲ್ಲೇ, ಶುದ್ಧ characterless fellows ಎಲ್ಲರೂ ಅವರೇ ಈ ರಾಜ್ಯದ ಮುಖ್ಯಮಂತ್ರಿ ಫೋಟೋ, ಪ್ರಧಾನಮಂತ್ರಿ ಫೋಟೋ, ಮಾಜಿ ಪ್ರಧಾನಮಂತ್ರಿ ಫೋಟೋ, ರಾಷ್ಟ್ರಪತಿ ಫೋಟೋ, ಉಪ ರಾಷ್ಟ್ರಪತಿ ಫೋಟೋ ನಾನು ಏನು ಹೇಳುತ್ತೇನೆಂದರೆ, ಆ ಸ್ಥಾನಗಳಿಗೆ ತನ್ನದೇ ಆದ ಗೌರವವಿದೆ ಇವರು ಯಾರ permission ತೆಗೆದುಕೊಂಡು ಹಾಕುತ್ತಾರೆ? ಇವರನ್ನು ಯಾರು ಕೇಳುತ್ತಾರೆ? ಎಲ್ಲಿ ನೋಡಿದರೂ ಇದೊಂದು ತರಹ ಅಸಹ್ಯವೆಂದರೆ ಅಸಹ್ಯ This is very bad ಯಾರು ಕೆಲವು ಸ್ಥಾನಗಳಲ್ಲಿರುತ್ತಾರೆ ಇಂಥವರ permission ಇಲ್ಲದೇಯೆ ಅಥವಾ ಆ ಸಂಸ್ಥೆಯಿಂದ, CM 's office ನಿಂದ permission ಇಲ್ಲದೆಯೇ CM photoವನ್ನು use ಮಾಡತಕ್ಕದ್ದು, it is forbidden under law ನಾವು strict ಆಗಿ ಹೋಗಬೇಕಗುತ್ತದೆ ಇಲ್ಲದಿದ್ದರೆ ಸಂಸ್ಥೆಗಳ ಗೌರವವೇನಾಗುತ್ತದೆ? it is very bad ನಾವು ಇದನ್ನೇನೋ ಲಘುವಾಗಿ ಮಾತನಾಡಿದ್ದೇವೆಂದು ಹಾಸ್ಯ ಮಾಡಿಕೊಂಡು ಹೋಗತಕ್ಕದ್ದಲ್ಲ ನಾವು ಸಾರ್ವಜನಿಕ ಜೀವನಕ್ಕೆ ಬಂದಿದ್ದಕ್ಕೆ ಈಗಾಗಲೇ ನರಳುತ್ತಿದ್ದೇವೆ ಈಗ ನಾವೇನು ಹೆಮ್ಮೆಯಿಂದ ಗೌರವದಿಂದ, ತೃಪ್ತಿಯಿಂದ ಬದುಕತಕ್ಕ ಮನುಷ್ಯರಾಗಿಲ್ಲ ಈಗಾಗಲೇ ಇದೊಂದು ರೀತಿಯ ಶಾಪ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ಓಡಿಹೋಗುವಂತಿಲ್ಲ, ಈ ಕಾಲನ್ನು ತೆಗೆದರೆ ಆ ಕಾಲು ಸಿಕ್ಕಿಹಾಕಿಕೊಳ್ಳುತ್ತದೆ, ಆ ಕಾಲನ್ನು ತೆಗೆದರೆ ಈ ಕಾಲು ಸಿಕ್ಕಿಹಾಕಿಕೊಳ್ಳುತ್ತದೆ ಬೇರೆ ಯಾವುದೇ ಕ್ಷೇತ್ರದಲ್ಲಿದ್ದು ಊರೆಲ್ಲಾ ಹಲ್ಕಾ ಕೆಲಸ ಮಾಡಿದ್ದರೂ ನೀವು ದೊಡ್ಡ ಮನುಷ್ಯರು ಆದರೆ, ಇಲ್ಲಿದ್ದು ನೀವು ಎಷ್ಟೇ ಗೌರವದಿಂದಿದ್ದರೂ ನೀವು ಶುದ್ಧ ಹಲ್ಕಾಗಳು ಇಡೀ ಸಮಾಜವೇ ಆ ರೀತಿಯಾಗಿದೆ ಅದರ ಜೊತೆಗೆ ಆ ಕರ್ಮಗಳೆಲ್ಲಾ ನಮಗೇ ಬೀಳುತ್ತಿವೆ ದಯಮಾಡಿ, I think you should take a strict view about it

ಶ್ರಿ ಹೆಚ್ ಡಿ ಕುಮಾರಸ್ವಾಮಿ(ಮುಖ್ಯಮಂತ್ರಿಗಳು) – ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇನು ಪ್ರಸ್ತಾಪ ಮಾಡಿದ್ದಾರೆ, ಅವರು ಮೊನ್ನೆ ಬೇರೆ ಬೇರೆ ರೀತಿಯ ಬೋರ್ಡ್‌ಗಳನ್ನು ಹಾಕುವುದರ ಮೂಲಕ ನಗರದಲ್ಲಿರುವ ವ್ಯವಸ್ಥೆಗೆ ಕೆಟ್ಟ ಅಭಿಪ್ರಾಯ ಮೂಡಿಸಿರುವ ವಿಷಯದ ಬಗ್ಗೆ ನನ್ನ ಗಮನಕ್ಕೆ ತಂದ ತಕ್ಷಣವೇ, 24 ಗಂಟೆಯಲ್ಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ನನ್ನ photo ಇರತಕ್ಕದನ್ನು ತಕ್ಷಣ ತೆಗೆಯಬೇಕೆಂದು direction ಕೊಟ್ಟು, ಪ್ರಮುಖವಾಗಿ ವಿಧಾನಸೌಧವಿರಬಹುದು, ನನ್ನ ಗೃಹವಿರತಕ್ಕ ರಸ್ತೆ ಇರಬಹುದು, ಅಲ್ಲಿರುವ ಎಲ್ಲಾ cutoutಗಳನ್ನು ತೆಗೆಯಲು ಆದೇಶ ಕೊಟ್ಟು 24ಗಂಟೆಯಲ್ಲೆ ತೆಗೆಸಿದ್ದೇನೆ ಈ ವಿಷಯದಲ್ಲಿ ಕಾನೂನನ್ನು ತರುವುದು ಸೂಕ್ತವೆಂದು ಕೆಲವು ಸದಸ್ಯರೇನು

ಹೇಳುತ್ತಿದ್ದಾರೆ ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ ಏಕೆಂದರೆ, ಮುಖ್ಯಮಂತ್ರಿಯಾದ ಸಂದರ್ಭದಲ್ಲೇ ನಾನು ಸಾರ್ವಜನಿಕವಾಗಿ ಹೇಳಿಕೆಯನ್ನು ಕೊಟ್ಟಿದ್ದೆ ಯಾವುದೇ ಕಾರಣಕ್ಕೂ ನಮ್ಮ ಚಿತ್ರಗಳನ್ನು ಹಾಕುವುದರ ಮೂಲಕ ನಗರದ ಅಂದವನ್ನು ಕೆಡಿಸಬಾರದೆಂದು ಮನವಿಯನ್ನು ಮಾಡಿದ್ದೆ ಈ ವಿಷಯದಲ್ಲಿ ಹೊಸ ಕಾನೂನೊಂದನ್ನು ತರುವುದಕ್ಕೆ ನಾನೂ ನಿಮ್ಮ ಜೊತೆ ಸಹಮತವನ್ನು ವ್ಯಕ್ತಪಡಿಸುತ್ತೇನೆ ಅದರ ಜೊತೆಗೆ ಇದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಜವಾಬ್ದಾರಿ ಸಹ ಇದೆ ಏಕೆಂದರೆ, ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಅವರ ಪಕ್ಷದ ಕಾರ್ಯಕರ್ತರಿಗೆ ಕಟ್ಟುನಿಟ್ಟಿನ ಆದೇಶವನ್ನೂ ಕೊಡಬೇಕಾಗುತ್ತದೆ ನಾವು ಕೇವಲ ವೇದಿಕೆ ಮೇಲೆ ಇಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ ಆದರೆ, ಸರ್ಕಾರದಿಂದ ಕಾನೂನನ್ನು ತರಬೇಕೆಂದು ಸದನ ಬಯಸುವುದಾದರೆ ಅಂತಹ ಕಾನೂನು ತರುವ ಬಗ್ಗೆ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತೇವೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇದನ್ನು ಇಡೀ ರಾಜ್ಯದಲ್ಲಿ ತರಬೇಕಾಗುತ್ತದೆ ಕೇವಲ ಬೆಂಗಳೂರು ನಗರ ಒಂದಕ್ಕೆ ಅಲ್ಲ

ಈ) ವಿಷಯ ಹೊಸ ಜಿಲ್ಲೆಗಳ ರಚನೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡುತ್ತೀರೆಂದು ಅನೇಕ ಪತ್ರಿಕೆಗಳಲ್ಲಿ ಬಂದಿದೆ ಹೊಸ ಜಿಲ್ಲೆಗಳನ್ನು ಮಾಡುವುದಕ್ಕೆ ನನ್ನದೇನೂ ತಕರಾರಿಲ್ಲ ಅದರೆ, ಬೆಳಗಾವಿ ಜಿಲ್ಲೆಯನ್ನು ಮಾತ್ರ ಒಡೆಯತಕ್ಕ ಕಾರ್ಯಕ್ಕೆ ಕೈ ಹಾಕಬಾರದು ಏಕೆಂದರೆ ಅದು ಬಹಳ ಪ್ರಾಮುಖ ಹಾಗು ಸೂಕ್ಷ್ಮವಾದ ವಿಚಾರ ಮಹಾಜನ್ ವರದಿ ಜಾರಿಯಾಗಬೇಕಾಗಿರುವುದರಿಂದ ಆದರ ಬಗ್ಗೆ ನಾವೆಲ್ಲರೂ ಒಗ್ಗಟ್ಟಾಗಿಯೇ ಬಂದಿದ್ದೇವೆ ಬೇರೆ ಯಾವ ಜಿಲ್ಲೆಗಳನ್ನು ಮಾಡುತ್ತೇನೆಂದು ಹೇಳಿದ್ದಿರೋ ಅದು ನಿಮಗೆ ಸೇರಿದ್ದು ಅದಕ್ಕೆ ನನ್ನ ತಕರಾರೇನಿಲ್ಲ ಅದನ್ನು ಮಾಡಬೇಡಿ, ಮಾಡಿ ಎಂದು ನಾನು ಹೇಳುವುದಿಲ್ಲ ಆದರೆ, ಆ ವಿಚಾರದಲ್ಲಿ ಬೆಳಗಾವಿಯ ಪ್ರಶ್ನೆ ಬಂದಾಗ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ ಈ ವಿಚಾರದಲ್ಲಿ ಮಾತ್ರ ಸ್ಪಷ್ಟವಾಗಿ ಮತ್ತು ನೇರವಾಗಿ ಚಿಂತನೆ ಮಾಡಬೇಕಾಗುತ್ತದೆ ಇದರ ಬಗ್ಗೆ ಬಂದಾಗ ವಿರೋಧ ಪಕ್ಷದ ಎಲ್ಲಾ ಮುಖಂಡರನ್ನು ಕರೆದು ಮಾತನಾಡಬೇಕು ಬೆಳಗಾವಿ ಪ್ರಶ್ನೆಯ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ ಅತ್ಯಂತ ಗಂಭೀರವಾದ ಪರಿಸ್ಥಿತಿ ಇದೆ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ದಯಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ತಾವೇನು ಹೇಳುತ್ತಿರೋ ಹೇಳಬೇಕಾಗಿ ಕೋರುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ(ಗುರುಮಿರಕಲ್) Particularly, ಗುಲ್ಬರ್ಗಾ ಮತ್ತು ಬೆಳಗಾಂ ಬಗ್ಗೆ District Reorganization Committeeಗೆ

ಬರಬಾರದಿತ್ತು ಏಕೆಂದರೆ ಈ ಹಿಂದೆ ಗದ್ದಿಗೌಡರ ಸಮಿತಿ, ವಾಸುದೇವ್ ಸಮಿತಿ, ಹುಂಡೇಕಾರ್ ಸಮಿತಿ ಈ ಮೂರೂ ಸಮಿತಿಯವರೇನು ವರದಿ ಕೊಟ್ಟಿದ್ದರೂ ಅದರಲ್ಲಿ ಬೆಳಗಾಂ ಮತ್ತು ಗುಲ್ಬರ್ಗಾದ ಬಗ್ಗೆ ತೀರ್ಮಾನವನ್ನು ಹೇಳಿದ್ದಾರೆ ಶಿಫಾರಸ್ಸನ್ನೂ ಮಾಡಿದ್ದಾರೆ ಕೆಲವು ಕಾರಣಕ್ಕಾಗಿ, executive orderಗೋಸ್ಕರ ಗುಲ್ಬರ್ಗಾ bifurcation ಅಗತಕ್ಕದ್ದು ನಿಂತಿದೆ ಅದರಲ್ಲಿ ಆ ಸಮಿತಿಗಳ ವರದಿ, ಶಿಫಾರಸ್ಸಿನ ಪ್ರಶ್ನೆ ಬರಲಿಲ್ಲ ಅಲ್ಲಿ ಶಹಪುರದವರು ನಮಗೆ ಮಾಡಿ ಎಂದು, ಜೇವರ್ಗಿಯವರು ನಾವು ಗುಲ್ಬರ್ಗಾಕ್ಕೆ ಹೋಗುತ್ತೇವೆಂದು, ಈಗಾಗಲೇ ಅಲ್ಲಿ sub-divisional head quarter ಇದೆ, ಅರ್ಧದಷ್ಟು offices ಯಾದ್‌ಗೀರ್‌ಗೆ ಈಗಾಗಲೇ ಸ್ಥಳಾಂತರಗೊಂಡಿವೆ ಆದ್ದರಿಂದ ಅದನ್ನೇ ಮಾಡಬೇಕೆಂದು ಹೇಳಿದಾಗ ಅದನ್ನು ಮಾಡುತ್ತೇವೆಂದು ಕೆಲವು office ನ್ನೂ ಸ್ಥಳಾಂತರ ಮಾಡಿದರು, ಅದು Education office, S P Office ಇರಬಹುದು, ಬೇರೆ ಬೇರೆ officeಗಳಿರಬಹುದು ಆದರೆ, ಮುಂದೆ ಕೆಲವು ತಾಲ್ಲೂಕುಗಳನ್ನು bifurcate ಮಾಡಿ ಅನಂತರ ಯಾದ್‌ಗಿರ್‌ನ್ನು declare ಮಾಡೋಣವೆಂದು ಹಾಗೇ ಇಟ್ಟರು ಆದರೆ, ವಾಟಾಳ್‌ನಾಗರಾಜ್‌ರವರು ತಮಗೆ ಬೇಕಾಗಿತ್ತು ರಾತ್ರಿ ಹೋಗಿ ಮಾಡಿಸಿಕೊಂಡು ಬಂದರು

ಶ್ರೀ ವಾಟಾಳ್‌ನಾಗರಾಜ್ ಇಲ್ಲ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಇಲ್ಲವೇ? ನಾವೆಲ್ಲರೂ ಒಟ್ಟಿಗೆ ಇರೋಣವೆಂದು ನನ್ನನ್ನು ಕರೆದುಕೊಂಡು ಹೋಗಿ

ಮಾನ್ಯ ಸದಸ್ಯರು, ನಾನೂ ಬಂದಿದ್ದೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ನೀವೂ ಬಂದಿದ್ದಿರಿ

ಶ್ರೀ ವಾಟಾಳ್‌ನಾಗರಾಜ್ ಈ ಸತ್ಯವನ್ನು ಹೇಳಲು ಸಾಕ್ಷಿ ನೀವು!

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ನೀವು ನನ್ನ ಜೊತೆ ಬಂದಿಲ್ಲವೆಂದು ಪ್ರಮಾಣ ಮಾಡಿ ಹೇಳಿ? ಜೆ ಹೆಚ್ ಪಟೇಲ್‌ರವರು ಹತ್ತಿರ ನೀವು ನನ್ನ ಜೊತೆ ಬಂದಿರಲಿಲ್ಲವೇ?

ಶ್ರೀ ಜಿ ವಿ ಶೀರಾಮರೆಡ್ಡಿ ನಾನೇ ಬಂದಿದ್ದೆ ಜೊತೆಯಲ್ಲಿ!

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ನೀವು ಆ ರೀತಿ ಹೇಳಬೇಡಿ ಅವರು ನನ್ನ ಜೊತೆ ಬಂದು ಚಾಮರಾಜನಗರ ಮಾಡಿ sir ಯಾದಗೀರ್‌ನ್ನೂ ಮಾಡಬೇಕು ಅವರು opposition party leader ಅವರದನ್ನು ಮಾಡದಿದ್ದರೆ ಹೇಗೆ ಎಂದು ಹೇಳಿ ಬಂದಂತಹ ಮನುಷ್ಯ ತನ್ನದೊಂದನ್ನು ಮಾಡಿಸಿಕೊಂಡು ಅನಾಮತ್ತಾಗಿ paper ಹಿಡಿದುಕೊಂಡು ಹೊರಗಡೆ ಬಂದರು ನಮ್ಮ ಜಾಗದಲ್ಲಿ ನಮ್ಮ ವಿರೊಧ ಪಕ್ಷದ ನಾಯಕರು, ನಾವು, ದರ್ಶನಾಪುರ್ ಕಚ್ಚಾಡಿಕೊಂಡು ಕುಳಿತಿದ್ದೆವು

ಶ್ರೀ ವಾಟಾಳ್‌ನಾಗರಾಜ್ ನಾವು ಇವರು ಜೆ ಹೆಚ್ ಪಟೇಲರು ಒಟ್ಟಿಗೇ ಇದ್ದಾಗ ಪಟೇಲರು, ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾರೆ, ಅವರಿಗೂ ಗೌರವವನ್ನು ಕೊಡಬೇಕು, ಆದ್ದರಿಂದ ಅವರದನ್ನು ಮಾಡಲೇಬೇಕೆಂದು ಹೇಳಿದ್ದೇನೆ ಆದರೆ, ಇವರಿಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿದ್ದಾರೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರು ಇಲ್ಲಿಯವರೆಗೆ ನಾನು ಅಲ್ಲಿಗೆ ಬಂದೇ ಇಲ್ಲವೆಂದು ಹೇಳುತ್ತಿದ್ದರು! ಗೊತ್ತೇ ಇಲ್ಲವೆಂದು ಹೇಳಿದರು! ಸುಳ್ಳು ಸಾಕ್ಷಿ ಎಂದು ಹೇಳಿದರು! ಈಗ ನೀವು ಇದನ್ನು ನಂಬುತ್ತೀರಾ? ಈಗ ಇದರಲ್ಲಿ ಏನಾಗಿದೆಯೆಂದರೆ, ಈ ಎರಡೂ ಜಿಲ್ಲೆಯ report ಬಂದಿದೆ, ಅಂತಿಮ ನಿರ್ಣಯವಾಗಿದೆ ಈಗ ಇವರು ಪುನ enquiry ಮಾಡುವುದಕ್ಕೆ ಶುರು ಮಾಡಿದರೆ ಮತ್ತೆ ಜಗಳವಾಗುತ್ತದೆ ಸುರ್‌ಪುರ್‌ರವರ ಜಗಳ, ಶಹಪುರ್‌ರವರ ಜಗಳ, ಜೇವರ್ಗಿಯವರ ಜಗಳ, ಯಾದ್‌ಗೀರ್‌ರವರ ಜಗಳ ಪ್ರಾರಂಭವಾಗುತ್ತದೆ ಈ ರೀತಿ ಜಗಳ ಹತ್ತಿಸುವುದಕ್ಕಿಂತಲೂ ಏನು ಮೂರು ಸಮಿತಿಯವರು ಅಂತಿಮ ವರದಿಯನ್ನು ಕೊಟ್ಟಿದ್ದಾರೆ ಅದರನ್ವಯ ಇದನ್ನು ಬದಿಗಿಡಿ ಬೇಕಾದರೆ ನಿಮಗೆ ರಾಮನಗರ, ಚಿಕ್ಕಬಳ್ಳಾಪುರ ಮಾಡಿಕೊಳ್ಳಿ ಬೆಳಗಾಂ ಏಕೆ ಮಾಡಬಾರದೆಂದು ನಿರ್ಣಯ ಬಂತು ಎಂದರೆ, ಇಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಪ್ರಶ್ನೆ ಬರಬಹುದು, ಗಡಿನಾಡಿನ ಪ್ರಶ್ನೆ, ಭಾಷೆಯ ಪ್ರಶ್ನೆ ಬರಬಹುದು, ನಾಳೆ division ಆದರೆ ಮರಾಠಿ speaking ಏರಿಯಾನೇ ಒಂದು ಕಡೆ, ಕನ್ನಡ speaking ಏರಿಯಾ ಒಂದು ಕಡೆ ಹೋಗಬಹುದು, ರಾಜ್ಯದ ಹಿತದೃಷ್ಟಿಯಿಂದ ಇದು ಸರಿಯಾಗುವುದಿಲ್ಲ, ಆದ್ದರಿಂದ ಅದರ ಬಗ್ಗೆ ಸದ್ಯಕ್ಕೆ ಚಿಂತನೆ ಮಾಡುವುದು ಬೇಡವೆಂದು ಅದು closed chapter ಆಗಿದೆ ಅದನ್ನು ಪುನ ನಾವು ಕೆದಕಿದರೆ, ನೀವು ಅಲ್ಲಿ session ಮಾಡಲು ಈಗಾಗಲೇ 250 ಕೋಟಿ ಇಡುತ್ತಿದ್ದೀರಿ, ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೀರಿ, ಪುನ ಅದನ್ನು ಮಾಡತ್ತೇವೆಂದರೆ, ಒಂದನ್ನು ಮಾಡಲು ಹೋಗಿ ಮತ್ತೊಂದು ಕೆಡಬಾರದು ಅದಕ್ಕಾಗಿ ದಯವಿಟ್ಟು ಅವೆರಡೂ ಈಗಾಗಲೇ ತೀರ್ಮಾನವಾಗಿದೆ ಅದನ್ನು district organization purview ನಿಂದ ಹೊರಗಿಡಿ ಬೇಕಾದರೆ ನೀವು ರಾಮನಗರ ಮತ್ತು ಚಿಕ್ಕಬಳ್ಳಾಪುರದ ಬಗ್ಗೆ ಚಿಂತನೆ ಮಾಡಲು ಸುಬ್ರಮಣ್ಯಂ ಸಮಿತಿ ಮಾಡಿದ್ದೀರಿ ಅದನ್ನು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ಮಾಡಿದ್ದೀರೋ ಹಾಗೆಯೇ ಮಾಡಿದ್ದೀರೋ, executive orderನ್ನು ನಾನು question ಮಾಡುವುದಿಲ್ಲ ಆದರೆ, ರಾಜ್ಯದ ಹಿತದೃಷ್ಟಿಯಿಂದ ಬೆಳಗಾಂ ಆಗಲಿ ಗುಲ್ಬರ್ಗಾ ಆಗಲಿ ಅದರ ಬಗ್ಗೆ ಈಗೇನು ತೀರ್ಮಾನವಾಗಿದೆ ಅದನ್ನು ಮುಂದುವರೆಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಡಾ ವೀರ ಬಸವಂತರೆಡ್ಡಿ ಮುದ್ನಾಳ್ ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದಲ್ಲಿ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಮೊದಲನೆಯ ಎರಡು ಕಮಿಟಿಯವರು reportನ್ನು ಕೊಟ್ಟಮೇಲೆ ಅದನ್ನು ಪುನರ್‌ಪರಿಶೀಲನೆ ಮಾಡಲು ದಯಮಾಡಿ ಹೋಗಬೇಡಿ ಮೊದಲಿನ ಕಮಿಟಿಯಲ್ಲೇನು ಯಾದ್‌ಗೀರ್‌ನ್ನು ಮಾಡಬೇಕೆಂದು ಮಾಡಿದ್ದಾರೆ ಅದನ್ನೇ continue ಮಾಡಬೇಕೆಂದು ವಿನಂತಿಸುತ್ತೇನೆ

ಶ್ರೀ ನರಸಿಂಹ ನಾಯಕ್ ಸಗರನಾಡಿನ ರಾಜಧಾನಿ ಸುರ್‌ಪುರ್, ಆದ್ದರಿಂದ ಸುರ್‌ಪುರ್‌ನ್ನು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಖರ್ಗೆ ಸಾಹೇಬರು ಸ್ವಲ್ಪ ಪಕ್ಕದಲ್ಲೇ ಇರುವುದರಿಂದ ಅವರು ತಮಗಿಂತ ನಮಗೆ ಹೆಚ್ಚು ಆಶೀರ್ವಾದ ಮಾಡಿದರೆ ಬಹಳ ಅನುಕೂಲವಾಗುತ್ತದೆ ಆದ್ದರಿಂದ ಖರ್ಗೆ ಸಾಹೇಬರು, ಧರ್ಮಸಿಂಗ್ ಸಾಹೇಬರು, ವೀರ ಬಸವಂತರೆಡ್ಡಿ ಸಾಹೇಬರು, ದರ್ಶನಾಪುರ್ ಸಾಹೇಬರು ಕಲೆತು ಸುರ್‌ಪುರ್‌ನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಎ ಬಿ ಪಾಟಿಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಹಾಗು ವಾಟಾಳ್ ನಾಗರಾಜ್‌ರವರು ಇವತ್ತು ಬೆಳಗಾಂ ಬಗ್ಗೆ ಹೇಳಿದರು ಆಗ ಮೂರು ಜಿಲ್ಲೆಗಳಲ್ಲಿ ಮಾಡಬೇಕೆಂದು ಒತ್ತಾಯ ಬಂದಿತ್ತು ರಾಷ್ಟ್ರೀಯ ಒತ್ತಡ ಮೂರು ಜಿಲ್ಲೆಗಳಲ್ಲಿ ಮಾಡಬೇಕೆಂದು ಬಂದಿತ್ತು ಆಗ ನಾವೆಲ್ಲರೂ ಅದನ್ನು ವಿರೋಧ ಮಾಡಿದೆವು ಏಕೆಂದರೆ, ಮಹಾರಾಷ್ಟ್ರ ಏಕೀಕರಣ ಮರಾಠಿ ಭಾಷಿಕರು ಬೆಳಗಾಂ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಲ್ಲಿ ಬರುತ್ತಾರೆ, ಕನ್ನಡದವರು ಎರಡೇ ತಾಲ್ಲೂಕಿನಲ್ಲಿ ಬರುತ್ತಾರೆ ಈ ಉದ್ದೇಶದಿಂದ ಎಲ್ಲವನ್ನೂ cancel ಮಾಡಿದರು ಆದ್ದರಿಂದ ಮಾನ್ಯ ಖರ್ಗೆಯವರು ಹೇಳಿದಂತೆ ಯಾವ ವರದಿ ಬಂದಿದೆ ಅದರ ಆಧಾರದ ಮೇಲೆ ಮಾಡಲು ಅಡ್ಡಿ ಇಲ್ಲ

ಶ್ರೀ ಜಿ ಎಸ್ ಗಡ್ಡದೇವರಮಠ[ಶಿರಹಟ್ಟಿ] – ಮಾನ್ಯ ಆದ್ಯಕ್ಷರೆ, ಒಂದೇ ಒಂದು clarification ಕೇಳಿ ಬಿಡುತ್ತೇನೆ ಈಗ ಇಲ್ಲಿ ಜಿಲ್ಲೆ re-organisation ಬಗ್ಗೆ ಚರ್ಚೆ ನಡೆದಿದೆ Delimitation ಗೋಸ್ಕರ ತಾಲ್ಲೂಕು ಮತ್ತು ಜಿಲ್ಲೆಗಳ ಪುನರ್ ವಿಂಗಡಣೆ ಕಾರ್ಯ ತಡೆಹಿಡಿಯಲಾಗಿದೆ ಎಂದು ನಾವು ತಿಳಿಕೊಂಡಿದ್ದೆವು ಈಗ ಜಿಲ್ಲೆಗಳ ಪುನರ್ ವಿಂಗಡಣೆ ಬಗ್ಗೆ ಚಿಂತನೆ ಇದ್ದರೆ ತಾಲ್ಲೂಕು ಪುನರ್ ವಿಂಗಡಣೆ ಬಗ್ಗೆ ಕೂಡ ವಿಚಾರ ಮಾಡಬೇಕು ತಾಲ್ಲೂಕು re-organisationನಲ್ಲಿ ನಮ್ಮ ತಾಲ್ಲೂಕಿನ ವಿಚಾರ ಕೂಡ ಇದೆ ಈ ಬಗ್ಗೆ ಸದನದಲ್ಲಿರುವ ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ ಮಾನ್ಯ ಸಚಿವರಿಗೆ ಗೊತ್ತಿರುವಂತೆ ಹಳೆಯ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರವನ್ನು ಹೊಸ ತಾಲ್ಲೂಕನ್ನಾಗಿ ಮಾಡುವ ಬಗ್ಗೆ ವಿಶೇಷವಾಗಿ ಪ್ರಯತ್ನ ನಡೆದಿದೆ ಈಗಾಗಲೇ ಅಲ್ಲಿಗೆ ಒಬ್ಬ

Special Tahasildar ರವರ ನೇಮಕ ಕೂಡ ಆಗಿದೆ Delimitation ಆದಮೇಲೆ ತಾಲ್ಲೂಕುಗಳ re-organisation ನಡೆಯುತ್ತದೆ ಎಂದು ನಾವು ಜನರಿಗೆ ಹೇಳುತ್ತಿದ್ದೇವೆ ಆದರೆ ಈಗ ಇಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆ ಬಗ್ಗೆ ಚರ್ಚೆ ನಡೆದಿದೆ Delimitation ಆಗುವವರೆಗೂ ತಾಲ್ಲೂಕು ಅಥವಾ ಜಿಲ್ಲೆಗಳ re-organisation ಆಗುತ್ತದೋ ಇಲ್ಲವೋ ಎಂಬ ಒಗ್ಗೆ ಮಾನ್ಯ ಸಚಿವರು clarify ಮಾಡಬೇಕೆಂದು ಕೋರುತ್ತೇನೆ

ಅಧ್ಯಕ್ಷರು – ಮಾನ್ಯ ಕಂದಾಯ ಸಚಿವರು ಉತ್ತರ ಕೊಡಿ

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಖರ್ಗೆಯವರು ಮತ್ತು ಇನ್ನಿತರ ಶಾಸಕರು ಜಿಲ್ಲಾ ಪುನರ್ ವಿಂಗಡಣೆ ಬಗ್ಗೆ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಬೆಳಗಾಂ, ಗುಲ್ಬರ್ಗಾ ಹಾಗೂ ಬೆಂಗಳೂರು [ಗ್ರಾಮಾಂತರ] ಈ ಮೂರು ಜಿಲ್ಲೆಗಳಲ್ಲಿ ಹೊಸದಾಗಿ ಜಿಲ್ಲೆಗಳನ್ನು ಮಾಡಬೇಕೆಂದು ಕೆಲವೊಂದು ಅಭಿಪ್ರಾಯಗಳು ಬಂದ ಹಿನ್ನಲೆಯಲ್ಲಿ ಇವತ್ತು ಹೊಸದಾಗಿ ಕಮಿಟಿಯನ್ನು ನಾವು ನೇಮಕ ಮಾಡಿದ್ದೇವೆ ಬೆಳಗಾಂನಲ್ಲಿ ರಾಜಕೀಯ ಹಿನ್ನೆಲೆ ಕಾರಣ ಮತ್ತು ಗುಲ್ಬರ್ಗಾದಲ್ಲಿ ಹಿಂದೆ ಇದ್ದಂತಹ ಕಮಿಟಿಗಳು ಅಲ್ಲಿ ಮಾಡಬಾರದು ಎಂದು ಹೇಳಿದ್ದರ ಹಿನ್ನೆಲೆಯಲ್ಲಿ ಹಿಂದಿದ್ದ ಸರ್ಕಾರಗಳು ಅಲ್ಲಿ ಪುನರ್ ವಿಂಗಡಣೆ ಮಾಡುವ ಅವಶ್ಯಕತೆ ಇಲ್ಲವೆಂದು ಕೈಬಿಟ್ಟಿದ್ದವು ಇದರ ಬಗ್ಗೆ ಪರಿಶೀಲನೆ ಮಾಡುವ ಸಲುವಾಗಿ ಈ ಒಂದು ಕಮಿಟಿಯನ್ನು ಹೊಸದಾಗಿ ನಾವು ನೇಮಕ ಮಾಡಿದ್ದೇವೆ ಕ್ಯಾಬಿನೆಟ್‌ನಲ್ಲಿ ಆ ಬಗ್ಗೆ ಚರ್ಚೆ ಮಾಡಿ, cabinet approval ತೆಗೆದುಕೊಂಡೇ ಆ ಕಮಿಟಿಯನ್ನು ನಾವು formulate ಮಾಡಿದ್ದೇವೆ ಆ ಕಮಿಟಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡುತ್ತದೆ ಆ ವರದಿ ಬಂದ ಮೇಲೆ, ಅಲ್ಲಿ district ಮಾಡಬೇಕೋ, ಬೇಡವೋ ಎಂಬ ಬಗ್ಗೆ ಸರ್ಕಾರವೇ ನಿರ್ಣಯ ತೆಗೆದುಕೊಳ್ಳುತ್ತದೆ ಆ ಕಮಿಟಿಯನ್ನು ಅಧ್ಯಯನ ಮಾಡಲಿಕ್ಕಾಗಿ ಮಾತ್ರ ನಾವು ರಚಿಸಿದ್ದೇವೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಬೆಳಗಾಂ ಮತ್ತು ಗುಲ್ಬರ್ಗಾ ಎರಡರ ಬಗ್ಗೆಯೂ ಅಧ್ಯಯನ ಮಾಡಿ ಮೂರು ಕಮಿಟಿಗಳು ಈಗಾಗಲೇ reports ಕೊಟ್ಟಿವೆ ಆ reports ಆಧಾರದ ಮೇಲೆಯೇ ಹಾವೇರಿ, ಗದಗ್, ದಾವಣಗೆರೆ, ಚಾಮರಾಜನಗರ, ಕೊಪ್ಪಳ ಇತ್ಯಾದಿ 5-6 ಜಿಲ್ಲೆಗಳನ್ನು ಹೊಸದಾಗಿ ರಚಿಸಲಾಯಿತು ಈ ಎರಡು ಜಿಲ್ಲೆಗಳ ಪುನರ್ ವಿಂಗಡಣೆ ಸಹ ಆಗ ಆಗುವುದರಲ್ಲಿತ್ತು ನಾವಿಬ್ಬರೂ ಕಚ್ಚಾಡಿಕೊಂಡು ಕುಳಿತಿದ್ದರಿಂದ ಅದು ಮುಂದಕ್ಕೆ ಹೋಯಿತು

ಶ್ರೀ ವಾಟಾಳ್ ನಾಗರಾಜ್ – ಗದ್ದಿಗೌಡರ್ ಮತ್ತು ಹುಂಡೇಕಾರ್ ಸಮಿತಿಗಳು ಈಗಾಗಲೇ ತೀರ್ಮಾನ ಮಾಡಿದ್ದಾರೆ ನೀವು ಗುಲ್ಬರ್ಗಾ ಬಗ್ಗೆ

ತೀರ್ಮಾನ ತೆಗೆದುಕೊಳ್ಳಬೇಕಾಗಿಲ್ಲ ಬೇಕಾದರೆ ನೀವು ರಾಮನಗರ, ಚಿಕ್ಕಬಳ್ಳಾಪುರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ವಿರಾಮವಾಗಿದ್ದರೆ, ಅವರನ್ನು ಅಧ್ಯಯನ ಮಾಡುವ ಸಲುವಾಗಿ ತುಮಕೂರಿಗೆ ಕಳುಹಿಸಿ ಅವರು ಬೇಡ ಎಂದರೂ ಅವರನ್ನು ಅಲ್ಲಿಗೆ ಏಕೆ ಕಳುಹಿಸುತ್ತೀರಿ? ಹುಂಡೇಕಾರ್ ಕಮಿಟಿಯಲ್ಲಿ ತುಮಕೂರು ಕೂಡ ವಿಭಾಗವಾಗಬೇಕೆಂದು ಶಿಫಾರಸ್ಸು ಮಾಡಲಾಗಿದೆ ದಯಮಾಡಿ ಅದನ್ನು ಸೇರಿಸಿ ಮಾಡಬೇಕು

ಶ್ರೀ ಜಗದೀಶ್ ಶೆಟ್ಟರ್ – ಆಯಿತು ಮಾನ್ಯ ಮಾಧುಸ್ವಾಮಿಯವರು ತುಮಕೂರು ಬಗ್ಗೆ ಹೇಳಿದ್ದಾರೆ ಆ ಕಮಿಟಿ ಅದರ ಬಗ್ಗೆಯೂ ಕೂಡ ಪರಿಶೀಲನೆ ಮಾಡಲಿಕ್ಕೆ ನಾವು ಸಜೆಸ್ಟ್ ಮಾಡುತ್ತೇವೆ

ಶ್ರೀ ವಾಟಾಳ್ ನಾಗರಾಜ್ – ಬೆಳಗಾಂ ಜಿಲ್ಲೆ ಪುನರ್‌ವಿಂಗಡಣೆ ಕಾರ್ಯ ಮಾಡಬೇಡಿ

ಶ್ರೀ ಜಗದೀಶ್ ಶೆಟ್ಟರ್ – ಕಮಿಟಿ ವರದಿ ಕೊಡುತ್ತದೆ ಅದರ ಬಗ್ಗೆ ಮುಂದೆ ಸರ್ಕಾರ ಅಂತಿಮವಾಗಿ ನಿರ್ಣಯ ಕೈಗೊಳ್ಳುತ್ತದೆ

ಶ್ರೀ ವಾಟಾಳ್ ನಾಗರಾಜ್ – ಗುಲ್ಬರ್ಗಾ ಮತ್ತು ಬೆಳಗಾಂ ಎರಡರ ಬಗ್ಗೆಯೂ ಸಹ ವರದಿ ಕೊಟ್ಟಿದ್ದಾರೆ ವರದಿ ಕೊಟ್ಟಿದ್ದರೂ ಕೂಡ ಬೆಳಗಾಂ ಜಿಲ್ಲೆ ಬಗ್ಗೆ ನೀವು ಮುಟ್ಟುವುದಕ್ಕೆ ಹೋಗಬೇಡಿ ಗುಲ್ಬರ್ಗಾಕ್ಕೆ ಬೇಕಾದರೆ ನೀವು ಮಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಜಗಳಕ್ಕೆ cause of action ಆಗುತ್ತದೆ ಆಗ objection call ಮಾಡುತ್ತಿರಿ ಅದಾದ ಮೇಲೆ ಮತ್ತೆ ಅನವಶ್ಯಕವಾಗಿ ಘರ್ಷಣೆಗಳು ಶುರುವಾಗುತ್ತವೆ ಯಾವ ಸಮಸ್ಯೆಗಳು ಈಗಾಗಲೇ ಬಗೆಹರಿದಿವೆಯೋ, ಪುನ ಅವುಗಳನ್ನು ನಾವು ಏಕೆ invite ಮಾಡಿಕೊಳ್ಳಬೇಕು?

ಶ್ರೀ ಜಗದೀಶ್ ಶೆಟ್ಟರ್ – ಆಯಿತು ತಮ್ಮ ಅಭಿಪ್ರಾಯಗಳನ್ನು ನಾವು ಪರಿಶೀಲನೆ ಮಾಡಿಕೊಂಡು, ಅದರ ಬಗ್ಗೆ ಒಂದು ಯೋಗ್ಯವಾದಂತಹ ನಿರ್ಣಯವನ್ನು ಕೈಗೊಳ್ಳುತ್ತೇವೆ ಮಾನ್ಯ ಮಾಧುಸ್ವಾಮಿಯವರು ತುಮಕೂರು ಬಗ್ಗೆ ಹೇಳಿದ್ದಾರೆ

ಶ್ರೀ ವಾಟಾಳ್ ನಾಗರಾಜ್ – ಇದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಮಾತ್ರ ಹೇಳುತ್ತಿಲ್ಲ ತುಮಕೂರುನ್ನು ಸೇರಿಸಿ ಎಂದು ನಾನೂ ಕೂಡ ಹೇಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ – ಆಯಿತು, ಮಾನ್ಯ ವಾಟಾಳ್ ನಾಗರಾಜ್‌ರವರೂ ಸಹ ತುಮಕೂರು ಬಗ್ಗೆ ಹೇಳಿದ್ದಾರೆ ಆ ಒಂದು ಜಿಲ್ಲೆ ಬಗ್ಗೆಯೂ ಪರಿಶೀಲನೆ ಮಾಡಲಿಕ್ಕೆ ಕಮಿಟಿಗೆ ನಾವು ತಿಳಿಸುತ್ತೇವೆ

ಶ್ರೀ ವಾಟಾಳ್ ನಾಗರಾಜ್ – ಗುಲ್ಬರ್ಗಾಕ್ಕೆ ಮತ್ತೆ ಹೋಗಬಾರದು ಈಗಾಗಲೇ ಅದರ ಬಗ್ಗೆ ವರದಿ ಇದೆ ಅದನ್ನು ನೀವು ಮತ್ತೆ ನೋಡಬೇಡಿ ಬೆಳಗಾಂ ಬಗ್ಗೆಯೂ ವರದಿ ಇದೆ ಅದನ್ನು ನೀವು ಮುಟ್ಟಲಿಕ್ಕೇ ಹೋಗಬೇಡಿ

ಶ್ರೀ ಜಗದೀಶ್ ಶೆಟ್ಟರ್ – Ok, Ok

ಶ್ರೀ ವಾಟಾಳ್ ನಾಗರಾಜ್ – ಇನ್ನು ತುಮಕೂರು ಬಗ್ಗೆ ನೀವು ಮಾಡಿ ನಾವು ಮಾಧುಸ್ವಾಮಿಯವರ ಪರವಾಗಿದ್ದೇವೆ

ಅಧ್ಯಕ್ಷರು – ಮಾನ್ಯ ಸಚಿವರು ನಿಮ್ಮೆಲ್ಲರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾರೆ ಬಿಡಿ

[ಗೊಂದಲ]

ಮಾನ್ಯ ಯಡಿಯೂರಪ್ಪನವರು ಇಂದು ಮಧ್ಯಾಹ್ನ ಒಂದೂವರೆ ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟ ಏರ್ಪಾಡು ಮಾಡಿದ್ದಾರೆ ತಾವೆಲ್ಲರೂ ಅಲ್ಲಿಗೆ ದಯಮಾಡಿಸಬೇಕೆಂದು ಅವರು ವಿನಂತಿ ಮಾಡಿದ್ದಾರೆ

ಈ ಸದನವನ್ನು ಮಧ್ಯಾಹ್ನ 3 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

[ಸದನವನ್ನು ಮಧ್ಯಾಹ್ನ 1 55ಗಂಟೆಗೆ ಮುಂದೂಡಲಾಯಿತು ಸದನವು ಪುನ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು]

(ಸದನವು ಬೋಜನ ವಿರಾಮದ ನಂತರ ಪುನ 3 ಗಂಟೆ 12 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

3 ಹೇಳಿಕೆ

ವಿಷಯ ರೈತರ ಸಾಲ ಮನ್ನಾ ಮಾಡುವ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) ರಾಜ್ಯದ ಕೃಷಿಯು 2006–07ರ ಸಾಲಿನಲ್ಲಿ ಬರ ಮತ್ತು ಪ್ರವಾಹಕ್ಕೆ ತುತ್ತಾಗಿ ರೈತರು ತೀವ್ರ ತೊಂದರೆಗೊಳಗಾಗಿದ್ದಾರೆ ಸರ್ಕಾರವು ರೈತರ ಸಂಕಷ್ಟಕ್ಕೆ ಸ್ಪಂದಿಸಿ ಅವರು ಸಹಕಾರ ಸಂಸ್ಥೆಗಳಿಂದ ಪಡೆದಿರುವ ಬೆಳೆ ಸಾಲವನ್ನು ಮನ್ನಾ ಮಾಡಲು ನಿರ್ಧರಿಸಿ ಈಗಾಗಲೇ 2007–08ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಕಟಿಸಲಾಗಿದೆ

1–4–2006 ರಿಂದ 31–12–2006ರ ತನಕ 25 ಸಾವಿರ ರೂಪಾಯಿಗಳವರೆಗೆ ಪಡೆಯಲಾದ ಬೆಳೆಸಾಲವನ್ನು ಬಡ್ಡಿ ಸಹಿತ ಸಂಪೂರ್ಣ ಮನ್ನಾ ಮಾಡಲು ತೀರ್ಮಾನಿಸಲಾಗಿತ್ತು

25 ಸಾವಿರ ರೂ ಗಳಿಗಿಂತ ಮೇಲ್ಪಟ್ಟು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪಡೆದಿರುವ ರೈತರು ದಿನಾಂಕ 31–3–2007ರ ಒಳಗೆ ಪಾವತಿ ಮಾಡಿದರೆ ಆ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಇದೇ ರೀತಿ ಅಲ್ಪಾವದಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪಡೆದು ಸುಸ್ತಿದಾರರಾಗಿರುವ ರೈತರು ಆ ಸಾಲಗಳ ಅಸಲನ್ನೂ ಕೂಡ 31–3–2007ರ ಒಳಗೆ

ಪಾವತಿಸಿದರೆ ಅವರಿಗೂ ಕೂಡ ಬಡ್ಡಿ ಮನ್ನಾ ಸೌಲಭ್ಯವನ್ನು ವಿಸ್ತರಿಸಲು ನಿರ್ಧರಿಸಲಾಗಿತ್ತು

ಇದರಿಂದ ಸರ್ಕಾರಕ್ಕೆ ಸುಮಾರು 1,500 ಕೋಟಿ ರೂ ಗಳ ಹೊರೆಯಾಗಲಿದ್ದು ಬೆಳವಿಮೆ ಹಾಗೂ ಇತರ ಮೂಲಗಳಿಂದ ಹಣ ಬಂದಾಗ್ಯೂ ಸುಮಾರು 1300 ಕೋಟಿ ರೂ ಗಳ ಹೊರೆಯನ್ನು ಸರ್ಕಾರ ಭರಿಸಬೇಕಾಗುತ್ತದೆ ಸರ್ಕಾರದ ಈ ರಿಯಾಯಿತಿ ಕ್ರಮವನ್ನು ರೈತರು ರೈತ ಸಂಘಟನೆಗಳು, ರೈತಪರ ಸಂಸ್ಥೆಗಳು, ಪ್ರಜ್ಞಾವಂತ ಜನತೆ ಮತ್ತು ಕೃಷಿ ಅಭಿವೃದ್ಧಿ ಬಗ್ಗೆ ಆಸಕ್ತಿಯುಳ್ಳ ಪ್ರತಿಯೊಬ್ಬರೂ ಮೆಚ್ಚಿಕೊಂಡು ಸ್ವಾಗತಿಸಿದ್ದಾರೆ

ಮುಂಗಡ ಪತ್ರದ ಮಂಡನೆಯ ನಂತರ ಹಲವು ಸ್ಥರಗಳಲ್ಲಿ ಈ ಬಗ್ಗೆ ಆಳವಾದ ಚರ್ಚೆಗಳು ಜರುಗಿರುವುದನ್ನು ಮಾಧ್ಯಮಗಳು ಬಿಂಬಿಸಿವೆ ಇದನ್ನು ನಾನು ಗಮನಿಸಿದ್ದೇನೆ ಸಾಲ ಮನ್ನಾ ಸೌಲಭ್ಯ ಸಂಬಂಧ ಕೆಲವರು 25 ಸಾವಿರ ರೂ ಗಳ ಮಿತಿಯನ್ನು ವಿಸ್ತರಿಸುವ ಬಗ್ಗೆ ಪ್ರತಿಪಾದಿಸಿದ್ದಾರೆ ರೈತರು ಎದುರುಸುತ್ತಿರುವ ಸಂಕಷ್ಟಗಳನ್ನು ನಾನು ಬಲ್ಲೆ ರೈತನ ಮಗನಾಗಿ ಮತ್ತು ರೈತಪರ ಹೋರಾಟಗಾರನಾಗಿ ಸದಬಿಪ್ರಾಯಗಳಿಗೆ ಸಂವೇದನಾಶೀಲತೆಯಿಂದ ಪ್ರತಿಕ್ರಿಯಿಸುವ ಔಚಿತ್ಯವನ್ನು ಅರ್ಥ ಮಾಡಿ ಕೊಂಡಿದ್ದೇನೆ ನಾಡಿನ ಅನ್ನದಾತ ರೈತರಿಗೆ ಎಷ್ಟು ನೆರವು ನೀಡಿದರೂ ಕಡಿಮೆಯೇ ಎಂಬುದು ನನ್ನ ಭಾವನೆ ಅದರೂ ರಾಜ್ಯ ಸರ್ಕಾರದ ಹಣಕಾಸಿನ ಮಿತಿಯೊಳಗೆ ನೆರವು ಕಲ್ಪಿಸುವುದು ವಿತ್ತೀಯ ಶಿಸ್ತಿನ ದೃಷ್ಟಿಯಿಂದ ಅನಿವಾರ್ಯವಾಗುತ್ತದೆ

ಪ್ರಸ್ತುತ ರಾಜ್ಯದ ರೈತರು ಎದುರಿಸುತ್ತಿರುವ ಬರ ಮತ್ತಿತರ ಸಂಕಷ್ಟಗಳನ್ನು ಪರಿಗಣಿಸಿ 1–2–2006 ರಿಂದಲೇ ಅನ್ವಯವಾಗುವಂತೆ ಸಹಕಾರಿ ಸಂಸ್ಥೆಗಳಲ್ಲಿ 50 ಸಾವಿರ ರೂ ಗಳ ವರೆಗ ಬೆಳೆ ಸಾಲ ಪಡೆದಿರುವ ಎಲ್ಲಾ ರೈತರಿಗೂ 25 ಸಾವಿರ ರೂ ಗಳ ಮಿತಿಗೊಳಪಟ್ಟು ಸಾಲ ಮನ್ನಾ ಸೌಲಭ್ಯವನ್ನು ವಿಸ್ತರಿಸಲು ನಿರ್ಧರಿಸಿದ್ದೇನೆ ಈ ಸೌಲಭ್ಯ ನೇಕಾರರಿಗೂ ಹಾಗೂ ಮೀನುಗಾರರಿಗೂ ಕೂಡ ದೊರೆಯಲಿದೆ

50 ಸಾವಿರ ರೂ ಗಳ ವರೆಗೆ ಸಾಲ ಪಡೆದಿರುವ ರೈತರು 31–3–2007ರ ಒಳಗೆ 25 ಸಾವಿರ ರೂ ಗಳ ಅಸಲನ್ನು ಬಡ್ಡಿ ರಹಿತವಾಗಿ ಪಾವತಿಸಿದರೆ ಉಳಿದ 25 ಸಾವಿರ ರೂ ಗಳ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಲಾಗುವುದು

ಸರ್ಕಾರದ ಈ ಕ್ರಮದಿಂದಾಗಿ 25 ಸಾವಿರ ರೂ ಗಳ ವರೆಗೆ ಸಾಲ ಪಡೆದಿರುವ 5 95 962 ಮಂದಿ ರೈತರಿಗೆ ಸಾಲ ಮತ್ತು ಬಡ್ಡಿ ಸಹಿತ ಪೂರ್ಣ ಮನ್ನಾ ಸೌಲಭ್ಯ ದೊರೆಯಲಿದೆ 25 ರಿಂದ 50 ಸಾವಿರ ರೂ ಗಳ ವರೆಗೆ ಸಾಲ ಪಡೆದಿರುವ 1,18 076 ಮಂದಿ ರೈತರಿಗೂ ಇದೇ ಸೌಲಭ್ಯ ದೊರೆಯುತ್ತದೆ 50 ಸಾವಿರ ರೂ ಮೇಲ್ಪಟ್ಟು ಸಾಲ ಪಡೆದಿರುವ 1,16,012 ರೈತರಿಗೆ ಮತ್ತು 4 9 ಲಕ್ಷ ಮಂದಿ ಸುಸ್ತಿದಾರ ರೈತರಿಗೆ ಬಡ್ಡಿ ಮನ್ನಾ ಸೌಲಭ್ಯ ದೊರೆಯಲಿದೆ ಅಂದರೆ

ಸಾಲಮನ್ನಾ ಮತ್ತು ಬಡ್ಡಿಮನ್ನಾ ಸೇರಿ ಒಟ್ಟು 13,63,850 ಮಂದಿ ರೈತರಿಗೆ ಅನುಕೂಲವಾಗಲಿದೆ

ಸರ್ಕಾರ ತೆಗೆದುಕೊಂಡಿರುವ ಈ ದಿಟ್ಟ ನಿಲುವಿನಿಂದ ಸುಮಾರು 1950 ಕೋಟಿ ರೂ ಗಳ ಹೊರೆಯಾಗಲಿದೆ ಇದನ್ನು ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿ ಮತ್ತು ಸಂಪನ್ಮೂಲ ಸಂಗ್ರಹಣೆಯನ್ನು ಸುಧಾರಿಸಿ ಭರಿಸಿಕೊಳ್ಳಲಾಗುವುದು

ಒಟ್ಟಿನಲ್ಲಿ ನಾಡಿನ ಅನ್ನದಾತ ರೈತನಿಗೆ ಕೊಟ್ಟ ಭರವಸೆಯನ್ನು ನೆರವೇರಿಸಲು ಸರ್ಕಾರ ಬದ್ಧವಾಗಿ ನುಡಿದಂತೆ ನಡೆದುಕೊಂಡಿದೆ ಎಂದು ಗೌರವಾನ್ವಿತ ಸದನದ ಗಮನಕ್ಕೆ ತರಬಯಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾಡುವುದು ಮಾಡಿದ್ದೀರಿ, 50,000 ಮಿತಿ ಏಕೆ ಹಾಕುತ್ತಿದ್ದೀರಿ, ಒಂದು ಲಕ್ಷ ರೂಪಾಯಿ ಸಾಲ ತಗೆದುಕೊಂಡಿರುವವರಿಗೂ 25,000 ರೂಪಾಯಿ consession ಕೊಟ್ಟು ಬಿಡಿ 25,000 ಇದ್ದುದು 50,000 ರೂಪಾಯಿಗೆ ತೆಗೆದುಕೊಂಡು ಹೋಗಿದ್ದೀರಿ ಎಷ್ಟೇ ಇರಲಿ 25,000 ರೂಪಾಯಿ ತಾನೆ, ತಾವು ಮನ್ನ ಮಾಡುವುದು ಎಲ್ಲ ರೈತರಿಗೂ 25,000 ರೂಪಾಯಿ ಕೊಡುವಂತಹ ತೀರ್ಮಾನ ತೆಗೆದುಕೊಳ್ಳಿ ದಯವಿಟ್ಟು

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೆ, ಎಲ್ಲ ರೈತರಿಗೂ 25,000 ರೂಪಾಯಿ ಕೊಟ್ಟುಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ಬಡ ರೈತರೆಲ್ಲಾ ಹಾಳಾಗಿರುವುದು ದೊಡ್ಡ ರೈತರಿಂದಲೇ, 25,000 ರೂಪಾಯಿಯ ಮಿತಿ ಅವರಿಗೂ ಹೋಗಲಿ ಒಂದು ಲಕ್ಷ ಸಾಲ ಇರುವವರಿಗೂ 25,000 ರೂಪಾಯಿ ಮನ್ನ ಮಾಡಲಿ ಏನಾಗುತ್ತದೆ? ಮಾನ್ಯ ಹಣಕಾಸಿನ ಸಚಿವರು ದೊಡ್ಡ ಮನಸ್ಸು ಮಾಡಬೇಕು ಸಹಕಾರ ಸಂಘದವರು ಒಂದು ಲಕ್ಷ ರೂಪಾಯಿಗಿಂತ ಜಾಸ್ತಿ ಯಾರಿಗೂ ಸಾಲ ಕೊಡುವುದಿಲ್ಲ 25,000 ಲವರಿಗೂ ಮನ್ನ ಮಾಡಿ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಎಲ್ಲ ರೈತರಿಗೂ 25,000 ರೂಪಾಯಿ ಮನ್ನ ಮಾಡಿದ್ದೀರಿ ಮಾನ್ಯ ಯಡಿಯೂರಪ್ಪನವರೇ ನಿಮಗೆ ಒಳ್ಳೆಯ ಹೆಸರು ಬರುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾಡುವುದು ಒಳ್ಳೆಯ ಕೆಲಸ ಮಾಡಿದ್ದೀರಿ ಇನ್ನು ಸ್ವಲ್ಪದರಲ್ಲಿ 50,000 ರೂಪಾಯಿಗಳವರೆಗೆ ತಂದಿದ್ದೀರಿ ಒಂದು ಲಕ್ಷ ರೂಪಾಯಿಯವರಿಗೂ ಕೊಡಿ ರೈತ ಒಂದು ಲಕ್ಷ ರೂಪಾಯಿ ಹಣ ಹಾಕಿ ಮನೆ ಹಾಳು ಮಾಡಿಕೊಂಡಿರುತ್ತಾನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ 31 3 07 ಎಂದರೆ ಇನ್ನು 10 ದಿವಸ ಮಾತ್ರ ಇದೆ ದಯವಿಟ್ಟು ತಾವು ಆಲೋಚನೆ ಮಾಡಬೇಕು 31 3 07 ಎಂದರೆ ಇನ್ನು 10 ದಿವಸಗಳು ಮಾತ್ರ ಉಳಿದಿವೆ ಅದು ಆಗುವುದಿಲ್ಲ ದಯವಿಟ್ಟು ಮೇ 31ರವರೆಗೆ

ಕಾಲಾವಕಾಶ ಕೊಡಿ ರೈತರ ಹತ್ತಿರ ಹಣ ಇಲ್ಲ ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು 31ರವರೆಗೆ ಸಮಯ ಬೇಡ ಮೇ 31ರವರೆಗೆ ವಿಸ್ತರಿಸಿ ಒಂದು ಲಕ್ಷ ರೂಪಾಯಿವರೆಗೂ ಎಲ್ಲ ರೈತರಿಗೂ 25,000 ರೂಪಾಯಿ ಮನ್ನ ಮಾಡಿ

ಶ್ರೀ ಭೋಸರಾಜ್ – ಮಾನ್ಯಅಧ್ಯಕ್ಷರೆ, ಸಾಲಪಡೆಯತಕ್ಕಂಥಾದ್ದು ಮತ್ತು ಸಾಲವನ್ನು ತೀರಸತಕ್ಕಂಥದ್ದು ಸಾಮಾನ್ಯವಾಗಿ ಏಪ್ರಿಲ್ ಮೇ ನಂತರ ಮಳೆ ಬಂದು ನೀರು ಬಂದ ನಂತರವೇ, ಆದ್ದರಿಂದ ಸಾಲ ತೀರಿಸಲು ಜೂನ್‌ವರೆಗೂ ಅವಕಾಶ ಕೊಟ್ಟರೆ ಮಾತ್ರ ರೈತರಿಗೆ ಅನುಕೂಲವಾಗುವುದು ಅದನ್ನು ಬಿಟ್ಟು ಮಾರ್ಚ್ 31ರೊಳಗೆ ಎಂದರೆ ಯಾವ ಭಾಗದಲ್ಲೂ ಕೂಡ ಹಾರ್ವೆಸ್ಟ್ ಈ ಸಮಯದಲ್ಲಿ ಆಗುವುದಿಲ್ಲ ಆದುದರಿಂದ ಈ ಅವಧಿಯನ್ನು ಇನ್ನೂ ಮೂರು ತಿಂಗಳುಗಳವರೆಗೂ ವಿಸ್ತರಿಸಿ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತಿದ್ದೇನೆ

ಶ್ರೀ ಸಿದ್ದು ಸವದಿ – ಎಲ್ಲ ರೈತರಿಗೂ 25 ಸಾವಿರ ರೂಪಾಯಿ ಮನ್ನಾ ಮಾಡಬೇಕು ಯಾರು ಯಾರು ಸಹಕಾರಿ ಸಾಲವನ್ನು ಪಡೆದಿದ್ದಾರೆ ಅವರೆಲ್ಲರಿಗೂ 25 ಸಾವಿರ ಮನ್ನಾ ಮಾಡಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು) – ಮಾನ್ಯ ಅಧ್ಯಕ್ಷರೆ, ರೈತರ ಸಂಕಷ್ಟ ಗೊತ್ತಿರುವಂಥ ಹಣಕಾಸಿನ ಸಚಿವನಾದ ಈ ಯಡಿಯೂರಪ್ಪ ಕಳೆದ ಮೂವತ್ತು ವರ್ಷದಿಂದ ಈ ರೈತ ಸಮೂಹ ನೆಮ್ಮದಿಯಿಂದ, ಗೌರವದಿಂದ ಬದುಕಬೇಕು ಎನ್ನುವುದಕ್ಕೆ ಹೋರಾಟ ಮಾಡಿಕೊಂಡು ಬಂದವನು ಈ ನಾಡಿನ ಜನರ ಆಶೀರ್ವಾದದಿಂದ ಈ ಸ್ಥಾನದಲ್ಲಿ ನಿಂತಾಗ ಈ ದೇಶದಲ್ಲಿಯೇ ಮೊದಲ ಬಾರಿಗೆ 4% ಬಡ್ಡಿಗೆ ರೈತರಿಗೆ ಸಾಲ ಕೊಡುವಂಥ ಒಂದು ಐತಿಹಾಸಿಕ ನಿರ್ಧಾರವನ್ನು ಕಳೆದ ವರ್ಷದ ಆಯವ್ಯಯದಲ್ಲಿ ನಾವು ತೆಗೆದುಕೊಂಡೆವು ಈಗ ನಾವು ಚರ್ಚೆ ಮಾಡುವಂಥ ಕಾಲದಲ್ಲಿ ನಾವು 01 04 86 ರಿಂದ ಯಾರು ಸಾಲವನ್ನು ಪಡೆದಿದ್ದಾರೆ ಅವರಿಗೆ 25 ಸಾವಿರದವರೆಗೂ ಮನ್ನಾ ಮಾಡುತ್ತೇವೆ ಉಳಿದ ಹಣವನ್ನು ಅಲ್ಪಾವದಿ, ಮಧ್ಯಮಾವಧಿ, ದೀರ್ಘಾವಧಿ, ಎಲ್ಲಾ ಸಾಲಕ್ಕೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಆಯವ್ಯಯದಲ್ಲಿ ನಾವು ಹೇಳಿದ್ದೆವು ಕೆಲವರು ಹೇಳಿದರು, ಧಾರವಾಡ ಮತ್ತು ಆ ಭಾಗದಲ್ಲಿ ಫೆಬ್ರವರಿಯಲ್ಲಿಯೇ ನಾವು ಬುಕ್ ಅಡ್ಜೆಸ್ಟ್‌ಮೆಂಟ್ ಅಥವಾ ಬೇರೆ ರೀತಿ ಸಾಲ ತೆಗೆದುಕೊಂಡು ಕೊಟ್ಟು ವ್ಯವಹಾರವನ್ನು ಮುಗಿಸಿರುತ್ತೇನೆ, ಆದುದರಿಂದ ನಾವು ಫೆಬ್ರವರಿಯಲ್ಲಿ ತೆಗೆದುಕೊಂಡಿರುತ್ತೇವೆ, ನಮಗೆ ಅನುಕೂಲವಾಗುವುದಿಲ್ಲವೆಂದು ಹೇಳಿದ್ದರಿಂದ ಆ ದಿನಾಂಕವನ್ನು 01 04 2006 ರಿಂದ ಎನ್ನುವ ಬದಲಿಗೆ ಇವೊತ್ತು ನಾನು ಇದರ ಬಗ್ಗೆ ಪುನರ್‌ಪರಿಶೀಲನೆಯನ್ನು ಮಾಡಿ 01 02 2006 ಎಂದು ಮಾಡಿದ್ದೇನೆ ಇನ್ನು ಎರಡನೆಯದಾಗಿ 25 ಸಾವಿರದವರೆಗೂ ಸಾಲ ಪಡೆದಂಥವರು, 25 ರಿಂದ 50

ಸಾವಿರದವರೆಗೂ ಸಾಲ ಪಡೆದಂಥವರಿಗೂ 25 ಸಾವಿರದವರೆಗೂ ನಾವು ಅನುಕೂಲ ಮಾಡಿಕೊಟ್ಟಿರುವುದರಿಂದ ಇವೊತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಈ ರಾಜ್ಯದ ರೈತ ಸಮುದಾಯದವರಿಗೆ ಅನುಕೂಲವಾಗಿದೆ ನಾನು ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, 50 ಸಾವಿರಕ್ಕಿಂತ ಮೇಲ್ಪಟ್ಟು 1,16,012 ಜನ ರೈತರು ಇದ್ದಾರೆ ಅವರಿಗೂ ಸಹ ನಾವು ಬಡ್ಡಿ ಮನ್ನಾ ಮಾಡಿದ್ದೇವೆ ಅಂದರೆ ಯಾರು ಎರಡು ಲಕ್ಷ ತೆಗೆದುಕೊಂಡಿದ್ದಾರೆ, ಮೂರು ಲಕ್ಷ ತೆಗೆದುಕೊಂಡಿದ್ದಾರೆ, ಸ್ವಲ್ಪ ಹೆಚ್ಚು ಕಡಿಮೆ ಬಡ್ಡಿ ಮನ್ನಾ ಯೋಜನೆಯಲ್ಲಿಯೇ ಅವನಿಗೆ 15 ರಿಂದ 20 ಸಾವಿರದವರೆಗೂ ಸವಲತ್ತು ಸಿಗುತ್ತದೆ ನಾನು ಹಣಕಾಸಿನ ನಿರ್ವಹಣೆಯನ್ನೂ ಕೂಡ ಮಾಡಬೇಕಾಗುತ್ತದೆ ಬರುವಂಥ ದಿವಸಗಳಲ್ಲಿ ಅನೇಕ ಬೇಡಿಕೆಗಳಿಗೆ ನಾನು ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ ಅದಕ್ಕಾಗಿ ನಾನು ಗೌರವಾನ್ವಿತ ಸದಸ್ಯರಲ್ಲಿ ಹೇಳುತ್ತಿದ್ದೇನೆ, ಆಯವ್ಯಯದ ಮೇಲೆ ಚರ್ಚೆ ಆಗುವುದಕ್ಕಿಂತ ಮುಂಚೆಯೇ ಇವೊತ್ತು ಅನೇಕ ರೈತ ಸಂಘದ ಮುಖಂಡರು ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಿದ್ದನ್ನು ನಾನು ಮನವರಿಕೆ ಮಾಡಿಕೊಂಡ ಮೇಲೆ ಆ ಬಗ್ಗೆ ನಾನು ಮತ್ತು ಮುಖ್ಯಮಂತ್ರಿಗಳು ಚಿಂತನೆಯನ್ನು ಮಾಡಿ ಸುಧೀರ್ಘವಾದ ಚರ್ಚೆಯನ್ನು ಮಾಡಿ, ಮತ್ತೆ ಆಯವ್ಯಯದ ಮೇಲೆ ನಿಮಗೆ ಚರ್ಚೆ ಮಾಡುವುದಕ್ಕೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇವೊತ್ತು ಈ ಅವಧಿಯಲ್ಲಿ 50 ಸಾವಿರದವರೆಗೂ ಪಡೆದಿರುವಂಥ ರೈತರಿಗೆ 25 ಸಾವಿರ ಮನ್ನಾ ಮಾಡುವಂಥಾದ್ದು ಮತ್ತು ಈ ಸಾಲ ಪಡೆದಂದ ಅವಧಿಯನ್ನು ಇವೊತ್ತು 01 04 2006 ಎನ್ನುವುದನ್ನು 01 02 2006 ಎಂದು ನಾನು ಬದಲಾಯಿಸಿದ್ದೇನೆ ಇದರಿಂದ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ಅವೊತ್ತಿನಿಂದ ಇವೊತ್ತಿನವರೆಗೂ ರೈತರ ಸಾಲ ಮನ್ನಾ ಬಗ್ಗೆ ಚರ್ಚೆಯಾದಂಥ ಕಾಲದಲ್ಲಿ ಸೀಮಿತವಾದಂಥ ಒಂದು ಇತಿಮಿತಿಯೊಳಗೆ ಸಹಕಾರಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ ರೈತರು ಸಿದ್ಧರಾಗಿದ್ದಾರೆ ಯಾರು 50 ಸಾವಿರಕ್ಕಿಂತ ಜಾಸ್ತಿ ತೆಗೆದುಕೊಂಡಿದ್ದಾರೆ, ನಾನು ಅತ್ಯಂತ ವಿನಯದಿಂದ ವಿನಂತಿ ಮಾಡುತ್ತೇನೆ, ನಾನು ಬಡವರು, ಶ್ರೀಮಂತರು ಎಂದು ಭೇದಭಾವ ಮಾಡುವುದಕ್ಕೆ ಇಷ್ಟಪಡುವುದಿಲ್ಲವಾದರೂ ಸಹ ನಮ್ಮ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು, ಇವೊತ್ತು ಈ ಎಲ್ಲಾ ಕಾರ್ಯಕ್ರಮಗಳನ್ನು ನಾನು ಮಾಡುವುದಕ್ಕೆ ಸ್ವಲ್ಪ ಹೆಚ್ಚು ಕಡಿಮೆ 1950 ಕೋಟಿಯಾಗುತ್ತದೆ ನಾನು ನನ್ನ ಎಲ್ಲ ಸ್ನೇಹಿತರಿಗೆ ಪಕ್ಷಬೇದ ಮರೆತು ವಿನಂತಿ ಮಾಡುತ್ತೇನೆ, ದಯಮಾಡಿ ತಾವು ಸಹಕಾರವನ್ನು ಕೊಟ್ಟರೆ ರೈತರು ತಕ್ಷಣ ಹಣವನ್ನು ತುಂಬಿದರೆ ನಾನು ಅಯವ್ಯಯದಲ್ಲಿ ಇಷ್ಟೇ ಅಲ್ಲದೆ 500 ಕೋಟಿ ರೂಪಾಯಿಗಳನ್ನು ತಕ್ಷಣ ಪೂರಕ ಅಂದಾಜಿನಲ್ಲಿ ಸಹಕಾರಿ ಸಂಘಕ್ಕೆ ತಕ್ಷಣ ಹಣವನ್ನು ಕಟ್ಟುವುದಕ್ಕೆ ನಾನು ವ್ಯವಸ್ಥೆ ಮಾಡಿದ್ದೇನೆ ಮುಂದೆ ಬರುವಂಥ ದಿವಸಗಳಲ್ಲಿ ಸಹಕಾರಿ ಸಂಘಗಳು ಸರಿಯಾದ ರೀತಿಯಲ್ಲಿ ನಡೆಯಬೇಕಾಗುತ್ತದೆ ಆದರೆ ಮಾಧುಸ್ವಾಮಿಯವರು ಹಾಗೂ ಇತರ ಸದಸ್ಯರುಗಳ ಕಳಕಳಿ ನನಗೆ

ಅರ್ಥವಾಗುತ್ತದೆ ನಾವು ಬಿ ಜೆ ಪಿ, ಜೆ ಡಿ ಎಸ್ ಎಂದೇನೂ ಅಲ್ಲ ನಾನು ಮತ್ತು ಮುಖ್ಯಮಂತ್ರಿಗಳು ಕುಳಿತುಕೊಂಡು ಎಲ್ಲರ ಚಿಂತನೆಯನ್ನು ಅರ್ಥ ಮಾಡಿಕೊಂಡು, ನಾವೇನು ಈ ವ್ಯವಸ್ಥೆಯನ್ನು ಮಾಡಿದ್ದೇವೆ ಇದರಲ್ಲಿ ಏನೂ ಬದಲಾವಣೆಯನ್ನು ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ ಹಣಕಾಸಿನ ಪರಿಮಿತಿಯೊಳಗೆ ಇದನ್ನು ನಾನು ಮಾಡಿದ್ದೇನೆ ದಯಮಾಡಿ ತಾವೆಲ್ಲರೂ ಸಹಕರಿಸಿ, ಮತ್ತೆ ಇದರ ಅವಧಿ ವಿಸ್ತರಣೆ ಆಗುತ್ತದೆ ಎನ್ನುವುದಾಗಲಿ, ಮತ್ತೆ ಯಾವುದೇ ಕಾರಣಕ್ಕೆ ಇದರಲ್ಲಿ ಏನಾದರೂ ಬದಲಾವಣೆಯಾಗುತ್ತದೆ ಎನ್ನುವುದು ಸಾಧ್ಯವೇ ಇಲ್ಲ ನಾನು ರಾಜ್ಯದ ರೈತ ಸಮುದಾಯಕ್ಕೆ ವಿನಂತಿ ಮಾಡುತ್ತೇನೆ ಸಾಲ ಪಡೆದಂಥ ರೈತರ ಯಾರದೇ ಕಿವಿಮಾತಿಗೆ ಅವಕಾಶವನ್ನು ಮಾಡಿಕೊಡದೇ ಈ 31 03 2007 ರೊಳಗಾಗಿ ಸಾಲವನ್ನು ಕಟ್ಟುವುದರ ಮೂಲಕ ಸಾಲ ಮನ್ನಾ ಯೋಜನೆಯ ಉಪಯೋಗ ಮಾಡಿಕೊಳ್ಳಬೇಕೆಂದು ಈ ಸದನದ ಮೂಲಕ ರೈತರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಗುರುಮಿರಕಲ್) – ಮಾನ್ಯ ಯಡಿಯೂರಪ್ಪನವರೆ, ಈಗಾಗಲೇ ತಾವು 25 ಸಾವಿರವನ್ನು 50 ಸಾವಿರದವರೆಗೆ ವಿಸ್ತರಿಸಿರುವುದರ ಬಗ್ಗೆ ಎಲ್ಲರೂ ಸ್ವಾಗತ ಮಾಡಿದ್ದಾರೆ ನಮ್ಮದೂ ಕೂಡ ಅದರ ಬಗ್ಗೆ ಎರಡನೆಯ ಅಭಿಪ್ರಾಯ ಇಲ್ಲ ಆದರೆ ಇದರಲ್ಲಿ ನೀವು ಕೊಟ್ಟಂಥ ಸಮಯ ಎಷ್ಟು ಎಂದರೆ ಕೇವಲ ಮಾರ್ಚ್ ಎಂಡ್‌ವರೆಗೆ ಮಾತ್ರ, ಅಂದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ವಾರ ಸಮಯ ಕೂಡ ಇಲ್ಲ ಈಗಾಗಲೇ 130 ತಾಲ್ಲೂಕುಗಳಲ್ಲಿ ಬರಗಾಲವಿದೆಯೆಂದು ಘೋಷಣೆಯನ್ನು ಮಾಡಲಾಗಿದೆ ನ್ಯಾಚುರಲಿ ಯಾವ ರೈತರು ಎಂಟಿತ್ತು ದಿವಸಗಳಲ್ಲಿ ಈ ಬಡ್ಡಿ ಸಹಿತ 25 ಸಾವಿರ ತುಂಬುವುದಕ್ಕಾಗುತ್ತದೆ? ಅಥವಾ ಉಳಿದಂಥ ರೈತರಿಗೆ ನೀವು ನಿಗದಿ ಮಾಡಿದಂಥ ಸಮಯದೊಳಗೆ ಸಾಲವನ್ನು ತುಂಬುವುದಕ್ಕೇ ಸಾಧ್ಯತೆ ಇದೆಯೇ ಎಂಬುದನ್ನು ತಾವೇ ಯೋಚನೆ ಮಾಡಿ ತಾವು ಮಾಡಿದಂಥದ್ದು ಅಥವಾ ತಮ್ಮ ಉದ್ದೇಶ ತಮ್ಮ ಇಂಟೆನ್‌ಶನ್ ಚೆನ್ನಾಗಿರಬಹುದು ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಮಯ ಬೇಕಲ್ಲ ಇವೊತ್ತು ಮತ್ತೆ ಸಾಲ ಕೊಡುವುದಕ್ಕೆ ಅಥವಾ ನೀವು ಮಾಡಿದಂಥ ಎಂಟು ಹತ್ತು ದಿವಸಗಳಲ್ಲಿಯೇ ಇಡೀ ರಾಜ್ಯದಲ್ಲಿ ಸಾಧ್ಯವಿದೆಯೆ? ಇವೊತ್ತೇನು 130 ತಾಲ್ಲೂಕುಗಳಲ್ಲಿ ಬರಗಾಲ ಬಂದು ಅವರುಗಳು ಬಹಳ ತೊಂದರೆಯಲ್ಲಿ ಇದ್ದಾರೆ ಎನ್ನತಕ್ಕಂಥ ಭಾವನೆ ನಿಮಗೂ ಕೂಡ ಮನವರಿಕೆ ಇರುವಾಗ ನೀವು ಈ ದಿನಾಂಕವನ್ನು ಏಕೆ ಸೀಮಿತಗೊಳಿಸುತ್ತೀರಿ? ಇದು ಒಂದು ಪ್ರಶ್ನೆ ಇನ್ನು ಈಗಾಗಲೇ ಎಲ್ಲ ಸದಸ್ಯರು ಹೇಳಿದಂತೆ ಇದಕ್ಕೆ ಲಿಮಿಟ್ ಏಕೆ? ಈಗಾಗಲೇ ತಮ್ಮ 70 ಲಕ್ಷ ರೈತರಲ್ಲಿ ಅನೇಕ ರೈತರು ಕೋ-ಅಪರೇಟಿವ್ ಒಂದು ಬಿಟ್ಟರೆ ಉಳಿದವರೆಲ್ಲರೂ ಕೂಡ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡವರೂ ಇದ್ದಾರೆ ಮತ್ತು ಸಾಹುಕಾರರ ಹತ್ತಿರ ಸಾಲ ಮಾಡಿದವರೂ ಇದ್ದಾರೆ ಅವರಿಗಂತೂ ಏನೂ

ಸಿಗುವುದಿಲ್ಲ, ಆ ಮಾತು ಬೇರೆ ಆದರೆ ಕನಿಷ್ಟ ಪಕ್ಷ ನೀವು ಕೋ-ಅಪರೇಟಿವ್‌ನಿಂದ ಸಾಲ ತೆಗೆದುಕೊಂಡವರಿಗೆ ಮನ್ನಾ ಮಾಡುತ್ತಿದ್ದೀರಿ ಇದರಿಂದ ರೈತ ಸಮುದಾಯದಲ್ಲಿ ಒಂದು ಭಾಗದವರಿಗೆ ಇವೊತ್ತು ಅನುಕೂಲವಾಗುತ್ತಿದೆ ಉಳಿದವರಿಗೆ ಅನಾನುಕೂಲವಾಗುತ್ತಿದೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ ನೀವೂ ಕೂಡ ಅದಕ್ಕೆ ಪರಿಹಾರವನ್ನು ಕಂಡಿಹಿಡಿದಿಲ್ಲ ಆದರೆ ನಾನು ಕೇಳತಕ್ಕಂಥದ್ದು ಇಷ್ಟೆ, ನೀವು 50 ಸಾವಿರ ಸಾಲ ತೆಗೆದುಕೊಂಡಿರುವವರಿಗೆ ಕೊಟ್ಟಂಥ ರಿಯಾಯಿತಿಯನ್ನು ಎಲ್ಲರಿಗೂ ಕೊಡಬೇಕು ಅವರು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಎರಡು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಮೂರು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಯಾವುದೇ ಲಿಮಿಟ್ ಇಲ್ಲದೇ ಅವರಿಗೂ ಕೂಡ 25 ಸಾವಿರ ರೂಪಾಯಿಯನ್ನು ಮನ್ನಾ ಮಾಡತಕ್ಕಂಥಾದ್ದು ಆಗಲಿ ಇದಲ್ಲದೇ ನೀವೇನು ಟೈಂ ನಿಗದಿ ಮಾಡಿದ್ದೀರಿ ಅದನ್ನು ಕಡೇಪಕ್ಷ ಜೂನ್ ಫಸ್ಟ್‌ವರೆಗೆ ನೀವು ವಿಸ್ತರಿಸಿದರೆ ರೈತರಿಗೆ ಅನುಕೂಲವಾಗುತ್ತದೆ ನಿಮಗೆ ಗೊತ್ತಿರುವಂತೆ ಬ್ಯಾಂಕ್‌ನ ಸಮಯ ಕೂಡ ಅದೇ ಇದೆ ಬ್ಯಾಂಕ್‌ನವರು ಕೂಡ ಫಸ್ಟ್ ಜೂನ್‌ನಿಂದಲೆ ಅನೇಕ, ಈ ಕ್ರಾಪ್ ಲೋನ್ ಬಗ್ಗೆ ಮತ್ತಿತರವುಗಳ ಬಗ್ಗೆ ಲೆಕ್ಕ ಪತ್ರಗಳನ್ನು ಕೊಡತಕ್ಕಂಥದ್ದು ಮಾಡುತ್ತಾರೆ ದಯವಿಟ್ಟು ಈ ಕೆಲಸವನ್ನು ನೀವು ಮಾಡಿ, ನಾನೇನು ತಿಳಿದುಕೊಂಡಿದ್ದೇನೆ ಎಂದರೆ, ಬಜೆಟ್ ಮೇಲೆ ಎಲ್ಲರ ವಿಚಾರಧಾರೆಗಳನ್ನು ನೀವು ಕೇಳಿಕೊಂಡು ಕೊನೆಗೆ ನೀವು ಏನಾದರೂ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು ಎನ್ನುವ ರೀತಿ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೆ ಅದೇನೇ ಇರಲಿ ಮುಖ್ಯಮಂತ್ರಿ ಮತ್ತು ನಿಮ್ಮ ಪೈಪೋಟಿಯಲ್ಲಿ ಇವೊತ್ತು ಮೊದಲೇ ಹೇಳಬೇಕು ಎಂದು ಹೇಳಿರಬೇಕು ಸಂತೋಷ ನಾವು ಸ್ವಾಗತ ಮಾಡುತ್ತೇವೆ ಅದಕ್ಕೆ ನಮ್ಮ ಬಿನ್ನಾಭಿಪ್ರಾಯವಿಲ್ಲ ಆದರೆ ಈ ಮನವಿಯನ್ನು ನೀವು ಪರಿಗಣಿಸಬೇಕು ಯಡಿಯೂರಪ್ಪನವರೆ, ನೀವು ಮಾತನಾಡುವಾಗ ನಾನೇನೂ ಇನ್ನು ಯಾರ ಮಾತು ಕೇಳುವುದಿಲ್ಲ, ಇದು ಕೊನೆ ಎಂದು ಹೇಳಿದಿರಿ ಆದರೆ ಕೊನೆ ಎಂದೂ ಆಗುವುದಿಲ್ಲ ರೈತರ ಬಗ್ಗೆ ಚಿಂತನೆ ಮಾಡತಕ್ಕಂಥ ಮನುಷ್ಯನಿಗೆ ಕೊನೆ ಎಂದು ಹೇಳುವುದಕ್ಕಾಗುವುದಿಲ್ಲ ಅನೇಕ ಸಮಸ್ಯೆಗಳಿವೆ ಸಾವಿರಾರು ಕೋಟಿ ಕೊಟ್ಟರೂ ಕೂಡ ರೈತರ ಸಮಸ್ಯೆ ಇವೊತ್ತು ಬಗೆಹರಿಯುವುದಿಲ್ಲ ನೀವು ಇವೊತ್ತು ಕೊಡತಕ್ಕಂಥಾದ್ದು ಕೇವಲ ಎಂಟು ಹತ್ತು ಲಕ್ಷ ಜನರಿಗೆ ಮಾತ್ರ ಅನುಕೂಲವಾಗಬಹುದು ಆದರೆ ಉಳಿದ ಇನ್ನೂ 60 ರಿಂದ 70 ಸಾವಿರ ಪಟ್ಟದಾರರು ಹಾಗೆಯೇ ಉಳಿಯುತ್ತಾರೆ ಆ ಮಾತು ಬೇರೆ ಅದಕ್ಕಾಗಿ ಎಲ್ಲರ ಅಭಿಪ್ರಾಯವೂ ಇದೆ ಇದನ್ನು ತಾವು ಒಪ್ಪಿಕೊಳ್ಳಿ

ಶ್ರೀ ಜೆ ಸಿ **ಮಾಧುಸ್ವಾಮಿ** – ಮಾನ್ಯ ಅಧ್ಯಕ್ಷರೆ, ಡಿಸ್ಟ್ರೆಸ್‌ನಲ್ಲಿ ಭಾರಿ ಕಷ್ಟಕ್ಕೆ ಒಳಗಾಗುವವರು ದೊಡ್ಡ ರೈತರೆ ಅವರು ಭಾರಿ ಸಾಲ ತೆಗೆದುಕೊಂಡು, ಭಾರಿ ಬಂಡವಾಳ ಹಾಕಿ, ಭಾರಿ ನಷ್ಟ ಮಾಡಿಕೊಳ್ಳುವವರು, ಜಾಸ್ತಿ ಜಮೀನು

ಇಟ್ಟುಕೊಂಡು ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳ ಸಾಲ ಮಾಡಿರುವ ಜನರುಗಳೇ ಭಾರಿ ತೊಂದರೆಗೆ ಒಳಗಾಗುವುದು ನೀವು ವಾಸ್ತವವಾಗಿ ಯೋಚನೆಯನ್ನು ಮಾಡಬೇಕು ಸನ್ಮಾನ್ಯ ಉಪ ಮುಖ್ಯಮಂತ್ರಿಗಳೆ, ಬರಗಾಲ ಎಲ್ಲರಿಗೂ ಬಂದಿದೆ 50 ಸಾವಿರದವರೆಗೆ ಲಿಮಿಟ್ ಏಕೆ ಮಾಡುತ್ತೀರಿ? ನೀವೇನೂ ಲಾಂಗ್ ಟರ್ಮ್ ಲೋನ್‌ಗಳಿಗೆ ರಿಬೇಟ್ ಕೊಡುತ್ತಿಲ್ಲ, ನಮ್ಮ ಪಿ ಎಲ್ ಡಿ ಬ್ಯಾಂಕ್‌ನಿಂದ ಮಾಡಿರುವ ಸಾಲಕ್ಕೆ ರಿಬೇಟ್ ಕೊಡುತ್ತಿಲ್ಲ ತಾವು ಕೊಡುತ್ತಿರುವುದು ಕೇವಲ ವಿ ಎಸ್ ಎಸ್ ಎನ್ ಎಲ್ ನಲ್ಲಿ ತೆಗದುಕೊಂಡಿರುವ ಸಾಲಕ್ಕೆ ಮಾತ್ರ, ಅವನು ಇದರಲ್ಲಿ ಎಷ್ಟು ತೆಗೆದುಕೊಳ್ಳಬಹುದು? maximum 1 ರಿಂದ 3 ಲಕ್ಷ 5 ಲಕ್ಷ ತೆಗದುಕೊಂಡಿರಬಹುದು ಯಾರು ಜಾಸ್ತಿ ಸಾಲ ತೆಗೆದುಕೊಂಡಿದ್ದಾನೆ ಅವನು ಇವೊತ್ತು ಜಾಸ್ತಿ ತೊಂದರೆಗೆ ಒಳಗಾಗುತ್ತಿದ್ದಾನೆ

ಯಾರು ಜಾಸ್ತಿ ಸಾಲ ತೆಗೆದುಕೊಂಡಿದ್ದಾನೆ, ಅವನು ಇವತ್ತು ಜಾಸ್ತಿ ತೊಂದರೆಗೆ ಒಳಗಾಗುತ್ತಾನೆ ಅವನಿಗೆ ಏನಾದರೂ ಕನಿಕರ ತೋರಿಸಬೇಕಲ್ಲ ನಾವು ಸಾಲ ಎಲ್ಲಾ ಮನ್ನಾ ಮಾಡಿ ಎಂದು ಕೇಳುವುದಿಲ್ಲ ಸಹಕಾರಿ ಸಂಘದಲ್ಲಿ ಸಾಲ ತೆಗೆದುಕೊಂಡಿರುವ ಎಲ್ಲರಿಗೂ 25 ಸಾವಿರ ರೂಪಾಯಿ ಮನ್ನಾ ಮಾಡುತ್ತೇವೆ ಎಂದು ತಾವು ನಿರ್ಧಾರಕ್ಕೆ ಬರಬೇಕು ಹಣವನ್ನು ಒಂದು ವಾರದೊಳಗೆ ಕಟ್ಟುವುದಕ್ಕೆ ಆಗುವುದಿಲ್ಲ ಅದಕ್ಕೆ ಅವಧಿಯನ್ನು May endವರೆಗಾದರೂ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು ಏಕೆಂದರೆ ಆದಾದನಂತರ June ತಿಂಗಳಿನಿಂದ ಅವರಿಗೆ ಹೊಸ ಸಾಲವನ್ನು ಕೊಡಬೇಕು ಅದುದರಿಂದ ಅಲ್ಲಿಯವರೆಗೂ ಅವಕಾಶ ಕೊಡಬೇಕು

ಡಾ ಕೆ ಅನ್ನದಾನಿ May end ಅಲ್ಲ, ಕನಿಷ್ಟ ಆರು ತಿಂಗಳಾದರೂ ಅವಕಾಶ ಮಾಡಿಕೊಡಬೇಕು ವಾಟಾಳ್ ನಾಗರಾಜ್‌ರವರೆ May endಗೆ ಯಾರಿಗೆ ಕಟ್ಟುವುದಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ ಇದು ರೈತರಲ್ಲಿ ತಾರತಮ್ಯ ಇದರಲ್ಲಿ ಒಬ್ಬರಿಗೆ ಅನುಕೂಲ, ಇನ್ನೊಬ್ಬರಿಗೆ ಅನಾನುಕೂಲ ಮಾಡುವಂತಹ ರೀತಿಯಲ್ಲಿ ಆಗಬಾರದು ಇದನ್ನು ಪ್ರಾಮಾಣಿಕವಾಗಿ ಎಲ್ಲರೂ ಒಪ್ಪುವಂತಹ ರೀತಿಯಲ್ಲಿ ಮಾಡಬೇಕಾಗಿರುವುದು ಅವರ ಕರ್ತವ್ಯ ಎರಡನೆಯದಾಗಿ, ಒಂದು ವಾರ ಏನು ರೈತರಿಗೆ ಅವಕಾಶ ಕೊಟ್ಟಿದ್ದಾರೆ, ಅದಕ್ಕೆ ಮೇ ತಿಂಗಳ ಕೊನೆಯವರೆಗೆ ಅವಕಾಶ ಕೊಡಬೇಕು ಎಂದು ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿದ್ದಾರೆ, ಅದಕ್ಕೆ ನಾನು ಕೂಡ ಬೆಂಬಲವನ್ನು ಕೊಡುತ್ತಿದ್ದೇನೆ ಇನ್ನೊಂದು ವಿಚಾರ ಏನೆಂದರೆ ನಮಗೆ ಯಾರಿಗೂ ಕೂಡ ಈ ರೀತಿ ಹೇಳಿಕೆ ಕೊಡುತ್ತಾರೆಂದು ಗೊತ್ತಿರಲಿಲ್ಲ ಬಹಳ ಗೌಪ್ಯವಾಗಿ ತಕ್ಷಣ ಈ ಹೇಳಿಕೆ ಕೊಟ್ಟಿರುವುದು ನೋಡಿದರೆ ಮಾನ್ಯ ಯಡಿಯೂರಪ್ಪನವರು ಏಕೆ ತೀರ್ಮಾನ ಇಷ್ಟು ಗೌಪ್ಯವಾಗಿ ಇಟ್ಟಿದ್ದರು ಎಂದು

ಅನಿಸುತ್ತದೆ ಸಾಮಾನ್ಯವಾಗಿ ಆಯವ್ಯಯ ಮಂಡನೆ ಅದ ಮೇಲೆ, ಆಯವ್ಯಯದ ಮೇಲೆ ಸಮಗ್ರವಾಗಿ ಚರ್ಚೆಯಾಗಬೇಕು ಚರ್ಚೆಯಾದ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವು ಈ ರೀತಿ ಮಾಡಿದ್ದೇವೆ ಎಂದು ಹೇಳಿದಾಗ, ನಾವು, ರೈತರಿಗೆ ಕೊಟ್ಟಿರುವುದು ಸರಿಯಲ್ಲ, ಇನ್ನೂ ಜಾಸ್ತಿ ಕೊಡಬೇಕು, ಬೇರೆ ರೈತರಿಗೂ ಕೊಡಬೇಕೆಂದು ನಮ್ಮ ಒತ್ತಾಯವಾದ ಮೇಲೆ ನಿಮ್ಮ ಒತ್ತಾಯವನ್ನು ಮನ್ನಿಸಿ ನಾನು ಮಾಡುತ್ತೇನೆ ಎಂದು ಹೇಳಬೇಕು ಆದರೆ ನೀವು ತಕ್ಷಣ ಈ ಒಂದು ತೀರ್ಮಾನಕ್ಕೆ ಬರಬೇಕಾದರೆ ನೀವು ಮಾಡಿರುವುದು ಸಂತೋಷವೇ

ಶ್ರೀ ಮಲ್ಲಿಕಾರ್ಜುನ ಖರ್ಗೆ ಸಿಕ್ಸರ್ ಹೊಡೆಯಬೇಕು ಎಂದು Chief Ministerಗಿಂತ ಮೊದಲೇ ಬಂದು announce ಮಾಡಿದ್ದು

ಶ್ರೀ ಬಿ ಎಸ್ ಯಡಿಯೂರಪ್ಪ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಒಟ್ಟಾಗಿ ತೆಗೆದುಕೊಂಡ ತೀರ್ಮಾನವಿದು ಈ ತೀರ್ಮಾನ ಯಡಿಯೂರಪ್ಪನದು ಅಲ್ಲ ಇದು ಸಮ್ಮಿಶ್ರ ಸರ್ಕಾರದ್ದು

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಲ್ಲ, ಅವರಿಗೆ ಮಧ್ಯಾಹ್ನದಲಿ time ಸಿಕ್ಕಿಲ್ಲ

ಶ್ರೀ ವಾಟಾಳ್ ನಾಗರಾಜ್ ನಿಮ್ಮ ಆ ತೀರ್ಮಾನ ಇದ್ದರೆ, ಆ ತೀರ್ಮಾನಕ್ಕೆ ನಿಮ್ಮ ಎಡದಲ್ಲಿ ಅವರು ಕುಳಿತಿಲ್ಲ ಇದು ರೈತರ ಪ್ರಶ್ನೆ, ಬಹಳ ಗಂಭೀರವಾಗಿದೆ ನಾವೆಲ್ಲರೂ ಗಮನ ಕೊಡುತ್ತೇವೆ ಇದರಲ್ಲಿ ವಿರೋಧ ಇಲ್ಲ ಇದನ್ನು ಪೂರ್ಣವಾಗಿ ಅಭಿನಂದಿಸುತ್ತೇವೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇದರ ಬಗ್ಗೆ ಧೈರ್ಯವಾಗಿ ತೀರ್ಮಾನವನ್ನು ತೆಗೆದುಕೊಂಡು ಹೋಗಿ, ನಾವು ಜೊತೆಯಲ್ಲಿದ್ದೇವೆ

ಶ್ರೀ ವಾಟಾಳ್ ನಾಗರಾಜ್ ಆದರೆ ನೀವು ಈ ಒಂದು ಹೇಳಿಕೆ ಮಂಡಿಸಿದಿರಲ್ಲ, ಇದು ಅಷ್ಟು ಸುಲಭವಾಗಿ ಚಿಂತನೆ ಮಾಡುವುದಲ್ಲ ಇದರ ಹಿಂದೆ ಬಹಳ ಗಾಢವಾದಂತಹ ವಿಚಾರವಿದೆ ಸಂತೋಷ, ರೈತರ ಪರ ನೀವು, ಮುಂದೆ ಹೋಗಿದ್ದೀರಿ, ನಮಗೆ ಸಂತೋಷ ಆದರೆ ನೀವು ದೊಡ್ಡ ರೈತರು ಸಣ್ಣ ರೈತರು ಎಂದು ಭೇದಭಾವನೆ ಮಾಡುವುದು ಬೇಡ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಸಹಕಾರಿ ಸಾಲ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಪಡೆದಿರುವವರ ಸಂಖ್ಯೆ ಬಹಳ ಕಡಿಮೆ ದಯವಿಟ್ಟು ಅವರ ಬಗ್ಗೆ ಸ್ವಲ್ಪ ಕರುಣೆ ತೋರಿ ನೀವು ಮಾಡುವುದು 25 ಸಾವಿರ ಅಷ್ಟೇ ಒಂದು ಲಕ್ಷ , ಎರಡು ಲಕ್ಷ, ಐದು ಲಕ್ಷ ಇದ್ದರೂ ಕೂಡ ಅಷ್ಟೇ ಹಾಗಾಗಿ ಅವರಿಗೂ ವಿಸ್ತರಣೆ ಮಾಡಬೇಕು ಏಕೆಂದರೆ PLD Bankನಲ್ಲಿ ಸಾಲ ಮಾಡಿರುವವರಿಗೆ ಏನೂ ಪ್ರಯೋಜನವಾಗುತ್ತಿಲ್ಲ ಬೇರೆ Bank ನಿಂದ ಕೂಡ ಏನೂ ಪ್ರಯೋಜನವಾಗುತ್ತಿಲ್ಲ ಆದುದರಿಂದ ಇದನ್ನು ಒಂದು ಲಕ್ಷ ರೂಪಾಯಿಗೆ ಮಾಡಬೇಕೆಂದು ನನ್ನ ಒತ್ತಾಯ ಮುಖ್ಯವಾಗಿ ತಾವು ಈ ತಿಂಗಳು 31 ಕ್ಕೆ last date ಏನು ಮಾಡಿದ್ದೀರಿ, ಇದು

ಪ್ರಾಯೋಗಿಕವಲ್ಲ ದಯವಿಟ್ಟು ಆಲೋಚನೆ ಮಾಡಿ ಇವತ್ತು 22ನೇ ತಾರೀಖಿನಲ್ಲಿದ್ದೇವೆ ನಾಳೆ 23ನೇ ತಾರೀಖು, ಮಧ್ಯೆ ರಜೆ ಬರುತ್ತದೆ 31ನೇ ತಾರೀಖು ಎಂದರೆ 5 ರಿಂದ 6 ದಿವಸ ಕೂಡ ಉಳಿಯುವುದಿಲ್ಲ ಇಷ್ಟು ಬೇಗ ಹಣ ಕಟ್ಟುವುದಕ್ಕೆ ರೈತರ ಹತ್ತಿರ ಹಣ ಇದೆಯಾ? ಇದು ರೈತರ ಹತ್ತಿರ ಹಣ ಇರುವಂತಹ ಸಂದರ್ಭವೆ? ಅವರು ಎಲ್ಲಿಂದ ತಂದು ಕಟ್ಟುವುದು? ನೀವೇ ಬರಗಾಲ declare ಮಾಡಿದ್ದೀರಿ ಆದರೆ ಒಂದಂತೂ ಸತ್ಯ ನೀವು ಏನು ಇದನ್ನು ಮಾಡಿದ್ದೀರಿ, ಇದನ್ನು ಸ್ವಾಗತ ಮಾಡುತ್ತೇವೆ ಆದರೆ ನಮಗೆ ಎಲ್ಲೋ ಒಂದು ಕಡೆ ನಿಮ್ಮಲ್ಲಿ ಗೊಂದಲ ಕಾಣುತ್ತಿದೆ ಏಕೆಂದರೆ ನಾಳೆ Legislature Party Meeting ಸೇರುವವರು ಇದ್ದೀರಿ ಅಲ್ಲಿ ಚರ್ಚೆ ಮಾಡುವುದಕ್ಕೆ ಮೊದಲೇ ಇಲ್ಲಿ announce ಮಾಡುತ್ತಿದ್ದೀರಿ ಎಂದರೆ ಏನೋ ಒಂದು ರೀತಿ ವಾಸನೆ ನಮಗೆ ಬರುತ್ತಿದೆ ಯಾವುದೋ ಒಂದು ದಟ್ಟವಾದ ಗುಮಾನಿ ಬರುತ್ತಿದೆ ನಾಳೆ Legislature Party Meetingನಲ್ಲಿ ಚರ್ಚೆಯಾಗುತ್ತಿರಲಿಲ್ಲವಾ? ಇವತ್ತು announce ಏಕೆ ಮಾಡಬೇಕಾಗಿತ್ತು? ನಾಳೆ ಮಾಡಿದ್ದರೆ ಏನಾಗುತ್ತಿತ್ತು? ಇದೆಲ್ಲಾ ನಮಗೆ ಗೊತ್ತಾಗುತ್ತದೆ, ಇರಲಿ ಏನೇ ಇರಲಿ ನಿಮಗೆ ಹೆಸರು ಬರಲಿ

ಶ್ರೀ ಆರಗ ಜ್ಞಾನೇಂದ್ರ ಅವರಿಬ್ಬರೂ joint ಆಗಿ ಚರ್ಚೆ ಮಾಡಿಕೊಂಡಿದ್ದಾರೆ ಇಷ್ಟು ಒಳ್ಳೆಯ ಕೆಲಸ ಮಾಡಿದಾಗಲೂ ತಾವು ರಾಜಕೀಯ ವಾಸನೆ ಕಾಣುವುದು ತಪ್ಪಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ನಾವು ಸ್ವಾಗತ ಮಾಡಿದ್ದೇವೆ ಎಲ್ಲರಿಗೂ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರಿಗೆ ಒಳ್ಳೆಯದಾಗಲಿ, ನಿಮಗೂ ಒಳ್ಳೆಯ ಹೆಸರು ಬರಲಿ, ನಮ್ಮದೇನೂ ತಕರಾರು ಇಲ್ಲ ನಾವು ಇರುವ ವಿಚಾರವನ್ನು ಹೇಳುತ್ತಿದ್ದೇವೆ, ದಯವಿಟ್ಟು ಈ ಎರಡು ಅಂಶಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಿಸಬೇಕು ಒಂದು ಲಕ್ಷ ರೂಪಾಯಿವರೆಗೂ 25 ಸಾವಿರ ರೂಪಾಯಿ ಮನ್ನಾ ಮಾಡಬೇಕು ಮತ್ತು ಅದಕ್ಕೆ ಮೇ 31ರವರೆಗೂ ಸಮಯ ಕೊಡಿ ನಿಮಗೆ ಗೊತ್ತಿಲ್ಲವೇ, ರೈತರ ಹತ್ತಿರ ದುಡ್ಡಿಲ್ಲ

ಶ್ರೀ ಕೆ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೂರು ವಿಷಯಗಳು

ಅಧ್ಯಕ್ಷರು ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ ಅವರು ಮಾತನಾಡಿದ್ದು ಆದಮೇಲೆ ಮಾತನಾಡಿ

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮೊನ್ನೆ Budget ಮಂಡನೆ ಮಾಡಿದ್ದಾರೆ Budget ಬಗ್ಗೆ ಇನ್ನೂ ಕೂಡ ಚರ್ಚೆ ಪ್ರಾರಂಭವಾಗಿಲ್ಲ, ಅದರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕಾಗಿದೆ ಸಾಕಷ್ಟು

ವಿಚಾರಗಳು ಕೂಡ ಪ್ರಸ್ತಾಪವಾಗಬೇಕಾಗಿದೆ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡತಕ್ಕಂಥ ಪೂರ್ವದಲ್ಲಿ ಸಾಲ ಮನ್ನಾ ಮಾಡುವಂಥಾದ್ದು, ಸಾರಾಯಿ ರದ್ದತಿ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ರಾಷ್ಟ್ರಪತಿಯವರು ಬಂದಿದ್ದರು ಆಗ ನಾನು ಹೋಗಿದ್ದೆ ಅವರು ಬಹಿರಂಗವಾಗಿ "ಸಾರಾಯಿ ರದ್ದತಿ ಮಾಡುತ್ತಿದ್ದೇನೆ, ತಮಗೆ ಒಪ್ಪಿಗೆ ಇದೆಯೇ" ಎಂದು ಕೇಳಿಕೊಂಡರು ಈಗ ಕೊನೆಗೆ ರೈತರಿಗೆ 25 ಸಾವಿರ ರೂಪಾಯಯವರೆಗೆ ಸಾಲ ಮನ್ನಾ ಮಾಡಿದ್ದೀರಿ ಇವತ್ತು 31ನೇ ತಾರೀಖಿನ ದಿವಸ ಪಾವತಿ ಮಾಡಬೇಕೆಂದು ಇದೆ ನಾನು ಈಗ ಬಂದೆ, ನಾನು ನೋಡಿದ್ದು ಏನೆಂದರೆ 50 ಸಾವಿರ ರೂಪಾಯಿಯವರೆಗೆ ಎಂದು ಹೇಳಿದಿರಿ ಈಗಾಗಲೇ ಮಾನ್ಯ ಖರ್ಗೆಯವರು ಹಾಗೂ ಶ್ರೀರಾಮರೆಡ್ಡಿಯವರು ಕೂಡ ಮಾತನಾಡಿದ್ದಾರೆ ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿಯಾದಾಗ ಶ್ರೀಮಾನ್ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದರು ಇದಕ್ಕೆ ಸಮ್ಮಿಶ್ರ ಸರ್ಕಾರದಲ್ಲಿ Common Minimum Programme ನಲ್ಲಿ ಆರು ಪರ್ಸೆಂಟ್‌ನಲ್ಲಿ ಬಡ್ಡಿ ಕೊಡುವಂತಹ ವಿಚಾರದಲ್ಲಿ ಬಹಳ ದೀರ್ಘವಾಗಿ ಚರ್ಚೆಯಾಗಿ, ಅದಕ್ಕೆ ಒಮ್ಮತದ ಅಭಿಪ್ರಾಯ ಬಂದಮೇಲೆ ನಾವು ಬಜೆಟ್ ಮಂಡನೆ ಮಾಡಿದಮೇಲೆ, ನಮ್ಮ ಎರಡು ಪಕ್ಷಗಳಲ್ಲಿ ನಮ್ಮಲ್ಲಿ ಯಾವತ್ತಿಗೂ ಕೂಡ ಅಪಸ್ವರ ಬರಲಿಲ್ಲ ಆದರೆ ಇವತ್ತು ಬಜೆಟ್ ಮಂಡನೆ ಮಾಡಿದಮೇಲೆ ಬೇರೆ ಕಡೆ ಅಪಸ್ವರ ಬರುತ್ತಿದೆ ಇದನ್ನು ಈಗ ಪ್ರಸ್ತಾಪ ಮಾಡುತ್ತಿದ್ದಾರೆ ಇವತ್ತು ಕರ್ನಾಟಕ ರಾಜ್ಯದಲಿ 128 ತಾಲ್ಲೂಕುಗಳಲ್ಲಿ ಬರ ಇದೆ ಕುಡಿಯುವ ನೀರಿನ ತೊಂದರೆ ಇದೆ ಬರದ ಬಗ್ಗೆ ಕೆಲಸವಾಗುತ್ತಿಲ್ಲ, ಅದು ತಮಗು ಕೂಡ ಗೊತ್ತಿರಬಹುದು ಇಂತಹ ಸಂದರ್ಭದಲಿ ಘೋಷಣೆಗಳ ಮುಖಾಂತರ ಇಷ್ಟು ಮನ್ನಾ ಮಾಡಿದ್ದೇವೆ ಎಂದು ಹೇಳಿದರೆ, ರೈತರು ಯಾವರೀತಿಯಾಗಿ ಪಾವತಿ ಮಾಡುತ್ತಾರೆ? ಅವರ ಹತ್ತಿರ ಇರುವಂತಹ ಆಭರಣಗಳನ್ನು ಮತ್ತು ತಮ್ಮ ಕೈಯಲ್ಲಿ ಇರುವಂತಹ ವಸ್ತುಗಳನ್ನು ಮಾರಾಟ ಮಾಡಿ ಕೊಡಬೇಕಾಗುತ್ತದೆ ಆದುದರಿಂದ ಈಗ ತಾವೇನು 50 ಸಾವಿರ ಎಂದು ಮಾಡಿದ್ದೀರಿ ಅದನ್ನು ಒಂದು ಲಕ್ಷ ರೂಪಾಯಿಯವರೆಗೆ ಎಂದು ಮಾಡಿ , ಕೇವಲ ನಿಮ್ಮ ಹೇಳಿಕೆ ಈ ರೈತನಿಗೆ, ಬಡವನಿಗೆ ಏನೋ ಒಂದು ಮಾಡಿದ್ದಾರೆ ಎನ್ನುವುದು ಬಂದಿದೆ ಅದನ್ನು ನಾವು ಒಪ್ಪುತ್ತೇವೆ ಅದರಲ್ಲಿ ಬಹಳ ದೊಡ್ಡ psychological ಆಗಿ ಏನು ಆಗಿದೆ, you have created an atmosphere ಆದರೆ ಒಂದು ದಿನ ಬರುತ್ತದೆ, ಎಷ್ಟು ರೈತರ ಬಗ್ಗೆ ಕಾಳಜಿ ಇದೆ? ಸಾರಾಯಿ ರದ್ದತಿಯಿಂದ ಆಗುವಂತಹ ಪರಿಣಾಮ ಏನು? A day will come ಇವತ್ತು ರಾಜ್ಯದ ಜನತೆ ಕೂಡ ಪ್ರತಿಭಟನೆ ಮಾಡುತ್ತಾರೆ ಇದು ತಿಳಿದಿರಬಹುದು ನಾನು ಬಹಳ ದೊಡ್ಡ ಕೆಲಸ ಮಾಡಿದ್ದೇನೆ, ಇದಕ್ಕೆ ಪ್ರಚಾರ ಸಿಗುತ್ತದೆ ಎನ್ನವುದಲ್ಲ ಆದುದರಿಂದ ಇದನ್ನು ಕೂಡ ಸರಿಯಾದ ರೀತಿಯಿಂದ ನೋಡಿ ಇವತ್ತು

ಯಾರ್ಯಾರು ಏನೇನು ಸಲಹೆ ಸೂಚನೆಗಳನ್ನು ಕೊಡುತ್ತೇವೆ, ಅದರ ಪ್ರಕಾರ ಒಮ್ಮತದ ಅಭಿಪ್ರಾಯ ಬರಬೇಕು ಇದು ಇವತ್ತು ಹುಡುಗಾಟ ಅಲ್ಲ ರೈತರಿಗೆ ಇಷ್ಟು ಬೇಗ ಹೇಗೆ ಸಾಧ್ಯವಾಗುತ್ತದೆ? ಈಗಾಗಲೆ ನಮ್ಮ ಸದಸ್ಯರುಗಳಾದ ಶ್ರೀ ಮಾಧುಸ್ವಾಮಿ ಹಾಗೂ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ ಏಕೆಂದರೆ ಆ ಜನರ ಬಗ್ಗೆ ಅವರಿಗೆ ಕಳಕಳಿ ಇದೆ ಇನ್ನು ಬೇರೆ ವಿಚಾರಗಳು ಕೂಡ ಇದ್ದರೂ, ಇದು ರೈತರಿಗೆ ಸಾಧ್ಯವಾಗಲಾರದಂತಹ ಕೆಲಸ ನಾವು ಮಾಡುವುದು ಮಾಡಿದ್ದೇವೆಂದು ಹೇಳುವುದಲ್ಲ ನೀವು ಕೂಡ ರೈತರು ಎಂದು ಹೇಳಿದ್ದೀರಿ ರೈತರ ವಿಚಾರದಲ್ಲಿ ಸಾಕಷ್ಟು ಬಾರಿ ಎದ್ದು ನಿಂತಿದ್ದೀರಿ, ಪ್ರತಿಭಟನೆ ಮಾಡಿದ್ದೀರಿ ಕೊನೆಯದಾಗಿ ಮಾಡಿದ್ದೇನೆ ಎನ್ನುವಂತಹ ಮಾತನ್ನು ಕೂಡ ಹೇಳುತ್ತಿದ್ದೀರಿ ಆದರೆ ಇದನ್ನು ಸರಿಯಾದ ರೀತಿಯಲ್ಲಿ ರೈತರಿಗೆ ಲಾಭವಾಗುವಂತಹ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ ಸುಮ್ಮನೆ ಹೆಸರಿಗ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಆಗಬಾರದು ಮಾನ್ಯ ಯಡಿಯೂರಪ್ಪನವರೇ ಚಿಂತನೆ ಮಾಡಿ ನೀವು ಚಿಂತನೆ ಮಾಡಿಲ್ಲ ದಿವಂಗತ ದೇವರಾಜು ಅರಸು ಅವರ ಕಾಲದಲ್ಲಿ ಮಾನ್ಯ ಎಂ ವೈ ಘೋರ್ಪಡೆಯವರು ಹಣಕಾಸು ಸಚಿವರಾಗಿದ್ದರು ನಿಮ್ಮ ರೀತಿಯಲ್ಲಿ cheap popularityಗೋಸ್ಕರ ಸಿದ್ದರಾಮಯ್ಯನವರು ಕೂಡ ಆಶ್ವಾಸನೆ ಕೊಡಬಹುದಾಗಿತ್ತು ಅವರು ಹಾಗೆ ಕೊಟಲಿಲ್ಲ ಏಕೆಂದರೆ ಇವತ್ತು ಬಜೆಟ್ ಬರುವಂತಹ ದಿವಸದಲ್ಲಿ ಕರ್ನಾಟಕ ರಾಜ್ಯದಲ್ಲಿ Financial crisis ಅಗತಕ್ಕಂಥ ರೀತಿಯಲ್ಲಿ ಬಜೆಟ್ ಮಂಡನೆ ಮಾಡಿದ್ದೀರಿ ಅದು ಏನೇ ಇರಲಿ ರೈತರಿಗೆ ನಿಜವಾದ ಲಾಭವಾಗುವಂತಹ ರೀತಿಯಲ್ಲಿ ,solid ಆಗಿ ನಮ್ಮ ಎದುರುಗಡೆ ಇಲ್ಲ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ(ಬೆಳ್ಳಾವಿ) ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಚರ್ಚೆಯಾದ ನಂತರ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಇವರ ಮೂರು ಅಂಶಗಳು ಯಾವುದೆಂದರೆ, ಮೊದಲನೆಯದಾಗಿ ಯಾರು ಖಾರೀಫ್‌ನಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ, ಅಂಥವರು ಈ ಮಾರ್ಚ್ 31ನೇ ತಾರೀಖಿನೊಳಗೆ ಹಣವನ್ನು ಕಟ್ಟಬೇಕೆಂಬುದು ಇದೆ ಇದರಲ್ಲಿ ನಾನು ಏನು ಸಲಹೆಯನ್ನು ಮಾಡುತ್ತೇನೆಂದರೆ, 2006-07ನೇ ಸಾಲಿನಲ್ಲಿ ತೆಗೆದುಕೊಂಡಿರುವಂತಹ ಬೆಳೆ ಸಾಲವೆಂದು ನಮೂದು ಆಗಬೇಕು ನೀವು ಈಗ ಅದನ್ನು ಫೆಬ್ರವರಿಯಿಂದ ಮಾಡಿದರೆ, ಅದು ಬರೀ ಖರೀಫ್ ಸಾಲಕ್ಕೆ ಮಾತ್ರ ಬರುತ್ತದೆ ಅದು ರಬಿ ಸಾಲಕ್ಕೆ ಬರುವುದಿಲ್ಲ ರಬಿ ಬೆಳೆಗೆ ನವೆಂಬರ್, ಡಿಸೆಂಬರ್, ಜನವರಿ ತಿಂಗಳಲ್ಲಿ ಸಾಲವನ್ನು ತೆಗೆದುಕೊಂಡಿರುತ್ತಾರೆ ನೀವು ರೈತರನ್ನೆ ಎರಡು ಭಾಗ ಮಾಡಿದ ಹಾಗೆ ಆಗುತ್ತದೆ, ಹಾಗಾಗಿ ಈ ಬೆಳೆ ಸಾಲವೆಂದರೆ, ಅಲ್ಪಾವಧಿ ಸಾಲಗಳನ್ನು ಮನ್ನಾ ಮಾಡುವಂಥಾದ್ದು ಇದು ಸರ್ಕಾರ ಸಹಕಾರ ಸಂಘಗಳಿಗೆ ತುಂಬಿ ಕೊಡುವಂಥಾದ್ದು, ಮನ್ನಾ ಮಾಡುವಂಥಾ ಹಣವನ್ನು

ಉಪಯೋಗ ಮಾಡುವಂಥಾದ್ದಕ್ಕೆ ನನ್ನ ವಿರೋಧವಿರುವುದು ಏಕೆಂದರೆ ಸಹಕಾರ ಸಂಘಗಳಲ್ಲಿ ಇರುವಂಥದು depositors ಹಣ ಇದೆ ಆ ಹಣದಲ್ಲಿ ಸಾಲವನ್ನು ಕೊಟ್ಟಿರುವಂಥಾದ್ದು ನೀವು ಅವರು ಕೊಟ್ಟಿರುವಂಥ ಸಾಲಕ್ಕೆ ಸರ್ಕಾರ ಹಣವನ್ನು ತುಂಬಿಕೊಡುವಂಥಾದ್ದು ಆಗಬೇಕೆ ಹೊರತು, ನೀವು ಮನ್ನಾ ಮಾಡಿದ್ದೇವೆಂದರೆ, ಇದು ಭೂ ಕಂದಾಯವೇ? ಮನ್ನಾ ಮಾಡಿದ್ದೇವೆಂದು ನೀವು ಘೋಷಣೆ ಮಾಡುವುದಕ್ಕೆ, ಇದು ಸರಿಯಾದಂಥ ಪದ ಬಳಕೆಯಲ್ಲ ಇದನ್ನು ತಾವು ಸರಿಮಾಡಿಕೊಳ್ಳಬೇಕೆಂದು ಹೇಳುತ್ತೇನ ಇದು ಮೊದಲಿನಿಂದಲೂ ಮಾನ್ಯ ಸಿದ್ದರಾಮಯ್ಯನವರು ಇದ್ದಾಗಿನಿಂದಲೂ ಇದ್ದೇ ಇದೆ ಈಗ ನಾನು ಮುಖ್ಯವಾಗಿ ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಇದು 2006-07ನೇ ಸಾಲಿನಲ್ಲಿ ತೆಗೆದುಕೊಂಡಿರುವಂದ ಬೆಳೆ ಸಾಲಕ್ಕೆ ಅನ್ವಯವಾಗುವ ರೀತಿಯಲ್ಲಿ ಒಂದು ಸರ್ಕಾರಿ ಆದೇಶ ಬರಬೇಕಾಗುತ್ತದೆ ಈ 25,000 ರೂಪಾಯಿಗಳನ್ನು ಮೊದಲು ಗೊತ್ತು ಮಾಡಿರುವಂಥಾದ್ದು ದಿ 1 4 2006ರಂದು decision ತೆಗೆದುಕೊಂಡಿದೆಯೆಂದು ಮಾಡಿರತಕ್ಕಂಥಾದ್ದು ಈ ರೀತಿಯಾಗಿ cut off date ಇರುವಂಥಾದ್ದು ಸರಿಯಾದಂಥಾದ್ದು ಆಗುವುದಿಲ್ಲ ಏಕೆಂದರೆ ಒಂದೊಂದು ಭಾಗದಲ್ಲಿ ಒಂದೊಂದು ಸಾರಿ ಸಾಲವನ್ನು ತೆಗೆದುಕೊಳ್ಳುತ್ತಾರೆ ನಮ್ಮಲ್ಲಿ ಮಾನ್ಸೂನ್ ಯಾವಾಗ ಬರುತ್ತದೆ? ಉತ್ತರ ಕರ್ನಾಟಕ ಭಾಗದಲ್ಲಿ ಬೇರೆ ಸಮಯದಲ್ಲಿ ತೆಗೆದುಕೊಳ್ಳುತ್ತಾರೆ, ಹಾಗೆ ಅಂದಾಕ್ಷಣಕ್ಕೆ ನೀವು ಈ ರೀತಿ ದಿನಾಂಕವನ್ನು ಇಡುವುದರಿಂದ ರೈತರಲ್ಲಿ ಒಂದು ರೀತಿಯಲ್ಲಿ ಗೊಂದಲವುಂಟಾಗುತ್ತದೆಂಬುದು ಒಂದಂಶ ಎರಡನೆಯ ಅಂಶ ಮುಖ್ಯವಾದುದೆಂದರೆ, 25,000 ರೂಪಾಯಿಗಳವರೆಗೂ ನೀವು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದೀರಿ, ಸಂತೋಷ ಆದರೆ 25,000 ರೂಪಾಯಿಗಳಿಗಿಂತ ಹೆಚ್ಚಿಗೆ ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೆ ಅವರಿಗೂ ಕೂಡ 25,000ರೂಪಾಯಿಗಳವರೆಗೂ ಮನ್ನಾ ಮಾಡಿ, ಬಾಕಿ ಇರುವ ಹಣವನ್ನು ಬಡ್ಡಿಯನ್ನು ಬಿಡುತ್ತೇವೆಂದರೆ, ಬಹಳ ಸಂತೋಷ, ಬಡ್ಡಿ ಬಿಟ್ಟರೂ ಅಸಲನ್ನು ತೆಗೆದುಕೊಂಡರು ಎನ್ನುವಂಥಾದ್ದು ಆಗುತ್ತದೆ ತಾವು ಮಾರ್ಚ್ 31ನೇ ತಾರೀಖಿನ್ನು ಏನು date ನಿಗದಿ ಮಾಡುತ್ತೇವೆಂದು ಹೇಳುತ್ತೀರಿ ಅದು ವ್ಯವಹಾರಿಕವಾಗಿ banking accounts close ಆಗುವುದರಿಂದ ಕನಿಷ್ಠ ಶೇ 50, 60ರಷ್ಟಾದರೂ recovery ಮಾಡಬೇಕಾಗುತ್ತದೆ, ತಾವು 31ನೇ ತಾರೀಖಿನವರೆಗೂ ದಿನಾಂಕವನ್ನು ನಿಗದಿ ಮಾಡಿ ಆಗಲೂ ಬರಲಿಲ್ಲವೆಂದರೆ ಬೇಕಾದರೆ extension ಮಾಡಿದರೆ ಆಗುತ್ತದೆ ಆ ರೀತಿ ಮಾಡದಿದ್ದರೆ ಸಹಕಾರಿ ಸಂಸ್ಥೆಗಳ ಆರೋಗ್ಯವನ್ನು ಹಾಳು ಮಾಡುತ್ತೀರಿ 31ನೇ ತಾರೀಖಿನೊಳಗೆ ವಸೂಲಾತಿಯಾಗಲಿಲ್ಲವೆಂದರೆ, ಯಾವ ಯಾವುದು ಹಣ ವಸೂಲಾತಿ ಬರಲಿಲ್ಲವೆಂದರೆ NPA ಎಂದು provision ಮಾಡಬೇಕಾಗುತ್ತದೆ ಅವೆಲ್ಲಾ balance sheetನಲ್ಲಿ negative ಆದರೆ ನಾಳೆ

ದಿವಸ ಯಾರೂ ಸಾಲವನ್ನು ಕೊಡುವುದಿಲ್ಲ ನೀವು ನಬಾರ್ಡ್‌ನಿಂದ ಏನಾದರೂ refinance ತೆಗೆದುಕೊಳ್ಳಬೇಕಾದರೆ ನಮ್ಮ net ಮತ್ತು balance sheet ಅನ್ನು ನೋಡಿಯೇ ಕೊಡುವಂಥಾದ್ದು, ಇಲ್ಲವೆಂದರೆ ನೀವು ಸರ್ಕಾರಿ guarantee ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ ಸರ್ಕಾರಿ guaranteeಗೆ ಬರುತ್ತಿದ್ದಾಗಲೇ ನೀವು ಶೇ 1ರಂತೆ guaranteeಗೆ commission ಹಾಕುತ್ತಿರಿ ಇದೆಲ್ಲವನ್ನು ಮತ್ತೆ ರೈತನ ಮೇಲೆ ಹಾಕಬೇಕಾಗುತ್ತದೆ ಆದುದರಿಂದ ಅವುಗಳ ಆರೋಗ್ಯವನ್ನು ನೀವು ನೋಡಿಕೊಳ್ಳಬೇಕು ರೈತರಿಗೂ ಸಹ ಸಹಾಯವಾಗುವಂತಹ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಬೇಕಾದಂಥಾದ್ದು ಸರ್ಕಾರದ ಚಿಂತನೆಯಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ ಆದರೆ ಈ ತುರಾತುರಿಯಲ್ಲಿ 50,000ರೂಪಾಯಿಗಳಿಗೆ ಏರಿಸುವಂಥಾದ್ದು, ಅದರಿಂದ ಏನೇನು ಪರಿಣಾಮವಾಗುತ್ತದೆಂಬ ಬಗ್ಗೆ ಸರಿಯಾದ ರೀತಿಯಲ್ಲಿ ಚರ್ಚೆ ಮಾಡಿ, ನಂತರ ಘೋಷಣೆ ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತೆಂದು ನನ್ನ ಭಾವನೆ ಆದುದರಿಂದ ನಾನು ಈಗ ಸರ್ಕಾರಕ್ಕೆ ಸಲಹೆ ಮಾಡುವಂಥಾದ್ದು 2006-07ನೇ ಸಾಲಿನಲ್ಲಿ ಯಾರ್ಯಾರು ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರೆಲ್ಲರಿಗೂ ಕೂಡ 25,000 ರೂಪಾಯಿಗಳವರೆಗೂ ಮಿತಿಗೊಳಿಸಿ, ಮತ್ತೆ ಅವರು ಹೆಚ್ಚಿಗೆ ಹಣವನ್ನು ತೆಗೆದುಕೊಂಡಿದ್ದರೂ ಕೂಡ ಅವರಿಗೆ 25,000 ರೂಪಾಯಿಗಳವರೆಗೂ ಮನ್ನಾ ಮಾಡುವಂಥಾದ್ದನ್ನು ಮಾಡಬೇಕಾಗುತ್ತದೆ ಈಗ ಸಮಯ ಮಾರ್ಚ್ 31ರವರೆಗೂ ಏನು ನಿಗದಿ ಮಾಡಿದ್ದೀರಿ, ಅದನ್ನು ಹಾಗೇ ಇಟ್ಟಿರಿ, ಅಮೇಲೆ ಬೇಕಾದರೆ ಅದನ್ನು ಮುಂದುವರೆಸುವುದಕ್ಕೆ ಅವಕಾಶವಿರುತ್ತದೆ 31ನೇ ತಾರೀಖಿನೊಳಗೆ ಬ್ಯಾಂಕ್‌ಗಳಿಗೆ ಹಣ ಬರಲಿಲ್ಲವೆಂದರೆ, ಬಹಳ ಅನಾನುಕೂಲವಾಗುತ್ತದೆ ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ KCC Bank Section 11ನಲ್ಲಿ ಬಂತು, ಅಲ್ಲಿ section 11ಲ್ಲಿ ಏಕೆ ಬಂತೆಂದರೆ, recovery ಆಗಲಿಲ್ಲವೆಂದು ಬಂತು ಇಲ್ಲಿ recovery ಅಗಲಿಲ್ಲವೆಂದು ಹೇಳಿದ ಮೇಲೆ, ಅಲ್ಲಿ ಯಾರೂ finance ಮಾಡಲಿಲ್ಲ ಅಲ್ಲಿ deposit ಇಟ್ಟಿದ್ದಾಂತಹ retire teachers, ಅವರು ಇವರು ಮಗಳ ಮದುವೆಗೆಂದು ಹಣವನ್ನು ಇಟ್ಟಿದ್ದರು, ಅವರೆಲ್ಲಾ ಧಾರವಾಡದಲ್ಲಿ suicide ಮಾಡಿಕೊಂಡರು ಆ ರೀತಿ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಬ್ಯಾಂಕ್‌ಗಳಲ್ಲಿ deposit ಇಟ್ಟಿರುವವರು suicide ಮಾಡಿಕೊಳ್ಳುವಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಈಗ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನವರು ಎಲ್ಲಾ ಶಾಸಕರಿಗೂ

ಒಂದು ಪತ್ರವನ್ನು ಬರೆದಿದ್ದಾರೆ ಈ ಒಂದು ವ್ಯವಸ್ಥೆಯನ್ನು ಇದಕ್ಕೂ ವಿಸ್ತರಣೆ ಮಾಡಬೇಕೆಂದು ಕೇಳಿದ್ದಾರೆ ಕಳೆದ ಬಾರಿ ಅವರು ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಆ ಹಣವನ್ನು ಇನ್ನೂ ಸಂಪೂರ್ಣವಾಗಿ ಕೊಟ್ಟಿಲ್ಲ, ಅದು ಇನ್ನು ಬಾಕಿ ಇದೆ ಇದರಲ್ಲಿ ನಮಗೆ ಅವಕಾಶವನ್ನೇ ಕೊಟ್ಟಿಲ್ಲ, ತಮ್ಮಲ್ಲಿ ಇದ್ದಂಥ ಸಾಲ ಮನ್ನಾ, ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಇದನ್ನು ಸೇರಿಸಿಕೊಳ್ಳಬೇಕು ಇನ್ನು ತಾವು ಎರಡು ಕಡೆಗಳಲ್ಲಿ restriction ಅನ್ನು ಹಾಕಿದ್ದೀರಿ ಮೊದಲನೆಯದು ದಿ 1 2 2006 ಎಂದು ಹೇಳುತ್ತೀರಿ, ಹಿಂದಿನವರಿಗೆ ಇಲ್ಲ ಇದರ ಬಗ್ಗೆ ಮಾನ್ಯ ಕೆ ಎನ್ ರಾಜಣ್ಣನವರು explain ಮಾಡಿದರು ಒಂದೇ ಸಾರಿ ಎಲ್ಲರೂ ಸಾಲವನ್ನು ಪಡೆಯುವುದಿಲ್ಲ ಅವರು ಹಂತ ಹಂತವಾಗಿ, ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ ಸಾಲವನ್ನು ಪಡೆಯುವಂಥಾದ್ದು, ಆದುದರಿಂದ ನೀವು ಆ date ಅನ್ನು ತೆಗೆಯಬೇಕು ಇಲ್ಲಿ ದಿ 1 2 2006ರ ನಂತರದ ಸಾಲ, ಪುನ ಇರುವಂಥಾದ್ದು ಮಾರ್ಚ್ 31, ಇದಕ್ಕೆ ನಿಮ್ಮ ಆದೇಶ ಬರುವುದಕ್ಕೆ ಒಂದು ತಿಂಗಳು ಆಗುತ್ತದೆ ಕಳೆದ ಬಾರಿ ನಿಮ್ಮ ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಏನಾಯಿತೆಂದರೆ, ನಾಲ್ಕು ಬಾರಿ extend ಮಾಡುವ ಪರಿಸ್ಥಿತಿ ಬಂತು ಒಂದು ಸಾರಿ ಮಾರ್ಚ್ ತಿಂಗಳೆಂದು ಹೇಳಿದಿರಿ, ಜೂನ್ ಎಂದು ಹೇಳಿದಿರಿ, ನಂತರ ಡಿಸೆಂಬರ್ end ಎಂದು ಹೇಳಿದಿರಿ, ಸುಮಾರು ಸಾರಿ extend ಮಾಡುವ ಪರಿಸ್ಥಿತಿ ಬಂತು ಆದುದರಿಂದ ಒಂದೇ ಸಾರಿ ಜೂನ್ endವರೆಗೆ extend ಮಾಡಿ, ಅಲ್ಲೀವರೆಗೆ ಏನಾದರೂ ವ್ಯವಸ್ಥೆಯನ್ನು ಮಾಡಬಹುದು, ಇಲ್ಲದಿದ್ದರೆ ಏನಾಗುತ್ತದೆಂದರೆ ಶೇ 4ರಂತೆ ಪಡೆದ ಸಾಲವನ್ನು ಕಟ್ಟಲಿಕ್ಕೆ ಪುನ ಹೆಚ್ಚು ಬಡ್ಡಿಯಲ್ಲಿ ಹಣವನ್ನು ತಂದು ಕಟ್ಟುವಂಥ ಪರಿಸ್ಥಿತಿಯಲ್ಲಿ ಯಾರೂ ಅದನ್ನು ತಂದು ಕಟ್ಟುವುದಿಲ್ಲ ಅದಕ್ಕಿಂತ ಇಲ್ಲಿ ಇನ್ನೊಂದು ಕೆಲಸವನ್ನು ಮಾಡಬಹುದು ತುರ್ತಾಗಿ ಬ್ಯಾಂಕ್‌ಗಳಿಗೆ ಹಣವನ್ನು deposit ಮಾಡಿ 1ನೇ ತಾರೀಖಿಗೆ ಕೊಟ್ಟುಬಿಡಿ ಅಮೇಲೆ ಅವರು ವ್ಯವಸ್ಥೆಯನ್ನು ಮಾಡಿಕೊಳ್ಳಲಿ, ನಿಮ್ಮ ಸಾಲ ಮನ್ನಾ ಕಾರ್ಯಕ್ರಮವನ್ನು ಅಥವಾ ಬಡ್ಡಿ ಮನ್ನಾ ಕಾರ್ಯಕ್ರಮವನ್ನು ಮಾಡಬಹುದು, ಇಲ್ಲವೆಂದರೆ ಪ್ರೈಮರಿ ಸಹಕಾರ ಸಂಘಗಳು ಸಮಸ್ಯೆಗೆ ಈಡಾಗುವಂಥಾದ್ದು, ಮತ್ತೆ deposit ಅನ್ನು ವಾಪಸ್ಸು ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗಬಾರದು ಇದು ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತಾ, ಮತ್ತೊಂದು ವಿಚಾರವೇನೆಂದರೆ, ನೀವು ಬೆಳೆ ವಿಮೆಯನ್ನು adjust ಮಾಡುತ್ತೇವೆಂದು ಹೇಳುತ್ತೀರಿ ಬರಗಾಲದ ಸಂದರ್ಭದಲ್ಲಿ, ಕಷ್ಟಕಾಲದಲ್ಲಿ ಬೆಳೆ ವಿಮೆಯನ್ನು ಕೊಡುವಂಥಾದ್ದು, ಅದನ್ನು ನೀವು ಸಾಲಕ್ಕೆ adjust ಮಾಡುತ್ತೇವೆಂದು ಹೇಳಿದರೆ ಹೇಗೆ? ಅದನ್ನು ಮಾಡಬಾರದು ಬೆಳೆ ವಿಮೆ ಮಾಡುವಂಥಾದ್ದು ಬೆಳೆ ಬೆಳೆಯದೇ ಇರುವಾಗ ಸಿಗುವಂಥಾದ್ದು, ಬೆಳೆ ಇಲ್ಲದೇ ಇರುವಾಗ ಅದಕ್ಕೆ

ಬಂದಂತಹ ದುಡ್ಡನ್ನು ತೆಗೆದುಕೊಂಡರೆ, ಅವನು ಊಟ ಮಾಡುವುದು ಏನು? ಇದು ಈ ರೀತಿಯಾಗಬಾರದು ಆದುದರಿಂದ ಈ ಬೆಳೆವಿಮೆಯನ್ನು adjust ಮಾಡುವಂಥಾದ್ದು ಆಗಬಾರದು ಈ ಎರಡು ದಿನಾಂಕವನ್ನು ನಿಗದಿ ಮಾಡಿರುವಂಥಾದ್ದು ಏನು ಇದೆ, ಅದನ್ನು ಸಹ ತೆಗೆಯಬೇಕು ಮೊದಲನೆಯದು ದಿ 1 2 2006 ಇದನ್ನು ತೆಗೆಯಬೇಕು, ಇದನ್ನು extend ಮಾಡಬೇಕೆಂದು ಹೇಳುತ್ತಾ, ಮತ್ತೆ ಮಧ್ಯೆ suo moto statement ಏನೋ ಮಾಡಿದ್ದೀರೆಂದು ಕಾಣುತ್ತದೆ ಮೊನ್ನೆ ದಿವಸ ಮಾನ್ಯ ಹೆಚ್ ಡಿ ಕುಮಾರಸ್ವಾಮಿಯವರು ಸುದ್ದಿಮಾಧ್ಯಮದಲ್ಲಿ ಕೊಟ್ಟಿರುವಂತಹ ಹೇಳಿಕೆಯನ್ನು ನೋಡಿದೆ ಅವರು ನಾನು ಹೇಳಿದ್ದು ಈ ರೀತಿಯಲ್ಲವೆಂದು ಹೇಳಿದರು ತಾವೂ ನಾನು ಈ ರೀತಿ ಹೇಳಿಲ್ಲವೆಂದು ಮುಂಚೆ ಏನಾದರೂ ಹೇಳಿದ್ದೀರೋ ಗೊತ್ತಿಲ್ಲ ಆದರೆ ಇಲ್ಲಿ ಒಂದು ಭಿನ್ನಾಭಿಪ್ರಾಯ ಬಂದಿದೆ ಅವರು ಹೇಳಿದ್ದು ಈ ರೀತಿಯಲ್ಲವೆಂದು ಹೇಳಿದ್ದಾದರೆ, ಯಾವ ರೀತಿಯೆಂದು ಅವರಾದರೂ ಬಂದು ಸದನದಲ್ಲಿ ಹೇಳಿಕೆಯನ್ನು ಕೊಡಬೇಕು ಅಥವಾ ನೀವಾದರೂ ಯಾವ ರೀತಿಯೆಂದು ಹೇಳಿಕೆ ಮಾಡಿದರೆ, ಅದರಲ್ಲಿ ಬದಲಾವಣೆಯನ್ನು ತರಬೇಕೆಂದು ಅಧ್ಯಕ್ಷರ ಮುಖೇನ ತಮ್ಮನ್ನು ಕೇಳುತ್ತೇನೆ

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ಹಣಕಾಸಿನ ಮಂತ್ರಿಯಾಗಿರುವ ಮಾನ್ಯ ಬಿ ಎಸ್ ಯಡಿಯೂರಪ್ಪನವರು ಸದನದಲ್ಲಿ ಹೊಸ ಸಂಪ್ರದಾಯಗಳನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ ಬಜೆಟ್ ಚರ್ಚೆಯಾಗಿ ನಂತರ ಅವರು ಇದಕ್ಕೆ ಉತ್ತರವನ್ನು ಕೊಡುವಾಗ ಇದೆಲ್ಲವನ್ನು ಹೇಳಬಹುದಾಗಿತ್ತು ಅಥವಾ ಚರ್ಚೆಯಾದ ಮೇಲೆ ಎರಡು, ಮೂರು ದಿವಸಗಳಲ್ಲಿ ಇದನ್ನು ಹೇಳಿದ್ದಿದ್ದರೆ ಏನೂ/ಆಗುತ್ತಾ ಇರಲಿಲ್ಲ ಅವರು ತರಾತುರಿಯಲ್ಲಿ ಬಜೆಟ್‌ಗೆ ತಿದ್ದುಪಡಿ ಮಾಡುವ ರೀತಿಯಲ್ಲಿ ತೆಗೆದುಕೊಂಡು ಬಂದಿದ್ದಾರೆ This is going to be the part and parcel of the budget speech ನೀವು ಮಂಡಿಸಿರುವಂಥ ಬಜೆಟ್ ಆಗುತ್ತದೆ ಇದು ಒಂದು ರೀತಿ corrigendam Budget speech Assemblyಯಲ್ಲಿ present ಆಗಿದೆ ಅದು ಚರ್ಚೆಯಾಗಬೇಕು, ಆದರ ಚರ್ಚೆ ಇವತ್ತೊ, ನಾಳೆಯೋ ಪ್ರಾರಂಭ ಆಗುವ ಹಾಗೆ ಇದೆ ಅವರು ಉತ್ತರವನ್ನು ಹೇಳುವಾಗ ಇದನ್ನು ಹೇಳಬಹುದಾಗಿತ್ತು ನಾವು ಇದನ್ನು ಹೆಚ್ಚು ಮಾಡುತ್ತೇವೆ, ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳಬಹುದಾಗಿತ್ತು ಆದರೆ ಒಂದು ಏನು ಮಾಡಿದ್ದಾರೆಂದರೆ, conditional ಭರವಸೆಯನ್ನು ಕೊಟ್ಟಿದ್ದಾರೆ ಈ ವರ್ಷದ ಮಾರ್ಚ್ 31ನೇ ತಾರೀಖಿನೊಳಗೆ 50,000ರೂಪಾಯಿಗಳ ಸಾಲವನ್ನು ತೆಗೆದುಕೊಂಡಿರುವವರು, 25,000ರೂಪಾಯಿಗಳನ್ನು ಕಟ್ಟಿದರೆ, ಇನ್ನು 25,000 ರೂಪಾಯಿಗಳನ್ನು ಸೊಸೈಟಿಗಳಿಗೆ ನಾವು ತುಂಬಿ ಕೊಡುತ್ತೇವೆಂದು ಹೇಳಬೇಕು ಇದು ರೈತರು ಕೊಡಬೇಕಾಗಿರುವ ಹಣವನ್ನು ನಾವು ತುಂಬಿ ಕೊಡುತ್ತೇವೆಂದು

ಹೇಳಿರುವಂಥಾದ್ದು ಈಗ 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಇವರು ಮನ್ನಾ ಮಾಡುವುದಕ್ಕೆ ಕಾರಣವೇ ಬರಗಾಲ ರಾಜ್ಯದಲ್ಲಿ ಬರಗಾಲವಿದೆ, ರೈತರು ಬಹಳ ಕಷ್ಟದಲ್ಲಿದ್ದಾರೆ, ಅದಕ್ಕಾಗಿ ರೈತರಿಗೆ ಸ್ವಲ್ಪ ಸಹಾಯ ಮಾಡುವುದಕ್ಕೆ ಹೋಗುತ್ತಿದ್ದೀರಿ ಆದರೆ, ನೀವು ಈ ರೀತಿ ಮಾರ್ಚ್ 31ರೊಳಗೆ 25 ಸಾವಿರ ರೂಪಾಯಿಗಳನ್ನು ಕಟ್ಟಬೇಕು ಎಂದರೆ ಅದರಿಂದ ರೈತರಿಗೆ ಏನೂ ಉಪಯೋಗವಾಗುವುದಿಲ್ಲ ಈಗ ಇಡೀ ರಾಜ್ಯದ ಜನತೆಗೆ ಏನು ಭರವಸೆ ಹೋಗಿದೆಯೆಂದರೆ, ನಾವು ರೈತರ ಸಾಲವನ್ನೆಲ್ಲ ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿದ್ದು, ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುತ್ತಾರೆ ಎಂದು ದೊಡ್ಡ ಪ್ರಚಾರವಾಗಿದೆ ಈಗ ಕೇವಲ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನುವ ಹಂತಕ್ಕೆ ಬಂದಿದ್ದು, ಅದರಲ್ಲಿಯೂ ನೀವು ಏಕೆ ಈ ರೀತಿಯ ಕಂಡೀಷನ್‌ಗಳನ್ನು ಹಾಕಿಕೊಂಡು ಕುಳಿತಿದ್ದೀರಿ ಎಲ್ಲ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಬೇಕು ಯಾರ್‍ಯಾರು ಮಧ್ಯಮಾವಧಿ ಸಾಲ ಮತ್ತು ಧೀರ್ಘಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರು ಜೂನ್ ಒಳಗೆ ಸಾಲವನ್ನು ಕಟ್ಟಿದರೆ ಈ ವರ್ಷದ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ ಏಪ್ರಿಲ್ 1ನೇ ತಾರೀಖಿನಿಂದ ಇಲ್ಲಿಯವರೆಗೆ ಯಾರ್‍ಯಾರು ಅಲ್ಪಾವದಿ ಸಾಲವನ್ನು ತೆಗೆದು ಕೊಂಡಿದ್ದಾರೆ, ಆ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ, ಯಾರ್‍ಯಾರು ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ ಅದರ ಬಡ್ಡಿಯನ್ನು ನಾವು ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿದರೆ ಅದರಿಂದ ರೈತರಿಗೆ ಏನಾದರೂ ಉಪಯೋಗವಾಗುತ್ತದೆ, ಸಹಾಯವಾಗುತ್ತದೆ ಆದರೆ ಈಗ ನೀವು ಹೇಳಿರುವುದನ್ನು ನೋಡಿದರೆ, ಇದರಿಂದ ಬಹಳ ಜನ ರೈತರಿಗೆ ಅನುಕೂಲವಾಗುವುದಿಲ್ಲ ನೀವು ಬಹಳ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿದ್ದೀರಿ ನೀವು ರಾಜಕೀಯ ಲಾಭ ಮಾಡಿಕೊಳ್ಳಲು ಇದನ್ನು ಮಾಡಿದ್ದೀರಿ ಎಂದು ನನಗನ್ನಿಸುತ್ತದೆ ಏಕೆಂದರೆ budget speechನಲ್ಲಿ ತಾವು ಹೇಳಿದ್ದೀರಿ, "ನಾನು ರೈತನ ಮಗನಾಗಿ, ರೈತರು ಎದುರಿಸುತ್ತಿರುವ ಸಂಕಟವನ್ನು ಬಲ್ಲೆ" ಎಂದು ಹೇಳಿದ್ದೀರಿ ಇದು ನಿಮ್ಮ ಸರ್ಕಾರ ನೀವು ರೈತರಿಗೆ ಸಹಾಯ ಮಾಡಿದರೆ ನಾವು ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇವೆ ಮತ್ತು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ರಾಜ್ಯದ 128 ತಾಲ್ಲೂಕುಗಳಲ್ಲಿ ಬರಗಾಲವಿದೆ, ಕುಡಿಯುವುದಕ್ಕೆ ನೀರಿಲ್ಲ ಸುಮಾರು 40% oil seeds expected production targetನಲ್ಲಿ ಖೋತಾ ಆಗಿದೆ More than 25% foordgrains shortage ಆಗಿದೆ ಇದು ಇರತಕ್ಕಂಥ ಪರಿಸ್ಥಿತಿ ಈ ಪರಿಸ್ಥಿತಿ ಇರುವಾಗ ನೀವು ಬರೀ 50 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡವರಿಗೆ ಮಾತ್ರ ಮನ್ನಾ ಮಾಡುತ್ತೇವೆ ಎಂದರೆ, 75 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರು,

60 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರು, ಏನು ಮಾಡಬೇಕು? ಆ ಕಾರಣದಿಂದ, ಬೆಳೆ ಸಾಲ ತೆಗೆದು ಕೊಂಡಿರುವ, ಅಲ್ಪಾವಧಿ ಸಾಲ ತೆಗೆದುಕೊಂಡಿರುವ ಎಲ್ಲ ರೈತರ ಪರವಾಗಿ ನಾವು ಹಣವನ್ನು ಸೊಸೈಟಿಗಳಿಗೆ ತುಂಬುತ್ತೇವೆ ಎಂದು ಹೇಳಿ ಅಲ್ಲದೇ, ನೀವು ಈ ಹಣವನ್ನು ಮೇ ಅಂತ್ಯದೊಳಗಾಗಿ ಸೊಸೈಟಿಗಳಿಗೆ ತುಂಬದಿದ್ದರೆ ಅವರು ಮತ್ತೆ refinance ಮಾಡಲು ಆಗುವುದಿಲ್ಲ ಅವುಗಳು ಒಂದು ಸಲ ಸತ್ತುಹೋದರೆ, ಮತ್ತೆ ಅವುಗಳನ್ನು revive ಮಾಡಲು ಆಗುವುದಿಲ್ಲ ತಾವು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಮಾಡಿದ್ದೀರಿ ಎಂದು ನಾನು ಅಂದುಕೊಂಡ್ಡಿದ್ದೇನೆ ಅದನ್ನು ಬಿಟ್ಟು ನೀವು "ಮೇ ತಿಂಗಳಿನಲ್ಲಿ ಒಂದು ಸ್ವಲ್ಪ ಕೊಡುತ್ತೇವೆ, ಇನ್ನೊಂದು ಮೂರು ತಿಂಗಳಾದ ಮೇಲೆ ಸ್ವಲ್ಪ ಕೊಡುತ್ತೇವೆ" ಎಂದು ಕೊಟ್ಟರೆ ಯಾವ ಸೊಸೈಟಿಗಳು ಕೂಡ ಉಳಿಯುವುದಿಲ್ಲ ಅವುಗಳೆಲ್ಲವೂ ನಾಶವಾಗಿ ಹೋಗಿಬಿಡುತ್ತವೆ ರೈತರು ತೆಗೆದುಕೊಂಡಿರುವ ಎಲ್ಲ ಬೆಳೆ ಸಾಲವನ್ನೂ in view of the drought, ರಾಜ್ಯದಲ್ಲಿರುವ ಭೀಕರ ಬರಗಾಲದಿಂದ ರೈತರು ಕಷ್ಟದಲ್ಲಿರುವುದರಿಂದ, ಅವರು ತೆಗೆದುಕೊಂಡಿರುವ ಬೆಳೆ ಸಾಲವನ್ನು ಪೂರ್ಣ ಮನ್ನಾ ಮಾಡುತ್ತೇವೆ, ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿ ಏಕೆಂದರೆ, ರೈತರು ಬೆಳೆ ಸಾಲವನ್ನು ಬಹಳ ಹೆಚ್ಚೇನೂ ತೆಗೆದುಕೊಂಡಿಲ್ಲ, ಹೆಚ್ಚೆಂದರೆ ಎರಡು ಲಕ್ಷ ರೂಪಾಯಿಗಳವರೆಗೆ ತೆಗೆದುಕೊಂಡಿರಬಹುದು ಆಗ ಯಡಿಯೂರಪ್ಪನವರು ರೈತರ ಪರವಾಗಿದ್ದಾರೆ ಎನ್ನುವುದು ಬರುತ್ತದೆ ಇದರಿಂದ ನಿಮಗೆ ಅನುಕೂಲವಾಗುತ್ತದೆ ರಾಜಕೀಯ ಲಾಭ ಮಾಡಿಕೊಳ್ಳಬೇಕು ಎನ್ನುವ ಪ್ರಯತ್ನಕ್ಕೆ ಸಿದ್ಧಿ ಲಭಿಸುತ್ತದೆ

ಶ್ರೀ ಆರ್ ವಿ ದೇಶಪಾಂಡೆ(ಹಳಿಯಾಳ) ಮಾನ್ಯ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಈಗ ಮಂಡಿಸಿರುವುದನ್ನು ನೋಡಿದರೆ ನಮಗೆ ಬಹಳ ಅಶ್ಚರ್ಯವಾಗುತ್ತಿದೆ ಬಜೆಟ್‌ಗೆ ಒಂದು ಪಾವಿತ್ರ್ಯತೆ ಇರುತ್ತದೆ ಇದೆಲ್ಲವನ್ನು ನಾನು ನಂತರ ಮಾತನಾಡುವಾಗ ವಿವರವಾಗಿ ಹೇಳುತ್ತೇನೆ ಹೀಗೆ ಮನಸ್ಸು ಬಂದಾಗ ತಾವೋ ಈ ಪ್ರಕಾರದಲ್ಲಿ ಹೇಳಿಕೆ ಕೊಡುತ್ತಾ ಹೊದರೆ ನಾವು ಇಲ್ಲಿ ಏನು ಮಾತನಾಡುವುದೂ ಕಷ್ಟವಾಗಬಹುದು ರೈತರ ವಿಚಾರವಾಗಿ ಹೇಳುವುದಾದರೆ, ಎಲ್ಲ ಬೆಳೆ ಸಾಲವನ್ನು ಮನ್ನಾ ಮಾಡಬೇಕು ಎಂದು ನಮ್ಮ ಒತ್ತಾಯವಿದೆ ಇದರ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದರು, ನಾವು ಎಲ್ಲ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದರು ಆಗ ತಾವು, ವಿಚಾರ ಮಾಡಬೇಕು, ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ ಎಂದು submit ಮಾಡಿದಿರಿ ಹಾಗೆಯೇ ವಿಷಯ dilute ಆಗುತ್ತಾ ಹೋಗಿ, ರೈತರು co-operative societyಗಳಿಂದ ತೆಗೆದುಕೊಂಡಿರುವ long term, medium term and crop loan ಮನ್ನಾ ಮಾಡುತ್ತೇವೆ ಎಂದು ಹೇಳಿದಿರಿ ಈಗ long term, medium term loanಗಳನ್ನು

ಮರೆತುಬಿಟ್ಟಿರಿ ಈಗ, crop loanಗೆ 25 ಸಾವಿರ ರೂಪಾಯಿಗಳ restriction ತೆಗೆದುಕೊಂಡು ಬಂದಿದ್ದೀರಿ ಯಾವ ರೈತರು 50 ಸಾವಿರ ರೂಪಾಯಿಗಳ ಬೆಳೆ ಸಾಲ ತೆಗೆದುಕೊಂಡಿದ್ದಾರೆ, ಅವರು ಮಾರ್ಚ್ 31 ರೊಳಗೆ 25 ಸಾವಿರ ರೂಪಾಯಿಗಳನ್ನು ಪಾವತಿ ಮಾಡಿದರೆ, ಉಳಿದ 25 ಸಾವಿರ ರೂಪಾಯಿಗಳನ್ನು ನಾವು ಸೊಸೈಟಿಗಳಿಗೆ ತುಂಬುತ್ತೇವೆ ಎಂದು ಹೇಳುತ್ತಿದ್ದೀರಿ ತಾವೇ ವಿಚಾರ ಮಾಡಿ, ನಮ್ಮ ಸ್ನೇಹಿತರುಗಳು ಹೇಳಿದ ಹಾಗೆ ರಾಜ್ಯದ 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಮಲೆನಾಡಿನ ಹಲವಾರು ತಾಲ್ಲೂಕುಗಳಲ್ಲಿ ಅತಿವೃಷ್ಟಿ ಇದೆ ರೈತರು ಇಷ್ಟು ಕಷ್ಟದಲ್ಲಿದ್ದಾಗ, ಮುಂದಿನ 5-6 ದಿವಸಗಳಲ್ಲಿ 25 ಸಾವಿರ ರೂಪಾಯಿಗಳನ್ನು ತುಂಬಲು ಸಾಧ್ಯವೇ ಎನ್ನುವುದನ್ನು practicalಆಗಿ ಯೋಚನೆ ಮಾಡಿ ನೋಡಿ ತಾವು ವಿರೋಧ ಪಕ್ಷದಲ್ಲಿದ್ದಾಗ ನಮ್ಮ ಮೇಲೆ ಎಷ್ಟು ಸಾರಿ ಒತ್ತಡ ತಂದು time extension ಮಾಡಿಕೊಂಡಿರಿ ಎಂದು ಯೋಚನೆ ಮಾಡಿ ನಾವು ಏನು ಹೇಳುತ್ತೇವೆ ಎಂದರೆ, ನೀವು ನಿಜವಾಗಿ ರೈತರಿಗೆ ಸಹಾಯ ಮಾಡಬೇಕಾದರೆ ತಾವು ಸಂಪೂರ್ಣವಾಗಿ ಬೆಳೆ ಸಾಲವನ್ನು ಮನ್ನಾ ಮಾಡಬೇಕು ಎರಡನೆಯದಾಗಿ, ಮುಂಗಡ ಪತ್ರದಲ್ಲಿ ತಾವು ಒಂದು ಮಾತು ಹೇಳಿದ್ದೀರಿ ಈ ವರ್ಷದಲ್ಲಿ ಎಷ್ಟು ಸಾಧ್ಯವಿದೆಯೋ ಅಷ್ಟು ಹಣವನ್ನು ಕೊಡುತ್ತೇವೆ ಮತ್ತು ಮುಂದಿನ ವರ್ಷದಲ್ಲಿ ಇದರ ಸಲುವಾಗಿ 500 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದೀರಿ ಸಾಲ ಮನ್ನಾ ಮಾಡುವುದರಿಂದ 1950 ಕೋಟಿ ರೂಪಾಯಿಗಳ ಹೊರೆ ಬರಬಹುದು ಎಂದು ಹೇಳಿದ್ದೀರಿ ಇದನ್ನು ಭರಿಸಲು ನಿಮ್ಮ ಹತ್ತಿರ ಹಣ ಎಲ್ಲಿದೆ? Where is the money you have got in the budget for the next year? ಈ ವರ್ಷ ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ ಹಾಗಾಗಿ, 1,950 ಕೋಟಿ ರೂಪಾಯಿಗಳು ಏನು ಬೇಕಾಗಿದೆ ಅದಕ್ಕೆ revenue ಎಲ್ಲಿಂದ ಬರುತ್ತದೆ? ಇವತ್ತು ಬಜೆಟ್‌ನ ಪಾವಿತ್ರ್ಯತೆ ಉಳಿದಿಲ್ಲ ನಾನು 25 ವರ್ಷದಿಂದ ರಾಜಕೀಯದಲ್ಲಿ ಕೆಲಸ ಮಾಡುತ್ತಿದ್ದೇನೆ ಈ ರೀತಿ ಎಂದೂ ಆಗಿಲ್ಲ ನೀವು ರೈತರಿಗೆ ಸಹಾಯ ಮಾಡಿ ಆದರೆ ಹಣಕಾಸು ಸಂಸ್ಥೆಗಳಿಗೆ ನೀವು ಹಣವನ್ನು ತುಂಬದಿದ್ದರೆ ಅವುಗಳು ಉಳಿಯುವುದಿಲ್ಲ All PLD banks will be closed ರೈತರು co-operative societyಗಳಿಂದ ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುತ್ತೀರಿ ಎಂದು ತಿಳಿದು ಎಲ್ಲೂ, ಯಾವ ರೈತರೂ ಸಾಲವನ್ನು ತುಂಬಲಿಲ್ಲ ಹಾಗಾಗಿ, PLD banks are closed Today GDP growth is less than 2% ಕೃಷಿ ಉತ್ಪಾದನೆ ಹೆಚ್ಚಾಗಬೇಕಾದರೆ capital investment ಹೆಚ್ಚಾಗಬೇಕು ಆದರೆ ಅದಕ್ಕೆ ಹಣ ಎಲ್ಲಿಂದ ಬರಬೇಕು? PLD ಬ್ಯಾಂಕುಗಳು default ಆದರೆ ಯಾವ ಪ್ರಕಾರವಾಗಿ ರೈತರಿಗೆ ಸಹಾಯ ಮಾಡಲು ಸಾಧ್ಯ?

ಇದರಲ್ಲಿ 70 ಲಕ್ಷ ರೈತ ಕುಟುಂಬಗಳಿವೆ Co-operative fieldನಲ್ಲಿ ಕೇವಲ 19 ಲಕ್ಷ ಕುಟುಂಬಗಳಿವೆ ಅದರಲ್ಲಿ ಸಾಲ ತೆಗೆದುಕೊಂಡಿರುವವರು 10 ಲಕ್ಷ ಮಾತ್ರ. ಇನ್ನೂ 9 ಲಕ್ಷ ಜನರಿಗೆ ಸಾಲ ಸಿಗಬೇಕು ಮಾರ್ಚ್ 31ರೊಳಗೆ ನೀವು ಹಣ ತುಂಬದಿದ್ದರೆ, ಅವುಗಳಿಗೆ NABARD refinance ಮಾಡುವುದಿಲ್ಲ ಖರೀಫ್ ಮತ್ತು ರಬಿ ಬೆಳಗಳಿಗಾಗಿ ಬೇರೆ ಬೇರೆ seasonಗಳಲ್ಲಿ short term loan ತೆಗೆದು ಕೊಳ್ಳುತ್ತಾರೆ ಈ ಪರಿಸ್ಥಿತಿಯಲ್ಲಿ ನೀವು ಡಿಸಂಬರ್‌ವರೆಗೆ restriction ಹಾಕಿದರೆ ಅದು ಸರಿಯಾದುದಲ್ಲ ನಿಮ್ಮ ಪ್ರಕಾರ ಯಾರು ಸಾಲ ಪಡೆದಿದ್ದಾರೆ ಅವರು ಮಾರ್ಚ್ 31ರೊಳಗೆ ತುಂಬಬೇಕಾಗುತ್ತದೆ ನಿಮ್ಮ ಮನಸ್ಸು ಒಳ್ಳೆಯದಿರಬಹುದು, ಒಳ್ಳೆಯ ವಿಚಾರವಿರಬಹುದು ಆದರೆ, ಇವತ್ತು political motives ಹೆಚ್ಚು ಕಾಣುತ್ತಿದೆಯೇ ವಿನ ರೈತರಿಗೆ ಸಹಾಯ ಮಾಡುವ ಉದ್ದೇಶ ಇದರೊಳಗೆ ಕಾಣುತ್ತಿಲ್ಲವೆನ್ನುವ ಸ್ಪಷ್ಟವಾದ ಆರೋಪವನ್ನು ಮಾಡುತ್ತಿದ್ದೇನೆ ನೀವು ಮೀನುಗಾರರಿಗೆ ಮತ್ತು ನೇಕಾರರಿಗೆ ಅವರಿಗೂ 25 ಸಾವಿರ ಮಾಡುತ್ತೇವೆಂದು ಹೇಳಿದಿರಿ ಅದನ್ನು ಸಹ 50 ಸಾವಿರ ರೂ ಗಳಿಗೆ ಮಾಡಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ, ರೈತರು, ಮೀನುಗಾರರು ಮತ್ತು ನೇಕಾರರು ಅವರಿಗೆ ಏಕೆ ಕೊಡುತ್ತಿಲ್ಲ? ಅವರಿಗೂ ಕೊಡಿ

ಶ್ರೀ ಕೆ ಆರ್ ರಮೇಶ್ ಕುಮಾರ್ ಸನ್ಮಾನ್ಯ ಅಧ್ಯಕ್ಷರೆ, ಅದು ಪದ್ಧತಿಯೇ ಸರಿ ಇಲ್ಲ ಒಂದು ಸಲ Finance Minister ರವರು budget ಅನ್ನು ಇಲ್ಲಿ ಓದಿ ಆದಮೇಲೆ ಅದರ ಮೇಲೆ discussions initiate ಆಗಬೇಕು Discussions ಎಲ್ಲ ಪೂರ್ಣವಾದ ಮೇಲೆ ಅವರು reply ಕೊಡಬೇಕು Reply ಕೊಡುವ ವೇಳೆಗೆ discussions ಮಾಡಿದಂಥ ಸಂದರ್ಭದಲ್ಲಿ ಯಾವುದಾದರೂ ವಿಚಾರದಲ್ಲಿ ಸರ್ಕಾರದ ಪುನರ್ ಪರಿಶೀಲನೆ ಇದ್ದರೆ ಕಡಿಮೆ ಮಾಡುವುದೋ, ಜಾಸ್ತಿ ಮಾಡುವುದೋ ಇದ್ದರೆ ಅದನ್ನು announce ಮಾಡಬೇಕು ಆದರೆ ಇದು discussions ಪ್ರಾರಂಭವಾಗಲಿಲ್ಲ, but still he has made another statement ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ We should stop the discussion here Budget discussions ಮಾಡುವಾಗ ಅವರು ಉತ್ತರ ಕೊಡಲಿ, ಅದಕ್ಕೆ ನಾವು ಹೇಳಬೇಕಾದ್ದು ಅವರು ಹೇಳಬೇಕಾದದ್ದು ಎಲ್ಲ ಇದೆ ಈ ಮಧ್ಯಂತರದಲ್ಲೇ ಮತ್ತೆ ಒಂದು mini debate start ಮಾಡತಕ್ಕಂಥದ್ದು ಅಪಚಾರವಾಗುತ್ತದೆ That is not the procedure He will not be showing the respect that actually should be shown to the Budget ಅದರ ಗೌರವ ಹೋಗುತ್ತದೆ Sanctity ಹೋಗುತ್ತದೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ನಾನು ತಮಗೆ ಬಹಳ ಗೌರವದಿಂದ ಹೇಳುತ್ತೇನೆ ತಾವು ಅವರಿಗೆ ಇದನ್ನು introduce ಮಾಡುವುದಕ್ಕೆ ಬಿಡಬಾರದಾಗಿತ್ತು ಅದು basically proper ಅಲ್ಲ ಅವರು introduce ಮಾಡಿದ ಮೇಲೆ ನಾವು ನಮ್ಮ ಅಭಿಪ್ರಾಯ ಕೊಡಬೇಕಲ್ಲವೇ? ಮಾನ್ಯ ಅಧ್ಯಕ್ಷರಿಗೆ ನಾನು ವಿನಂತಿ ಮಾಡುತ್ತಿದ್ದೇನೆ ಈ ತರಹ ಯಾವಾಗಲೂ ಆಗುವುದಿಲ್ಲ ಸರ್ When once Finance Minister replies on the budget you can allow You have every right But, not in between, What can we do?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷರು ಅವರಿಗೆ ಅವಕಾಶ ಕೊಡಬಾರದಿತ್ತು

ಶ್ರೀ ವಾಟಾಳ್ ನಾಗರಾಜ್ ಇಲ್ಲಿ ಸಂಪ್ರದಾಯಕ್ಕೆ ಬೆಲೆ ಇಲ್ಲ, ಅದು ನೆಗೆದು ಬಿದ್ದು ಹೋಗಿದೆ ಆದ್ದರಿಂದ, ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ ಮಾನ್ಯ ಹಣಕಾಸಿನ ಸಚಿವರು ಈ ಬಗ್ಗೆ ಸಮಗ್ರವಾಗಿ ಇಲ್ಲಿ ತಾವು ಮಂಡಿಸಿದಂಥ ಆಯವ್ಯಯದ ಬಗ್ಗೆ ಸಂಪೂರ್ಣ ಚರ್ಚೆ ಮಾಡಿದ ನಂತರ ಅವರು ಉತ್ತರ ಕೊಟ್ಟಿದ್ದರೆ ಅದಕ್ಕೆ ಬೆಲೆ ಇರುತ್ತಿತ್ತು ಆದರೆ, ನೀವೀಗ ತಕ್ಷಣ ರೈತರ ಬಗ್ಗೆ ಹೇಳಿದ್ದೀರಿ, ಅದಕ್ಕೆ ನಾವು ಸಂತೋಷಪಡುತ್ತೇವೆ ನಮ್ಮದೇನೆಂದರೆ, ಎಲ್ಲಾ ರೈತರದು ಮನ್ನಾ ಮಾಡುತ್ತೇವೆಂದು ತಾವು ಇಲ್ಲಿ ಉತ್ತರದಲ್ಲಿ ಹೇಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ರೀತಿ ನಮ್ಮ ಪ್ರತಿಪಕ್ಷದ ನಾಯಕರು ರೈತರ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುವಂಥದನ್ನು ಮಾತನಾಡಿದ್ದಾರೆ ನಾನು ಆಗನಿಂದ ಗಮನಿಸುತ್ತಿದ್ದೇನೆ ಯಾರೊಬ್ಬರ ಬಾಯಲ್ಲೂ ಸಹ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದದ್ದರ ಬಗ್ಗೆ, ಇದೇ ಬರಗಾಲ, ಅತೀವೃಷ್ಟಿಗೆ ಸಿಕ್ಕಿ ನರಳುತ್ತಿರುವಂಥ ರೈತರ ಪರಿಸ್ಥಿತಿ ಬಗ್ಗೆ ಪ್ರಸ್ತಾಪ ಇಲ್ಲಿ ಆಗುವುದಿಲ್ಲ ಇವತ್ತು ನಾವು ಮಾಡಬೇಕಾಗಿರುವ ಕೆಲಸವೇನೆಂದರೆ, ರಾಜ್ಯದ ಹಣಕಾಸಿನ ಇತಿಮಿತಿಯೊಳಗೆ 1950 ಕೋಟಿ ರೂಪಾಯಿಗಳನ್ನು ರೈತರ ನೆರವಿಗೆ ಕೊಡುತ್ತಿರುವಂಥದ್ದು ದೇಶದ ಇತಿಹಾಸದಲ್ಲಿ ಒಂದು ರಾಜ್ಯ ಕೊಡುತ್ತಿರುವಂಥ ಒಂದು ದೊಡ್ಡ ಕೊಡುಗೆಯಾಗಿದೆ ಇವತ್ತು ಚರ್ಚೆಯಾಗುತ್ತಿದೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ, ಒಂದು ನಿಮಿಷ ನೀವು ಮಾತನಾಡಬೇಕಾದರೆ ನಾನು ಮಾತನಾಡಿದ್ದೇನೇ?

ಶ್ರೀ ಆರ್ ವಿ ದೇಶಪಾಂಡೆ ಇದನ್ನು ಯಾವ ಬಜೆಟ್‌ನಲ್ಲಿ ಹೇಳಿದ್ದಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ factsನ್ನು ಹೇಳಬೇಕಾಗುತ್ತದೆ ಕೇಂದ್ರ ಸರ್ಕಾರ 2698 ಕೋಟಿ ರೂಪಾಯಿಗಳನ್ನು ರೈತರಿಗೆ ಪರಿಹಾರದ packageನ್ನು ಕೊಟ್ಟಿಲ್ಲವೇ?

ಶ್ರೀ ಬಿ ಎಸ್ ಯಡಿಯೂರಪ್ಪ: ನಾನು ಮಾತನಾಡಲಾದರೂ ಅವಕಾಶ ಕೊಡಬೇಕಲ್ಲವೇ sir? ಇದು ಕ್ರಮವೇ? ನೀವು ಮಾತನಾಡುವಾಗ ನಾವು ಕುಳಿತುಕೊಂಡಿದ್ದೆವು

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರದವರು ಕೊಟ್ಟಿಲ್ಲವೇ? ಧರ್ಮ್‌ಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ 1200 ಕೋಟಿ ರೂಪಾಯಿಗಳ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲಿಲ್ಲವೇ? ಇತಿಹಾಸವನ್ನು ನಿರ್ಮಾಣ ಮಾಡುತ್ತೇವೆಂದು ಹೇಳುವುದಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ನನಗೆ ಮಾತನಾಡಲು ಅವಕಾಶ ಕೊಡದೆಯೇ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ಅವರೂ, ನೀವೆಲ್ಲ ಮಾತನಾಡಿದ್ದೀರಿ ಹಲವಾರು ಸಲಹೆಗಳನ್ನು ಕೊಟ್ಟಿದ್ದೀರಿ ಎಲ್ಲಾ ಮಾಡಿದ್ದೀರಿ Let him reply ಅದಕ್ಕೇಕೆ ನೀವು ಮಧ್ಯ ಮಧ್ಯದಲ್ಲಿ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಹೇಳಿದ್ದಕ್ಕೆ ಉತ್ತರ ಕೊಡಬೇಕಲ್ವಾ?(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಪೂರ್ಣವಾಗಿ ಹೇಳಿದಮೇಲೆ ಕೊಡಿ ನಾನು yield ಆಗದೆಯೇ ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ discussion ಆದಮೇಲೆ ಇಲ್ಲಿ ತರಬೇಕಾಗಿತ್ತು ನೀವು ಬಜೆಟ್ ಮೇಲೆ general discussion ಆದಮೇಲೆ ಇದನ್ನು ತರಬೇಕಾಗಿತ್ತು

ಅಧ್ಯಕ್ಷರು ಅದಕ್ಕೆ ಅವರು ಉತ್ತರ ಕೊಡಬೇಕಿಲ್ಲ

ಶ್ರೀ ಸಿದ್ದರಾಮಯ್ಯ ಹಾಗಾದರೆ, ಮಧ್ಯದಲ್ಲೇಕೆ ತೆಗೆದುಕೊಂಡು ಬಂದಿರಿ?

ಶ್ರೀ ಬಿ ಎಸ್ ಯಡಿಯೂರಪ್ಪ ನಮ್ಮ ಅಧಿಕಾರದ ಚೌಕಟ್ಟಿನಲ್ಲಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ತಂದಿದ್ದೇವೆ ನಮಗೆ ಒಂದು statement ಮಾಡಲು ಅವಕಾಶ ಇಲ್ಲವೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ ಇದು ಸಂವಿಧಾನದಲ್ಲಿ ಇದೆಯೇ? ಎಲ್ಲಿದೆ ತೋರಿಸಿ?

ಶ್ರೀ ಬಿ ಎಸ್ ಯಡಿಯೂರಪ್ಪ ಏನು ತೋರಿಸಬೇಕು?

ಶ್ರೀ ಸಿದ್ದರಾಮಯ್ಯ Article 202ನಲ್ಲಿ ತೋರಿಸಿ?

ಶ್ರೀ ಬಿ ಎಸ್ ಯಡಿಯೂರಪ್ಪ Statement ಮಾಡಲು ನಮಗೆ ಅಧಿಕಾರವಿದೆ ಆದ್ದರಿಂದ ಮಾಡಿದ್ದೆವೆ

ಶ್ರೀ ಸಿದ್ದರಾಮಯ್ಯ: Article 202ನಲ್ಲಿ Budget ಮಂಡಿಸುವುದು ಎಂದು ಇದೆ ಅದರಲಿ ಎಲ್ಲಿದೆ ತೋರಿಸಿ?

ಶ್ರೀ ಬಿ ಎಸ್ ಯಡಿಯೂರಪ್ಪ You cannot question the Chair/
ಶ್ರೀ ಸಿದ್ದರಾಮಯ್ಯ ಅದೇ ತಪ್ಪು ಕೊಟ್ಟಿದ್ದೇ ತಪ್ಪು

ಶ್ರೀ ಬಿ ಎಸ್ ಯಡಿಯೂರಪ್ಪ ಅನುಭವವಿರುವ ತಾವೇ ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಈಗ suo motu ಆಗಿರತಕ್ಕ

ಶ್ರೀ ಎನ್ ಧರ್ಮಸಿಂಗ್ ಬಜೆಟ್ ಮಂಡನೆಯಲ್ಲಿ

ಶ್ರೀ ಕೆ ಎಸ್ ಈಶ್ವರಪ್ಪ ಮೊದಲನೆಯ ಸಲ ಇಷ್ಟು ಸಾಲವನ್ನು ಮನ್ನಾ ಮಾಡಿರುವುದಕ್ಕೆ ಹೊಟ್ಟೆಯುರಿಯಿಂದ ಇವರಿಗೆ ತಡೆದುಕೊಳ್ಳಲು ಆಗುತ್ತಿಲ್ಲ! ಬೇರೆ ಇನ್ನೇನೂ ಅಲ್ಲ ಇದಕ್ಕೆ ರಾಜಕೀಯ, ಸಂವಿಧಾನವಿಲ್ಲ ಬಜೆಟ್ ಮೇಲೆ ಹೋದ ವರ್ಷ ಚರ್ಚೆ ಮಾಡಿದಿರಾ? ನಮಗೆ ಒಂದು ತಿಂಗಳು ಚರ್ಚೆ ಮಾಡಿ ಎಂದು ಅವಕಾಶ ಕೊಟ್ಟಿದ್ದೇವು ಬರೀ ಧರಣಿ, ಸತ್ಯಾಗ್ರಹದಲ್ಲೇ ಇಡೀ session ಅನ್ನು ಹಾಳು ಮಾಡಿಬಿಟ್ಟರು ಈಗ ಬಜೆಟ್ ಚರ್ಚೆ ಶುರುವಾಗಿ ಎಷ್ಟು ದಿವಸವಾಯಿತು? (ಗೊಂದಲ) ಇದುವರೆಗೆ ಏನಾದರೂ ಮಾಡಿದ್ದಾರೆಯೇ? ಇವರಿಗೆ ಬಜೆಟ್ ಬಗ್ಗೆ ಚರ್ಚೆ ಮಾಡಲು ಆಸಕ್ತಿಯೂ ಇಲ್ಲ ರೈತರ ಸಾಲ ಮನ್ನಾ ಮಾಡುತ್ತೇವೆಂದರೂ ಅದಕ್ಕೂ ಹೊಟ್ಟೆ ಉರಿ ಇಂಥ ಕಾಂಗ್ರೆಸ್ ವಿರೋಧ ಪಕ್ಷ ರಾಜ್ಯದಲ್ಲಿ ಎಂದೂ ಇರಲಿಲ್ಲ ಇಷ್ಟು ನಮ್ಮ ದುರಾದೃಷ್ಟ ಇವರು ಇಷ್ಟೆಲ್ಲಾ ಮಾತನಾಡಲು ಅವಕಾಶ ಕೊಟ್ಟರು ಆದರೆ, ನಮ್ಮ ನಾಯಕರು ಮಾತನಾಡುವಾಗ ಒಟ್ಟೊಟ್ಟಿಗೇ ನಿಂತು ಕೂಗುತ್ತಿದ್ದಾರೆ ರಾಜ್ಯದ ಇತಿಹಾಸದಲ್ಲೇ ಈ ರೀತಿ ರೈತರ ಮನ್ನಾ ಮಾಡಿದ್ದಾರೆಯೆ? ಒಂದು ಸಲವಾದರೂ ಕರ್ನಾಟಕ ರಾಜ್ಯದಲ್ಲಿ ಈ ರೀತಿ ಮಾಡಿದ್ದೀರಾ ನೀವು?(ಗೊಂದಲ)

ಶ್ರೀ ಸಿದ್ದರಾಮಯ್ಯ ಹತ್ತು ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದಾರೆ ಇದೇನೂ ಹೊಸದಲ್ಲ ವಿ ಪಿ ಸಿಂಗ್ ಇದ್ದಾಗ, ದೇವೀಲಾಲ್ ಇದ್ದಾಗ ಹತ್ತು ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದಾರೆ It is not a new program in the country ಸೋನಿಯಾಗಾಂಧಿಯವರು,(ಗೊಂದಲ) ಮನಮೋಹನ್‌ಸಿಂಗ್‌ರವರು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ರೈತರಿಗೆ ಕೊಟ್ಟಿರತಕ್ಕದ್ದು?

ಶ್ರೀ ಕೆ ಎಸ್ ಈಶ್ವರಪ್ಪ ಕೇಂದ್ರದ್ದು ಆಮೇಲೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿ ಮಾಡಿರಲಿಲ್ಲ

ಅಧ್ಯಕ್ಷರು ಎಲ್ಲರೂ ಏಕೆ ಮಾತನಾಡುತ್ತೀರಿ?(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಕೇಳಿ

ಅಧ್ಯಕ್ಷರು ಅವರು statement ಮಾಡಿದ್ದಾರೆ ಅದಾದಮೇಲೆ ನೀವುಗಳೆಲ್ಲಾ ಅದರ ಮೇಲೆ ಸಲಹೆಗಳನ್ನು, ಬೇರೆ ಬೇರೆ ಒತ್ತಾಯಗಳನ್ನು ಮಾಡಿದ್ದೀರಿ ಅವರು ಅದಕ್ಕೆ ಉತ್ತರವನ್ನು ಕೊಡಲಿ (ಗೊಂದಲ)

ಶ್ರೀ ಕೆ ಎಸ್ ಈಶ್ವರಪ್ಪ ಉತ್ತರವನ್ನು ಕೊಡಲು ಅವರು ಬಿಡುವುದೇ ಇಲ್ಲವಲ್ಲಾ? ಮೊದಲು ಉತ್ತರ ಕೊಡಲು ಅವಕಾಶ ಕೊಡಿ ಅಮೇಲೆ, ಅವರು clarification ಕೇಳಲಿ (ಗೊಂದಲ)ಇವರು ಎಷ್ಟೆಷ್ಟು ಸಲ ಮಾತನಾಡಿದ್ದಾರೆ ಕೇಳಿದ್ದಾಯಿತು ಆದ್ದರಿಂದ ಈಗ ಉತ್ತರ ಕೊಡಲು ಅವಕಾಶ ಕೊಡಿ ಅಮೇಲೆ, clarification ಕೇಳಲಿ

ಶ್ರೀ ಎನ್ ಧರ್ಮಸಿಂಗ್ ವಿದರ್ಭ package ತರಹ 2890 ಕೋಟಿ ಕರ್ನಾಟಕ ರಾಜ್ಯಕ್ಕೆ ಕೊಟ್ಟಿದ್ದಾರೆ ಕೇಂದ್ರಸರ್ಕಾರ ಕೊಟ್ಟಿದೆ

(ಗೊಂದಲ)

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೇ, ಇದು ಸರಿಯಲ್ಲ ಖಂಡಿತ ಇದು ಸರಿಯಲ್ಲ ಅವರಿಗೆ ಉತ್ತರ ಕೊಡಲು ಬಿಡಿ (ಗೊಂದಲ)

ಶ್ರೀ ಆರಗ ಜ್ಞಾನೇಂದ್ರ, ದಯಮಾಡಿ, ವಿರೋಧ ಪಕ್ಷದ ನಾಯಕರಿಗೆ, ರೈತರ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರ ಬ್ಯಾಂಕುಗಳಲ್ಲಿ ರೈತರುಗಳು ಮಾಡಿರುವ ಸಾಲದ ಬಗ್ಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿದಂತಹ ಸಾಲದ ಹಣವನ್ನು ಮನ್ನಾ ಮಾಡುವ ಬಗ್ಗೆ ನಿರ್ಣಯವನ್ನು ತರಲಿ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯ ಮಂಡನೆ ಮಾಡಲಿ, ಅದನ್ನು ನಾವೆಲ್ಲಾ ಸಮರ್ಥನೆ ಮಾಡೋಣ

ಶ್ರೀ ಎನ್ ಧರ್ಮಸಿಂಗ್ ಇನ್ನೂ ರೈತರಿಗೆ ಎಷ್ಟು ಜಾಸ್ತಿ ಮಾಡುತ್ತೀರಿ ಅದನ್ನು ಹೇಳಿ ಮೊದಲು 8 ದಿವಸದ ಒಳಗಾಗಿ ರೈತರ ಸಾಲ ತೀರಿಸಬೇಕು ನೀವು,

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮೊದಲು ಅವರಿಗೆ ಉತ್ತರ ಹೇಳಲು ಅವಕಾಶ ಕೊಡಿ ಆಮೇಲೆ ಅವರು clarification ಕೇಳಲಿ ಇವರು ಮಾತನಾಡಲೇ ಅವಕಾಶ, ಉತ್ತರ ಕೊಡಲೇ ಅವಕಾಶ ಕೊಡುತ್ತಿಲ್ಲ ಇವರು ಮಾತ್ರ ಗಂಟೆಗಟ್ಟಲೆ ಮಾತನಾಡುತ್ತಾರೆ ಇದು ಯಾವ ನ್ಯಾಯ?

(ಗೊಂದಲ)

ಮೊದಲು ಉತ್ತರ ಕೊಡಲು ಅವಕಾಶ ಕೊಡಿ ಅನಂತರ clarification ಕೇಳಲಿ

ಶ್ರೀ ಆರಗ ಜ್ಞಾನೇಂದ್ರ, ದಯಮಾಡಿ ವಿರೋಧ ಪಕ್ಷದ ನಾಯಕರು ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಮಾಡುವ ಬಗ್ಗೆ ಒಂದು ನಿರ್ಣಯವನ್ನು ತರಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರೋಣ

(ಗೊಂದಲ)

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಎನ್ ಧರ್ಮಸಿಂಗ್ ಇವತ್ತು ಸದನದಲ್ಲಿ ಚರ್ಚೆಯಾಗಲಿ ಚರ್ಚೆಯಾದ ಸಂದರ್ಭದಲ್ಲಿ ಇನ್ನು ಏನು ವಿನಾಯಿತಿ ಕೊಡುತ್ತೇವೆಂದು ಹೇಳಲಿ

ಶ್ರೀ ಕೆ ಎಸ್ ಈಶ್ವರಪ್ಪ ಇಷ್ಟೊತ್ತು ಚರ್ಚೆಯಾಗಿಲ್ಲವೇ? ಹಾಗಾದರೆ ಇಷ್ಟೊತ್ತು ಆಗಿದ್ದೇನು?

ಶ್ರೀ ಎಂ ಪಿ ಪ್ರಕಾಶ್ ನಿಯಮಾವಳಿ 345ರ ಕೆಳಗೆ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಒಂದು ಹೇಳಿಕೆಯನ್ನು ಕೊಡಲು ತಾವು ಪರವಾನಗಿಯನ್ನು ಕೊಟ್ಟಿದ್ದೀರಿ ಅದೇ ರೀತಿಯಾಗಿ ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಇಲ್ಲ ಆದರೂ ಕೂಡ ಬಹಳ ಮಹತ್ವವಾದ ವಿಷಯವಿದ್ದರೆ ಚರ್ಚೆಗೆ ತಾವು ಅವಕಾಶವನ್ನು ಕಲ್ಪಿಸಿಕೊಡಬಹುದು

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಪ್ರಕಾಶ್‌ರವರೇ, ಇವತ್ತು ಇನ್ನೂ ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾಗಿಲ್ಲ

ಶ್ರೀ ಎಂ ಪಿ ಪ್ರಕಾಶ್ ವಿರೋಧ ಪಕ್ಷದ ನಾಯಕರು ತಾವು, ತಾವು ಹೇಳಿದ ತಕ್ಷಣವೇ ನಾನು yield ಆದೆ ಈಗಲೂ ಕೂಡ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವಾಗ ನಿಯಮ 345ರಲ್ಲಿ ಬಹಳ ಸ್ಪಷ್ಟವಾಗಿರುವುದಿದೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ ಇದರ ಬಗ್ಗೆ ಯಾರ ಆಕ್ಷೇಪಣೆಯೂ ಇಲ್ಲ

"With the consent of the Speaker a Minister may make a statement on a matter of public importance On such statement no discussion shall be allowed, members may be permitted to ask clarification for the purpose of eliciting further information"

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ Financial matters 345ರ ಕೆಳಗೆ ಮಾಡಿಸುತ್ತೀರಾ ನೀವು? ತಾವೀಗ rules quote ಮಾಡಿದ್ದೀರಿ ನಾವ್ಯಾರೂ ಪ್ರಶ್ನೆ ಮಾಡಿರಲಿಲ್ಲ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ Let me submit whatever I want to say Let me complete Then you try to convince me I am here to correct myself ನೀವೆಲ್ಲರೂ ಮಧ್ಯದಲ್ಲಿ ನಿಂತುಕೊಂಡು ಇದೇನು? ಅದೇನು? ಅಂದರೆ ನಾವು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ? ನನ್ನ ಅಲ್ಪ ಬುದ್ಧಿಗೆ ಏನು ತಿಳಿದಿದೆ, ಅದರ ಪ್ರಕಾರ 345ರ ನಿಯಮವನ್ನು ಹೇಳಿದ್ದೇನೆ gestures themselves also amount to the reason Right ಇರಲಿ, wrong ಇರಲಿ ನಾವು ಹೇಳಿರತಕ್ಕಂಥಾದ್ದು ಈಗ ಬಜೆಟ್ ವಿಷಯದಲ್ಲಿ ಯಾವುದೇ ಸಂದರ್ಭದಲ್ಲಿ ಕೂಡ ಈ ನಿಯಮ 345 ಅನ್ನೂ ಕೂಡ ಪರಾಂಬರಿಸಬೇಕಾಗುತ್ತದೆ ಅದರ ಕೆಳಗೆ ಅವರೊಂದು statement ಕೊಟ್ಟರು ಅನೇಕ ರೈತರು ಈ ವಿಚಾರದಲ್ಲಿ

ಆತಂಕಕ್ಕೊಳಗಾಗಿದ್ದರಿಂದ ಅದರ ಸ್ಪಷ್ಟೀಕರಣವನ್ನು ಕೊಡಬೇಕಾಯಿತು ಬಜೆಟ್‌ನ ಪಾವಿತ್ರ್ಯತೆ ಹೊರಟು ಹೋಯಿತು, ನಂತರ ಹೇಳಬೇಕಾಗಿತ್ತು ಎಂದು ತಾವು ಹೇಳುತ್ತೀರಿ ಅದು it is a matter of opinion, perception ಆ ಕಾರಣಕ್ಕಾಗಿ ನಿಯಮಬಾಹಿರವಾಗಿರತಕ್ಕಂಥದ್ದೇನೂ ಅವರು ಹೇಳಿಲ್ಲ ನಿಯಮಬಾಹಿರವಾಗಿತಕ್ಕಂಥ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ ಚರ್ಚೆಗೆ ಅನುಕೂಲವಾಗತಕ್ಕಂಥಾದ್ದಿದೆ ಜನತೆಯ ಮನಸ್ಸಿನಲ್ಲಿರತಕ್ಕಂಥ ಆತಂಕವನ್ನು ನಿವಾರಣೆ ಮಾಡಬೇಕಾಗಿದೆ ಏಕೆಂದರೆ, ಪತ್ರಿಕೆಯಲ್ಲಿ ಸರಿಯಾಗಿ ವರದಿಯಾಗಿದೆ 25,000 ರೂಪಾಯಿಗಳು ಸಾಲ ಇರತಕ್ಕಂಥವರು ಮಾತ್ರ ಇದರ ಲಾಭವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ ಉಳಿದಿರತಕ್ಕಂಥವರು 31ನೇ ತಾರೀಖಿನೊಳಗಾಗಿ ಅಸಲನ್ನು ಕಟ್ಟಿದರೆ ಬಡ್ಡಿ ಮನ್ನಾ ಆಗುತ್ತದೆಂದು ಹೇಳಿ ಅತಂಕಕ್ಕೊಳಗಾಗಿದ್ದರು ಅದರ ಬದಲು ಅವರು, ಈಗ 50,000 ರೂಪಾಯಿಗಳವರೆಗೆ ಇರತಕ್ಕಂಥ ಸಾಲಗಾರರು ಯಾರ್‍ಯಾರಿದ್ದಾರೆ ಅವರಿಗೆ 25,000 ರೂಪಾಯಿಗಳವರೆಗೂ ಊರ್ಜಿತವಾಗುತ್ತದೆ 50,000 ರೂಪಾಯಿ ಸಾಲ ತೆಗೆದುಕೊಂಡವರಿಗೆ 25 ಸಾವಿರ ರೂಪಾಯಿ ಮನ್ನಾ ಆಗುತ್ತದೆ, ಉಳಿದ 25000ಕ್ಕೆ ನೀವು ಅಸಲನ್ನು ಕಟ್ಟಿದರೆ ಆಗುತ್ತದೆ, ಇಷ್ಟು ಹೊರೆಯಾಗುತ್ತದೆ ಎಂಬ ಮಾತನ್ನು ಹೇಳಿದರು ತಾವು ಬಜೆಟ್ ಮೇಲೆ ಉತ್ತರ ಕೊಡತಕ್ಕಂಥ ಸಂದರ್ಭದಲಿ ಇದರ ಬಗ್ಗೆ ಹೇಳಬಹುದಾಗಿತ್ತು, ನಿಮಗೆ ಯಾರೂ ಕೈಹಿಡಿಯುತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನೂ ಹೇಳಿದಿರಿ ಹೆಚ್ಚು ಆತಂಕವಿರಬಾರದೆನ್ನುವ ಕಾರಣಕ್ಕಾಗಿ ಅವರು ಹೇಳಿಕೆ ಕೊಟ್ಟಿದ್ದಾರೆ ಇದರ ಜೊತೆಗೆ, ಮಾತನಾಡುವಂಥ ಸಂದರ್ಭದಲ್ಲಿ ಅನೇಕ ಬಾರಿ ಕೂಡ ಚರ್ಚೆ ಮಾಡಿದ್ದೇವೆ ಇದೇನೂ ಅವರು ದುಡ್ಡು ಕೊಟ್ಟಿದ್ದಾ? ನೀವು ಆಗಲೇ ಚರ್ಚೆ ಮಾಡಿದಂಥ ಸಂದರ್ಭ ಬಂದಾಗ, ಮಾನ್ಯ ಈಶ್ವರಪ್ಪನವಪರು ಮಾತನಾಡುವಾಗ, ಯಡಿಯೂರಪ್ಪನವರು ನಮಗೆ ಈ ರೀತಿ ಆರೋಗ್ಯ ಇಲಾಖೆಗೆ ಹಣ ಕೊಟ್ಟಿದ್ದರೆ ಎಂದರೆ ಏನು ಆರೋಗ್ಯ ಇಲಾಖೆಯಿಂದ ಯಡಿಯೋರಪ್ಪನವರು ಕೊಟ್ಟಿದ್ದಾರೆಂದತರೆ ಅದೇನೂ ಅವರಿಗೆ ಕೊಟ್ಟಿರತಕ್ಕಂಥದ್ದೇ ಇಲಾಖೆಗೆ ಬೇಡಿಕೆ ಇರುತ್ತದೆ, ಇಲಾಖಾ ಬೇಡಿಕೆ ಮೇಲೆ ಮಾತನಾಡಿ ಎಂದು ಹೇಳಿದರು ನಾವೇನಾದರೂ, ಕೇಂದ್ರ ಸರ್ಕಾರದವರು ಏಕೆ ರದ್ದುಮಾಡಿಲ್ಲವೆಂದ ತಕ್ಷಣವೇ ನಿಮ್ಮದು ಎಷ್ಟು ಕೇಂದ್ರ ಸರ್ಕಾರವೋ, ಅದು ನಮ್ಮದೂ ಅಷ್ಟೇ ಕೇಂದ್ರ ಸರ್ಕಾರ ಅದು ಕಾಂಗ್ರೆಸ್‌ನ ಸರ್ಕಾರ ಅಲ್ಲ ಅಥವಾ ಇದೂ ಕೂಡ ಸಮ್ಮಿಶ್ರ ಸರ್ಕಾರ ಅಲ್ಲ ಇದು ಕನ್ನಡಿಗರ ಸರ್ಕಾರ ಅದು ಭಾರತೀಯರ ಸರ್ಕಾರ ಆ ಕಾರಣಕ್ಕಾಗಿ ನಾವು ಕೇಂದ್ರ ಸರ್ಕಾರದಲ್ಲಿರತಕ್ಕಂಥ ವಿಚಾರಗಳನ್ನೂ ಕೂಡ ಚರ್ಚೆ ಮಾಡುತ್ತೇವೆ ನಿಮ್ಮ ಏನು ದೊಡ್ಡ ಶಕ್ತಿ ಇದೆ, ಪಕ್ಷದವರೇ ಅಲ್ಲಿ ಮುಖಂಡತ್ವ ವಹಿಸಿರುವುದರಿಂದ ನಮ್ಮ ರೈತರಿಗೂ ಕೂಡ ಸಾಲ ಮನ್ನಾ ಆಗತಕ್ಕಂಥ ವಿಚಾರದಲ್ಲಿ ತಾವು ಮಾಡಿ ಎಂದು ಹೇಳಿದ್ದೇವೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಂಥ ಸಂದರ್ಭದಲ್ಲಿ

ಇದೇನೂ ಹೊಸ ವಿಷಯವಲ್ಲ, ವಿ ಪಿ ಸಿಂಗ್‌ರವರ ಕಾಲದಲ್ಲಿ 10 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿದ್ದಾರೆಂದು ಹೇಳಿದರು ಇದು ಹೊಸ ವಿಷಯವೇ, ಏಕೆಂದರೆ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ, ಆಗ ದೇವೇಗೌಡರು, ಎಸ್ ಆರ್ ಬೊಮ್ಮಾಯಿಯವರು, ಜೆ ಹೆಚ್ ಪಟೇಲ್‌ರವರು, ನಾನು ಎಲ್ಲರೂ ಆ ಸಚಿವ ಸಂಪುಟದಲ್ಲಿದ್ದಾಗ ಇಡೀ ಭಾರತ ದೇಶದಲ್ಲಿ ಪ್ರಥಮ ಬಾರಿಗೆ ಬಡ್ಡಿಯನ್ನು ಮನ್ನಾ ಮಾಡತಕ್ಕಂಥಾದ್ದು, ಅಸಲನ್ನು ಕೊಟ್ಟಿದರೆ ಬಡ್ಡಿ ರದ್ದು ಮಾಡುವ ಪರಿಕಲ್ಪನೆ ಆ ಕಾಲದಲ್ಲಿ ಬಂತು ಅಲ್ಲಿಯವರೆಗೂ ಕೂಡ ಭಾರತ ದೇಶದಲ್ಲಿ ಇಂಥ ಯಾವ ವಿಚಾರಗಳೂ ಕೂಡ ಇರಲಿಲ್ಲ ಮುಂದೆ, ದೇವೆಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು 4ನೇ ಬಾರಿ ರದ್ದು ಮಾಡುವಂಥ ಸಂದರ್ಭದಲ್ಲಿ NABARD ನವರು ನಮಗೆ ಇನ್ನು ಮೇಲೆ ಸಾಲ ಕೊಡುವುದಿಲ್ಲ, ನಿಲ್ಲಿಸುತ್ತೇವೆಂದರು ಎಸ್ ಎಸ್ ಪಾಟೀಲ್‌ರನ್ನು, ಎಂ ಸಿ ನಾಣಯ್ಯನವರನ್ನು ಚರ್ಚೆ ಮಾಡಲಿಕ್ಕೆ ಸಿದ್ದರಾಮಯ್ಯನವರ ನೇತೃತ್ವದಲ್ಲಿ NABARD ನವರ ಜೊತೆ ಚರ್ಚೆ ಮಾಡಲಿಕ್ಕೆ ಬೊಂಬಾಯಿಗೆ ಹೋಗಿ ಮಾತನಾಡಿ, ನಾವು ಹಣವನ್ನು ಕಟ್ಟುತ್ತೇವೆ, ನಿಮಗೆ ಏಕೆ ಆತಂಕ? ನಿಮಗೇನಾಗಬೇಕಾಗಿದೆ, ನೀವು ಸಾಲ ಕಟ್ಟಿದ್ದೀರಿ, ಆ ಸಾಲಗಳನ್ನು ನಾವು ಕಟ್ಟುತ್ತೇವೆ, ನಾವು ಅವರ ಪರವಾಗಿ ಸಾಲವನ್ನು ಕಟ್ಟುತ್ತೇವೆಂದು ಹೇಳಿ ಅದರ ಪ್ರಕಾರವಾಗಿ ಸಾಲ ಕಟ್ಟಿರುವುದಿದೆ ರಾಜಣ್ಣನವರು ಹೇಳಿದಂತೆ ಒಂದು ಆತಂಕವಿದೆ ನಾವು ಮೇ ತಿಂಗಳೊಳಗೋ ಅಥವಾ ಅದರೊಳಗಾಗಿಯೇ ನಾವು ಹಣ ಕಟ್ಟದೇ ಹೋಗಿದ್ದರೆ 28 ಸಾವಿರದಷ್ಟಿರುವ ನಮ್ಮ Cooperative Institutions ರೋಗಗ್ರಸ್ತವಾಗುತ್ತವೆ ಅನ್ನುವಂಥಾದ್ದೇನಿದೆ, ಆ ಆತಂಕಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಆಗಲಿ ಆ ಕಾರಣಕ್ಕಾಗಿ ಸನ್ಮಾನ್ಯ ಕೇಂದ್ರ ಸರ್ಕಾರ ಎಂದ ಕೂಡಲೇ ಅದು ನಿಮ್ಮದಲ್ಲ ನಾವೂ ಕೂಡ ಸಂತೋಷಪಡುವಂಥ ಅನೇಕ ವಿಷಯಗಳಿವೆ ನಮ್ಮ ಬಜೆಟ್ ಬಂದಾಗಲೂ ಕೂಡ ನೀವು ಸಂತೋಷಪಡುವಂಥಾದ್ದು ಇದ್ದರೆ ಅದನ್ನು ಹೇಳಿ ಈಗ ಅವರು ಹೇಳಿಕೆ ಕೊಟ್ಟಿರತಕ್ಕಂಥಾದ್ದರಲಿ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲದಿದ್ದರೂ ತಾವು ಕೊಟ್ಟಿದ್ದೀರಿ ಅದರ ಪಾವಿತ್ರ್ಯತೆ ಹಾಳಾಗುತ್ತದೆ ಎಂದಲ್ಲ ದೊಡ್ಡ ಗುರಿಯನ್ನು ಇಟ್ಟುಕೊಂಡಿರತಕ್ಕಂಥ ಸಂದರ್ಭದಲ್ಲಿ ರೈತರ ಮನಸ್ಸಿನಲ್ಲಿ ಅನಾವಶ್ಯಕವಾದ ಆತಂಕ ಮೂಡಬಾರದೆಂದು ಆ ಹೇಳಿಕೆ ಕೊಟ್ಟಿದ್ದಾರೆ ದಯವಿಟ್ಟು, ಅದನ್ನು ಬಹಳ ಸಕಾರಾತ್ಮಕವಾಗಿ ಸ್ವೀಕಾರ ಮಾಡಬೇಕೆಂದು ವಿನಂತಿಮಾಡುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಪಾವಿತ್ರತೆ ಹೋಗುವುದಿಲ್ಲ ತಪ್ಪೂ ಏನಾಗುವುದಿಲ್ಲ ಹಾಗಾದರೆ, Planning Commission ಏಕಿರಬೇಕು? ಇವರು Budget present ಮಾಡುವುದಕ್ಕೆ ಮೊದಲು Planning Commission ನವರ ಹತ್ತಿರ discussion ಗೆ ಏಕೆ ಹೋಗಬೇಕು? Plan size ಏಕೆ discuss

ಮಾಡಬೇಕು? ಇಲ್ಲಿ ಬಂದು tax proposals ಏಕೆ ಹೇಳಬೇಕು? Concessions ಏಕೆ announce ಮಾಡಬೇಕು? ಆಮೇಲೆ, department wise demands ಏಕೆ ತೆಗೆದುಕೊಳ್ಳಬೇಕು? ಏನು ಬೇಕಾಗಿಲ್ಲ ಮನಸ್ಸಿಗೆ ಬಂದಂತೆ ಮಾಡಿಕೊಂಡು ಹೋಗಿ ಒಂದು order ಬೇಕಿಲ್ಲವೆಂದರೆ, procedure ಬೇಕಿಲ್ಲವೆಂದರೆ you do as you like

ಶ್ರೀ ಎಂ ಪಿ ಪ್ರಕಾಶ್ ಯಾವುದೇ ಆದರೂ ಒಂದು ಸನ್ನಿವೇಶದ ಪ್ರಕಾರ ನಡೆದುಕೊಳ್ಳಬೇಕಾದರೆ, ನಾವು ಯೋಜನಾ ಗಾತ್ರವನ್ನು ನಿರ್ಧಾರ ಮಾಡಬೇಕಾಗುತ್ತದೆ ಆಯವ್ಯಯದಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಹಣಕಾಸನ್ನೂ ಹೊಂದಿಸಿಕೊಡಬೇಕಾಗುತ್ತದೆ ಮಾನ್ಯ ಸಿದ್ದರಾಮಯ್ಯನವರು ಹಿಂದಿನ ಜೆ ಹೆಚ್ ಪಟೇಲ್‌ರವರ ಮಂತ್ರಿಮಂಡಲದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು

ಶ್ರೀ ಕೆ ಆರ್ ರಮೇಶ್‌ಕುಮಾರ್ ನಾನು ಅದನ್ನೆ ವಿನಂತಿ ಮಾಡಿಕೊಂಡಿರತಕ್ಕಂಥಾದ್ದು ಹಣಕಾಸಿನ ಮಂತ್ರಿಯಾಗಿರತಕ್ಕಂಥದವರಿಗೆ ಈ ಸದನದಲ್ಲಿ ದೊರಕತಕ್ಕಂಥ ವಿಶೇಷ ಗೌರವ ಇದು ಅವರು ಬಜೆಟ್ ಮಂಡಿಸಿಯಾದ ಮೇಲೆ ಅದರ ಮೇಲೆ ಪೂರ್ಣ ಪ್ರಮಾಣದ ಚರ್ಚೆಯಾದ ಮೇಲೆ ಚರ್ಚೆಯ ವೇಳೆ ಅವರಿಗೇನೇನು ಅಂಶಗಳು ಮನಸ್ಸಿಗೆ ಬರುತ್ತವೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ರಾಜ್ಯದ ಹಿತವನ್ನು, ಬೊಕ್ಕಸದ ಪರಿಸ್ಥಿತಿಯನ್ನು ನೋಡಿಕೊಂಡು ಏನೇನು concession ಕೊಟ್ಟು ಅದನ್ನೆಲ್ಲ declare ಮಾಡಬಹುದು ಅದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ ಅವರೇ ಅದನ್ನು ಮಾಡಬೇಕು

ಶ್ರೀ ಎಂ ಪಿ ಪ್ರಕಾಶ್ ತಾವು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತಾ, ಯೋಜನಾ ಗಾತ್ರದ ವಿಚಾರಕ್ಕೆ ಬಂದಾಗ ಯೋಜನಾ ಗಾತ್ರದ ಚರ್ಚೆ ಏಕಾಗಬೇಕು? ಆಯವ್ಯಯದ ವಿಚಾರದಲ್ಲಿ ಬಜೆಟ್‌ನ ಪಾವಿತ್ರ್ಯತೆ ಬಗ್ಗೆ ಮಾತನಾಡಿದಾಗ ಹಿಂದೆ ನಮ್ಮಲ್ಲಿ ಸರ್ಕಾರಿ ನೌಕರರಿಗೆ ಅವತ್ತಿನ ದಿವಸದಲ್ಲಿ 720 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟೆವು ಆ ಸಂದರ್ಭದಲ್ಲಿ ನಾವು ಅಂತರಿಕವಾಗಿ ಚರ್ಚೆ ಮಾಡುವಾಗ ಅದರ ಸಾಧಕ ಬಾಧಕ ಎಲ್ಲ ಚರ್ಚೆ ಮಾಡಿದೆವು ಆದರೆ, ಅನಿವಾರ್ಯವಾದಂಥ ಒಂದು ಸ್ಥಿತಿ ತೆಗೆದುಕೊಂಡು ಬಂದಾಗ 720 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಪ್ರಸ್ತಾಪ ಇಲ್ಲದಿದ್ದರೂ ಕೂಡ ಅದನ್ನು ಮಾಡಿಕೊಟ್ಟೆವು ಒಂದೊಂದು ಸಂದರ್ಭಗಳು ಹಾಗೆ ಬರುತ್ತವೆ

ಶ್ರೀ ಸಿದ್ದರಾಮಯ್ಯ ನಮ್ಮ ತಕರಾರೇನಿಲ್ಲ ನಿಯಮ 345ರಲ್ಲಿ ಹೇಳುವುದಕ್ಕೆ ನಮ್ಮ ತಕರಾರೇನಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಮ್ಮ ತಕರಾರಿದೆ

ಶ್ರೀ ಸಿದ್ದರಾಮಯ್ಯ ನಿಯಮ 345 ಇರುವುದು, ಮಂತ್ರಿಗಳು statement

ಶ್ರೀ ಬಿ ಎಸ್ ಯಡಿಯೂರಪ್ಪ ಮಾತನಾಡುತ್ತೀರೇ ಹೊರತು, ಇದು ರೈತರಿಗೆ ಅನುಕೂಲವಾಗುತ್ತದೆ ಎಂದು ನೋಡುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾವು rules ಪುಸ್ತಕ ಮುಟ್ಟುವುದಿಲ್ಲ Law Ministerರವರು rules ಹೇಳಿದರು Rules cannot be misquoted

ಶ್ರೀ ಸಿದ್ದರಾಮಯ್ಯ ರೈತರಿಗೆ ಅನುಕೂಲವಾಗುತ್ತದೆ ಎಂದು ಅದಕ್ಕೆ ನಾವು ಸ್ವಾಗತ ಮಾಡೆದ್ದೇವಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾವು rules ಹೇಳಿಲಲ್ಲ Rules ಹೇಳಿದ್ದು Parliamentary Affairs Minister

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಿಮಗೆ ರೈತರು ಜನರ ಹತ್ತಿರ ಹೋಗಿ ಜನರು ಬಡಿಗೆ ತೆಗೆದುಕೊಂಡು ಬೆನ್ನ ಹತ್ತುತ್ತಾರೆ

(ಗೊಂದಲ)

ಶ್ರೀ ಸಿದ್ದರಾಮಯ್ಯ 10 ಸಾರಿ ಹೋಗಿದ್ದೇವೆ, ಬಂದಿದ್ದೇವೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಮನೆ ಮನೆಯಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿದೆ ಇಷ್ಟು ವರ್ಷ ನೀವ್ಯಾರೂ ಮಾಡುವುದಕ್ಕಾಗದ ಕೆಲಸವನ್ನು ನಾವು ಮಾಡಿದ್ದೇವೆ

(ಗೊಂದಲ)

ಶ್ರೀ ಸಿದ್ದರಾಮಯ್ಯ It is not related to budget That is our objection

(ಗೊಂದಲ)

ಅಧ್ಯಕ್ಷರು ಅವರು ಉತ್ತರ ಕೊಡಲಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಆಯವ್ಯಯ ಮಂಡನೆ ಮಾಡಿ, ಆಯವ್ಯಯ ಚರ್ಚೆಯಾಗದೇ ನೀವು ಮಧ್ಯೆ ಬಂದು ಹೇಳಿಕೆ ಕೊಟ್ಟು ಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಾನೇನು ಮಾಡಿದ್ದೇನೆಂದು ಉತ್ತರ ಕೊಡುತ್ತೇನೆ ಹೀಗೇ ನಡೆಯಬೇಕೆಂದು ನೀವು ಹೇಳುವುದಕ್ಕಾಗುವುದಿಲ್ಲ (ಗೊಂದಲ) ಅಧ್ಯಕ್ಷರ ಅಪ್ಪಣೆ ಪಡೆದು ಮಾಡಿದ್ದೇನೆ(ಗೊಂದಲ) ಇವತ್ತು ರೈತರು ನಮ್ಮದೇನು ಗತಿ? 50 ಸಾವಿರ ಮಾಡಿದ್ದಾರೆ, ನಮ್ಮದು 25 ಸಾವಿರ ಮನ್ನಾ ಆದ ಮೇಲೆ ನೆಮ್ಮದಿಯಿಂದ ಬದುಕುತ್ತೇನೆ ಎನ್ನುವಂಥ ಮನುಷ್ಯ, ಯಾವ ರೈತ ಸಂಕಷ್ಟದಲ್ಲಿದ್ದ ಅವನಿಗೆ ಇನ್ನೊಂದು ವಾರದ ಕಾಲದವರೆಗೂ ಏನೋ ಆಗುತ್ತದೆ

ಎನ್ನುವ ಅಗತ್ಯವಿಲ್ಲ, ಇವತ್ತೇ ನಿಮಗೂ 25 ಸಾವಿರ concession ಕೊಟ್ಟಿದ್ದೇನೆಂದು ಹೇಳಿದರೆ ಅವರು ಇವತ್ತು ನೆಮ್ಮದಿಯಿಂದ ಊಟ ಮಾಡುತ್ತಾರೆ ಅದಕ್ಕೆ ಅವರಿಗೆ ಸಂಕಟವೇನು? (ಗೊಂದಲ) ನಿಮ್ಮ ಸಮಸ್ಯೆ ಏನು ಕೇಳಿ?(ಗೊಂದಲ)

ಶ್ರೀ ಧರ್ಮಸಿಂಗ್ ಘೋಷಣೆ ಮಾಡುತ್ತಿದ್ದೀರಿ ರೈತರಿಗೆ ವಂಚನೆ ಮಾಡುತ್ತಿದ್ದೀರಿ

(ಗೊಂದಲ)

ಅಧ್ಯಕ್ಷರು ದಯಮಾಡಿ, ಕುಳಿತುಕೊಳ್ಳಿ ಅವರು ಉತ್ತರ ಹೇಳಲಿ ಪ್ರಶ್ನೆಗಳಿಗೆ ಉತ್ತರ ಹೇಳಲಿ (ಗೊಂದಲ)

(ಗೊಂದಲ)

ಅಧ್ಯಕ್ಷರು ನೋಡಿ ದಯಮಾಡಿ ಕೇಳಿ ಅವರು statement ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟೆ, Statement ಮಾಡಿದ ಮೇಲೆ ನಿಮ್ಮ ಸಲಹೆಗಳನ್ನು ನೀಡಿ(ಗೊಂದಲ) ಅದಕ್ಕೆ ಅವರು ಉತ್ತರ ಕೊಡಬೇಕೆಲ್ಲವೇ?

ಶ್ರೀ ಜೆ ಸಿ ಮಾಧುಸ್ವಾಮಿ ಯಾವ ರೂಲ್ ಪ್ರಕಾರ ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ ಎಂದು ನಮಗೆ ಹೇಳಿ

(ಗೊಂದಲ)

ಅಧ್ಯಕ್ಷರು 345 ರ ಪ್ರಕಾರ ಮಾಡಿ ಕೊಟ್ಟಿದ್ದೇನೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಮಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ತಾವು ಸ್ಪೀಕರ್, ಲಾ ಮಿನಿಸ್ಟ್ರು ಹೇಳಿದ್ದಾರೆ 345ರ ಮೇಲೆ ಮಂತ್ರಿಗಳು ಹೇಗೆ ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು ನೋಡಿ ಸ್ವಾಮಿ ಮಾನ್ಯ ಮಂತ್ರಿಗಳು ಕೆಲವು ಸಾರ್ವಜನಿಕ ಮಹತ್ವವಿರುವ ಅಂಶಗಳ ಬಗ್ಗೆ ಹೇಳುವುದಕ್ಕೆ ಅವಕಾಶವಿದೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಯಾವ ರೂಲ್‌ನಲ್ಲಿ ಅವಕಾಶ ಕೊಟ್ಟಿದ್ದೀರಿ?

(ಗೊಂದಲ)

ಅಧ್ಯಕ್ಷರು ರೀ ಸ್ವಾಮಿ, ಮೊದಲು ಇಲ್ಲಿ ಕೇಳಿ 345ರ ಕೆಳಗೆ ಕೊಟ್ಟಿದ್ದೇನೆ ಕೊಟ್ಟ ತಕ್ಷಣ ಅವರು ಹೇಳಿಕೆ ಕೊಟ್ಟರು ಅವರು statement ಕೊಟ್ಟತಕ್ಷಣ ನೀವು ಕಾಯಿದೆಗಳನ್ನು ಹೇಳುವವರು ಚರ್ಚೆಯಲ್ಲಿ ಹೇಗೆ ಭಾಗವಹಿಸಿದಿರಿ? ಈಗ ನೀವು ಮಾತನಾಡುತ್ತಿರಾ? Are you questioning?

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ Yes, we are questioning

(ಗೊಂದಲ)

ಅಧ್ಯಕ್ಷರು ಚರ್ಚೆಯಲ್ಲಿ ಏಕೆ ಭಾಗವಹಿಸಿದಿರಿ? I have got power ನಾನು ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೇನೆ ನೀವು ಚರ್ಚೆಯಲ್ಲಿ ಭಾಗಿಯಾಗಿ ನಿಮಗೆ ಇಷ್ಟ ಬಂದ ಹಾಗೆ ಮಾತನಾಡುತ್ತೀರಿ I am seeing ಇಲ್ಲಿ ಏನಾಗಿದೆ ಎಂದರೆ, ನೀವು ಹೇಳುವುದನ್ನು ಒಪ್ಪಿದರೆ ಸರಿ ಅಲ್ಲದಿದ್ದರೆ ಅಲ್ಲ ನೀವು ಹೇಗೆ ಚರ್ಚೆಯಲ್ಲಿ ಭಾಗವಹಿಸಿದಿರಿ? ಅವರೇನು statement ಮಾಡಿದ ತಕ್ಷಣ ನೀವು ಎದ್ದು ನಿಂತು ಮಾಡುವ ಹಾಗೆ ಇಲ್ಲ ಎಂದು ಹೇಳಿದ್ದರೆ I would have agreed ಈಗ ಏನಾಗಿದೆ ಎಂದರೆ, ನೀವು ಹೇಳುವುದನ್ನ ಹೇಳಿ ಬಿಟ್ಟು ಕೊನೆಯಲ್ಲಿ ಈ ರೀತಿ ಹೇಳಿದರೆ ಹೇಗೆ? ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ನಾವೇನು ಹೆದರಿಕೊಂಡು ಓಡಿ ಹೋಗುವುದಕ್ಕೆ ಬಂದಿಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಇಲ್ಲಿ ಹುಚ್ಚು-ಹುಚ್ಚಾಗಿ ಮಾತನಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಅಧ್ಯಕ್ಷರು ನನಗೆ ಇರತಕ್ಕಂಥ ಅಧಿಕಾರದಲ್ಲಿ ನಿಯಾಮಾವಳಿಯಲ್ಲಿರುವಂತೆ ಅವರಿಗೆ ಅವಕಾಶ ಕೊಟ್ಟಿದ್ದೇನೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಸಭೆ ಅಕ್ರಮವಾಗಿ ನಡೆಯುತ್ತಿದೆ

ಅಧ್ಯಕ್ಷರು ನೀವು ಉತ್ತರ ಕೊಡಿ ಸ್ವಾಮಿ ಏನೆಂದರೆ ನೀವೇ ಕೆಲವು ಜನ ಈ ಸದನವನ್ನು ಗುತ್ತಿಗೆ ತೆಗೆದುಕೊಂಡಿದ್ದೀರಿ ನನಗಿರತಕ್ಕಂಥ ಅಧಿಕಾರವನ್ನು ಬಳಸಿಕೊಂಡು ಅವರಿಗೆ statement ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಆ ಚರ್ಚೆಯಲ್ಲಿ ನೀವೇಕೆ ಭಾಗವಹಿಸಿದಿರಿ? ಚರ್ಚೆಯಲ್ಲಿ ಭಾಗವಹಿಸಿ ನಿಮ್ಮ ಸಲಹೆಗಳನ್ನು ಕೊಟ್ಟು ಈಗ ಯಾವ ನಿಯಮದಲ್ಲಿ ಕೊಟ್ಟರಿ ಎಂದು ಕೇಳುತ್ತಿದ್ದೀರಾ?ಇದು ನಿಮಗೆ ಗೌರವವಲ್ಲ ಎನೆಂದರೆ ನೀವೆಲ್ಲ ಕೆಲವರು ಗುತ್ತಿಗೆಗೆ ತೆಗೆದುಕೊಂಡಿದ್ದೀರಾ? No I am seeing ಪ್ರತಿಯೊಂದಕ್ಕೂ ಒಂದು ಇತಿ ಮಿತಿ ಇದೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ನಮಗೆ ಹೇಳಬೇಡಿ ನೀವು ಮೊದಲು ಬೇರೆಯವರಿಗೆ ಹೇಳಿ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಯಾವುದು apply ಆಗುವುದಿಲ್ಲವೆಂದು ಹೇಳುತ್ತೀರೋ ಅದನ್ನು ಅಲ್ಲೇ ಪಕ್ಕದಲ್ಲೇ ಇರುವವರು ಮಾತನಾಡಲು ಬಿಡುತ್ತಾರೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಸಿಟ್ಟಿನಿಂದ ಸದನವನ್ನು ನಡೆಸುವುದು ಒಳ್ಳೆಯದಲ್ಲ

ಅಧ್ಯಕ್ಷರು ನೋಡಿ ಸ್ವಾಮಿ, ನಾನು ಹೇಳುತ್ತೇನೆ ಕೇಳಿ, ನೀವು ಕೆಲವು ಜನ ಗುತ್ತಿಗೆ ತೆಗೆದುಕೊಂಡ ಹಾಗೆ ನೀವು ಹೇಳಿದಂತೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ ಈ ನಿಯಮಾವಳಿಯಲ್ಲಿರತಕ್ಕಂಥ provisions ಏನು ಇದೆ ಅದರ ಮೇಲೆ ನನ್ನ ಅಧಿಕಾರವನ್ನು ಉಪಯೋಗಿಸಿ ಅವರಿಗೆ ಅವಕಾಶ ಕೊಟ್ಟಿದ್ದೇನೆ ಇದರ ಬಗ್ಗೆ ನಿಯಮಾವಳಿ 345 clear ಆಗಿ ಹೇಳುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಬಜೆಟ್‌ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಅವರು ಹೇಳಬೇಕು

ಅಧ್ಯಕ್ಷರು ನೀವು ಮೊದಲು ನನ್ನ ಮಾತನ್ನು ಕೇಳಿ ಸ್ವಾಮಿ ಅವರು statement ಮಾಡಿದ ತಕ್ಷಣ ನೀವು ಈ ಪ್ರಶ್ನೆಯನ್ನು ಎತ್ತಿದ್ದರೆ, I would have agreed ಈಗ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಿ, ಸಲಹೆಗಳನ್ನು ಕೊಟ್ಟು, ಉತ್ತರ ಕೊಡಿ ಎಂದಾಗ ನೀವು rules ಹೇಳುತ್ತಿದ್ದೀರಿ? ಇದು ಸರಿಯೇ?

ಶ್ರೀ ಜೆ ಸಿ ಮಾಧುಸ್ವಾಮಿ ಹೌದು ಅವರು ಹೇಳುವವರೆಗೂ ನಾವು ಕೇಳಿರಲಿಲ್ಲ ದಯಮಾಡಿ ನಮಗೆ ಹೇಳುವುದಕ್ಕೆ ಅವಕಾಶ ಕೊಡಿ ನಿಮ್ಮ Law Minister ರವರೇ rules quote ಮಾಡಿದ್ದು, ನಾವಲ್ಲ

(ಗೊಂದಲ)

ಅಧ್ಯಕ್ಷರು ನೀವು ಬುದ್ಧಿವಂತರಿರಬಹುದು ಆದರೆ ನಿಮ್ಮ ಬುದ್ಧಿವಂತಿಕೆಯನ್ನು ಈ ಸಭೆಯನ್ನು ಹಾಳು ಮಾಡುವುದಕ್ಕೆ ದಯಮಾಡಿ ಉಪಯೋಗಿಸಬೇಡಿ

(ಗೊಂದಲ)

SRI J C MADHUSWAMY. Rules can not be mis-quoted How can he mis-quote a rule?

(ಗೊಂದಲ)

ಅಧ್ಯಕ್ಷರು ನಮಗೂ ನೋಡಿ ನೋಡಿ ಸಾಕಾಗಿ ಹೋಗಿದೆ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಅವರು permission ಕೊಡುತ್ತಾರೆ ಯಾವುದು apply ಆಗುವುದಿಲ್ಲವೆನ್ನುವುದು ತಾವು ಹೇಳಿ How it is not applicable ಎಂಬುದನ್ನು ತಾವು ಹೇಳಿ You ask your friends and enlighten this House ನಿಮ್ಮಲ್ಲೇ ಎಲ್ಲರೂ ಮಾತನಾಡಿದರೆ ತಪ್ಪಾಗುತ್ತದೆ How it is not applicable ಎಂಬುದನ್ನು ತಾವು ಹೇಳಿ We are here to correct We are here to learn ತಾವು ಮಾತನಾಡಿ ಅದರಲ್ಲೇನಿದೆ ಯಾರೇನೂ ಬೃಹಸ್ಪತಿಗಳಲ್ಲ

ಅಧ್ಯಕ್ಷರು ಈಗ ನಾನು 345 ರ ಅಡಿಯಲ್ಲಿ ಅವಕಾಶ ಕೊಟ್ಟಿದ್ದೇನೆ ಆ ಸಂದರ್ಭದಲ್ಲಿ ಅವರು ಈ ಪ್ರಶ್ನೆ ಎತ್ತಲಿಲ್ಲ ಅವರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿದರು ಎಲ್ಲರೂ ಭಾಗವಹಿಸಿದ ಮೇಲೆ ಇವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟಾಗ ಅನೇಕ ತಕರಾರುಗಳನ್ನು ಎತ್ತಿದರು ಈಗ ಯಾವ ನಿಯಮಾವಳಿಯಡಿಯಲ್ಲಿ ಕೊಟ್ಟಿದ್ದೀರೆಂದು ಕೇಳುತ್ತಿದ್ದಾರೆ ನಿಯಮಾವಳಿಯಲ್ಲಿ ದತ್ತಕವಾಗಿರತಕ್ಕಂಥ ಅದಿಕಾರದಲ್ಲೇ ಕೊಟ್ಟಿರುವುದು ನಾನು ಮೊದಲಿನಿಂದಲೂ ಕೆಲವರು ಇಲ್ಲಿ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದನ್ನು ಗಮನಿಸಿದ್ದೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ತಾವು ದಯಮಾಡಿ ಸ್ವಲ್ಪ ತಾಳ್ಮೆಯನ್ನು ವಹಿಸಬೇಕು

(ಗೊಂದಲ)

ಅಧ್ಯಕ್ಷರು ನೋಡಿ ಸ್ವಾಮಿ ನೀವು ಪಂಡಿತರೇ ಇರಬಹುದು ಆದರೆ ಕೊನೆಯ ಪಕ್ಷ ನಿಯಮಗಳನ್ನಾದರೂ ಓದಿಕೊಂಡು ಅರ್ಥ ಮಾಡಿಕೊಳ್ಳುವಂಥ ಶಕ್ತಿಯಾದರೂ ನನಗೆ ಇದೆ ನೀವು ನಡೆದುಕೊಳ್ಳುವ ರೀತಿ, ಈ ಪೀಠಕ್ಕೆ ತೋರಿಸುವ ಅಗೌರವ ಎಲ್ಲವನ್ನೂ ನಾನು ನೋಡಿದ್ದೇನೆ ಯಾರೂನೂ ಎಲ್ಲಿಯೂ ಇಲ್ಲದೇ ಇರತಕ್ಕಂಥಾದ್ದು ಮಾಡಿಲ್ಲ ಇವತ್ತು ಅಂಬೇಡ್ಕರ್‌ರವರು ರಚಿಸಿದರು ಸಂವಿಧಾನದಂತೆಯೇ ನಾವು ನಡೆದುಕೊಳ್ಳುತ್ತಿದ್ದೇವೆ

(ಗೊಂದಲ)

ಶ್ರೀ ರಮೇಶ್ ಕುಮಾರ್ ತಾವು ಏಕೆ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದೀರಿ ಎಂದು ಗೊತ್ತಾಗುತ್ತಿಲ್ಲ

(ಗೊಂದಲ)

ಅಧ್ಯಕ್ಷರು ಇದೇನು ಸ್ವಾಮಿ? ಎಲ್ಲದ್ದಕ್ಕೂ ಒಂದು ಇತಿ ಮಿತಿ ಇದೆ ಏನೂ ಗೊತ್ತಿಲ್ಲವೆಂದು ಅಗೌರವ ಕೊಡುತ್ತಿರುವುದು, ಬಾಯಿಗೆ ಬಂದ ಹಾಗೆ

ಮಾತನಾಡುವುದು ದಯಮಾಡಿ ಕುಳಿತುಕೊಳ್ಳಿ ಮಾನ್ಯ ರಮೇಶ್ ಕುಮಾರ್‌ರವರು ಏನು ಮಾತನಾಡುತ್ತಾರೆಂದು ಕೇಳೋಣ

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್ ದಯಮಾಡಿ ಕುಳಿತುಕೊಳ್ಳಿ ನಾವೂ ಒಂದು ಮಾತು ಹೇಳುತ್ತೇವೆ ಅಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರೆಲ್ಲರೂ ಮಾತನಾಡುವುದನ್ನು ನಾವು ಕೇಳಿದ್ದೇವೆ ಈಗ ನಾವು ಮಾತನಾಡುವುದಕ್ಕೆ ಬಿಡಿ

(ಗೊಂದಲ)

ಶ್ರೀ ಸಿದ್ದು ಸವದಿ ಮೊದಲು ನೀವು ಬಡ್ಡಿ ಮನ್ನಾ ಮಾಡುವುದರ ಬಗ್ಗೆ ಪ್ರಯತ್ನ ಮಾಡಿ ರೈತರ ಬಗ್ಗೆ ಚಿಂತನೆ ಮಾಡಿ

(ಗೊಂದಲ)

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಮಾನ್ಯ ರಮೇಶ್ ಕುಮಾರ್‌ರವರು ಏನು ಹೇಳುತ್ತಾರೆ ಕೇಳೋಣ

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು ಸಾಲ ಮನ್ನಾದ ಹೆಚ್ಚುವರಿ ಹಣದ ಬಗ್ಗೆ ನಾವೆಲ್ಲರೂ ಅವರನ್ನು ಅಭಿನಂದಿಸಬೇಕಾಗಿದೆ ರೈತರ ಸಮಸ್ಯೆಯನ್ನು ಅಷ್ಟು ಶೀಘ್ರವಾಗಿ ಪರಿಹಾರ ಮಾಡಿದ್ದಾರೆ ಏಕೆಂದರೆ, ಬಜೆಟ್ ಮಂಡನೆ ಮಾಡಿದಂಥ ದಿವಸದಿಂದ ಮಾನ್ಯ ಯಡಿಯೂರಪ್ಪನವರ ಮೇಲೆ ರೈತರ ಒತ್ತಡ ಎಷ್ಟು ಇತ್ತು ಎಂಬುದು ನಮಗೆ ಗೊತ್ತಿದೆ ಪ್ರತಿನಿತ್ಯ ಸಾವಿರಾರು ರೈತರು ಅವರ ಮನೆಯ ಬಾಗಿಲಿಗೆ ಹೋಗುತ್ತಿದ್ದರು ನೀವು ಮಾಡುತ್ತಿರುವಂಥ 25 ಸಾವಿರ ರೂಪಾಯಿಯಿಂದ 50 ಸಾವಿರ ರೂಪಾಯಿಗೆ ಏರಿಸಿ ನಮಗೆ ಪರಿಹಾರವನ್ನು ಕೊಡಿ ಎನ್ನತಕ್ಕಂಥ ಒತ್ತಡ ರೈತರ ಸಮಸ್ಯೆಯನ್ನು ಅರಿತುಕೊಂಡಂಥ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅವರನ್ನು ನಾವು ಅಭಿನಂದಿಸುವುದನ್ನು ಬಿಟ್ಟು ಕಾನೂನು, ಸಂವಿಧಾನ, ಸರಿಯಿಲ್ಲ, ಈ ರೀತಿಯ ಅಪಸ್ವರದ ಭಾವನೆಗಳನ್ನು ಇಲ್ಲಿ ಏಕೆ ಇವರು ವ್ಯಕ್ತ ಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ ಇವತ್ತು ನಾವು ಮಾನ್ಯ ಮುಖ್ಯಮಂತ್ರಿಗಳು ಮತ್ತು ಯಡಿಯೂರಪ್ಪನವರನ್ನು ಅಭಿನಂದಿಸಬೇಕಾಗಿದೆ ಚರ್ಚೆಯಾಗುವುದಕ್ಕೆ ಮುಂಚಿತವಾಗಿ ರೈತರ ಸಮಸ್ಯೆಗೆ ಸ್ಪಂದಿಸಿದ್ದಾರೆ ಅವರನ್ನು ನೀವು ಒಕ್ಕೊರಲಿಂದ ಅಭಿನಂದಿಸಿ ನಿಮ್ಮ ಸರ್ಕಾರ ಇದ್ದಾಗ ನೀವು ಮಾಡಿರತಕ್ಕಂಥ ಸಾಧನೆಗಳನ್ನು ನೀವು ನೆನಪಿಸಿಕೊಳ್ಳಿ ಅದಕ್ಕಿಂತ ಮಹತ್ತರವಾದಂಥ ಸಾಧನೆ ಇವತ್ತು ಆಗಿದೆ ಇತಿಹಾಸವನ್ನು ಸೃಷ್ಟಿಸಿದ್ದಾರೆ ಇಷ್ಟು ದೊಡ್ಡ ಮೊತ್ತದ ಹಣವನ್ನು ರೈತರ ಪರವಾಗಿ ಮುಡಿಪಾಗಿಟ್ಟಿದ್ದಾರೆ ಅದನ್ನು ಶ್ಲಾಘನೆ ಮಾಡುವುದನ್ನು ಬಿಟ್ಟು, ಕಾನೂನು ಸಮರದ

ವ್ಯವಸ್ಥೆಯಲ್ಲಿ ಇದನ್ನು ಹೋರಾಟಕ್ಕೆ ತೆಗೆದುಕೊಳ್ಳುತ್ತಿದ್ದೀರಲ್ಲ, ಇದು ನ್ಯಾಯವೇ? ಇದರ ಬಗ್ಗೆ ನೀವು ಆತ್ಮವಿಮರ್ಶೆ ಮಾಡಿಕೊಳ್ಳಿ ಪ್ರಾಮಾಣಿಕವಾಗಿ ಹೇಳಿ ಯಡಿಯೂರಪ್ಪನವರು ಮಾಡುತ್ತಿರುವಂಥ ಕೆಲಸ ಒಳ್ಳೆಯ ಕೆಲಸ

(ಗೊಂದಲ)

ಅಧ್ಯಕ್ಷರು ಅವರು ಅವರ ಭಾವನೆಗಳನ್ನು ಹೇಳುತ್ತಿದ್ದಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಎಂ ಪಿ ವೆಂಕಟೇಶ್ ಇವತ್ತು ಸಮ್ಮಿಶ್ರ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ ವಿರೋಧ ಪಕ್ಷದವರು ಹೇಳಿದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಇವತ್ತೇನು ಹಣಕಾಸು ಸಚಿವರು ಮಂಡನೆ ಮಾಡಿದ್ದಾರೆ ಅದನ್ನು ತಾವು ಸ್ವಾಗತ ಮಾಡಬೇಕು ಸರ್ಕಾರಕ್ಕೆ ಅಭಿನಂದನೆ ಹೇಳಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ನಾನು statement ಮಾಡುತ್ತೇನೆಂದು ತಮ್ಮ ಅನುಮತಿಯನ್ನು ಪಡೆದು statement ಮಾಡಿದ್ದೇನೆ Statement ಮಾಡಿದ ನಂತರ ಸುಮಾರು ಒಂದು ಗಂಟೆಯ ಕಾಲ ಗೌರವಾನ್ವಿತ ವಿರೋಧ ಪಕ್ಷದ ಎಲ್ಲಾ ನಾಯಕರೂ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ ನಾನು ಯಾವ ಪರಿಸ್ಥಿತಿಯಲ್ಲಿದ್ದೇನೆ, 1950 ಕೋಟಿ ರೂಪಾಯಿಗಳ concession ಕೊಟ್ಟಿದ್ದೇನೆ ನನ್ನ ಹಣಕಾಸಿನ ಇತಿ ಮಿತಿಯಲ್ಲಿ ಇದನ್ನು ಮಾಡಿದ್ದೇನೆ ಇಲ್ಲಿ ಈ ಚರ್ಚೆ ಮಾಡುವುದರ ಬದಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಸಾಲ ಮನ್ನಾ ಆಗಬೇಕು, ಬಡ್ಡಿ ಮನ್ನಾ ಆಗಬೇಕು ಎಂದು ಅಲ್ಲಿ ಸತ್ಯಾಗ್ರಹವನ್ನು, ಹೋರಾಟವನ್ನು ಅಥವಾ ತಾವೆಲ್ಲರೂ ಒಪ್ಪಿಗೆ ಕೊಟ್ಟರೆ ಇಲ್ಲಿ ಸರ್ವಾನುಮತದ ನಿರ್ಣಯ ಮಾಡಿ ಇಂಥ ಭೀಕರ ಬರಗಾಲವಿರುವಂಥ ಕಾಲದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಸಹ ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ ಆಗಬೇಕೆಂದು ಒಂದು ನಿರ್ಣಯ ಮಾಡುವಂಥ ಸಂದರ್ಭ ಇದು ಇಂಥ ಸಂದರ್ಭದಲ್ಲಿ ನಾನು statement ಮಾಡುವಾಗ, ಮನೆ ಮನೆಗಳಲ್ಲಿ ಇವತ್ತು ಆಯವ್ಯಯದ ಬಗ್ಗೆ ಚರ್ಚೆಯಾಗುತ್ತಿದೆ ನಮಗೆ ಇರುವ ಅನುಮಾನವೇನೆಂದರೆ ಕಳೆದ ಬಜೆಟ್ ಮೇಲೆ ಚರ್ಚೆಯಾಗಲಿಲ್ಲ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಲಿಲ್ಲ, ಈ ಬಾರಿಯೂ ಕೂಡ ಆಯವ್ಯಯದ ಮೇಲೆ ಚರ್ಚೆಯಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ನನಗೆ ಇದೆ ಅದಕ್ಕಾಗಿ ರೈತರ ಅನುಕೂಲಕ್ಕಾಗಿ ಈಗ ನಾನು announce ಮಾಡಿದರೆ ನಿಮಗೆ ಏನು ತೊಂದರೆಯಾಗಿದೆ?

ಶ್ರೀ ಎನ್ ದರ್ಮಸಿಂಗ್ ಮನೆಮನೆಯಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿದೆ ಎಂದು ಹೇಳುವುದು ನಿಮ್ಮ ಬ್ರಮೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ನಮ್ಮ ಜೊತೆ ಬನ್ನಿ ನಿಮಗೆ ಸಿಟ್ಟು ಏಕೆ ಬರುತ್ತದೆ?

ಶ್ರೀ ಎನ್ ಧರ್ಮಸಿಂಗ್ ನಿಮ್ಮ ಮಿತ್ರ ಪಕ್ಷದವರೇ ಹೇಳುತ್ತಿದ್ದಾರಲ್ಲ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಇಷ್ಟು ವರ್ಷ ನೀವು ಅಧಿಕಾರ ನಡೆಸಿರುವುದು ನೀವು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ, ಮನೆ ಮನೆಯಲ್ಲಿ ಚರ್ಚೆಯಾಗುತ್ತಿರುವ ಬಗ್ಗೆಯೂ ಹೇಳಿ

ಶ್ರೀ ಎನ್ ಧರ್ಮಸಿಂಗ್ ಜ್ಞಾನೇಂದ್ರರವರೇ, ಒಂದು ನಿಮಿಷ, ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾದ ಮೇಲೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳಿ ತಾವು rules ಪ್ರಕಾರ ನಮಗೆ ಅವಕಾಶ ಕೊಟ್ಟಿದ್ದಾರೆ ಎಂದು ಹೇಳಿದಿರಿ ಸಾಮಾನ್ಯವಾಗಿ ಸದನದಲ್ಲಿ ಬಜೆಟ್ ಮಂಡನೆಯಾದ ಮೇಲೆ ಅದೇ ವಿಚಾರವಾಗಿ ಪ್ರಸ್ತಾಪ ಮಾಡತಕ್ಕಂಥ ಅವಕಾಶ ಆಗಬಾರದು ಚರ್ಚೆ ಆಗಬಾರದು ಇದು ಸರಿಯಲ್ಲ ನೀವು ಬಜೆಟ್ ಚರ್ಚೆಯ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ ಈಗೇಕೆ ಹೇಳುತ್ತೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅದ್ಯಕ್ಷರೆ, ಇಲ್ಲಿರತಕ್ಕಂದ ಮಾನ್ಯ ವಿರೋಧಪಕ್ಷದ ನಾಯಕರು ಹಿಂದೆ ಮುಖ್ಯಮಂತ್ರಿಗಳಾಗಿದ್ದರು ಮತ್ತು ಅವರು ಸಾಕಷ್ಟು ಅನುಭವವನ್ನು ಸಹ ಹೊಂದಿದ್ದಾರೆ ಮತ್ತೆ ಇಲ್ಲಿ ಸ್ಪೀಕರ್ ಆಗಿದ್ದಂಥ ಮಾನ್ಯ ರಮೇಶ್‌ಕುಮಾರ್‌ರವರು ಸಹ ಅಲ್ಲಿ ಕುಳಿತುಕೊಂಡಿದ್ದಾರೆ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುವುದೇನೆಂದರೆ, 31 03 2007ರೊಳಗಾಗಿ ಅವರು ರೀ–ಪೇಮೆಂಟ್ ಮಾಡಬಹುದಾಗಿದೆ ಆದರೆ, ಈ ಅವಧಿ ಕೇವಲ ಇನ್ನು 7–8 ದಿವಸಳು ಇರುವುದರಿಂದ 50 ಸಾವಿರ ರೂಪಾಯಿ ಗಳವರೆಗೆ ಸಾಲ ಇರತಕ್ಕಂಥವರು ಮೊದಲು 25 ಸಾವಿರ ರೂಪಾಯಿ ಕಟ್ಟಿರೆ ಬಾಕಿ ಇರತಕ್ಕಂಥ 25 ಸಾವಿರ ರೂಪಾಯಿಗಳಿಗೆ ಅಸಲು ಕೊಟ್ಟಿದರೆ, ಬಡ್ಡಿ ಹಣವನ್ನು ಮನ್ನಾ ಮಾಡುತ್ತೇವೆಂಬ ಮೆಸೇಜ್ ಆದಷ್ಟು ಬೇಗ ಅವರಿಗೆ ತಲುಪಿದರೆ ಅವರು ಬೇಗ ಹಣವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆಂಬ ಕಾರಣದಿಂದ ನಿಮ್ಮ

ಅನುಮತಿಯನ್ನು ಪಡೆದು ನಾನು ಇಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ ಇದಕ್ಕೆ ಕ್ಲಾರಿಫಿಕೇಷನ್‌ನ್ನು ಗಂಟೆಗಟ್ಟಲೆ ಕೇಳಿದರು ನನ್ನ ಹಣಕಾಸಿನ ಇತಿಮಿತಿಯಲ್ಲಿ ಇದಕ್ಕಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇನೆ ಮತ್ತೆ ಇವತ್ತಿನ ದಿವಸ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಅನುಕೂಲವಾಗುತ್ತಿದೆ ಎಂಬ ಮಾತನ್ನು ನಾನು ಹೇಳಿದ್ದೇನೆ ಇದರ ಬಗ್ಗೆ ಚರ್ಚೆ ಕೂಡ ಆಯಿತು ಕಾನೂನಿನ ಚೌಕಟ್ಟಿನಲ್ಲಿ ಇದಕ್ಕೆ ಅವಕಾಶವಿಲ್ಲ, ನಿಯಮಾವಳಿಯಲ್ಲಿ ಅವಕಾಶವಿಲ್ಲವೆಂದು ಈಗ ಹೇಳಿದರೆ ಹೇಗೆ? ನಾನು ಸ್ಟೇಟ್‌ಮೆಂಟ್ ಮಾಡಿದ ತಕ್ಷಣ ಈ ನಿಯಮಾವಳಿ ಪ್ರಕಾರ ಅವಕಾಶ ಇಲ್ಲವೆಂದು ಹೇಳಿದ್ದರೆ ನಿಮ್ಮ ರೂಲಿಂಗ್‌ಗೆ ನಾನು ಕಾಯುತ್ತಿದ್ದೆ ಆದರೆ, ಈಗ ಸ್ಟೇಟ್‌ಮೆಂಟ್ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟು ಇದರ ಬಗ್ಗೆ ಎಲ್ಲವೂ ಚರ್ಚೆಯಾದ ಮೇಲೆ, ಈ ರಾಜ್ಯದ ರೈತರಿಗೆ ಇಂಥ ನೆರವು ಸಿಗುತ್ತದೆ ಎಂದು ಸಂತೋಷಪಟ್ಟು ಅಭಿನಂದನೆ ಸಲ್ಲಿಸುವುದನ್ನು ಬಿಟ್ಟು ಏನೋ ಅನುಕೂಲ ಆಗಿಹೋಯಿತಲ್ಲಾ ಎಂದು ತಾವು ಸಂಕಟ ಪಟ್ಟುಕೊಂಡು ಬೇರೆ ರೀತಿಯಲ್ಲಿ ಮಾತನಾಡಿದರೆ ಹೇಗೆ? ನೀವೇನು ಮಾಡಿದ್ದೀರೆಂಬುದನ್ನು ಹೇಳಿ? ಹಿಂದೆ ಭೀಕರವಾದಂಥ ಬರಗಾಲ ಇತ್ತು ಆಗ ಸಾಲ ಮನ್ನಾ ಮಾಡಿದ್ದೀರಾ? ಇವತ್ತಿನ ದಿವಸ 1960 ಕೋಟಿ ರೂಪಾಯಿಗಳ ಸಾಲವನ್ನು ನಾನು ಮನ್ನಾ ಮಾಡಿದ್ದೇನೆ

ಶ್ರೀ ಎನ್ ಧರ್ಮಸಿಂಗ್ – 241 ಕೋಟಿ ಪಿ ಎಲ್ ಡಿ ಬ್ಯಾಂಕ್‌ನ ಹಣ ಇದೆ ಮತ್ತೆ ನೀವು ಬರಗಾಲವನ್ನು ಎಲ್ಲಿ ನಿವಾರಣೆ ಮಾಡುತ್ತಿದ್ದೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ – 6% ಇದ್ದಂಥ ಬಡ್ಡಿಯನ್ನು 4%ಗೆ ಮಾಡಿದ್ದೇವೆ ಇದನ್ನು ಈ ದೇಶದಲ್ಲಿಯೇ ಮೊದಲ ಬಾರಿಗೆ ನಮ್ಮ ಸಮಿಶ್ರ ಸರ್ಕಾರ ಮಾಡಿದೆ ಈ ದೇಶದಲ್ಲಿ ಯಾರೂ ಕೂಡ 4%ಬಡ್ಡಿಗೆ ಸಾಲವನ್ನು ಕೊಟ್ಟಿಲ್ಲ

(ಗೊಂದಲ)

ಶ್ರೀ ಸಿದ್ದರಾಮಯ್ಯ – 11% ಇದ್ದಂಥದನ್ನು 6%ಗೆ ಇಳಿಸಿರತಕ್ಕಂಥದು ದೊಡ್ಡದೆ ಅಥವಾ 6% ಇದ್ದಂಥದನ್ನು 4% ಇಳಿಸಿರತಕ್ಕಂಥದು ಹೆಚ್ಚೇ?

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ರಾಜ್ಯದಲ್ಲಿ ಬರಗಾಲ ಇದೆ ಆದ್ದರಿಂದ ರೈತರ ಸಾಲ ಮನ್ನಾ ಮಾಡಬೇಕು ಆದ್ದರಿಂದ ಕೇಂದ್ರಕ್ಕೆ ನಿಯೋಗ ಹೋಗೋಣವೆಂದು ಹೇಳಿದಾಗ ಒಪ್ಪದೆ ಇರತಕ್ಕಂಥವರು ನೀವು ಇವತ್ತಿನ ದಿವಸ ಕೇಂದ್ರ ಸರ್ಕಾರದಿಂದ ಯಾವುದೇ ನೆರವು ಬಂದಿಲ್ಲ ಮತ್ತೆ ಬರಗಾಲಕ್ಕೂ ಸಹ ನೆರವು ಬಂದಿಲ್ಲ

ಶ್ರೀ ಸಿದ್ದರಾಮಯ್ಯ – ಮಾನ್ಯ ಯಡಿಯೂರಪ್ಪನವರೆ ಕೇಂದ್ರ ಸರ್ಕಾರ ಕೊಟ್ಟಿರಕ್ಕಂಥ ಹಣವನ್ನು ನೀವು ಇನ್ನೂ ಖರ್ಚು ಮಾಡಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ನಾವು ರೈತರಿಗೆ ಮಾಡಿಕೊಟ್ಟಿರುವ ಸವಲತ್ತಿನ ಬಗ್ಗೆ ಸ್ವಾಗತ ಮಾಡದೆ, ಅದರ ಬದಲು ಏನು ಬೇಕಾದರೂ ಮಾತನಾಡಿದರೆ ಹೇಗೆ? ನಿಮಗೆ ಇದನ್ನು ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ ಸಂಕಟ ಪಟ್ಟುಕೊಂಡು ಮಾತನಾಡುತ್ತಿದ್ದೀರಿ

ಅಧ್ಯಕ್ಷರು – ಮಾನ್ಯ ಖರ್ಗೆಯವರೆ, ತಾವೆಲ್ಲರೂ ಇದರ ಬಗ್ಗೆ ತಮ್ಮಗಳ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ನಾನು ರೆಕಾರ್ಡ್ ಸ್ಟ್ರೈಟ್ ಆಗಿರಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಬೇರೇನೂ ಇಲ್ಲ ಅವರು ಹೇಳಿರತಕ್ಕಂಥಾದ್ದಕ್ಕೆ ನಾವು ತಪ್ಪಾಗಿ ಹೇಳಬೇಕೆಂದು ಅಥವಾ ನಮ್ಮದೇ ಆದಂಥ ವಿಷಯಗಳನ್ನು ಹೇಳಬೇಕೆಂದೇನೂ ಇಲ್ಲ ರೆಕಾರ್ಡ್ ಸ್ಟ್ರೈಟ್ ಆಗಿರಬೇಕಷ್ಟೆ

ಶ್ರೀ ಹೆಚ್ ಡಿ ಬಸವರಾಜು – ಮಾನ್ಯ ಅಧ್ಯಕ್ಷರೇ, ಇವರ ಉದ್ದೇಶ ನಮಗೆ ಅರ್ಥವಾಗುತ್ತಿಲ್ಲ ರೈತರಿಗೆ ಇದು ಸಿಗಬೇಕೆಂಬ ಉದ್ದೇಶ ಇದೆಯೇ ಅಥವಾ ಬೇಡವೆಂದು ಇದೆಯೇ ಎಂಬುದನ್ನು ಹೇಳಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಈ ದೇಶದಲ್ಲಿ 11% ಬಡ್ಡಿ ಇದ್ದಾಗ ಅದನ್ನು 6%ಗೆ ಮಾಡಿದ್ದೇವೆ ಆದರೆ, ನೀವೇನು ಮಾಡಿದ್ದೀರಿ, ಕೇಂದ್ರದಲ್ಲಿ 6% ಇದ್ದಾಗ ನೀವು 4%ಗೆ ತಂದಿರಿ ಆದ್ದರಿಂದ ಯಾವುದು ಹೆಚ್ಚು? ಯಾರನ್ನು ಮೆಚ್ಚುಸುವುದಕ್ಕೆ ಮಾಡಿದ್ದೀರಿ? ನೀವು ಸುಮ್ಮನೆ ಜಂಬಕೊಚ್ಚಿಕೊಳ್ಳಬೇಡಿ ಹಿಂದಿನದಕ್ಕೆ ಕಂಪೇರ್ ಮಾಡಿ ಅದನ್ನು ಬಿಟ್ಟು ಪ್ರತಿಯೊಂದಕ್ಕೂ ನೀವೇನು ಮಾಡಿದ್ದೀರಿ ಎಂದು ಹೇಳುತ್ತಿದ್ದೀರಷ್ಟೆ 11% ಇದ್ದಾಗ 6% ಮಾಡಿದ್ದೆವು ಮತ್ತೆ 6% ಇದ್ದಾಗ 4% ಮಾಡಿ ಸರಾಸರಿ ತೋರಿಸಿದ್ದೀರಿ ಮತ್ತೆ ಕೇಂದ್ರ ಸರ್ಕಾರದಿಂದ ಏನೂ ಬಂದಿಲ್ಲವೆಂದು ಹೇಳುತ್ತಿದ್ದೀರಿ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಹಣದಲ್ಲಿ ಅರ್ಧದಷ್ಟೂ ಖರ್ಚು ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಒಂದು ಸಲ ಅಲ್ಲ ನೂರು ಸಲ ನಾನು ಒಬ್ಬನೇ ಹೇಳುವುದಲ್ಲ, ಇವತ್ತಿನ ದಿವಸ ರೈತರು ಮತ್ತು ಪ್ಲಾನಿಂಗ್ ಕಮಿಷನ್ ಮೆಂಬರ್ ಆಗಿರುವ ಜೈನ್‌ರವರೂ ಸಹ ಹೇಳಿದ್ದಾರೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಜೈನ್‌ರವರ ಹತ್ತಿರ ಹೋಗೋಣ ಬನ್ನಿ ನೀವು 6% ಬಡ್ಡಿ ಮನ್ನಾ ಮಾಡಿದಂಥ ಹಣವನ್ನು ನನ್ನ ಸರ್ಕಾರ ತುಂಬಿಕೊಟ್ಟಿದೆ 6% ಬಡ್ಡಿ ಮನ್ನಾ ಮಾಡಿದಾಗ ಕೊಡಬೇಕಾಗಿರತಕ್ಕಂಥ ಹಣವನ್ನು ನಾನು ಹಣಕಾಸಿನ ಸಚಿವನಾದ ಮೇಲೆ ತುಂಬಿದ್ದೇವೆ ಈ ಹಣವನ್ನು ಆಗ ನೀವು ತುಂಬಲಿಲ್ಲ ಬೇಕಾದರೆ, ಅಂಕಿ–ಅಂಶಗಳನ್ನು ಕೊಡುತ್ತೇನೆ

(ಗೊಂದಲ)

ಅಧ್ಯಕ್ಷರು – ಒಂದು ನಿಮಿಷ ನನ್ನ ಮಾತನ್ನು ಕೇಳಿ ನಿಮ್ಮ ನಿಮ್ಮ ರಾಜಕೀಯ ಪಕ್ಷದ ಹೆಗ್ಗಳಿಕೆಯನ್ನು ತೋರಿಸುವುದಕ್ಕೆ ನಮ್ಮ ಸಮಯ ಹಾಳಾಗುವುದು ಬೇಡ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜ್ – ಹೆಗ್ಗಳಿಕೆ ಎಂಬ ಮಾತನ್ನು ಅವರು ಒಪ್ಪಬೇಕಾಗುತ್ತದೆ ಏಕೆಂದರೆ, ಸಾರಾಯಿ ಮತ್ತು ಲಾಟರಿ ನಿಷೇಧ ಮಾಡಿದ್ದೇವೆ ಅದೆಲ್ಲದರ ಜೊತೆಗೆ ಈಗ ರೈತರ ಸಾಲವನ್ನೂ ಕೂಡ ಮನ್ನಾ ಮಾಡುತ್ತಿದ್ದೇವೆ ಇದು ನಮ್ಮ ಸರ್ಕಾರದ ಹೆಗ್ಗಳಿಕೆ ವಿಚಾರವಲ್ಲವೇ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಕೇಂದ್ರ ಸರ್ಕಾರದಿಂದ ಬಂದಂಥ `869 ಕೋಟಿ ರೂಪಾಯಿಯ ಪ್ಯಾಕೇಜ್‌ನ ಹಣಕ್ಕೆ ಸಂಬಂಧಪಟ್ಟಂತೆ ಏನೇನು ಕೆಲಸ ಮಾಡಬೇಕೆಂದು ಇತ್ತು ಅದನ್ನು ಮಾಡಿದ್ದೀರಾ? ಮತ್ತು ಡೆಲ್ಲಿಗೆ ಹೋಗಿ ದುಡ್ಡು ತಂದಿದ್ದೀರಾ? ಆರು ತಿಂಗಳೊಳಗೆ ಅಲ್ಲಿಂದ ಹಣ ತಂದು ಖರ್ಚು ಮಾಡಿದ್ದೀರಾ? ಅದು ರೈತರಿಗೆ ಸಿಗುತ್ತಿರಲಿಲ್ಲವೇ? ಅದೇ ರೀತಿಯಾಗಿ ಸ್ಕೇರ್‌ಸಿಟಿ ಅಥವಾ ಫುಡ್‌ಗ್ರೈನ್ಸ್ ಮತ್ತು ಇತರೆಗೆ ಎಷ್ಟು ಹಣ ತಂದು ಇಲ್ಲಿ ಖರ್ಚು ಮಾಡಿದ್ದೀರಿ? ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಸಭೆಗಳನ್ನು ಮಾಡಿದ್ದೀರಿ? ಕುಡಿಯುವ ನೀರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಜೋರು ಬಾಯಿ ಇದೆ ಎಂದು ಹೇಳಿದರೆ ಆಗುತ್ತದೆಯೇ? ಈಗ ಸ್ಟೇಟ್‌ಮೆಂಟ್ ಮಾಡುತ್ತೀರಿ ಇದರ ಬಗ್ಗೆ ಸುಮ್ಮನೆ ವಾದವಿವಾದ ಮಾಡುವುದಿಲ್ಲ These are the facts No body can deny simply because he is shouting. ಹೋದ ವರ್ಷ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಣಕಾಸಿನ ಸಚಿವರಾಗಿದ್ದಂಥ ಮಾನ್ಯ ಸಿದ್ದರಾಮಯ್ಯನವರು 1200 ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡಲಿಲ್ಲವೇ? ಆದರೆ, ನೀವು ಈಗ ಸಾಲದ ಹಣವನ್ನೆಲ್ಲಾ ಹಿಡಿದುಕೊಂಡು 1900 ಕೋಟಿ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಆ ಸಾಲದ ಮೇಲಿನ ಬಡ್ಡಿ ಹಣವನ್ನು ಹಣಕಾಸಿನ ಸಚಿವನಾದ ಮೇಲೆ ನಾನು ಕೊಟ್ಟಿದ್ದೇನೆ ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆ ಹಣವನ್ನು ಕೊಟ್ಟಿಲ್ಲ ಬಡ್ಡಿ ಮನ್ನಾ ಮಾಡಿದ್ದೇವೆಂದು ತಾವು ಕೇವಲ ಪ್ರಚಾರ ತೆಗೆದುಕೊಂಡು ನೀವು ಹೋದರಿ ಅಷ್ಟೆ. ಆ ಹಣವನ್ನು ನಾವು ತುಂಬಿದ್ದೇವೆ

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಮಾನ್ಯ ಅಧ್ಯಕ್ಷರೆ, ರೈತರ ಬಗ್ಗೆ ಇಷ್ಟೆಲ್ಲಾ ಬಾಯಿ ಬಡಿದುಕೊಳ್ಳತಕ್ಕಂಥ ಇವರು 4,100 ಕೋಟಿ ರೂಪಾಯಿ ಇರಿಗೇಷನ್‌ಗೆ ಇದ್ದಂಥದನ್ನು 3000 ಕೋಟಿ ರೂಪಾಯಿಗೆ ಇವರು ತಂದಿಟ್ಟಿದ್ದಾರೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ನೀರಾವರಿಗೋಸ್ಕರ ಎಷ್ಟು ಕೊಟ್ಟಿದ್ದೇನೆಂಬುದರ ಬಗ್ಗೆ ನಾನು ಅಂಕಿ-ಅಂಶ ಕೊಡುತ್ತೇನೆ ನೀರಾವರಿಗೆ ನಾನೇನಾದರೂ ಕಡಿಮೆ ಕೊಟ್ಟಿರತಕ್ಕಂಥಾದನ್ನು ಇವರು ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ

(ಗೊಂದಲ)

ಅಧ್ಯಕ್ಷರು – ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಬಜೆಟ್ ಮೇಲೆ ಸದರಿ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇದೆ ಆ ಸಮಯದಲ್ಲಿ ಈ ಎಲ್ಲಾ ವಿಷಯಗಳನ್ನು ಮಾತನಾಡಿ ಈಗ ಅವರು ಏನೊಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ ನಾನು ಹೇಳತಕ್ಕಂಥ ಮಾತನ್ನು ದಯವಿಟ್ಟು ಕೇಳಿ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ನೀರಾವರಿಗೆ ಹೋದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಕೊಟ್ಟಿದ್ದೇನೆ ಆದ್ದರಿಂದ ಕಡಿಮೆ ಕೊಟ್ಟಿದ್ದೇವೆಂದು ಇವರು ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ

(ಗೊಂದಲ)

ಶ್ರೀ ಸಿದ್ದರಾಮಯ್ಯ – ಅವರು ರಾಜೀನಾಮೆ ಕೊಡುವುದು ಬೇಡ ಅವರ್‍ಯಾರೂ ರಾಜೀನಾಮೆ ಕೊಡತಕ್ಕಂಥ ಅಗತ್ಯತೆ ಇಲ್ಲ ಮಾನ್ಯ ಖರ್ಗೆಯವರು ಬಜೆಟ್ ಪುಸ್ತಕವನ್ನು ನೋಡಿಕೊಂಡು ಹೇಳಿದ್ದಾರೆಯೇ ಹೊರತು ಬೇರೆ ಅಂಕಿ-ಅಂಶಗಳನ್ನು ಹೇಳಿಲ್ಲ ರಾಜೀನಾಮೆ ಕೊಟ್ಟು ಹೋಗುತ್ತೇವೆಂದು ನೀವು ಹೇಳುತ್ತಿದ್ದೀರಿ ಆದರೆ, ಅವರೇನು ಬೇರೆ ಸ್ಟೇಟ್‌ಮೆಂಟ್ ಮಾಡಿದ್ದಾರೆಯೇ? ಬಜೆಟ್ ಬಗ್ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಇದಕ್ಕೆ ಎಲ್ಲಿ ಹಣ ಇಟ್ಟಿದ್ದೇನೆಂದು ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ಹೇಳುತ್ತೇನೆ ತಾವು ಪ್ರೂವ್ ಮಾಡಿ

ಶ್ರೀ ಸಿದ್ದರಾಮಯ್ಯ – ಪ್ಲಾನ್‌ನಲ್ಲಿ ಎಲ್ಲಿಲ್ಲಿಗೆ ಎಷ್ಟೆಷ್ಟು ಪರ್ಸೆಂಟ್ ಹಣವನ್ನು ಇಟ್ಟಿದ್ದೇವೆಂಬುದನ್ನು ಈ ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ

(ಗೊಂದಲ)

ಅಧ್ಯಕ್ಷರು – ಮಾನ್ಯ ಸಿದ್ದರಾಮಯ್ಯನವರೆ, ಬಜೆಟ್ ಮೇಲೆ ಮಾತನಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ ತಾವು ದಯಮಾಡಿ ಕೇಳಿ, ಅವರು ಈಗ ಸ್ಟೇಟ್‌ಮೆಂಟ್ ಮಾಡಿದ್ದಾರೆ

ಶ್ರೀ ಸಿದ್ದರಾಮಯ್ಯ – ಮಾನ್ಯ ಅಧ್ಯಕ್ಷರೆ, ಸ್ಟೇಟ್‌ಮೆಂಟ್ ಮಾಡುವುದಕ್ಕೆ ಈಗ ಅವಕಾಶ ಇಲ್ಲ There is no provision to make a statement in respect of budget

ಅಧ್ಯಕ್ಷರು – ನಾನು ಹೇಳುವುದನ್ನು ಸ್ವಲ್ಪ ಕೇಳಿ ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ನೀಡಲಾಗಿದೆ ಇದಾದ ಮೇಲೆ ನೀವೆಲ್ಲರೂ ಆ ವಿಷಯದ ಚರ್ಚೆಯಲ್ಲಿ ಭಾಗವಹಿಸಿದ್ದೀರಿ ಅದಕ್ಕೆ ಅವರು ರಿಪ್ಲೈ ಕೊಡುತ್ತಿದ್ದರು, ಆಗ ಇದದನ್ನು ತಾವು ಪ್ರಾರಂಭ ಮಾಡಿದ್ದೀರಿ

(ಗೊಂದಲ)

ಶ್ರೀ ಸಿದ್ದರಾಮಯ್ಯ – ಚಾಪ್ಟರ್ 23 ಅನ್ನು ನಾನು ಓದಿದ್ದೇನೆ ಇದರಲ್ಲಿ ಎಲ್ಲಿ ಇದೇ ಎಂಬುದನ್ನು ತೋರಿಸಿ? Cut motions, demands and appropriation bills ಬರುವುದು ಯಾವಾಗ? ಮತ್ತೆ ಇವೆಲ್ಲಕ್ಕೂ ಉತ್ತರ ಕೊಡುವುದು ಯಾವಾಗ? ಇದಕ್ಕೆಲ್ಲಾ ಚರ್ಚೆಯಾದ ಮೇಲೆ ಉತ್ತರ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ – ತಾವು ಮತ್ತು ಮಾನ್ಯ ಮಾದುಸ್ವಾಮಿಯವರು 345 ಕೆಳಗಡೆ

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್ – 345 ಕೆಳಗಡೆ ಎಂದು ತಾವು ಹೇಳಿದ್ದೀರಿ ತಾವು ದಯಮಾಡಿ ಕೇಳಿ ಈಗ ಉದಾಹರಣೆಗೆ ಹೇಳುವುದೇನೆಂದರೆ, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇರುತ್ತಾರೆ ಎಲ್ಲೋ ಒಂದು ಕಡೆ ಒಂದು ಬಸ್ ತೀವ್ರ ಅಪಘಾತಕ್ಕೆ ಒಳಗಾಗಿರುತ್ತದೆ ಇದು ಬಹಳ ಗಂಭೀರವಾದಂಥ ವಿಚಾರವಾಗಿರುತ್ತದೆ ಅಥವಾ ಎಲ್ಲಿಯೊ ಒಂದು ಕಡೆ ಫೈರ್ ಆಕ್ಸಿಡೆಂಟ್ ಆಗಿರುತ್ತದೆ ಅಥವಾ ಇನ್ನ್ಯಾವುದೋ ಒಂದು ವಿಚಾರವಿರುತ್ತದೆ ಅಥವಾ ಎಲ್ಲಿಯೊ ಒಂದು ಕಡೆ ಕಾಲರಾ epidemics ಆಗಿ ಡೆತ್ ಆಗಿರುತ್ತದೆ ಅದರ ಬಗ್ಗೆ ಹೌಸ್‌ನಲ್ಲಿ ಸ್ಟೇಟ್‌ಮೆಂಟ್ ಅನ್ನು ಕೇಳಿರುತ್ತೀರಿ ಅಂಥ ಸಂದರ್ಭದಲ್ಲಿ ಮಂತ್ರಿಗಳು ಇರತಕ್ಕಂಥ ಕಾರ್ಯಕ್ರಮವನ್ನು ಬಿಟ್ಟು 345ರ ಕೆಳಗೆ ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಸ್ಟೇಟ್‌ಮೆಂಟ್ ಮಾಡುತ್ತಾರೆ Budget is an annual event which is the privilege conferred on the Finance Minister ಅವರು ಬಜೆಟ್ ಸ್ಪೀಚ್ ಓದುತ್ತಾರೆ He leaves the entire House, the freedom of participating in the discussion ನಾನು

ಆಗಿನಿಂದಲೂ ಅದನ್ನೆ ಹೇಳುತ್ತಿದ್ದೇನೆ ಇದಾದ ಮೇಲೆ ತಮ್ಮ ವಿವೇಚನೆಗೆ ಅನುಗುಣವಾಗಿ ಮಾನ್ಯ ಸದಸ್ಯರುಗಳು ಎಲ್ಲೆಲ್ಲಿ ಏನೇನು ಅಭಿಪ್ರಾಯಗಳನ್ನು ಹೇಳಿರುತ್ತಾರೆಯೋ ಅವೆಲ್ಲವನ್ನು ಗಣನೆಗೆ ತೆಗೆದುಕೊಂಡು ಸುಧಾರಣೆ ಮಾಡತಕ್ಕಂಥದರ ಬಗ್ಗೆ ಅನೌನ್ಸ್ ಮಾಡತಕ್ಕಂಥ ಅಧಿಕಾರ ಅವರಲ್ಲಿ ಅಂತರ್ಗತವಾಗಿರುತ್ತದೆ ಅದನ್ನು ಕಿತ್ತುಕೊಂಡು ನಾವ್ಯಾರೂ ಮಾಡುವುದಕ್ಕೆ ಬರುವುದಿಲ್ಲ ಒಳ್ಳೆಯ ಬಜೆಟ್ ಮಾಡಿದ್ದೀರಿ, ಕೆಲಸ ಚೆನ್ನಾಗಿ ಮಾಡಿದ್ದೀರಿ, ಇದರಿಂದ ನಮಗೆ ಕಷ್ಟವಾಗುತ್ತದೆ ಮುಂದಕ್ಕೆ ನಾವ್ಯಾರೂ ಅಸೆಂಬ್ಲಿಗೆ ಬಾರದೆ ಇದ್ದರೂ ಚಿಂತೆ ಇಲ್ಲ ಏಕೆಂದರೆ, ರಾಜ್ಯದ ಜನತೆಗೆ ಒಳ್ಳೆಯದಾಗುವುದಾದರೆ ನಾನು ಏನು ಹೇಳುತ್ತೇನೆಂದರೆ, ನಿಮ್ಮ ಕೆಲಸದ ಬಗ್ಗೆ ಜನರು ಮನೆ ಮನೆಯಲ್ಲಿ ಮಾತನಾಡಿ ಜನರು ಸಂತೋಷಪಡಲಿ ರಾಜ್ಯದ ಬಡ ಜನತೆ ತೃಪ್ತಿಯಾದರೆ ಒಳ್ಳೆಯದು ನಾವು ಇಲ್ಲಿ ಬರುವುದು ಮುಖ್ಯವಲ್ಲ, ಜನ ಖುಷಿಯಾಗಿರತಕ್ಕಂಥದು ನಮಗೆ ಮುಖ್ಯ ಅದ್ದರಿಂದ ನಾವು concede ಆಗುತ್ತೇವೆ ಮತ್ತೆ ಸಂತೋಷ ಕೂಡ ಆಗುತ್ತದೆ ಆದರೆ, ನಾವು ಈ ಚರ್ಚೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಕೆಲವು ನೀತಿ ನಿಯಮಗಳನ್ನು ಇಟ್ಟುಕೊಂಡಿದ್ದೇವೆ ಅದನ್ನು ಬಿಟ್ಟು ಮನಸ್ಸಿಗೆ ಬಂದಂತೆ ಮಾಡುವುದಕ್ಕೆ ಬರುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ.- ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಆದರೆ, ಈಗ ನಿಯಮಾವಳಿ ಎಂದು ಈಗ ಅಡ್ಡಿಪಡಿಸುತ್ತಿದ್ದಾರೆ ಅನಾವಶ್ಯಕವಾಗಿ ಅಂದರೆ, ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎನ್ನುವ ರೀತಿಯಲ್ಲಿ ಇವರು ಮಾಡುತ್ತಿದ್ದಾರೆ ರೈತರಿಗೆ ಅನುಕೂಲವಾಗುವಂತಹ ಒಂದು ಕಾರ್ಯಕ್ರಮವನ್ನು ಪ್ರಕಟ ಮಾಡಿದರೆ ಅದರ ವಿರುದ್ಧ ತೀವ್ರವಾದಂಥ ಆಕ್ರೋಶ ಅವರಿಗೆ ಆಗುತ್ತದೆಂದರೆ, ರಾಜಕೀಯ ಲಾಭ ಆಗುವುದಿಲ್ಲವೆಂಬ ಅಸಂತೋಷ ಇದರಿಂದ ವ್ಯಕ್ತವಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮಾತನಾಡಲಿ ನಾವು ಕೇಳುವುದಕ್ಕೆ ತಯಾರಾಗಿದ್ದೇವೆ ಎಲ್ಲರೂ ಎದ್ದುನಿಂತು ಮಾತನಾಡಿದರೆ ನಮಗೆ ಹೇಗೆ ತಿಳಿಯುತ್ತದೆ ಮಾನ್ಯ ರಮೇಶ್‌ಕುಮಾರ್‌ವರೆ, ತಾವು ಹೇಳಿ

ಶ್ರೀ ಕೆ ಆರ್ ರಮೇಶ್‌ಕುಮಾರ್(ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, 31ನೇ ತಾರೀಖಿನೊಳಗಾಗಿ ಬಜೆಟ್ discussion conclude ಆಗುವುದಿಲ್ಲ ಹಣಕಾಸಿನ ಮಂತ್ರಿಗಳಿಗೆ 31ನೇ ತಾರೀಖಿನೊಳಗೆ ಇದನ್ನು announce ಮಾಡಿ ಯಾವ ಜನರಿಗೆ ಇದರ ಸಹಾಯಧನ ಮುಟ್ಟಬೇಕು ಅದನ್ನು ತಿಳಿಸುವುದಕ್ಕೆ ಆಗುವುದಿಲ್ಲ, ಆ ಆತಂಕ

ನಿಮ್ಮ ಮನಸ್ಸಿನಲ್ಲಿದೆ ಆ ಜನ delegation ರೀತಿಯಲ್ಲಿ ಬಂದು ನಿಮ್ಮಲ್ಲಿ ನಿವೇದಿಸಿಕೊಂಡಿದ್ದಾರೆ ನಾವೇನೂ ಬೇಡವೆಂದು ಹೇಳಿರಲಿಲ್ಲ, ಹೇಳುವುದಿಲ್ಲ ಅದೇ ಕಾರಣವನ್ನು ಹೇಳಿ ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಹೇಳಿದ್ದರೆ ಯಾರೂ ಆಬ್ಜೆಕ್ಟ್ ಮಾಡುತ್ತಿರಲಿಲ್ಲ ನೀವೇ ಹೇಳಿದ್ದು 345 ರೂಲ್ಸ್ ಇದಕ್ಕೆ ಅನ್ವಯಿಸುವುದಿಲ್ಲ ಎಂದು ಜ್ಞಾನೇಂದ್ರರವರು ಹೇಳಿದಂತೆ ನಾವು ಅಷ್ಟು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಮಾನ್ಯ ಈಶ್ವರಪ್ಪನವರು ಹೇಳಿದಂತೆ ನಮ್ಮ ಯೋಗ್ಯತೆ ಇಷ್ಟೆ ನಾವು ಬಜೆಟ್ ಮೇಲೆ ಚರ್ಚೆ ಮಾಡುವುದಿಲ್ಲ ನಾವು ನಿಮ್ಮಷ್ಟು ಸಕ್ರಿಯವಾಗಿ, ಸಕಾರಾತ್ಮಕವಾಗಿ ರಚನಾತ್ಮಕವಾಗಿ ಕೆಲಸ ಮಾಡುವುದಕ್ಕೆ ಗೊತ್ತಿಲ್ಲ ನಾವು ಮಾಡಿರುವ ಎಲ್ಲ ತಪ್ಪುಗಳಿಗೆ ನಾವು ಶಿಕ್ಷೆ ಅನುಭವಿಸುವುದಕ್ಕೆ ತಯಾರಾಗಿದ್ದೇವೆ ಮಾಲೀಕರು ಹೊರಗಡೆ ಇದ್ದಾರೆ ಶಿಕ್ಷೆ ನೀವು ಕೊಡಬೇಡಿ ನಮ್ಮ ಅಪೀಲು ಏನೆಂದರೆ, ನೀವು ವಾದ ಮಾಡಿ ಶಿಕ್ಷೆಯನ್ನು ಕೊಡುವುದಕ್ಕೆ ಬರಬೇಡಿ ಶಿಕ್ಷೆ ಅವರು ಕೊಡುತ್ತಾರೆ, ಶಿಕ್ಷೆ ತೆಗೆದುಕೊಳ್ಳುವುದಕ್ಕೆ ಕಾಂಗ್ರೆಸ್ ಪಕ್ಷ ತಯಾರಾಗಿದೆ ಶಿಕ್ಷೆ ಆಗಿದ್ದರಿಂದಲೇ ಅಲ್ಲಿ ಇದ್ದವರು ಇಲ್ಲಿಗೆ ಬಂದಿದ್ದೇವೆ, ಇಲ್ಲಿಂದ ನಾವು ಹೊರಗಡೆ ಹೋಗಬೇಕೆಂದರೆ ನಾವು ತಯಾರಾಗಿದ್ದೇವೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡು ಮೇಲೆ ಅವರ ತೀರ್ಪನ್ನು ಪ್ರಶ್ನೆ ಮಾಡುವುದಕ್ಕಾಗುತ್ತದೆಯೇ? ನಾವು ಅದಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದೇವೆ ನಿಯಮ 345 ಈ ಸನ್ನಿವೇಶಕ್ಕೆ ಅನ್ವಯಿಸುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸದಸ್ಯರು ಈಗ ಏನು ಅಭಿವ್ಯಕ್ತಪಡಿಸಿದ್ದಾರೆ, ನಿಜವಾಗಿ ಕೂಡ ಆ ವಿಚಾರ ಏನು ಇದೆ, ಅದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು, ಹೊರಗಡೆ ಇರುವಂಥದ್ದು ಮತ್ತು ಒಳಗಡೆ ಇರತಕ್ಕಂಥಾದ್ದು, ಪ್ರಭುಗಳು ನಿರ್ಧಾರ ಮಾಡುತ್ತಾರೆ ಎಷ್ಟೋ ಸಲ ನಾವು ನೀವು ಹೊರಗಡೆ ಇದ್ದೇವೆ ಒಳಗಡೆ ಬರದಂತೆ ಇಟ್ಟಿದ್ದಾರೆ ಕೆಲವೊಬ್ಬರು ಒಳಗಡೆಯೇ ಇರಬೇಕೆಂದು ಅವರನ್ನು 8–8 ಸಲ ಗೆಲ್ಲಿಸಿದ್ದಾರೆ ನಮ್ಮನ್ನು ಒಂದು ಸಲ ಆ ಕಡೆಗೆ, ಒಂದು ಸಲ ಈ ಕಡೆಗೆ ಹಾಕಿಸಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಪ್ರಕಾಶ್‌ರವರೆ, ನಾವು ಆ ಕಡೆ ಬಂದಿಲ್ಲ permanent ಆಗಿ ಈ ಕಡೆಗೆ ಇದ್ದೇವೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತ್ರ, ತಮ್ಮ ಏಕಪಕ್ಷವನ್ನು ಇಟ್ಟುಕೊಂಡು ಯಾವುದೇ ಪ್ರಲೋಭಕ್ಕೆ ಒಳಗಾಗದಂತೆ ಇದ್ದಾರೆ ನೀವೇನಾದರೂ ಯಾವುದೇ ಪಕ್ಷದೊಂದಿಗೆ ಗುರ್ತಿಸಿಕೊಂಡಿದ್ದರೆ ಖಂಡಿತವಾಗಿ ಮಂತ್ರಿ ಆಗುತ್ತಿದ್ದಿ, ತಪ್ಪಿದರೆ ಮುಖ್ಯಮಂತ್ರಿ ಖಂಡಿತವಾಗಿ ಆಗುತ್ತಿದ್ದಿ ಆದರೆ ತಾವು

ಏಕಪಕ್ಷವನ್ನು ಇಟ್ಟುಕೊಂಡಿದ್ದೀರಿ ಆದ್ದರಿಂದ ಒಂದು ದಿವಸ ನಿಮ್ಮ ವಾಟಾಳ್ ಪಕ್ಷಕ್ಕೆ 113 ರ ಬಹುಮತ ಬರಲಿ ಎಂದು ನಾನು ಹಾರೈಸುತ್ತೇನೆ ಅದು ಆದರೆ ಬಹಳ ಒಳ್ಳೆಯದಾಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರದು ಏಕಪಕ್ಷೀಯ, ನಮ್ಮದು ಎರಡು ಪಕ್ಷವೆ?

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ವಿಷಯವನ್ನು ಬಿಟ್ಟುಬಿಟ್ಟು ಎಲ್ಲಿಗೆ ಹೋಗುತ್ತಿದ್ದೀರಿ ?

ಶ್ರೀ ಎಂ ಪಿ ಪ್ರಕಾಶ್ ಈ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಎಷ್ಟೋ ಹೋಳುಗಳು ಆದವು ಅದೇ ರೀತಿ ನಮ್ಮ ಪಕ್ಷ 13 ಸಲ ಹೋಳಾಗಿದೆ ಇಲ್ಲಿ ಬಹಳ ಜನ ಮುಂದೆ ಕುಳಿತಿರತಕ್ಕಂಥವರೆಲ್ಲರೂ ನಮ್ಮ ಸ್ನೇಹಿತರಾಗಿಯೇ ಒಂದೇ ಪಕ್ಷದಲ್ಲಿದ್ದೆವು ಈಗ ನಿಮ್ಮದು ಮೂರನೇ ಪಕ್ಷವೋ ನಾಲ್ಕನೇ ಪಕ್ಷವೋ ಗೊತ್ತಿಲ್ಲ ಈಗ ನಿಮ್ಮ ಸಿಪಿಎಂ ಪಕ್ಷ ಏನಾಗಿದೆಯೋ ನನಗೆ ಗೊತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಮೇಲೆ ಉದ್ವೇಗಗೊಳ್ಳುವಂಥ ಪರಿಸ್ಥಿತಿ ಇರಲಿಲ್ಲ ನಾನು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಾವು ರೂಲ್ಸ್‌ನ್ನು ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ರೇಸ್ ಮಾಡಲಿಲ್ಲ ರಾಜ್ಯದ ಜನತೆಗೆ ಒಳ್ಳೆಯದು ಮಾಡುತ್ತಾರೆ ಎನ್ನುವಾಗ ನಿಯಮ ತೆಗೆದುಕೊಂಡು ಕುಳಿತುಕೊಳ್ಳಬೇಕೆಂದು ನಮಗೆ ಯಾರಿಗೂ ಇರಲಿಲ್ಲ ನಿಯಮ 345 ರ ಕೆಳಗಡೆ ಈ ಹೇಳಿಕೆ ಕೊಡುವುದಕ್ಕೆ ಬರುವುದಿಲ್ಲ ತಾವು ಅಲೌ ಮಾಡಿದಿರಿ ನಾವು ಕ್ವೆಶ್ಚನ್ ಮಾಡಲಿಲ್ಲ ಸನ್ಮಾನ್ಯ ಲಾ ಮಿನಿಸ್ಟರು record ಮೇಲೆ ಹೋದರು ನಿಯಮ 345 ರ ಕೆಳಗಡೆ ನಿರ್ಬಂಧ ಇದೆ, ನೀವು ಇದರಲ್ಲಿ discussion ಮಾಡುವಂತಿಲ್ಲ clarification ಮಾತ್ರ insist ಮಾಡಬಹುದೆಂದು ಹೇಳಿದರು ಸರ್ ಈ ನಿಮ್ಮ ನಿಯಮದಲ್ಲಿ ಬಜೆಟ್‌ಗೆ ಸೆಪರೇಟ್ ನಿಯಮ ಇದೆ Governor address ಬಿಟ್ಟರೆ ಎರಡನೇ ಪ್ರಾಶಸ್ತ್ಯವನ್ನು ಬಜೆಟ್‌ಗೆ ಕೊಟ್ಟಿದ್ದೇವೆ Special feature ಇಟ್ಟುಕೊಂಡು ತಾವು ನಿಯಮ ಮಾಡಿದ್ದೀರಿ ನಾನು ಯಡಿಯೂರಪ್ಪನವರ ಹೇಳಿಕೆಯನ್ನು ಸ್ವಾಗತಿಸಿದ್ದೇನೆ ನಾನು ತಕರಾರು ಮಾಡಲಿಲ್ಲ, ನೀವು ಏಕೆ ಅಲೌ ಮಾಡಿದಿರಿ ಎಂದು, ನಾನು ಆಕ್ಸೆಪ್ಟ್ ಮಾಡುತ್ತೇನೆ ಅವರು ಹೇಳಿದ ಮೇಲೆ record ಮೇಲೆ ಅದು ಹೋಗಬಾರದೆಂದು ಹೇಳಿ ನಾನು ಎದ್ದು ನಿಂತುಕೊಂಡು ಮಾತಾಡುವುದಕ್ಕೆ ಹೋದಾಗ ತಾವು ಏಕೋ ಉದ್ವೇಗಕ್ಕೆ ಹೋದಿರಿ, ನಮಗೂ ಸ್ವಾಭಾವಿಕ ಆಗುತ್ತದೆ ನಾನು ನಿಮಗೆ ಹೇಳುವುದು ಒಂದು ಸಲ ಬಜೆಟ್ ಇಟ್ಟಮೇಲೆ ನಿಯಮದ ಪ್ರಕಾರ the Finance Minister shall have a general right of

reply at the end of the discussion ಒಂದು ನಿಮಿಷ 117 ಓದಿ, "the Finance Minister shall have a general right of reply at the end of the discussion" ಒಂದು provision ಅವರು ಬಹಳವಾಗಿ ಮಾಡಲೇಬೇಕೆಂದರೆ 185 ರ ಕೆಳಗಡೆ supplementary, additional, excess and exceptional grant and votes of credit ಎಂದು ಹೇಳಿ supplementaರಿಯಲ್ಲಿ ತಾವು 185ರ ಕೆಳಗಡೆ supplementary, additional, excess and exceptional grant and votes of creditನ್ನು ತಾವು supplementaryಯಲ್ಲಿ ತರಬೇಕು ಒಂದು ಸಲ ನೀವು ಬಜೆಟ್‌ನ್ನು ಇಟ್ಟರೆ that is the property of the House and this House is the soverrign House of the Stae ತಾವು ಏನು ಹೇಳಿಕೆ ಕೊಟ್ಟರಿ, ಜನ ಹೀಗೆ ಮಾತನಾಡುತ್ತಾರೆ, ನನ್ನ ಗಮನಕ್ಕೆ ಬಂತು, ಅದನ್ನು ಶಾಸನಸಭೆಗೆ ತಾವು ಮಾಡುವಂಥ ಅಗೌರವ ಎಂದು ನಾವು ಭಾವಿಸಬೇಕಾಗುತ್ತದೆ, ಅದನ್ನು ನಾವು ಅನ್ನಲಿಲ್ಲ ತಾವು ಈ ಮನೆಯ ವಿವೇಚನೆಯನ್ನು ಈ ಮನೆಯ ಸದಸ್ಯರ ಅನುಭವವನ್ನು ಈ ಮನೆಯ ತೀರ್ಮಾನವನ್ನು ಮೊದಲು ತೆಗೆದುಕೊಳ್ಳಬೇಕು because it is the property of the House ಇಲ್ಲಿ ಇಟ್ಟಿದ್ದೀರಿ ಇದಕ್ಕೆ ತಮಗೆ ಎರಡು ತಿಂಗಳು ಅವಕಾಶ ಇತ್ತು ಮೂರು ತಿಂಗಳ ಕೆಳಗಡೆ ತಾವು ಚರ್ಚೆಯನ್ನು ಮಾಡಿದ್ದೀರಿ ನಾವು ಕೇಳಿಲ್ಲ ಯಾವ ಯಾವ sector ದಿಂದ ತರಿಸಿ ಕೇಳಿದ್ದೀರಿ ಯಾರ್‍ಯಾರನ್ನು consult ಮಾಡಿದ್ದೀರಿ ಏಕೆ ಮಾಡಿದಿರಿ ಎಂದು ನಾವು ಕೇಳಲಿಲ್ಲ That is your wisdom ನೀವು ಯಾರ್‍ಯಾರ ಜೊತೆಯಲ್ಲಿ ಚರ್ಚೆಯನ್ನು ಮಾಡಬೇಕು, ಯಾರನ್ನು ಕೇಳಬೇಕು, ಯಾರ್‍ಯಾರಿಗೆ ಎಲ್ಲಿ ಸಹಾಯವನ್ನು ಮಾಡಬೇಕು ಎಂಬುದಕ್ಕೆ you are empowered ತಾವು ಅಧಿಕಾರಿದಲ್ಲಿ ಇರುವುದರಿಂದ ಅದನ್ನು ತಾವು ಮಾಡಬೇಕಾಗುತ್ತದೆ When once the budget is presented here, till the voting of the budget, it is the property of the House You cannot quote somebody else You can never quote ಹಾಗೆ ನೀವು ಏನಾದರೂ ಕೋಟ್ ಮಾಡಿದರೆ, ಈ ಮನೆಗೆ ತಾವು ಮಾಡುವ ಅಗೌರವ, that will be a breach of privilege of the House Contempt ಆಗುತ್ತದೆ ನಾನು ನಿಮಗೆ ಚಾರ್ಜ್ ಮಾಡುವುದಕ್ಕೆ ಹೇಳುತ್ತಿಲ್ಲ ನೀವು ಏಕೆ ಮಾಡಿದಿರಿ? ನೀವು ಒಳ್ಳೆಯ ಉದ್ದೇಶದಿಂದ ಮಾಡಿರಬಹುದು 31 ರೊಳಗೆ ಸಾಲ ಮಾಡಿರುವಂಥ ರೈತರಿಗೆ ಒಳ್ಳೆಯದು ಆಗಬಹುದು ಎಂದು ಮಾಡಿರಬಹುದು, ಇದರ ಬಗ್ಗೆ ನಾವು ತಕರಾರು ಮಾಡಲಿಲ್ಲ Under rule 345 "a Minister may make a statement on a matter of public importance, not financial importance, not the

grants" ಏನೋ ತಲೆ ಬಿದ್ದು ಹೋಗುವಂಥ ಒಂದು ಕೆಲಸ ನಡೆಯುತ್ತಿರುತ್ತದೆ, ಕನ್ನಂಬಾಡಿ ಅಥವಾ KRS ನಲ್ಲಿ ತೂಬು ತೆಗೆದು ನೀರು ಬಿಟ್ಟುಕೊಂಡು ಹೋಗುತ್ತಾರೆ ಇದನ್ನು ಅಸೆಂಬ್ಲಿ ನಡೆಯುವುದರಿಂದ ಗಮನಕ್ಕೆ ತರಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ 345 ರೂಲ್ಸ್‌ನ್ನು ಇಟ್ಟುಕೊಂಡಿರುವುದನ್ನು ಬಿಟ್ಟರೆ we cannot interfer at this stage of the budget making concessions or exceptions ನೀವು ಇದನ್ನು ಡಿಬೇಟ್‌ಗೆ ಬಿಡಬೇಕಾಗಿತ್ತು ಡಿಬೇಟ್‌ನಲ್ಲಿ ಯಾರಾದರೂ ಸದಸ್ಯರಿಗೆ ಉತ್ತರವನ್ನು ಕೊಡುವಾಗ ಅವರಿಗೆ ಹೇಳಬೇಕಾಗಿತ್ತು No, I concede, ಹೀಗೆ ಮಾಡಿದ್ದೇನೆ, ಇದು ನನ್ನ ಗಮನಕ್ಕೆ ಬಂದಿತ್ತು ನೀವು ಹೇಳಿರುವುದಕ್ಕೆ ನಾನು ರಾಜಿಯಾಗಿದ್ದೇನೆಂದು ಹೇಳುವುದನ್ನು ಬಿಟ್ಟರೆ once it is property of the House, ಈ ಮನೆಯಲ್ಲಿ ಅದರ ಬಗ್ಗೆ ಓಟು ಆಗುವವರೆಗೆ ತಾವು ಮತ್ತೆ ಮತ್ತೆ interfere ಆಗುವ ಅಧಿಕಾರ ತಮಗೆ ಇಲ್ಲ ನಾನು ತಮಗೆ ಗೌರಯುತವಾಗಿ ಮನವಿಯನ್ನು ಮಾಡುತ್ತೇನೆ ಈ ತರಹ ಮಾಡಬಾರದಾಗಿತ್ತು, ಮಾಡಲೇಬೇಕು ಎಂದರೆ, supplementary demandsನಲ್ಲಿಯೇ ತಾವು ಹೋಗಬೇಕು ಅದಕ್ಕಾಗಿಯೆ supplementary demands under Rule 185ರ ಕೆಳಗಡೆ ಇಟ್ಟಿರುವುದು ಮಧ್ಯೆ ಏನಾದರೂ ತರಬೇಕು, ಇಲ್ಲಿ ಹೇಳಬೇಕು, ಮಧ್ಯೆದಲ್ಲಿ concession declare ಮಾಡಬೇಕು ಮಧ್ಯೆದಲ್ಲಿ ಯಾವುದಾದರೂ demandsನ್ನು ನೀವು ಪಾಸ್ ಮಾಡಿಕೊಳ್ಳಬೇಕೆಂದರೆ, you are empowered under Rule 185, not under Rule 345 No Finance Minister can interene under Rule 345 at this stage regarding financial matters ಬೇರೆ ಏನೋ ರಾಜ್ಯಕ್ಕೆ ಆಗಬಾರದ್ದು ಆಗಿರುತ್ತದೆ, ರಾಜ್ಯಕ್ಕೆ ಮಂತ್ರಿಗಳು ಶಾಸನಸಭೆಯಲ್ಲಿ ಹೇಳಬಾರದೆಂದು ನಮ್ಮ ಅಭಿಪ್ರಾಯವಿಲ್ಲ ಆ ಹೇಳಿಕೆಯನ್ನು ಮಾಡುವುದಕ್ಕೆ ಇಟ್ಟುಕೊಂಡಿರುವ provision ನ್ನು ತಾವು exemption ಕೊಡಲಿಕ್ಕೆ, ಬಜೆಟ್‌ನಲ್ಲಿ vary ಮಾಡಲಿಕ್ಕೆ, the scope of the budgetನ್ನು ಹೆಚ್ಚು ಕಡಿಮೆ ಮಾಡಲಿಕ್ಕೆ, ತಾವು ಬಳಸಬಾರದಾಗಿತ್ತು, ಸತ್ಯ, ನಾವು ತಕರಾರು ಮಾಡಲಿಲ್ಲ ನಮಗೆ ಗೊತ್ತಿದ್ದೂ ನಾವು ಮಾಡಲಿಲ್ಲ ಸಿದ್ಧರಾಮಯ್ಯನವರು Finance Minister ಆಗಿದ್ದವರು, ಸಂಪ್ರದಾಯ ಅಲ್ಲ ಅದು, ಬರಬಾರದಾಗಿತ್ತು ಎಂದು ಮೌಖಿಕವಾಗಿ ಒಂದು ಮಾತು ಹೇಳಿದಾಗ ತಾವು ಬಿಡಬಹುದಾಗಿತ್ತು ಮಾನ್ಯ ಪ್ರಕಾಶ್‌ರವರು Rule 345ರ ಕೆಳಗೆ Speakerರವರು permit ಮಾಡಿದ್ದಾರೆ ಎಂದಾಗ this can never be conceied or construed in future ಇದನ್ನೇನಾದರೂ ಅವರು ಈ ಶಾಸನ ಸಭೆಯಲ್ಲಿ announce ಮಾಡಿಬಿಟ್ಟರೆ every day finance minister can present one month budget ಇವತ್ತೊಂದು

ಬಜೆಟ್ ಇಡುತ್ತಾರೆ, ನಾಳೆ ಒಂದು ಇಡುತ್ತಾರೆ, ನಾನು ಯಡಿಯೂರಪ್ಪನವರ ಸುದ್ದಿಯನ್ನು ಮಾತನಾಡುತ್ತಿಲ್ಲ ಈ ಶಾಸನ ಸಭೆ ಇನ್ನೂ ಬಹಳ ದಿವಸ ಬದುಕಬೇಕಾಗಿದೆ ನಾಳೆ ಒಂದು ಇಡುತ್ತಾರೆ, ನಾಳಿದ್ದು ಒಂದು ಇಡುತ್ತಾರೆ, then what is the sanctity of presenting the budget before the House? ಇಲ್ಲಿಡುವ ಬಜೆಟ್‌ನ ಗೌರವ, ಅದರ sanctity ಏನಾಗುತ್ತದೆ ಎಂದು ನಾವು ಕೇಳುತ್ತೇವೆ ನಾವು ಯಾರಾದರೂ ಕಟ್ಟಿಹಾಕಿಕೊಂಡಿದ್ದೆವಾ? ಹಿಡಿದುಕೊಂಡಿದ್ದೆವಾ? ನೀವು 50 ಸಾವಿರದವರೆಗೆ ಮಾಡಬೇಡಿ ಎಂದು ನಾವು ಹೇಳಿದ್ದೇವಾ? What are those constraints? ಹೇಳಬೇಕಲ್ಲ You are at every liberty ನೀವೇ ಕುಳಿತುಕೊಂಡು ಬಜೆಟ್‌ನ್ನು ಮಾಡಿದ್ದೀರಿ, ಎರಡು ತಿಂಗಳಿನಿಂದ ಯಡಿಯೂರಪ್ಪನವರು ಎಲ್ಲಿದ್ದಾರೆ ಎಂದು ಕೇಳಿದರೆ, ಬಜೆಟ್ ಮಾಡುತ್ತಿದ್ದಾರೆ ಎಂದು ಹೇಳಿದರು ಅದಕ್ಕೆ ನಾವೆಲ್ಲರೂ ಸಂತೋಷ ಪಟ್ಟೆವು ಬಹಳಷ್ಟು scope ಅನ್ನು, ಬಹಳಷ್ಟು ವ್ಯಾಪಕವಾದ ವಿಚಾರಗಳನ್ನು ಬಜೆಟ್‌ನಲ್ಲಿ ಅಡಕ ಮಾಡಿಕೊಂಡಿದ್ದೀರಿ ಅದರ ಬಗ್ಗೆ ನಾನೇನೂ ಟೀಕೆ ಮಾಡಿಲ್ಲ ಇನ್ನೂ ಮಾಡುವುದಕ್ಕೆ ಪ್ರಾರಂಭ ಮಾಡಿಲ್ಲ ಆದರೆ, in between ತಾವು intervene ಆಗಿದ್ದು ಸಂಪ್ರದಾಯವೂ ಅಲ್ಲ, ನಿಯಮವೂ ಅಲ್ಲ ಆದರೂ ನಾವು ಇವತ್ತು ಸ್ವಾಗತಿಸಿದ್ದೇವೆ ಏಕೆಂದರೆ ತಾವು 50 ಸಾವಿರದವರೆಗೆ concession allow ಮಾಡಿರಿ ಎಂದು ನಾವು ಕೇಳಿಕೊಂಡಿದ್ದೇವೆ ಎಲ್ಲಾ ರೈತರಿಗೆ 25 ಸಾವಿರ ರೂಪಾಯಿಗಳವರೆಗೆ ಕೊಡಿ ಎಂದು ಆದರೆ ಅವರು ಹೇಳಬೇಕಾಗಿತ್ತು As a former Finance Minister, it is discipline ನಾಳೆ ಈ ಸಭೆಯ ಗೌರವ ಉಳಿಯಬೇಕು ಹೀಗೆ ಆಗಬಾರದು, ಇದು ಸಂಪ್ರದಾಯವಲ್ಲ ಅವರು ಲೇಟಾಗಿ ಬಂದು ಹೇಳಿರುವುದನ್ನು ತಾವು ಅಷ್ಟೊಂದು emotional ಆಗಿ ತೆಗೆದುಕೊಳ್ಳಬಾರದು ಸನ್ಮಾನ್ಯ ಯಡಿಯೂರಪ್ಪನವರೆ, ಇದನ್ನು ಟೀಕೆ ಮಾಡುವುದಕ್ಕೋಸ್ಕರ ಟೀಕೆ ಮಾಡಲಿಲ್ಲ ಆದರೆ, I have an objection with law minister ತಾವು ಈ ತರಹ ರೂಲ್ಸ್‌ಗಳನ್ನು conveniencesake ಗೋಸ್ಕರ, Assembly ಯನ್ನು misguide ಮಾಡುವಂಥ ಸ್ಥಿತಿಯನ್ನು future ನಲ್ಲಿ ನಿರ್ಮಾಣ ಮಾಡಬಾರದು ನಿಮ್ಮ ಬಗ್ಗೆ ನಾವೆಲ್ಲಾ ಬಹಳ ಗೌರವವನ್ನು ಇಟ್ಟುಕೊಂಡಿದ್ದೇವೆ ಈ ಸಭೆಯನ್ನು ನಮ್ಮ ಹಾಗೂ ನಿಮ್ಮದಕ್ಕೆ ಅಥವಾ ಹೇಗೋ ಒಂದು convenience sake ಗೋಸ್ಕರ ಸಭೆಯನ್ನು ನಡೆಸುವುದಕ್ಕೆ ತಮ್ಮಂಥವರು ಬರಬಾರದೆಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ರಮೇಶ್‌ಕುಮಾರ್‌ರವರು,

ಮಾನ್ಯ ಸಿದ್ದರಾಮಯ್ಯನವರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದರು ತಾವು ಯಾವ ನಿಯಮಾವಳಿ ಅಡಿಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೀರಿ 345ರ ಕೆಳಗಡೆ ತಾವು ಇದರ ಒಪ್ಪಿಗೆಯನ್ನು ಕೊಟ್ಟಿದ್ದೀರಿ ನಿಯಮ 345 ಇಂತಹ ಒಂದು ಸಾರ್ವತ್ರಿಕ ಮಹತ್ವವಾದಂತಹ ಘಟನೆಗಳು ಆದಾಗ ಒಬ್ಬ ಮಂತ್ರಿಗಳು ಇದರ ಹೇಳಿಕೆಯನ್ನು ಕೊಡಬಹುದು, ಚರ್ಚೆ ಮಾಡಬಹುದು 173ರ ಕೆಳಗಡೆ finance ವಿಚಾರಗಳು ಬಂದಾಗ ಇದನ್ನು ಹೇಳಬಾರದು ಎಂಬ ಮಾತನ್ನು ತಾವು ಬಜೆಟ್‌ನ ವಿಷಯದಲ್ಲಿ ಹೇಳಿದ್ದೀರಿ ಇದನ್ನು ನಾವು ಅರ್ಥೈಸಿಕೊಳ್ಳುವ ರೀತಿಯಲ್ಲಿ ಇದ್ದರೂ ಕೂಡ ನಾನು ಎಲ್ಲಾ ವಿಚಾರಗಳಲ್ಲಿ ಬಹಳ ದೊಡ್ಡ ಬೃಹಸ್ಪತಿ ನಾನು ಹೇಳಿದ್ದೆಲ್ಲ ನಿಜವೆನ್ನುವ ಹರಕ್ಕೆ ಬೀಳುವುದಿಲ್ಲ ನಾವು ಈಗ ಪ್ರಸ್ತಾಪ ಮಾಡಿದ್ದು ಇಷ್ಟೆ ನಾವು ಎಲ್ಲರಿಂದಲೂ ಪಾಠವನ್ನು ಕಲಿಯಬೇಕಾಗುತ್ತದೆ ನಿಯಮ 345 ಅನ್ನು ಮೇಲ್ನೋಟಕ್ಕೆ ನೋಡಿದಾಗ ಒಮ್ಮೆ speaker ರವರು ಅಂಥ ಹೇಳಿಕೆಯನ್ನು ಕೊಡಬೇಕೆನ್ನುವ ರೀತಿಯಲ್ಲಿ ತಾವು ಕೂಡ ಗ್ರಹಿಸಿದ್ದೀರಿ ಅದರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ 31ನೇ ತಾರೀಖಿನ ದಿವಸ ಇವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ತರಹದ ಒಂದು ಅನುಕೂಲವನ್ನು 50 ಸಾವಿರ ರೂ ಗಳವರೆಗೆ ಸಾಲವಿವರ ರೈತರಿಗೆ ಮಾಡಿದ್ದೇನೆ ಎಂದರೆ ಅವರು 31ನೇ ತಾರೀಖಿನ ಒಳಗಾಗಿ ಹಣವನ್ನು ಕಟ್ಟುವುದಕ್ಕಾಗುವುದಿಲ್ಲ ಇದರ ಫಾಯಿದೆಯನ್ನು ಅವರು ಪಡೆದುಕೊಳ್ಳುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕಾಗಿ, ಮಹತ್ವದ ವಿಚಾರವೆಂದು ಹೇಳಿ ಮಧ್ಯದಲ್ಲಿ ಅವರು ಬಂದು ಪ್ರವೇಶ ಮಾಡಿ ನನಗೆ ಹೇಳಿದ್ದಾರೆ ಅದಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ ಇದಕ್ಕೆ ನಿಯಮ 345 ಅನ್ವಯವಾಗುವುದಿಲ್ಲವೆಂದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ನಾನು ಸದನವನ್ನು ದಾರಿ ತಪ್ಪಿಸುವುದಕ್ಕಾಗಿ 345 ಎಂದು ಹೇಳಿರುವುದಿಲ್ಲ ನನ್ನ perception, ನನ್ನ ಗ್ರಹಿಕೆಯ ಇತಿಮಿತಿಯೆಂದು ತಾವು ಭಾವಿಸಿಕೊಳ್ಳಬಹುದು ದಾರಿತಪ್ಪಿಸಿ ಯಾರೂ ಇದರಿಂದ ಪ್ರಯೋಜನ ಪಡೆಯಬೇಕಾದುದು ಇಲ್ಲ ನಿಯಮಾವಳಿಗಳನ್ನು ಕಾಲಕಾಲಕ್ಕೆ ಅನೇಕ ಸಂದರ್ಭದಲ್ಲಿ ಬದಲಾವಣೆಯನ್ನು ಮಾಡಿದ್ದೇವೆ ಆದರೆ ಇವತ್ತೇ ಬದಲಾವಣೆಯನ್ನು ಮಾಡಬೇಕೆಂದು ಏನೂ ಇಲ್ಲ ಅದಕ್ಕಾಗಿಯೆ panel ಕೂಡ ಇದೆ ಇಂತಹ ಸಂದರ್ಭಗಳು ಬಂದಾಗ 173ರಲ್ಲಿಯೂ ಕೂಡ ಇಂತಹ ನಿಯಮಾವಳಿಗಳನ್ನು ಸೇರಿಸಬಹುದೇ? ಹಾಗೆ ಅನ್ನುವಂತಹ ವಿಚಾರದಲ್ಲಿ ತಾವು ಕೂಡ ಇರುತ್ತೀರಿ, ಚರ್ಚೆಮಾಡಿ ಸೇರಿಸೋಣ ಈಗ ನಾನು ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಿ ನಾನು ಹೇಳಿದ್ದೇ ಸರಿ ಎಂದು ಹೇಳುವುದಿಲ್ಲ ನಿಯಮ 173ರ ಕೆಳಗಡೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಅದನ್ನು ನಾನು

ಒಪ್ಪಿಕೊಳ್ಳುತ್ತೇನೆ ಆದರೆ ದಾರಿ ತಪ್ಪಿಸುವುದಕ್ಕಾಗಿ ಹೇಳಿರುವುದಿಲ್ಲ ಯಾವ ನಿಯಮಾವಳಿಗಳ ಪ್ರಕಾರ ನೀವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ ಎಂದಾಗ 345 ರ ಕೆಳಗಡೆ ಕೊಟ್ಟಿದ್ದೇವೆಂದು Speakerರವರು ಹೇಳಿದ್ದಾರೆ ಆ ಕಾರಣಕ್ಕಾಗಿಯೆ ನಿಮ್ಮ ವಾದ ನಿಜವಾದರೂ ಕೂಡ ಈ ಹೇಳಿಕೆಯೆನ್ನುವುದು, ಸಾರ್ವಜನಿಕ ಮಹತ್ವವಾದ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ಮಾನ್ಯ Speakerರವರು ಅವಕಾಶ ಕೊಟ್ಟಿದ್ದಾರೆ ಆದ್ದರಿಂದ ನಿಯಮಾವಳಿಗಳ ಪ್ರಕಾರ ಆಗಿರುವಂತಹ ಚರ್ಚೆಯ ಲಾಭವನ್ನು ರೈತ ಪಡೆಯಬೇಕು ನೀವು ಹೇಳಿದ ಮಾತನ್ನು ನಾವು ಒಪ್ಪಿಕೊಳ್ಳುತ್ತೇನೆ ಮುಂದೆ ಇದನ್ನು ಮಾರ್ಗದರ್ಶಿ ಸೂತ್ರವೆಂದು ನಾವು ಭಾವಿಸಿಕೊಳ್ಳುತ್ತೇನೆ ಸಾಧ್ಯವಾದರೆ ನಿಯಮ 173ರ ಕೆಳಗಡೆ ನಿಯಮವನ್ನು ಬದಲಿ ಮಾಡುವುದನ್ನು ನಾವು panelನಲ್ಲಿ ಚರ್ಚೆ ಮಾಡುವಂತಹ ಸಂದರ್ಭ ಬಂದಾಗ ಅದನ್ನು ಯೋಚನೆ ಮಾಡುತ್ತೇನೆ ಆದರೆ ಈಗ ಅಲ್ಲ

ಶ್ರೀ ಸಿದ್ದರಾಮಯ್ಯ ಅಸೆಂಬ್ಲಿಯಲ್ಲಿ ತಿದ್ದುಪಡಿ ಮಾಡಬೇಕೆನ್ನುವ ಅಗತ್ಯವಿಲ್ಲ ನಿಮಗೆ ಬದಲಾವಣೆ ಮಾಡಿಕೊಳ್ಳುವುದಕ್ಕೆ ಬಜೆಟ್‌ನಲ್ಲಿ ಬದಲಾವಣೆ ಮಾಡಿಕೊಳ್ಳುವುದಕ್ಕೆ ಇಲ್ಲಿ ಅವಕಾಶವಿದೆ

ಶ್ರೀ ಎಂ ಪಿ ಪ್ರಕಾಶ್ ನಾನು ಹೇಳಿದ್ದು ಆ ಮಾತಲ್ಲ ಆ ದೃಷ್ಟಿಯಿಂದ ಅಲ್ಲ ನಾನು ಹೇಳಿದ್ದು ಏನೆಂದರೆ, ಮುಂದೆಯೂ ಕೂಡ ಈ ರೀತಿಯಾದ ಸನ್ನಿವೇಶ ಬರಬಹುದು ಮುಂದಿನ ಹಣಕಾಸಿನ ಮಂತ್ರಿಗೆ, ಅಂತಹ ಸಂದರ್ಭಗಳು ಬಂದಾಗ ಇದನ್ನು ಸೇರಿಸಿಕೊಳ್ಳುವುದಕ್ಕೆ ನಮ್ಮ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಬರುತ್ತದೆ ಎಂದು ಹೇಳಿದ್ದೇನೆ

ಶ್ರೀ ಸಿದ್ದರಾಮಯ್ಯ ನಾನು ಮೊದಲೇ ಹೇಳುವಾಗಲೆ ಏತಕ್ಕಾಗಿ ಹೇಳಿದೆ ಎಂದರೆ, ಮಾನ್ಯ ಯಡಿಯೂರಪ್ಪನವರೆ, ಇದು ಹೊಸ ಸಂಪ್ರದಾಯವಾಗುತ್ತದೆಂದು ಹೇಳಿ ಅಷ್ಟಕ್ಕೆ ನಾನು ಬಿಟ್ಟುಬಿಟ್ಟೆ ಏಕೆಂದರೆ ಯಾವ ರೂಲ್‌ನಲ್ಲಿ ಮಂಡಿಸಿದ್ದೀರಿ, ಬಜೆಟ್‌ನಲ್ಲಿ ಅಪಚಾರವಾಗುತ್ತದೆಂದು ಹೇಳಿದ್ದೇನೆ ಏಕೆಂದರೆ, ರೈತರದು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಧರ್ಮಸಿಂಗ್‌ರವರು ಯಾವ ನಿಯಮಾವಳಿಗಳ ಪ್ರಕಾರ ಕೊಟ್ಟಿದ್ದೀರಿ ಎಂದು ಪ್ರಶ್ನೆ ಮಾಡಿದರು

ಶ್ರೀ ಸಿದ್ದರಾಮಯ್ಯ Exactly ನಿಯಮ ಇಲ್ಲವೆಂದು ನಮ್ಮ ವಾದ There is no provision as such

ಶ್ರೀ ಎನ್ ಧರ್ಮಸಿಂಗ್ ಅಧ್ಯಕ್ಷರಿಗೆ ಅವಕಾಶವನ್ನು ಕೊಡುವುದಕ್ಕೆ ಬರುವುದಿಲ್ಲ ಈಗಾಗಲೆ ಬಜೆಟ್‌ನ್ನು ಮಂಡನೆ ಮಾಡಿ ಬಜೆಟ್ ವಿಷಯವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದೇನೆ

ಶ್ರೀ ಸಿದ್ದರಾಮಯ್ಯ ಅದೇ ನಮ್ಮ ವಾದ ಇದ್ದದ್ದು ಅದನ್ನು ಬಿಟ್ಟು ನೀವು ಏತಕ್ಕಾಗಿ ಹೇಳಿದ್ದೀರಿ? ನೀವು ಏತಕ್ಕಾಗಿ announce ಮಾಡಿದ್ದೀರಿ? ಎಂದು ನಾವು ಕೇಳುವುದಕ್ಕೆ ಹೋಗಲಿಲ್ಲ

ಶ್ರೀ ಎಂ ಪಿ ಪ್ರಕಾಶ್ ನಾನು ನಿಮ್ಮ ವಾದವನ್ನು ಒಪ್ಪದಿದ್ದರೂ ಕೂಡ ಮುಂದುವರೆಸುವ ಅಗತ್ಯವಿಲ್ಲ ನೀವು ಹೇಳಿರುವುದು ಸರಿ ಆದರೆ ದಾರಿ ತಪ್ಪಿಸುವುದಕ್ಕಾಗಿ ಹೇಳಿರುವುದಲ್ಲವೆಂದು ಹೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ 1 ಲಕ್ಷ ಸಾಲ ಮಾಡಿರುವಂತಹ ರೈತರಿಗೂ ಕೂಡ ಇದು ಅನ್ವಯಿಸಬೇಕು 1ಲಕ್ಷಕ್ಕಿಂತ ಮೇಲೆ ಸಾಲ ಮಾಡಿರುವ ರೈತರಿಗೂ ಕೂಡ 25 ಸಾವಿರ ರೂಪಾಯಿಗಳ ಮನ್ನಾ ಅನ್ವಯಿಸಬೇಕೆಂದು ನಾವು ಒತ್ತಾಯ ಮಾಡಿ ತಮ್ಮನ್ನು ಕೇಳಿದ್ದೇವೆ ಅದಕ್ಕೆ ತಾವು ದಯವಿಟ್ಟು ಉತ್ತರವನ್ನು ಕೊಡಿ 31ರ ನಂತರ date & timeನ್ನು ತಾವು extend ಮಾಡಬೇಕು 8 ದಿವಸಗಳಲ್ಲಿ ಹಣವನ್ನು ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇವೆ ಈ ಎರಡು ವಿಚಾರಗಳಿಗೆ ದಯವಿಟ್ಟು ತಾವು ಸ್ಪಷ್ಟನೆಯನ್ನು ಕೊಡಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಟ್ಟಂತೆ ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಿದೆ ನಾನು ಅತ್ಯಂತ ವಿನಯದಿಂದ ಈ ಮನೆಯಲ್ಲಿ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ನಾನು ಮತ್ತು ಮುಖ್ಯಮಂತ್ರಿಗಳು ಮಧ್ಯಾಹ್ನ ಸಮಾಲೋಚನೆ ಮಾಡಿದ ಮೇಲೆ 31 3 2007ರ ಈ ಅವಧಿಯ ಒಳಗಾಗಿ ಯಾರು ಅಸಲನ್ನು ಕಟ್ಟಿದರೆ, 25 ಸಾವಿರ ರೂಗಳಿಗಿಂತ ಜಾಸ್ತಿ ಇದ್ದವರು ಬಡ್ಡಿ ಮನ್ನಾ ಅಗುತ್ತದೆಂದು ಹೇಳಿದ್ದೇವೆ ಈ ಅವಕಾಶ 50 ಸಾವಿರದವರೆಗೂ ಕೂಡ ಇರುವವರಿಗೂ 25 ಸಾವಿರದವರಿಗೆ ಮನ್ನಾ ಮಾಡಿ ವ್ಯತ್ಯಾಸ ಇರುವುದನ್ನು ಕಟ್ಟುವುದಕ್ಕೆ ಅವಕಾಶ ಸಿಗುತ್ತದೆನ್ನುವಂತಹ ತರಾತುರಿಯಲ್ಲಿ ಇವತ್ತು ಈ ಹೇಳಿಕೆಯನ್ನು ನಾನು ಕೊಡಬೇಕಾಯಿತು ತಾವು ಏನು ಹೇಳುತ್ತಿದ್ದೀರಿ, ಈ concessionನ್ನು ಒಂದು ಲಕ್ಷದವರೆಗೆ ಅಥವಾ ಇನ್ನೂ ಹೆಚ್ಚು ಕೊಟ್ಟು ಎಲ್ಲರಿಗೂ ಅವಕಾಶವನ್ನು ಮಾಡಿಕೊಡಿ ಎಂದು ಹೇಳಿದಾಗ ಈಗಾಗಲೇ ಹಣಕಾಸಿನ ಭಾರ 1,950 ಕೋಟಿ ರೂಪಾಯಿಗಳು ಬರುತ್ತಿರುವುದರಿಂದ ಇದನ್ನು ಪರಿಶೀಲನೆ ಮಾಡುವಂತಹ ಸ್ಥಿತಿಯಲ್ಲೂ ಕೂಡ ನಾನು ಇಲ್ಲ ತಾವು ಸಹಕಾರವನ್ನು ಕೊಡಿ ಎಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಈ ಹಣವನ್ನು ಇವತ್ತು ಬಡ್ಡಿಯನ್ನು

(ಗೊಂದಲ)

(ಈ ಹಂತದಲ್ಲಿ ಶ್ರೀ ಜೆ ಸಿ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಜಯಪ್ರಕಾಶ್ ಹೆಗ್ಡೆ, ಶ್ರೀ ಜಿ ವಿ ಶ್ರೀರಾಮರೆಡ್ಡಿ, ಶ್ರೀ ಎಸ್ ರಾಜೇಂದ್ರನ್, ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಎನ್ ಧರ್ಮಸಿಂಗ್(ವಿರೋಧಪಕ್ಷದ ನಾಯಕರು) ತಾವು ಈ ಬಗ್ಗೆ ಯೋಚನೆ ಮಾಡಬೇಕು ತಾವು ಸಾಲ ಮನ್ನಾ ಮಾಡುವ ಬಗ್ಗೆ ಘೋಷಣೆಯನ್ನು ಮಾಡಬೇಕು

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಸ್ವಾತಂತ್ರ ಬಂದ ಮೇಲೆ ಈ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಈ ಸಾಹಸವನ್ನು ಯಾರು ಮಾಡಿರಲಿಲ್ಲ (ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು ಮಾನ್ಯ ನಾಗರಾಜ್‌ರವರೆ, ಈಗ ತಾವು ಮಾತನಾಡಬೇಡಿ

ಶ್ರೀ ಬಿ ಎಸ್ ಯಡಿಯೂರಪ್ಪ ಸ್ವಾತಂತ್ರ ಬಂದ ನಂತರ ಯಾವ ಸರ್ಕಾರವೂ ಈ ತರಹ ದೊಡ್ಡ ಪ್ರಮಾಣದಲ್ಲಿ ಮನ್ನಾ ಮಾಡಿರಲಿಲ್ಲ ತಾವು ವೆಲ್‌ಗೆ ಬರುತ್ತಿರುವುದು ಪ್ರಚಾರ ಮಾಡುವುದಕ್ಕೇ ಹೊರತು, ತಾವು ಈ ರೀತಿ ಪ್ರಚಾರ ಮಾಡುವುದರಿಂದ ಏನು ಲಾಭವಾಗುವುದಿಲ್ಲ

ಅಧ್ಯಕ್ಷರು ಸದನದ ಬಾವಿಯಲ್ಲಿ ಏತಕ್ಕೆ ನಿಂತುಕೊಂಡು ಮಾತನಾಡುತ್ತಿದ್ದೀರಿ ?

ಶ್ರೀ ಬಿ ಎಸ್ ಯಡಿಯೂರಪ್ಪ ಒಂದು ಸರ್ಕಾರವನ್ನು ಹೀಗೇ ಮಾಡಬೇಕೆಂದು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ ತಾವು ಸಲಹೆಯನ್ನು ಕೊಡಬಹುದು ಮಾನ್ಯ ಯಡಿಯೂರಪ್ಪನವರೇ, ಇಂತಹ ದೊಡ್ಡ concession ಕೊಟ್ಟಿದ್ದೀರೆಂದು ತಾವು ಸ್ವಾಗತ ಮಾಡುವುದನ್ನು ಬಿಟ್ಟು ವೆಲ್‌ಗೆ ಬಂದಿದ್ದೀರೆಂದರೆ ನಾನು ಉತ್ತರವನ್ನು ಕೊಡುವುದು ಹೇಗೇ?

ಅಧ್ಯಕ್ಷರು ವೆಲ್‌ಗೆ ಬಂದಿರುವವರು ಮಾತನಾಡಬೇಡಿ ತಾವುಗಳು ತಮ್ಮ ಜಾಗದಲ್ಲಿ ಹೋಗಿ ಮಾತನಾಡಿ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ ಇದರ ಬಗ್ಗೆ ಕಳಕಳಿ ಇದ್ದರೆ ಎಲ್ಲರೂ ಸ್ವಾಗತವನ್ನು ಮಾಡುತ್ತೇವೆ ನಾವು ಇದಕ್ಕೆ ಒಪ್ಪುತ್ತೇವೆ ಈ ತರಹದ ಪೀರಿಕೆಯನ್ನು ಮಾಡಿ ಜನರಿಗೆ ವಂಚನೆ ಮಾಡುವಂತಹ ರೀತಿಯಲ್ಲಿ ಅಲ್ಲ ಇವತ್ತು ಸ್ಪಷ್ಟತೆ ಇಲ್ಲ,

ಬದ್ಧತೆ ಇಲ್ಲ, ಅದಕ್ಕೆ ನಾವು ಏನು, ಇವತ್ತು ಕರ್ನಾಟಕದ ರೈತರಿಗೆ ವಂಚನೆ ಮಾಡುತ್ತಿದ್ದೀರಿ, ಮೋಸ ಮಾಡುತ್ತಿದ್ದೀರಿ, ಆದ್ದರಿಂದ ನಾವು ಸಭಾತ್ಯಾಗ ಮಾಡುತ್ತೇವೆ (ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರಿ ಎಂ ಪಿ ಪ್ರಕಾಶ್ ಸರ್ಕಾರದ ಸಾಧಕಬಾಧಕವೇನು? ತಾವು ಸ್ವಲ್ಪ ದಯಮಾಡಿ ಕೇಳಿ, ಸರ್ಕಾರವು ಇದೇ ರೀತಿಯಾಗಿ ನಡೆದುಕೊಳ್ಳಬೇಕೆಂದು ಹೇಳಿ ಒತ್ತಾಯಮಾಡುವುದು, ಆದರೆ ಒತ್ತಾಯ ಮಾಡಿ, ಈ ರೀತಿಯ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವುದಲ್ಲ, ತಾವೆಲ್ಲರೂ ಹಿರಿಯರಿದ್ದೀರಿ, ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಬೇಕು ತಾವು ಹಿರಿಯರಿದ್ದೀರಿ, ನಾವು ಯಡಿಯೂರಪ್ಪನವರನ್ನು ಕೇಳಿಕೊಂಡಾಗ ಅವರು ಎದ್ದದ್ದು ಹೋಗುತ್ತಿದ್ದರು ತಾವು ಹೋಗಿ ದಯವಿಟ್ಟು ಹೋಗಿ ಅಲ್ಲಿ ಕುಳಿತುಕೊಳ್ಳಿ ಮುಂದಿನ ಕಾರ್ಯಕಲಾಪ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಈಗ ನೋಡಿ, ತಾವು ದಯವಿಟ್ಟು ಹಿರಿಯರಿದ್ದೀರಿ, ತಮ್ಮ ಸ್ಥಾನಗಳಿಗೆ ಹೋಗಿ ತಾವು ಕುಳಿತುಕೊಳ್ಳಿ

(ಗೊಂದಲ)

(ಸದನದಲ್ಲಿ ವಿರೋಧಪಕ್ಷಗಳಾಗಿರುವ ಮುಖಂಡರಾದ ಜೆ ಸಿ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ ಜಯಪ್ರಕಾಶ್‌ಹೆಗ್ಡೆ, ಎಸ್ ರಾಜೇಂದ್ರನ್, ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ.– ಬಾವಿಯೊಳಗ ನಿಂತು ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ, ಅವರಿಗೆ ದಯವಿಟ್ಟು ಅವರ ಸ್ಥಾನಗಳಿಗೆ ಬಂದು ಚರ್ಚೆ ಮಾಡಲಿಕ್ಕೆ ಹೇಳಿ

(ಗೊಂದಲ)

ಅಧ್ಯಕ್ಷರು – ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ

ಶ್ರೀ ಕೆ ರಘುಪತಿ ಭಟ್ – ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕಿಲ್ಲ, ನಿಯಮದ ಪ್ರಕಾರ ಬಾವಿಯಲ್ಲಿ ನಿಂತು ಮಾತನಾಡಲಿಕ್ಕೆ ಅವಕಾಶವಿದೆಯೇ? ನಿಯಮ ಹೇಳಿಕೊಡುವವರು ಅದನ್ನಾದರೂ ಹೇಳಲಿ ನಮಗೆ ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ ಅವಕಾಶವಿದೆಯೆನ್ನುವುದಕ್ಕೆ ಸ್ಪಷ್ಟೀಕರಣ ಕೊಡಲಿ, ಅವರೆಲ್ಲಾ ಹಿರಿಯ ಸದಸ್ಯರಿದ್ದಾರೆ ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ

ನಿಯಮವಿದೆಯೇ? ಎಲ್ಲದಕ್ಕೂ ನಿಯಮವಿದೆಯೆಂದು ಹೇಳುವವರು ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ ನಿಯಮವಿದೆಯೇ ಎಂಬುದನ್ನು ಹೇಳಲಿ

ಅಧ್ಯಕ್ಷರು – ದಯವಿಟ್ಟು ತಾವುಗಳೆಲ್ಲಾ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ

ಮಾನ್ಯ ಸದಸ್ಯರೊಬ್ಬರು – ಅವರಿಗೆ ರೈತರ ಬಗ್ಗೆ ಕಾಳಜಿಯೇ ಇಲ್ಲವಲ್ಲ, ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಯಿತು, ಯಾವುದೂ ತೀರ್ಮಾನ ಕೈಗೊಂಡಿಲ್ಲ

ಶ್ರೀ ಬಿ ಆರ್ ಪಾಟೀಲ್ – ಮಾನ್ಯ ಅಧ್ಯಕ್ಷರೇ ಸದನ ಸ್ಥಗಿತವಾಗಿದೆಯೋ, ನಡೆಯುತ್ತಿದೆಯೋ ಗೊತ್ತಾಗುತ್ತಿಲ್ಲ

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ– ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮಾನ್ಯ ಹಿರಿಯ ಸದಸ್ಯರುಗಳಿಗೆ ಅವರ ಸ್ಥಾನಗಳಿಗೆ ಹೋಗಲಿಕ್ಕೆ ಹೇಳಿ,

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ – ಮಾನ್ಯ ಅಧ್ಯಕ್ಷರೇ ಸಭೆಯನ್ನು ಮುಂದೂಡಿ ಸಮಾಲೋಚನೆ ಮಾಡಿಕೊಂಡು ಬರಲಿ

ಅಧ್ಯಕ್ಷರು – ಈಗ ಅವರು ವೆಲ್‌ನಲ್ಲಿದ್ದಾರೆ ಸರ್ಕಾರದವರು ಇದರ ಬಗ್ಗೆ ಏನಾದರೂ ಹೇಳುವುದಿದೆಯೇ? ಇಲ್ಲದಿದ್ದರೆ ನಿಯಮ 69 ರಡಿ ಇರುವ ಕಲಾಪವನ್ನು ತೆಗೆದುಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಒಂದು ವೇಳೆ ಒತ್ತಾಯ ಆಗಿಯೇ ತೀರಬೇಕೆಂದರೆ ಘೋಷಣೆಗಳನ್ನು ಕೂಗದೆ ನಮ್ಮ ಸದನದ ಕಲಾಪಗಳಿಗೆ ತಾವು ಸಹಕಾರ ಕೊಡಬೇಕು, ಮುಂದಿನ ಕಲಾಪದ ಭಾಗವೇನಿದೆ, ಅದನ್ನು ಮುಂದುವರೆಸಬಹುದು

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ – ಅದು House in order ಎಂದು ಹಿಂದೆ ಎಷ್ಟೋ ಸಾರಿ ತೀರ್ಮಾನವಾಗಿದೆ

ಶ್ರೀ ಹೆಚ್ ಸಿ ಬಾಲಕೃಷ್ಣ – ದಯಮಾಡಿ ಹಿರಿಯ ಸದಸ್ಯರೆಲ್ಲ ಬಂದು ಸ್ಥಾನಗಳಲ್ಲಿ ಕುಳಿತು ಸರ್ಕಾರ ಏನು ಹೇಳುತ್ತದೆಂದು ಕೇಳಬೇಕು

ಶ್ರೀ ಎಂ ಪಿ ಪ್ರಕಾಶ್ – ಇದು ಸಂಪ್ರದಾಯವಲ್ಲ, House in order ಎಂದು decision ಆಗಿದೆ ಈಗ ನಾವೇನು ಮಾಡೋಣ, ನೀವು ನಿಮ್ಮ ಸ್ಥಳಗಳಿಗೆ ಹೋಗುವುದಿಲ್ಲವೆನ್ನುತ್ತೀರಿ, ತಾವು ಅಲ್ಲಿ ಕುಳಿತುಕೊಳ್ಳುವುದಿಲ್ಲವೆನ್ನುತ್ತೀರಿ

ಅಧ್ಯಕ್ಷರು – ಈಗ ನಿಯಮ 69 ರ ಕೆಳಗೆ ಕಲಾಪ ತೆಗೆದುಕೊಳ್ಳಬೇಕಾಗುತ್ತದೆ, that main Opposition party is not here ಆದ್ದರಿಂದ 10 ನಿಮಿಷ ಸದನವನ್ನು ಮುಂದೂಡುತ್ತೇನೆ, ಅಷ್ಟರಲ್ಲಿ ಅವರು ಬರುತ್ತಾರೆ ಪುನಃ ಸದನ ಸೇರಿ ಅಜೆಂಡಾ ಪ್ರಕಾರ ನಿಯಮ 69ಅನ್ನು ತೆಗೆದುಕೊಳ್ಳುತ್ತೇನೆ, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ

(ಸದನವನ್ನು ಸಂಜೆ 5 ಗಂಟೆ 4 ನಿಮಿಷಕ್ಕೆ ಮುಂದೂಡಿ ಪುನಃ ಹತ್ತು ನಿಮಿಷಗಳ ನಂತರ ಸೇರುವುದಾಗಿ ಸಭೆಯ ನಿರ್ಣಯಿಸಿತು)

(ಸಭೆಯು ಮತ್ತೆ 5 30 ಗಂಟೆಗೆ ಸಮಾವೇಶಗೊಂಡಿತು ಉಪಾಧ್ಯಾಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್, ಮಾಧುಸ್ವಾಮಿ, ಜಿ ವಿ ಶ್ರೀರಾಮರೆಡ್ಡಿ, ಮತ್ತು ಎಸ್ ರಾಜೇಂದ್ರನ್ ಅವರುಗಳು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು–)

ಉಪಾಧ್ಯಕ್ಷರು ಈಗ ನಿಯಮ 69 ರ ಮೇರೆಗೆ ಚರ್ಚೆ ಮಾನ್ಯ ರಮೇಶ್ ಕುಮಾರ್ ಅವರು ತಾವೇನಾದರೂ ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ ಆರ್ ರಮೇಶ್‌ಕುಮಾರ್ ನಮ್ಮ ಸಹೋದ್ಯೋಗಿಗಳೆಲ್ಲ ಬಾವಿಯಲ್ಲಿದ್ದಾರೆ ನಾವು ಇಲ್ಲಿ ಮಾತನಾಡುವುದು ಚೆನ್ನಾಗಿ ಕಾಣಿಸುವುದಿಲ್ಲ ಅವರನ್ನು ವೆಲ್ ನಲ್ಲಿಟ್ಟು ಚರ್ಚೆ ಮಾಡುವುದು ಸರಿಯಲ್ಲ

ಶ್ರೀ ಎಂ ಪಿ ಪ್ರಕಾಶ್ ಆಗಲೇ ನಾನು ವಿನಂತಿಯನ್ನು ಮಾಡಿಕೊಂಡೆ ಎಲ್ಲರೂ ತಾವುಗಳು ಹಿರಿಯರಿದ್ದೀರಿ ಆದರೆ ಹಣಕಾಸಿನ ಪರಿಣಾಮಗಳೇನಾಗುತ್ತೆ ಎಂದು ನೋಡಬೇಕಾಗುತ್ತದೆ ಆದ್ದರಿಂದ ತಾವುಗಳು ತಮ್ಮ ಸ್ಥಾನಗಳಿಗೆ ಹೋಗಿ ನಿಯಮ 69ರ ಕೆಳಗೆ ಚರ್ಚೆಯನ್ನು ಮಾಡೋಣ

ಶ್ರೀ ಕೆ ಎನ್ ರಾಜಣ್ಣ ನಾಳೆ ಮಧ್ಯಾಹ್ನದ ಒಳಗೆ ಇದರ ಬಗ್ಗೆ ತೀರ್ಮಾನ ಮಾಡದಿದ್ದರೆ ನಾನೂ ನಿಮ್ಮ ಜೊತೆಗೆ ಬರುತ್ತೇನೆ ನಾಳೆ ನಮ್ಮ ಪಾರ್ಟಿ ಮೀಟಿಂಗ್ ಇದೆ ಅಲ್ಲಿ ಇದರ ಬಗ್ಗೆ ಪ್ರಸ್ತಾಪವಾಗುತ್ತದೆ

ಶ್ರೀ ಡಿ ಕೆ ಶಿವಕುಮಾರ್ ತಮ್ಮ ಸ್ಟೇಟ್‌ಮೆಂಟ್ ರೆಕಾರ್ಡ್‌ನಲ್ಲಿದೆ ತಮ್ಮ ಸ್ಟೇಟ್ ಮೆಂಟ್ ಪ್ರೆಸ್ ನವರ ಮುಂದೆ ರೆಕಾರ್ಡ್‌ಗೆ ಬರಲಿ ಇದು ನಿಮ್ಮ ಪಾರ್ಟಿಯ ತೀರ್ಮಾನ ಎಂದು ಬರಲಿ

ಶ್ರೀ ಕೆ ಎನ್ ರಾಜಣ್ಣ ಅದು ರೆಕಾರ್ಡ್‌ಗೆ ಬರಲಿ ಎಂದೇ ನಾನು ನಿಂತುಕೊಂಡು ಹೇಳಿರುವುದು

ಶ್ರೀ ಕೆ ಆರ್ ರಮೇಶ್ ಕುಮಾರ್ ನಮ್ಮ ರಾಜಣ್ಣನವರು ಬಹಳ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳಿದ್ದಾರೆ ನಮ್ಮೆಲ್ಲರಿಗೂ ಕೂಡ ಇದು common interest ನಮ್ಮ ಸ್ನೇಹಿತರಿಗೆ ನಾನೇನು ಹೇಳುತ್ತೇನೆಂದರೆ ಅವರು ಎದ್ದು ನಿಂತು ಅದು ರೆಕಾರ್ಡ್‌ಗೆ ಹೋಗಲಿ ಎಂದು ಸ್ಪಷ್ಟವಾದ ನಿಲುವು ತಾಳಿರುವಾಗ ಅದಕ್ಕೆ ನೀವುಗಳು ಸ್ವಲ್ಪ considerate ಆಗಿದ್ದರೆ ಒಳ್ಳೆಯದೆಂದು ಕಾಣುತ್ತದೆ ದಯಮಾಡಿ ತಾವುಗಳು ಸಹಕರಿಸಬೇಕು

ಶ್ರೀ ಡಿ ಕೆ ಶಿವಕುಮಾರ್ ಇದು ಆಗಲಿಲ್ಲವೆಂದರೆ ಎಲ್ಲ ಶಾಸಕರುಗಳು ಧರಣಿ ಮಾಡುತ್ತೇವೆಂದು ಹೇಳಿದ್ದಾರೆ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾಳೆ ಒಳಗಾಗಿ ನಮ್ಮ ಪಾರ್ಟಿ ತೀರ್ಮಾನ ಮಾಡಲಿಲ್ಲವೆಂದರೆ ನಾವು ನಿಮ್ಮ ಜೊತೆಗೆ ವೆಲ್‌ಗೆ ಬರುತ್ತೇವೆಂದು ಹೇಳಿದ್ದಾರೆ

ಶ್ರೀ ಕೆ ಎನ್ ರಾಜಣ್ಣ ವೆಲ್‌ಗೆ ನಾನು ಬರುತ್ತೇನೆಂದು ಹೇಳಿರುವುದು

ಶ್ರೀ ಸಿದ್ದರಾಮಯ್ಯ. ಎಲ್ಲ ಎಂಎಲ್‌ಎಗಳು ಬರುತ್ತಾರಾ?

ಶ್ರೀ ಕೆ ಎನ್ ರಾಜಣ್ಣ ಎಲ್ಲರ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಜವಾಬ್ದಾರಿಯಿಂದ ನಾನು ಹೇಳಿದ್ದೇನೆ

ಶ್ರೀ ಎಂ ಪಿ ವೆಂಕಟೇಶ್ ರೈತರ ಪರ ನಾವಿದ್ದೇವೆ ದಯವಿಟ್ಟು ನೀವೆಲ್ಲ ಒಳಗೆ ಬನ್ನಿ ನಾವು ಚರ್ಚೆ ಮಾಡುತ್ತೇವೆ ನಾವು ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ಮಾಡಿ ರೈತರ ಪರ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇಂಥ ದೊಡ್ಡ announcement ಮುಖ್ಯಮಂತ್ರಿಯವರಿಗೂ ಗೊತ್ತಿಲ್ಲ ಗೃಹ ಸಚಿವರಿಗೂ ಕೂಡ ಗೊತ್ತಿಲ್ಲ ಎಲ್ಲರಿಗೂ ದಂಗುಬಡಿದ ಹಾಗೆ ಆಗಿಬಿಟ್ಟಿದೆ ಏಕೆಂದರೆ ಇಂಥ important announcement

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಈಗಾಗಲೇ ಚರ್ಚೆಯಾಗಿದೆ ಮಾನ್ಯ ರಾಜಣ್ಣನವರು ಆನುಷಂಗಿಕವಾಗಿ ಕೂಡ ಹೇಳಿದ್ದಾರೆ, ನಾಳೆ ನಮ್ಮ ಶಾಸಕಾಂಗದ ಸಭೆ ಇದೆ ಎಂದು ತಾವು ಅನೇಕ ವಿಷಯಗಳನ್ನು ಹೇಳಿದ್ದೀರಿ ಯಾವುದೇ ಸರ್ಕಾರವಾದರೂ ಕೂಡ ಈ ವಿಚಾರದ ಬಗ್ಗೆ ಹಣಕಾಸಿನ ಸಾಧಕ ಬಾಧಕಗಳನ್ನು ಯೋಚನೆ ಮಾಡಬೇಕಾಗುತ್ತದೆ ಅಷ್ಟು ಸುಲಭವಾಗಿ ಹಣಕಾಸಿನ ವಿಚಾರದಲ್ಲಿ ಒಪ್ಪಿಗೆ

ಕೊಡತಕ್ಕಂಥಾದ್ದು ಆಗುವುದಿಲ್ಲ ಆ ಕಾರಣಕ್ಕಾಗಿ ಸಧ್ಯಕ್ಕೆ ಈ ವಿಚಾರ ಪ್ರಸ್ತಾಪ ಮಾಡುವುದನ್ನು ಕೈಬಿಟ್ಟು ನಾನು ಎಲ್ಲ ಹಿರಿಯರು ಯಾರು ಬಾವಿಯೊಳಗೆ ಇದ್ದೀರಿ, ನಿಮಗೆಲ್ಲರಿಗೂ ಅತ್ಯಂತ ವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಈಗ ನಿಯಮ 69ರ ಕೆಳಗೆ ಕಾರ್ಯಕಲಾಪ ಇದೆ ಅದಕ್ಕೆ ಅನುವು ಮಾಡಿಕೊಡಿ ಮತ್ತು ಇದರ ಬಗ್ಗೆ ಚರ್ಚೆಗೆ ನಾವು ಬಜೆಟ್‌ನಲ್ಲಿ ಉತ್ತರ ಕೊಡುವುದಕ್ಕೆ ಕೂಡ ಸಾಧ್ಯವಾಗುತ್ತದೆ

(ಗೊಂದಲ)

ಉಪಾಧ್ಯಕ್ಷರು ಸುಮ್ಮನೆ ಬಾವಿಯಲ್ಲಿ ನಿಲ್ಲುವ ಬದಲು ಅಲ್ಲಿಗೆ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಧರ್ಮಸಿಂಗ್ ಮಾನ್ಯ ಪ್ರಕಾಶ್ ಅವರು ಹೇಳಿದ್ದಾರೆ ಇದರ ಬಗ್ಗೆ ಸಾಕಷ್ಟು ಗೊಂದಲ ಇದೆ ನಿಮ್ಮ ಪಕ್ಷದಲ್ಲೂ ಗೊಂದಲ ಇದೆ Cabinet meeting ಕೂಡ ಇದೆ ಅಲ್ಲಿ ಚರ್ಚೆ ಮಾಡಿ ಸಮಾಲೋಚನೆ ಮಾಡಿ ನಾಳೆ ಹತ್ತುವರೆ ಗಂಟೆಗೂ ಹನ್ನೊಂದು ಗಂಟೆಗೂ meet ಆಗೋಣ ಮತ್ತೆ ನಾಳೆ ಇದನ್ನು ಚರ್ಚೆ ಮಾಡೋಣ ಯಾರೇ ವೆಲ್ ನಲ್ಲಿದ್ದಾಗ ಚರ್ಚೆ ಪ್ರಾರಂಭ ಮಾಡಿದ್ದಿಲ್ಲ ಈಗ ಮಾತನಾಡಲು ಎಲ್ಲ ಹಿರಿಯರು ಬಂದಿದ್ದಾರೆ ಅದರ ಬಗ್ಗೆ ಏನೂ ಇಲ್ಲ ಈಗ ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಿ ನಾಳೆ ಹತ್ತುವರೆ ಗಂಟೆಗೆ ಸೇರೋಣ

(ಗೊಂದಲ)

ಶ್ರೀ ಡಿ ಆರ್ ಪಾಟೀಲ್ ತಾವು ಬಜೆಟ್ present ಆದಮೇಲೆ ಟಿವಿ interview ನಲ್ಲಿ ಪ್ರತಿಯೊಬ್ಬ ಸಾಲಗಾರನಿಗೂ 25 ಸಾವಿರ ಸಾಲ ಮನ್ನಾ ಆಗುತ್ತ ಎಂದು ತಾವು ಒಂದು ಹೇಳಿಕೆ ಕೊಟ್ಟಿದ್ದಿರಿ ಪತ್ರಿಕೆಯಲ್ಲಿ ಬೇರೆ ಬಂದಿದೆ ಅದರ ಬಗ್ಗೆ ಸರ್ಕಾರದ stand ಏನು?

ಶ್ರೀ ಎಂ ಪಿ ಪ್ರಕಾಶ್ ಅವರು ಹೇಳಿದಂತೆ ಧ್ವನಿ ಮತ್ತು ಪ್ರತಿಧ್ವನಿ ಕಾರ್ಯಕ್ರಮದಲ್ಲಿ ಈ ವಿಚಾರದಲ್ಲಿ ಚರ್ಚೆ ಮಾಡಿದಾಗ ಕೆಲವರು ಪ್ರಶ್ನೆಯನ್ನು ಕೇಳಿದರು ಇದು ಪತ್ರಿಕೆಗಳಲ್ಲೂ ಬಂದಿದೆ 25 ಸಾವಿರದವರೆಗೆ ಮಾತ್ರ ಸಾಲ ಮನ್ನಾ ಮಾಡುತ್ತೇವೆ, ಉಳಿದವರಿಗೆ ಇಲ್ಲ ಎಂದು ಹೇಳಿದೆವು ಆ ಸಂದರ್ಭದಲ್ಲಿ ಅಸ್ಪಷ್ಟತೆ ಉಂಟಾಗಿದೆ ಆದ್ದರಿಂದ, ಇನ್ನೂ consequential legislations ಮತ್ತು ಅದಕ್ಕೆ ಬೇಕಾದ ಆಜ್ಞೆಗಳನ್ನು ಮಾಡತಕ್ಕದ್ದು ಇದೆ ಆ ಸಂದರ್ಭದಲ್ಲಿ ನಿಮ್ಮ ಆತಂಕಗಳನ್ನು ನಿವಾರಿಸುತ್ತೇವೆಂದು ನಾನು ಉತ್ತರವನ್ನು ಕೊಟ್ಟೆ, ನಾವು ಮೊದಲು ಗ್ರಹಿಸಿದ್ದು ಕೂಡ ಹಾಗೇನೆ ಆದರೆ ಅದರ ನಂತರ ಮಾನ್ಯ ಉಪ ಮುಖ್ಯಮಂತ್ರಿಗಳು

ಈ ವಿಚಾರವನ್ನು 50 ಸಾವಿರ ರೂ ವರೆಗೆ ತಂದಿದ್ದೇನೆಂದು ಹೇಳಿದ್ದಾರೆ 50 ಸಾವಿರ ಇದ್ದುದು 25 ಸಾವಿರ ರದ್ದಾಗುತ್ತದೆಂದು ಹೇಳಿ ಆದರೆ ನಮ್ಮ ಮೊದಲಿನ ಗ್ರಹಿಕೆ ಬೇರೆ ಇತ್ತು ಅದೇನೆ ಇರಲಿ ಸರ್ಕಾರವಾಗಿ ಆ ವಿಚಾರವನ್ನು ನಾನು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ ಅಲ್ಲಿ ನಾನು ಧ್ವನಿ ಮತ್ತು ಪ್ರತಿಧ್ವನಿ ಯಲ್ಲಿ ಕೂಡ ಆ ಮಾತನ್ನು ಹೇಳಿದ್ದೇನೆ ಏನು ಹೇಳಿದ್ದೇನೆಂದರೆ, ಇದರ ಬಗ್ಗೆ ನಮ್ಮ ನಿಯಮಾವಳಿಗಳು ಬರುತ್ತವೆ, ಆಗ ಸ್ಪಷ್ಟೀಕರಣ ಬರುತ್ತದೆ ನಿಮ್ಮ ಆತಂಕಕ್ಕೆ ನಿವಾರಣೆಯನ್ನು ಮಾಡುತ್ತೇನೆಂದು ಹೇಳಿದ್ದೇನೆ

ಶ್ರೀ ಡಿ ಕೆ ಶಿವಕುಮಾರ್ ತಾವು ಕ್ಯಾಬಿನೆಟ್‌ನಲ್ಲಿದ್ದಿರಿ ಒಂದೇ ಒಂದು ವಿಚಾರ ಈ ರಾಜ್ಯದ ಜನತೆಗೆ ಗೊತ್ತಾಗಬೇಕು ಅವನು ಸಾಲ ಕಟ್ಟಿದ್ದಾನೋ, ಬಿಟ್ಟಿದ್ದಾನೋ, ಅವನು ಸಾಲವನ್ನು ತೆಗೆದುಕೊಂಡಿದ್ದರೆ, ಅದು ವಜಾ ಆಗುತ್ತದೆಯೇ? ಇಲ್ಲದಿದ್ದರೆ, ಸಾಲ ಕಟ್ಟಿದವನಿಗೂ ವಜಾ ಆಗುವುದಿಲ್ಲ, ಕಟ್ಟದಿದ್ದವನಿಗೂ ವಜಾ ಆಗುವುದಿಲ್ಲ ರೈತ ಸಾಲ ತೆಗೆದುಕೊಂಡು ಇಷ್ಟರೊಳಗೆ complete ಆಗಿ ಕಟ್ಟಿಬಿಟ್ಟಿದ್ದರೆ, ಅವನ ಪರಿಸ್ಥಿತಿ ಏನು?

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಆರಗಜ್ಞಾನೇಂದ್ರ, ವಾಪಸ್ ಬರುತ್ತದೆ

ಶ್ರೀ ಎಂ ಪಿ ಪ್ರಕಾಶ್ 'ಕೊಟ್ಟವನು ಕೋಡಂಗಿ, ಪಡೆದುಕೊಂಡವನು ಈರಭದ್ರ' ಎಂಬ ಗಾದೆ ಮಾತಿದೆ ಪಾಪ! ಕಟ್ಟಿದವನಿಗೆ ಏನೂ ಸಿಗುತ್ತಿರಲಿಲ್ಲ ಆದರೆ, ಈ ಸಲ ಅವರಿಗೆ 6 ಪರ್ಸೆಂಟ್ ಬಡ್ಡಿಯಂತೆ ಎರಡು ವರ್ಷಗಳ ನಂತರ ವಾಪಸ್ ಕೊಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ We are going to reimburse

ಉಪಾಧ್ಯಕ್ಷರು ಮಲ್ಲಿಕಾರ್ಜುನ ಖರ್ಗೆಯವರೆ, ನಿಯಮ 69ರಲ್ಲಿ ಮಾತನಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ನಾನು ಮಾತನಾಡಲು ready ಯಾಗಿದ್ದೇನೆ ಫೆಬ್ರವರಿ 3ರಿಂದ 22ರವರೆಗೆ ಚನ್ನಿಗಪ್ಪನವರು ಅಲ್ಲಿಗೆ ಹೋಗಿ inspection ಮಾಡಿಕೊಂಡು ಬಂದಿರುವವರೆಗೆ ಎಲ್ಲಾ ready ಇದೆ ಆದರೆ, ಇವರುಗಳನ್ನು ಬಾವಿಯಲ್ಲಿ ನಿಲ್ಲಿಸಿ, ಅವರಲ್ಲಿ ನಾವೂ ಭಾಗಿಗಳಾಗುವ ಮೂಲಕ ರೈತರ ಸಾಲ ಮನ್ನಾ ಆಗುತ್ತದೆಂದು ಕಾದು ಕುಳಿತಿದ್ದೇವೆ ಆ ವಿಚಾರ ಬಿಟ್ಟು ಇದರ ಬಗ್ಗೆ ಮಾತನಾಡಿದರೆ, ಜನರು ನನ್ನನ್ನು ಬಿಡುತ್ತಾರೆಯೇ? ಇಲ್ಲವೇ, ಇವರನ್ನಾದರೂ

ನನ್ನ ಜೊತೆ ಕಳುಹಿಸಿ ಅಥವಾ ನನ್ನನ್ನಾದರೂ ಅವರ ಜೊತೆಗೆ ಕಳುಹಿಸಿ ಎರಡರಲ್ಲಿ ಒಂದು ಮಾಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಎರಡನೆಯ ವಿಚಾರ ನಿಮಗೆ ಬಿಟ್ಟದ್ದು!

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ ನಿಲುವಳಿ ಸೂಚನೆಯನ್ನು ತಂದವರೂ ಅವರೇ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಪ್ರಕಾಶ್‌ರವರೆ, ಅವರಿಗೆ ಮನವರಿಕೆ ಮಾಡಿಕೊಟ್ಟು ನಾಳೆ announce ಮಾಡುತ್ತೇವೆಂದು ತೀರ್ಮಾನ ತೆಗೆದುಕೊಂಡರೆ, ಖಂಡಿತವಾಗಿಯೂ ನಾವು ಬರುತ್ತೇವೆ ಇದರ ಬಗ್ಗೆ ಪ್ರಕಾಶ್‌ರವರಿಗೆ ಅನ್ನಿಸಿದೆ ಆದರೆ, ಏನು ಮಾಡುವುದು? common decision ತೆಗೆದುಕೊಳ್ಳುವರಿಲ್ಲ ಒಬ್ಬರ ಮಾತನ್ನು ಒಬ್ಬರು ಕೇಳುವುದಿಲ್ಲ ಮಧ್ಯಾಹ್ನ ಊಟ ಇತ್ತು ಯಡಿಯೂರಪ್ಪನವರು consult ಮಾಡಿಲ್ಲ ಏಕೆಂದರೆ, ಮುಖ್ಯಮಂತ್ರಿಯವರು ನನ್ನ ಪಕ್ಕದಲ್ಲೇ ಊಟ ಮಾಡುತ್ತಿದ್ದರು ಅವರು ಊಟ ಮಾಡಿ ಮೇಲೆ ಹೋದರು ಯಡಿಯೂರಪ್ಪನವರು ಎಲ್ಲರನ್ನೂ receive ಮಾಡುವುದು, ಕಳುಹಿಸಿಕೊಡುವುದನ್ನೇ ಮಾಡುತ್ತಿದ್ದರು ಅನಂತರ, council members ಬಂದರು ಅವರು ನಮಗಿಂತಲೂ late ಆಗಿ ಬಂದರು ಅವರೆಲ್ಲರಿಗೂ ಊಟ ಮಾಡಿಸಿ ಇಲ್ಲಿಗೇ ಬಂದರು Telephoneನಲ್ಲಿ consult ಮಾಡಿದ್ದರೋ ಅಥವಾ ಮೊದಲೇ ಕರೆದಿದ್ದರೋ ಗೊತ್ತಿಲ್ಲ ಆದರೆ, ಖಂಡಿತವಾಗಿಯೂ ಅದರ ಬಗ್ಗೆ ಚರ್ಚೆಯಾಗಿಲ್ಲ, ಏನೂ ಆಗಿಲ್ಲ ಅದೇನಾದರೂ ಇರಲಿ ನಮಗೆ ಸಂತೋಷವೇನೆಂದರೆ, ಪಾಪ! ಯಡಿಯೂರಪ್ಪನವರು ಅಷ್ಟು ಧೈರ್ಯ ಮಾಡಿ ಜೆ ಡಿ(ಎಸ್) ಅನ್ನು ಬಿಟ್ಟು ನಿರ್ಣಯ ತೆಗೆದುಕೊಳ್ಳುವ ಕೆಲಸ ಮಾಡಿದ್ದಾರೆ ಅದನ್ನು ನಾವು appreciate ಮಾಡುತ್ತೇವೆ ಆದರೆ, ಅವರನ್ನು ಬಿಟ್ಟು ಇವರಿಗೆ ಹೇಳಲು ಧೈರ್ಯವಿಲ್ಲ ಆದ್ದರಿಂದ, ಇಂತಹ ಗೊಂದಲದಲ್ಲಿ ಚರ್ಚೆ ಬೇಡ

ಉಪಾಧ್ಯಕ್ಷರು ಅವರು ಹೇಳಿದ್ದಕ್ಕೆ ಏನಾದರೂ Parliamentary Affairs Ministerರವರು convince ಆಗಿದ್ದಾರೆಯೇ?

ಶ್ರೀ ಆರ್ ವಿ ದೇಶಪಾಂಡೆ ನಾನು ಗೃಹ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ ನಮ್ಮ ನಾಯಕರಾದ ಖರ್ಗೆಯವರು ಹೇಳಿದಂತೆ ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮನ್ನೂ, ಮಾನ್ಯ ಮುಖ್ಯಮಂತ್ರಿಯವರನ್ನೂ consult ಮಾಡಿಲ್ಲ 50 ಸಾವಿರದವರೆಗೆ ಸಾಲ ಮನ್ನಾ ಎಂದು ಇಲ್ಲಿ ಹೇಳಿಕೆ ಕೊಟ್ಟು ಹೋದರು ಅವರು ಎಲ್ಲಿಗೆ ಹೋಗಿದ್ದಾರೋ, ನಮಗೆ ಗೊತ್ತಿಲ್ಲ ನಮ್ಮ ಸ್ನೇಹಿತರು ಬಾವಿಯಲ್ಲಿದ್ದಾರೆ ಮುಖ್ಯಮಂತ್ರಿಯವರು ಎಲ್ಲಾ ರೈತರ ಸಾಲ ಮನ್ನಾ

ಮಾಡುತ್ತೇವೆಂದು ಹೇಳಿದ್ದರು ಆದ್ದರಿಂದ, ತಕ್ಷಣ ಮುಖ್ಯಮಂತ್ರಿಯವರನ್ನು ಕರೆಸಿ, ಅವರಿಗೆ ಒಳ್ಳೆಯ ಅವಕಾಶವಿದೆ, ಅವರಿಂದ ಎಲ್ಲಾ ರೈತರಿಗೂ 25 ಸಾವಿರವೆಂದು declare ಮಾಡಿಸಿಬಿಡಿ ಇದರಿಂದ ಜೆ ಡಿ(ಎಸ್)ಗೆ credit ಬರುತ್ತದೆ JD(S) partyಗೆ credit ಬರುತ್ತದೆ ಬಿ ಜೆ ಪಿ ಗೇಕೆ credit ಹೋಗಬೇಕು? ಜೆ ಡಿ(ಎಸ್)ನವರೇ ಅದನ್ನು ತೆಗೆದುಕೊಳ್ಳಲಿ ಮತ್ತೆ ತಾವು Secular party ಎಂದು ಹೇಳುತ್ತೀರಲ್ಲಾ? B J P has over taken you You over take them

ಶ್ರೀ ಎಂ ಪಿ ಪ್ರಕಾಶ್ ಆ ಹೇಳಿಕೆ ನಮ್ಮ ಸರ್ಕಾರದ ಹೇಳಿಕೆ ಆದ್ದರಿಂದ, ಅವರನ್ನು consult ಮಾಡಿಲ್ಲ, ಇವರನ್ನು consult ಮಾಡಿಲ್ಲವೆಂಬ ಪ್ರಶ್ನೆ ಉದ್ಭವವಾಗುವುದಿಲ್ಲ

(ಗೊಂದಲ)

ಶ್ರೀ ಎಮ್ ಪಿ ಪ್ರಕಾಶ್ Record ಸರಿ ಹೋಗಲಿ ಎಂಬುದಕ್ಕಾಗಿ ಮಾನ್ಯ ಉಪಮುಖ್ಯಮಂತ್ರಿಯವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದು ಸರ್ಕಾರದ ಹೇಳಿಕೆ ನಾವೆಲ್ಲರೂ ಅದಕ್ಕೆ ಬಂಧನವಾಗುತ್ತೇವೆ

(ಗೊಂದಲ)

ಶ್ರೀ ಸಿದ್ದರಾಮಯ್ಯ ನಾವು ಬಜೆಟ್ present ಮಾಡುವುದಕ್ಕಿಂತ ಮುಂಚಿತವಾಗಿ ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ, ಕ್ಯಾಬಿನೆಟ್‌ನ formal approval ತೆಗೆದುಕೊಂಡು ಬಂದು ತಯಾರು ಮಾಡುತ್ತೇವೆ

ಶ್ರೀ ಎಂ ಪಿ ಪ್ರಕಾಶ್ No No approval ಕೊಡುವುದಿಲ್ಲ Salient features ಹೇಳುತ್ತೇವೆ

ಶ್ರೀ ಸಿದ್ದರಾಮಯ್ಯ ಹೌದೌದು! ಹಾಗಾದರೆ, ಬಜೆಟ್ ಏಕೆ ಕ್ಯಾಬಿನೆಟ್‌ಗೆ ಹೋಗುತ್ತದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ ಇವರು ಐದು ಕೋಟಿಗಿಂತಲೂ ಹೆಚ್ಚು ಹಣವನ್ನು ಕ್ಯಾಬಿನೆಟ್ ಮುಂದೆ ತರದೇ ಇಲ್ಲಿಯೇ ಹೇಳಿಬಿಟ್ಟರೆ, ಎಲ್ಲವನ್ನೂ ಒಪ್ಪಬಹುದೆಂದರೆ, ಅದು legal ಆಗುವುದು ಹೇಗೆ?

ಶ್ರೀ ಎಂ ಪಿ ಪ್ರಕಾಶ್ ನಮಗೂ ಗೊತ್ತಿದೆ ಎಷ್ಟು ಸಲ ಘಟನೋತ್ತರ ಒಪ್ಪಿಗೆಯನ್ನು ಕೊಟ್ಟಿಲ್ಲ? ಆದ್ದರಿಂದ, ಅದರ ಬಗ್ಗೆ ಏನೂ ಯೋಚನೆ ಮಾಡಬೇಡಿ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ Hats off to Mr M P Prakash ಏಕೆಂದರೆ, ಅವರು ಇದ್ದುದ್ದನ್ನು ಇದ್ದಂತೆಯೇ ಒಪ್ಪಿಕೊಂಡರು ಘಟನೋತ್ತರ

ಒಪ್ಪಿಗೆಯನ್ನು ಎಷ್ಟೋ ಸಲ ನಾವು ಮಾಡಿಕೊಳ್ಳುತ್ತೇವೆ ಎಂದರೆ, ಇದರ ಅರ್ಥ ಯಾರನ್ನೂ consult ಮಾಡಿಲ್ಲ ಅದನ್ನು ಯಡಿಯೂರಪ್ಪನವರು suo moto credit ತೆಗೆದುಕೊಂಡು ಮಾಡುತ್ತಿದ್ದರು ಆದ್ದರಿಂದ, ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ, for his courage

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದಂತಹ ಮಾತು ಇಡೀ ಸರ್ಕಾರದ ಮಾತು ಇದರಲ್ಲಿ ಹಿಂದೆ ನೋಡುವ ಪ್ರಶ್ನೆಯೇ ಇಲ್ಲ

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ, ಮಾನ್ಯ ಅಧ್ಯಕ್ಷರೆ, ಈ ಸದನ ಯಾವ ನಿಯಮದಡಿಯಲ್ಲಿ ನಡೆಯುತ್ತಿದೆ ಎಂಬುದನ್ನು ಹೇಳಬೇಕು ಏಕೆಂದರೆ, ನಿಲುವಳಿ ಸೂಚನೆಯನ್ನು ಮಂಡಿಸಿ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕಾಗಿತ್ತು ಅವರು ಮಾತನಾಡಲೂ ತಯಾರಿಲ್ಲ

ಉಪಾಧ್ಯಕ್ಷರು ಯಾವ ನಿಯಮವನ್ನೂ ಇಟ್ಟುಕೊಂಡು ಇಲ್ಲಿ ಚರ್ಚೆ ನಡೆಯುತ್ತಿಲ್ಲ ಅವರನ್ನು convince ಮಾಡಿ, ಅವರನ್ನು ಅವರವರ ಜಾಗಕ್ಕೆ ಕಳುಹಿಸುವ ಕೆಲಸ ಮಾತ್ರ ನಡೆಯುತ್ತಿದೆ ನಾವು ಯಾವ ನಿಯಮವನ್ನೂ ಇಟ್ಟುಕೊಂಡಿಲ್ಲ

ಶ್ರೀ ಆರಗ ಜ್ಞಾನೇಂದ್ರ, ಅವರನ್ನು ನಾವು convince ಮಾಡುತ್ತೇವೆ

ಉಪಾಧ್ಯಕ್ಷರು ಅದಕ್ಕೆ ಅವಕಾಶವನ್ನೂ ಕೊಟ್ಟಿದ್ದೇವಲ್ಲ

ಶ್ರೀ ಆರಗ ಜ್ಞಾನೇಂದ್ರ: ಅವರು ಚರ್ಚೆಗೆ ತಯಾರಿಲ್ಲ ಅವರು ಮೊನ್ನೆ ಏನೋ ಮಹಾ ತೇಜೋವಧೆ ಮಾಡುವುದಕ್ಕಾಗಿ ನಿಲುವಳಿ ಸೂಚನೆಯಲ್ಲಿ ತಂದರು ಅದರಲ್ಲಿ ಏನೂ ಇಲ್ಲ ಆದ್ದರಿಂದ, ಅವರು ಇವತ್ತು ಸುಮ್ಮನೆ ಕುಳಿತುಕೊಂಡು ಬಿಟ್ಟಿದ್ದಾರೆ ಚರ್ಚೆಗೆ ತಯಾರೇ ಇಲ್ಲ ಏನೇನೋ ಮಾಡಲು, ನಮ್ಮ ನಮ್ಮಲ್ಲೇ ಹಚ್ಚಿಡಲು ಇನ್ನೇನನ್ನೊ ಮಾಡಲು ಹೊರಟಿದ್ದಾರೆ! ಆದರೆ, ಅದು ಫಲಪ್ರದವಾಗುವುದಿಲ್ಲ

ಉಪಾಧ್ಯಕ್ಷರು ಮಾಧುಸ್ವಾಮಿಯವರು, ವಾಟಾಳ್‌ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ಈಗ ನಿಯಮ 69ರ ಅಡಿಯಲ್ಲಿ ಚರ್ಚೆ ಪ್ರಾರಂಭವಾಗುತ್ತಿದೆ

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್,
ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ ಅಲ್ಲಿ ನಿಂತು ಮಾತನಾಡುವಂತಿಲ್ಲ ದಯವಿಟ್ಟು ಮಾನ್ಯ ಹಿರಿಯ ಸದಸ್ಯರು ಅವರ chairಗೆ ಬರಬೇಕು ಇಲ್ಲದಿದ್ದರೆ, ಸಭೆ orderನಲ್ಲಿರುವುದಿಲ್ಲ ಆದ್ದರಿಂದ, ಅವರನ್ನು ನಿಯಮ 69ರಡಿ ಮಾತನಾಡಲು ಹೇಳಿ

ಉಪಾಧ್ಯಕ್ಷರು ಸಭೆ orderನಲ್ಲಿದೆ

ಶ್ರೀ ಆರಗ ಜ್ಞಾನೇಂದ್ರ ಅವರ ಹತ್ತಿರ ಏನಾದರು ಇದ್ದರೆ ಹೇಳಲಿ ಇಲ್ಲದಿದ್ದರೆ, ಇಲ್ಲವೆಂದು ಒಪ್ಪಿಕೊಳ್ಳಲಿ ಇಲ್ಲದಿದ್ದರೆ, ಅದನ್ನು ಅಜೆಂಡಾದಿಂದ ಕೈ ಬಿಡಬೇಕು

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಮಾನ್ಯ ಜ್ಞಾನೇಂದ್ರರವರೆ, life long ಅವರ ಪರವಾಗಿ ಚರ್ಚೆ ಮಾಡಿ, ಮಾಡಿ, ಸೋತು ಹೋಗಿದ್ದೀರಿ ಇನ್ನೂ ಏಕೆ ಸುಮ್ಮನೆ ಅವರ ಪರವಾಗಿ ಮಾತನಾಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ ಆ ಕಡೆಯಿಂದ ಚರ್ಚೆ ಶುರುವಾಗಬೇಕು ಅವರಿಂದ ಚರ್ಚೆ ಶುರುವಾಗಲಿ ಅವರೇನು prepare ಆಗಿ ಬಂದಿದ್ದಾರೆ, ದಯವಿಟ್ಟು ವಿಷಯದ ಮೇಲೆ ಬೆಳಕು ಚೆಲ್ಲಬೇಕು ಅವರ ಭಾಷಣವನ್ನು ನಾವೂ ಕೇಳಬೇಕೆಂದಿದ್ದೇವೆ

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ ಅದರಲ್ಲಿ ಏನೂ ಇಲ್ಲ ಅದನ್ನೇಕೆ ಎತ್ತೆತ್ತಿ ತೋರಿಸುತ್ತೀರಿ?

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ ಅದನ್ನು ಅವರು ಹೇಳಲಿ ಎಂದು ಹೇಳುತ್ತಿದ್ದೇನೆ Sir, ನಿಯಮ 69ರ ಪ್ರಕಾರ ಅದನ್ನು ಅಜೆಂಡಾದಿಂದ ಕೈ ಬಿಡಬೇಕು ಇಲ್ಲದಿದ್ದರೆ, ಅವರು ಮಾತನಾಡಬೇಕು ಎರಡರಲ್ಲಿ ಒಂದು ಆಗಬೇಕು ಅನವಶ್ಯಕವಾಗಿ ಕಾಲಹರಣವಾಗುತ್ತಿದೆ ಬಜೆಟ್ ಬಗ್ಗೆ ಚರ್ಚೆಯಾಗಬೇಕಾಗಿದೆ ಇಷ್ಟು ದೊಡ್ಡ ಬಜೆಟನ್ನು ಮಂಡನೆ ಮಾಡಿದ್ದಾರೆ, ಇಡೀ ಕರ್ನಾಟಕ ರಾಜ್ಯದ ಜನರು ಇದರ ಬಗ್ಗೆ ಟೀಕೆ–ಟಿಪ್ಪಣಿಗಳು ಏನು ಬರುತ್ತದೆಂದು ನಿರೀಕ್ಷೆ ಮಾಡುತ್ತಿದ್ದಾರೆ ವಿರೋಧ ಪಕ್ಷದವರು ಇದ್ಯಾವುದಕ್ಕೂ ತಯಾರಿಲ್ಲವೆಂದರೆ, ಹೇಗೆ? ನಮ್ಮಲ್ಲಿ ಊಟಿ ಎತ್ತುಗಳು ಅಲ್ಲಲ್ಲೇ ಬಿದ್ದುಬಿಡುತ್ತವೆ ಎಷ್ಟೇ ಹೊಡೆದರೂ, ಬಾಲ ತಿರುಚಿದರೂ, ಎದ್ದೇಳುವುದೇ ಇಲ್ಲ ಇಲ್ಲಿ ಆ ರೀತಿಯಾಗಿದೆ ನಮ್ಮ ವಿರೋಧ ಪಕ್ಷದವರ ಗತಿ ಏನಾಗಿದೆಯೆಂದರೆ,

ಅವರಿಗೆ ಎಷ್ಟೇ ಬಾಲ ತಿರುಚಿದರೂ, ಏಳುವಂತಿಲ್ಲ ಅವರು ಎಲ್ಲಿಯೋ ಒಂದು ಕಡೆ ಚಟುವಟಿಕೆಯಿಂದ ಎದ್ದೇಳುತ್ತಾರೆಂದರೆ, ನಮ್ಮನ್ನೂ ಕೂಡ ಎಚ್ಚರಿಸುತ್ತಾರೆ ರಾಜ್ಯದ ಜನರ ಕಣ್ಣು ತೆರೆಸುತ್ತಾರೆಂದರೆ, ಹೀಗೆ ಮಾಡುತ್ತಿದ್ದಾರೆ ವಿಚಿತ್ರವೆಂದರೆ, ಅವರ ಗೊಂದಲಗಳೇನಿವೆ, ಈಗ ಸಿದ್ದರಾಮಯ್ಯನವರು elect ಆದ ಮೇಲಂತೂ ಭಾರೀ ಗೊಂದಲ ಶುರುವಾಗಿ ಬಿಟ್ಟಿದೆ ಆದ್ದರಿಂದ, ಯಾರೂ ಅಧ್ಯಯನ ಮಾಡಿಕೊಂಡು ಬರುವ ಸ್ಥಿತಿಯಲ್ಲಿಲ್ಲ

ಉಪಾಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ಕೊನೆಯದಾಗಿ ಕೇಳಿಕೊಳ್ಳುತ್ತಿದ್ದೇನೆ ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಚರ್ಚೆಯನ್ನು ಪ್ರಾರಂಭ ಮಾಡುತ್ತೀರೋ?\ ಹೇಗೆ?

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಅವರುಗಳು ಅಲ್ಲಿ ಇದ್ದು, ನಾವು ಇಲ್ಲಿ ನಿಂತುಕೊಂಡು ಮಾತನಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ ಅವರ issue ಏನೆಂದರೆ, pertaining to ರೈತರ ಸಾಲ ಮನ್ನಾ ನಾವು ಮಾತನಾಡುವುದನ್ನೂ ಅದೇ ಕಾರಣಕ್ಕೆ ನಿಲ್ಲಿಸಿ, walk out ಮಾಡಿದ್ದೇವೆ ಆ ರೀತಿ walk out ಮಾಡಿ, ಅದೇ ವಿಷಯದ ಮೇಲೆ ಮಾತನಾಡಬೇಕೆಂದರೆ, ಹೇಗಾಗುತ್ತದೆ?

ಉಪಾಧ್ಯಕ್ಷರು ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10-30 ಗಂಟೆಗೆ ಸೇರುವುದು

(ಸದನವು ಸಂಜೆ 6 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಮಾರ್ಚ್ ಮಾಹೆ 2007ರ ಶುಕ್ರವಾರದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-I

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1246(1748)
ಸದಸ್ಯರ ಹೆಸರು	ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದುಗೋಳ)
ಉತ್ತರಿಸುವ ಸಚಿವರು	ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪರಿಷ್ಕರಿಸಿದ ಪಡಿತರ ಚೀಟಿಯ ಫಲಾನುಭವಿಗಳ ಪಟ್ಟಿ ಸಿದ್ಧವಾಗಿದೆಯೇ (ವಿವರ ನೀಡುವುದು)

ಹೌದು, ರಾಜ್ಯದಲ್ಲಿ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್‌ಗಳ ವಿವರ ಕೆಳಕಂಡಂತಿದೆ (ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆಯೂ ಸೇರಿ) –

ಅನ್ನಪೂರ್ಣ	25,452
ಎಎವೈ	11,75,912
ಬಿಪಿಎಲ್(ಅಕ್ಷಯ)–	53,87,103
ಎಪಿಎಲ್	52,93,443
ಒಟ್ಟು	1,18,81,910

ಆ) ರಾಜ್ಯದಲ್ಲಿ ಪಡಿತರ ಚೀಟಿಯನ್ನು ಹೊಂದಿರುವವರೆಷ್ಟು ಹಾಗೂ ಪಡಿತರ ಚೀಟಿ ವಿತರಣೆಯಲ್ಲಿ ಅನುಸರಿಸುತ್ತಿರುವ ಮಾನದಂಡವೇನು,

ರಾಜ್ಯದಲ್ಲಿ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್ ಹಾಗೂ ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರ ಸಭೆ ಸೇರಿಕೊಂಡು ತಾತ್ಕಾಲಿಕ ಪಡಿತರ ಚೀಟಿ ಹೊಂದಿರುವವರು 1,18,81,910

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/- ರೂ ಗಳ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ ಗರಿಷ್ಟ 17,000/- ರೂ ಗಳ ವಾರ್ಷಿಕ ವರಮಾನ ಆದಾಯವುಳ್ಳ ಕುಟುಂಬಗಳಿಗೆ ಎಪಿಎಲ್ ಪಡಿತರ ಚೀಟಿಯನ್ನು ವಿತರಿಸಲಾಗಿರುತ್ತದೆ

ಈ ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಫಲಾನುಭವಿಗಳು ಅಕ್ಷಯ (ಬಿಪಿಎಲ್) ಪಡಿತರ ಚೀಟಿ ಪಡೆಯಲು ಅನರ್ಹರು

1) ಮೂರು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು
2) ಸ್ಥಿರ ದೂರವಾಣಿ ಹೊಂದಿರುವವರು
3) ಸ್ವಂತವಾಗಿ ಯಾರೇ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)
4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1 00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು, ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ
5) ಪಡೆಯುತ್ತಿರುವವರು
6) ತಿಂಗಳಿಗೆ ರೂ 1,000/-ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು
7) ಆದಾಯ ತೆರಿಗೆ ಪಾವತಿಸುವವರು
8) ರಿಜಿಸ್ಟ್ರಡ್ ಕಾಂಟ್ರಾಂಕ್ಟರ್, ಎಪಿಎಂಸಿ ಟ್ರೇಡರ್ಸ್/ಕಮೀಷನ್ ಏಜೆಂಟ್ಸ್/Dealers in Seeds/Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು ತದನಂತರ ನೀಡಿದ ನಗರ ಪ್ರದೇಶಕ್ಕೆ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ

20' X 30' ಚದರ ಅಡಿ ಅಥವಾ

1) ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು
2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು

3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000/- ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಇ) ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ಸಂಪೂರ್ಣವಾಗಿ ವಿತರಿಸಲಾಗಿದೆಯೇ,

ಇಲ್ಲ ಧಾರವಾಡ ಜಿಲ್ಲೆಯಲ್ಲಿ ಒಟ್ಟು 3,64,383 ಗಣಕೀಕೃತ ಕೂಪನ್‌ಗಳನ್ನು ಮುದ್ರಿಸಲಾಗಿದ್ದು ಈ ಪೈಕಿ 3,48,384 ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ 15,999 ಕೂಪನ್‌ಗಳನ್ನು ವಿತರಿಸಲು ಬಾಕಿ ಇರುತ್ತದೆ ಬಾಕಿ ಇರುವ ಕೂಪನ್‌ಗಳಲ್ಲಿ ಅನ್ನಪೂರ್ಣ 60, ಎಎವೈ 582, ಬಿಪಿಎಲ್ 2744 ಮತ್ತು ಎಪಿಎಲ್ 12,613 ಗಳಿದ್ದು ಎಪಿಎಲ್ ಫಲಾನುಭವಿಗಳು ಪಡಿತರ ಚೀಟಿ ಪಡೆಯಲು ಮುಂದೆ ಬಾರದ ಕಾರಣ ಬಾಕಿ ಉಳಿದಿರುತ್ತವೆ

ಈ) ಯಾವ ಯಾವ ವಿಧಗಳ ಪಡಿತರ ಚೀಟಿಯನ್ನು ವಿತರಣೆ ಮಾಡಲಾಗಿದೆ,

ಧಾರವಾಡ ಜಿಲ್ಲೆಯಲ್ಲಿ ವಿತರಣೆ ಮಾಡಿರುವ ವಿವಿಧ ವರ್ಗಗಳ ಪಡಿತರ ಚೀಟಿಗಳು ಕೆಳಕಂಡಂತಿರುತ್ತದೆ –

ಅನ್ನಪೂರ್ಣ	990
ಅಂತ್ಯೋದಯಅನ್ನ ಯೋಜನೆ	32,192
ಬಿಪಿಎಲ್(ಅಕ್ಷಯ)	1,66,053
ಎಪಿಎಲ್	1,49,149
ಒಟ್ಟು	3,48,384

ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ಹಂಚುವ ಸಂದರ್ಭದಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1247(1405)**
ಸದಸ್ಯರ ಹೆಸರು	**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**
ಉತ್ತರಿಸುವ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ಮಲೆನಾಡಿನಲ್ಲಿ ನಿರಂತರ ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ದೀಪಕ್ಕಾಗಿ ಸೀಮೆಎಣ್ಣೆಯನ್ನು ಹೆಚ್ಚಾಗಿ ಉಪಯೋಗಿಸುತ್ತಿರುವುದರಿಂದ ಗ್ಯಾಸ್ ಸಂಪರ್ಕ ಹೊಂದಿರುವ ಫಲಾನುಭವಿಗಳಿಗೆ ಸೀಮೆಎಣ್ಣೆ ಸರಬರಾಜು ರದ್ದುಮಾಡಿರುವ ಕಾರಣ ಸಾರ್ವಜನಿಕರಿಗೆ ತೀವ್ರತರ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಅನಿಲ ಸಂಪರ್ಕ ಹೊಂದಿದ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿಯ ಸೀಮೆಎಣ್ಣೆ ನೀಡುತ್ತಿರುವುದಿಲ್ಲ

ಅ) ಗ್ಯಾಸ್ ಸಂಪರ್ಕ ಹೊಂದಿರುವವರಿಗೆ ದೀಪಕ್ಕಾಗಿ ಕನಿಷ್ಟ ಪ್ರಮಾಣದ ಸೀಮೆಎಣ್ಣೆಯನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಕೇಂದ್ರ ಸರ್ಕಾರದಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿ ಅನಿಲ ರಹಿತ ಪಡಿತರ ಚೀಟಿದಾರರಿಗೆ ಮಾತ್ರ ವಿತರಿಸಲು ಸೀಮೆಎಣ್ಣೆ ಹಂಚಿಕೆ ನೀಡಲಾಗುತ್ತಿದೆ ಅದರಂತೆ ರಾಜ್ಯಾದ್ಯಂತ ಏಕರೂಪ ಪ್ರಮಾಣದಲ್ಲಿ ಸೀಮೆಎಣ್ಣೆ ಹಂಚಿಕೆ ನೀಡಿ, ಪಟ್ಟಣ, ನಗರ, ಗ್ರಾಮಾಂತರ ಪ್ರದೇಶಗಳ ಅನಿಲ ರಹಿತ ಪಡಿತರ ಚೀಟಿದಾರರಿಗೆ ಮಾತ್ರ ಸೀಮೆಎಣ್ಣೆ ವಿತರಿಸುವ ಕ್ರಮ ಅನುಸರಿಸಲಾಗುತ್ತಿರುವುದರಿಂದ ಮಲೇನಾಡು ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಹೆಚ್ಚು ಸೀಮೆಎಣ್ಣೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಕೇಂದ್ರದ

ಹಂಚಿಕೆ ಕಡಿಮೆ ಇರುವುದರಿಂದ ರಾಜ್ಯಾದ್ಯಂತ ಏಕರೂಪದಲ್ಲಿ ಸೀಮೆಎಣ್ಣೆ ವಿತರಣೆ ಮಾಡುತ್ತಿರುವುದರಿಂದ ಹೆಚ್ಚಿಗೆ ಸೀಮೆಎಣ್ಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1248(1406)
ಸದಸ್ಯರ ಹೆಸರು ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)
ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ವಿತರಣೆ ಸಂಪೂರ್ಣವಾಗಿ ಮುಗಿದಿದೆಯೇ,ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು,

ಇಲ್ಲ

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದುಹಾಕುವ ಬಗ್ಗೆ ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು ವರ್ಗ ಬದಲಾವಣೆ ಕೋರಿರುವ ಅಹವಾಲುಗಳು, ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ ರೀತಿಯಲ್ಲಿ ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ 15 70 ಲಕ್ಷ ವರ್ಗ ಬದಲಾವಣೆಗಾಗಿ 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ 7 64 ಲಕ್ಷ ಇತರೆ ಅಹವಾಲುಗಳಿದ್ದು, ಸಾರ್ವಜನಿಕರಿಂದ ಸ್ವೀಕರಿಸಲಾದ ದೊಡ್ಡ ಸಂಖ್ಯೆ ಅಹವಾಲುಗಳ ವಿಲೇವಾರಿಯ ಕಾರ್ಯನಿರ್ವಹಣೆ ಪ್ರಗತಿಯಲ್ಲಿರುವುದರಿಂದ ಬಿಪಿಎಲ್ ಪಡಿತರ ಚೀಟಿ ವಿತರಣೆ ವಿಳಂಬಕ್ಕೆ ಕಾರಣವಾಗಿರುತ್ತದೆ

ಆ) ವಿತರಿಸಲಾದ ಪಡಿತರ ಚೀಟಿಗಳ ವಿವರದಲ್ಲಿ ತಪ್ಪುಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,
ತಪ್ಪಾಗಿರುವ ಪಡಿತರ ಚೀಟಿಗಳನ್ನು ಸರಿಪಡಿಸಲು ಫಲಾನುಭವಿಗಳೇ ಅರ್ಜಿಗೆ ಒಂದು ರೂಪಾಯಿ ಹಾಗೂ ಪಡಿತರ ಚೀಟಿ ಪಡೆಯಲು ಐದು ರೂಪಾಯಿಗಳ ಶುಲ್ಕ ನೀಡುವಂತೆ ಸರ್ಕಾರದ ಆದೇಶವಿದೆಯೇ

ಬಂದಿರುತ್ತದೆ

ಹೌದು

ಇ) ಹಾಗಿದ್ದಲ್ಲಿ, ಇಲಾಖೆಯವರು ಮಾಡಿದ ತಪ್ಪಿಗಾಗಿ ಫಲಾನುಭವಿಗಳಿಂದ ಈ ರೀತಿ ಹಣ ಸಂಗ್ರಹ ಮಾಡುವುದು ಫಲಾನುಭವಿಗಳಿಗೆ ಶಿಕ್ಷೆ ನೀಡಿದಂತಾಗುವುದಿಲ್ಲವೇ,

ಇಲ್ಲ

ಈ) ಈ ಶುಲ್ಕ ರದ್ದು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಉದ್ಭವಿಸುವುದಿಲ್ಲ

ಇಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1249(1407)**

ಸದಸ್ಯರ ಹೆಸರು **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕೆ ಸಚಿವರು)**

ಅ) ಮಲೆನಾಡು ಬಾಗದ ಅಡಿಕೆ ತೋಟಗಳಲ್ಲಿ ಹಳದಿ ಎಲೆ ರೋಗ ವ್ಯಾಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ರೋಗ ಎಷ್ಟು ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು),

ಹೌದು, ಈ ರೋಗವು ಸುಮಾರು 13800 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ ಜಿಲ್ಲಾವಾರು, ತಾಲ್ಲೂಕುವಾರು ವಿವರ ಇಂತಿವೆ

ಜಿಲ್ಲೆ ಮತ್ತು ತಾಲ್ಲೂಕು	ಹಳದಿ ಎಲೆ ರೋಗ ವ್ಯಾಪಿಸಿರುವ ಪ್ರದೇಶ (ಎಕರೆಗಳಲ್ಲಿ)
1 ಚಿಕ್ಕಮಗಳೂರು	
ಶೃಂಗೇರಿ ತಾಲ್ಲೂಕು	3000
ಕೊಪ್ಪ ತಾಲ್ಲೂಕು	3750
ನರಸಿಂಹರಾಜಪುರ ತಾಲ್ಲೂಕು	1300
ಮೂಡಿಗೆರೆ	5390
2 ಕೊಡಗು	
ಮಡಿಕೇರಿ ತಾಲ್ಲೂಕು	360
ಒಟ್ಟು	13800

ಆ) ಈ ರೋಗ ತಡೆಗಟ್ಟಲು ಸಾಧ್ಯವಾಗದಿರುವುದಕ್ಕೆ ಕಾರಣಗಳು,

ಈ ರೋಗವು ಫೈಟೋಪ್ಲಾಸ್ಮ ಎಂಬ ನಂಜಾಣುವಿನಿಂದ ಬರುತ್ತಿದ್ದು ಇದರ ನಿಯಂತ್ರಣಕ್ಕೆ ಯಾವುದೇ ಔಷಧಿ ಇರುವುದಿಲ್ಲ ವಿಜ್ಞಾನಿಗಳ ಪ್ರಕಾರ ಸಮಗ್ರ ಪೋಷಕಾಂಶಗಳ ಸಮತೋಲನೆ ಕಾಪಾಡುವುದರಿಂದ ಹಾಗೂ ಹೆಚ್ಚು ರೋಗ ಬಂದಂತಹ ಗಿಡಗಳನ್ನು ಕಿತ್ತು ನಾಶಪಡಿಸುವುದರಿಂದ ಇದರ ಹರಡುವಿಕೆಯನ್ನು ತಡೆಗಟ್ಟಬಹುದು ಈ ಬಗ್ಗೆ ಸಂಶೋಧನೆ ಮುಂದುವರೆದಿದೆ

ಇ) ಶೃಂಗೇರಿಯಲ್ಲಿ ಸರ್ಕಾರಿ ಭೂಮಿ ಲಭ್ಯವಿರುವುದರಿಂದ ಈ ರೋಗದ ಬಗ್ಗೆ ಸಂಶೋಧನೆ ನಡೆಸಲು ಸಂಶೋಧನಾ ಕೇಂದ್ರ ತೆರೆಯಲಾಗುವುದೇ, ಹಾಗಿದ್ದಲ್ಲಿ, ಯಾವಾಗ ತೆರೆಯಲಾಗುವುದು

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಶೃಂಗೇರಿಯಲ್ಲಿ ಅಡಿಕೆ ಸಂಶೋಧನಾ ಸಂಸ್ಥೆ ಸ್ಥಾಪನೆಯ ಬಗ್ಗೆ ಘೋಷಿಸಲಾಗಿದೆ ಈ ಕುರಿತು ಮುಂದಿನ ಕ್ರಮ ಜರುಗಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1250(1408)**
ಸದಸ್ಯರ ಹೆಸರು	**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**
ಉತ್ತರಿಸುವ ಸಚಿವರು	**ಶ್ರೀ ಬಂಡೆಪ್ಪ ಖಾಶಂಪುರ (ಕೃಷಿ ಸಚಿವರು)**

ಅ) ಈ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಇಲಾಖೆಯಿಂದ ಇದುವರೆಗೆ ವಿತರಿಸುವ ವಿವಿಧ ಯಂತ್ರೋಪಕರಣಗಳು ಯಾವುವು (ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ಯಂತ್ರೋಪಕರಣ ವಿತರಣೆಯ ವಿವರ ನೀಡುವುದು),

ಈ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಇಲಾಖೆಯಿಂದ ಇದುವರೆಗೆ ವಿತರಿಸಿದ ವಿವಿಧ ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–01 ರಲ್ಲಿ ನೀಡಲಾಗಿದೆ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿತರಿಸಲಾದ ತಾಲ್ಲೂಕುವಾರು ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–2 ರಲ್ಲಿ ನಮೂದಿಸಿದೆ

ಆ) ಹಾಗಿದ್ದಲ್ಲಿ, ಈ ಸಾಲಿನಲ್ಲಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಹೌದು, ಈಗಾಗಲೇ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ

ಅನುಬಂಧ-1

ಈ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಇಲಾಖೆಯಿಂದ ಇದುವರೆಗೆ ವಿತರಿಸಿದ ವಿವಿಧ ಯಂತ್ರೋಪಕರಣಗಳು

ಹೈಟೆಕ್ ಕೃಷಿ ಯಂತ್ರೋಪಕರಣಗಳು, ಕೈ ಚಾಲಿತ/ಎತ್ತಿನಿಂದ ಎಳೆಯುವ ಕೃಷಿ ಯಂತ್ರೋಪಕರಣಗಳು, ಯಂತ್ರ ಚಾಲಿತ ಉಪಕರಣಗಳು ಒಕ್ಕಣಿ ಯಂತ್ರ, ರೋಟವೇಟರ್ ಎಂ ಬಿ ಪ್ಲೋ, ಟ್ರ್ಯಾಕ್ಟರ್ ಚಾಲಿತ ಲೆವಲರ್(ಬ್ಲೇಡ್), ಟ್ರ್ಯಾಕ್ಟರ್ ಚಾಲಿತ ಕಲ್ಟಿವೇಟರ್. ಜೀರೋ ಟಿಲ್ ಡ್ರಿಲ್, ಪವರ್ ವೀಡರ್, ಮಲ್ಟಿಪರ್ಪಸ್ ಟೆಲ್ಲರ್, ಟ್ರ್ಯಾಕ್ಟರ್ ಚಾಲಿತ ಪೆರೋ ಒಪನರ್, ಟ್ರ್ಯಾಕ್ಟರ್/ಪವರ್ ಆಪರೇಟೆಡ್ ರೀಪರ್, ಪಿನೋವರ್ ಬತ್ತದ ಡ್ರಂ ಸೀಡರ್, ಟ್ರ್ಯಾಕ್ಟರ್ ಚಾಲಿತ ಕುಂಟೆ(ಹ್ಯಾರೋ), ಸ್ಟ್ರಾರೀಪರ್, ಚಾಫ್ ಕಟರ್ ಟ್ರ್ಯಾಕ್ಟರ್ ಚಾಲಿತ ಪಡ್ಲರ್, ಕೋನೋ ವೀಡರ್, ಕೊಕೊನೆಟ್ ಫ್ರಾಂಡ್ ಚಾಫರ್, ಶೇಂಗ ಡಿಕಾರ್ಟಿಕೇಟರ್, ಟ್ರಾಕ್ಟರ್ ಚಾಲಿತ ಪೋಸ್ಟ್ ಹೋಲ್ ಡಿಗ್ಗರ್, ಡಿಸ್ಕ್ ಪ್ಲೋ, ಪವರಸಾ, ಮಲ್ಟಿಪರ್ಪಸ್ ಟೆಲ್ಲರ್, ಡೀಪ್ ಟ್ರೆಂಜರ್ ಕೂಪರ್ ([illegible])

ಅನುಬಂಧ-2

ಚಿಕ್ಕಮಗಳೂರು ಜಿಲ್ಲೆಯಲ್ಲಿ 2006-07ನೇ ಸಾಲಿನಲ್ಲಿ ಇದುವರೆಗೆ ವಿತರಿಸಿದ ವಿವಿಧ ಯಂತ್ರೋಪಕರಣಗಳ ವಿವರ

ಕ್ರ ಸಂ	ಯಂತ್ರೋಪಕರಣ	ತಾಲ್ಲೂಕುಗಳು							ಒಟ್ಟು
		ಚಿಕ್ಕಮಗಳೂರು	ಮೂಡಿಗೆರೆ	ಕಡೂರು	ತರೀಕೆರೆ	[illegible]	[illegible]	[illegible]	
1	ಸಣ್ಣ ಟ್ರ್ಯಾಕ್ಟರ್	39	12	26	16	13	[illegible]	[illegible]	121
2	ಪವರ್ ಟಿಲ್ಲರ್	16	31	2	18	22	[illegible]	[illegible]	146
3	ಎಂ ಬಿ ನೇಗಿಲು	0	0	11	15	0	[illegible]	0	26
4	ಜಾಫ್ ಕಟರ್	0	0	0	5	0	0	0	5
5	ಪವರ್ ವೀಡರ್	0	0	0	12	27	14	12	65
6	ಕಲ್ಟಿವೇಟರ್	0	0	2	2	0	0	0	4
7	ಡಿಸ್ಕ್ ಹ್ಯಾರೋ	0	0	0	3	0	0	0	3
	ಒಟ್ಟು	**55**	**43**	**41**	**71**	**63**	**47**	**50**	**370**

ಶಿವಮೊಗ್ಗ ಜಿಲ್ಲೆಯಲ್ಲಿ 2006–07ನೇ ಸಾಲಿನಲ್ಲಿ ಇದುವರೆಗೆ ವಿತರಿಸಿದ ವಿವಿಧ ಯಂತ್ರೋಪಕರಣಗಳ ವಿವರ

ಕ್ರ ಸಂ	ಯಂತ್ರೋಪಕರಣ	ತಾಲ್ಲೂಕುಗಳು							ಒಟ್ಟು
		ಚಿಕ್ಕಮಗಳೂರು	ಮೂಡಿಗೆರೆ	ಕಡೂರು	ತರೀಕೆರೆ	ಎನ್ ಆರ್ ಪುರ	ಕೊಪ್ಪ	ಶೃಂಗೇರಿ	
1	ಪವರ್ ಟಿಲ್ಲರ್	35	45	39	52	36	47	41	295
2	ಸಣ್ಣ ಟ್ರ್ಯಾಕ್ಟರ್	23	16	7	7	8	13	16	90
3	ಕಲ್ಟಿವೇಟರ್	0	21	0	2	0	20	12	55
4	ಡಿಸ್ಕ್ ಹ್ಯಾರೋ	10	16	0	0	0	11	4	41
5	ರೋಟವೇಟರ್	7	20	0	1	1	9	4	42
6	ಪವರ್ ವೀಡರ್	16	22	102	48	71	33	14	306
7	ಪವರ್ ಸಾ	15	0	5	0	0	4	3	27
8	ಡೀಸಲ್ ಪಂಪ್ ಸೆಟ್	0	4	0	0	0	27	0	31
9	ಝೀರೋ ಟಿಲ್ ಡ್ರಿಲ್	0	0	0	0	0	0	4	4
10	ರೀಪರ್	0	0	0	0	0	1	1	2
11	ಹುಲ್ಲು ಕತ್ತರಿಸುವ ಯಂತ್ರ	1	7	2	0	0	1	0	11
12	ಲೆವಲ್ಲರ್	0	0	0	0	0	3	2	5
13	ರೊಟರಿ ಟಿಲ್ಲರ್	0	0	1	0	0	0	0	1
14	ಎಂ ಬಿ ನೇಗಿಲು	0	0	0	0	0	5	14	19
15	ಒಕ್ಕಣಿ ಯಂತ್ರ	1	0	0	0	0	0	0	1
	ಒಟ್ಟು	**108**	**151**	**156**	**110**	**116**	**174**	**115**	**930**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1251(1779)
ಸದಸ್ಯರ ಹೆಸರು ಶ್ರೀ ಬಾಲರಾಜ್ ಎಸ್ [ಕೊಳ್ಳೇಗಾಲ]
ಉತ್ತರಿಸುವವರು ಶ್ರೀ ಹೆಚ್ ಕೆ ಕುಮಾರಸ್ವಾಮಿ
(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಅಂಗವಿಕಲರು ದೃಢೀಕರಣ ಪತ್ರ ಪಡೆಯಲು ಜಿಲ್ಲಾ ಕೇಂದ್ರಕ್ಕೆ ಹೋಗಿ ಪ್ರಯಾಸ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ತಾಲ್ಲೂಕುಮಟ್ಟದಲ್ಲಿ ಗುರುತಿನ ಚೀಟಿ ನೀಡುವ ಬಗ್ಗೆ ಅಂಗವಿಕಲರಿಂದ ಮನವಿಗಳು ಬಂದಿರುತ್ತವೆ

ಆ) ಬಂದಿದ್ದಲ್ಲಿ, ಅವರ ತೊಂದರೆಯನ್ನು ತಪ್ಪಿಸಲು ಸರ್ಕಾರ ಅನುಕೂಲ ಕಲ್ಪಿಸುವುದೇ,

ಹೌದು

ಇ) ಹಾಗಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗುವುದು,

ಜಿಲ್ಲೆಗಳಲ್ಲಿ ಅಂಗವಿಕಲರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ವೈದ್ಯಕೀಯ ಮಂಡಳಿಗಳನ್ನು ರಚಿಸಿದ್ದು, ಮಂಡಳಿಯ ಮುಖಾಂತರ ಪ್ರಮಾಣ ಪತ್ರ ನೀಡಲಾಗುತ್ತಿದೆ ವೈದ್ಯಕೀಯ ಮಂಡಳಿಯ ನಿರ್ಧಾರಕ್ಕೆ ಪರಿಣಿತರ ಅಭಿಪ್ರಾಯ ಅಗತ್ಯವಿದ್ದು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆಸ್ಪತ್ರೆ ಇರುವುದರಿಂದ ಪರಿಗಣಿಸಲು ಲಭ್ಯವಿರುತ್ತದೆ ಅಂಗವಿಕಲರು ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆಯಲು ಜಿಲ್ಲೆಗೆ ಬರಲು ಕಷ್ಟಕರವಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ಮಂಡಲಿಯು ಕ್ಯಾಂಪ್‌ಗಳನ್ನು ನಡೆಸಿ ಅಂಗವಿಕಲರಿಗೆ ಅಲ್ಲಿಯೇ ವೈದ್ಯಕೀಯ ಪ್ರಮಾಣ ಪತ್ರ ನೀಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕೋರಲಾಗಿದೆ

ಈ) ತಾಲ್ಲೂಕು ಕೇಂದ್ರದಿಂದಲೇ ದೃಢೀಕರಣ ಪತ್ರ ನೀಡಲು ಇರುವ ತೊಡಕುಗಳೇನು?

ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ಮಂಡಳಿಯಲಿರಿರುವುದಿಲ್ಲ ವೈದ್ಯಕೀಯ ಮಂಟಳಿಯಲ್ಲಿ ಜಿಲ್ಲಾ ಸರ್ಜನ್, ತಜ್ಞ ವೈದ್ಯರು, ಫಿಸಿಷಿಯನ್ ಇದ್ದು ತಾಲ್ಲೂಕು ಮಟ್ಟದಲ್ಲಿ ಇಂತಹ ತಜ್ಞ ವೈದ್ಯರು ಇಲ್ಲದಿರುವುದರಿಂದ

22	ಆರ್ ಡಿ ಪಿ ಆರ್	9377 80	17658 86	6661 66	11757 14	6885 84	10349 03
23	ಸಹಕಾರ ಸಂಘಗಳ ಇಲಾಖೆ	42 11	29 807	206 15	181 60	58 58	15 94
24	ಶಿಕ್ಷಣ ಇಲಾಖೆ (ಪ್ರಾಥಮಿಕ)	9850 00	9751 18	11583 00	10206 00	16291 42	16291 42
25	ವಸತಿ ಇಲಾಖೆ	37723 45	29215 09	15127 61	34951 12	24934 04	20680 67

26	ಆರೋಗ್ಯ ಇಲಾಖೆ	1681 60	1145 04	19353 77	14551 87	18841 42	15152 97
	ಒಟ್ಟು	85324 88	81091 38	75232 96	103102 90	101478 30	89426 59

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1276(1633)**

ಸದಸ್ಯರ ಹೆಸರು **ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ)**

ಉತ್ತರಿಸುವ ಸಚಿವರು **ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)**

ಅ) ರಾಜ್ಯದಲ್ಲಿ ಈವರೆವಿಗೂ ಎಲ್ಲೆಲ್ಲಿ ಮೇವಿನ ಬ್ಯಾಂಕುಗಳನ್ನು ತೆರೆಯಲಾಗಿದೆ? ಇನ್ನು ಎಷ್ಟು ಮೇವು ಬ್ಯಾಂಕುಗಳನ್ನು ತೆರೆಯಲು ನಿರ್ಧರಿಸಲಾಗಿದೆ? (ವಿವರ ನೀಡುವುದು)

ದೇಣಿಗೆ ಮೂಲಕ ಸಾರ್ವಜನಿಕರ ಸಹಕಾರದೊಂದಿಗೆ ಚಿತ್ರದುರ್ಗ ಜಿಲ್ಲೆಯ ದೊಡ್ಡ ಉಳ್ಳವರ್ತಿ ಮತ್ತು ರಾಂಪುರ ಗ್ರಾಮಗಳಲ್ಲಿ ಒಣಮೇವನ್ನು ಮೇವು ನಿಧಿಗಳಲ್ಲಿ ಸಂಗ್ರಹಿಸಿಡಲಾಗಿದೆ ಯಾ ಜಿಲ್ಲೆಯಲ್ಲಿ ಮೇವಿನ ಪರಿಸ್ಥಿತಿಯನ್ನು ಲಕ್ಷಿಸಿ ಜಿಲ್ಲಾಧಿಕಾರಿಗಳಿಂದ ಮೇವು ನಿಧಿಗಳನ್ನು ತೆರೆಯುವ ಬಗ್ಗೆ ಕಂದಾಯ ಇಲಾಖೆಯಿಂದ ಸೂಚನೆಗಳನ್ನು ನೀಡಲಾಗಿದೆ

ಆ) ಅಂತರ ರಾಜ್ಯ ಮೇವು ಸಾಗಾಣಿಕೆ ಪ್ರತಿ ಬಂಧಿಸಲಾಗಿದೆಯೇ? ಸರ್ಕಾರ ಯಾವ ಯಾವ ಕೃಷಿ ಫಾರಂಗಳಲ್ಲಿ ಹಸಿರು ಹುಲ್ಲು ಬೆಳೆಯಲು ಆದೇಶಿಸಿದೆ? (ವಿವರ ನೀಡುವುದು)

ಸರ್ಕಾರದ ಆದೇಶ ಸಂಖ್ಯೆ ಕಂಇ 4 ಟಿಎಸ್‌ವೈ 2007 ದಿನಾಂಕ 22-1-2007 ರ ಅನ್ವಯ ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ಜೂನ್ 2007 ರ ವರೆಗೆ ನಿರ್ಬಂಧಿಸಲಾಗಿದೆ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್, ಕೊಪ್ಪಳ ಜಿಲ್ಲೆಯಲ್ಲಿ ಬರಪರಿಹಾರ ನಿಧಿಯಡಿಯಲ್ಲಿ ಮೇವು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ ಇವರಿಗೆ ಮೇವು ಬೆಳೆಸಲು ಬರ ಪರಿಹಾರ ನಿಧಿಯಡಿಯಲ್ಲಿ ರೂ 0 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1278(1777)
ಸದಸ್ಯರ ಹೆಸರು ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)
ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪಡಿತರ ವಿತರಣೆಯಲ್ಲಿ ಅವ್ಯವಸ್ಥೆಯುಂಟಾಗಿ ಬಡತನ ರೇಖೆಗಿಂತ ಕೆಳಗಿರುವವರು ಪಡಿತರ ಚೀಟಿ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದಲ್ಲಿ, ಯಾವ ಅವಧಿಯೊಳಗಾಗಿ ಅವ್ಯವಸ್ಥೆಯನ್ನು ಸರಿಪಡಿಸಿ, ಪಡಿತರ ಚೀಟಿಯನ್ನು ವಿತರಿಸಲಾಗುವುದು,

ರಾಜ್ಯದಲ್ಲಿ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಾಗಿರುತ್ತದೆ ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಲಾಗಿದೆ ಖಾಯಂ ಪಡಿತರ ಚೀಟಿಯನ್ನು ನೀಡಲು ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಇ) ಸಮರ್ಪಕ ಪಡಿತರ ಚೀಟಿ ವಿತರಣೆಗೂ ಮುಂಚೆ ಯೂನಿಟ್ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಅರ್ಹ ಫಲಾನುಭವಿಗಳೂ ಸಹ ಪಡಿತರಧಾನ್ಯ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ,

ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ 2007ರ ಮಾಹೆಯಿಂದ ಯೂನಿಟ್ ಆಧಾರದ ಮೇಲೆ ಆಹರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ ಅದರಂತೆ, ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆಜಿ ಗೋಧಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಠ 25 ಕೆಜಿ ಅಕ್ಕಿ/ ಗೋಧಿ/ರಾಗಿ ಮಿತಿಗೆ ಒಳಪಟ್ಟು) ನೀಡಲಾಗುತ್ತಿದೆ ಅಂತ್ಯೋದಯ ಅನ್ನ ಯೋಜನೆ ಅಡಿಯಲ್ಲಿನ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವಂತೆ 28 ಕೆಜಿ ಅಕ್ಕಿ, 6 ಕೆಜಿ ಗೋಧಿ ಹಂಚಿಕೆ ನೀಡಲಾಗುತ್ತಿದೆ ಅನ್ನಪೂರ್ಣ ಪಡಿತರ ಚೀಟಿದಾರರಿಗೆ ಉಚಿತವಾಗಿ 10 ಕೆ ಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ ಈ ರೀತಿಯಾಗಿ ಯೂನಿಟ್

ಪದ್ಧತಿಯಲ್ಲಿಯೂ ಸಹ ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳನ್ನು ಒದಗಿಸುತ್ತಿರುವುದರಿಂದ ಪಡಿತರ ಚೀಟಿದಾರರು ವಂಚಿತರಾಗಿರುವುದಿಲ್ಲ

ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲಾಗುವುದೇ?

(ಇ) ಅಂಶಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1279(1410)**
ಸದಸ್ಯರ ಹೆಸರು **ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)**
ಉತ್ತರಿಸಬೇಕಾದ ಸಚಿವರು **ಶ್ರೀ ಬಿ ನಾಗರಾಜ ಶೆಟ್ಟಿ**
(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕೃಷ್ಣಾ – ಘಟಪ್ರಭಾ ಎರಡು ನದಿಗಳು ಹರಿದಿದ್ದು ಈ ಭಾಗದ ಮೀನುಗಾರಿಕೆಯಲ್ಲಿ ಹಲವಾರು ಕುಟುಂಬಗಳು ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಈ ಒಳನಾಡು ಮೀನುಗಾರರ ಕುಟುಂಬಕ್ಕಿರುವ ಸರ್ಕಾರದ ಸಹಾಯ ಸೌಕರ್ಯಗಳು ಯಾವುವು,

ಒಳನಾಡು ಮೀನುಗಾರರಿಗೆ ಉತ್ತೇಜನ ನೀಡಲು ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

1) ಮೀನು ಮಾರಾಟಕ್ಕಾಗಿ ಮತ್ತು ಮತ್ಸ್ಯವಾಹಿನಿಗೆ ಸಹಾಯ

2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ

3) ಮತ್ಸ್ಯಾಶ್ರಯ ಯೋಜನೆಯಡಿ ವಸತಿ ಸೌಲಭ್ಯ

4) ಮೀನುಗಾರ ಮಹಿಳೆಯರಿಗೆ ಮತ್ಸ್ಯ ಸ್ವಾವಲಂಬನಾ ಯೋಜನೆಯಡಿ ಸಹಾಯ

ಗಿರಿಜನ ಉಪಯೋಜನ

ಇ) ಈ ಬಡ ಮೀನುಗಾರರಿಗೆ ಬೀಳಗಿ ತಾಲ್ಲೂಕಿನಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ, ಹಾಗಿದ್ದಲ್ಲಿ ಫಲಾನುಭವಿಗಳೆಷ್ಟು?

ಬಡ ಮೀನುಗಾರರಿಗೆ ಬೀಳಗಿ ತಾಲ್ಲೂಕಿನಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ ಫಲಾನುಭವಿಗಳ ಸಂಖ್ಯೆಯು ಕೆಳಗಿನಂತಿರುತ್ತವೆ

ವರ್ಷ	ಸಂಖ್ಯೆ
2003–04	10
2006–07	10
ಒಟ್ಟು	20

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1280(1310)
ಸದಸ್ಯರ ಹೆಸರು	ಶ್ರೀ ಪಾಟೀಲ್ ಎಂ ವೈ (ಅಫ್ ಜಲ್‌ಪುರ)
ಸಚಿವರು ಹೆಸರು	ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ನೀಡಲಾದ ಹಣವೆಷ್ಟು (ಜಲ್ಲಾವಾರು ಮಾಹಿತಿ ನೀಡುವುದು)

2006-07 ನೇ ಸಾಲಿನಲ್ಲಿ ಇದುವರೆವಿಗೆ ಮುಜರಾಯಿ ಇಲಾಖೆಯಿಂದ 1652 ದೇವಸ್ಥಾನಗಳಿಗೆ ರೂ 8,07,05,000/-ಹಣ ಮಂಜೂರು ಮಾಡಿದೆ ಜಿಲ್ಲಾವಾರು ಪಟ್ಟಿ <u>ಅನುಬಂಧ-1ರಲ್ಲಿ</u> ಲಗತ್ತಿಸಿದೆ)

ಆ) 2006-07 ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮುಜರಾಯಿ ಇಲಾಖೆಯಿಂದ ಬಿಡುಗಡೆ ಮಾಡಿದ ಹಣ ಎಷ್ಟು?

2006-07 ನೇ ಸಾಲಿನಲ್ಲಿ ಇದುವರೆವಿಗೆ ಗುಲ್ಬರ್ಗಾ ಜಿಲ್ಲೆಯ 113 ಸಂಸ್ಥೆಗಳಿಗೆ ರೂ 38 95 ಲಕ್ಷ ಅನುದಾನ ಮಂಜೂರು ಮಾಡಿದೆ

ಇ) ಅಫಜಲಪುರ ತಾಲ್ಲೂಕಿಗೆ ಬಿಡುಗಡೆಯಾದ ಹಣ ಎಷ್ಟು?

ಅಫಜಲಪುರ ತಾಲ್ಲೂಕಿನ 8 ದೇವಾಲಯಗಳಿಗೆ ತಲಾ 0 25 ಲಕ್ಷದಂತೆ ಒಟ್ಟು 2 00 ಲಕ್ಷ ರೂ ಗಳ ಹಣ ಮಂಜೂರು ಮಾಡಿದೆ

ಈ) ಅಫಜಲಪುರ ತಾಲ್ಲೂಕಿಗೆ ಪ್ರಸ್ತುತ ಸಾಲಿನಲ್ಲಿ ಹಣ ಬಿಡುಗಡೆ ಮಾಡಲಾಗುವುದೇ?

ಅಫಜಲಪುರ ತಾಲ್ಲೂಕಿನ 8 ಧಾರ್ಮಿಕ ಸಂಸ್ಥೆಗಳಿಗೆ ಮಂಜೂರಾದ ಅನುದಾನದಲ್ಲಿ ಈಗಾಗಲೇ 3 ಧಾರ್ಮಿಕ ಸಂಸ್ಥೆಗಳಿಗೆ ತಲಾ ರೂ 25,000/-ಗಳಂತೆ ಒಟ್ಟು ರೂ 75,000/- ಗಳನ್ನು ಬಿಡುಗಡೆ ಮಾಡಲಾಗಿದೆ

ಉಳಿದ 5 ಸಂಸ್ಥೆಗಳು ದಾಖಲಾತಿಗಳನ್ನು ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು

2006-07ನೇ ಸಾಲಿನಲ್ಲಿ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ / ಜೀರ್ಣೋದ್ಧಾರ ಕಾಮಗಾರಿಗಾಗಿ ಜಿಲ್ಲಾವಾರು ಅನುದಾನ ಮಂಜೂರು ಮಾಡಿರುವ ವಿವರ

ಕ್ರ. ಸಂ	ಜಿಲ್ಲೆ	ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಮಂಜೂರು ಮಾಡಲಾದ ಮೊತ್ತ (ರೂ ಲಕ್ಷಗಳಲ್ಲಿ)
1	ಉತ್ತರ ಕನ್ನಡ	30	14 50
2	ಉಡುಪಿ	38	35 50
3	ತುಮಕೂರು	119	38 05
4	ಶಿವಮೊಗ್ಗ	95	64 30
5	ರಾಯಚೂರು	39	12 75
6	ಮೈಸೂರು	54	35 75
7	ಮಂಡ್ಯ	115	38 50
8	ಕೊಪ್ಪಳ	44	14 00
9	ಕೋಲಾರ	47	18 50
10	ಕೊಡಗು	53	61 50
11	ಹಾವೇರಿ	77	24 50
12	ಹಾಸನ	78	30 00
13	ಗುಲ್ಬರ್ಗಾ	113	38 95
14	ಗದಗ್	24	10 00
15	ಧಾರವಾಡ	28	17 00
16	ದಕ್ಷಿಣ ಕನ್ನಡ	83	86 00
17	ದಾವಣಗೆರೆ	81	34 65
18	ಚಿತ್ರದುರ್ಗ	35	16 75
19	ಚಿಕ್ಕಮಗಳೂರು	67	34 25
20	ಚಾಮರಾಜನಗರ	31	10 75
21	ಬಿಜಾಪುರ	71	27 25
22	ಬೀದರ್	20	9 50
23	ಬಳ್ಳಾರಿ	92	39 00

24	ಬೆಳಗಾವಿ	97	38 10
25	ಬೆಂಗಳೂರು ನಗರ	22	12 80
26	ಬೆಂಗಳೂರು ಗ್ರಾಮಾಂತರ	44	20 25
27	ಬಾಗಲಕೋಟೆ	55	23 95
	ಒಟ್ಟು	**1652**	**807 05**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1281(1338)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)**
ಉತ್ತರಿಸಬೇಕಾದ ಸಚಿವರು **ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ ರೈತರ ಸಾಲ ಮನ್ನಾ ಮಾಡಲಾಗುವುದೇ?
ಆ ಯಾವ ಯಾವ ರೈತರ ಸಾಲ ಮನ್ನಾ ಮಾಡಲಾಗುವುದು?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01 04 2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31 12 2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ

ಇ) ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಹೊರೆಯಾಗುವುದೆಷ್ಟು? ಅದನ್ನು ಯಾವ ಮೂಲಗಳಿಂದ ಭರಿಸಲಾಗುವುದು?

ಮೇಲೆ ತಿಳಿಸಿದಂತೆ ಮನ್ನಾಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1282(1339)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)
ಉತ್ತರಿಸಬೇಕಾಧ ಸಚಿವರು ಶ್ರೀ ಜೆ ಟಿ ದೇವೇಗೌಡ
(ಸಹಕಾರ ಸಚಿವರು)

ಅ) ದಿನಾಂಕ 15 09 2003ರಂದು ಕೆಸಿಸಿ ಬ್ಯಾಂಕ್‌ಗೆ ಅನ್ವಯಿಸಿರುವ ವಿಶೇಷ ಬಡ್ಡಿ ಮನ್ನಾ ಯೋಜನೆಯ ವಿವರವೇನು?

ಸರ್ಕಾರವು ಕೆಸಿಸಿ ಬ್ಯಾಂಕ್, ಧಾರವಾಡ, ಇದರ ಪುನಶ್ಚೇತನಕ್ಕಾಗಿ ವಿಶೇಷ ಪ್ಯಾಕೇಜನ್ನು ದಿನಾಂಕ 30 06 2003ಕ್ಕೆ ಬಾಕಿ ಇದ್ದು, ದಿನಾಂಕ 31,03 2004ರೊಳಗಾಗಿ ಪಾವತಿಸಿದ ಅಲ್ಪಾವದಿ, ಮಧ್ಯಮಾವಧಿ ಕೃಷಿ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿದೆ ಮನ್ನಾ ಮಾಡಲಾದ ಈ ಕೃಷಿ ಸಾಲದ ಮೇಲಿನ ಬಡ್ಡಿ ಮೊತ್ತವು ರೂ 73 46 ಕೋಟಿ ಆಗಿರುತ್ತದೆ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ಬಡ್ಡಿ ಮನ್ನಾ ಮಾಡಲಾದ ಬಾಬ್ತು ನಷ್ಟವನ್ನು ರೂ 50 00 ಕೋಟಿಗೆ ಸೀಮಿತಗೊಳಿಸಿ, ಸರ್ಕಾರ, ಅಪೆಕ್ಸ್ ಬ್ಯಾಂಕ್ ಮತ್ತು ಕೆಸಸಿ ಬ್ಯಾಂಕ್ ನಿ ಧಾರವಾಡ, ಅನುಕ್ರಮವಾಗಿ ಶೇ 50 25 25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ ಇದರ ಪ್ರಕಾರ ಸರ್ಕಾರದ ಬದ್ಧತೆಯು ರೂ 25 00 ಕೋಟಿ ಆಗಿದ್ದು, ಸರ್ಕಾರವು ಪೂರ್ಣ ರೂ 25 00 ಕೋಟಿಯನ್ನು ಬಿಡುಗಡೆ ಮಾಡಿರುತ್ತದೆ

ಆ) ಈ ಯೋಜನೆಯಿಂದ ಕೆಸಿಸಿ ಬ್ಯಾಂಕು ಮತ್ತಷ್ಟು ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ)ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದ ಕ್ರಮಗಳೇನು?(ವಿವರ ನೀಡುವುದು)

ಪ್ಯಾಕೇಜಿನಡಿಯಲ್ಲಿ ಕೆಸಿಸಿ ಬ್ಯಾಂಕ್ ನಿ ಧಾರವಾಡ, ಇದರ ವಂತಿಗೆ ರೂ 18 36 ಕೋಟಿಯಷ್ಟು ಬ್ಯಾಂಕಿನಿಂದ ಭರಿಸಿದ್ದು ಇದು ಬ್ಯಾಂಕಿಗೆ ಹಾನಿಯಾಗಿದೆ

ಈ) ಕೆಸಸ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆ ಯಾವಾಗ ನಡೆಸಲಾಗುವುದು?

ಸರ್ಕಾರವು ಕೆಸಿಸಿ ಬ್ಯಾಂಕ್ ನಿ ಧಾರವಾಡ, ಇದರ ಆಡಳಿತಗಾರರ ಅವಧಿಯನ್ನು 10 06 2007ರವರೆಗೆ ವಿಸ್ತರಿಸಲಾಗಿದೆ ಬ್ಯಾಂಕಿನ ಪರಿಸ್ಥಿತಿ ಸುಧಾರಣೆಯಾದಲ್ಲಿ ಬ್ಯಾಂಕಿಗೆ ಚುನಾವಣೆ ನಡೆಸಲು ಕ್ರಮವಿಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1283(1340)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)
ಉತ್ತರಿಸಬೇಕಾಧ ಸಚಿವರು ಶ್ರೀ ಜೆ ಟಿ ದೇವೇಗೌಡ
(ಸಹಕಾರ ಸಚಿವರು)

ಆ) ಧಾರವಾಡ ಕೆಸಿಸಿ ಬ್ಯಾಂಕ್‌ನ ಪುನಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

1 ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕಾತಿ ಮಾಡಲಾಗಿದೆ

2 ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ

3 ಸಾಲ ವಸೂಲಾತಿಗಾಗಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ

4 ಬ್ಯಾಂಕಿನ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿರುತ್ತದೆ

5 ಬ್ಯಾಂಕಿನ ವೆಚ್ಚವನ್ನು ತಗ್ಗಿಸಲು ಅಶಕ್ತವಾಗಿದ್ದ ಸುಮಾರು 50 ಶಾಖೆಗಳನ್ನು ಮುಚ್ಚಲಾಗಿದೆ

6 ಸರ್ಕಾರವು ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದರ ಪುನಶ್ಚೇತನಕ್ಕೆ ವಿಶೇಷ ಪ್ಯಾಕೇಜಿನಲ್ಲಿ ದಿನಾಂಕ 30 06 2003ಕ್ಕೆ ಬಾಕಿಯಿದ್ದು, ದಿನಾಂಕ 31 03 2004ರೊಳಗಾಗಿ ಪಾವತಿಸಲಾದ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿದೆ ಮನ್ನಾ ಮಾಡಲಾದ ಈ ಕೃಷಿ ಸಾಲದ ಮೇಲಿನ ಬಡ್ಡಿ ಮೊತ್ತವು ರೂ 73 46 ಕೋಟಿ ಆಗಿರುತ್ತದೆ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ಬಡ್ಡಿ ಮನ್ನಾ ಮಾಡಲಾದ ಬಾಬ್ತು ನಷ್ಟವನ್ನು ರೂ 50 00 ಕೋಟಿಗೆ ಸೀಮಿತಗೊಳಿಸಿ ಸರ್ಕಾರ ಅಪೆಕ್ಸ್ ಬ್ಯಾಂಕು ಮತ್ತು ಕೆಸಿಸಿ ಬ್ಯಾಂಕ್ ನಿ ಧಾರವಾಡ ಅನುಕ್ರಮವಾಗಿ ಶೇಕಡ 50 25 25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ ಇದರ ಪ್ರಕಾರ ಸರ್ಕಾರದ ವಂತಿಕೆ ರೂ 25 00 ಕೋಟಿ ಆಗಿದ್ದು ಸರ್ಕಾರವು ರೂ 25 00 ಕೋಟಿಯನ್ನು ಬಿಡುಗಡೆ ಮಾಡಿದೆ ಹಾಗೂ ಅಪೆಕ್ಸ್ ಬ್ಯಾಂಕ್ 12 50 ಕೋಟಿಯನ್ನು ಬಿಡುಗಡೆ ಮಾಡಿದೆ

7 ಅಪೆಕ್ಸ್ ಬ್ಯಾಂಕಿನಿಂದ ಅಲ್ಪಾವಧಿ ಪತ್ತಿನ ಮಿತಿ ರೂ 73 00 ಕೋಟಿಯನ್ನು ಮಂಜೂರು ಮಾಡಲಾಗಿದೆ

8 ಅಪೆಕ್ಸ್ ಬ್ಯಾಂಕಿನಿಂದ ರೂ 16 52 ಕೋಟಿಗಳನ್ನು ಪಟ್ಟಣ ಬ್ಯಾಂಕುಗಳಿಗಾಗಿ ಸಾಲದ ರೂಪದಲ್ಲಿ ಮಂಜೂರು ಮಾಡಲಾಗಿದೆ

9 ಪಟ್ಟಣ ಬ್ಯಾಂಕುಗಳಿಗೆ ರೂ 26 00 ಕೋಟಿ ಠೇವು ಹಣ ವಾಪಸ್ಸು ಮಾಡಲಾಗಿದೆ

10 ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ 1949ರ ಪ್ರಕರಣ 11(1)ರಿಂದ ವಿನಾಯಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 31 03 2004 ರವರೆಗೆ ನೀಡಿದ್ದು ದಿನಾಂಕ 31 03 2007 ರವರೆಗೆ ವಿಸ್ತರಿಸುವ ಬಗ್ಗೆ ಕ್ರಮವಿಡಲಾಗಿದೆ 11 ಮುಂಗಾರು 2002ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರೆಗೆ ರೂ 3 18 ಕೋಟಿ ಬಿಡುಗಡೆಗೊಳಿಸಲಾಗಿದೆ

12 ದಿನಾಂಕ 01 04 2004ರಿಂದ ವಿತರಿಸಿದ ಅಲ್ಪಾವಧಿ ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳನ್ನು ಶೇಕಡ 6ರ ಬಡ್ಡಿ ದರದಲ್ಲಿ ನೀಡಲು ತೀರ್ಮಾನಿಸಿದ್ದು ಈ ಸಾಲಗಳ ಮೇಲಿನ ಶೇಕಡ 5 5ರಷ್ಟು ಬಡ್ಡಿಯನ್ನು ಸರ್ಕಾರವು 6ರ ಬಡ್ಡಿ ದರದಲ್ಲಿ ನೀಡಲು ತೀರ್ಮಾನಿಸಿದ್ದು ಈ ಸಾಲಗಳ ಮೇಲಿನ ಶೇಕಡ 5 5ರಷ್ಟು ಬಡ್ಡಿಯನ್ನು ಸರ್ಕಾರವು ಭರಿಸಿಕೊಡುವ ಯೋಜನೆಯಡಿಯಲ್ಲಿ ಈ ಬ್ಯಾಂಕಿಗೆ ಈಗಾಗಲೇ 2004–05ನೇ ಸಾಲಿನಲ್ಲಿ ವಿತರಿಸಿರುವ ಕೃಷಿ ಸಾಲಗಳ ಮೇಲಿನ ಬಡ್ಡಿ ಬಾಬ್ತು ರೂ 1 21 ಕೋಟಿಯನ್ನು ಬ್ಯಾಂಕಿಗೆ ಬಿಡುಗಡೆ ಮಾಡಲಾಗಿದೆ 2005–06ನೇ ಸಾಲಿಗೆ ಸಂಬಂಧಪಟ್ಟಂತೆ ರೂ 466 67 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

13 ಠೇವಣಿದಾರರಿಗೆ ರೂ 24 05 ಕೋಟಿ ಠೇವಣಿ ಹಣ ವಾಪಸ್ಸು ಮಾಡಲಾಗಿದೆ (ಏಪ್ರಿಲ್ 2006ರಿಂದ 21 03 2007ರವರೆಗೆ)

ಆ) ಕೆ ಸಿ ಸಿ ಬ್ಯಾಂಕ್‌ಗೆ ಬಡ್ಡಿ ಮನ್ನಾ ಹಾಗೂ ಇತರೆ ಯೋಜನೆಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? ಇನ್ನೂ ಬಿಡುಗಡೆ ಮಾಡಬೇಕಾಗಿರುವ ಅನುದಾನ ಎಷ್ಟು? ಇದರಿಂದ ಕೆಸಿಸಿ ಬ್ಯಾಂಕ್‌ಗೆ ಆದ ಹಾನಿ ಎಷ್ಟು? (ವಿವರ ನೀಡುವುದು) ಕೆಸಿಸಿ ಬ್ಯಾಂಕ್‌ನ ಪುನಶ್ಚೇತನಕ್ಕಾಗಿ ಆರ್ದಿಕ ನೆರವು ಕೋರಿ ಬ್ಯಾಂಕು ಪ್ರಸ್ತಾವನೆ ಸಲ್ಲಿಸಿದೆಯೆ?(ವಿವರ ನೀಡುವುದು)

1 2003–04ನೇ ಸಾಲಿನಲ್ಲಿ ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದರ ಪುನಶ್ಚೇತನ ಸಲುವಾಗಿ ಘೋಷಿಸಿದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಸರ್ಕಾರವು ರೂ 25 00 ಕೋಟಿಯನ್ನು ಹಾಗೂ ಅಪೆಕ್ಸ್ ಬ್ಯಾಂಕ್ ರೂ 12 50 ಕೋಟಿಯನ್ನು ಬಿಡುಗಡೆ ಮಾಡಿದೆ

2 2005–06ನೇ ಸಾಲಿನ ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಕೆಸಿಸಿ ಬ್ಯಾಂಕ್, ಧಾರವಾಡ ಇದರ ಬೇಡಿಕೆಯಂತೆ ರೂ 54 30 ಕೋಟಿಯನ್ನು ಬಿಡುಗಡೆ ಮಾಡಿದೆ ಬಿಡುಗಡೆಗಾಗಿ ಬಾಕಿ ಹಣ ಇರುವುದಿಲ್ಲ

ಹೌದು

1 2003–04ನೇ ಸಾಲಿನ ವಿಶೇಷ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿನ ಒಟ್ಟಾರೆ ಮೊತ್ತ ರೂ 73 45 ಕೋಟಿಯನ್ನು ಸರ್ಕಾರವೇ ಪಾವತಿಸುವ ಬಗ್ಗೆ

2 ಸರ್ಕಾರದಿಂದ ಮಂಜೂರಾಗಿ ಅಪೆಕ್ಸ್ ಬ್ಯಾಂಕಿನಲ್ಲಿ ಜಮಾ ಆಗಿರುವ ಮಾಧ್ಯಮಿಕ ಪರಿವರ್ತಿತ ಸಾಲ ರೂ 504 21 ಲಕ್ಷ ಬಿಡುಗಡೆ ಬಗ್ಗೆ

3 ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದಕ್ಕೆ ಹೆಚ್ಚುವರಿ ಷೇರು ಬಂಡವಾಳ ರೂ 10 00 ಕೋಟಿ ಮಂಜೂರು ಮಾಡುವ ಬಗ್ಗೆ

4 ಕೆಸಿಸಿ ಬ್ಯಾಂಕ್ ಪಡೆದಿರುವ ಎನ್‌ಒಡಿಸಿ ಸಾಲ ರೂ 39 17 ಲಕ್ಷಗಳನ್ನು ಷೇರು ಅಂತ ಪರಿವರ್ತಿಸುವ ಬಗ್ಗೆ

5 ಪಟ್ಟಣ ಬ್ಯಾಂಕುಗಳ ನಾನ್ ಎಸ್‌ಎಲ್‌ಆರ್/ ಇತರೆ ಸಂಘ ಸಂಸ್ಥೆಗಳ ಠೇವು ಮರುಪಾವತಿಸಲು ರೂ 110 00 ಕೋಟಿಗಳ ಬಡ್ಡಿ ರಹಿತ ಸಾಲ ಮಂಜೂರಿಬಗ್ಗೆ

6 ರೂ 62 00 ಕೋಟಿಗಳ ಗ್ಯಾಪ್ ಮೊತ್ತವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲು ಪ್ರಸ್ತಾವ ಸಲ್ಲಿಸುವ ಬಗ್ಗೆ

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಮೇಲ್ಕಂಡ ಪ್ರಸ್ತಾವಗಳನ್ನು ಸರ್ಕಾರವು ಒಪ್ಪಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1284(1348)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)**
ಉತ್ತರಿಸಬೇಕಾದ ಸಚಿವರು **ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ರಾಜ್ಯದಲ್ಲಿ ಸರ್ಕಾರ ಮಕ್ಕಳ ಅಭಿವೃದ್ಧಿ ಬಗ್ಗೆ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)?

1 ಸಮಗ್ರ ಶಿಶು ಅಭಿವೃದ್ದಿ ಯೋಜನೆಯಡಿ 0–6ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಸೇವೆಗಳನ್ನು ಒದಗಿಸಲಾಗುತ್ತಿದೆ

2 ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗಳು

3 ಭಾಗ್ಯಲಕ್ಷ್ಮಿ ಯೋಜನೆ

4 ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು

5 ಬಾಲಭವನ, ವೀರಶಕ್ತಿ ಮತ್ತು ಹಾಜರಾತಿ ಇದ್ಯಾರ್ಥಿ ವೇತನ

6 ಅನಾಥ ಮಕ್ಕಳಿಗೆ ನಿರ್ಗತಿಕ ಮಕ್ಕಳ ಕುಟೀರ

7 ಶಿಶು ಪಾಲನಾ ಕೇಂದ್ರ.

8 ಬೀದಿ ಮಕ್ಕಳಿಗಾಗಿ ಸಮಗ್ರ ಯೋಜನೆ

9 ದುಡಿಯುವ ಮಕ್ಕಳ ಅಗತ್ಯತೆಗಾಗಿ ರಕ್ಷಣೆ ಮತ್ತು ಪಾಲನೆ

10 ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳಿಗೆ ಭಾರತ ಸರ್ಕಾರದ ಆರ್ಥಿಕ ನೇರವು

ಆ) ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು? ಅದರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಮಕ್ಕಳ ಸಂಖ್ಯೆ ಎಷ್ಟು? ಇವರ ಅಭಿವೃದ್ದಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

2001ನೇ ಜನಗಣತಿಯ ಪ್ರಕಾರ ರಾಜ್ಯದಲ್ಲಿ 0–06ವರ್ಷದ ಮಕ್ಕಳ ಸಂಖ್ಯೆ 68,26,168 ಇದ್ದು, ಬಡತನ ರೇಖೆಗಿಂತ ಕೆಳಗಿರುವ 32 27ಲಕ್ಷ ಮಕ್ಕಳನ್ನು ಐ ಸಿ ಡಿ ಎಸ್ ಫಲಾನುಭವಿಗಳಾಗಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ದಾಖಲು ಮಾಡಿಕೊಳ್ಳಲಾಗಿದೆ ಮಕ್ಕಳ ಅಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ಮುಖ್ಯವಾಗಿ ಕೈಗೊಳ್ಳಲಾಗಿದೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುವುದು

ಶಿಶು ಮರಣ ಕಡಿಮೆ ಮಾಡುವುದು, ಔಪಚಾರಿಕ ಶಿಕ್ಷಣಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದು, ಮಗುವಿನ ಸರ್ವತೋನ್ಮುಖ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ ಏಪ್ರಿಲ್ 2006ರಿಂದ ಫೆಬ್ರವರಿ 2007 ಅಂತ್ಯದವರೆವಿಗೆ ಬಿ ಪಿ ಎಲ್ ಕುಟುಂಬದಲ್ಲಿ ಒಟ್ಟು 276718 ಮಕ್ಕಳಿರುತ್ತಾರೆ ಭಾಗ್ಯಲಕ್ಷ್ಮಿ ಯೋಜನೆಯಡಿ 1/4/2006ರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 119209 ಹೆಣ್ಣು ಮಕ್ಕಳನ್ನು ಗುರುತಿಸಿದ್ದು, ಈ ಮಕ್ಕಳ ಹೆಸರಿನಲ್ಲಿ ಪಾಲುದಾರು ಹಣಕಾಸು ಸಂಸ್ಥೆಯಲ್ಲಿ ರೂ 10,000ಗಳ ಠೇವಣಿ ಹೂಡಲಾಗುವುದು 18ವರ್ಷಗಳು ಪೂರೈಸಿದ ನಂತರ ಬಡ್ಡಿ ಸಮೇತ ಹೆಣ್ಣು ಮಗುವಿಗೆ ನೀಡಲಾಗುವುದು

ಶಿಶು ಪಾಲನಾ ಕೇಂದ್ರಗಳಲ್ಲಿ 0–3ವರ್ಷದ ಮಕ್ಕಳನ್ನು ತಾಯಂದಿರು ಕೆಲಸಕ್ಕೆ ಹೋಗಿರುವ ಸಮಯದಲ್ಲಿ ಪಾಲನೆ ಮಾಡಲಾಗುತ್ತದೆ

ನಿರ್ಗತಿಕ ಮಕ್ಕಳ ಕುಟೀರಗಳಲ್ಲಿ ಮಕ್ಕಳನ್ನು ದಾಖಲುಮಾಡಿ ಅವರ ರಕ್ಷಣೆ, ಪೋಷಣೆ, ವಿದ್ಯಾಭ್ಯಾಸ, ಆಹಾರ ಮತ್ತು ತರಬೇತಿ ನೀಡಲಾಗುತ್ತಿದೆ

ಇ) ಅಲ್ಪ ವಯಸ್ಸಿನ ದುಡಿಯುವ ಮಕ್ಕಳಿಗೆ ಸರ್ಕಾರ ಪುನರ್‌ವಸತಿ ಕಲ್ಪಿಸಿದೆಯೇ (ವಿವರ ನೀಡುವುದು)?

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗುವ ಮಕ್ಕಳ ತಂದೆ–ತಾಯಿ/ಪೋಷಕರನ್ನು ಪತ್ತೆ ಹಚ್ಚಿ ಅವರ ವಶಕ್ಕೆ ಬಿಡಲಾಗುತ್ತದೆ ಪೋಷಕರು ಪತ್ತೆಯಾಗದ ಸಂದರ್ಭಗಳಲ್ಲಿ ಮಕ್ಕಳನ್ನು ಬಾಲಮಂದಿರಗಳಲ್ಲಿ, ದಾಖಲುಗೊಳಿಸಲಾಗುತ್ತವೆ ರಕ್ಷಣೆ, ಪೋಷಣೆ, ಆಹಾರ, ವೈದ್ಯಕೀಯ ತಪಾಸಣೆ, ವಿದ್ಯಾಭ್ಯಾಸ ಹಾಗೂ ತರಬೇತಿಯನ್ನು ನೀಡಲಾಗುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1285(1772)**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ಪಡಿತರ ಕಾರ್ಡ್‌ಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು),

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ತಾತ್ಕಾಲಿಕ ಕೂಪನ್‌ಗಳ ವಿವರ ಈ ಕೆಳಕಂಡಂತಿದೆ –

ತಾಲ್ಲೂಕಿನ ಹೆಸರು	ಅನ್ನಪೂರ್ಣ	ಅಂತ್ಯೋದಯ	ಅಕ್ಷಯ (ಬಿಪಿಎಲ್)	ಎಪಿಎಲ್	ಒಟ್ಟು
ಮಂಗಳೂರು ಅಪ	109	327	16125	52293	68854
ಮಂಗಳೂರು	92	4678	33880	38668	77318
ಬಂಟ್ವಾಳ	46	3184	29856	34327	67413
ಪುತ್ತೂರು	40	2753	21428	24342	48563
ಬೆಳ್ತಂಗಡಿ	42	3057	21233	25306	49638
ಸುಳ್ಯ	23	1858	11283	15432	28596
ಒಟ್ಟು	352	15857	133805	190368	340382

ಆ) ಪಡಿತರ ಕಾರ್ಡ್‌ಗಳ ಹಂಚಿಕೆಯ ಪ್ರಕ್ರಿಯೆಯು ಯಾವ ಹಂತದಲ್ಲಿವೆ, ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುದ್ರಿಸಿದ ತಾತ್ಕಾಲಿಕ ಗಣಕೀಕೃತ ಕೂಪನ್‌ಗಳ ಪೈಕಿ ಈವರೆಗೆ ಶೇಕಡಾ 92 6ರಷ್ಟು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ

ರಾಜ್ಯದಲ್ಲಿ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದು ಹಾಕುವ ಬಗ್ಗೆ, ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು, ವರ್ಗ ಬದಲಾವಣೆ ಕೋರಿರುವ ಅಹವಾಲುಗಳು, ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕರಿಂದ 231296 ಅಹವಾಲುಗಳನ್ನು ಸ್ವೀಕರಿಸಲಾಗಿರುತ್ತದೆ ಇದರಲ್ಲಿ 39495 ವರ್ಗ ಬದಲಾವಣೆಗಾಗಿ, 47115 ಹೊಸ ಪಡಿತರ ಚೀಟಿಗಾಗಿ, 95450 ಡೆಮೋ ಗ್ರಾಫಿಕ್ ಬದಲಾವಣೆಗಾಗಿ, 49236 ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿರುತ್ತದೆ ಖಾಯಂ ಪಡಿತರ ಚೀಟಿಯನ್ನು ವಿತರಿಸಲು ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಇ) ವಿತರಿಸಲಾದ ಪಡಿತರ ಕಾರ್ಡ್‌ಗಳಲ್ಲಿ ಕಂಡು ಬರುವ ಹಲವಾರು ಲೋಪದೋಷಗಳನ್ನು ಸರಿಪಡಿಸುವ ಕುರಿತಾದ ಕ್ರಮಗಳೇನು?

ತಾತ್ಕಾಲಿಕ ಪಡಿತರ ಕೂಪನ್‌ನಲ್ಲಿ ಹೆಸರು, ಸಂಬಂಧ ಅಥವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ಸಾರ್ವಜನಿಕರ ಅಹವಾಲುಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ ತಾಲ್ಲೂಕು ಕೇಂದ್ರದಲ್ಲಿ ನೊಂದಣಿ ಕೇಂದ್ರವನ್ನು ತೆರೆದು 15 ದಿನಗಳ ಕಾಲ ಸದರಿ ನೊಂದಣಿ ಕೇಂದ್ರಗಳಲ್ಲಿ ಅಹವಾಲುಗಳು ನೊಂದಾಯಿಸಲಾಗಿರುತ್ತದೆ ಅವಧಿ ಮೀರಿ ಸಲ್ಲಿಸುವ ಅಹವಾಲುಗಳನ್ನು ಸ್ಥಳೀಯವಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿಯೂ ಸಹ ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿತ್ತು, ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಅದೇಶಿಸಿದೆ, ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1286(1773)**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ) ಸಹಕಾರ ಸಂಘಗಳ ಮೂಲಕ ಸದಸ್ಯರಿಗೆ ಯಶಸ್ವಿನಿ ಯೋಜನೆಯ ಮೂಲಕ ಈವರೆಗೆ ಆರೋಗ್ಯ ಸೌಲಭ್ಯವನ್ನು ನೀಡಲಾಗಿರುವ ಫಲಾನುಭವಿಗಳೆಷ್ಟು?

ಯಶಸ್ವಿನಿ ಯೋಜನೆಯಲ್ಲಿ ಈವರೆಗೆ 392250 ಫಲಾನುಭವಿಗಳು ಸೌಲಭ್ಯವನ್ನು ಪಡೆದಿದ್ದು ಈ ಪೈಕಿ 319880 ಫಲಾನುಭವಿಗಳು ಉಚಿತ ಹೊರರೋಗ ಚಿಕಿತ್ಸೆಯ ಸೌಲಭ್ಯವನ್ನು ಮತ್ತು 72370 ಫಲಾನುಭವಿಗಳು ನಗದು ರಹಿತ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಪಡೆದಿರುತ್ತಾರೆ

ಆ) ಯಶಸ್ವಿನಿ ಯೋಜನೆಯ ಜೊತೆಗೆ ಸಹಕಾರ ಸಂಘಗಳ ಸದಸ್ಯರಿಗೆ ಒದಗಿಸಿಕೊಡುತ್ತಿರುವ ಪ್ರಮುಖ ಸೌಲಭ್ಯಗಳೇನು?

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟು ಗುರುತಿಸಿದ ಆಸ್ಪತ್ರೆಗಳು ಯಶಸ್ವಿನಿ ಫಲಾನುಭವಿಗಳಿಗೆ ಈ ಕೆಳಗೆ ನಮೂದಿಸಿದ ಸೌಲಭ್ಯಗಳನ್ನು ಒದಗಿಸುತ್ತವೆ

1) ಉಚಿತ ಹೊರರೋಗ ಚಿಕಿತ್ಸೆ

2) ರಿಯಾಯಿತಿ ದರದಲ್ಲಿ ಆರೋಗ್ಯ ತಪಾಸಣೆ

3) ನಗದು ರಹಿತ (ಒಂದೇ ವರ್ಷದಲ್ಲಿ ಒಂದೆ ಶಸ್ತ್ರಚಿಕಿತ್ಸೆಯಾದಲ್ಲಿ ಗರಿಷ್ಠ ರೂ 1 00 ಲಕ್ಷದವರೆಗೆ ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆಯಾದಲ್ಲಿ ಗರಿಷ್ಟ ರೂ 2 00 ಲಕ್ಷದವರೆಗೆ) ಗುರುತಿಸಿದ 1600 ಶಸ್ತ್ರಚಿಕಿತ್ಸೆಗಳು

4) ತುರ್ತು ವೈದ್ಯಕೀಯ ಚಿಕಿತ್ಸೆ

5) ನವಜಾತ ಶಿಶುವಿನ ರಕ್ಷಣೆ

6) ಸಹಜ ಹೆರಿಗೆ
7) ಆ್ಯಂಜಿಯೋಪ್ಲಾಸ್ಟಿ ಪ್ರೋಸೀಜರ್
8) ಇಂಪ್ಲಾಟ್ಸ್, ಹಿಪ್‌ರೀಪ್ಲೇಸ್‌ಮೆಂಟ್, ನೀ ರೀಪ್ಲೇಸ್‌ಮೆಂಟ್ ಇತ್ಯಾದಿಗಳು ಒಳಗೊಂಡಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1284(1774)**
ಸದಸ್ಯರ ಹೆಸರು **ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸುವವರು **ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯಗಳನ್ನು ಎಷ್ಟು ಫಲಾನುಭವಿಗಳಿಗೆ ಒದಗಿಸಿಕೊಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು),

ಏಪ್ರಿಲ್ 2006ರಿಂದ ಫೆಬ್ರವರಿ 2007ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2532 ಹಾಗೂ ಉಡುಪಿ ಜಿಲ್ಲೆಯಿಂದ 2258 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಪಾಲುದಾರ ಹಣಕಾಸು ಸಂಸ್ಥೆಯ ಆಯ್ಕೆಪ್ರಕ್ರಿಯೆ ಪೂರ್ಣಗೊಂಡ ನಂತರ ಫಲಾನುಭವಿಗಳ ಹೆಸರಿನಲ್ಲಿ ಠೇವಣಿ ಇಡಲಾಗುವುದು, ಸದ್ಯಕ್ಕೆ ಹಣವನ್ನು ಭಾಗ್ಯಲಕ್ಷ್ಮಿ ಸಾರ್ವಜನಿಕ ದತ್ತಿಯಲ್ಲಿ ಇರಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಆ) ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ಹೆಚ್ಚು ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡುವ ಕುರಿತು ಸರ್ಕಾರದ ಚಿಂತನೆಗಳೇನು?

ಭಾಗ್ಯಲಕ್ಷ್ಮಿ ಯೋಜನೆಯನ್ನು 2007-08ನೇ ಸಾಲಿಗೂ ವಿಸ್ತರಿಸಲಾಗಿದ್ದು, 2 ಲಕ್ಷ ಫಲಾನುಭವಿಗಳನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಗುರುತಿಸಲಾದ ಫಲಾನುಭವಿಗಳು
1	ದಕ್ಷಿಣ ಕನ್ನಡ	ಬೆಳ್ತಂಗಡಿ	411
		ಮಂಗಳೂರು ಗ್ರಾಮಾಂತರ	511
		ಸೂಳ್ಯ	247

		ಮಂಗಳೂರು ನಗರ	49
		ಬಂಟ್ವಾಳ	699
		ಪುತ್ತೂರು	615
		ಒಟ್ಟು	2532
2	ಉಡುಪಿ	ಉಡುಪಿ	725
		ಕುಂದಾಪುರ	1101
		ಕಾರ್ಕಳ	432
		ಒಟ್ಟು	2258

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1288(1776)
ಸದಸ್ಯರ ಹೆಸರು ಶ್ರೀ ರಾಮಲಿಂಗಾರೆಡ್ಡಿ (ಜಯನಗರ)
ಉತ್ತರಿಸಬೇಕಾದ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರದಲ್ಲಿ ಪಡಿತರ ಚೀಟಿ ನೀಡಲು ಬಡತನ ರೇಖೆಗಿಂತ ಕೆಳಗಿರುವ ಎಷ್ಟು ಕುಟುಂಬಗಳನ್ನು ಗುರುತಿಸಲಾಗಿದೆ,

ಬೆಂಗಳೂರು ನಗರ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಈ ಕೆಳಕಂಡಂತೆ ಬಿಪಿಎಲ್ ಪಡಿತರ ಚೀಟಿಗಳನ್ನು ಈಗಾಗಲೇ ಗುರುತಿಸಿ ವಿತರಿಸಲಾಗಿದೆ

ಹಳದಿ 199316
ಎಎವೈ 18769
ಅನ್ನಪೂರ್ಣ 0
ಒಟ್ಟು 218085

ಆ) ಈ ವರೆಗೆ ಬೆಂಗಳೂರು ನಗರದಲ್ಲಿ ಬಿ ಪಿ ಎಲ್ ಕಾರ್ಡಿಗಾಗಿ ಅರ್ಜಿ ಸಲ್ಲಿಸಿರುವವರೆಷ್ಟು?

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದ ವ್ಯಾಪ್ತಿಯಲ್ಲಿ ಬಿಪಿಎಲ್ ಪಡಿತರ ಚೀಟಿಗಳಿಗಾಗಿ ಸಾರ್ವಜನಿಕರಿಂದ ವಲಯಾವಾರು ಸ್ವೀಕರಿಸಿರುವ ಮನವಿಗಳು ವಿವರ ಈ ಕೆಳಕಂಡಂತೆ ಇರುತ್ತದೆ

(1) ಪೂರ್ವ ವಲಯ – 34,543
(2)ಪಶ್ಚಿಮವಲಯ 6,155
(3)ಉತ್ತರವಲಯ 1,369

(4)ದಕ್ಷಿಣವಲಯ 3,100
(5)ಕೇಂದ್ರವಲಯ 3,534
ಒಟ್ಟು 48,701

ಇ) ಬಿ ಪಿ ಎಲ್ ಕಾರ್ಡುಗಳನ್ನು ವಿತರಿಸಲು ವಿಳಂಬವಾಗಿದೆಯೆ, ಹಾಗಿದ್ದಲ್ಲಿ, ಕಾರಣಗಳೇನು?

ಬೆಂಗಳೂರು ನಗರ ಅ ಪ ಪ್ರದೇಶದಲಿ ಅರ್ಹ ಬಿಪಿಎಲ್ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ನೀಡಲು ಕ್ರಮ ವಹಿಸಲಾಗುತ್ತಿದೆ

ಈ) ಎಲ್ಲಾ ಅರ್ಹ ಅರ್ಜಿದಾರರಿಗೆ ಯಾವಾಗ ಬಿಪಿಎಲ್ ಕಾರ್ಡುಗಳನ್ನು ವಿತರಿಸಲಾಗುವುದು?

ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಚೀಟಿಗಳು ನೀಡುವ ಬಗ್ಗೆ ಅರ್ಜಿಗಳನ್ನು ನೀಡಲು ಮತ್ತು ಸ್ವೀಕರಿಸಲು ಪ್ರತ್ಯೇಕ ಕೇಂದ್ರಗಳನ್ನು ತೆರೆಯಲು ಕ್ರಮ ವಹಿಸಲಾಗುತ್ತಿದ್ದು, ಶೀಘ್ರವಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1289(1343)**
ಸದಸ್ಯರ ಹೆಸರು **ಶ್ರೀ ರೋಷನ್ ಬೇಗ್ ಆರ್(ಜಯಮಹಲ್)**
ಉತ್ತರಿಸಬೇಕಾದ ಸಚಿವರು **ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು)**

ಅ) ರಾಜ್ಯದಲ್ಲಿ ರೈತರು ಮಾಡಿರುವ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು (ವಿವರ ನೀಡುವುದು)

ಪ್ರಸಕ್ತ ಸಾಲಿನಲ್ಲಿ ಅಂದರೆ 01-04-2006 ರಿಂದ 12-03-2007ರ ವರೆಗೆ 243 ರೈತರ ಅತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ, ಈ ಪೈಕಿ 73 ಪ್ರಕರಣಗಳು ಸಾಲದ ಬಾಧೆಯಿಂದ ಉಂಟಾದ ಅತ್ಮಹತ್ಯೆ ಅಲ್ಲ ಎಂದು ಉಪವಿಭಾಗೀಯ ಆಯುಕ್ತರವರ ನೇತೃತ್ವದ ಸಮಿತಿಯು ತಿರಸ್ಕರಿಸಿದೆ

ಇ) ರೈತರು 18,000 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡುವಂತವರನ್ನು ಒಕ್ಕಲೆಬ್ಬಿಸಿ ಅವರುಗಳಿಗೆ ಉತ್ತಮ ಸೌಲಭ್ಯ ಒದಗಿಸಲಾಗುವುದೆಂದು ಘೋಷಿಸಿರುವುದು ನಿಜವೇ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು,

ಉ) ಅತಿಕ್ರಮಣ ಮಾಡಿದ ಜಮೀನನ್ನು ಸರ್ಕಾರಿ ವಶಕ್ಕೆ ಪಡೆದು ಅದನ್ನು ಹರಾಜು ಮಾಡಿ ಬಂದ ಹಣದಿಂದ ವಸತಿ ಹೀನ ಗ್ರಾಮಸ್ಥರ ಅಭಿವೃದ್ಧಿಪಡಿಸಲಾಗುವುದೆಂದು ಸರ್ಕಾರ ಗುರಿ ಹೊಂದಿದೆಯೆಂದು ಘೋಷಿಸಿರುವುದು ನಿಜವಲ್ಲವೇ

ಊ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕೃಷಿ ಇಲಾಖೆಯ ವತಿಯಿಂದ ಇಂತಹ ಯಾವುದೇ ಘೋಷಣೆಯನ್ನು ಮಾಡಿಲ್ಲದಿರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1290(1309)**

ಸದಸ್ಯರ ಹೆಸರು **ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ [ಸೇಡಂ]**

ಉತ್ತರಿಸಬೇಕಾದ ಸಚಿವರು **ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅರಕಾಲಿಕ-ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವವರೆಷ್ಟು [ಜಿಲ್ಲಾವಾರು ಮಾಹಿತಿ ನೀಡುವುದು],

ಇಲಾಖೆಯ ಬಾಲ ಸೇವಾ ಸಂಸ್ಥೆಗಳಲ್ಲಿ ಅರೆಕಾಲಿಕ-ದೈಹಿಕ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ,

1 ಮೈಸೂರು	4	
2 ದಾವಣಗೆರೆ	2	
3 ಬೆಳಗಾವಿ	-	
4 ರಾಯಚೂರು	-	
5 ಧಾರವಾಡ	4	
6 ಗುಲ್ಬರ್ಗ	4	
7 ಕೋಲಾರ	1	
8 ಶಿವಮೊಗ್ಗ	1	
9 ಬೆಂಗಳೂರು	7	
ಒಟ್ಟು	23	

2) ಎಷ್ಟು ವರ್ಷಗಳಿಂದ ಅವರು ಕೆಲಸ ನಿರ್ವಹಿಸುತ್ತಿದ್ದಾರೆ ಹಾಗೂ ಇವರಿಗೆ ಪ್ರತಿ ತಿಂಗಳು ನೀಡುತ್ತಿರುವ ಸಂಬಳವೆಷ್ಟು,

20 ವರ್ಷಗಳಿಂದ ದಿನಕ್ಕೆ 2 ಗಂಟೆಗಳ ಕಾಲ ಅರೆಕಾಲಿಕ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ತಲಾ ಪ್ರತಿ ಮಾಹೆಗೆ ರೂ 350/-ಗಳಂತೆ ಗೌರವಧನ ಪಾವತಿಸಲಾಗುತ್ತಿದೆ

3) ಈ ಶಿಕ್ಷಕರಿಗೆ ಕನಿಷ್ಠ ವೇತನ ಕಾಯ್ದೆಯಡಿ ವೇತನ ನಿಗಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ,

ಪರಿಶೀಲನೆಯಲ್ಲಿದೆ

4) ಅರಕಾಲಿಕ ಶಿಕ್ಷಕರ ಸೇವೆಯನ್ನು ಪೂರ್ಣಾವಧಿಯೆಂದು ಪರಿಗಣಿಸಿ ಸಂಬಳ ನಿಗದಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು?

ಅಂತಹ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1291(1344)**
ಸದಸ್ಯರ ಹೆಸರು **ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್**
(ಸೇಡಂ)
ಉತ್ತರಿಸಬೇಕಾದ ಸಚಿವರು **ಶ್ರೀ ಬಿ ನಾಗರಾಜ ಶೆಟ್ಟಿ**
(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

a) The funds allocated to worship places under Muzrai, Templewise allocation of funds in the State be furnished)

2006-07ನೇ ಸಾಲಿನಲ್ಲಿ 1652 ದೇವಸ್ಥಾನಗಳಿಗೆ ರೂ 807 05 ಲಕ್ಷಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ (ಪಟ್ಟಿ ಲಗತ್ತಿಸಿದೆ)

b) Is there any proposal before the Government for the improvements of temples of Sedam Taluk,

c) If so, the action taken by the Government?

ಪ್ರಸ್ತುತ ಸಾಲಿನಲ್ಲಿ ಸೇಡಂ ತಾಲ್ಲೂಕಿನ ದೇವಾಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ ಸೇಡಂ ತಾಲ್ಲೂಕಿನ ದೇವಾಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಗುಲ್ಬರ್ಗಾ ಜಿಲ್ಲಾಧಿಕಾರಿಗಳಿಂದ ಸಹ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ ಪ್ರಶ್ನೆ ಉದ್ಭವಿಸುವುದಿಲ್ಲ

2006–07ನೇ ಸಾಲಿನಲ್ಲಿ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ / ಜೀರ್ಣೋದ್ಧಾರ ಕಾಮಗಾರಿಗಾಗಿ ಜಿಲ್ಲಾವಾರು ಅನುದಾನ ಮಂಜೂರು ಮಾಡಿರುವ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಮಂಜೂರು ಮಾಡಲಾದ ಮೊತ್ತ (ರೂ ಲಕ್ಷಗಳಲ್ಲಿ)
1	ಉತ್ತರ ಕನ್ನಡ	30	14 50
2	ಉಡುಪಿ	38	35 50
3	ತುಮಕೂರು	119	38 05
4	ಶಿವಮೊಗ್ಗ	95	64 30
5	ರಾಯಚೂರು	39	12 75
6	ಮೈಸೂರು	54	35 75
7	ಮಂಡ್ಯ	115	38 50
8	ಕೊಪ್ಪಳ	44	14 00
9	ಕೋಲಾರ	47	18 50
10	ಕೊಡಗು	53	61 50
11	ಹಾವೇರಿ	77	24 50
12	ಹಾಸನ	78	30 00
13	ಗುಲ್ಬರ್ಗಾ	113	38 95
14	ಗದಗ್	24	10 00
15	ಧಾರವಾಡ	28	17 00
16	ದಕ್ಷಿಣ ಕನ್ನಡ	83	86 00
17	ದಾವಣಗೆರೆ	81	34 65
18	ಚಿತ್ರದುರ್ಗ	35	16 75
19	ಚಿಕ್ಕಮಗಳೂರು	67	34 25
20	ಚಾಮರಾಜನಗರ	31	10 75
21	ವಿಜಾಪುರ	71	27 25
22	ಬೀದರ್	20	9 50
23	ಬಳ್ಳಾರಿ	92	39 00
24	ಬೆಳಗಾವಿ	97	38 10
25	ಬೆಂಗಳೂರು ನಗರ	22	12 80
26	ಬೆಂಗಳೂರು ಗ್ರಾಮಾಂತರ	44	20 25
27	ಬಾಗಲಕೋಟೆ	55	23 95
	ಒಟ್ಟು	1652	807 05

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1292(1785)
ಸದಸ್ಯರ ಹೆಸರು	ಶ್ರೀ ಶಿವರಾಮು ಬಿ (ಗಂಡಸಿ)
ಉತ್ತರಿಸಬೇಕಾದ ಸಚಿವರು	ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಹಿಂದಿನ ಪ್ರಮಾಣದಂತೆ ಬಿಪಿಎಲ್, ಎಪಿಎಲ್, ಅನ್ನಪೂರ್ಣ ಮತ್ತು ಇತರೇ ಯೋಜನೆಗಳಿಗೆ ಡಿಸೆಂಬರ್ 2006ರ ಅಂತ್ಯದವರೆಗೆ ವಿತರಣೆಯಾ ಗುತ್ತಿದ್ದ ಆಹಾರ ಪದಾರ್ಥಗಳ ಪ್ರಮಾಣ ಎಷ್ಟು, (ಜಿಲ್ಲಾವಾರು ಯೋಜನೆಗಳ ಅಡಿಯಲ್ಲಿ ಕೊಡುತ್ತಿದ್ದ ಪ್ರಮಾಣ ಒದಗಿಸುವುದು),

ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಎಎವೈ ಪಡಿತರ ಚೀಟಿದಾರರಿಗೆ 28 ಕೆಜಿ ಅಕ್ಕಿ, 6 ಕೆ ಜಿ ಗೋಧಿ ಹಾಗೂ ಬಿಪಿಎಲ್ ಪಡಿತರ ಚೀಟಿದಾರರಿಗೆ 20 ಕೆ ಜಿ ಅಕ್ಕಿ, 5 ಕೆಜಿ ಗೋದಿ ವಿತರಿಸಲಾಗುತ್ತಿತ್ತು ಅದರಂತೆ ಅಂತ್ಯೋದಯ ಅನ್ನ ಯೋಜನೆ ಯಡಿ ಪ್ರತಿ ಮಾಹೆ ರಾಜ್ಯದಲ್ಲಿ 33595 ಮೆ ಟನ್ ಅಕ್ಕಿ, 7196 ಮೆ ಟನ್ ಗೋಧಿ ವಿತರಿಸಲಾಗುತ್ತಿತ್ತು ಬಿಪಿಎಲ್ ಅಡಿ ರಾಜ್ಯದ ಬಿಪಿಎಲ್ ಪಡಿತರ ಚೀಟಿದಾರರಿಗೆ ಪ್ರತಿ ಮಾಹೆ ಒಟ್ಟು 117050 ಮೆ ಟನ್ ಅಕ್ಕಿ 27947 ಮೆ ಟನ್ ಗೋಧಿಯನ್ನು ವಿತರಿಸಲಾಗುತ್ತಿತ್ತು ಜಿಲ್ಲಾವಾರು, ಮಾಹೆವಾರು ಆಹಾರಧಾನ್ಯ ಹಂಚಿಕೆಯ ಪ್ರಮಾಣ ಮತ್ತು ತಗುಲಿದ ವೆಚ್ಚದ ನಿಖರ ಮಾಹಿತಿ ಪಟ್ಟಿ ಲಗತ್ತಿಸಿದೆ (ಅನುಬಂಧ I ಮತ್ತು II) ಫೆಬ್ರವರಿ 2007 ರ ಮಾಹೆಯಿಂದ ಅನ್ನಪೂರ್ಣ ಯೋಜನೆಯನ್ನು ಜಾರಿಗೆ ನೀಡಿದೆ

ಆ) ವಿತರಣೆಯಿಂದ ಸರ್ಕಾರಕ್ಕೆ ತಗಲುತ್ತಿದ್ದ ವೆಚ್ಚ ಎಷ್ಟು,

ಡಿಸೆಂಬರ್ 2006ನೇ ಮಾಹೆಯವರೆಗೆ ಆಹಾರಧಾನ್ಯಗಳ ಎತ್ತುವಳಿ ಆಧಾರದ ಮೇಲೆ ಆಗಿರುವ ಆಹಾರ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚದ ವಿವರಗಳು ಈ ಕೆಳಕಂಡಂತಿವೆ – (ರೂ ಲಕ್ಷಗಳಲ್ಲಿ)

ಕ್ರ ಸಂ	ಮಾಹೆ	ಆಹಾರ ಸಹಾಯಧನ	ಸಾಗಾಣಿಕೆ ವೆಚ್ಚ	ಒಟ್ಟು
1	ಏಪ್ರಿಲ್ 2006	6094 16	645 85	6740 01
2	ಮೇ 2006	5919 42	617 73	6537 15
3	ಜೂನ್ 2006	5825 27	610 72	6435 99
4	ಜುಲೈ 2006	5649 98	594 36	6244 34
5	ಆಗಸ್ಟ್ 2006	5571 77	615 99	6187 76
6	ಸೆಪ್ಟೆಂಬರ್ 2006	5800 90	612 00	6412 90
7	ಅಕ್ಟೋಬರ್ 2006	6239 96	638 75	6878 71
8	ನವೆಂಬರ್ 2006	5938 60	629 50	6568 10
9	ಡಿಸೆಂಬರ್2006	5760 92	617 65	6378 57
		52800 98	5582 55	58383 53

ಇ) ಫೆಬ್ರವರಿ 2007ರಿಂದ ಯೂನಿಟ್ ಲೆಕ್ಕದಲ್ಲಿ ವಿತರಣೆಯಾಗುತ್ತಿರುವ ಆಹಾರ ಪದಾರ್ಥಗಳ ಪ್ರಮಾಣ ಎಷ್ಟು,

ಫೆಬ್ರವರಿ 2007ರ ಮಾಹೆಯಿಂದ ಬಿಪಿಎಲ್ ಪಡಿತರ ಚೀಟಿದಾರರಿಗೆ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯ ವಿತರಿಸುತ್ತಿರುವ ಪ್ರಮಾಣ 94860 ಮೆ ಟನ್ ಅಕ್ಕಿ, 23714 ಮೆ ಟನ್ ಗೋಧಿ ವಿತರಿಸಲಾಗುತ್ತಿದೆ ಅಂತ್ಯೋದಯ ಅನ್ನ ಯೋಜನೆ ಯಡಿ ಪ್ರತಿ ಮಾಹೆ ರಾಜ್ಯದಲ್ಲಿ 33595 ಮೆ ಟನ್ ಅಕ್ಕಿ, 7196 ಮೆ ಟನ್ ಗೋಧಿ ವಿತರಿಸಲಾಗಿದೆ

ಈ) ಇದರಿಂದ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು?

ಫೆಬ್ರವರಿ 2007 ರಿಂದ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯಗಳ ವಿತರಣೆ ಮಾಡಲಾಗುತ್ತಿದ್ದು, ಇದರಿಂದ ಸರ್ಕಾರಕ್ಕೆ ಆಹಾರಧಾನ್ಯಗಳ ಎತ್ತುವಳಿ ಮೇಲೆ ಸಹಾಯಧನ ರೂ 4663 50ಲಕ್ಷ ಹಾಗೂ ಸಾಗಾಣಿಕೆ ವೆಚ್ಚ ರೂ 552 79 ಲಕ್ಷ ಒಟ್ಟು ರೂ 5216 29 ಲಕ್ಷ ವೆಚ್ಚ ಬಂದಿರುತ್ತದೆ

Annexure-I

Statement showing the Allotment of Foodgrains under BPL – district-wise and month-wise

Sl No	Name of the District	2006 April		2006 May		2006 June		2006 July			2006 August			2006 September			2006 October			2006 November		2006 December	
		Rice	Wheat	Rice	Wheat	Rice	Wheat	Ragi	Rice	Wheat	Ragi	Rice	Wheat	Ragi	Rice	Wheat	Ragi	Rice	Wheat	Rice	Wheat	Rice	Wheat
1	Bagalkot	3559	890	3559	890	3559	178	0	3559	178	0	3559	890	0	3559	890	0	918	918	3670	734	3671	67
2	Bangalore IRA	3991	998	3989	997	3989	0	997	3989	0	997	3989	0	997	3989	0	997	1097	1097	4386	797	3987	0

3	Bangalore Rural	5994	1498	5994	1498	5994	0	1498	5994	0	1498	5994	0	1498	5994	0	1498	1312	1312	5250	1133	5664	103
4	Bangalore Urban	4767	1192	4767	1192	4767	0	1192	4767	0	1192	4767	0	1192	4767	0	1192	1167	1167	4666	950	4754	86
5	Belgaum	9891	2473	9891	2473	9891	495	0	9691	495	0	9891	2473	0	9891	2473	0	2466	2466	9867	1973	9867	179
6	Bellary	4314	1078	4314	1078	4314	216	0	4314	216	0	4314	1078	0	4314	1078	0	936	936	3744	749	3744	68

7	Bidar	3544	886	3544	886	3544	117	0	3544	177	0	3544	886	0	3544	886	0	754	754	3016	626	3130	57
8	Bijapur	3831	958	3831	958	3831	192	0	3831	192	0	3831	958	0	3831	958	0	909	909	3634	733	3665	67
9	Chamarajanagar	2463	616	2463	616	2463	0	616	2463	0	616	2463	0	616	2463	0	616	762	762	3047	558	2789	0
10	Chikkamagalur	3242	811	3242	811	3242	0	811	3242	0	811	3242	0	811	3242	811	0	737	737	2950	592	2959	54
11	Chitradurga	3949	987	3949	987	3949	0	987	3949	0	987	3949	0	987	3949	987	0	993	993	3972	799	3994	73

12	D Kannada	2216	554	2216	554	2216	111	0	2216	111	0	2216	554	0	2216	554	0	745	745	2977	541	2706	0
13	Davanagere	4070	1018	4070	1018	4070	0	1018	4070	0	1018	4070	0	1018	4070	1018	0	970	970	3879	779	3894	71
14	Dharwad	3493	873	3493	873	3493	175	0	3493	175	0	3493	873	0	3493	873	0	910	910	3641	745	3722	68
15	Gadag	2089	522	2089	522	2089	104	0	2089	104	0	2089	522	104	2089	522	0	484	484	1937	387	1937	35
16	Gulbarga	6916	1729	6916	1729	6916	346	0	6916	346	0	6916	1729	0	6916	1729	0	1624	1624	6456	1299	6494	118

17	Hassan	5323	1331	5323	1331	5323	0	1331	5323	0	1331	5323	0	1331	5323	0	1331	1486	1486	5943	1080	5402	0
18	Haveri	3408	852	3408	852	3408	170	0	3408	170	0	3408	852	0	3408	852	0	645	645	2581	599	2995	54
19	Kodagu	1459	365	1459	365	1459	73	0	1459	73	0	1459	365	0	1459	365	0	431	431	1726	318	1589	0
20	Kolar	6574	1644	6574	1644	6574	0	1644	6574	0	1644	6574	0	1644	6574	0	1644	1651	1651	6606	1351	6756	123
21	Koppal	2317	579	2317	579	2317	116	0	2317	116	0	2317	579	0	2317	579	0	509	509	2037	407	2037	37

22	Mandya	5193	1298	5193	1298	5193	0	1298	5193	0	1298	5198	0	1298	5193	0	1298	1314	1314	5256	1052	5256	96
23	Mysore	6456	1614	6456	1614	6456	0	1614	6456	0	1614	6456	0	1614	6456	0	1614	1814	1814	7255	1353	6767	0
24	Raichur	2671	668	2671	668	2671	134	0	2671	134	0	2671	668	0	2671	668	0	702	702	2806	561	2806	51
25	Shimoga	3612	903	3612	903	3612	0	903	3612	0	903	3612	479	424	3612	903	0	876	876	3504	749	3743	68
26	Tumkur	6921	1730	6921	1730	6921	0	1730	6921	0	1730	6921	0	1730	6921	0	1730	419	419	6881	1533	7666	139

27	Udupi	1461	365	1461	365	1461	73	0	1461	73	0	1461	365	0	1461	365	0	483	483	1934	352	1758	0
28	Uttara Kannada	3494	873	3494	873	3494	175	0	3494	175	0	3494	873	0	3494	873	0	834	834	3333	667	3333	61
	GRAND TOTAL		**29305**	**117216**	**29304**	**117216**	**2735**	**15639**	**117216**	**2735**	**15639**	**117216**	**14145**	**15160**	**117216**	**17384**	**11920**	**27947**	**27947**	**116993**	**23417**	**117085**	**1675**

Annexure-II
Statement showing the Allotment of Foodgrains under AAY – district-wise and month-wise

Sl No	Name of the District	2006 April		2006 May		2006 June			2006 July			2006 August			2006 September			2006 October		2006 November		2006 December	
		Rice	opWheat	Rice	Wheat	Rice	Wheat	Ragi	Rice	Wheat	Ragi	Rice	Wheat	Ragi	Rice	Wheat	Ragi	Rice	Wheat	Rice	Wheat	Rice	Wheat
1	Bagalkot	1335	334	1334	334	1334	286	0	1334	286	0	1334	286	0	1382	286	0	1334	286	1334	286	3671	734
2	Bangalore	526	131	526	131	526	0	113	526	0	0	526	0	113	544	0	113	526	113	526	113	3987	797

3	Bangalore Rural	1000	250	1000	250	1000	0	214	1000	0	50	1000	0	214	884	0	200	1000	214	1000	214	5664	1133
4	Bangalore Urban	445	111	445	111	445	0	95	445	2	93	445	0	95	461	0	95	445	95	445	95	4754	950
5	Belgaum	2707	677	2707	677	2707	580	0	2707	580	0	2707	580	0	2410	358	0	2707	580	2707	580	9867	1973
6	Bellary	1862	465	1862	465	1862	399	0	1862	399	0	1862	399	0	1928	399	0	1862	399	1862	399	3744	749

7	Bidar	1265	316	1265	316	1265	271	0	1265	271	0	1265	271	0	1310	271	0	1265	271	1265	271	3130	626
8	Bijapur	1584	396	1584	396	1584	339	0	1584	339	0	1584	339	0	1640	339	0	1584	339	1584	339	3665	733
9	Chamarajanagar	1010	253	1010	253	1010	0	216	1010	0	145	1010	0	216	863	0	216	1010	216	1010	216	2789	558
10	Chikmagalur	659	165	659	165	659	0	141	659	0	140	659	0	141	677	141	0	659	141	659	141	2959	592
11	Chitradurga	1327	332	1327	332	1327	0	284	1327	0	151	1327	0	284	1374	284	0	1327	284	1327	284	3994	799

12	D Kannada	323	83	455	111	445	95	0	445	95	0	445	95	0	461	95	0	445	95	445	95	2706	541
13	Davanagere	1510	378	1510	378	1510	0	324	1510	0	303	1510	0	324	1364	314	0	1510	324	1510	324	3894	779
14	Dharwad	919	230	919	230	919	197	0	919	197	0	919	197	0	654	118	0	919	197	919	197	3722	745
15	Gadag	889	222	889	222	889	190	0	889	190	0	889	190	0	708	145	0	889	190	889	190	1937	387
16	Gulbarga	2927	732	2927	732	2927	627	0	2927	627	0	2927	627	0	2714	420	0	2927	627	2927	627	6494	1299

17	Hassan	703	176	703	176	703	0	151	703	0	47	703	0	151	0	0	60	703	151	703	151	5402	1080
18	Haveri	1415	354	1415	354	1415	303	0	1415	303	0	1415	303	0	1227	266	0	1415	303	1415	303	2995	599
19	Kodagu	172	43	172	43	172	37	0	172	37	0	172	37	0	178	37	0	172	37	172	37	1589	318
20	Kolar	1846	461	1846	461	1846	0	395	1846	0	358	1845	0	395	1912	0	395	1846	395	1846	395	6756	1351
21	Koppal	1178	294	1178	294	1178	252	0	1178	252	0	1178	252	0	1220	252	0	1178	252	1178	252	2037	407

22	Mandya	1042	260	1042	260	1042	0	223	1042	0	157	1042	0	223	1032	0	223	1042	223	1042	223	5256	1052
23	Mysore	1431	358	1431	358	1431	0	307	1431	0	285	1431	0	307	1367	0	307	1431	307	1431	307	6767	1353
24	Raichur	1688	422	1688	422	1688	362	0	1688	362	0	1688	362	0	1663	342	0	1688	362	1688	362	2806	561
25	Shimoga	1161	290	1161	290	1161	0	249	1161	0	235	1161	172	118	968	225	0	1161	249	1161	249	3743	769
26	Tumkur	1557	394	1577	394	1577	0	338	1577	0	323	1577	0	338	1633	0	338	1577	338	1557	338	7666	1533

27	Udupi	500	125	498	125	500	107	0	500	107	0	500	107	0	84	0	0	500	107	500	107	1758	352
28	Uttara Kannada	473	118	473	118	473	101	0	473	101	0	473	101	0	490	101	0	473	101	473	101	3333	667
	GRAND TOTAL	**33474**	**8370**	**33593**	**8398**	**33595**	**4146**	**3050**	**33595**	**4150**	**2287**	**33592**	**4320**	**2919**	**31148**	**4394**	**1947**	**33595**	**7256**	**33595**	**7196**	**117085**	**23417**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1293(1766)**
ವಿಧಾನ ಸಭಾ ಸದಸ್ಯರ ಹೆಸರು **ಶ್ರೀ ಸಿದ್ದು ಸಾವದಿ (ಜಮಖಂಡಿ)**
ಉತ್ತರಿಸುವವರು **ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಇಲಾಖೆಯಿಂದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಪೂರೈಸಲಾಗುತ್ತಿರುವ ಸೌಲಭ್ಯಗಳಾವುವು, ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು),

ವಿವರವನ್ನು ಅನುಬಂದ-1ರಲ್ಲಿ ಒದಗಿಸಿದೆ

ಆ) 2006-07ರಲ್ಲಿ ಮೇಲಿನ ಎಲ್ಲ ಯೋಜನೆ ಅಡಿ ಜಮಖಂಡಿ ತಾಲ್ಲೂಕಿಗೆ ಒದಗಿಸಿದ ಸೌಲಭ್ಯಗಳಾವುವು,

ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ

ಇ) ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿರುತ್ತದೆ

ಈ) ಬಂದಿದ್ದಲ್ಲಿ, ಕಟ್ಟಡಗಳನ್ನು ಒದಗಿಸಲು ಕೈಗೊಂಡ ಕ್ರಮವೇನು?

ಪ್ರಸ್ತುತ ಸಾಲಿನಲ್ಲಿ ಜಮಖಂಡಿ ತಾಲ್ಲೂಕಿಗೆ ಇಲಾಖಾ ವತಿಯಿಂದ 7 ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಯಾಗಿರುತ್ತದೆ 6 ಕಟ್ಟಡಗಳು ವಿವಿಧ ನಿರ್ಮಾಣ ಹಂತದಲ್ಲಿದೆ ನಬಾರ್ಡ್ ಆರ್ಥಿಕ ಸಹಾಯದಡಿ 2 ಕಟ್ಟಡ ಮಂಜೂರಗಿದೆ ನಿವೇಶನ ಮತ್ತು ಅನುದಾನದ ಲಭ್ಯತೆಯ ಮೇರೆಗೆ ಹಂತಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುವುದು

ಅನುಬಂಧ-1

ಕ್ರ ಸಂ	ಯೋಜನೆ	2006-07ನೇ ರಾಜ್ಯಕ್ಕೆ ಸಾಲಿನಲ್ಲಿ ಒದಗಿಸಿರುವ ಅನುದಾನ	ಜಮಖಂಡಿ ತಾಲ್ಲುಕಿನಲ್ಲಿ ಒದಗಿಸಿದ ಸೌಲಭ್ಯಗಳು	
			ಭೌತಿಕ	ಆರ್ಥಿಕ ರೂ ಗಳಲ್ಲಿ
1	ಭಾಗ್ಯಲಕ್ಷ್ಮಿ ಯೋಜನೆ	23400 00	701	-
2	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ	100 00	ಅರ್ಜಿ ಬಂದಿಲ್ಲ	

3	ಮಹಿಳೆಯರಿಗೆ ವೃತ್ತಿ ಶಿಕ್ಷಣ ಪಡೆಯಲು ಆರ್ಥಿಕ ನೆರವು	31 86	26	30,680
4	ಬಾಲಕಿಯರಿಗಾಗಿ ವಸತಿ ನಿಲಯ	110 00	48	3 09ಲಕ್ಷ
5	ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕ್ಷೇಮಾಭಿವೃದ್ಧಿ ನಿಧಿ	30 00	4	50 000
6	ಸಾಂತ್ವನ–ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು	90 00	ಅರ್ಜಿ ಬಂದಿಲ್ಲ	
7	ಸ್ತ್ರೀ ಶಕ್ತಿ ಯೋಜನೆ	1648 00	890	8 40ಲಕ್ಷ
8	ಮಕ್ಕಳನ್ನು ಕುಟುಂಬ ವಾತಾವರಣದಲ್ಲಿ ಬೆಳೆಸಲು ಪ್ರಾಯೋಜಿತ ಕಾರ್ಯಕ್ರಮ	10 00	3	45,000
9	ನಿರಾಧಾರ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆ ಮತ್ತು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗೌರವಧನ	5599 60	795	43 26ಲಕ್ಷ
10	ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾಕೇಂದ್ರಗಳು	5581 00	–	–
11	5ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿನಿಯರಿಗೆ ಹಾಜರಾತಿ ವಿದ್ಯಾರ್ಥಿ ವೇತನ	110 44	454	1 49ಲಕ್ಷ
12	ವಿಧವೆಯರ ಮತ್ತು ದೇವದಾಸಿ ವಿವಾಹಕ್ಕೆಧನ ಸಹಾಯ	9 10	4	40,000
13	ಶಾಲಾಪೂರ್ವ ಮಕ್ಕಳ ಊಟದ ಯೋಜನೆ	24235 92	40899	229 96ಲಕ್ಷ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1294(1767)**
ಸದಸ್ಯರ ಹೆಸರು **ಶ್ರೀ ಸಿದ್ದು ಸಾವದಿ(ಜಮಖಂಡಿ)**
ಉತ್ತರಿಸುವ ಸಚಿವರು **ಶ್ರೀ ಬಂಡೆಪ್ಪ ಖಾಶಂಪುರ (ಕೃಷಿ ಸಚಿವರು)**

ಅ) ರಿಯಾಯಿತಿ ದರದಲ್ಲಿ ಪೂರೈಕೆ ಮಾಡುವ ಒಕ್ಕಲುತನ ಉಪಕರಣಗಳಾವುವು,

ಕೃಷಿ ಇಲಾಖೆಯ ವತಿಯಿಂದ ರಿಯಾಯಿತಿ ದರದಲ್ಲಿ ಪೂರೈಕೆ ಮಾಡಲಾಗಿತ್ತಿರುವ ಕೃಷಿ ಉಪಕರಣಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ

ಆ) ರಾಜ್ಯದಲ್ಲಿ 2006-07ರಲ್ಲಿ ಎಷ್ಟು ಉಪಕರಣಗಳನ್ನು ವಿತರಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು),

2006-07ನೇ ಸಾಲಿನಲ್ಲಿ ಈವರೆಗೆ 7662 ಉಪಕರಣಗಳನ್ನು ವಿತರಿಸಲಾಗಿದ್ದು ಇದರ ಜಿಲ್ಲಾವಾಡಿಣ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ

ಇ) ಜಮಖಂಡಿ ತಾಲ್ಲೂಕಿನಲ್ಲಿ ಸಣ್ಣ ಟ್ರಾಕ್ಟರ್, ಟಾಕ್ಟರ್, ನೇಗಿಲು, ರೋಟಾವೇಟರ್, ಎತ್ತಿನಗಾಡಿ ಹಾಗೂ ಇನ್ನಿತರ ಉಪಕರಣಗಳ ಬೇಡಿಕೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ,

ಹೌದು ಕ್ರಮ ಕೈಗೊಳ್ಳಲಾಗಿದೆ

ಈ) ಒಕ್ಕಲುತನದ ಉಪಕರಣಗಳನ್ನು ಇಲಾಖೆಯಿಂದ ಎರಡರಷ್ಟು ಹೆಚ್ಚಿನ ಬೆಲೆ, ಮಾರಾಟ ಮಾಡುತ್ತಿದ್ದಾರೆಂದು ರೈತರು ಆರೋಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇಲ್ಲ

ಉ) ಬಂದಿದ್ದಲ್ಲಿ, ಸರ್ಕಾರದ ನಿಲುವೇನು?

ಉದ್ಭವಿಸುವುದಿಲ್ಲ

ಅನುಬಂಧ-1

ರಿಯಾಯಿತಿ ದರದಲ್ಲಿ ಪೂರೈಕೆ ಮಾಡುವ ಒಕ್ಕಲುತನದ ಉಪಕರಣಗಳು

ಹೈಟೆಕ್ ಕೃಷಿ ಯಂತ್ರೋಪಕರಣಗಳು, ಕೈ ಚಾಲಿತ/ಎತ್ತಿನಿಂದ ಎಳೆಯುವ ಕೃಷಿ ಯಂತ್ರೋಪಕರಣಗಳು, ಯಂತ್ರ ಚಾಲಿತ ಉಪಕರಣಗಳು, ಒಕ್ಕಣೆ ಯಂತ್ರ, ರೋಟವೇಟರ್, ಎಂ ಬಿ ಪ್ಲೋ, ಟ್ರ್ಯಾಕ್ಟರ್ ಚಾಲಿತ ಲೆವಲರ್(ಬ್ಲೇಡ್), ಟ್ರ್ಯಾಕ್ಟರ್ ಚಾಲಿತ ಕಲ್ಟಿವೇಟರ್, ಜೀರೋ ಟೆಲ್ ಡ್ರಿಲ್, ಪವರ್ ವೀಡರ್, ಮಲ್ಟಿಪರ್ಪಸ್ ಟೆಲ್ಲರ್, ಭತ್ತದ ಪ್ಲಾಂಟರ್, ಶುಗರ್ ಕೇನ್ ಪ್ಲಾಂಟರ್, ಟ್ರ್ಯಾಕ್ಟರ್ ಚಾಲಿತ ಫರೋ ಒಪನರ್, ಟ್ರ್ಯಾಕ್ಟರ್/ಪವರ್ ಆಪರೇಟೆಡ್ ರೀಪರ್, ರೈಸ್ಡ್ ಬೆಡ್ ಪ್ಲಾಂಟರ್, ಮೈಜ್ ಶೆಲ್ಲರ್, ವಿನೋವರ್, ಟ್ರ್ಯಾಕ್ಟರ್ ಚಾಲಿತ ಟ್ರೆಂಜರ್/ಡೀಪ್ ಟ್ರೇಂಚರ್, ರಾಗಿ ಮತ್ತು ಬತ್ತ ಕಟಾವು ಯಂತ್ರ ಬತ್ತದ ಡ್ರಂ ಸೀಡರ್, ಟ್ರ್ಯಾಕ್ಟರ್ ಚಾಲಿತ ಕುಂಟೆ(ಹ್ಯಾರೋ), ಬೀಜ ಗೊಬ್ಬರ ಸಂಯುಕ್ತ ಕೂರಿಗೆ, ಸ್ಟ್ರೀಪ್ ಟಿಲ್ ಡ್ರಿಲ್, ಟ್ರ್ಯಾಕ್ಟರ್ ಚಾಲಿತ ಇನ್‌ಕ್ಲೈನೆಡ್ ಪ್ಲೇಟ್ ಪ್ಲಾಂಟರ್, ಮಲ್ಟಿ ಕ್ರಾಪ್ ಪ್ಲಾಂಟರ್, ರಿಡ್ಜರ್, ಸ್ಟ್ರಾರೀಪರ್, ಚಾಪ್ ಕಟರ್, ಟ್ರ್ಯಾಕ್ಟರ್ ಚಾಲಿತ ಫೋರೇಜ್ ಹಾರ್ವೆಸ್ಟರ್ ಕಂ ಚಾಫರ್, ಟ್ರಾಕ್ಟರ್ ಚಾಲಿತ ಪಡ್ಲರ್, ಕೋನೋ ವೀಡರ್, ಸೆಲ್ಫ್ ಷಾರ್ಪನಿಂಗ್ ಸ್ಯಾಕಲ್, ಆಟೋಮ್ಯಾಟಿಕ್ ಬ್ಲೇಡ್ ಹ್ಯಾರೋ, ಕೊಕೊನಟ್ ಫ್ರಾಂಡ್ ಚಾಫರ್, ಸ್ವಯಂಚಾಲಿತ ಪೊಟ್ಯಾಟೊ ಪ್ಲಾಂಟರ್, ಸ್ಟಬಲ್ ರಿಮೂವರ್, ಕಾಟನ್ ಜಿನ್ನಿಂಗ್ ಮೆಷಿನ್ ದಾಲ್ ಪ್ರೋಸೆಸರ್/ಮಿಲ್, ಶೇಂಗ ಡಿಗ್ಗರ್, ಶೇಂಗ ಡಿಕಾಟಿಕೇಟರ್, ಕಾಟನ್ ಸ್ಟಾಕ್ ಪುಲ್ಲರ್ ಕಾಟನ್ ಪ್ಲಕ್ಕರ್, ಕಾಟನ್ ಚಾಫರ್, ಟ್ರಾಕ್ಟರ್ ಚಾಲಿತ ಪೋಸ್ಟ್ ಹೋಲ್ ಡಿಗ್ಗರ್, ಮಿನಿ ರೈಸ್ ಮಿಲ್, ಮಿನಿ ಆಯಿಲ್ ಎಕ್ಸ್‌ಪೆಲ್ಲರ್, ಯೂರಿಯಾ ಬ್ರಿಕ್ವೆಟ್ ಮೆಷಿನ್, ರಾಗಿ ಪಾಲಿಷಿಂಗ್ ಮೆಷಿನ್ (ರಾಗಿ ಪರ್ಲರ್) ರಾಗಿ ಕ್ಲೀನಿಂಗ್ ಮೆಷಿನ್, ಪ್ರೆಸ್ಡ್ ರೈಸ್ ಮೆಷಿನ್ (ಅವಲಕ್ಕಿ), ಆಟೋಮ್ಯಾಟಿಕ್ ಪಲ್ಸ್ ಥ್ರೆಶರ್ ಕಮ್ ವೀನೋಯರ್ ಮುಂತಾದವುಗಳು

ಕ್ರ ಸಂ	ಜಿಲ್ಲೆಗಳು	ವಿತರಿಸಲಾದ ಉಪಕರಣಗಳ ಸಂಖ್ಯೆ
1	ಬೆಂಗಳೂರು(ನ)	50
2	ಬೆಂಗಳೂರು(ಗ್ರಾ)	92
3	ಕೋಲಾರ	453
4	ತುಮಕೂರು	126
5	ಶಿವಮೊಗ್ಗ	447
6	ಚಿತ್ರದುರ್ಗ	515
7	ದಾವಣಗೆರೆ	426
8	ಮೈಸೂರು	559
9	ಚಾಮರಾಜನಗರ	37
10	ಮಂಡ್ಯ	48
11	ಕೊಡಗು	79
12	ಹಾಸನ	245
13	ಚಿಕ್ಕಮಗಳೂರು	60
14	ದಕ್ಷಿಣ ಕನ್ನಡ	424
15	ಉಡುಪಿ	272
16	ಧಾರವಾಡ	193
17	ಗದಗ್	168
18	ಹಾವೇರಿ	650
19	ಉತ್ತರ ಕನ್ನಡ	28
20	ಬೆಳಗಾಂ	282
21	ಬಿಜಾಪುರ	475
22	ಬಾಗಲಕೋಟೆ	1091
23	ರಾಯಚೂರು	184
24	ಕೊಪ್ಪಳ	153
25	ಬಳ್ಳಾರಿ	165
26	ಗುಲ್ಬರ್ಗ	329
27	ಬೀದರ್	111
	ಒಟ್ಟು	7662

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1295(1768)
2 ಸದಸ್ಯರ ಹೆಸರು	ಶ್ರೀ ಸಿದ್ದುಸಾವದಿ(ಜಮಖಂಡಿ)
3 ಉತ್ತರಿಸುವ ಸಚಿವರು	ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದ ಒಟ್ಟು ಜನಸಂಖ್ಯೆ ಮತ್ತು ಬಡತನ ರೇಖೆಗಿಂತ ಕಡಿಮೆ ಇರುವವರ ಸಂಖ್ಯೆ ಎಷ್ಟು,

ರಾಜ್ಯದ 2001ರ ಜನಗಣತಿಯಂತೆ ಒಟ್ಟು ಕುಟುಂಬಗಳ ಸಂಖ್ಯೆ–10401918 ಪ್ರಸ್ತುತ ರಾಜ್ಯದಲ್ಲಿ ವಿತರಿಸಲಾಗಿರುವ ತಾತ್ಕಾಲಿಕ ಪಡಿತರ ಕೂಪನ್‌ಗಳಂತೆ ಬಡತನ ರೇಖೆಗಿಂತ ಕಡಿಮೆ ಇರುವವರ ಪಡಿತರ ಚೀಟಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ (ಬೆಂಗಳೂರು ಅಪ ಪ್ರದೇಶ ಮತ್ತು ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆಗಳು ಸೇರಿದಂತೆ) –

1) ಅನ್ನಪೂರ್ಣ	–	25,452
2) ಎಎವೈ	–	11,75,912
3) ಬಿಪಿಎಲ್	–	53,87,103
ಒಟ್ಟು		65,88,467

ಆ) ಅಕ್ಷಯ, ಅಂತ್ಯೋದಯ, ಅನ್ನಪೂರ್ಣ ಮತ್ತು ಎ ಪಿ ಎಲ್, ಕಾರ್ಡುಗಳನ್ನು ಪಡೆಯಲು ಇರುವ ಮಾನದಂಡಗಳಾವುವು (ಪ್ರತ್ಯೇಕ ವಿವರ ನೀಡುವುದು),

ಅಕ್ಷಯ, ಅಂತ್ಯೋದಯ, ಅನ್ನಪೂರ್ಣ ಮತ್ತು ಎ ಪಿ ಎಲ್, ಕಾರ್ಡುಗಳ ಫಲಾನುಭವಿಗಳನ್ನು ಗುರುತಿಸಲು ಕೆಳಕಂಢ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ

ಅನ್ನಪೂರ್ಣ ಯೋಜನೆಯಡಿಯಲ್ಲಿ 65 ವರ್ಷ ಅಧವಾ ಅದಕ್ಕಿಂತ ಹೆಚ್ಚಿನ ವಯೋಮಿತಿಯುಳ್ಳ ನಿರ್ಗತಿಕ ಹಾಗೂ ಕೇಂದ್ರ ಅದವಾ ರಾಜ್ಯ ಸರ್ಕಾರಗಳಿಂದ ವೃದ್ಧಾಪ್ಯ ವೇತನವನ್ನು ಪಡೆಯದೇ ಇರುವಂತಹ ವ್ಯಕ್ತಿಗಳು ಈ ಯೋಜನೆಯಡಿಯಲ್ಲಿ ಪಡಿತರ ಚೀಟಿಯನ್ನು ಪಡೆಯಲು ಅರ್ಹರಾಗಿರುತ್ತಾರೆ

ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡುಬಡವರು ಅಂದರೆ, ಕೃಷಿ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ವಿಧವೆಯರ ಮುಖ್ಯಸ್ಥರಾಗಿರುವ ಕುಟುಂಬ, ಸಾಮಾಜಿಕ ನೆರವಿಲ್ಲದ ವಯೋವೃದ್ಧ ಅಂಗ ವಿಕಲರು ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ

ಗ್ರಾಮಾಂತರ ಪ್ರದೇಶದಲ್ಲಿ ಗನಿಷ್ಟ 12000/– ರೂ ಗಳ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ ಗರಿಷ್ಟ 17000/– ರೂ ಗಳ ವಾರ್ಷಿಕ ವರಮಾನ ಆದಾಯವುಳ್ಳ ಕುಟುಂಬಗಳಿಗೆ ಎಪಿಎಸ್ ಪಡಿತರ ಚೀಟಿಯನ್ನು ವಿತರಿಸಲಾಗಿರುತ್ತದೆ

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಫಲಾನುಭವಿಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅನರ್ಹರು

(1) ಮೂರು ಹೆಕ್ಟೇರ್ ಅಧವಾ ಅದಕ್ಕಿಂದ ಹೆಚ್ಚು ಭೂಮಿ ಹೊಂದಿರುವವರು

(2) ಸ್ಥಿರ ದೂರವಾಣಿ ಹೊಂದಿರುವವರು
(3) ಸ್ವಂತವಾಗಿ ಯಾರು ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)
(4) ಬ್ಯಾಂಕ್/ಸಹಕಾರಿ ಸಂಪ್ಥಗಳಲ್ಲಿ 1 00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು,
(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು
(6) ತಿಂಗಳಿಗೆ ರೂ 1 000/ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು
(7) ಆದಾಯ ತೆರಿಗೆ ಪಾವತಿಸುವವರು
(8) ರಿಜಿಸ್ಟ್ರಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್/ಕಮೀಷನ್ ಏಜೆಂಟ್ಸ್/Dealers in Seeds/Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು

ತದನಂತರ ನೀಡಿದ ನಗರ ಪ್ರದೇಶಕ್ಕೆ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ

20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅದವಾ ಸರ್ಕಾರದ

(9) ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು
(10) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ - ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರುವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅದವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಇ) ರೇಷನ್ ಕಾರ್ಡ್ ವಿತರಣೆಯಲ್ಲಿ ಬಹಳಷ್ಟು ಗೊಂದಲಗಳಾಗಲು ಕಾರಣಗಳೇನು, ಗೊಂದಲ ನಿವಾರಿಸಲಾಗುವುದೇ,

ರಾಜ್ಯಾದಂತ ಅನರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ದೊರತಿದೆಯೆಂದು ಅರ್ಹ ಕುಟುಂಬಗಳು ಇದರಿಂದ ವಂಚಿತರಾಗಿರುವುದಾಗಿ ಸಾರ್ವಜನಿಕರ ಪ್ರತಿನಿಧಿಗಳಿಂದ ಮೂಡಿ ಬಂದ ಅಭಿಪ್ರಾಯವನ್ನು ಆಧರಿಸಿ ಸರ್ಕಾರವು ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆಯನ್ನು ಕೈಗೊಳ್ಳಲು ತೀರ್ಮಾನಿಸಿತು ಅದರಂತೆ ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಗೊಂಡು ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯ ನಂತರ ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ 15 70ಲಕ್ಷ ವರ್ಗ ಬದಲಾವಣೆಗಾಗಿ, 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ, 7 64 ಲಕ್ಷ

ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿರುತ್ತದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ, ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಲಾಗಿದೆ ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು

ಈ) ಸರಿಯಾಗಿ ಸರ್ವೆ ಮಾಡದ ಅಧಿಕಾರಿ ವರ್ಗದವರ ಮೇಲೆ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ,

ಪ್ರಸ್ತುತ ಸಮಗ್ರ ಗಣಕೀಕರಣ ಯೋಜನೆಯಡಿ ಸಾರ್ವಜನಿಕರ ಅಹವಾಲುಗಳಿಗೆ ಅವಕಾಶ ಮಾಡಿಕೊಡಲಾಗಿದ್ದು ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಸರಿಪಡಿಸಲು ಕ್ರಮ ವಹಿಸಲಾಗಿರುತ್ತದೆ ಈ ಕ್ರಮವನ್ನು ಸಮೀಕ್ಷಾ ತಂಡದ ಮುಖಾಂತರವೇ ಕೈಗೊಳ್ಳಲಾಗಿದ್ದು ನಿರ್ದಿಷ್ಟವಾಗಿ ತಪ್ಪೆಸಗಿರುವ ಅಧಿಕಾರಿ/ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು

ಉ) ಯೂನಿಟ್ ಸಿಸ್ಟಮ್ ಮತ್ತು ಮೊದಲಿನ ಪದ್ಧತಿಯಲ್ಲಿ ಇರುವ ವ್ಯತ್ಯಾಸಗಳೇನು, ಈ ಸಮಸ್ಯೆ ನಿವಾರಿಸಲಾಗುವುದೇ,

ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಮೊದಲಿನಂತೆ ಎಎವೈ ಪಡಿತರ ಚೀಟಿದಾರರಿಗೆ 28 ಕೆಜಿ ಅಕ್ಕಿ, 7 ಕೆಜಿ ಗೋದಿ ಹಾಗೂ ಬಿಪಿಎಲ್ ಪಡಿತರ ಚೀಟಿದಾರರಿಗೆ 20 ಕೆಜಿ ಅಕ್ಕಿ, 5 ಕೆಜಿ ಗೋಧಿ ಮತ್ತು ಅನ್ನಪೂರ್ಣ ಪಡಿತರ ಚೀಟಿದಾರರಿಗೆ ಉಚಿತವಾಗಿ 10 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿತ್ತು

ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ 2007ರ ಮಾಹೆಯಿಂದ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ ಅದರಂತೆ, ಕುಟುಂಬದ/ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆಜಿ ಗೋಧಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಟ 25 ಕೆಜಿ ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು) ನೀಡಲಾಗುತ್ತಿದೆ ಅಂತ್ಯೋದಯ ಅನ್ನ ಯೋಜನೆ ಅಡಿಯಲ್ಲಿನ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವಂತೆ 28 ಕೆಜಿ ಅಕ್ಕಿ, 6 ಕೆಜಿ ಗೋಧಿ ಹಂಚಿಕೆ ನೀಡಲಾಗುತ್ತಿದೆ ಅನ್ನಪೂರ್ಣ ಪಡಿತರ ಚೀಟಿದಾರರಿಗೆ ಉಚಿತವಾಗಿ 10 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿತ್ತು ಯೂನಿಟ್ ಪದ್ಧತಿಯನ್ನು ಜಾರಿಗೆ ತರಲಾಗಿರುವುದರಿಂದ ಏಕ ಸದಸ್ಯ, ದ್ವಿ ಸದಸ್ಯ, ತ್ರಿಸದಸ್ಯ ಕುಟುಂಬಗಳಿಗೆ ಅಗತ್ಯಕ್ಕಿಂತ ಹೆಚ್ಚಿಗೆ ನೀಡುವ ಸರ್ಕಾರದ ಸಹಾಯಧನಯುಕ್ತ ಆಹಾರಧಾನ್ಯಗಳು ಬಹುತೇಕ ಪ್ರಮಾಣದಲ್ಲಿ ಎತ್ತುವಳಿಯಾಗದೇ ಅಪಮಾರ್ಗ ಹಿಡಿಯುವುದನ್ನು ತಪ್ಪಿಸಿದಂತಾಗುವುದರಿಂದ ಸಮಸ್ಯೆ ನಿವಾರಿಸುವ ಸಂಭವ ಬರುವುದಿಲ್ಲ

ಊ) ಒಂದೇ ಕುಟುಂಬಕ್ಕೆ ವಿತರಿಸಲಾದ ಹತ್ತಾರು ಕಾರ್ಡುಗಳನ್ನು ಮತ್ತು ಅನರ್ಹರಿಗೆ ವಿತರಿಸಲಾದ ಕಾರ್ಡುಗಳನ್ನು ರದ್ದುಪಡಿಸಿ, ವಂಚಿತರಾದ ಬಡವರಿಗೆ ಕಾರ್ಡುಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಗೊಂಡು ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ

ತಾತ್ಕಾಲಿಕ ಪಡಿತರ ಕೂಪನ್‌ನಲ್ಲಿ ಹೆಸರು, ಸಂಬಂಧ ಅಥವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ಸಾರ್ವಜನಿಕರು ಅಹವಾಲುಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ ತಾಲ್ಲೂಕು ಕೇಂದ್ರದಲ್ಲಿ ನೋಂದಣಿ ಕೇಂದ್ರವನ್ನು ತೆರೆದು 15 ದಿನಗಳ ಕಾಲ ಸದರಿ ನೋಂದಣಿ ಕೇಂದ್ರಗಳಲ್ಲಿ ಅಹವಾಲುಗಳು ನೊಂದಾಯಿಸಲಾಗಿರುತ್ತದೆ ಅವಧಿ ಮೀರಿ ಸಲ್ಲಿಸುವ ಅಹವಾಲುಗಳನ್ನು ಸ್ಥಳೀಯವಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿಯೂ ಸಹ ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿತ್ತು ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ, ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1296(1762)**
ಸದಸ್ಯರ ಹೆಸರು	**ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)**
ಉತ್ತರಿಸುವ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ರಾಜ್ಯದಲ್ಲಿ ಪಡಿತರ ಚೀಟಿಗಳಲ್ಲಿ ವಿತರಿಸುವ ಆಹಾರ ಪದಾರ್ಥಗಳನ್ನು ಒಂದು ಕುಟುಂಬದ 5 ಜನರಿಗೆ ಮಾತ್ರ ನೀಡಲು ಹೊಸ ಪಡಿತರ ವಿತರಣೆಯನ್ನು ಜಾರಿಗೆ ತರು ಸರ್ಕಾರ ಉದ್ದೇಶಿಸಿದೆಯೇ,

ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ 2007ರ ಮಾಹೆಯಿಂದ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ ಅದರಂತೆ, ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆಜಿ ಗೋದಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಟ 25 ಕೆಜಿ ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು) ನೀಡಲಾಗುತ್ತಿದೆ ಅಂತ್ಯೋದಯ ಅನ್ನಯೋಜನೆಯಡಿಯಲ್ಲಿನ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವಂತೆ 28 ಕೆಜಿ ಅಕ್ಕಿ, 6 ಕೆಜಿ ಗೋಧಿ ಹಂಚಿಕೆ ನೀಡಲಾಗುತ್ತಿದೆ

ಅದರಂತೆ ಏಕಸದಸ್ಯರಿಂದ 5 ಸದಸ್ಯರಿರುವ ಕುಟುಂಬಗಳು ಪಡೆಯುವ ಆಹಾರಧಾನ್ಯದ ಪ್ರಮಾಣ ಈ ಕೆಳಕಂಡಂತಿರುತ್ತದೆ –

ಕ್ರ ಸಂ	ಕುಟುಂಬದ ಸದಸ್ಯರ ಸಂಖ್ಯೆ	ವಿತರಿಸುವ ಆಹಾರಧಾನ್ಯ ಪ್ರಮಾಣ	
		ಅಕ್ಕಿ	ಗೋಧಿ
1	ಏಕಸದಸ್ಯ	4 ಕೆಜಿ	1 ಕೆಜಿ
2	ದ್ವಿಸದಸ್ಯ	8 ಕೆಜಿ	2 ಕೆಜಿ
3	ತ್ರಿ ಸದಸ್ಯ	12 ಕೆಜಿ	3 ಕೆಜಿ

4	4 ಸದಸ್ಯ	16 ಕೆಜಿ	4 ಕೆಜಿ
5	5 ಮತ್ತು ಅದಕ್ಕಿಂತ ಮೇಲ್ಪಟ್ಟ ಸದಸ್ಯ	20 ಕೆಜಿ	5 ಕೆಜಿ

ಆ) ಹಾಗಿದ್ದಲ್ಲಿ, ಇದರಿಂದ ಬಡ ಕುಟುಂಬಗಳಿಗೆ ತೊಂದರೆಯಾಗುವುದಿಲ್ಲವೇ, ತೊಂದರೆಯಾಗುವುದಿಲ್ಲ

ಇ) ಪಡಿತರ ಆಹಾರ ಪದಾರ್ಥಗಳನ್ನು ಬಡವರು ತೆಗೆದುಕೊಳ್ಳುವುದರಿಂದ ಹಾಗೂ ಒಂದೊಂದು ಕುಟುಂಬಗಳಲ್ಲಿ 5 ಕ್ಕಿಂತ ಹೆಚ್ಚು ಜನರಿರುವುದರಿಂದ, ಈ ಹೊಸ ನೀತಿಯನ್ನು ಹಿಂದಕ್ಕೆ ಪಡೆಯಲಾಗುವುದೇ?

ಬಹುತೇಕ ಬಡ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ನೊಂದಾಯಿತ ಬಿಪಿಎಲ್ ಕುಟುಂಬಗಳೇ ಆಗಿದ್ದು ಇವರುಗಳು ಸದರಿ ಯೋಜನೆಯಿಂದ ಪಡೆಯುವ ಆಹಾರಗಾನ್ಯವನ್ನು ಉಪಯೋಗಿಸುವುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯ ಆಹಾರಧಾನ್ಯ ಎತ್ತುವಳಿಯಾಗುವ ಪ್ರಮಾಣ ಕಡಿಮೆಯಾಗಿರುತ್ತದೆ ಇದರಿಂದಾಗಿ ನ್ಯಾಯಬೆಲೆ ಅಂಗಡಿಯವರು ಇದರ ಲಾಬ ಪಡೆಯುವುದನ್ನು ತಪ್ಪಿಸಿದಂತಾಗುತ್ತದೆ ಬಡ ಕುಟುಂಬಗಳಿಗಾಗಿಯೇ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ರೂಪಿತವಾಗಿರುವುದರಿಂದ ಈ ನೀತಿಯನ್ನು ತೆಗೆದು ಹಾಕುವ ಅಗತ್ಯವಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ — **1297(1763)**
ಸದಸ್ಯರ ಹೆಸರು — **ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)**
ಉತ್ತರಿಸುವ ಸಚಿವರುಟ — **ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ರಾಜ್ಯದಲ್ಲಿ ಅರ್ಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು,

ರಾಜ್ಯದಲ್ಲಿ ಪ್ರಸ್ತುತ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್ ಹಾಗೂ ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆ ಸೇರಿಕೊಂಡು ಈ ವಿವರ ಕೆಳಕಂಡಂತಿದೆ

ಎಎವೈ – 11,75,912
ಬಿಪಿಎಲ್ – 53,87,103

ಅನ್ನಪೂರ್ಣ - 25,452
ಒಟ್ಟು - 65,88,967

ಆ) ಈ ಎಲ್ಲಾ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ವಿತರಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು,

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದುಹಾಕುವ ಬಗ್ಗೆ, ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು, ವರ್ಗ ಬದಲಾವಣೆ ಕೋರಿರುವ ಅಹವಾಲುಗಳ ಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ ್ಲಿ ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇ ್ಲ 70 ಲಕ್ಷ ವರ್ಗ ಬದಲಾವಣೆಗಾಗಿ 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ, 7 64 ಲಕ್ಷ ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ

ಇ) ಎಲ್ಲಾ ಅರ್ಹ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು

ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು, ಮೇಲ್ಕಂಡ ಕಾರ್ಯಕ್ರಮಕ್ಕೆ ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1298(1764)**
ವಿಧಾನ ಸಭಾ ಸದಸ್ಯರ ಹೆಸರು	**ಶ್ರೀ ವಿ ಸೋಮಣ್ಣ(ಬಿನ್ನಿಪೇಟೆ)**
ಉತ್ತರಿಸುವವರು	**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

(ಅ) ರಾಜ್ಯದಲ್ಲಿ ಕೌಟುಂಬಿಕ ಹಿಂಸೆ ತಡೆಯಲು ಜಾರಿಯಲ್ಲಿರುವ ಕೌಟುಂಬಿಕ ಹಿಂಸೆ ತಡೆ ಕಾಯ್ದೆ 2005ನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು 3 25 ಕೋಟಿ ರೂ ಗಳ ಅಂದಾಜು ಆಯವ್ಯಯವನ್ನು 2007–08ನೇ ಸಾಲಿಗೆ ಪ್ರಸ್ತಾಪಿಸಿದ್ದು, ಕೌಟುಂಬಿಕ ದೌರ್ಜನ್ಯ ಘಟಕವನ್ನು ರಾಜ್ಯದ ಎಲ್ಲಾ 175 ತಾಲ್ಲೂಕುಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಪ್ರತ್ಯೇಕ ರಕ್ಷಣಾಧಿಕಾರಿಗಳನ್ನು ನೇಮಕ ಮಾಡಿ ಅವರಿಗೆ ಸೂಕ್ತ ಸಿಬ್ಬಂದಿ ವ್ಯವಸ್ಥೆಯನ್ನು ಮಾಡುವ ಉದ್ದೇಶವಿರುತ್ತದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಹಿರಿಯ ಮೇಲ್ವಿಚಾರಕಿಯರನ್ನು ರಕ್ಷಣಾಧಿಕಾರಿಗಳನ್ನಾಗಿ ನೇಮಿಸಿ ಅಧಿಸೂಚನೆ ಹೊರಡಿಸುವ ಬಗ್ಗೆ ಹಾಗೂ ಸ್ವಾಧಾರ ಕೇಂದ್ರಗಳು, ಅಲ್ಪಾವಧಿ ವಸತಿ ಗೃಹಗಳನ್ನು ಸದರಿ ಕಾಯ್ದೆ ಅಡಿಯಲ್ಲಿ ಶೆಲ್ಟರ್ ಹೋಮ್ಸ್ ಎಂದು ಪರಿಗಣಿಸುವ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಕೌಟುಂಬಿಕ ದೌರ್ಜನ್ಯ ಕಾಯ್ದೆಯ ಬಗ್ಗೆ ಪ್ರಚಾರ ಹಾಗೂ ಅರಿವು ಮೂಡಿಸುವ ಸಲುವಾಗಿ ವಿಭಾಗೀಯ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಹಾಗೂ ದೂರದರ್ಶನ, ಪ್ರಚಾರ ಮಾಧ್ಯಮಗಳು ಹಾಗೂ ದಿನಪತ್ರಿಕೆಗಳ ಮುಖಾಂತರ ತಿಳುವಳಿಕೆ ಮೂಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1299(1415)**
ವಿಧಾನ ಸಭಾ ಸದಸ್ಯರ ಹೆಸರು	**ಶ್ರೀವಾಟಾಳ್ ನಾಗರಾಜ್(ಚಾಮರಾಜನಗರ)**
ಉತ್ತರಿಸುವವರು	**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳೆಷ್ಟು,

ಪ್ರಸ್ತುತ ರಾಜ್ಯದಲ್ಲಿ 50802 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ

ಆ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಾಗುವುದೇ,

ಹೌದು

ಇ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗುವುದು,

ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿರುವ ಅಂಗನವಾಡಿ ಕೇಂದ್ರಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ

ಈ) ಚಾಮರಾಜನಗರ ಜಿಲ್ಲೆಗೆ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ?

ಚಾಮರಾಜನಗರ ಜಿಲ್ಲೆಯಲ್ಲಿ 231 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಿದ್ದು ಎಲ್ಲ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1415 ರ ಅನುಬಂಧ

ಚಾಮರಾಜನಗರ ಜಿಲ್ಲೆಯಲ್ಲಿ 2005–06ನೇ ಸಾಲಿನಲ್ಲಿ ಮಂಜೂರಾಗಿರುವ 231 ಅಂಗನವಾಡಿ ಕೇಂದ್ರಗಳ ವಿವರ

ಚಾಮರಾಜನಗರ ತಾಲ್ಲೂಕು		
ಕ್ರ ಸಂ	ಅಂಗನವಾಡಿ ಕೇಂದ್ರಗಳ ಹೆಸರು	ಷರಾ
1	ಕೊನ್ನನ ಹುಂಡಿ	ಈ ಎಲ್ಲಾ ಕೇಂದ್ರಗಳನ್ನು ಸರ್ವ ಶಿಕ್ಷ ಅಭಿಯಾನ ಕೇಂದ್ರಗಳಿಂದ ಹೊಸ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸಿದೆ
2	ಬೂದಿಪಡಗ	
3	ಕೋಟಿತ್ರಿಟ್ಟು	
4	ಅಂಕನಶೆಟ್ಟಿಪುರ ಕ್ವಾಟ್ರಸ್	
5	ವೆಂಕಟಯ್ಯನ ಛತ್ರ	
6	ಚಿಕ್ಕಮೂಡಹಳ್ಳಿ	
7	ಹೊಸಪೋಡು	

8	ದೊಡ್ಡಹಳ್ಳ	
9	ಹೊಂಗಲವಾಡಿ ಕಾಲೋನಿ-2	
10	ಮಹದೇಶ್ವರ ಕಾಲೋನಿ	
11	ಸಿದ್ದಲಿಂಗನಪುರ	
12	ಬಸವರಾಜಪುರ	
13	ಕುರುಬರಹುಂಡಿ	

ಚಾಮರಾಜನಗರ ಜಿಲ್ಲೆಯಲ್ಲಿ 2005-06ನೇ ಸಾಲಿನಲ್ಲಿ ಮಂಜೂರಾಗಿರುವ 231 ಅಂಗನವಾಡಿ ಕೇಂದ್ರಗಳ ವಿವರ

ಕೊಳ್ಳೇಗಾಲ ತಾಲ್ಲೂಕು

ಕ್ರ. ಸಂ	ಅಂಗನವಾಡಿ ಕೇಂದ್ರದ ಹೆಸರು	ಷರಾ
01	75 ಅರಬಗೆರೆ	ಈ ಎಲ್ಲಾ ಕೇಂದ್ರಗಳನ್ನು ಸರ್ವ ಶಿಕ್ಷ ಅಭಿಯಾನ ಕೇಂದ್ರಗಳಿಂದ ಹೊಸ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸಿದೆ
02	ಮಾವತ್ತೂರು	
03	ಕರಳಕಟ್ಟೆ	
04	ಬೂದಿತಿಟ್ಟು	
05	ಚೆಲುವನಹಳ್ಳಿ	
06	ಜನ್ನೂರು	
07	ಹೊಸಪೋಡು	
08	ಕೋಣನಕೆರೆ	
09	ಕಂಚಗಳ್ಳಿ	
10	ಜಿ ಆರ್ ನಗರ	
11	ಕತ್ತೇಕಾಲುಪೋಡು	
12	ಅಂಡಕುರುಬರದೊಡ್ಡಿ	
13	ಜೀರಿಗೆಗದ್ದೆ	
14	ಅರ್ದನಾರೀಪುರ	
15	ಸೇಬಿನಕೊಬೆ	
16	ಹಾವಿನ ಮೂಲೆ	
17	ಕಾಳಿಕಟ್ಟೆ ಡ್ಯಾಂ	
18	ನಕ್ಕುಂದ	
19	ಸೂಳೆಕೊಬೆ	
20	ಗೇರಟ್ಟಿ	

21	ಗೊರಸಾನೆ	
22	ಸಾಮಂಧಗೇರಿ–1	
23	ಮರದಬೀದಿ	
24	ಕಾಶಿ ವಿಶ್ವನಾದ ಗುಡಿ ಬೀದಿ	
25	ಮುಡಿಗುಂಡಂ–4	
26	ಭೀಮನಗರ–1	
27	ಭೀಮನಗರ–1	
28	ಸಾಮುಂದಗೇರಿ–2	
29	ವಾಲೇಕೇರಿ ಬೀದಿ	
30	ನೂರ್‌ಮೊಹಲ್ಲಾ–1	
31	ನೂರ್‌ಮೊಹಲ್ಲಾ–2	
32	ಅಹಮದ್ ಪುರ–1	
33	ಅಹಮದ್ ಪುರ–2	
34	ಬಸವೇಶ್ವರ ನಗರ–1	
35	ಬಸವೇಶ್ವರ ನಗರ–2	
36	ಮುಡಿಗುಂಡ	
37	ಉಪ್ಪಲಗೇರಿ–3	
38	ಬೀರನಬೀದಿ ಕೇಂದ್ರ	
ಸತ್ತೇಗಾಲ ವೃತ್ತ		
39	ಸತ್ತೇಗಾಲ–7	
40	ಧನಗೆರೆ–3	
41	ಗುಂಡಗಾಲ–3	
42	ನರೀಪುರ–2	
43	ಸತ್ತೇಗಾಲ–8	
44	ಎಢಕುರಿಯ	
45	ಶಿವನಸಮುದ್ರ	
46	ಚೆನ್ನೀಪುರದ ದೊಡ್ಡಿ	
47	ತೆಂಗಿನಹಳ್ಳ	
48	ಪಾಸ್ಕಲ್ ನಗರ	
49	ಶಾಂತಿನಗರ	
50	ಟಿ ಜಿ ದೊಡ್ಡಿ	
51	ಶಿಲುಬೆಪುರ	

ಹನೂರು ವೃತ್ತ		
52	ಹನೂರು–6	
53	ಹನೂರು–7	
54	ಮಂಗಲ–4	
55	ಅಜ್ಜಗಳ್ಳಿದೊಡ್ಡಿ	
56	ಬೂದಬಾಳು–2	
57	ಗುಂಡಾಪುರ–2	
58	ನಂಜೇಒಡೆಯರ ದೊಡ್ಡಿ	
59	ಎಡಳ್ಳಿದೊಡ್ಡಿ	
60	ಎಲ್ಲೇಮಾಳ–2	
61	ಗಾಂಧಿನಗರ–2	
62	ಚಂಗವಾಡಿ–2	
63	ಎಂ ಟಿ ದೊಡ್ಡಿ	
ಪಾಳ್ಯ		
64	ಮೊಳಗನಕಟ್ಟೆ	
65	ಪಾಳ್ಯ–6	
66	ಉಗನೀಯ–3	
67	ರಾಚಪ್ಪಾಜಿನಗರ	
68	ತೆಳ್ಳನೂರು–3	
69	ಪಾಳ್ಯ–5	
ದೊಡ್ಡಿಂದುವಾಡಿ		
70	ದೊಡ್ಡಿಂದುವಾಡಿ–6	
71	ದೊಡ್ಡಿಂದುವಾಡಿ–7	
72	ನಂಜಯ್ಯಕಟ್ಟೆ	
ಬಂಡಳ್ಳಿ ವೃತ್ತ		
73	ಬಂಡಳ್ಳಿ–5	
74	ಬಂಡಳ್ಳಿ–6	
75	ಶಾಗ್ಯ–3	
76	ಮರಿಯಮಂಗಲ	
ಮಧುವಿನಹಳ್ಳಿ		
77	ಹಿತ್ತಲದೊಡ್ಡಿ	
78	ಟಿ ಸಿ ಹುಂಡಿ	

ರಾಮಾಪುರ-3		
79	ಕೊಂಗನೂರು	
80	ಕೊಂಬುಡಿಕ್ಕಿ	
81	ಅಣೆಹೊಲ	
82	ಶಾಂತಿನಗರ	
83	ಪಾಲಾರ್‌ಗೇಟ್	
84	ಕೀರನಹೊಲ	
85	ಹಳೆಯೂರು	
86	ಮರೂರು	
87	ರಾಮೇಗೌಡನಹಳ್ಳಿ	
88	ಆತೂರು	
89	ಕೋಟಿಯೂರು	
90	ಚಂಗಡಿ	
91	ಸತ್ತಾರ್ ಮೇಡು	
92	ಎಂ ಜಿ ದೊಡ್ಡಿ	
93	ವಿ ಎಸ್ ದೊಡ್ಡಿ	
94	ಎಂ ಎಸ್ ದೊಡ್ಡಿ	
95	ಕೌದಳ್ಳಿ-4	
96	ಕೌದಳ್ಳಿ-5	
97	ಕೌದಳ್ಳಿ-6	
98	ಕೌದಳ್ಳಿ-7	
99	ಕೌದಳ್ಳಿ-8	
100	ದಂಟಳ್ಳಿ-2	
101	ಆಲಂಬಾಡಿ	
102	ಇಂಡಿಗನತ್ತ	
103	ಕೊಕ್ಕಬರೆ	
104	ತುಳಸಿಕೆರೆ	
ಚಿಲಕವಾಡಿ ವೃತ್ತ		
105	ಕುಂತೂರುಮೋಳೆ-2	
106	ಹೊಸ ಐನೋರ ಹುಂಡಿ	
107	ಟಗರಪುರಮೋಳೆ	
ರಾಮಾಪುರ 1ನೇ ವೃತ್ತ		

108	ಬಣಜಿಗೆರೆ	
109	ಕೆಂಪಯ್ಯನಹಟ್ಟಿ–1	
110	ಕೆಂಪಯ್ಯನಹಟ್ಟಿ–2	
111	ಗೋಪಿಶೆಟ್ಟಿಯೂರು–2	
112	ಮಾಮರದೊಡ್ಡಿ	
113	ಕುರುಬರದೊಡ್ಡಿ (ದಾಸನದೊಡ್ಡಿ)–3	
114	ಗೊಲ್ಲರದಿಂಬ	
115	ಹೊಸದೊಡ್ಡಿ	
116	ಮಲ್ಲಯ್ಯನಪುರ	
117	ಗೋವಿಂದರಾಜಪುರ	
118	ಜಡ್ಡೆರದೂಡ್ಡಿ	
119	ಮುತ್ತುಶೆಟ್ಟಿಯೂರು	
120	ಕಾಂಚಹಳ್ಳಿ–2	
ರಾಮಾಪುರ ವೃತ್ತ–2		
121	ಈಚಲಕೋಬೆ	
122	ಕೊಟ್ಟನಮೂಲೆ	
123	ಪಂದಯ್ಯನದೊಡ್ಡಿ	
124	ಕೆ ಎಸ್ ದೊಡ್ಡಿ	
125	ಮುನಿಗೌಡನದೊಡ್ಡಿ	
126	ಕರಟಕೋಯಿಲ್	
127	ಹೊಸಮಾರ್ಟಳ್ಳಿ	
128	ವಟ್ಟುಕಾಡು	
129	ಆಲದಮರ	
130	ದೊಡ್ಡಾಣಿ	
ಪಾಳ್ಯ ವೃತ್ತ		
131	ಕುರುಬರ ಡಿಗ್ಗಿ	
132	ಬಸವನಗುಡಿ	
133	ಶಿಯಂಬಲ	
134	ಮುಸಿಯಾ ವಿದೊಡ್ಡಿ	
135	ಕುಡುವಾ ದೊಡ್ಡಿ	
136	ಕೊರಮನಕ್ವಾ	
ಕಾಮಗೆರೆ ವೃತ್ತ		

137	ಸಿಂಗನರಸೂರು–3	
138	ಮೋಡಳ್ಳಿ	
ಲೊಕ್ಕನಹಳ್ಳಿ ವೃತ್ತ		
139	ಆಂಡಿಪಾಳ್ಯ	
140	ಲೊಕ್ಕನಹಳ್ಳಿ–5	
141	ಲೊಕ್ಕನಹಳ್ಳಿ–6	
142	ಚೆನ್ನಲಿಂಗನಹಳ್ಳಿ	
143	ಶಿವಪುರ	
144	ದೊಡ್ಡಮಾಲಾಪುರ	
ಗುಂಡ್ಲುಪೇಟೆ ತಾಲ್ಲೂಕು		
01	ಮೂಖಳ್ಳಿ ಕಾಲೋನಿ	ಈ ಎಲ್ಲಾ ಕೇಂದ್ರಗಳನ್ನು ಸರ್ವ ಶಿಕ್ಷ ಅಭಿಯಾನ ಕೇಂದ್ರಗಳಿಂದ ಹೊಸ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸಿದೆ
02	ಚೆನ್ನಿಕಟ್ಟೆ (ಕಾರೇಮಾಳ)	
03	ಮುಕ್ತಿ ಕಾಲೋನಿ	
04	ಹಗ್ಗದಹಳ್ಳ	
05	ಕಂದೇಗಾಲಹೊಸೂರು	
06	ಹೆಗ್ಗವಾಡಿ	
07	ದಾರಿಬೇಗೂರು	
08	ಕುನಗಳ್ಳಿ	
09	ಮದ್ದೂರು ಕಾಲೋನಿ	
10	ನಂಗೇಗೌಡನಹುಂಡಿ	
11	ತೆರಕಣಾಂಬಿಹುಂಡಿ	
12	ಮಧ್ದೂರು	
13	ಕಡುಬೂರು	
14	ಕಳ್ಳೀಪುರ	
15	ಹಂಗಳ	
16	ಸಿದ್ದಯ್ಯನಪುರ ಕಾಲೋನಿ	
17	ಹುತ್ತೂರು	
18	ಅಣ್ಣೂರುಕೇರಿ–1	
19	ಕೋಡಹಳ್ಳಿ	

20	ಬೇಗೂರು-2	
21	ಚಿಕ್ಕಾಟಿ-1	
22	ಸೋಮಹಳ್ಳಿ-2	
23	ಕೊತನೂರು	
24	ತರಕಣಾಂಬಿ-2	
25	ವಿಜಯಪುರ	
26	ಕಣಿಯನಪುರ ಕಾಲೋನಿ	
27	ಸುಪುರ-2	
28	ಅಗತಗೌಡನಹಳ್ಳಿ	
29	ಬೊಮ್ಮಲಾಪುರ-1	
30	ಪಡಗೂರು	
31	ಕುರಬರ ಬೀದಿ, ಗುಂಡ್ಲುಪೇಟೆ	
32	ಕದ್ರಿ	
33	ಕಾರೇಮಾಳ	
34	ಕಬ್ಬಹಳ್ಳಿ-ಗಾಣಿಗೇರಬೀದಿ	
35	ಆಲತ್ತೂರು	
36	ಕಗ್ಗಳ	
37	ಶ್ಯಾನಾದ್ರಹಳ್ಳಿ	
38	ಬೇರಂಬಾಡಿ	
39	ಕೊಡಸೋಗೆ	
40	ಕಾರೇಮಾಳ	
41	ಕುಂದಕೆರೆ – ಆದಿಜಾಂಬವರ ಬೀದಿ	
42	ಪಡಗೂರು	
43	ಜಗಜೀವನರಾಂ ಬಡಾವಣೆ	
44	ಚಿಕ್ಕಮಸೀದಿ	
45	ವಿಜಯಪುರ	
46	ಹುಲ್ಲೇಪುರ	
ಯಳಂದೂರು ತಾಲ್ಲೂಕು		
01	ಕೆ ದೇವರಹಳ್ಳಿ	ಈ ಎಲ್ಲಾ ಕೇಂದ್ರಗಳನ್ನು ಸರ್ವ ಶಿಕ್ಷ ಅಭಿಯಾನ ಕೇಂದ್ರಗಳಿಂದ
02	ಹೊಸಪೋಡು	
03	ಪುರಾಣಿಪೋಡು	
04	ಬಂಗ್ಲೆಪೋಡು	

05	ಮಂಜಿಗುಂಡಿ ಕಲ್ಯಾಣಿಪೋಡು	ಹೊಸ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸಿದೆ
06	ಮುತ್ತುಗದಗದ್ದೆಪೋಡು	
07	ಕೆ ಹೊಸೂರು	
08	ಶಿವಕಹಳ್ಳಿ	
09	ಕೊಮಾರನಪುರ	
10	ಯರಿಯೂರು	
11	ಯರಗಂಬಳ್ಳಿ	
12	ಕೃಷ್ಣಾಪುರ	
13	ಗುಂಬಳ್ಳಿ	
14	ಕಂದಹಳ್ಳಿ	
15	ಕೆಸ್ತೂರು	
16	ವೈ ಕೆ ಮೋಳೆ	
17	ಮದ್ದೂರು	
18	ಕಿನಕಹಳ್ಳಿ	
19	ಬೀಚಹಳ್ಳಿ	
20	ದುಗ್ಗಹಟ್ಟಿ	
21	ಯರಿಯೂರು	
22	ಚಿಂಗಚಹಳ್ಳಿ	
23	ಮಾಂಬಳ್ಳಿ	
24	ಆಲ್ಕೆರೆ ಅಗ್ರಹಾರ	
25	ಯಳಂದೂರು	
26	ಯರಗಂಬಳ್ಳಿ	
27	ಅಂಬಳೆ	
28	ಮಾಲಾರ ಪಾಳ್ಯ	

ಘೋಷ್ವಾರೆ

ಕ್ರಸಂ	ತಾಲ್ಲೂಕಿನ ಹೆಸರು	ಮಂಜೂರಾಗಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ
01	ಚಾಮರಾಜನಗರ	13
02	ಕೊಳ್ಳೇಗಾಲ	144
03	ಗುಂಡ್ಲುಪೇಟೆ	46
04	ಯಳಂದೂರು	28
ಒಟ್ಟು		**231**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1300(1753)**
ಸದಸ್ಯರ ಹೆಸರು **ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ)**
ಸಚಿವರ ಹೆಸರು **ಶ್ರೀ ಬಿ ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)**

ಅ) ರಾಜ್ಯದಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ಮಾಹಿತಿ ಒದಗಿಸುವುದು),

ರಾಜ್ಯದಲ್ಲಿ ಮುಜರಾಯಿ ಮತ್ತು ಮುಜರಾಯೇತರ ದೇವಾಲಯಗಳಿದ್ದು ಅವುಗಳಲ್ಲಿ ಮುಜರಾಯಿ ದೇವಾಲಯಗಳ ವಿವರಗಳು ಮಾತ್ರ ಇಲಾಖೆಯಲ್ಲಿ ಲಭ್ಯವಿದೆ (ಜಿಲ್ಲಾವಾರು ವಿವರ ಅನುಬಂದ-1ರಲ್ಲಿ ಲಗತ್ತಿಸಿದೆ)

ಆ) ಈ ದೇವಾಲಯಗಳ ಪೈಕಿ ಎಷ್ಟು ದೇವಾಲಯಗಳು ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡುತ್ತದೆ,(ಜಿಲ್ಲಾವಾರು ಮಾಹಿತಿ ಒದಗಿಸುವುದು),

34,213 ದೇವಾಲಯಗಳು ಮುಜರಾಯಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಅವುಗಳ ಜಿಲ್ಲಾವಾರು ಮಾಹಿತಿ ಅನುಬಂಧ-1ರಲ್ಲಿ ಲಗತ್ತಿಸಿದೆ

ಇ) ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡುವ ದೇವಾಲಯಗಳಿಂದ ಬರುವಂತಹ ಆದಾಯದ ಮೊತ್ತವೆಷ್ಟು, ಈ ಆದಾಯವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ,

ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಡುವ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ ದೇವಾಲಯದ ಆದಾಯವನ್ನು

ಅಯಾ ದೇವಾಲಯದ ದೈನಂದಿನ ಪೂಜಾ ಕೈಂಕರ್ಯಗಳಿಗೆ, ಸಿಬ್ಬಂದಿ ವೆಚ್ಚ, ಮತ್ತು ಅಭಿವೃದ್ಧಿ ಹಾಗೂ ದೇವಸ್ಥಾನಗಳಿಗೆ ಯಾತ್ರಾರ್ಥಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಉದ್ದೇಶಕ್ಕಾಗಿ ಆದಾಯವನ್ನು ಬಳಸಲಾಗುತ್ತಿದೆ

ಈ) ಈ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ಮಾಡುತ್ತಿರುವ ಪೂಜಾರಿಗಳ ಸಂಖ್ಯೆ ಎಷ್ಟು, ಅವರುಗಳಿಗೆ ನೀಡಲಾಗುತ್ತಿರುವ ವೇತನವೆಷ್ಟು,

ಈ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿರುತ್ತಿರುವ ಅರ್ಚಕರ ಸಂಖ್ಯೆ 30,111, ಅರ್ಚಕರ ವೇತನವೂ ಅಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿ ದೇವಾಲಯದ ನಿಧಿಯಿಂದ, ಭರಿಸಲಾಗುವುದು ಮತ್ತು ರಾಜ್ಯದ ನಿದಿಯಿಂದ ವೇತನಕ್ಕಾಗಿ ಮೊಬಲಗನ್ನು ಭರಿಸಲಾಗುವುದಿಲ್ಲ

ಉ) ರಾಜ್ಯದಲ್ಲಿರುವ ಪ್ರಸಿದ್ಧ ದೇವಾಲಯಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಾಗೂ ಆರ್ಥಿಕವಾಗಿ ಸದೃಢವಾಗಿರುವ ಪ್ರಮುಖ ದೇವಾಲಯಗಳಿಗೆ ಆಗಮಿಸುವ ಭಕ್ತಾಧಿಗಳಿಗೆ ಕುಡಿಯುವ ನೀರು, ಶೌಚಾಲಯ, ವಸತಿಗೃಹ, ತಂಗುದಾಣ ಮುಂತಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ದೇವಸ್ಥಾನದ ನಿಧಿಯಿಂದ ಭರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ

ಅನುಬಂಧ-1

ಕ್ರ ಸಂ	ಜಿಲ್ಲೆಯ ಹೆಸರು	ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿ	ಅಧಿಸೂಚಿತ ಸಂಸ್ಥೆಗಳಪಟ್ಟಿಯಿಂದ ಹೊರತುಪಡಿಸಿರುವ ಸಂಸ್ಥೆಗಳ ಸಂಖ್ಯೆ	ಪ್ರಸ್ತುತ ಇಲಾಖೆಯ ವಶದಲ್ಲಿರುವ ಸಂಸ್ಥೆಗಳ ಸಂಖ್ಯೆ
1	ಬೆಂಗಳೂರು ನಗರ	1016	01	1015
2	ಬೆಂಗಳೂರು ಗ್ರಾಮಾಂತರ	1941	–	1941
3	ಬಾಗಲಕೋಟೆ	1167	–	1167
4	ಬೆಳಗಾವಿ	3803	01	3802
5	ಬಳ್ಳಾರಿ	1294	–	1294
6	ಬೀದರ್	533	–	533
7	ವಿಜಾಪುರ	552	–	552
8	ಚಾಮರಾಜನಗರ	414	–	414

9	ಚಿಕ್ಕಮಗಳೂರು	869	–	869
10	ಚಿತ್ರದುರ್ಗ	305	–	305
11	ದಾವಣಗೆರೆ	612	–	612
12	ದಕ್ಷಿಣ ಕನ್ನಡ	481	03	478
13	ಧಾರವಾಡ	938	04	934
14	ಗದಗ್	1382	–	1382
15	ಗುಲ್ಬರ್ಗಾ	2840	–	2840
16	ಹಾಸನ	2443	–	2443
17	ಹಾವೇರಿ	1288	–	1288
18	ಕೊಡಗು	07	–	07
19	ಕೊಪ್ಪಳ	737	–	737
20	ಕೋಲಾರ	2389	–	2389
21	ಮಂಡ್ಯ	2008	–	2008
22	ಮೈಸೂರು	1312	01	1311
23	ರಾಯಚೂರು	1287	–	1287
24	ಶಿವಮೊಗ್ಗ	643	–	643
25	ತುಮಕೂರು	2462	01	2461
26	ಉಡುಪಿ	813	06	807
27	ಉತ್ತರ ಕನ್ನಡ	769	75	694
	ಒಟ್ಟು	**34305**	**92**	**34213**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1301(1754)**
ಸದಸ್ಯರ ಹೆಸರು **ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ)**
ಉತ್ತಿರಿಸಬೇಕಾದ ಸಚಿವರು **ಶ್ರೀ ಶಶಿಕಾಂತ ಆ ನಾಯಕ**
(ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಉದ್ಯಾನವನಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಒಟ್ಟು 25 ಉದ್ಯಾನವನಗಳು ಜಿಲ್ಲಾವಾರು ವಿವರ ಕೆಳಕಂಡಂತಿದೆ

ಕ್ರಸ	ಜಿಲ್ಲೆ ಹೆಸರು	ಉದ್ಯಾನವನಗಳ ಸಂಖ್ಯೆ	ಕ್ರಸ	ಜಿಲ್ಲೆ ಹೆಸರು	ಉದ್ಯಾನವನಗಳ ಸಂಖ್ಯೆ
1	ಬೆಂಗಳೂರು(ನ)	4	8	ಕೊಪ್ಪಳ ಜಿಲ್ಲೆ	1
2	ಮಂಡ್ಯ	3	9	ಗದಗ್	1

3	ಮೈಸೂರು	6	10	ಬಿಜಾಪುರ	1
4	ಮಡಿಕೇರಿ	1	11	ಬೀದರ್	1
5	ಚಿಕ್ಕಮಗಳೂರು	1	12	ಬಾಗಲಕೋಟೆ	1
6	ಮಂಗಳೂರು	1	13	ಕೋಲಾರ	1
7	ಬೆಳಗಾವಿ	2	14	ಊಟಿ ತಮಿಳುನಾಡು	1

ಆ) ಇವುಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇವುಗಳ ಸಮಗ್ರ ಅಭಿವೃದ್ಧಿಗಾಗಿ ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನವನ್ನು ಸ್ಥಾಪಿಸಲಾಗಿದೆ ಈ ಪ್ರತಿಷ್ಠಾನವು ಸ್ವಯತ್ತ ಸಂಸ್ಥೆಯಾಗಿದೆ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಉದ್ಯಾನವನಗಳು ಈ ಪ್ರತಿಷ್ಠಾನ ವ್ಯಾಪ್ತಿಗೆ ಬರಲಿವೆ, ಪ್ರಾದೇಶಿಕ ಅಧಿಕಾರಯುತ ಸಮಿತಿ ರಚಿಸಲಾಗಿದೆ ಮತ್ತು ಖಾಸಗಿ ಸಹಭಾಗಿತ್ವದೊಡನೆ ವಿಭಾಗವಾರು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗುವುದು

ಇ) ಇದಕ್ಕಾಗಿ ವಾರ್ಷಿಕ ವೆಚ್ಚ ಮಾಡುತ್ತಿರುವ ಹಣದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಯ ಉದ್ಯಾನವನಗಳಿಗೆ 2006-07ನೇ ಸಾಲಿನಲ್ಲಿ ರೂ 260 00 ಲಕ್ಷಗಳನ್ನು ವಿನಿಯೋಗಿಸಲಾಗುತ್ತಿದೆ ಜಿಲ್ಲಾವಾರು ಮಾಹಿತಿಯನ್ನು ಈ ಕೆಳಗೆ ನೀಡಿದೆ

ಕ್ರಸ	ಜಿಲ್ಲೆ ಹೆಸರು	ವೆಚ್ಚಮಾಡಲಾಗುತ್ತಿರುವ ಹಣದ ಮೊತ್ತ (ಲಕ್ಷಗಳಲ್ಲಿ)
1	ಬೆಂಗಳೂರು(ನಗರ)	29 80
2	ಮಂಡ್ಯ	38 00
3	ಮೈಸೂರು	17 00
4	ಮಡಿಕೇರಿ	30 00
5	ಚಿಕ್ಕಮಗಳೂರು	30 00
6	ಮಂಗಳೂರು	5 00
7	ಬೆಳಗಾವಿ	18 00
8	ಕೊಪ್ಪಳ ಜಿಲ್ಲೆ	32 00
9	ಗದಗ್	3 00
10	ಬಿಜಾಪುರ	1 00
11	ಬೀದರ್	3 00
12	ಬಾಗಲಕೋಟೆ	6 00
13	ಕೋಲಾರ	21 20
14	ಊಟಿ ತಮಿಳುನಾಡು	26 00
	ಒಟ್ಟು	**260 00**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 130 ೭(1755)
ಸದಸ್ಯರ ಹೆಸರು ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)
ಉತ್ತರಿಸುವ ಸಚಿವರು ಶ್ರೀ ಶಶಿಕಾಂತ ಆ ನಾಯಕ
(ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ತೆಂಗಿನ ಮರಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು),

ರಾಜ್ಯದಲ್ಲಿರುವ ತೆಂಗಿನ ಮರಗಳ ಒಟ್ಟು ಸಂಖ್ಯೆ ಅಂದಾಜು 604 95 ಲಕ್ಷ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ತೆಂಗಿನ ಮರಗಳ ಸಂಖ್ಯೆ (ಲಕ್ಷಗಳಲ್ಲಿ)
1	ತುಮಕೂರು	158 96
2	ಹಾಸನ	80 43
3	ಚಿತ್ರದುರ್ಗ	70 00
4	ಮಂಡ್ಯ	45 17
5	ಬೆಂಗಳೂರು (ಗ್ರಾ)	39 00
6	ಚಿಕ್ಕಮಗಳೂರು	37 17
7	ಮೈಸೂರು	27 90
8	ದಕ್ಷಿಣ ಕನ್ನಡ	21 54
9	ಉಡುಪಿ	21 39
10	ದಾವಣಗೆರೆ	20 56
11	ಕೋಲಾರ	18 12
12	ಬೆಂಗಳೂರು ನಗರ	11 91
13	ಚಾಮರಾಜನಗರ	11 35
14	ಶಿವಮೊಗ್ಗ	9 41
15	ಉತ್ತರ ಕನ್ನಡ	8 47
16	ಬೆಳಗಾಂ	4 46
17	ಹಾವೇರಿ	4 42
18	ಬಳ್ಳಾರಿ	2 45
19	ಗದಗ	2 24
20	ರಾಯಚೂರು	2 08
21	ಬಾಗಲಕೋಟೆ	1 81
22	ಕೊಪ್ಪಳ	1 79
23	ಕೊಡಗು	1 65
24	ಗುಲ್ಬರ್ಗಾ	1 14
25	ಬಿಜಾಪುರ	0 84
26	ಧಾರವಾಡ	0 57
27	ಬೀದರ್	0 03
ಒಟ್ಟು		**604 95**

ಆ) ಯಾವ ಜಿಲ್ಲೆಗಳಲ್ಲಿ ತೆಂಗನ್ನು ಹೆಚ್ಚು ಬೆಳೆಯಲಾಗುತ್ತಿದೆ,

ತೆಂಗನ್ನು ತುಮಕೂರು, ಹಾಸನ, ಚಿತ್ರದುರ್ಗ, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ

ಇ) ಕಳೆದ ನಾಲ್ಕು ವರ್ಷಗಳಿಂದ ತೆಂಗಿನ ಯಾವ ರೋಗ ಕಾಡಲಾರಂಬಿಸಿದೆ, ಈ ರೋಗದ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಕಳೆದ ನಾಲ್ಕು ವರ್ಷಗಳಿಂದ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳು, ನುಸಿ, ಕಾಂಡ ಸೋರುವ ರೋಗ, ಅಣಬೆ ರೋಗ, ಸುಳಿ ಕೊಳೆ ರೋಗ ಹಾಗೂ ಬೇರು ಸೊರಗು ರೋಗ ಕಾಡಲಾರಂಬಿಸಿವೆ

ಈ ರೋಗಗಳ ನಿಯಂತ್ರಣಕ್ಕೆ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ

1) ತೆಂಗಿನ ನುಸಿ ಭಾದೆ ನಿವಾರಣೆಗಾಗಿ ಜೈವಿಕ ಕೀಟ ನಾಶಕಗಳ ಬಳಕೆ ಮತ್ತು ಪೌಷ್ಟಿಕಾಂಶ ಸರಬರಾಜು ಕುರಿತಂತೆ ರೈತರ ತೋಟಗಳಲ್ಲಿ ಸರ್ಕಾರಿ ವೆಚ್ಚದಲ್ಲಿ ವಿಸ್ತೃತ ಪ್ರದೇಶದಲ್ಲಿ ಪ್ರಾತ್ಯಕ್ಷತೆಯನ್ನು ಕೈಗೂಳ್ಳಲಾಗುತ್ತಿದೆ

2) ತೆಂಗಿನ ಬೆಳೆಯೂ ಸೇರಿದಂತೆ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಶೇ 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣ ಔಷಧಿಗಳನ್ನು ರೈತರಿಗೆ ನೀಡಲಾಗುತ್ತಿದೆ

3) ತೆಂಗಿನ ತೋಟಗಳಲ್ಲಿ ಸಾವಯವ ಕೃಷಿ ಕೈಗೊಂಡು ಮರಗಳ ಆರೋಗ್ಯಸುಧಾರಣೆಗಾಗಿ ಸಾವಯವ ಗೊಬ್ಬರವನ್ನು ಬಳಸಲು ತೆಂಗು ಬೆಳೆಗಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ

4) ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪ ಜೀವಿಗಳನ್ನು ಇಲಾಖೆವತಿಯಿಂದ ಉತ್ಪಾದಿಸಿ ಉಚಿತವಾಗಿ ನೀಡಲಾಗುತ್ತಿದೆ

5) ತೆಂಗು ಬೇರು ಸೊರಗು ರೋಗ ತಗುಲಿರುವ ಮರಗಳನ್ನು ಕಡಿದು ಹಾಕುವ ಪ್ರತಿ ಮರಕ್ಕೆ ರೂ 250 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ

6) ತೆಂಗಿನ ಮರಗಳನ್ನು ಭಾದಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗಾಗಿ ತಾಂತ್ರಿಕತೆ, ಹಸ್ತಪ್ರತಿ, ಕಿರುಪುಸ್ತಕ, ವಿಚಾರ ಸಂಕಿರಣ, ತರಬೇತಿ, ಇತ್ಯಾದಿ ವಿಸ್ತರಣಾ ಕಾರ್ಯಕ್ರಮಗಳು ಹಾಗೂ ಆಕಾಶವಾಣಿ, ದೂರದರ್ಶನ ಮಾಧ್ಯಮಗಳ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1305(1756)**
ಮಾನ್ಯ ಸದಸ್ಯರ ಹೆಸರು	**ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)**
ಉತ್ತರಿಸಬೇಕಾದ ಸಚಿವರು	**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)**

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂತೆಗಳೆಷ್ಟು, (ಜಿಲ್ಲಾವಾರು ವಿವರ ಒದಗಿಸುವುದು),

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂತೆಗಳು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು, ಕೃಷಿ ಮಾರುಕಟ್ಟೆ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

ಆ) ಈ ಸಂತೆಗಳು ಕೃಷಿ ಮಾರುಕಟ್ಟೆ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುತ್ತಿವೆಯೇ,

ಇಲ್ಲ

ಇ) ಈ ಸಂತೆಗಳು ರಾಜ್ಯ ಸರ್ಕಾರಕ್ಕೆ ಎಷ್ಟು ಆದಾಯವನ್ನು ತರುತ್ತಿವೆ,

ಅನ್ವಯಿಸುವುದಿಲ್ಲ

ಈ) ಅವುಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ,

ಕೃಷಿ ಮಾರುಕಟ್ಟೆ ಇಲಾಖೆಯು ನಬಾರ್ಡ್ ಧನಸಹಾಯದಡಿ ಆರ್ ಐ ಡಿ ಎಫ್ ಯೋಜನೆಗಳಡಿಯಲ್ಲಿ ಇಲ್ಲಿಯವರೆಗೆ 321 ಗ್ರಾಮೀಣ ಸಂತೆಗಳನ್ನು ರೂ 3649 97 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಯೋಚಿಸಿದ್ದು, ಈಗಾಗಲೇ 218 ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿಪಡಿಸಿ ಗ್ರಾಮ ಪಂಚಾಯ್ತಿಗಳಿಗೆ ಹಸ್ತಾಂತರಿಸಲಾಗಿದೆ ಉಳಿದ 103 ಸಂತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಆರ್ ಐ ಡಿ ಎಫ್-XII ರಡಿಯಲ್ಲಿ 156 ಗ್ರಾಮೀಣ ಸಂತೆಗಳನ್ನು ರೂ 1694 80 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿ ದೊರೆತಿದ್ದು, ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ

1 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ ರೈತರ ಸಾಲ ಮನ್ನಾ ಮಾಡುವ ಬಗ್ಗೆ

(ಸದನದ ಕಲಾಪವು 11 12ಕ್ಕೆ ಪ್ರಾರಂಭವಾಯಿತು ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಮಾನ್ಯ ಸದಸ್ಯರುಗಳಾದ ಶ್ರೀ ಕೆ ಜಯಪ್ರಕಾಶ್ ಹೆಗ್ಡೆ, ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗೂ ಶ್ರೀ ಜೆ ಸಿ ಮಾಧುಸ್ವಾಮಿಯವರು ಬಾವಿಯಲ್ಲಿ ನಿಂತು ಧರಣಿಯನ್ನು ಮುಂದುವರೆಸಿದ್ದರು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಎಲ್ಲಾ ರೈತರಿಗೂ 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡಬೇಕೆಂದು ಧರಣಿ ಮಾಡುತ್ತಿದ್ದೇವೆ, ಅದನ್ನು ಇವತ್ತೂ ಮುಂದುವರೆಸಿದ್ದೇವೆ ಸರ್ಕಾರ ಇದರ ಬಗ್ಗೆ ಸ್ಪಷ್ಟವಾದಂತಹ, ನೇರವಾದಂತಹ ಉತ್ತರವನ್ನು ಕೊಡಬೇಕು ಆದುದರಿಂದ ನಾವೆಲ್ಲರೂ ಕೂಡ ಮತ್ತೆ ಧರಣಿಯನ್ನು ಮಾಡುತ್ತಿದ್ದೇವೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಅಧ್ಯಕ್ಷರು ಈಗ ಪ್ರಶ್ನೋತ್ತರ ಆರಂಭ ಮಾಡೋಣ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಧರಣಿಯಲ್ಲಿ ಇದ್ದಾರೆ ಅದು ಎಲ್ಲರಿಗೂ ಸಂಬಂಧಪಟ್ಟಂತಹ ವಿಚಾರ

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ ಅದನ್ನು ಕೇಳುವುದಕ್ಕೆ ನನಗೆ ಅವಕಾಶ ಕೊಟ್ಟುಬಿಟ್ಟು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ದಯವಿಟ್ಟು ನಮಗೆ ಮೊದಲು ಅವಕಾಶವನ್ನು ಕೊಡಬೇಕು ಅವರಿಗೆ ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕು ನಮಗೆ ಪ್ರತಿ ಸಾರಿ ಇದೆ ರೀತಿಯಾಗುತ್ತಿದೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಪ್ರಕಾಶ್‌ರವರೆ 25 ಸಾವಿರ ರೂಪಾಯಿ ಏನು ತಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ, ಈಗ ತಾವು ಎಲ್ಲಾ ರೈತರದ್ದೂ ಸಾಲ ಮನ್ನಾ ಮಾಡಿದರೂ 1950 ಕೋಟಿ ರೂಪಾಯಿಗಳು ಆಗುತ್ತದೆ ಹೆಚ್ಚು ಆಗುವುದಿಲ್ಲ, ನಿಮಗೆ ತಪ್ಪು ಅಂಕೆ ಕೊಟ್ಟಿದ್ದಾರೆ ಈಗಾಗಲೇ ನಾನು ಅಂಕೆ ತರಿಸಿದ್ದೇನೆ, 25 ಸಾವಿರ ಕೋಟಿ ರೂಪಾಯಿಯಂತೆ 1950 ಕೋಟಿ ರೂಪಾಗಳಲ್ಲಿ ಎಲ್ಲಾ ರೈತರಿಗೂ ಸಾಲ ಮನ್ನಾ ಮಾಡಬಹುದು

ಶ್ರೀ ಆರ್ ವಿ ದೇಶಪಾಂಡೆ ನಮ್ಮ ಸ್ನೇಹಿತರು ಬಾವಿಯಲ್ಲಿದ್ದಾರೆ ಈ ಪರಿಸ್ಥಿತಿಯಲ್ಲಿ ನಾವು participate ಮಾಡುವುದು ಸರಿಯಲ್ಲ ಇವತ್ತು ಇದರ ಬಗ್ಗೆ ಒಂದು ನಿರ್ಣಯವಾಗಬೇಕು ನಮ್ಮ ಸಮ್ಮಿಶ್ರ ಸರ್ಕಾರದ ಶಾಸಕಾಂಗ ಸಭೆಯಲ್ಲಿ ಇವತ್ತು ಚರ್ಚೆ ಮಾಡಿ ಪರಿಹಾರ ಸಿಗಬಹುದು ಎಂದು ತಿಳಿದುಕೊಂಡಿದ್ದೆವು ಆದುದರಿಂದ ಅದರ ಬಗ್ಗೆ ಮಾನ್ಯ ಗೌರವಾನ್ವಿತ ಗೃಹ ಸಚಿವರು ಬೆಳಕು ಚೆಲ್ಲಬೇಕು ಅವರಿಗೂ ಕೂಡ ರೈತರಿಗೆ ಸಹಾಯ ಮಾಡಬೇಕೆನ್ನುವ ಮನಸ್ಸಿದೆ ನಮಗೂ ಮಾಡಬೇಕೆಂದು ಮನಸ್ಸಿದೆ ಇವತ್ತು JDS, BJP ಮತ್ತು Congressನ ಎಲ್ಲಾ ಶಾಸಕರು ಬೇಡಿಕೆ ಇಟ್ಟಿದ್ದೇವೆ, ಅದಕ್ಕೆ ಸರ್ಕಾರ ಒಪ್ಪಿಕೊಂಡರೆ ಎಲ್ಲರಿಗೂ ಸಂತೋಷವಾಗುತ್ತದೆ ರೈತರು ಬಹಳ ಕಷ್ಟದಲ್ಲಿದ್ದಾಗ, ಬರಗಾಲ ಇದ್ದಾಗ, ಅತಿವೃಷ್ಟಿ ಇದ್ದಾಗ, ಅವರ suicides ಆಗುವಾಗ ರೈತರಿಗೆ ಸಹಾಯ ಮಾಡುವುದು ಸರ್ಕಾರದ ಕರ್ತವ್ಯವಾಗುತ್ತದೆ ಹಾಗಾಗಿ ಎಲ್ಲಾ ರೈತರಿಗೆ 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಿದ್ದೇವೆ ಆ ಕೆಲಸವನ್ನು ಆದಷ್ಟು ಬೇಗ ಸರ್ಕಾರ ಮಾಡಬೇಕು

ಶ್ರೀ ಎಂ ಟಿ ಕೃಷ್ಣಪ್ಪ ನಾಲ್ಕು ವರ್ಷ ಭೀಕರ ಬರಗಾಲ ಇತ್ತಲ್ಲ, ಆಗ ಸುಮ್ಮನೆ ಇದ್ದಿರಲ್ಲ ಸ್ವಾಮಿ

(ಗೊಂದಲ)

ಅಧ್ಯಕ್ಷರು ಈಗ ಸಂಸದೀಯ ಸಚಿವರು ಏನಾದರೂ ಹೇಳುತ್ತೀರಾ?

(ಗೊಂದಲ)

ಅಧ್ಯಕ್ಷರು – ಈಗ ಮಾನ್ಯ ಪ್ರಕಾಶ್‌ರವರೆ ತಾವು ಏನಾದರೂ react ಮಾಡುವುದಿದ್ದರೆ ಹೇಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ರೈತರ ಸಾಲದ ವಿಚಾರದಲ್ಲಿ ಇಡೀ ಸದನದ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅನೇಕ ಹಿರಿಯ ಸದಸ್ಯರಿದ್ದೀರಿ, ತಮಗೆ ಗೊತ್ತಿದೆ ಸರ್ಕಾರ ನಡೆಸುವಾಗ ತತ್‌ಕ್ಷಣದಲ್ಲಿ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ ಈ ಸದನದ ಅಭಿಪ್ರಾಯಗಳು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ ಆದರೆ ಅದರ ಬಗ್ಗೆ ಲೆಕ್ಕಾಚಾರ ಮೊದಲಾದವು ಮಾಡಿಸಬೇಕಾಗಿರುವುದು ಇದೆ ಅದಕ್ಕೆ ತತ್‌ಕ್ಷಣದಲ್ಲಿ ಉತ್ತರ ಕೊಡಲು ಆಗದೇ ಇರುವುದರಿಂದ ಸಮಯ ಬೇಕಾಗಿದೆ ಈ ಸಂದರ್ಭದಲ್ಲಿ ಬಾವಿಯಲ್ಲಿ ಇರುವಂತಹ ಹಿರಿಯ ಸದಸ್ಯರಿಗೆ ನಾನು ವಿನಂತಿ ಮಾಡಿಕೊಳ್ಳುವುದು, ಏನೆಂದರೆ ದಯವಿಟ್ಟು ಪ್ರಶ್ನೋತ್ತರ ವೇಳೆಯನ್ನು ಸುಗಮವಾಗಿ ನಡೆಸಿಕೊಂಡು

ಹೋಗುವುದಕ್ಕೆ ತಾವು ಸಹಕಾರ ಕೊಡಬೇಕು ಈಗ ಹೇಳಬೇಕಾದಂತಹ ಅಭಿಪ್ರಾಯಗಳನ್ನು ಮಾನ್ಯ ವಿರೋಧ ಪಕ್ಷದವರು ಹೇಳಿದ್ದೀರಿ ಸರ್ಕಾರದ ಸಾಧಕ ಬಾಧಕಗಳನ್ನು ನೋಡಿ, ನಿರ್ಣಯ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆ ನಮ್ಮ ಶಾಸಕಾಂಗ ಪಕ್ಷದಲ್ಲಿ ಕೂಡ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ ಆದರೆ ಕೂಲಂಕಷವಾಗಿ ಅದರ ಬಗ್ಗೆ ಚರ್ಚೆ ಮಾಡತಕ್ಕಂತಾದ್ದು ಮತ್ತು ಅದರ ಪರಿಣಾಮಗಳನ್ನು ಕುರಿತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳನ್ನು ಕಲೆತು ನಿರ್ಣಯ ಮಾಡಬೇಕಾದಂತಹ ಅಗತ್ಯವಿದೆ ಅದಕ್ಕೆ ಸಮಯಾವಕಾಶ ಬೇಕಾಗುತ್ತದೆ ಈ ಸಂದರ್ಭದಲ್ಲಿ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ದಯವಿಟ್ಟು ಸದನದ ಕಾರ್ಯಕಲಾಪಕ್ಕೆ ಸಹಕಾರ ಕೊಡಬೇಕು ತಾವು ಹೇಳಿದಂತಹ ಅಭಿಪ್ರಾಯವನ್ನು ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೆ ತಾವು ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ ಎಂದು ವಿನಂತಿ ಮಾಡುತ್ತಿದ್ದೇನೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ದಿನಾಂಕ 31 03 07 ಎಂದು ಸಮಯವನ್ನು ನಿಗದಿ ಮಾಡಿದ್ದಾರೆ ಅದರ ಪ್ರಕಾರ ರೈತರಿಗೆ benefit ಕೊಡಬೇಕೆಂದರೆ ಐದಾರು ದಿನ ಮಾತ್ರ ಉಳಿದಿದೆ ಆದರೆ ಇದರ ಬಗ್ಗೆ ಇನ್ನು ವಿಚಾರ ಮಾಡುತೇವೆ, ಮತ್ತೊಂದು ಮಾಡುತ್ತೇವೆ ಎಂದರೆ time ಎಲ್ಲಿದೆ? ತಾವು time extend ಮಾಡಬೇಕಾಗುತ್ತದೆ

(ಗೊಂದಲ)

ಶ್ರಿ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಅನೇಕ ಸೂಕ್ಷ್ಮ ವಿಷಯಗಳು ಇರುತ್ತವೆ ಮಾನ್ಯ ಶ್ರೀನಿವಾಸ ಗೌಡರು ಹೇಳಿದಂತೆ ನಮ್ಮ Co-operative ಸಂಸ್ಥೆಗಳ ಆರೋಗ್ಯ ಕೂಡ ಕೆಡಬಾರದು ಕೆಲವು ವಿಷಯಗಳನ್ನು ಮೊದಲು ಹೇಳಬಾರದು ಈ ವಿಚಾರದಲ್ಲಿ ಚರ್ಚೆಯಾಗಿದೆ ತಾವು ಸರ್ಕಾರವನ್ನು ನಡೆಸಿದಂತಹ ಅನುಭವವಿರುವವರು ತತ್‌ಕ್ಷಣದಲ್ಲಿ ಒತ್ತಾಯ ಮಾಡಿದರೆ ಅದು ಆಗುವುದಿಲ್ಲ ಆದ್ದರಿಂದ ತಾವು ಅಭಿಪ್ರಾಯವನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಬಹಳ ಗಂಭೀರವಾಗಿ ಸರ್ಕಾರ ಯೋಚನೆ ಮಾಡುತ್ತಿದೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ ತಾವು ತಮ್ಮ ಸ್ಥಾನಗಳಿಗೆ ಹೋಗಿ ಸಹಕಾರವನ್ನು ಕೊಡಬೇಕು ಮಾನ್ಯ ಮಾಧುಸ್ವಾಮಿಯವರೆ, ಈ ಮಾತನ್ನು ಮಾನ್ಯ ಉಪ ಮುಖ್ಯ ಮಂತ್ರಿಯವರೆ ಹೇಳಬೇಕೆಂದರೆ ಅವರು ಹೇಳುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ ಭಿನ್ನಭಿನ್ನ ಹೇಳಿಕೆಗಳಿಂದ Co-operation ಇಲಾಖೆಯ ಅನಾರೋಗ್ಯ ಈಗಾಗಲೇ ಆಗಿದೆ ಅದು ಆರೋಗ್ಯಕರವಾಗಬೇಕಾದರೆ ಸರ್ಕಾರ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ರೈತರ ಮತ್ತು ಸಹಕಾರ ಸಂಘದ ಸಹಾಯಕ್ಕೆ ಧಾವಿಸಬೇಕಾಗುತ್ತದೆ ಆ ರೀತಿ ಮಾಡಬೇಕಾದರೆ, ತಾವು 31 03 07ರ ಸಮಯವನ್ನು ಏನು ನಿಗದಿ ಮಾಡಿದ್ದೀರಿ, ಅದರ ಸಮಯವನ್ನು extend ಮಾಡಬೇಕೆಂದು ಹೇಳುತ್ತಿದ್ದೇವೆ

ಶ್ರೀ ಎಂ ಪಿ ಪ್ರಕಾಶ್ ನಿಮ್ಮಷ್ಟೇ ಕಳಕಳಿ ನಮಗೂ ಕೂಡ ಇದೆ ನಾವೆಲ್ಲರೂ ಕೂಡ ರೈತರ ಹಿನ್ನೆಲೆಯಿಂದ ಬಂದಿರುವವರು ಆದರೆ ಕೆಲವು ಸೂಕ್ಷ್ಮತೆಗಳು ಇರುತ್ತವೆ, ತಾವು ಕೂಡ ಸರ್ಕಾರವನ್ನು ನಡೆಸಿದಂತಹವರಾಗಿರುತ್ತೀರಿ ಅದಕ್ಕೆ ಅವರು ಉತ್ತರ ಕೊಡುತ್ತಾರೆ ದಯವಿಟ್ಟು ಸ್ವಲ್ಪ ಸಹಕಾರ ಕೊಡಿ ಈಗಲೇ ಹೇಳಿಬಿಡಿ ಎಂದರೆ ಸ್ವಲ್ಪ ಕಷ್ಟವಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನಮ್ಮ ಕಾನೂನು ಮತ್ತು ವ್ಯವಹಾರ ಸಂಸದೀಯ ಸಚಿವರಾದಂತಹ ಮಾನ್ಯ ಪ್ರಕಾಶ್‌ರವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ ನಾನು ಒಂದು ಮಾತನ್ನು ಈ ಸದನದ ಮೂಲಕ ರೈತ ಸಮುದಾಯಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ದೇಶದ ಯಾವುದೇ ರಾಜ್ಯದಲ್ಲಿ 4% ಬಡ್ಡಿಗೆ ಸಾಲ ಕೊಡುವ ಚಿಂತನೆ ನಡೆಯದೇ ಇರುವಂತಹ ಕಾಲದಲ್ಲಿ ಸಹಕಾರ ಸಂಘದಿಂದ ಸಾಲವನ್ನು ಕೊಟ್ಟಿದ್ದೇವೆ ಬರಗಾಲ ಮತ್ತು ಅತಿವೃಷ್ಟಿಗೆ ಸಿಕ್ಕಿದೆ ಎನ್ನುವ ಕಾರಣಕ್ಕೆ ನಾನು ಆಯವ್ಯಯವನ್ನು ಮಂಡನೆ ಮಾಡುವಂತಹ ಕಾಲದಲ್ಲಿ ರೈತನ ನೆರವಿಗೆ ಬರಬೇಕು ಎನ್ನುವಂತಹ ಕಾರಣಕ್ಕೋಸ್ಕರವೆ ಸಹಕಾರಿ ಸಂಘದಲ್ಲಿ ಪಡೆದಿರುವಂತಹ ಸಾಲದಲ್ಲಿ 25 ಸಾವಿರ ರೂಪಾಯಿಯವರೆಗೂ ಮನ್ನಾ ಮಾಡುತ್ತೇವೆ ಉಳಿದವರೆಲ್ಲರಿಗೂ ಸಹ ಬೆಳೆಯ ಸಾಲದ ಬಡ್ಡಿ ಮನ್ನಾ ಮಾಡುತ್ತೇವೆ ಅವರಲ್ಲಿ ದೊಡ್ಡ ಅಥವಾ ಸಣ್ಣ ರೈತರಿರಲಿ ಅವರಿಗೆ ಬೇದ ಭಾವ ಮಾಡಬಾರದೆಂದು ಮಾಡುತ್ತಿದ್ದೇವೆ ನಿನ್ನೆ ತರಾತುರಿಯಲ್ಲಿ statement ಮಾಡಿದಂತಹ ಉದ್ದೇಶ, ಅನೇಕರ ಅಭಿಪ್ರಾಯದಂತೆ 50 ಸಾವಿರ ರೂಪಾಯಿಯೊಳಗೆ ಸಾಲ ತೆಗೆದುಕೊಂಡಿರುವವರಿಗೂ 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡಬೇಕೆನ್ನುವುದು, ನನ್ನದೇ ಆದಂತಹ ರೀತಿಯಲ್ಲಿ ಚಿಂತನೆಯಾದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಿದ ನಂತರ ನಿನ್ನೆ ಆ statement ಮಾಡಿದೆ ಏಕೆಂದರೆ 31 03 07ರೊಳಗೆ ಸಾಲ ಕಟ್ಟುವವರಿಗೆ

ಅನುಕೂಲವಾಗಬೇಕು, ಒಂದು ವಾರವಾದರೂ ಅವರು ಯೋಚನೆ ಮಾಡುವುದಕ್ಕೆ ಸಮಯ ಸಿಗುತ್ತದೆ ಎನ್ನುವ ಕಾರಣಕ್ಕೋಸ್ಕರ ಮಾಡಿದೆ ಮೂರನೆಯದು ತಾವು ತಮ್ಮ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದೀರಿ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅತ್ಯಂತ ವಿನಯದಿಂದ ಹಿರಿಯಾರಾದಂತಹ ಮಾನ್ಯ ವಾಟಾಳ್ ನಾಗರಾಜ್ ರವರಿಗು ಹಾಗೂ ಇತರರಿಗು ಹೇಳಲಿಚ್ಛಿಸುವುದೇನೆಂದರೆ, ತಾವು ನಾಡಿನ ರೈತರ ಹಿತದೃಷ್ಟಿಯಿಂದ ಹೀಗೆ ಆಗಬೇಕೆಂದು ಕೇಳುವುದಕ್ಕೆ ನಿಮಗೆ ಸಂಪೂರ್ಣ ಅಧಿಕಾರವಿದೆ ಆದರೆ ಹೀಗೆ ಮಾಡಬೇಕೆಂದು ಹೇಳಿ ತಾವು walkout ಮಾಡಬಹುದೇ ಹೊರತು, ಈ ರೀತಿ ಸದನದ ಬಾವಿಗೆ ಬಂದು ಕಾರ್ಯಕಲಾಪಗಳನ್ನು ತಡೆದು, ನಿಮ್ಮ ಭಾವನೆಗಳನ್ನು ರೈತ ಸಮೂಹಕ್ಕೆ ತಿಳಿಸಬೇಕೆಂಬ ಕಾರಣಕ್ಕೆ ಮಾಡಿದ್ದೀರಿ ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಂಥ ನಾನು, ಅಥವಾ ಈ ಸಮ್ಮಿಶ್ರ ಸರ್ಕಾರದಲ್ಲಿ ರೈತರ ಪರವಾಗಿ ಚಿಂತನೆ ಮಾಡುತ್ತಿರುವಂಥ ನಾವು ರೈತರಿಗಾಗಿ ಯಾವುದೇ sacrificeಗೆ ಸಿದ್ಧರಿದ್ದೇವೆ ನಮ್ಮ ಅಧ್ಯಕ್ಷತೆಯೇ ರೈತನಾಗಿದ್ದಾನೆ ಬರಗಾಲ, ಅತಿವೃಷ್ಟಿಗೆ ಸಿಲುಕಿರುವ ರೈತರಿಗೆ ಏನು ಮಾಡಿದರೂ ಕಡಿಮೆಯೇ ಆಗುತ್ತದೆ ಸ್ವಾತಂತ್ರ್ಯ ಪೂರ್ವದಲ್ಲಿ ಏನು ಸ್ಥಿತಿ ಇತ್ತೋ ಅದೇ ಸ್ಥಿತಿ ಇವತ್ತು ಇದೆ ಎಲ್ಲಾ ಬೆಳೆಗಳು ಇಲ್ಲಸಲ್ಲದ ರೋಗಗಳಿಗೆ ತುತ್ತಾಗಿ ಬೆಳೆ ನಾಶವಾಗುತ್ತಿದೆ, ರೈತ ಸಂಕಷ್ಟದಲ್ಲಿ ಸಿಲುಕಿದ್ದಾನೆ ಇಂತಹ ಸಂದರ್ಭದಲ್ಲಿ ಈ ನೆರವನ್ನು ನಾವೇ voluntaryಯಾಗಿ ಮಾಡಿದ್ದೇವೆ ದೇಶದಲ್ಲಿ ಯಾವುದೇ ಸರ್ಕಾರ, ಅಥವಾ ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲವಿದ್ದಂಥ ಕಾಲದಲ್ಲಿ ಸಹ, ಆಗ ಮಾನ್ಯ ರಾಮಕೃಷ್ಣಹೆಗಡೆರವರಿಗೆ ನಾವು ಬೆಂಬಲವನ್ನು ಕೊಟ್ಟಾಗ, ಆಗ 18ಜನ ಬಿಜಪಿ ಶಾಸಕರು ಇದ್ದಾಗ, ನಿಮಗೆ ಮಂತ್ರಿಗಿರಿ ಬೇಡ, ಚೇರ್ಮನ್‌ಗಿರಿ ಬೇಡ, ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಮೊಂಡು ಹಠ ಮಾಡಿಕೊಂಡು, walkout ಮಾಡಿ, ಕೊನೆಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಉತ್ತರವನ್ನು ಕೊಡವಂಥ ಕಾಲದಲ್ಲಿ, ಬಿಜೆಪಿಯವರು ಒತ್ತಾಯ ಮಾಡುತ್ತಿದ್ದಾರೆ, ಅದಕ್ಕೆ ಅಲ್ಪಸ್ವಲ್ಪ ರೈತರ ಸಾಲವನ್ನು "ನಾನು ಮನ್ನಾ ಮಾಡುತ್ತಿದ್ದೇ" ಎಂದು ಈ ನಾಡಿನ ಇತಿಹಾಸದಲ್ಲಿ ಮೊದಲನೆಯ ಬಾರಿಗೆ ರೈತರ ಸಾಲ ಮನ್ನಾ ಮಾಡಿದರು ಈ ಸಾರಿ ನಾನು ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಅತ್ಯಂತ ವಿನಯದಿಂದ ಹೇಳಲಿಚ್ಚಿಸುತ್ತೇನೆ ಹಿಂದಿನ ಸರ್ಕಾರಗಳು ಯಾವ್ಯಾವ ರೈತರಿಗೆ, ಅದು ಪಂಪ್‌ಸೆಟ್‌ಗಳ ಬಗ್ಗೆ ಇರಬಹುದು, ಬಡ್ಡಿ ಮನ್ನಾ ಬಗ್ಗೆ ಇರಬಹುದು, ಏನೇನು concessions ಕೊಟ್ಟಿತ್ತೋ, ಬೇರೆ ಬೇರೆ ಅನೇಕ ಆರ್ಥಿಕ ಮುಗ್ಗಟ್ಟು, ಬೇರೆ ಬೇರೆ

ಕಾರಣಕ್ಕಾಗಿ ಆ ಒಂದು ಹಣವನ್ನು ಕಟ್ಟದೇ ಇದ್ದಂತಹ ಕಾಲದಲ್ಲಿ, ಒಂದು ಪೈಸೆ ಬಾಕಿ ಇಲ್ಲದ ರೀತಿಯಲ್ಲಿ ಇವತ್ತು ನಾನು ಪೂರಕ ಅಂದಾಜನ್ನು ಮಂಡನೆ ಮಾಡುತ್ತಿದ್ದೇನೆ ಎಲ್ಲಾ ಬಾಕಿಯನ್ನು ಸಂಪೂರ್ಣವಾಗಿ ಸಹಕಾರ ಸಂಘಗಳಿಗೆ ಕಟ್ಟುವಂಥಾದ್ದು ಈಗ ತಾನೇ ಮಾನ್ಯ ಆರ್ ವಿ ದೇಶಪಾಂಡೆಯವರು ಕೋ-ಆಪರೇಟಿವ್ ಇಲಾಖೆ ಅನಾರೋಗ್ಯದಿಂದ ಇದೆಯೆಂದು ಹೇಳಿದರು ನಾವು ಅಧಿಕಾರವನ್ನು ತೆಗೆದುಕೊಂಡ ಮೇಲೆ ಅತ್ಯಂತ ವಿನಯದಿಂದ ನಾನು ನಿಮಗೆ ಹೇಳಲಿಚ್ಛಿಸುತ್ತೇನೆ, Co-operative Institutionಗಳಿಗೆ ಹಿಂದಿನ ಸರ್ಕಾರಗಳು ಏನು ಬಡ್ಡಿಯನ್ನು ಮನ್ನಾ ಮಾಡಿತ್ತು ಆ ಮೊತ್ತವನ್ನು ತುಂಬಿಕೊಟ್ಟ ಪರಿಣಾಮ ಇಡೀ ರಾಜ್ಯದಲ್ಲಿ ಮತ್ತೊಮ್ಮೆ ಅಗತ್ಯ ಸಾಲವನ್ನು ಕೊಡುವಂತಹ ಶಕ್ತಿ ಸಹಕಾರಿ ಕ್ಷೇತ್ರಕ್ಕೆ ಬಂತು ಈ ಸಾರಿ ಸಾಲವನ್ನು ಮನ್ನಾ ಮಾಡುವಂತಹ ಕಾಲದಲ್ಲಿ ಪೂರಕ ಬಜೆಟ್ ಅನ್ನು ನಾನು ಮಂಡನೆ ಮಾಡುತ್ತಿದ್ದೇನೆ 500ಕೋಟಿ ರೂಪಾಯಿಗಳನ್ನು ಈ ಮಾರ್ಚ್ ತಿಂಗಳೊಳಗೆ Co-operative Institutionಗಳಿಗೆ ನಾನು transfer ಮಾಡುತ್ತಿದ್ದೇನೆ ಏಕೆಂದರೆ ಈ Co-operative Institutionಗಳು ನಡೆಯಬೇಕು ಆದುದರಿಂದ ಮಾನ್ಯ ಆರ್ ವಿ ದೇಶಪಾಂಡೆಯವರೆ, ತಾವು ಹೇಳಿದಂತೆ ಕೋ-ಆಪರೇಟಿವ್ ಇಲಾಖೆ ಅನಾರೋಗ್ಯದಿಂದ ಇರುವುದಕ್ಕೆ ಈ ಸಮ್ಮಿಶ್ರ ಸರ್ಕಾರ ಬಿಡುವುದಿಲ್ಲ ಏಕೆಂದರೆ ಈ ಸಹಕಾರ ಸಂಸ್ಥೆಗಳು ರೈತರ ಉಸಿರಾಗಿದೆ ಅದರ ಉಸಿರು ಕಟ್ಟಿತ್ತೆಂದರೆ ರೈತನ ಸ್ಥಿತಿ ಹದಗೆಡುತ್ತದೆ ಅದಕ್ಕೋಸ್ಕರವೇ, ನಾವು ಉಳಿದಂತಹ ಸಾಲವನ್ನು ಮನ್ನಾ ಮಾಡುವಂಥಾದ್ದನ್ನು ಹೇಗೆ adjust ಮಾಡಬೇಕು, ಸಹಕಾರಿ ಸಂಘಗಳನ್ನು ಹೇಗೆ ಉಳಿಸಬೇಕೆಂಬ ಬಗ್ಗೆ ನಾವು ಯೋಚನೆ ಮಾಡುತ್ತೇವೆ ಏಕೆಂದು ನನಗೆ ಗೊತ್ತಿಲ್ಲ, ಕಳೆದ ಒಂದು ವರ್ಷದ ಇತಿಹಾಸವನ್ನು ನೋಡಿದಾಗ, ಬಜೆಟ್ ಮೇಲೆ ಚರ್ಚೆಯಾಗುತ್ತಿಲ್ಲ ನೀವು ಚರ್ಚೆ ಮಾಡಿ, ನಿಮ್ಮ ಸಲಹೆಗಳನ್ನೆಲ್ಲಾ ಕೊಡಿ ನೀವು ಸಲಹೆಗಳನ್ನೆಲ್ಲಾ ಕೊಟ್ಟಮೇಲೆ, ನಾನು ಉತ್ತರವನ್ನು ಕೊಡುವ ಕಾಲದಲ್ಲಿ ನಿಮ್ಮ ಒತ್ತಾಯ ಏನಿದೆ, ನೀವು ಯಾವ ಕಾರಣಕ್ಕಾಗಿ ಧರಣಿಗೆ ಕುಳಿತ್ತಿದ್ದೀರಿ, ಅದರ ಬಗ್ಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕುಳಿತು ಚಿಂತನೆ ಮಾಡುತ್ತೇವೆ ದಯಮಾಡಿ ತಾವು ಸಹಕಾರ ಕೊಟ್ಟು, ಉಳಿದಂತಹ ಕೆಲಸಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಯದಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಬಿ ಎಸ್ ಯಡಿಯೂರಪ್ಪನವರು ಹೇಳಿದ ಹಾಗೆ, ಸ್ವಾತಂತ್ರ್ಯ ಬಂದಾಗಿನಿಂದ

ಶೇ 4ರ ಬಡ್ಡಿಯಲ್ಲಿ ಸಾಲವನ್ನು ಕೊಟ್ಟಂತಹ ಸರ್ಕಾರ ನಮ್ಮದೆಂದು ಹೇಳಿದರು ಸ್ವಾತಂತ್ರ್ಯ ಬಂದಾಗಿನಿಂದ ಯಾವುದೇ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಡಿಸೆಂಬರ್ ತಿಂಗಳಲ್ಲಿ ಯಾವುದೇ ಸರ್ಕಾರ ಹೇಳಲಿಲ್ಲ ಬೆಂಗಳೂರಿನ ಸುತ್ತಮುತ್ತಲಿರುವ ಜಮೀನನ್ನು ಮಾರಿ, Commercial Bankನಲ್ಲಿರುವಂತಹ ಸಾಲವನ್ನು ಕೂಡ ಮನ್ನಾ ಮಾಡುತ್ತೇವೆಂದು ಹೇಳಿದಂಥ ಸರ್ಕಾರ, ಇವರು 25,000ರೂಪಾಯಿಗಳನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದೀರಿ ನೀವು ಶೇ 4ಗೇ ಬೆನ್ನು ತಟ್ಟಿಕೊಳ್ಳುವುದಲ್ಲ ಇವತ್ತು ನಿಜವಾಗಿಯೂ ನಿಮಗೆ ರೈತರ ಮೇಲೆ ಏನಾದರೂ ಕಾಳಜಿ ಇದ್ದರೆ, ಅವರ ಎಲ್ಲಾ ಸಾಲವನ್ನು ಮನ್ನಾ ಮಾಡಿ

ಅಧ್ಯಕ್ಷರು ಆಯಿತು, ಅವರು ಯೋಚನೆ ಮಾಡಬಾರದೇನು? ಅವರು ಯೋಚನೆ ಮಾಡಿ, ಅಧಿಕಾರಿಗಳೊಡನೆ ಚರ್ಚೆ ಮಾಡಿ, ಏನಾದರೂ ಮಾಡಬಾರದೇನು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ರೈತರ ಮೇಲೆ ಕಳಕಳಿ ಇರುವುದಕ್ಕೇ, ಅವರ ಸಾಲವನ್ನು ಮನ್ನಾ ಮಾಡಿದೆ

ಅಧ್ಯಕ್ಷರು ಮಾನ್ಯ ಶ್ರೀನಿವಾಸಗೌಡರೆ, ಆಯಿತು ಕುಳಿತುಕೊಳ್ಳಿ ಮಾನ್ಯ ಮಂತ್ರಿಯವರು ಅಭಿಪ್ರಾಯವನ್ನು ಹೇಳಿದ್ದಾರೆ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ

ಶ್ರೀ ಕೆ ಶ್ರೀನಿವಾಸ ಗೌಡ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಆರ್ ವಿ ದೇಶಪಾಂಡೆಯವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ, ಸಹಕಾರ ಸಂಘಗಳ ಪರಿಸ್ಥಿತಿ ನಿಮಗೂ ಗೊತ್ತಿದೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಉಪ ಮುಖ್ಯಮಂತ್ರಿಯವರು ಸಿಟ್ಟಾಗಬಾರದು

ಶ್ರೀ ಬಿ ಎಸ್ ಯಡಿಯೂರಪ್ಪ ಸಿಟ್ಟಿಲ್ಲ

ಶ್ರೀ ಆರ್ ವಿ ದೇಶಪಾಂಡೆ ನೀವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ, ಇಲ್ಲವೆಂದು ಹೇಳಲಿಲ್ಲ ಮಾನ್ಯ ಧರ್ಮಸಿಂಗ್‌ರವರ ಸರ್ಕಾರವಿದ್ದಾಗ 1,200ಕೋಟಿ ರೂಪಾಯಿಗಳನ್ನು ಬಡ್ಡಿ ರಿಯಾಯಿತಿಯಾಗಿ ಕೊಟ್ಟೆವು ಹನ್ನೊಂದು ಲಕ್ಷ ಜನರಿಗೆ ಸಹಾಯವಾಯಿತು ನೀವು ಈಗ ಏನು ಮಾಡುತ್ತಿದ್ದೀರಲ್ಲಾ, ಆ ಕೆಲಸ ಹೇಳಿದ್ದು ಒಂದು, ಮಾಡಿದ್ದು ಒಂದಾಗಿದೆ ಹಾಗಾಗಿ ನೀವು ಏನೆಂದು ಹೇಳಿದ್ದೀರಿ, ಆ ಪ್ರಕಾರ ನಡೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ

ಶ್ರೀ ಬಿ ಎಸ್ ಯಡಿಯೂರಪ್ಪ. ದೇಶದ ಇತಿಹಾಸದಲ್ಲಿ, ಈ ಸಮ್ಮಿಶ್ರ ಸರ್ಕಾರ ರೈತರಿಗೆ ಏನು ಕೊಡುಗೆಯನ್ನು ಕೊಟ್ಟಿದೆಯೆಂಬುದನ್ನು ಮುಂದಿನ ಪೀಳಿಗೆ ಮರೆಯುವುದಿಲ್ಲ ಆ ರೀತಿ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ

ಅಧ್ಯಕ್ಷರು ಮಾನ್ಯ ಶ್ರೀನಿವಾಸ ಗೌಡರೆ, ದಯಮಡಿ ಕುಳಿತುಕೊಳ್ಳಿ ಈಗ ಪ್ರಶ್ನೋತ್ತರ

(ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ನಿನ್ನೆ ಏನು ವಚನ ಕೊಟ್ಟಿದಿರಿ, ಸುಮ್ಮನೆ ನಿಂತಿರುತ್ತೇನೆಂದು ಈಗ ಅದಕ್ಕೆ ವಿರುದ್ಧವಾಗಿ ಹೋಗುತ್ತಿದ್ದೀರಿ . ಈಗ ಪ್ರಶ್ನೋತ್ತರ ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್‌ರವರು ಪ್ರಶ್ನೆಯನ್ನು ಕೇಳಬೇಕು

ಶ್ರೀ ಧರ್ಮಸಿಂಗ್ – ಮಾನ್ಯ ಅಧ್ಯಕ್ಷರೆ, ಈ ರೀತಿ ಸಭೆಯನ್ನು ನಡೆಸುವಂಥಾದ್ದು ಪದ್ದತಿಯಲ್ಲ ನಿನ್ನೆ ದಿವಸ ತಾವು ಸದನದಲ್ಲಿ ಇರಲಿಲ್ಲ, ಮಾನ್ಯ ಉಪಾಧ್ಯಕ್ಷರು ಇದ್ದರು ರೈತರ ಸಾಲಮನ್ನಾ ಬಗ್ಗೆ ಇತ್ಯರ್ಥವಾಗಬೇಕು ಈಗಾಗಲೇ ಅವರ ಶಾಸಕಾಂಗ ಪಕ್ಷದ ಸಭೆಯಾಗಿದೆ ಇವತ್ತು ಮಾನ್ಯ ಎಂ ಪಿ ಪ್ರಕಾಶ್‌ರವರು ಹೇಳಬೇಕು

ಅಧ್ಯಕ್ಷರು ನಿನ್ನೆ ಅವರು ಉತ್ತರವನ್ನು ಕೊಟ್ಟಮೇಲೆ ಹೊರಗಡೆ ಹೋಗಿದ್ದೀರಿ, ನೀವು walkout ಮಾಡಿದ್ದೀರಿ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಈಗ ಅವಕಾಶವನ್ನು ಕೊಡಿ

ಅಧ್ಯಕ್ಷರು ಇವತ್ತು ಸಭೆಯ ಕಾರ್ಯಕಲಾಪಗಳನ್ನು ನಡೆಸಬಾರದೇನು?

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ರಾಜ್ಯದ ರೈತರಿಗೆ ಈ ಸರ್ಕಾರ ವಂಚನೆ ಮಾಡುತ್ತಿದ್ದಾರೆ 31ನೇ ತಾರೀಖು ಸಾಲ 25,30,50, ಸಾವಿರ ಎನ್ನುವಂಥಾ ರೀತಿಯಲ್ಲಿ ಅಲ್ಲ ಇದರ ಬಗ್ಗೆ ಸ್ಪಷ್ಟವಾದ ಉತ್ತರ ಬರಬೇಕು ಎಲ್ಲಾ ಸಹಕಾರಿ ಬ್ಯಾಂಕ್‌ಗಳು ದಿವಾಳಿಯಾಗಿ ಹೋಗಿವೆ

ಅಧ್ಯಕ್ಷರು ಈಗ ಉತ್ತರವನ್ನು ಕೊಟ್ಟಿದ್ದಾರಲ್ಲಾ

ಶ್ರೀ ಧರ್ಮಸಿಂಗ್ ಎಲ್ಲಿ ಉತ್ತರ ಕೊಟ್ಟಿದ್ದಾರೆ ಅವರು ಅದನ್ನೇ ಹೇಳುತ್ತಾರೆ ಅವರು ಉತ್ತರ ಕೊಟ್ಟಮೇಲೆ, ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿ

ಅಧ್ಯಕ್ಷರು ಅವರು ಉತ್ತರವನ್ನು ಕೊಟ್ಟಿದ್ದಾರೆ ಮಾನ್ಯ ಎಸ್ ಎಸ್ ಪಾಟೀಲ್‌ರವರೆ, ಈ ರೀತಿ ಅವಕಾಶಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್. ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಿಲ್ಲ, ನಾನು ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು ಈಗ ಅಜೆಂಡಾ ಪ್ರಕಾರ ಹಂತ ಹಂತವಾಗಿ ಹೋಗಬೇಕಾಗುತ್ತದೆ ಮೊದಲು ಪ್ರಶ್ನೋತ್ತರ ಇದೆ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, 31ನೇ ತಾರೀಖಿಗೆ ರೈತರು ಸಾಲ ಪಾವತಿ ಮಾಡಬೇಕೆಂದು ಹೇಳುತ್ತಾರೆ ಮಹತ್ವದ ಪ್ರಶ್ನೆಯನ್ನು ಕೇಳಬಾರದೇ? ಮತ್ತೆ ಎಲ್ಲಿ ಹೇಳಬೇಕು? ಸದನವನ್ನು ಏಕೆ ಕರೆಸುತ್ತೀರಿ? ಇದರ ಬಗ್ಗೆ ಸದನದಲ್ಲಿ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ಕೇಳಬಾರದೇ?

ಅಧ್ಯಕ್ಷರು ಸದನವನ್ನು ಕರೆಸುವುದು ಏಕೆಂದರೆ, ವಿಷಯಗಳು ಚರ್ಚೆಯಾಗಲಿ ಎಂದು ಇದರ ಬಗ್ಗೆ ಚರ್ಚೆಯಾಗಿದೆ, ಸರ್ಕಾರದವರು statement ಮಾಡಿದ್ದಾರೆ ನೀವು ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ ಈಗ ಆ ವಿಚಾರವನ್ನು ಮಾನ್ಯ ಆರ್ ವಿ ದೇಶಪಾಂಡೆಯವರು ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ

ಶ್ರೀ ಧರ್ಮಸಿಂಗ್ ಮಾನ್ಯ ಬಿ ಎಸ್ ಯಡಿಯೂರಪ್ಪನವರು ಹೇಳುತ್ತಾರೆ, ನನ್ನ ಬಜೆಟ್‌ನ ಬಗ್ಗೆ ಎಲ್ಲಾ ಕಡೆಗಳಲ್ಲೂ ಮನ ಮನೆ ಮಾತಾಗುತ್ತಿದೆ ಮನೆಯಲ್ಲಿ ಏನು ಮಾತು ಇದೆ, ಏನು ಗೋಳು ಇದೆ, ಎಷ್ಟು ತೊಂದರೆಯಾಗಿದೆಯೆಂಬುದು ಅವರಿಗೆ ಗೊತ್ತಿಲ್ಲ ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಲಿ

ಅಧ್ಯಕ್ಷರು ಉತ್ತರ ಕೊಟ್ಟರಲ್ಲಾ

ಶ್ರೀ ಧರ್ಮಸಿಂಗ್ ಎಲ್ಲಿ ಕೊಟ್ಟರು?

ಅಧ್ಯಕ್ಷರು ಈಗ ಕೊಟ್ಟರು, ನೀವು ಆಗ ಸದನಕ್ಕೆ ಇನ್ನು ಬಂದಿರಲಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ ಎಸ್ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು ಈಗ ಅವರು 1,950ಕೋಟಿ ರೂಪಾಯಿಗಳೆಂದು ಏನು ಹೇಳಿದ್ದಾರೆ, ಅದರಲ್ಲೇ 25,000 ರೂಪಾಯಿಗಳು ಎಲ್ಲಾ ರೈತರ ಸಾಲ ಮನ್ನಾ ಆಗುತ್ತದೆ ಆ ಅಂಕೆ ಸಂಖ್ಯೆಯನ್ನು ದಯವಿಟ್ಟು ತರಿಸಿ ನಾನು ತರಿಸಿದ ಅಂಕೆ ಸಂಖ್ಯೆಗಳ ಪ್ರಕಾರ 1,950 ಕೋಟಿ ರೂಪಾಯಿಗಳಲ್ಲಿ ನಾವು ಈಗ ಏನು ಬೇಡಿಕೆಯನ್ನು ಇಟ್ಟಿದ್ದೇವೆ ಅದೆಲ್ಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿದೆ, ಇದು ಹೆಚ್ಚು ಆಗುವುದಿಲ್ಲ

ಶ್ರೀ ಸಿ ಎಸ್ ಪುಟ್ಟೇಗೌಡ ಮಾನ್ಯ ಎಸ್ ಎಸ್ ಪಾಟೀಲ್‌ರವರೆ, ಅದನ್ನು ಯೋಚನೆ ಮಾಡುತ್ತಾರೆ ಅವರು ನೀವು ಹೇಳಿರುವುದನ್ನು ಗಂಭೀರವಾಗಿ ಪರಿಗಣನೆ ಮಾಡುತ್ತೇವೆಂದು ಹೇಳಿದ್ದಾರೆ ಎಲ್ಲೋ ಒಂದು ಕಡೆ ರೈತರಿಗೆ ಸಾಲ ಮನ್ನಾ

ಮಾಡಿದ್ದು ಬಹಳ ಸಂಕಟ ಬಂದಿದೆಯೆಂದು ಕಾಣುತ್ತದೆ ದಯಮಾಡಿ ಅವರಿಗೆ ಅವಕಾಶವನ್ನು ಕೊಡಿ

ಅಧ್ಯಕ್ಷರು ಈಗ ಮತ್ತೆ ಅವರು ಅದನ್ನೇ ಹೇಳುತ್ತಾರೆ ನೀವು ಮತ್ತೆ ಅದನ್ನೇ ಹೇಳುತ್ತೀರಿ ಅವರು ಅದೇ ಹೇಳುತ್ತಾರೆಂದರೆ ಮತ್ತೆ ಏನು? ಏನಾದರೂ ಸದನದಲ್ಲಿ ಕಲಾಪಗಳು ನಡೆಯಬೇಕಲ್ಲಾ

(ಗೊಂದಲ)

(ಈ ಹಂತದಲ್ಲಿ ಶ್ರೀ ಎಸ್ ರಾಜೇಂದ್ರನ್‌ರವರು ಸದನದ ಬಾವಿಗೆ ಧರಣಿ ಮಾಡಲು ಬಂದರು)

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್ ಎಸ್ ಪಾಟೀಲ್‌ರವರು ಪ್ರಸ್ತಾಪ ಮಾಡಿದ ವಿಚಾರದಲ್ಲಿ ಮಾಡಲು ಸಾಧ್ಯವಾಗುತ್ತದೆಂದು ಇದ್ದರೆ, ಅದರ ಬಗ್ಗೆಯೂ ಚರ್ಚೆ ಮಾಡುತ್ತೇವೆ ತಮ್ಮ ಸಲಹೆಯನ್ನೂ ತೆಗೆದುಕೊಳ್ಳುತ್ತೇವೆ, ಬೇರೆಯವರ ಸಲಹೆಗಳನ್ನೂ ತೆಗೆದುಕೊಳ್ಳುತ್ತೇವೆ ಸರ್ಕಾರ ಹೀಗೆ ಉತ್ತರ ಕೊಡಬೇಕು, ಹೀಗೆ ನಡೆದುಕೊಳ್ಳಬೇಕು, ಎನ್ನುವ ಒತ್ತಾಯ ಇಲ್ಲಿಯವರೆಗೂ ಎಲ್ಲೂ ನಡೆದಿಲ್ಲ ತಾವೇನೋ ಒತ್ತಾಯ ಮಾಡುತ್ತೀರಿ, ಸರ್ಕಾರ ತನ್ನದೇ ಆದಂತಹ ಕೆಲವು ಇತಿಮಿತಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ ನಾವು ಈಗ ಅವರಲ್ಲಿ ವಿನಂತಿಯನ್ನು ಮಾಡಿಕೊಂಡಿದ್ದೇವೆ ದಯವಿಟ್ಟು ತಾವು ಸದನದ ಬಾವಿಯಿಂದ ತಮ್ಮ ಆಸನಗಳಿಗೆ ಹೋಗಿ ಎಂದು ಹೇಳಿದ್ದೇವೆ ಒಂದು ವೇಳೆ ಅವರು ಅದನ್ನು ಒಪ್ಪಿ ಮಾಡಿದರೆ ಸಂತೋಷ ಅದಕ್ಕಿಂತ ಹೆಚ್ಚಿನ ಸಂತೋಷ ಮತ್ತೊಂದು ಇಲ್ಲ ಒಂದು ವೇಳೆ ಅಕಸ್ಮಾತ್ ಆಗಲಿಲ್ಲವೆಂದರೂ ಕೂಡ, ಇಂತಹ ಅನೇಕ ಸಂದರ್ಭಗಳು ಬಂದಾಗ ತಾವು ತೀರ್ಮಾನಗಳನ್ನು ಕೊಟ್ಟಿದ್ದೀರಿ House is in order, let the deliberations continue ಎಂದು ಹೇಳಿದ್ದೀರಿ ಆದ್ದರಿಂದ ಈಗ ಎಲ್ಲಕ್ಕಿಂತಲೂ ಮುಖ್ಯವಾಗಿರುವಂಥಾದ್ದು ಪ್ರಶ್ನೋತ್ತರ ಅವಧಿ ಪ್ರಶ್ನೆಯನ್ನು ಕೇಳಿರುವವರು ಅವಕಾಶದಿಂದ ವಂಚಿತರಾಗಬಾರದು ಆದುದರಿಂದ ತಾವು ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ ಅವರನ್ನು ಪ್ರಶ್ನೆ ಕೇಳಲು ಕರೆದಿದ್ದೀರಿ ತಾವು ಪ್ರಶ್ನೋತ್ತರವನ್ನು ಮುಂದುವರೆಸಬೇಕು

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಅದೇ ತರಹ ಮಾಡಬೇಕು, ಇದೇ ತರಹ ಮಾಡಬೇಕು ಎಂದು, you can't dictate the Government ಎಂದು, ಮಾನ್ಯ ಪ್ರಕಾಶ್‌ರವರು ಹೇಳಿದರು ಶಾಸನ ಸಭೆಯಲ್ಲಿ ಇದರ ಬಗ್ಗೆ ಬಹಳ ಗಂಭೀರವಾದ ಚರ್ಚೆ ಯಾಗಿದೆ ಎಲ್ಲಾ ಕಡೆಗಳಲ್ಲೂ ಸಹಕಾರಿ ಬ್ಯಾಂಕುಗಳು ದಿವಾಳಿಯಾಗಿವೆ

ಇದನ್ನು you have to take up ಎಂದು ಅವರ ಸಂಪುಟದಲ್ಲಿರತಕ್ಕಂಥ ಮಂತ್ರಿಗಳೇ ನನಗೆ phone ಮಾಡಿ ಹೇಳಿದ್ದಾರೆ ಇಲ್ಲಿ ಇನ್ನೂ ಬಜೆಟ್ discussion ಪ್ರಾರಂಭವೇ ಆಗಿಲ್ಲ ಆದರೆ ಮಾನ್ಯ ಉಪ ಮುಖ್ಯಮಂತ್ರಿಗಳು, ನನ್ನ ಬಜೆಟ್‌ನ ಬಗ್ಗೆ ಮನೆ ಮನೆಯಲ್ಲಿ ಮಾತುಕತೆಯಾಗಬೇಕು ಎನ್ನುವ ರೀತಿಯಲ್ಲಿ ರಿಯಾಯಿತಿಗಳನ್ನು ಘೋಷಣೆ ಮಾಡುತ್ತಿದ್ದಾರೆ 50 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರಿಗೆ 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ ಅದನ್ನು ಘೋಷಣೆ ಮಾಡಿ ಎಂದು ನಾವು ಹೇಳಿದ್ದೇವೇನು? ನಿಮಗೆ ಇತಿಮಿತಿಗಳಿದ್ದರೆ ಅಷ್ಟಕ್ಕೆ ನೀವು ಬದ್ಧರಾಗಬೇಕಾಗಿತ್ತು ಆದರೆ ಇವತ್ತು ನಿಮ್ಮ limitation ಗಳಿಗಿಂತ ನೀವು ಮುಂದೆ ಹೋಗುತ್ತಿದ್ದೀರಿ ಆದರೆ ಸದನ ನಡೆಯತಕ್ಕಂಥ ಕಾಲದಲ್ಲಿ ಒಂದು important decision, ಮಹತ್ವವಾದಂಥ ನಿರ್ಣಯ, ರಾಜ್ಯದಲ್ಲಿರತಕ್ಕಂಥ ರೈತರ, ಬಡವರ ಬಗ್ಗೆ ಚಿಂತನೆ ಮಾಡತಕ್ಕಂಥ ರೀತಿಯಲ್ಲಿ ನೀವು ಮಾಡಬೇಕಾದರೆ, ನಿಮ್ಮ ಸ್ಪಷ್ಟವಾದಂಥ ನಿಲುವನ್ನು ಹೇಳಲೇಬೇಕಲ್ಲವೇ? ಆ ನಿಲುವಿಗೆ ನೀವು ಬರದಿದ್ದರೆ, ವಿರೋಧ ಪಕ್ಷದಲ್ಲಿರುವ ನಾವು ಅದನ್ನು ಕೇಳಲೇಬೇಕಾಗುತ್ತದೆ, ಅದರಂತೆ ಕೇಳುತ್ತಿದ್ದೇವೆ ಕಲಾಪಗಳಿಗೆ ಅಡ್ಡಿ ಪಡಿಸಬೇಕು ಎನ್ನತಕ್ಕಂಥಾದ್ದೇನೂ ನಮಗಿಲ್ಲ ಎರಡೂವರೆ ಗಂಟೆಗಳ ಕಾಲ ಮಾನ್ಯ ಯಡಿಯೂರಪ್ಪನವರು budget speechಅನ್ನು ಮಾಡಿದ್ದಾರೆ ಅದಕ್ಕೆ ಒಂದೇ ಕಡೆಯವರು ಮೇಜು ಗುದ್ದಿದರು ನಾವೇನೂ ಅದನ್ನು ಮಾಡಲಿಲ್ಲ, ನಮ್ಮ ಕಡೆಯವರ್‍ಯಾರೂ ಕೂಡ ಚಪ್ಪಾಳೆ ಬಾರಿಸಲಿಲ್ಲ, ಅದು ಒಂದೇ ಕಡೆಯಿಂದ ಆಯಿತು ಅವರು ಹೇಳಿದುದನ್ನು ನಾವು ಎರಡೂವರೆ ತಾಸು ಕೇಳಿದ್ದೇವೆ ಆದರೆ, ನಿನ್ನೆ ಅವರು ಘೋಷಣೆ ಮಾಡಿದುದನ್ನು ನಾವು ಕೇಳಬೇಕಾಗುತ್ತದೆ, ಅದಕ್ಕೆ ಅವರು ಉತ್ತರ ಕೊಡಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ – ನಾನೇನು ಹೇಳಿದೆ ಎಂದರೆ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿ ಅನುಭವ ಇರತಕ್ಕಂಥ ಹಿರಿಯರಾದ ಧರ್ಮಸಿಂಗ್‌ರವರು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತಿದ್ದಾರೆ ನಾನೂ ಹತ್ತಾರು ವರ್ಷಗಳ ಕಾಲ, ವಿರೋಧ ಪಕ್ಷದಲ್ಲಿ, ನಿಮ್ಮ ಜಾಗದಲ್ಲಿ ಕುಳಿತುಕೊಂಡು ಹೋರಾಟ ಮಾಡಿದ್ದೇನೆ, walk out ಮಾಡಿದ್ದೇನೆ, ಧರಣಿ ಮಾಡಿದ್ದೇನೆ Democratic systemನಲ್ಲಿ ಅವುಗಳನ್ನು ನಾವು ಮಾಡುವುದು ಪದ್ಧತಿ ಆದರೆ ನಾನು ಹೇಳುವುದೇನೆಂದರೆ, ಸಮ್ಮಿಶ್ರ ಸರ್ಕಾರ ಬಂದ ಮೇಲೆ ಮನೆಮನೆಯಲ್ಲಿ ಏನು ವಿಷಯ ಚರ್ಚೆಯಾಗುತ್ತಿದೆ ಎಂದರೆ, ನಾವು ಅಧಿಕಾರಕ್ಕೆ ಬಂದ ಮೇಲೆ

"ಭಾಗ್ಯಲಕ್ಷ್ಮಿ" ಯೋಜನೆಯನ್ನು ತಂದು, ಬಡವರ ಮನೆಯ ಹೆಣ್ಣುಮಗುವಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟೆವು 100 ರೂಪಾಯಿಗಳ ವೃದ್ಧಾಪ್ಯ ವೇತನ ತೆಗೆದುಕೊಳ್ಳುತ್ತಿದ್ದವರಿಗೆ 400 ರೂಪಾಯಿಗಳನ್ನು ಕೊಡುವ ಹಾಗೆ ಮಾಡಿದೆವು ಬಡವರ ಮನೆಯಲ್ಲಿರುವಂಥ ಹೆಣ್ಣುಮಗಳಿಗೆ ಸೈಕಲ್ ಕೊಟ್ಟೆವು ಗಂಡು ಮಗುವಿಗೂ ಸೈಕಲ್ಲನ್ನು ಕೊಟ್ಟಿದ್ದೇವೆ, 4% ಬಡ್ಡಿದರದಲ್ಲಿ ಸಾಲ ಕೊಟ್ಟೆವು ಇವತ್ತು 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದೇವೆ ಈ ರೀತಿಯ ಹತ್ತು ಹಲವು ಯೋಜನೆಗಳನ್ನು ಮಾಡಿದ್ದೇವೆ ಈ ಸಂಗತಿಗಳು ಮನೆಮನೆಯಲ್ಲಿ ಚರ್ಚೆಯಾಗುತ್ತಿವೆ ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ ದುಡ್ಡು ಎಲ್ಲಿಂದ ಬಂತು? ಕಾಂಗ್ರೆಸ್‌ನವರು ಇದ್ದಾಗ ಬಂದ ದುಡ್ಡು ಎಲ್ಲಿ ಹೋಗುತ್ತಿತ್ತು ಎಂದು ಚರ್ಚೆಯಾಗುತ್ತಿದೆ ಎಂದು ನಾನು ಹೇಳಿದನೇ ಹೊರತು, ನಾನು ನಿಮ್ಮನ್ನು ಟೀಕೆ ಮಾಡಲಿಲ್ಲ ಇನ್ನು, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ವಿನಂತಿ ಮಾಡುವಂಥಾದ್ದು ಏನೆಂದರೆ, ನೀವು ಕೇಳಿದಂಥ ಬೇಡಿಕೆ ಬಗ್ಗೆ ನಾವು ಚರ್ಚೆ ಮಾಡುತ್ತೇವೆ, ಅವಕಾಶ ಕೊಡಿ, ಉಳಿದಂಥ ಕಾರ್ಯಕಲಾಪಗಳನ್ನು ನಡಸಲು ಸಹಕಾರ ಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಆರಗ ಜ್ಞಾನೇಂದ್ರ, ತಾವು ಬಾವಿಯಿಂದ ಹೊರಗೆ ಬರುವುದು ಒಳ್ಳೆಯದು

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಉತ್ತರ ಕೊಡುವಾಗ ಅದನ್ನು ಹೇಳುತ್ತೇನೆ, ಈಗ ನೀವು ನಿಮ್ಮ ಸ್ಥಾನಕ್ಕೆ ಬನ್ನಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪ ಸಾಹೇಬರದು ಜಂಬ ಕೊಚ್ಚಿಕೊಳ್ಳುವುದು ಬಿಟ್ಟರೆ ಬೇರೆ ಏನೂ ಇಲ್ಲ ನಾವು ತಪ್ಪು ಮಾಡಿದ್ದರೆ, Auditor General, ಕೇಂದ್ರ ಸರ್ಕಾರದ Planning Commission, Finance Commissionನವರು, R B Iನವರು, NABARDನವರು Certificate ಕೊಡುತ್ತಿದ್ದರೇ? ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಒಳ್ಳೆಯ financial management ಮಾಡಿದ್ದಾರೆ ಎನ್ನತಕ್ಕಂಥ certificate ಕೊಟ್ಟರಲ್ಲ, ಅದೇ certificateಅನ್ನು ನೀವು ಅಧಿಕಾರಕ್ಕೆ ಬಂದ 3 ತಿಂಗಳಲ್ಲಿ ಹಣೆ ಮೇಲೆ ಹಚ್ಚಿಕೊಂಡು, ನಮ್ಮ ಸರ್ಕಾರ ಹೀಗಿದೆ ಎಂದು ಓಡಾಡಿದಿರಿ ಒಂದು ವರ್ಷದಲ್ಲೇ ಬೆಳೆ ಬರುವುದಿಲ್ಲ, harvest ಮಾಡುವುದಕ್ಕಾಗುವುದಿಲ್ಲ ಆದರೆ ಇವರು ಒಂದೇ ವರ್ಷದಲ್ಲಿ ನೀರಾವರಿ ಮಾಡಿದರಂತೆ, ಒಂದೇ ವರ್ಷದಲ್ಲಿ ಬೆಳೆ ಬಂತಂತೆ, ಒಂದೇ ವರ್ಷದಲ್ಲಿ ದುಡ್ಡು

ಬಂತಂತೆ, ಅದನ್ನು ಮನೆಮನೆಯಲ್ಲಿ ಮಾತನಾಡುತ್ತಾರಂತೆ ಇದೇನು ಮಾಯಾಮಂತ್ರವೇ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಎರಡನೆಯದಾಗಿ, ಕಾಂಗ್ರೆಸ್ ಪಕ್ಷವಿದ್ದಾಗ ಬಂದ ದುಡ್ಡು ಎಲ್ಲಿ ಹೋಯಿತೆಂದು ಜನ ಕೇಳುತ್ತಿದ್ದಾರೆಂದು ಹೇಳಿದರು ದುಡ್ಡು ಎಲ್ಲೆಲ್ಲಿಗೆ ಹೋಗಿದೆ, ಎಲ್ಲೆಲ್ಲಿ ಬಂದಿದೆ ಎನ್ನುವುದನ್ನು ನೋಡುವುದಕ್ಕೇ ನೀವು Public Accounts Committeeಯಲ್ಲಿ ಅದರ ಅಧ್ಯಕ್ಷರಾಗಿ ಇದ್ದದ್ದು "ಹಿಂದೆ ಏನನ್ನೂ ಮಾಡಿಲ್ಲ, ನಾವು ಐತಿಹಾಸಿಕ ನಿರ್ಣಯಗಳನ್ನು ಮಾಡಿದ್ದೇವೆ" ಎಂದು ನೀವು ಹೇಳಿಕೊಳ್ಳುವುದು ಆಗುತ್ತಿದೆ ಏನೆಂದರೆ, ಜೆ ಡಿ (ಎಸ್)ನವರು ಇದು ನಮ್ಮ ಕೂಸು ಎಂದು ಹೇಳುತ್ತಿದ್ದರು ಇವರು ನಮ್ಮ ಕೂಸು ಎಂದು ಹೇಳುತ್ತಿದ್ದರು ಅದಕ್ಕೆ ಅವರು, ಇಲ್ಲ,ಇಲ್ಲ, ಅದು ನಮ್ಮ ಕೂಸು, ಹೆಗಡೆಯವರಿದ್ದಾಗ ನಾವೇ ಮಾಡಿದ ಕೂಸು ಅದು, ನಮ್ಮ ಒತ್ತಾಯದಿಂದಲೇ ಆಗಿದ್ದು, ನಾವು 18 ಜನರು ಸೇರಿ ಮಾಡಿದ್ದು ಎಂದು ಅವರು ಹೇಳಿಕೊಳ್ಳುವುದು ಆಗುತ್ತಿದೆ

ಅಧ್ಯಕ್ಷರು ಕೂಸು ಯಾರದ್ದು ಎಂದು ಪತ್ತೆ ಹಚ್ಚುವ ಕೆಲಸವನ್ನು ಈಗ ನೀವು ಮಾಡುತ್ತಿರುವಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ ಅದರ ಬಗ್ಗೆ ಒಂದು investigation ಮಾಡಿಸಿ ಅದು ನಿಜವಾಗಿ ಮಾನ್ಯ ಯಡಿಯೂರಪ್ಪನವರ ಕೂಸೋ ಅಥವಾ ಹೆಗಡೆಯವರ ಕೂಸೋ ಎಂದು investigation ಮಾಡಿಸಿ ಆಗ ಸಮ್ಮಿಶ್ರ ಸರ್ಕಾರವಿರಲಿಲ್ಲ! ನೀವು ಅವರನ್ನು ಪ್ರೀತಿ ಮಾಡುತ್ತಿದ್ದಿರೇ ಹೊರತಾಗಿ ಅವರು ನಿಮ್ಮನ್ನು ಪ್ರೀತಿ ಮಾಡುತ್ತಿರಲಿಲ್ಲ 1,200 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಆಗಿಲ್ಲವೇ? ಅದರಿಂದ ರೈತರಿಗೆ ಅನುಕೂಲವಾಗಿಲ್ಲವೇ? ಅಲ್ಲದೇ, ಹಿಂದೆ ಎಸ್ ಎಂ ಕೃಷ್ಣಾರವರ ಸರ್ಕಾರವಿದ್ದಾಗ ವಿದ್ಯುತ್ ಪಂಪುಸೆಟ್ಟುಗಳ ಮೇಲೆ ರಿಯಾಯಿತಿಯನ್ನು ಕೊಟ್ಟು, ರೈತರ ವಿದ್ಯುತ್ ಬಾಕಿಯನ್ನೂ ಮನ್ನಾ ಮಾಡಿ, ರೈತರಿಗೆ ಪುಕ್ಕಟೆಯಾಗಿ ವಿದ್ಯುತ್ತನ್ನು ಕೊಡಲಿಲ್ಲವೇ? ಇವೆಲ್ಲ ರೈತರಿಗೆ ಅನುಕೂಲ ವಾಗಲಿಲ್ಲವೇ?

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಮಗೆ ಒಂದು ಅವಕಾಶ ಮಾಡಿಕೊಡಿ ಅವರದ್ದು ಯಾವತ್ತೂ ಇದ್ದದ್ದೇ ಸಾಲ ಮನ್ನಾ ಮಾಡುವುದು ನಮ್ಮ ಸರ್ಕಾರ ಅದರ ಬಗ್ಗೆ ಚರ್ಚೆಗೆ ಅವರಿಗೆ ಶೂನ್ಯವೇಳೆಯಲ್ಲಿ

ಅವಕಾಶ ಕೊಡಿ, ಅವರು ಚರ್ಚೆ ಮಾಡಲಿ ಈಗ ನಮ್ಮಂಥ ಯುವಕರಿಗೆ ಅವಕಾಶ ಮಾಡಿಕೊಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇವರು ಕೊಟ್ಟಂಥ ಸೈಕಲ್ ಈಗ ರಿಪೇರಿಗೆ ಹೋಗಿದೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಸೈಕಲುಗಳು ರಿಪೇರಿಗೆ ಹೋಗಿವೆ ಎನ್ನುವುದು ಒಂದು ಆಕ್ಷೇಪಣೆಯೇ? ಇದೂ ಒಂದು ಮಾತೇ? ಅದನ್ನು ಉಪಯೋಗ ಮಾಡುತ್ತಿದ್ದರೆ ರಿಪೇರಿಗೆ ಹೋಗದೇ ಇನ್ನೇನಾಗುತದೆ ಸೈಕಲ್ ಕೊಟ್ಟಿರುವುದು ಪೂಜೆ ಮಾಡುವುದಕ್ಕೇನು?

ಅಧ್ಯಕ್ಷರು ಇರಲಿ ಬಿಡಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಕೊಡಿ ಎಂದು ನಾನು ಎಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈಗ agenda ಪ್ರಕಾರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ ಇದೇ ರೀತಿ ಹೋದರೆ ಹೇಗೆ? ನಿನ್ನೆಯೂ ಇದೇ ರೀತಿ ಆಗಿದೆ ಪ್ರತಿದಿನವೂ ಇದೇ ರೀತಿಯಾದರೆ ಹೇಗೆ?

ಶ್ರೀ ಹೆಚ್ ಡಿ ಬಸವರಾಜು ರಾಜ್ಯದ ಸಮಸ್ಯೆಗಳು ಬೇಕಾದಷ್ಟು ಇವೆ, ಕ್ಷೇತ್ರದ ಸಮಸ್ಯೆಗಳು ಬೇಕಾದಷ್ಟು ಇವೆ, ಅವುಗಳನ್ನು ಚರ್ಚೆ ಮಾಡಬೇಕಾಗಿದೆ ಅನೇಕ ಪ್ರಶ್ನೆಗಳನ್ನೂ ಕೇಳೀದ್ದೇವೆ

ಅಧ್ಯಕ್ಷರು ಆಯಿತು, ಆಯಿತು

ಶ್ರೀ ಬಿ ಎಸ್ ಯಡಿಯೂರಪ್ಪ ಇವರ ಸರ್ಕಾರವಿದ್ದಾಗ ಪಂಚೆ ಸೀರೆ ಕೊಡುತ್ತಿದ್ದರು ನಾವು ಸೈಕಲ್ ಕೊಡುತ್ತಿದ್ದೇವೆ ಅಷ್ಟೇ ವ್ಯತ್ಯಾಸ ಹಾಗಾಗಿ ಇವತ್ತು ಮನೆಮನೆಗಳಲ್ಲಿ ಚರ್ಚೆಯಾಗುತ್ತಿದೆ ನಾನು ಹೇಳಿದ್ದನ್ನು ನೀವು ಕೇಳಿಸಿಕೊಳ್ಳಲಿಲ್ಲ, ನೀವು ಇದ್ದಾಗಲೂ ಒಳ್ಳೆಯ ಕೆಲಸ ಮಾಡಿದ್ದೀರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾವು ಪಂಚೆ ಸೀರೆಯನ್ನು ಉಟ್ಟುಕೊಳ್ಳಲು ಕೊಟ್ಟೆವು ಆದರೆ ಅವರು ಮುರುಕು ಸೈಕಲನ್ನು ಕೊಟ್ಟಿದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಜನರು ಎಷ್ಟೊಂದು ಆನಂದವಾಗಿ, ಈ ಸಮ್ಮಿಶ್ರ ಸರ್ಕಾರದಲ್ಲಿ ನಾವು ಬದುಕುತ್ತಿದ್ದೇವೆ, ಯಾವುದೇ ಸಮಸ್ಯೆಯಿಲ್ಲದೆ ಬದುಕುತ್ತಿದ್ದೇವೆ ಎಂದು ಹೇಳುತ್ತಿರುವುದನ್ನು ಒಂದು ಸರ್ವೆ ಮಾಡಿಸಿಬಿಡಿ ಕಾಂಗ್ರೆಸ್ಸಿನ ಒಂದು ಸಮಿತಿ ಮಾಡಿಸಿ ಅದರಿಂದ ಸರ್ವೆ ಮಾಡಿಸಿ ಇನ್ನೂ 20 ವರ್ಷ ಈ ಸಮ್ಮಿಶ್ರ ಸರ್ಕಾರ ಇರಬೇಕು ಎಂದು ಮನೆಮನೆಯಲ್ಲಿ ಮಾತನಾಡುತ್ತಿದ್ದಾರೆ 20 ವರ್ಷ ಇದೇ ಸರ್ಕಾರ ಮುಂದುವರೆಯಬೇಕು, ಕಾಂಗ್ರೆಸ್ ಸರ್ಕಾರವಿದ್ದಾಗ ಬರುತ್ತಿದ್ದಂಥ ಹಣ ಎಲ್ಲಿ ಹೋಗುತ್ತಿತ್ತು, ಇವರು ಬಂದ ಮೇಲೆ ಒಳ್ಳೆಯ ಕೆಲಸ ಮಾಡಿದ್ದಾರೆ,

ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು, ಮಹಿಳೆಯರು ಇಷ್ಟೊಂದು ನೆಮ್ಮದಿಯಿಂದ ಇರುವಂಥ ಒಳ್ಳೆಯ ಕಾಲ ಹಿಂದೆ ಇರಲಿಲ್ಲ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಹಿಂದೆ ಕಂಡಿದ್ದಂಥ ರಾಮರಾಜ್ಯದ ಕನಸು ನನಸಾಗುತ್ತಿದೆ

ಶ್ರೀ ಆರ್ ವಿ ದೇಶಪಾಂಡೆ ಸ್ತ್ರೀಶಕ್ತಿ ಕಾರ್ಯಕ್ರಮವನ್ನು ಮುಚ್ಚೇಬಿಟ್ಟಿರಲ್ಲ ಈ ಕಾರ್ಯಕ್ರಮಕ್ಕಾಗಿ ಏನು ಕೊಟ್ಟಿದ್ದೀರಿ? ಆ ಎಲ್ಲ ಮಹಿಳೆಯರು ನಿಮ್ಮನ್ನು ಬಯ್ಯುತ್ತಿದ್ದಾರೆ ಒಳ್ಳೆಯ, ಆದರ್ಶವಾದ ಸ್ತ್ರೀಶಕ್ತಿ ಕಾರ್ಯಕ್ರಮಕ್ಕೆ ಬೀಗ ಹಾಕಿಬಿಟ್ಟಿರಲ್ಲ ಸ್ವಾಮಿ ಸ್ತ್ರೀ ಶಕ್ತಿ ಕಾರ್ಯಕ್ರಮಕ್ಕೆ ಏನು ಸಹಾಯ ಮಾಡಿದ್ದೀರಿ ಎನ್ನುವುದನ್ನು ತಾವೇ ಹೇಳಿ ಬಜೆಟ್‌ನಲ್ಲಿ ಏನು ಹೇಳಿದ್ದೀರಿ, ಏನು ಕೊಟ್ಟಿದ್ದೀರಿ ಎಂದು ಹೇಳಿ ಏಕೆ ಅನವಶ್ಯಕವಾಗಿ ಮಾತನಾಡುತ್ತೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ 4% ಬಡ್ಡಿದರದಲ್ಲಿ ಸಾಲ ಕೊಡುತ್ತಿದ್ದೇವೆ, ಈಗ 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತಿದ್ದೇವೆ

(ಗೊಂದಲ)

ಅಧ್ಯಕ್ಷರು ಈ ರೀತಿ ಚರ್ಚೆಯಾದರೆ ಏನೂ ಪ್ರಯೋಜನವಾಗುವುದಿಲ್ಲ ಚರ್ಚೆಯೇ ಬೇಡವೆಂದರೆ ನಾನು ಸದನವನ್ನು ಮುಂದಕ್ಕೆ ಹಾಕಿಬಿಟ್ಟು ಹೋಗುತ್ತೇನೆ ಇನ್ನೇನು ಮಾಡುವುದು ಅದು ಬೇಡವೆಂದರೆ, ಏನಾದರೂ ಚರ್ಚೆಯಾಗಬೇಕು

(ಗೊಂದಲ)

ಶ್ರೀ ಧರ್ಮಸಿಂಗ್ ಅದನ್ನು ಅವರಿಗೆ ಹೇಳಿ

ಅಧ್ಯಕ್ಷರು ಅವರಿಗೆ ಏನು ಹೇಳಬೇಕು ಸ್ವಾಮಿ ಪ್ರಶ್ನೋತ್ತರ ನಡೆಸೋಣ ಎಂದು ಹೇಳುತ್ತಿದ್ದೇನೆ ಅನೇಕ ಜನ ಸದಸ್ಯರು ಪ್ರಶ್ನೆ ಕೇಳುವುದಕ್ಕೆ ಸಿದ್ಧವಾಗಿದ್ದಾರೆ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಸದನ ನಡೆಯತಕ್ಕಂಥ ಕಾಲದಲ್ಲಿ ತಾವು ವಿರೋಧ ಪಕ್ಷದ ರಕ್ಷಣೆಗೆ ಬರಬೇಕು ನಾವು ಕೇಳುತ್ತಿದ್ದೇವೆ, ಅವರು ಏನು ಹೇಳುತ್ತಾರೆ ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಕೊಡಲು ನೀವು ಸರ್ಕಾರಕ್ಕೆ ಆದೇಶ ಕೊಡಿ

ಅಧ್ಯಕ್ಷರು ಅವರು ಉತ್ತರ ಹೇಳಿದಿರಲ್ಲ ಸ್ವಾಮಿ ಅದು ನಿಮಗೆ ಒಪ್ಪಿಗೆಯಾಗದಿರಬಹುದು ಆದರೆ ಅವರು ಉತ್ತರ ಹೇಳಿದರು ಅವರಿಗೆ ಉತ್ತರ ಹೇಳಿ ಎಂದು ಹೇಳಬಹುದೇ ಹೊರತು ನಿಮಗೆ ಬೇಕಾದ ಹಾಗೆ ಉತ್ತರ ಹೇಳಿ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ಹೇಗೆ ಹೇಳಿದರು ಎಂದರೆ, ತೆಲುಗಿನಲ್ಲಿ "ಜೈ ಪಾತಾಳ ಭೈರವಿ" ಎಂದು ಒಂದು ಸಿನಿಮಾ ಇತ್ತು ಅದರಲ್ಲಿ "ನರುಡಾ ನೀ ಕೋರಿಕೆಏಮಿ?" ಎಂದು ಕೇಳಲಾಗುತ್ತಿತ್ತು

(ಗೊಂದಲ)

ಶ್ರೀ ಆರ್ ಅಶೋಕ್ ಮಾನ್ಯ ಶ್ರೀನಿವಾಸಗೌಡರೇ, ತೆಲುಗಿನಲ್ಲಿ ಮಾತ್ರವೇ ಸಿನಿಮಾ ಮಾಡುತ್ತಾರೆಯೇ? ಕನ್ನಡದಲ್ಲಿ ಯಾವುದೂ ಸಿನಿಮಾ ಬರುವುದಿಲ್ಲವೇ?

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಉಪಮುಖ್ಯಮಂತ್ರಿಗಳು ಯಾವುದೊಂದಕ್ಕೂ, "ನರುಡಾ ನೀ ಕೋರಿಕ ಏಮಿ?" ಎನ್ನುವಂತೆ ಇಡೀ ರಾಜ್ಯದ ಜನರಿಗೆ ಆನಂದವಾಗಿಸುತ್ತಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಇದೇ ರೀತಿ ಎಲ್ಲ ಸದಸ್ಯರು ನಿಯಮಾವಳಿಗಳಿಲ್ಲದೇ ಕಾರ್ಯಕಲಾಪಗಳಿಲ್ಲದೇ, ಇದೇ ತರಹದಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿ ಸರ್ಕಾರ ಹೀಗೇ ಮಾಡಬೇಕು ಎನ್ನುವ ಒತ್ತಡವನ್ನು ತಂದರೆ, ಪ್ರಾಯಶಃ ನಾವು ಈ ಸದನನ್ನು ನಡೆಸಲು ಬಹಳ ಕಷ್ಟವಾಗುತ್ತದೆ ನಿಯಮಾವಳಿಗಳ ಪ್ರಕಾರ ಸದನ ನಡೆಸಬೇಕಾಗುತ್ತದೆ ಇವತ್ತು, ಅವರು ತಮ್ಮದೇ ಆದಂಥ ಅಭಿಪ್ರಾಯವನ್ನು ಹೊಂದಿ ಬಾವಿಯೊಳಕ್ಕೆ ಬಂದಿದ್ದಾರೆ ಅವರಿಗೆ ನಾವು ಮನವಿ ಮಾಡಿಕೊಂಡಿದ್ದೆವು ಅವರು ಅವರ ಆಸನಕ್ಕೆ ಹೋಗುವುದಿಲ್ಲವೆನ್ನುತ್ತಿದ್ದಾರೆ, ಅದು ಅವರ ಸ್ವತಂತ್ರ್ಯ ಅಭಿಪ್ರಾಯ ಆದರೆ, ಇಂಥ ಸನ್ನಿವೇಶಗಳು ಬಂದಾಗ, ಅವರು ಬಾವಿಯಲ್ಲಿದ್ದರೂ ಕೂಡ House is in order ಅಂಥದ್ದನ್ನು ಮಾಡಿ ಅನೇಕ ತೀರ್ಮಾನಗಳನ್ನು ತಾವು ಕೊಟ್ಟಿದ್ದೀರಿ ಇವತ್ತು ಪ್ರಶ್ನೋತ್ತರ ವೇಳೆ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿದೆ ಈಗ ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಪ್ರಶ್ನೋತ್ತರ ಆಗಬೇಕು ಅದಾದಮೇಲೆ, ನಿಯಮ 69ರ ಕೆಳಗೆ ಚರ್ಚೆಯಾಗಬೇಕಾಗಿದೆ 31ನೇ ತಾರೀಖಿದೆ, ಆದ್ದರಿಂದ ತಾವು ಬೇಗನೆ ಕೊಡಿ ಎಂದು ಸರ್ಕಾರಕ್ಕೆ ತಾವು ಸಲಹೆಯನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಯೋಚನೆಯನ್ನು ಮಾಡಿ ನಿರ್ಧಾರವನ್ನು ಮಾಡುತ್ತೇವೆಂದು ಹೇಳಿದ್ದೇವೆ ಪೂರಕ ಬೇಡಿಕೆ ಮಂಡನೆ ಮಾಡಬೇಕಾಗಿದೆ ಆದ್ದರಿಂದ, ದಯವಿಟ್ಟು, ಮುಂದಿನ ಕಲಾಪಗಳಿಗೆ ತಾವು ಅವಕಾಶ ಕಲ್ಪಿಸಿಕೊಡಬೇಕು ಯಾವುದಾದರೂ ವಿಷಯ ಇದ್ದರೆ, ಅದು ನಡೆಯಲಿ ತಾವು ಸಲಹೆ ಕೊಟ್ಟಿದ್ದೀರಿ ಆ ಚರ್ಚೆಯ ಸಮಯದಲ್ಲಿ ಮತ್ತೆ ಸಲಹೆ ಕೊಡಿ

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಇವತ್ತು ಸದನ ಯಾವ ನಿಯಮದ ಪ್ರಕಾರ ನಡೆಯುತ್ತಿದೆ? ಯಾವ ನಿಯಮದಡಿಯಲ್ಲಿ ಇವತ್ತು ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ? Budget discussion

ನಡೆಯುತ್ತಿದೆ, Budget discussion ಕಾಲದಲ್ಲಿ ಏನು ರಿಯಾಯಿತಿ ಕೊಟ್ಟಿದ್ದೇವೆಂದು ಅವರು ಹೇಳಬೇಕಾಗಿತ್ತು ನೀವು 345 ಎಂದು ಹೇಳಿದಿರಿ ಹಾಗೆ ಮಾಡಲಿಕ್ಕೆ ಆಗುತ್ತದೆಯೇ? ಮಂತ್ರಿಗಳಿಗೆ statement ಮಾಡುವ ಅಧಿಕಾರ ಅವರಿಗಿದೆ ಆದರೆ, ಬಜೆಟ್‌ಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಇಲ್ಲ ಎನ್ನತಕ್ಕಂಥ ಮಾತನ್ನು ನಾವು ಹೇಳಿದ್ದೇವೆ ನಮ್ಮ ರಕ್ಷಣೆಗೆ ತಾವು ಕೂಡ ಬರಬೇಕು ನಾವು ನಿಯಮದಡಿಯಲ್ಲಿ ಇವತ್ತು ಏನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ, ಬಜೆಟ್ ಇದೆ, ಬಜೆಟ್ ಚರ್ಚೆಯ ಮೇಲೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಏನು ಮತ್ತೆ ರಿಯಾಯಿತಿ ಕೊಡಬೇಕಾಗಿದೆ, ಇವತ್ತು ಮತ್ತೆ ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಯಡಿಯೂರಪ್ಪನವರು ಬಹಳ ದೊಡ್ಡ ಹೆಸರು ಗಳಿಸಬೇಕೆಂದು ಮಾಡಿದರು ಬಜೆಟ್ ಮಂಡನೆಯಾದ ಮೇಲೆ ನಿಮ್ಮ ಪಕ್ಷದವರೇ ಎಲ್ಲಾ ಮಂತ್ರಿಗಳೂ ಇವತ್ತಿನ ದಿವಸ ಬಿಜೆಪಿ agenda ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಪತ್ರಿಕೆಗಳಲ್ಲಿ ಅದು ಬಂದಿದೆ (ಅಡಚಣೆ) ಮತ್ತೆಲ್ಲಿ ಹೇಳಬೇಕು? ಪತ್ರಿಕೆಗಳಾಧಾರದ ಮೇಲೆಯೇ ಹೇಳಬೇಕಲ್ಲ?

(ಗೊಂದಲ)

ಶ್ರೀ ಬಿ ನಾಗರಾಜ ಶೆಟ್ಟಿ ಯಾವ ಪತ್ರಿಕೆಯಲ್ಲಿ ಬಂದಿದೆ? (ಗೊಂದಲ)

ಶ್ರೀ ಧರ್ಮಸಿಂಗ್ ಎಲ್ಲಾ ಪತ್ರಿಕೆಗಳಲ್ಲಿ ಕೂಡ (ಗೊಂದಲ)

ಅಧ್ಯಕ್ಷರು ನಿಮ್ಮ views ನೀವು ಹೇಳುತ್ತೀರಿ ಅವರ views ಅವರು ಹೇಳುತ್ತಾರೆ (ಗೊಂದಲ) ಒಂದು meeting ground ಇಲ್ಲದೇ ಇದ್ದರೆ ಏನು ಮಾಡುವುದು? (ಗೊಂದಲ) ಈಗ ದಯಮಾಡಿ ಕೇಳಿ Agenda ಪ್ರಕಾರ ಹೋಗೋಣ

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ ಇವತ್ತು ಬಜೆಟ್ ಭಾಷಣವನ್ನು ಕೂಡ (ಗೊಂದಲ) ಅದಕ್ಕೆ ಅವಕಾಶ ಕೊಡಬಾರದು ಹೊರಗಡೆ ಇರುವ ಜನ ಕಾಯುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು ಈಗ ದಯಮಾಡಿ ಕುಳಿತುಕೊಳ್ಳಿ ಮಾನ್ಯ ಖರ್ಗೆಯವರು ಮಾತನಾಡುವುದಕ್ಕೆ ನಾನು ಅವಕಾಶ ಮಾಡಿ ಕೊಟ್ಟಿದ್ದೇನೆ (ಗೊಂದಲ) ಏನು ಹೇಳುತ್ತಾರೋ, ಹೇಳಲಿ

(ಗೊಂದಲ)

ಈಗ ಕಾರ್ಯಕಲಾಪಗಳು ನಡೆಯಬೇಕು ಕಾರ್ಯಕಲಾಪಗಳು ನಡೆಯಬೇಕಾದರೆ ಹಿರಿಯ ಸದಸ್ಯರೇನು ಸಲಹೆ ಕೊಡುತ್ತಾರೆ ನೋಡೋಣ, ಕುಳಿತುಕೊಳ್ಳಿ (ಗೊಂದಲ) ದಯಮಾಡಿ, ಕುಳಿತುಕೊಳ್ಳಿ (ಗೊಂದಲ) ಅವರೇನು ಹೇಳುತ್ತಾರೆ ನೋಡೋಣ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ – ಮೊದಲೇ ಸ್ಪಂದಿಸಿದರು ಏನೆಂದರೆ, "ನಾನೇಕೆ ತರಾತುರಿಯಲ್ಲಿ statement ಮಾಡಿದೆ ಎಂದರೆ, 31ನೇ ತಾರೀಖಿನೊಳಗಾಗಿ ರೈತರು ಹಣ ತುಂಬಬೇಕಾಗುತ್ತದೆ, ಅದಕ್ಕಾಗಿ ನಾನು ಆತುರದಿಂದ ಈ statement ಅನ್ನು ಮಾಡಿದ್ದೇನೆ, ಬೇರೆ ಯಾವ ಉದ್ದೇಶದಿಂದ ಅಲ್ಲ ಎಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದರು

(ಗೊಂದಲ)

ಅದೇ ಉದ್ದೇಶವಿದ್ದ ಕಾರಣ ನಾವು ಕೂಡ insist ಮಾಡುವುದೇಕೆಂದರೆ, 31ನೇ ತಾರೀಖಿನೊಳಗೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಅಧ್ಯಕ್ಷರೆ, ನಮ್ಮ ಕಡೆ ನೋಡಿ, ನಾವು ಪ್ರಶ್ನೋತ್ತರದ ಬಗ್ಗೆ ಕೇಳುತ್ತಿದ್ದೇವೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಆಲೋಚನೆ ಇದೆ ಆದರೆ, ನಾವು ಕೊನೆಗೆ announce ಮಾಡುತ್ತೇವೆನ್ನುತ್ತಾರೆ (ಗೊಂದಲ) ಕೊನೆಗೆ announce ಮಾಡಿದಾಗ ಎರಡು ಪ್ರಶ್ನೆ ಉದ್ಭವಿಸುತ್ತದೆ ಅಂದರೆ, ನೀವು 31 03 2007ಕ್ಕೆ ಏನು ಹಣ ತುಂಬಬೇಕೆಂದು ಹೇಳುತ್ತೀರಿ ಅದು ಆಗುವುದಿಲ್ಲ ನೀವು extend ಮಾಡುತ್ತೀರಿ ಎಂದೇ ನಾವು presume ಮಾಡಬೇಕು (ಗೊಂದಲ) ಇಲ್ಲವೆಂದರೆ, ಅದೇ ಮಾತನ್ನು ಹೇಳುವುದಿದ್ದರೆ, ನಮ್ಮ ಬೇಡಿಕೆಯೇ ನಿಮ್ಮ ಬೇಡಿಕೆಯೂ ಆಗಿದ್ದರೆ, ದಯವಿಟ್ಟು ಈಗ ತಕ್ಷಣ ಯಾವ ರೀತಿಯಾಗಿ ತಾವು ಮಾಡುತ್ತೀರಿ ಎಂಬು ತಿಳಿಸಬೇಕು

(ಗೊಂದಲ)

ಶ್ರೀ ಸಿದ್ದು ಕಲ್ಲಪ್ಪ ಸವದಿ ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ನಡೆಯಲಿ (ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಇದರಲ್ಲಿ prestige ಬೇಡ ನೀವು ಆ party ಯವರನ್ನು ಕೇಳಿಲ್ಲ, ಈ party ಯವರನ್ನು ಕೇಳಿಲ್ಲ, ಅವರಿಗೆ credit ಹೋಗುತ್ತದೆ, ಇವರಿಗೆ ಹೋಗುತ್ತದೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ವೈಯಕ್ತಿಕ ಪ್ರತಿಷ್ಠೆಗೋಸ್ಕರ ಇವರು ಹೋರಾಟ ಮಾಡುತ್ತಿದ್ದಾರೆ

(ಗೊಂದಲ)

ರೈತರಿಗೋಸ್ಕರ ಹೋರಾಟ ಮಾಡುತ್ತಿಲ್ಲ

(ಗೊಂದಲ)

ಅಧ್ಯಕ್ಷರು ಏನೋ ಅವರ ವಿಚಾರ ಹೇಳುತ್ತಿದ್ದಾರೆ, ಕುಳಿತುಕೊಳ್ಳಿ

(ಗೊಂದಲ)

ಶ್ರೀ ಸಿದ್ದು ಕಲ್ಲಪ್ಪ ಸವದಿ ಇವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ ದಯವಿಟ್ಟು, ಪ್ರಶ್ನೋತ್ತರ ಕಾಲ ನಡೆಸಿ, ಸದನ ಸರಿಯಾಗಿ ನಡೆಯಲಿಕ್ಕೆ ಅವಕಾಶ ಮಾಡಿಕೊಡಿ ಅಧ್ಯಕ್ಷರೆ,

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಅಧ್ಯಕ್ಷರೆ, ಪ್ರಶ್ನೋತ್ತರ ಕೈಗೆತ್ತಿಕೊಳ್ಳಿ ಇದನ್ನು ವೈಯಕ್ತಿಕ ಪ್ರತಿಷ್ಠೆ ಮಾಡಿಕೊಂಡಿದ್ದಾರೆ

(ಗೊಂದಲ)

ಅಧ್ಯಕ್ಷರು ಈಗ ಮಾನ್ಯ ಖರ್ಗೆಯವರೆ, ಹೇಳಿದ್ದನ್ನು ಅವರು ಹೇಳಿದ್ದಾರೆ (ಗೊಂದಲ) ಅವರು ಅವರ ವಿಚಾರಗಳಿಗೆ ಅಂಟಿಕೊಂಡಿದ್ದಾರೆ ನೀವು ನಿಮ್ಮ ವಿಚಾರಕ್ಕೆ ಅಂಟಿಕೊಂಡಿದ್ದೀರಿ Meeting ground ಇಲ್ಲ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಇದು ಸರಿಯಲ್ಲವೆಂದು ಹೇಳಿ ಕೊನೆಗೆ, ಮಾಡೋಣವೆಂಬ Prestige ಮೇಲೆ Deputy Chief Minister ನಿಂತಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಇಷ್ಟು ವರ್ಷ ಅವರು ಸರ್ಕಾರವನ್ನು ನಡೆಸಿದ್ದಾರೆ (ಗೊಂದಲ) ನಿಂತ ಕಾಲಿನ ಮೇಲೆ ಈ ಸರ್ಕಾರ ಇದೇ ತರಹದ ನಿರ್ಧಾರ, ನಿರ್ಣಯವನ್ನು ಕೊಡಬೇಕೆಂದು ಹೇಳಿದರೆ ನಾವು ಏನು ಹೇಳುವುದು ಹೇಳಿ? ಅವರು ಸಹಕಾರ ಕೊಡಬೇಕಲ್ಲ? (ಗೊಂದಲ) ಪದೇ ಪದೇ ಇದೇ ವಿಚಾರಗಳನ್ನು ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ ಈಗ ತಾವು ಕಾರ್ಯಕಲಾಪಗಳಲ್ಲಿ

ಭಾಗವಹಿಸಿ, ತಾವೆ ಕೊಟ್ಟಿರತಕ್ಕಂಥ ಅತ್ಯಂತ ಮುಖ್ಯವಾಗಿರುವಂಥದ್ದು ಎಂದು ಹೇಳಿ adjournment motion ಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ ಆ adjournment motion ಅನ್ನು ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ತೆಗೆದುಕೊಳ್ಳಬೇಕೆಂದು ಹೇಳಿದಿರಿ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿದ್ದಾರೆ ಬಹಳ ಪ್ರಮುಖವಾದಂಥ ವಿಷಯವೆಂದು ಹೇಳಿದಿರಿ ಪ್ರಶ್ನೋತ್ತರ ಕಾಲದಲ್ಲಿ ಸದಸ್ಯರಿಗೆ ಪ್ರಶ್ನೆ ಕೇಳತಕ್ಕಂಥ ಹಕ್ಕಿದೆ ಅನೇಕ ವಿಚಾರಗಳು ಪ್ರಸ್ತಾಪವಾಗಬೇಕಾಗಿವೆ ಸರ್ಕಾರವನ್ನು ನಡೆಸಿರತಕ್ಕಂಥ ತಾವು, ನೀವು ಕೇಂದ್ರದಲ್ಲಿ ಆಡಳಿತ ನಡೆಸಿದ್ದೀರಿ, ಇಲ್ಲಿಯೂ ಆಡಳಿತ ನಡೆಸಿದ್ದೀರಿ, ಸರ್ಕಾರ ತತ್‌ಕ್ಷಣದಲ್ಲಿ ಉತ್ತರ ಕೊಡಬೇಕು ಎಂದು ಹೇಳಿ ನಿರೀಕ್ಷೆ ಮಾಡತಕ್ಕಂಥದ್ದು, ಅದರ ಮೂಲಕವಾಗಿ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುವಂಥದ್ದು ತಮ್ಮಂಥವರಿಗೆ ಸರಿಯಲ್ಲ ತಾವೇ ಯೋಚನೆ ಮಾಡಿ ಹೇಳಿ ಸಾರ್ ಈಗ ನಾವು ಕೇಳುತ್ತಿದ್ದೇವೆ ಸಾರ್ ದಯಮಾಡಿ, ಪ್ರಶ್ನೋತ್ತರ ವೇಳೆಗೆ ಅವಕಾಶ ಕಲ್ಪಿಸಿಕೊಡಿ ತಾವು ಹೇಳಬೇಕಾದಂಥದ್ದನ್ನು ಹೇಳಿದ್ದೀರಿ ತಾವೇನು ಹೇಳಿದಿರಿ, 31ನೇ ತಾರೀಖಿನೊಳಗಾಗದಿದ್ದರೆ ನಾವೇನು presume ಮಾಡಬಹುದೆಂದು ಕೇಳಿದಿರಿ, ಎಲ್ಲಾ ಸಮಸ್ಯೆಗಳಿಗೂ ಕೂಡ ಪರಿಹಾರ ಎನ್ನುವುದು ಇದ್ದೇ ಇದೆ ಆದರೆ, ಆ ಪರಿಹಾರಕ್ಕೆ ಏನೇನೆಲ್ಲ ಮಾಡಬೇಕೆಂದು ಉಪಮುಖ್ಯಮಂತ್ರಿಗಳು ಹೇಳುತ್ತಾರೆ, ನಾವು ಎಲ್ಲಾ ವಿಚಾರಗಳನ್ನೂ ತತ್‌ಕ್ಷಣದಲ್ಲಿ ಹೇಳಲಿಕ್ಕಾಗುವುದಿಲ್ಲ ತಾವು ದೀರ್ಘಾವಧಿಯಲ್ಲಿ ಸರ್ಕಾರದಲ್ಲಿದ್ದದ್ದರಿಂದ ಇದಕ್ಕೆ ಪರ್ಯಾಯವಾದ ವ್ಯವಸ್ಥೆ ಏನು ಎನ್ನುವುದನ್ನು ಕೂಡ ಈಗ ಸೂಚಿಸಿದ್ದೀರಿ 31ರವರೆಗೆ ಸಮಯವಿದೆ ಎಂದು ಹೇಳಿದಿರಿ ಆದರೆ, ತಾವೇನು ಸದುದ್ದೇಶದಿಂದ ಹೇಳಿದಿರಿ, ಅದೇ ಸದುದ್ದೇಶದಿಂದ ನಿನ್ನೆ ಅವರು ಹೇಳಿಕೆ ಮಾಡಿದ್ದಾರೆ ಆ ಹೇಳಿಕೆ ಸರಿಯಾದುದಲ್ಲ, ನಿಯಮಾವಳಿ ಪ್ರಕಾರ ಇರಲಿಲ್ಲ, ಅದಕ್ಕೆ ನಾವು ಒಪ್ಪಿದ್ದೇವೆ ಹಾಗೆ ಒಪ್ಪಿರತಕ್ಕಂಥದ್ದು ಸದನದ property ಯಾಗಿದೆ ಅದನ್ನು ತೆಗೆದು ಹಾಕಿ ಎಂದು ಅವರೇನೂ ruling ಕೊಟ್ಟಿಲ್ಲ ತಮ್ಮ ಬೇಡಿಕೆ ಕೂಡ ನಿನ್ನೆ ಏನೂ ಇರಲಿಲ್ಲ ಈ ಹೇಳಿಕೆಯನ್ನು expunge ಮಾಡಿ ಎಂದೇನೂ ಇರಲಿಲ್ಲ ಈಗ ಅದು ಸದನದ property ಯಾಗಿದೆ ಅದು ಪ್ರಪಂಚಕ್ಕೆ ಗೊತ್ತಾಗಿದೆ ಒಂದು ವೇಳೆ ಸದನದಲ್ಲಿ ನಾವು ನಿಯಮಾವಳಿಗಳು ಸರಿಯಾದಂಥ ರೀತಿಯಲ್ಲಿ 345 ಎಂದು ಹೇಳಿ ಅರ್ಥೈಸಿರತಕ್ಕಂಥದ್ದು ತಪ್ಪು ನಿಯಮ 173 ರ ಕೆಳಗೆ ನೀವು ಇದನ್ನು ತರಬಾರದೆಂದು ಹೇಳಿದ್ದೀರಿ ಅದು ನಮಗೆ ಮಾರ್ಗದರ್ಶನ ಸರಿಪಡಿಸಿಕೊಳ್ಳುತ್ತೇವೆಂದು ಹೇಳಿದ್ದೇವೆ ಇವತ್ತು ಮುಂದಿನ ವಿಚಾರಗಳ ಬಗ್ಗೆ ಚರ್ಚೆ

ಮಾಡುತ್ತೀರಿ, ಉತ್ತರಕೊಡಬೇಕಾದರೆ, supplementary budget ಇಡುತ್ತೇವೆ, ಆಗ ಹೇಳುತ್ತೇವೆನ್ನುವ ಮಾತನ್ನೂ ಹೇಳಿದ್ದೇವೆ ದಯವಿಟ್ಟು, ತಾವು ಈಗ ಎಲ್ಲ ಹಿರಿಯ ಸದಸ್ಯರೂ ತಾವು ಕುಳಿತುಕೊಳ್ಳಿ ಎಂದು ಹೇಳಿದ್ದಾರೆ ಅವರೇನು ನಿಮ್ಮಂತೆ ಕಾರ್ಯಕಲಾಪಗಳಿಗೆ ಘೋಷಣೆ ಕೂಗಿ ಅಡ್ಡಿಮಾಡಿಲ್ಲ ನಿಮ್ಮಂತೆ ಎಂದು ಹೇಳಿದ್ದೇನೆ ಆ ರೀತಿ ಅಲ್ಲ ಸ್ವಾಮಿ, ನೀವು ಇದೇ ಸದನದಲ್ಲಿ ಘೋಷಣೆಗಳನ್ನು ಕೂಗಿ ನಮ್ಮ ಹಕ್ಕನ್ನು ಚ್ಯುತಿ ಮಾಡಿದ್ದೀರಿ ಎಂದು ಹೇಳಿದ್ದೀರಿ ಸದನದ ಕಲಾಪಗಳನ್ನು ಘೋಷಣೆಗಳನ್ನು ಕೂಗಿ ಅಡ್ಡಿ ಮಾಡತಕ್ಕಂಥದ್ದು ಅಲ್ಲವೆಂದು ತಾವೆ ಇಲ್ಲಿ ಹೇಳಿಕೆ ಕೊಟ್ಟಿದ್ದೀರಿ ಆ ಕಾರಣಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ You cannot hold the people to ransom ಎಂದು ಹೇಳಿದಿರಿ ಆಯಿತು ಅವರಂತೆ ನೀವು ಇದ್ದೀರಿ ಎಂದು ಭಾವಿಸಿಕೊಳ್ಳಿ ನೀವು ಅವರು ಬಹಳ ಚೆನ್ನಾಗಿ, ಅವರು ಎಲ್ಲದಕ್ಕೂ ನಿಮ್ಮ ಸಹಿ ಮಾಡಿಸಿಕೊಂಡಿಲ್ಲ ನೀವು ಕೂಡ ನಮ್ಮ ಸಹಿ ಮಾಡಿಸಿಕೊಂಡಿಲ್ಲವೆಂದು ಹೇಳಿದಿರಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಅವರು ಹಿರಿಯ ನಾಯಕರು, ಈ ರೀತಿಯಾಗಿ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಬಹುದೆ ನಿಯಾಮಾವಳಿ ಒಬ್ಬರಿಗೆ ಮಾತ್ರವೇ? ಆ ನಿಯಾಮಾವಳಿ ಅವರಿಗೂ ಅನ್ವಯಿಸುವುದಿಲ್ಲವೇ? ಅವರು ಅಲ್ಲಿ ನಿಂತು ಕೊಂಡು ಏನು ಬೇಕಾದರೂ ಮಾತನಾಡಬಹುದೇ? ನಮಗೂ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ ನಾನು ಹಿರಿಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ವಿರೋಧ ಪಕ್ಷದಲ್ಲಿ ಹಿರಿಯರು ಇದ್ದಾರೆ, ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮಗೂ ಎರಡೂ ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ ನಮಗೂ ಅವಕಾಶ ಕೊಡಿ ನಾವು ಮಾತನಾಡಬೇಕಾಗಿದೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ನನಗೆ ಸಂಶಯ ಬರುತ್ತಿದೆ ಬ್ರಿಟೀಷರು ಈ ದೇಶ ಬಿಟ್ಟು ಹೋಗುವಾಗ ಡಿವೈಡ್ ಅಂಡ್ ರೂಲ್ ಪಾಲಿಸಿ ಇವರಿಗೆ ಹೇಳಿ ಹೋಗಿದ್ದಾರೆಯೆ? ಅದನ್ನು ಇವರು ಈಗ ಮಾಡುತ್ತಿದ್ದಾರೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಹಿರಿಯರಲ್ಲಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ, ನಮಗೆ ಒಂದೆರಡು ನಿಮಿಷ ಅವಕಾಶ ಮಾಡಿಕೊಡಿ ಅವರು ಮಾಡುತ್ತಿರುವಂಥ ಧರಣಿಯನ್ನು ವಾಪಸ್ ತೆಗೆದುಕೊಳ್ಳಿ ಎಂದು ಕೇಳುತ್ತೇವೆ ನಮ್ಮ ಕ್ಷೇತ್ರದಲ್ಲಿ ಸಮಸ್ಯೆಗಳು ಬೇಕಾದಷ್ಟು ಇವೆ ಅವುಗಳನ್ನು ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಮಾಡಿಕೊಡಿ ಎಂದು ನಾವು ಅವರನ್ನು ಕೇಳಿಕೊಳ್ಳುತ್ತೇವೆ ನಿಯಮಾವಳಿಯಲ್ಲಿ ತಪ್ಪು ಇದೆ ಎಂದು ಅವರೇನು ಹೇಳುತ್ತಿದ್ದಾರೆ, ರೈತರಿಗೋಸ್ಕರ ಈ ನಿಯಮಾವಳಿಯನ್ನು ಬದಿಗಿಟ್ಟು ತಾವೆಲ್ಲರೂ ಅವರನ್ನು ಅಭಿನಂದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ನಮ್ಮದು ಅರಣ್ಯ ರೋಧನವಾಗಿಬಿಟ್ಟಿದೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ತಾವು ತಪ್ಪು ತಿಳಿದುಕೊಳ್ಳಬೇಡಿ ನಾವು ನಿಲುವಳಿ ಸೂಚನೆಯನ್ನು ತಂದಾಗ, ನೀವು ರೂಲ್ 69 ನಲ್ಲಿ ನಮಗೆ ಚರ್ಚೆ ಮಾಡಲಿಕ್ಕೆ ಹೇಳಿದಿರಿ ಆದರ ಅವರೇನು ಹೇಳಿಕೆ ಕೊಟ್ಟರು, ಅದರ ಬಗ್ಗೆ ಈಗ ಒಂದು ರೀತಿ ಹೇಳುತ್ತೀರಿ, ಈ ರೀತಿ ಏಕೆ ಮಾಡುತ್ತೀರಿ?

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಏನಾಯಿತು ಸ್ವಾಮಿ? ಎಲ್ಲರೂ ಇಲ್ಲಿ ಬಂದು ಬಾವಿಗೆ ಬಿದ್ದರೆ ಹೇಗೆ?

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ಸ್ವಾಮಿ, ದಯಮಾಡಿ ಇಲ್ಲಿ ಕೇಳಿ ಬ್ರಿಟೀಷರು ಡಿವೈಡ್ ಅಂಡ್ ರೂಲ್ಸ್ ಪಾಲಿಸಿ ನಮಗೆ ಹೇಳಿ ಹೋಗಿದ್ದಾರೆಂದು ಅಲ್ಲ ಅದೆಲ್ಲಕ್ಕಿಂತ ಮುಖ್ಯವಾಗಿ ಅಧಿಕಾರದಲ್ಲಿ ಯಾರ್‍ಯಾರು ಇರುತ್ತಾರೆ, ಅವರಲ್ಲಿ ಯಾವಾಗಲು ಕೂಡ ಈ ರೀತಿಯ "ಡಿವೈಡ್ ಅಂಡ್ ರೂಲ್" ಎನ್ನತಕ್ಕಂಥದ್ದು ಇದ್ದೇ ಇರುತ್ತದೆ ಬೇಧ ಎನ್ನತಕ್ಕಂಥದ್ದು ಇದ್ದೇ ಇರುತ್ತದೆ ಪಾಪ ನಾವು ಸುಮ್ಮನೇ ಬ್ರಿಟೀಷರ ಹೆಸರನ್ನು ಹೇಳುತ್ತಿದ್ದೇವೆ ನೀವು ಅಧಿಕಾರದಲ್ಲಿದ್ದಾಗಲೂ ಅದನ್ನು ಮಾಡಿದ್ದೀರಿ ನಾವು ಅಧಿಕಾರದಲ್ಲಿದ್ದಾಗಲೂ ಮಾಡುತ್ತೇವೆ ಅದು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗಲೂ ಆಗಿದೆ ಅಧಿಕಾರಸ್ಥರಾಗಿರತಕ್ಕಂಥವರು "ಡಿವೈಡ್ ಅಂಡ್ ರೂಲ್" ಅನ್ನು ಮಾಡಿಯೇ ಮಾಡುತ್ತಿರುತ್ತಾರ ಅದು ಇದೆ ಎನ್ನತಕ್ಕಂಥದ್ದಲ್ಲ ನಾನು ಅವರಿಗೆ ವಿನಂತಿ ಮಾಡಿಕೊಂಡಿದ್ದೇನೆ ಅದು ಅವರಿಗೆ ಬಿಟ್ಟಿರತಕ್ಕಂಥ ವಿಚಾರ ದಯವಿಟ್ಟು ತಾವು ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸಿಲಿಕ್ಕೆ ಅವಕಾಶ ಮಾಡಿ ಕೊಡಿ

ಶ್ರೀ ಎಂ ಪಿ ವೆಂಕಟೇಶ್ ಮಾನ್ಯ ಅಧ್ಯಕ್ಷರೇ, ಇಲ್ಲಿ ದಯಮಾಡಿ ಸ್ವಲ್ಪ ಕೇಳಿ ನಮಗೂ ಸ್ವಲ್ಪ ಅವಕಾಶ ಮಾಡಿ ಕೊಡಿ ಮಾನ್ಯ ಧರ್ಮಸಿಂಗ್ ರವರು ಮುಖ್ಯಮಂತ್ರಿಯಾಗಿದ್ದಾಗ ಈಗೇನು ಮಾತನಾಡುವಾಗ ಸಲಹ ಕೊಟ್ಟರು, ಅದನ್ನೆಲ್ಲಾ ಅವರು ಅಧಿಕಾರದಲ್ಲಿ ಇದ್ದಾಗ ಮಾಡಿದ್ದರೆ ಈ ಕರ್ಮ ಏಕೆ? ಇವರೆಲ್ಲಾರು ಕಿತ್ತಾಡಿಬಿಟ್ಟು ನಮ್ಮನ್ನು ಕಟ್ಟಿಹಾಕಿ ಈಗ ಬಾಯಿ ಬಾಯಿ ಬಿಡಿದುಕೊಂಡರೆ ಅದನ್ನು ಯಾರು ಕೇಳುತ್ತಾರೆ? ಮಾನ್ಯ ಧರ್ಮಸಿಂಗ್ ರವರಿಗೆ ಹಿತವಚನ ನೀಡಿ ಸಾಲ ಮನ್ನಾ ಮಾಡಿದ್ದರೆ ಬೆಲೆ ಸಿಕ್ಕುತ್ತಿರಲಿಲ್ಲವೆ? ಇವರೆಲಾರ್ರು ಹೋಗಿ ಧರ್ಮಸಿಂಗ್‌ರವರನ್ನು ಕಿತ್ತು ಹಾಕಿಬಿಟ್ಟು ಇವರೇ ಭಾಷಣ ಮಾಡುತ್ತಾರೆ ಈಗ ಬಾಯಿ ಬಡಿದುಕೊಂಡರೆ ಏನಾಗುತ್ತದೆ? ದಯಮಾಡಿ ಸರಿಯಾಗಿ ತಾವೆಲ್ಲರೂ ಕೇಳಬೇಕು

ಶ್ರೀ ಎನ್ ಧರ್ಮಸಿಂಗ್ ಅವರೇನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆಯೆ?

ಶ್ರೀ ಎಂ ಪಿ ವೆಂಕಟೇಶ್ ನಿಮ್ಮನ್ನೆಲ್ಲಾ ಕಿತ್ತು ಹಾಕಿದ್ದು ಅವರೇ ಅವರ ಸಲಹೆ ನೀವು ತೆಗೆದುಕೊಳ್ಳಬೇಕಾಗಿತ್ತು

ಶ್ರೀ ಎನ್ ಧರ್ಮಸಿಂಗ್ ಈಗ ಮಾನ್ಯ ಪ್ರಕಾಶ್ ರವರು ಒಂದು ಮಾತು ಹೇಳಿದರು

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಸಾರ್ ನಮಗೆ ಒಂದೇ ಒಂದು ನಿಮಿಷ ಅವಕಾಶ ಕೊಡಿ ನಮ್ಮದು ಅರಣ್ಯ ರೋಧನವಾಗಿಬಿಟ್ಟಿದೆ ಇಲ್ಲ ಇಲ್ಲ ಅವರು ಬೆಳಗ್ಗಿನಿಂದ ಮಾತನಾಡುತ್ತಿದ್ದಾರೆ ನಾವು ಕೇಳುತ್ತಲೇ ಇದ್ದೇವೆ ನಾವು ಒಂದೆರೆಡು ನಿಮಿಷ ಹೇಳುವುದಕ್ಕೆ ಅವಕಾಶ ಮಾಡಿ ಕೊಡಬೇಕು ಈಗ ಅವರು ಕೂಡ ಬಹಳಷ್ಟು ವರ್ಷಗಳ ಕಾಲ ಅಧಿಕಾರವನ್ನು ನಡೆಸಿದವರು

ಅಧ್ಯಕ್ಷರು ಒಂದು ನಿಮಿಷ ಕುಳಿತುಕೊಳ್ಳಿ ಮಾನ್ಯ ಬಸವರಾಜು ರವರೆ, ತಾವು ಏನು ಹೇಳಬೇಕೋ ಅದನ್ನು ಹೇಳಿ ನಾನು ನಿಮಗೆ ಅವಕಾಶ ಕೊಟ್ಟಿದ್ದೇನೆ ನೀವು ಹೇಳಿ

ಶ್ರೀ ಹೆಚ್ ಡಿ ಬಸವರಾಜು ಅವರು ಎಷ್ಟು ವರ್ಷಗಳ ಕಾಲ ಅಧಿಕಾರ ನಡೆಸಿ ಎಷ್ಟು ಬಜೆಟ್ ಕೊಟ್ಟಿದ್ದಾರೆ? ಅವರು ಕೊಟ್ಟಿರುವ ಬಜೆಟ್‌ನಲ್ಲಿ ಇಂಥ ಒಳ್ಳೆಯದನ್ನು ಅವರು ಕೊಟ್ಟಿದ್ದಾರೆಯೇ? ನಾನು ಹೇಳಬೇಕಾದರೆ ಎರಡು ನಿಮಿಷ ನನಗೆ ಅವಕಾಶ ಬೇಡವೆ? ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನೀವು ಹಿರಿಯರು ಇದ್ದೀರಿ ಬಜೆಟ್‌ನ್ನು ಬೇಕಾದಷ್ಟು ಸಲ ಮಂಡನೆ ಮಾಡಿದ್ದೀರಿ ಆದರೂ ಕೂಡ

ಇಂಥ ಅತ್ಯುತ್ತಮವಾಗಿರತಕ್ಕಂಥ ಬಜೆಟ್‌ನ್ನು ಮಾನ್ಯ ಯಡಿಯೂರಪ್ಪನವರು ಕೊಟ್ಟಿರತಕ್ಕಂಥದ್ದನ್ನು ನೀವು ಕೊಡಲಿಕ್ಕೆ ಆಗಲಿಲ್ಲ ಅವರು ಕೊಟ್ಟಿದ್ದಾರೆ ನಿಯಮಾವಳಿ ಎಲ್ಲೋ ತಪ್ಪಿ ಹೋಗಿದೆ ಎಂದು ನೀವು ಹೇಳಿದಿರಿ ಅದಕ್ಕೆ ಮಾನ್ಯ ಎಂ ಪಿ ಪ್ರಕಾಶ್‌ರವರು ಸರಿಪಡಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ ಹೀಗಾಗಿ ಆ ನಿಯಮಾವಳಿಗಳನ್ನು ಸರಿಪಡಿಸಿಕೊಳ್ಳೋಣ ರೈತರಿಗೆ ಅನುಕೂಲವಾಗುತ್ತದೆ, ರೈತರ ಸಮಸ್ಯೆ ಪರಿಹಾರವಾಗುತ್ತದೆ, ಮೀನುಗಾರ ವರ್ಗದ ಜನರಿಗೆ ಅನುಕೂಲವಾಗಿದೆ, ನೇಕಾರ ವರ್ಗದ ಜನಗಳಿಗೆ ಅನುಕೂಲವಾಗಿದೆ ನೀವು ಇದನ್ನು ಸ್ವಾಗತಿಸಬೇಕು ನೀವು ಸ್ವಾಗತಿಸಿ ಅಭಿನಂದನೆಯನ್ನು ಹೇಳಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಿಡಬೇಕು ನೀವು ಎಲ್ಲಾ ಹಿರಿಯರು ಇದ್ದು ನಮಗೆ ಮಾರ್ಗದರ್ಶನ ಮಾಡಬೇಕು ನಮ್ಮ ತಾಲ್ಲೂಕಿನಲ್ಲಿ ಸಮಸ್ಯೆಗಳು ಎಷ್ಟು ಇವೆ, ಪ್ರಶ್ನೋತ್ತರದ ಮೂಲಕ ಅದನ್ನು ಪರಿಹಾರ ಮಾಡಿಕೊಳ್ಳಲಿಕ್ಕೆ ನಾವು ಬೆಳಗ್ಗೆಯಿಂದ ಕಾದುಕೊಂಡು ಕುಳಿತ್ತಿದ್ದೇವೆ ಪ್ರತಿನಿತ್ಯ ಧರಣಿ, ಪ್ರತಿಭಟನೆ, ಇವು ಇಷ್ಟೇ ಆಯಿತು ಎಂದರೆ, ನಮ್ಮ ಸಮಸ್ಯೆಗಳನ್ನು ನಾವು ಯಾರ ಹತ್ತಿರ ಹೇಳಿಕೊಳ್ಳುವುದಕ್ಕೆ ಆಗುತ್ತದೆ? ಮಾರ್ಗದರ್ಶನ ಮಾಡಬೇಕಾದಂಥ ಹಿರಿಯರಾದ ತಾವೆ, ಈ ರೀತಿ ಮಾಡಿದರೆ ಹೇಗೆ? ತಾವು ಇಷ್ಟು ವರ್ಷಗಳ ಕಾಲ ಅಧಿಕಾರ ಮಾಡಿದವರು ನೀವೆ ಈ ರೀತಿಯ ಮಾರ್ಗದರ್ಶನವನ್ನು ಅನುಸರಿಸಿದರೆ, ನಾವು ಯಾರಿಂದ ಪಾಠ ಕಲಿಯಬೇಕಾಗಿದೆ ದಯವಿಟ್ಟು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಮಾನ್ಯ ಯಡಿಯೂರಪ್ಪನವರು ಕೊಟ್ಟಿರತಕ್ಕಂಥ ಬಜೆಟ್‌ನ್ನು ಸ್ವಾಗತ ಮಾಡಿ ಏಕೆಂದರೆ, ಎಲ್ಲರೂ ಇದನ್ನು ಪ್ರಶಂಸೆ ಮಾಡುತ್ತಿದ್ದಾರೆ ಇಡೀ ರಾಜ್ಯ ಹಾಗೂ ರಾಜ್ಯದಲ್ಲಿರತಕ್ಕಂಥ ಸರ್ವರೂ ಮುಕ್ತ ಕಂಠದಿಂದ ಪ್ರಶಂಸೆ ಮಾಡುತ್ತಿದ್ದಾರೆ ನೀವು ಅಭಿನಂದಿಸಿ, ನಿಮ್ಮ ಧರಣಿಯನ್ನು ವಾಪಸ್ ತೆಗೆದುಕೊಳ್ಳಿ ಇದರಲ್ಲಿ ಪ್ರತಿಷ್ಟೆ ಬೇಡ ಸಾರ್ ತಾವು ಕೂಡ ಅಧಿಕಾರವನ್ನು ಮಾಡಿದ್ದೀರಿ ನಿಮ್ಮ ಅಧಿಕಾರದ ಅವಧಿಯಲ್ಲಿ ಆಗದೇ ಇರತಕ್ಕಂಥ ಹಲವಾರು ಒಳ್ಳೆಯ ಕೆಲಸಗಳು ಇವತ್ತು ಆಗುತ್ತಿವೆ ನೀವೆಲ್ಲಾ ಮುಕ್ತವಾಗಿ ಮುಕ್ತ ಕಂಠದಿಂದ ಸಹಕಾರ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನಾನು ಇನ್ನೂ ಮಾತನಾಡುತ್ತೇನೆ ಏಕೆ ಸಾಕಾಗುತ್ತದೆ? ಹಾಗೇನಿಲ್ಲ, ಮಾತನಾಡಬೇಕೆಂದರೆ, ನಾನು ಸಂಜೆಯವರೆಗೆ ಕೂಡ ಮಾತನಾಡುತ್ತೇನೆ ಆದರೆ ನೀವು ಧರಣಿ .ಮಾಡುತ್ತಾ ಬಾವಿಯಲ್ಲಿ ನಿಂತುಕೊಂಡು ಕ್ರಿಯಾಲೋಪದ ಬಗ್ಗೆ ಮತ್ತು ನಿಯಮಾವಳಿಯ ಬಗ್ಗೆ ಮಾತನಾಡುತ್ತಿದ್ದರಲ್ಲ, ಇದು ಸರಿ ಇದೆಯೇ? ಮಾರ್ಗದರ್ಶನ ಮಾಡುವಂಥವರು ನೀವು ಈ ತರಹ ಮಾಡಬಹುದಾ? ನೀವೆ ಪ್ರಾಮಾಣಿಕವಾಗಿ ಹೇಳಿ ಮಾಂಗೆ

ಮುಂಚೆ ಪ್ರಾಮಾಣಿಕ, ಪ್ರಾಮಾಣಿಕ ಎಂದು ಹೇಳುತ್ತಿರಲ್ಲಾ, ಇವತ್ತು ಆ ಪ್ರಾಮಾಣಿಕತೆ ನಿಮಗೆ ಎಲ್ಲಿದೆ?

ಅಧ್ಯಕ್ಷರು ಈಗ ಇದೇ ತರಹ ಸದನವನ್ನು ಮುಂದುವರಿಸಿಕೊಂಡು ಹೋಗತಕ್ಕಂಥದ್ದು ಸರಿಯಲ್ಲ ಆದುದರಿಂದ ಪ್ರಶ್ನೋತ್ತರಗಳನ್ನು ನಡೆಸಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ಮತ್ತೊಮ್ಮೆ ಎಲ್ಲರಿಗೂ ವಿನಂತಿ ಮಾಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇದು ಸರಿಹೋಗುವುದಿಲ್ಲ

(ಗೊಂದಲ)

ಅಧ್ಯಕ್ಷರು ಸರಿ ಹೋಗುವುದಿಲ್ಲವೆಂದರೆ ಹೇಗೆ ಸ್ವಾಮಿ? ಈಗ ಏನಾಗಿದೆ ಎಂದರೆ, ನೀವೇನು ನಿಂತುಕೊಂಡು ಮಾತನಾಡುತ್ತೀರಿ ಅದಕ್ಕೆ ಅವರೇನು ಮಾತನಾಡುತ್ತಾರೆ ಇದರಿಂದ ಏನು ಪ್ರಯೋಜನವಾಗುವುದಿಲ್ಲ ಈ ರೀತಿಯಾದರೆ ಪ್ರಯೋಜನೆ ಏನು ಇದೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಹೇಳಿ ಸಾರ್ ಅವರಿಗೆ ಮಾನ್ಯ ಯಡಿಯೂರಪ್ಪನವರು ಈಗ ಓದುತ್ತಿದ್ದಾರೆ ನಿಮ್ಮ ಮಾತು ಕೇಳುತ್ತಾರೆ ಅವರಿಗೆ ಹೇಳಿ

(ಗೊಂದಲ)

ಅಧ್ಯಕ್ಷರು ಎಷ್ಟು ಸಾರಿ ಹೇಳಬೇಕು

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ನಿಮ್ಮ ಆದೇಶಕ್ಕೆ ಅವರು ಮನ್ನಣೆ ಕೊಡುತ್ತಾರೆ, ನೀವು ಹೇಳಿ

(ಗೊಂದಲ)

ಅಧ್ಯಕ್ಷರು ಈಗ ಸದನ ನಡೆಯುವದಕ್ಕೆ ಅವಕಾಶ ಕೊಡಿ ನಾನು ಹೇಳುವುದು ಏನೆಂದರೆ ಈಗ ಸದನ ನಡೆಯಬೇಕಲ್ಲವೆ? ಈಗ ಇವರು ಅದೇ ವಿಚಾರ ಹೇಳುವುದು, ಅವರೂ ಅದೇ ವಿಚಾರ ಹೇಳುವುದು, ಹೊಸ ಹೊಸ ವಿಚಾರ ಏನೂ ಇಲ್ಲವೆ ಇಲ್ಲ ಏನು ಮಾಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಇನ್ನೊಂದು ಸಾರಿ ಅವರಿಗೆ ಒಂದು ಮಾತು ಹೇಳಿ ಸಾರ್

ಶ್ರೀ ಧರ್ಮಸಿಂಗ್ ಒಂದೇ ಸಾರಿ ರೈತರ ಪರವಾಗಿ ಆದೇಶ ಕೊಡಿ ಅಧ್ಯಕ್ಷರು ರೈತರ ಪರ ಇದ್ದಾರೆನ್ನುವ ಮೆಸೇಜ್ ಹೋಗಲಿ

(ಗೊಂದಲ)

ಶ್ರೀ ಎಚ್ ಎಸ್ ಬಸವರಾಜ್ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಬಜೆಟ್ ಕೊಟ್ಟಿರುವುದು, ಅದಕ್ಕೆ ರಾಜ್ಯದ ಜನತೆ ಶಹಭಾಷ್‌ಗಿರಿ ಕೊಟ್ಟಿರುವುದನ್ನು ನೋಡಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷದ ಕೆಲವರಿಗೆ ನಿಜವಾಗಲೂ ಹೊಟ್ಟೆ ಉರಿಯುತ್ತದೆ ಹೀಗಾಗಿ ಅವರು ಬಾವಿಗೆ ಬೀಳುತ್ತಿದ್ದಾರೆ ಪುಕ್ಕಟೆ ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ ನಿಜವಾಗಿ ಅವರು ಬಾವಿಗೆ ಬೀಳಬೇಕಾದರೆ ನೀರು ಇರತಕ್ಕಂಥ ಬಾವಿಗೆ ಬೀಳಲಿ ನೀರು ಇಲ್ಲದೇ ಇರತಕ್ಕಂಥ ಬಾವಿಗೆ ಬಿದ್ದು ಪುಕ್ಕಟೆ ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆ

ಅಧ್ಯಕ್ಷರು ಈಗ ಪ್ರಶ್ನೋತ್ತರವನ್ನು ನಡೆಸೋಣವೇ ಸ್ವಾಮಿ?

ಶ್ರೀ ಎನ್ ಧರ್ಮಸಿಂಗ್ ಈಗ ಹೇಗೆ ನಡೆಸುತ್ತೀರಿ?

ಅಧ್ಯಕ್ಷರು ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡಲಾಗಿದೆ

(ಸದನವು ಬೆಳಿಗ್ಗೆ 11 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧಗಂಟೆಯ ನಂತರ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

(ಸಭೆಯು 12 ಗಂಟೆ 38 ನಿಮಿಷಕ್ಕೆ ಮರು ಸಮಾವೇಶ ಗೊಂಡಿತ್ತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಸದನದ ಬಾವಿಯಲ್ಲಿ ಶ್ರಿ ಜೆ ಸಿ ಮಾಧುಸ್ವಾಮಿ, ಶ್ರೀ ಜೆ ವಿ ಶ್ರೀರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ ಜಯಪ್ರಕಾಶ್ ಹೆಗ್ಡೆ, ಶ್ರೀ ಎಸ್ ರಾಜೇಂದ್ರನ್ ರವರು ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರೆ ತಾವು statement ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವುಗಳೆಲ್ಲರೂ ಚರ್ಚೆಗೆ ಬರಬೇಕು ನಾನು ಮತ್ತು ಹಿರಿಯ ಸಚಿವರಾದ ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ ನಾವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅದರ ಬಗ್ಗೆ ಚಿಂತನೆ ಮಾಡುತ್ತೇನೆಂದು ಹೇಳಿದ್ದೇನೆ ತಾವು ದಯಮಾಡಿ ಸಹಕಾರವನ್ನು ಕೊಟ್ಟರೆ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ ಒಂದು ಸರ್ಕಾರದ ಮೇಲೆ ಹೀಗೆಯೇ ಮಾಡಬೇಕೆಂದು ಹೇಳಿ, ಹೋರಾಟ ಮಾಡಬಹುದು, ಧರಣಿಯನ್ನು ಮಾಡಬಹುದು, ಆಮೇಲೆ ವಾಕ್‌ಔಟ್ ಮಾಡಬಹುದು ಆದರೆ question hour ಇತರೆ ಕಾರ್ಯಕಲಾಪಗಳು ಆಗದ ಹಾಗೆ ತಡೆಯುವುದಕ್ಕೆ ದಯಮಾಡಿ ಅದಕ್ಕೆ ಅವಕಾಶವನ್ನು ಮಾಡುವುದಕ್ಕೆ ಹೋಗಬೇಡಿ

(ಮಾನ್ಯ ಸದಸ್ಯರೊಬ್ಬರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ನಾವು ನಿಮ್ಮನ್ನು ವೆಲ್‌ನಲ್ಲಿ ಕೂರಿಸಿ ಕೆಲಸ ಮಾಡಬೇಕೆಂಬ ಉದ್ದೇಶವಿಲ್ಲ ಖಂಡಿತವಾಗಿ ಎಲ್ಲರೂ ಕುಳಿತುಕೊಂಡು ಇದರ ಬಗ್ಗೆ ಚರ್ಚೆ ಮಾಡಿ ಪರಿಶೀಲನೆಯನ್ನು ಮಾಡೋಣ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ ಬನ್ನಿ ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ, ಬೇರೆ ಕಾರ್ಯಕಲಾಪಗಳು ನಡೆಯಬೇಕೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಉಪಮುಖ್ಯಮಂತ್ರಿಗಳು ಇದನ್ನು ಪರಿಶೀಲನೆ ಮಾಡುತ್ತೇನೆಂದು ಒಪ್ಪಿದ್ದಾರೆ ಆದ್ದರಿಂದ ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಬೇಕು ಪರಿಶೀಲನೆಯನ್ನು ಮಾಡಿ ಸೂಕ್ತ ಕಾಲದಲ್ಲಿ ಅವರು ಹೇಳುತ್ತೇನೆಂದು ಹೇಳಿದ್ದಾರೆ ಆದ್ದರಿಂದ ದಯಮಾಡಿ ನಿಮ್ಮ ಸ್ಥಾನಗಳಿಗೆ ಹೋಗಬೇಕು

(ಮಾನ್ಯ ಸದಸ್ಯರೊಬ್ಬರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಶ್ರೀ ಮಹಿಮಾ ಪಟೇಲ್ ತಾವುಗಳು ನಿಮ್ಮ ಜಾಗಕ್ಕೆ ಬಂದು ಮಾತನಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ನಾನು ಸಹ 20 ವರ್ಷಗಳಿಂದ ಈ ಮನೆಯ ಸದಸ್ಯನಾಗಿದ್ದೇನೆ ಹೀಗೆ ಮಾಡಬೇಕು, ಹೀಗೆ ಹೇಳಿಕೆಯನ್ನು ಕೊಡಬೇಕು ಎಂದು ಈ ತರಹದ demand ಮಾಡುವುದಕ್ಕೆ ಬರುವುದಿಲ್ಲ ಅದು ಸಾಧ್ಯವಿಲ್ಲದಿರುವಂತಹ ಮಾತು ಅದು ಆಗುವುದಿಲ್ಲ ಪರಿಶೀಲನೆ ಮಾಡಬಹುದು ಎಂದು ಹೇಳಬಹುದೇ ಹೊರತು, ನೀವು ಹೀಗೆ ಮಾಡಬೇಕು, ಈಗಾಗಲೇ ಹೇಳಬೇಕು ಅಂದರೆ ಅದು ಆಗುವುದಿಲ್ಲ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದರಿಂದ ಯಾರಿಗೂ ಕೂಡ ಗೌರವ ತರುವಂತಹದಲ್ಲ ಇದು ಸಾಧ್ಯವಿಲ್ಲ

(ಸದನದ ಬಾವಿಯಲ್ಲಿ ಮಾನ್ಯ ಸದಸ್ಯರೊಬ್ಬರು ನಿಂತುಕೊಂಡು ಮಾತನಾಡುತ್ತಿದ್ದರು)

ಶ್ರೀ ಎನ್ ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಕಲಾಪವನ್ನು ನಡೆಸಬೇಕಾದರೆ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ವೆಲ್‌ನಲ್ಲಿ ಇರಿಸಿ ಮಾಡುವುದಕ್ಕಾಗುವುದಿಲ್ಲ ಅವರು ತಮ್ಮ ಸೀಟಿಗೆ ಬರಬೇಕಾಗುತ್ತದೆ ನಿಮ್ಮನ್ನು ನಾವು ಹೇಗೆ ಬಿಡುತ್ತೇವೆ ತಾವು ಸದನವನ್ನು ಅರ್ಧ ಗಂಟೆಗಳ ಕಾಲ ಮುಂದಕ್ಕೆ ಹಾಕಿದ್ದೀರಿ, ಮುಂದಕ್ಕೆ ಹಾಕಿದ ಮೇಲೆ ಅವರು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆಂದರೆ ಏನರ್ಥ? ತಾವು ಯಾರನ್ನು ಕರೆಸಿದ್ದೀರಿ? What is the

purpose of adjourning he House for half an hour? ಇದರ ಬಗ್ಗೆ ಮಾತುಕತೆಯಾಯಿತೇ, ಇದರ ಬಗ್ಗೆ ಏನಾಯಿತು? ಇದರ ಬಗ್ಗೆ ಏನು ಚರ್ಚೆ ಕೂಡ ಆಗಲಿಲ್ಲ ಏನೂ ಆಗದೇ ಇದ್ದರೆ, ಪರಿಶೀಲನೆ ಮಾಡುತ್ತೇನೆಂದರೆ ಹೇಗೆ?

ಅಧ್ಯಕ್ಷರು ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥಮಾಡಿಕೊಳ್ಳಬೇಕು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈಗ ತಾವುಗಳು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕು ತಾವು ಮತ್ತು ಮಾನ್ಯ ಖರ್ಗೆಯವರು, ಬೇರೆಯವರು ವಿಚಾರವನ್ನು ಎತ್ತಿದವರು, ಆವರು ಹೇಳಿದ್ದನ್ನೇ ಹೇಳುವವರು ಇವರು ವೆಲ್‌ನಲ್ಲಿಯೇ ಇರುವವರು ಈ ರೀತಿಯಾಗಿ ನಾನು ಸದನವನ್ನು ಎಷ್ಟು ಕಾಲ ನಡೆಸಬಹುದುದು ಎಂದು ತಾವು ಹೇಳಬೇಕು ಅದಕ್ಕಾಗಿ ನಾನು wait ಮಾಡಿ, ಮಾಡಿ, question hour ತೆಗೆದುಕೊಳ್ಳೋಣ ಎಂದು ಕೇಳಿ, ಕೇಳಿ ಕೊನೆಗೆ ನಾನು ವಿಧಿಯಿಲ್ಲದೆ adjourn ಮಾಡಿ ಒಳಗೆ ಹೋದೆ ಈಗ ಏನಾಗಿದೆ ಎಂದರೆ ನಿಮ್ಮಲ್ಲಿ meeting ground ಇಲ್ಲ ಅವರು ಹೇಳಿದರೆ ಅಷ್ಟೇ ಸ್ವಾಮಿ ಈಗ ಏನು ಇಲ್ಲ ಎಂದು ಹೇಳುತ್ತಾರೆ ಆ ಕಾರಣದಿಂದ ಮತ್ತೊಮ್ಮೆ ನಾನು ಎಲ್ಲರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಈ ಸದನದ ಕಲಾಪಗಳನ್ನು ನಡೆಸೋಣ ನಾನು ಕೂಡ ಸಮಾಲೋಚನೆಯನ್ನು ಮಾಡಬೇಕಾಗಿದೆ ಅದಕ್ಕಾಗಿ ಪರಿಶೀಲನೆಯನ್ನು ಮಾಡುತ್ತೇನೆಂದು ಅವರು ಹೇಳಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪರಿಶೀಲನೆ ಮಾಡುವುದು ಏನು ಉಳಿದಿಲ್ಲ Extend ಮಾಡುವುದು, ಅವರು ಅನೌನ್ಸ್, ಮಾಡಿದರೆ ಮಾಡುತ್ತೇನೆಂದು ಹೇಳುವುದು ಈಗ ಪರಿಶೀಲನೆ ಏನು ಇದೆ, ಎಲ್ಲಾ ಸೇರಿದರೂ ಕೂಡ 1660 ಕೋಟಿ ರೂಪಾಯಿಗಳಾಗುತ್ತದೆ ಅವರ ಲೆಕ್ಕದಲ್ಲಿ 1950 ಕೋಟಿ ರೂಪಾಯಿಗಳು ಎಂದು ಹೇಳಿಕೊಂಡಿದ್ದಾರೆ ಅದನ್ನು ಹೇಳಿಕೊಳ್ಳಲಿ ಇದನ್ನು ಬಿಟ್ಟು ಜಾಸ್ತಿ ಒಂದು ನಯಾಪೈಸೆಯೂ ಕೂಡ ಆಗುವುದಿಲ್ಲ Time 31 03 2007 ರ ಬದಲಾಗಿ 1st June 2007 ಎಂದು ಮಾಡಲಿ ಅದು ಸಹ ರೈತರಿಗೆ ತೊಂದರೆಯಾಗುತ್ತದ ತಮಗೆ ಗೊತ್ತಿದೆ ನಮ್ಮ ಭಾಗದಲ್ಲಿ ಈಗಾಗಲೇ ಬರಗಾಲವಿದೆ ಕೊಡುವುದಕ್ಕಂತೂ ಕೂಡ ಆಗುವುದಿಲ್ಲ ಜೂನ್‌ನಲ್ಲಿ ಕಷ್ಟವಾಗುತ್ತದೆ ಕೊನೆಗೆ ಅವರು ಏನಾದರೂ ಕೊಡಬೇಕೆಂದರ ಪುನಃ ಖರೀಫ್ ಕ್ರಾಪ್ ಬಂದ ಮೇಲೆಯೇ ಕೊಡಬೇಕೇ ಹೊರತಾಗಿ ಅವರ ಮನೆಯಲ್ಲಿ ದುಡ್ಡು ಇರುವುದಿಲ್ಲ ಅದಕ್ಕಾಗಿ ಪರಿಶೀಲನೆ ಮಾಡಿ ಎಂದು ಹೇಳಿದ್ದೇವೆ

ಶ್ರೀ ಬಿ ಎಸ್ ಯಡಿಯೂರಪ್ಪ – ಅವರು ಹಣವನ್ನು ಕಟ್ಟುವುದಕ್ಕಾಗುವುದಿಲ್ಲ Co-operative Society ಮುಳುಗಿ ಹೋಗಲಿ ನಾನು ರೈತರಲ್ಲಿ ವಿನಂತಿಯನ್ನು ಮಾಡುತ್ತೇನೆ ಅವರಿಂದ ಕಟ್ಟಿಸೋಣ, ಅದನ್ನು ನಡೆಸೋಣ ಇದರ ಮೂಲಕ ರಾಜ್ಯದ ರೈತರಿಗೆ "ಸಾಲವನ್ನು ಕಟ್ಟಬೇಡಿ, ಅಸಲನ್ನು ಕಟ್ಟಬೇಡಿ ಬಡ್ಡಿಯನ್ನು ಮನ್ನಾ ಮಾಡಿ ಸಹಕಾರ ಸಂಘಗಳು ಮುಳುಗಿ ಹೋಗಲಿ" ಇದು ನೀವು ರೈತರಿಗೆ messageನ್ನು ಕೊಡುವಂಥಹದ್ದು

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾವು ಎಲ್ಲಿಯೂ ಆ ರೀತಿ ಹೇಳಲಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾನು ಮನವರಿಕೆ ಮಾಡುತ್ತಿರುವುದು ಇದು ಅದಕ್ಕಾಗಿ ನಾನು ಹೇಳಿದೆ ಅಧ್ಯಕ್ಷರೆ, ದಯವಿಟ್ಟು ನಿಮ್ಮ direction ಮೇಲೆ ಅವರು ಹೇಳುತ್ತಾರೆ, ಆ ಒಂದು ಮಾತನ್ನು ತಾವು ರೈತರ ಪರವಾಗಿ ಹೇಳುವ ಬಗ್ಗೆ directionಅನ್ನು ಕೊಡಿ

ಅಧ್ಯಕ್ಷರು ಹೊಸದನ್ನು ಆರಂಭ ಮಾಡೋಣ

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಹುಟ್ಟಿಸಿದಂತಹ ಕೂಸು ಅದು ಆ ಪಾಪದ ಕೂಸು ನಿಮ್ಮದೆ

ಅಧ್ಯಕ್ಷರು ದಯಮಾಡಿ ನಾನು ಅದನ್ನೇ ಕೇಳಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ದಯವಿಟ್ಟು ಅವರಿಗೆ ತಾವು direction ಅನ್ನು ಕೊಡಿ

ಅಧ್ಯಕ್ಷರು ತಾವು ಹೇಳಿಕೆಯನ್ನು ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ ಕೊಟ್ಟಿದ್ದಾರೆ ಅದಕ್ಕಾಗಿ, ಹೀಗೆ ಕೊಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ

ಶ್ರೀ ಎಂ ಪಿ ವೆಂಕಟೇಶ್ ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಮನವಿಯನ್ನು ಈಗ ತಿಪ್ಪರಲಾಗ ಹಾಕಿದರೂ ಕೂಡ ಒಪ್ಪಿಕೊಳ್ಳಲು ಆಗುವುದಿಲ್ಲ ಅದರ ಬಗ್ಗೆ ನಾವು ಶಾಸಕಾಂಗ ಪಕ್ಷದಲ್ಲಿ ತೀರ್ಮಾನ ಮಾಡುತ್ತೇವೆ ನಾವು ರೈತರ ಪರವಾಗಿ ಕೆಲಸವನ್ನು ಮಾಡುತ್ತೇವೆ ಇವರು ಸುಮ್ಮಸುಮ್ಮನೆ ಹೇಳಿ ನಾವು ಒಪ್ಪಿಸಿದ್ದೇವೆಂದು ಹೇಳುವುದಕ್ಕೆ ಅವಕಾಶವಾಗುವುದಿಲ್ಲ ಆ ರೀತಿ ಆಗುವುದಿಲ್ಲ ನಾವು ಶಾಸಕಾಂಗ ಪಕ್ಷದಲ್ಲಿ ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ ಈ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ತೀರ್ಮಾನವನ್ನು ಮಾಡುತ್ತಾರೆ ಇದರಿಂದ ರೈತರಿಗೆ ಒಳ್ಳೆಯ ಕೆಲಸವಾಗುತ್ತದೆ ಇವರು ಹಟ ಮಾಡಿ, ಮಾಡಿ ಎಂದು ಹೇಳುವುದಕ್ಕೆ ಅವಕಾಶವನ್ನು ಕೊಡಬೇಡಿ

ಅಧ್ಯಕ್ಷರು ಈಗ ನಾವು ಕಲಾಪವನ್ನು ನಡೆಸದೇ ಈ ರೀತಿ ಕುಳಿತುಕೊಳ್ಳುವುದು ಸರಿಯಲ್ಲ ದಯಮಾಡಿ ಕಲಾಪವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಿ

ಶ್ರೀ ಮಹಿಮಾ ಪಾಟೀಲ್ ಮಾನ್ಯ ಹಿರಿಯ ಸದಸ್ಯರು ಈ ತರಹದ ಕಲಾಪಕ್ಕೆ ಅಡ್ಡಿ ಮಾಡದ ಹಾಗೆ ಕಲಾಪವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು ನಮಗೆಲ್ಲರಿಗೂ ಮಾರ್ಗದರ್ಶಕರಾಗಿರಬೇಕು ನಿನ್ನೆ ಹಿರಿಯ ಸದಸ್ಯರು ಎಂದು ಹೇಳುತ್ತಿದ್ದರು, ಇರಿಯ ಸದಸ್ಯರು ಎಂದು ಆಗಬಾರದು

ಶ್ರೀ ಎನ್ ಧರ್ಮಸಿಂಗ್ ತಾವು ಅರ್ಧ ಗಂಟೆ ಕಾಲ ಸದನವನ್ನು ಮುಂದಕ್ಕೆ ಹಾಕಿದ್ದೀರಿ ಸದನವನ್ನು ಮುಂದೂಡಿದ ಮೇಲೆ ತಾವು ಯಾರನ್ನಾದರೂ ಕರೆಸಿದ್ದೀರಾ? ಏನು ಮಾಡಬೇಕೆಂಬ ಬಗ್ಗೆ ಸಮಾಲೋಚನೆಯನ್ನು ಮಾಡಿದ್ದೀರಾ?

ಅಧ್ಯಕ್ಷರು ಕರೆಸಿಲ್ಲವೆಂದರೆ, ನಾನು ಅವರನ್ನು ಕೇಳಿ,ಅಷ್ಟೆ, ಅದಕ್ಕಿಂತ ನಾನು ಏನು ಈಗ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ ಈಗ meeting ground ಇಲ್ಲದಿದ್ದರೆ, ಹೇಗೆ ಮಾಡುವುದು ಹೇಳಿ?

ಶ್ರೀ ಎನ್ ಧರ್ಮಸಿಂಗ್ ಅವರು adamant ಬಜೆಟ್ ಬಗ್ಗೆ discussionಗೆ ಬರುವುದಿಲ್ಲ ಮಧ್ಯದಲ್ಲಿ ಬಂದು 50 ಸಾವಿರ ರೂಪಾಯಿಗಳನ್ನು ನಾನು ರಿಯಾಯಿತಿಯನ್ನು ಕೊಡುತ್ತೇನೆಂದು ಹೇಳತಕ್ಕಂತಹ ರೀತಿಯಲ್ಲಿ, ಮಾನ್ಯ ಖರ್ಗೆಯವರು ಹೇಳಿದ ಹಾಗೆ, 31ನೇ ತಾರೀಖಿನ ಒಳಗಾಗಿ ಸಾಲ ಕಟ್ಟಬೇಕೆಂದು ರೈತರಿಗೆ ಹೇಳಿದರೆ, ಎಲ್ಲಿ ಆಗುತ್ತದೆ? 128 ತಾಲ್ಲೂಕುಗಳಲ್ಲಿ ಬರಗಾಲವಿದೆ ನೀರಿನ ಹಾಹಾಕಾರವಿದೆ, ಇವತ್ತು ಜೂನ್‌ನಲ್ಲಿ ಕಟ್ಟುವುದಕ್ಕೆ ಕೂಡ ನಮ್ಮ ಭಾಗದ ಎಲ್ಲಾ ರೈತರಿಗೂ ಕೂಡ ತೊಂದರೆ ಇದೆ ಇವತ್ತು ಸುಮ್ಮನೆ ಹೇಳಿಕೆ ಕೊಟ್ಟು ಸಾಲ ಮನ್ನಾ ಮಾಡುತ್ತೇನೆಂದು ಹೇಳಿದರೆ ರೈತರಿಗೆ ಸಹಾಯ ಮಾಡುತ್ತೇವೆ ನನ್ನ ಬಜೆಟ್ ಮನೆಮನೆಯಲ್ಲೂ ಕೂಡ ಚರ್ಚೆಯಾಗುತ್ತದೆ ಎಂದು ತಾವು ಹೇಳುತ್ತಿದ್ದೀರಿ ಇವತ್ತು ತಾವು 50 ಸಾವಿರ ರೂಪಾಯಿಗೆ ರಿಯಾಯಿತಿಯನ್ನು ಕೊಡುವಂತಹ ರೀತಿಯಲ್ಲಿ ನಿಯಮಗಳ ಬಾಹಿರವಾಗಿ ಮಂಡಿಸಿದ್ದಾರೆ ಅದರ ಬಗ್ಗೆ ನಾವು ಆಕ್ಷೇಪಣೆಯನ್ನು ಎತ್ತಿದ್ದೇವೆ ಅದಕ್ಕೆ ನೀವು ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕು ತಾವು ಉಪ ಮುಖ್ಯಮಂತ್ರಿಗಳಾಗಿದ್ದೀರಿ, ಹಣಕಾಸಿನ ಸಚಿವರಾಗಿದ್ದೀರಿ, ಅದರ ಬಗ್ಗೆ ತಾವು ಏನು ಹೇಳುತ್ತೀರೋ ಅದೇ ನಡೆಯುತ್ತದೆ ತಾವು ಏನೂ ಬಜೆಟ್‌ನಲ್ಲಿ ಆ ರೀತಿಯಾಗಿ ಹೇಳಲಿಲ್ಲ ತಮ್ಮದೇ ಆದಂತಹ ಬಜೆಟ್‌ನ್ನು ತಾವು ಮಂಡನೆ ಮಾಡಿದ್ದೀರಿ ನಮ್ಮ ಬೇಡಿಕೆ ಏನು ಇದೆ ಅದನ್ನು ಈಡೇರಿಸುವಂತಹದ್ದು ಆಗಬೇಕು ಈಗಾಗಲೇ ಅದರ

ಬಗ್ಗೆ ಅವರು ಹೇಳಬೇಕು ಹಾಗೂ ಸದನದ ಕಾರ್ಯಕಲಾಪಗಳು ಕೂಡ ಸುಗಮವಾಗಿ ನಡೆಸಬೇಕು ತಾವು ಏನು ಹೇಳುತ್ತೀರಿ, ಪ್ರಶ್ನೋತ್ತರ, ಇದಕ್ಕೆ ರೈತರ ಪರವಾಗಿ ಹೋರಾಟ ಮಾಡುವಂತಹ ಮಂಡ್ಯ ಜಿಲ್ಲೆಯಿಂದ ತಾವು ಆರಿಸಿ ಬಂದಿದ್ದೀರಿ ಆ ಪೀಠದ ಮೇಲೆ ಕುಳಿತು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು ಇದರ ಬಗ್ಗೆ ತಾವು ಹೇಗೆ ಮಾಡುತ್ತೀರೆಂದು ಅವರಿಗೆ ಕೇಳಬೇಕು

ಅಧ್ಯಕ್ಷರು ಈಗ ಏನಪ್ಪಾ ಅಂದರೆ "ಮಾಡಿಬಿಡಿ" ಎಂದು ಹೇಳಿಬಿಡುವುದೇ? ಮಾನ್ಯ ಯಡಿಯೂರಪ್ಪರವರೆ, ನಾನು ಮಾಡಿಬಿಡುತ್ತೇನೆಂದು ನೀವು ಹೇಳಿದರೆ ನಾನು ಹೇಳಿಬಿಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಅವರು ಕೂಡ ಮಂಡ್ಯ ಜಿಲ್ಲೆಯವರು ನೀವು ಕೂಡ ಮಂಡ್ಯ ಜಿಲ್ಲೆಯವರು ಅದಕ್ಕೆ ಅವರು ಖಂಡಿತವಾಗಿಯೂ ಮಾಡಿಬಿಡುತ್ತಾರೆ ನೀವು ಹೇಳಿ ನೋಡಿ

ಶ್ರೀ ಧರ್ಮಸಿಂಗ್ ಮಾಡಬೇಕೆಂದು ತಾವು ಹೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ನಗುನಗುತ್ತಾ ಹೇಳಬೇಕು Serious ಆಗಿ ಹೇಳಿದರೆ ಹೇಗೆ?

ಅಧ್ಯಕ್ಷರು ಅವರು ಏನು ಮಾಡುವುದಿಲ್ಲವೆಂದು ನೋಡುತ್ತೀರಾ?

(ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತಿದ್ದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಕೇಳುತ್ತಾರೆ, ಅವರು ಅಕ್ಕಪಕ್ಕದಲ್ಲಿ ಇರುವವರಿಗೆ consult ಮಾಡದೇ ಇರಬಹುದು ಆದರೆ ಮಾತ್ರ ನಿಮ್ಮ ಮಾತನ್ನು ಕೂಡ ಅವರು ಮೀರುವುದಿಲ್ಲ

ಶ್ರೀ ಡಿ ಕೆ ಶಿವಕುಮಾರ್ ಮಾನ್ಯ ಅಧ್ಯಕ್ಷರೆ, ನಿಮಗೆ ರೈತರ ಕಷ್ಟ ಏನೆಂದು ಗೊತ್ತಿದೆ ರೈತರಿಗೆ ಸಹಾಯ ಮಾಡುವುದರಿಂದ ಏನು ಅನುಕೂಲ ಸರ್ಕಾರಕ್ಕೆ ಆಗುತ್ತದೆಂದು ಗೊತ್ತಿದೆ ಜೊತೆಗೆ ಈ ಸರ್ಕಾರ ಬಂದಿರುವುದೇ ತಮ್ಮ ಆಶೀರ್ವಾದದಿಂದ, ತಾವು ಆಶೀರ್ವಾದ ಮಾಡದೇ ಇದ್ದಿದ್ದರೆ ಈ ಸರ್ಕಾರವೇ ಇರುತ್ತಿರಲಿಲ್ಲ ಕೊನೆಗೆ ತಮ್ಮ ಆದೇಶವನ್ನು ಕೊಟ್ಟುಬಿಡಿ ಕೊನೆಗೆ ಒಂದು ಶ್ರೀ ಕೃಷ್ಣಂದು ಆದೇಶವಿದೆಯಲ್ಲಾ, ಆ ಆದೇಶವಿದ್ದರೆ ಮಾತ್ರ ಯುದ್ಧ ಗೆಲ್ಲುವುದಕ್ಕೆ ಸಾಧ್ಯ ಆದ್ದರಿಂದ ತಾವು ದಯಮಾಡಿ ಮೇಲಿನಿಂದ ಒಂದು ಆದೇಶವನ್ನು ಕೊಡಿ ಕೃಷ್ಣ ಇಲ್ಲವೆಂದರೆ ಎಲ್ಲಿ ಜಯ ಇದೆ? ಜಯ ಆಗುವುದಕ್ಕೆ ಸಾಧ್ಯವಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಆಗ ಕಾಂಗ್ರೆಸ್‌ನವರು ಅಧಿಕಾರ ಬೇಕೆಂದು ಕೊಟ್ಟಾಗ ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ ಸಾರ್

(ಗೊಂದಲ)

ಅಧ್ಯಕ್ಷರು ಇದು ಸೂಕ್ತವಾಗಿರುವುದರಿಂದ ಒಳ್ಳೆಯದಾಗುತ್ತದೆ ಅದಕ್ಕಾಗಿ ಹೇಳಿಬಿಡಿ

ಶ್ರೀ ಡಿ ಕೆ ಶಿವಕುಮಾರ್ ನೀವು ಇಲ್ಲದೆ ಇದ್ದರೇ ಸರ್ಕಾರವೆ ಹೊರಟು ಹೋಗಿ ಬಿಡುತ್ತಿತ್ತು ಇವರ ಅರ್ಜಿಯನ್ನು ಸ್ವೀಕಾರ ಮಾಡಲಿಲ್ಲವೆಂದರೆ membership ಹೊರಟು ಹೋಗುತ್ತಿತ್ತು

ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರಿಗೆ ಅರ್ಜೆಂಟ್ ಕೆಲಸ ಇರುವುದರಿಂದ ಅವರು ವಿತ್ತೀಯ ಕಾರ್ಯಕಲಾಪವನ್ನು ಮಂಡನೆ ಮಾಡುತ್ತಾರ ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು

(ಗೊಂದಲ)

2 ವಿತ್ತೀಯ ಕಾರ್ಯಕಲಾಪ

ವಿಷಯ 2007–08ನೇ ಸಾಲಿನ ಪೂರಕ ಅಂದಾಜುಗಳು ಎರಡನೇ ಹಾಗೂ ಅಂತಿಮ ಕುರಿತು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಮಾನ್ಯ ಅಧ್ಯಕ್ಷರೆ, 2007–08ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಹಾಗೂ ಅಂತಿಮ ಕಂತು) ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

====

ಅಧ್ಯಕ್ಷರು ಅವರು ಮಂಡನೆ ಮಾಡುತ್ತಾರೆ

ಶ್ರೀ ಎನ್ ಧರ್ಮಸಿಂಗ್ ಅದನ್ನು ಮಾಡುವುದಕ್ಕೆ ಬರುವುದಿಲ್ಲ ವಿತ್ತೀಯ ಕಾರ್ಯಕಲಾಪವನ್ನು ಹೇಗೆ ಮಂಡಿಸುತ್ತಾರೆ?

ಅಧ್ಯಕ್ಷರು ಈಗ ಏನಾಗಿದೆ ಎಂದರೆ, ಪೂರಕ ಅಂದಾಜುಗಳು ಎಲ್ಲವನ್ನು ತಾವು ಓದಬೇಕು ಸೋಮವಾರದಿಂದ ಚರ್ಚೆಯಾಗಬೇಕು ಆ ಕಾರಣದಿಂದ ಅದನ್ನು ಮಂಡನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ ಈಗ ಮಾನ್ಯ ಯಡಿಯೂರಪ್ಪನವರೆ, ಇವರ ಬೇಡಿಕೆ ಏನು ಇದೆ, ಅದರ ಬಗ್ಗೆ ಅಷ್ಟೋ ಇಷ್ಟೋ positive ಆಗಿ ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ ನನಗಿಂತ ಹೆಚ್ಚು ರೈತರ ಪರವಾಗಿ ಯಾರೂ ಇಲ್ಲ ಸಾರ್ ನಾನು ರೈತರ ಪರವಾಗಿ ಇರುವವನು ರೈತರ ಪರವಾಗಿ ಏನು ಮಾಡುವುದಕ್ಕೂ ಕೂಡ ನಾನು ಸಿದ್ಧನಿದ್ದೇನೆ ಹಿಂದೆ ಇತಿಹಾಸದಲ್ಲಿ ಯಾರೂ

ಮಾಡದೇ ಇರುವಂತಹ ಕೆಲಸವನ್ನು ಮಾಡಿದ್ದೇನೆ ಹಿಂದೆ ಯಾರು ಮಾಡದೇ ಇರುವಷ್ಟು ಮಾಡಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಅಕ್ಕಿಯ ಮೇಲೂ ಆಸೆ ಹಾಗೆ ಪ್ರೀತಿ ರೈತರ ಜೊತೆಯಲ್ಲಿ ಲಗ್ನ ಇನ್ನೊಬ್ಬರ ಜೊತೆಯಲ್ಲಿ

ಅಧ್ಯಕ್ಷರು ಆಸೆ ಯಾವ ರೀತಿಯದು ಕೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಅಕ್ಕಿ ಮೇಲ ಆಸೆ, ಬೀಗರ ಮೇಲೆ ಪ್ರೀತಿ ಎಂದು ಹೇಳುವುದು ಹೀಗಾದರೆ ಹೇಗೆ?

ಅಧ್ಯಕ್ಷರು ರೈತರ ಮೇಲೇನೋ ಪ್ರೀತಿ, ಆಸ ಯಾವುದೆಂದು ಕೇಳಿ

ಶ್ರೀ ಆರ್ ವಿ ದೇಶಪಾಂಡೆ – ಈಗ ಸದಸವು ಆರ್ಡರ್‌ನಲ್ಲಿಲ್ಲ ಎರಡನೆಯದು ಬಜೆಟ್ ಮೇಲೆ discussion ಆಗಿಲ್ಲ ಮಾನ್ಯ ಉಪ ಮುಖ್ಯಮಂತ್ರಿಗಳು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ತಂದರು, ಸರಿಯೇ ಇದು? ಯಾವಾಗಲಾದರೂ ಹೀಗೆ ಆಗಿತ್ತೇನು? ಅವರು ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ ಮಾನ್ಯ ಉಪಮುಖ್ಯಮಂತ್ರಿಗಳು ಸದನದಿಂದ ಹೊರಗೆ ಹೋಗುತ್ತಿದ್ದಾರೆ

ಅಧ್ಯಕ್ಷರು – ಪೂರಕ ಅಂದಾಜುಗಳನ್ನು ಮಂಡನೆ ಮಾಡಿದ್ದಾರೆ ಸೋಮವಾರದಿಂದ ಬಜೆಟ್ ಮೇಲೆ ಚರ್ಚೆ ಮಾಡಬೇಕಾಗಿದೆ

(**ಗೊಂದಲ**)

ಶ್ರೀ ಮಲ್ಲಿಕಾರ್ಜುನ ಖರ್ಗೆ – ನಾವು ಇದನ್ನು protest ಮಾಡುತ್ತೇವೆ ಈ ರೀತಿ ಮಾಡಿದರೆ ನಾವು ಕೂಡ ನೋಡಬೇಕಾಗುತ್ತದೆ

ಶ್ರೀ ಆರ್ ವಿ ದೇಶಪಾಂಡೆ – ಇದು ಸರಿಯಲ್ಲ ಈ ರೀತಿ ಪದ್ಧತಿಯಿದೆಯೇ, ಹೇಳಿ ನಿಮ್ಮ ಅಜೆಂಡಾದಲ್ಲಿ ಏನಿದೆ? ಅಜೆಂಡಾದಲ್ಲಿರುವುದನ್ನು ತಗೆದುಕೊಳ್ಳುವುದಿಲ್ಲ ನಾವು ಒಂದು ಬೇಡಿಕೆಯನ್ನು ಇಟ್ಟಿದ್ದೇವೆ House is not in order ಈಗ supplementary estimates ಕೊಟ್ಟಿರಬಹುದು ಅದಕ್ಕಿಂತ ಮುಂಚೆ, ಅದಕ್ಕಾಗಿ ಕೆಲವು ರೂಲ್ಸ್ ಇದೆ ಬಜೆಟ್ ಮೇಲೆ discussion ಶುರು ಆಗಿಲ್ಲ ಬಜೆಟ್ ಮೇಲೆ ಚರ್ಚೆ ಆರಂಭವಾಗಲಿ, ಸಪ್ಲಿಮೆಂಟರಿ ಬರಬೇಕಾಗುತ್ತದೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಮೇಲೆ ಚರ್ಚೆ ಮಾಡಬೇಕಾಗುತ್ತದೆ, ನಾವು ಟೀಕೆ ಟಿಪ್ಪಣಿ ಮಾಡಬೇಕಾಗುತ್ತದೆ ಅದು ಪಾಸಾಗಬೇಕಾಗುತ್ತದೆ ಅದನ್ನು ನಾವು ವಿರೋಧ ಮಾಡುವುದಿಲ್ಲ ಆದರೆ ಪದ್ಧತಿ ಏನು? ಮನಸ್ಸು ಬಂದಾಗ, ಯಾವಾಗ ಬೇಕಾದರೂ statement ಮಾಡುವುದು, Financial mockery ಮಾಡುತ್ತಿದ್ದಾರೆ It is a mockery of

financial system They are taking the realities for a ride Financial crisis ಆಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಯಾವ ರಾಜ್ಯದ ರೈತರ ಪರವಾಗಿ ಮಾತನಾಡುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು – ಪೂರಕ ಅಂದಾಜುಗಳನ್ನು ಮಂಡನೆ ಮಾಡಲಿಕ್ಕೆ ಅವಕಾಶ ಇದೆ, ಮಂಡನೆಯಾಗಿದೆ ಅಷ್ಟೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – Financial mockery ಮಾಡುತ್ತಿದ್ದಾರೆ ಬಜೆಟ್ ಮೇಲೆ ಗೌರವವಿಲ್ಲ, ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗೆ ಗೌರವವಿಲ್ಲ 25 ವರ್ಷಗಳಿಂದ ನಾವು ಸದನದಲ್ಲಿ ಕೆಲಸ ಮಾಡಿದ್ದೇವೆ ಈ ರೀತಿ ಎಂದೂ ಆಗಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಈ ರಾಜ್ಯದ ರೈತರಿಗೆ ಒಳ್ಳೆಯದಾಗುವುದನ್ನು ಸಹಿಸಲಿಕ್ಕಾಗದೇ ಈ ರೀತಿ ಮಾತನಾಡಿದರೆ, ನಾವು ನಿಮಗೆ ಏನು ಹೇಳಬೇಕು?

ಶ್ರೀ ಆರ್ ವಿ ದೇಶಪಾಂಡೆ – ಮಾಡಿ, ಯಾರು ಬೇಡವೆನ್ನುತ್ತಾರೆ, ಇದು ಪದ್ಧತಿಯೇ ಹೇಳಿ?

(ಗೊಂದಲ)

ಅಧ್ಯಕ್ಷರು – ಈಗ ಪೂರಕ ಅಂದಾಜುಗಳ ಮಂಡನಯಾಗಿದೆ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಇಲ್ಲ ಚರ್ಚೆಯಾಗುವ ಕಾಲದಲ್ಲಿ ಅದರ ಮೇಲೆ ಚರ್ಚೆಯಾಗುತ್ತದೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ವಾಟಾಳ್ ನಾಗರಾಜ್ ಇವರೆಲ್ಲಾ ಕೇಳುವುದರಲ್ಲಿ ಅರ್ಥವಿದೆ, ನೀವೆಲ್ಲಾ ಹೀಗೆ ಕೇಳಿದರೆ ಹೇಗೆ? ನಮ್ಮ ಕಾಂಗ್ರೆಸ್‌ನವರು ರೈತರಿಗೆ ಏನು ಸವಲತ್ತು ಮಾಡಿದ್ದೀರಿ? ಹೇಳಿ ನೋಡೋಣ (ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – Continouous Governments, ಎಸ್ ಎಂ ಕೃಷ್ಣರವರ ಕಾಲದಲ್ಲಿ Fiscal Responsibility Act ತಂದರು ಹಲವಾರು Governments, continuous Governments, up to Dharm Singh, financial discipline ತಂದರು, ರಾಜ್ಯದಲ್ಲಿ ಕರ್ನಾಟಕಕ್ಕೆ

ಒಳ್ಳೆಯದಾಗಬೇಕೆಂದು ಇವರ ಕಾಲದಲ್ಲಿ it will go to very bad shape Financial crisis, they are causing it

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್(ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) – ನೀವು ಹೇಳಿದಂತೆ ಸರ್ಕಾರ ಕೇಳಬೇಕೆಂದಿದೆಯೇನು? ಇವರು ಮಾತನಾಡತಕ್ಕ ರೀತಿ ಏನಿದೆ, ಉದ್ದೇಶ ಏನಿದೆ?

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಪ್ರಕಾಶ್‌ರವರೇ ಸದನದಲ್ಲಿ, ಈ ರೀತಿ ಅಭಿಪ್ರಾಯವಿದ್ದರೆ

ಶ್ರೀ ಎಂ ಪಿ ಪ್ರಕಾಶ್ – ಸರ್ಕಾರವನ್ನು ನಡೆಸಬೇಕಾದರೆ, ಕಲಾಪಗಳನ್ನು ನಡೆಯಬೇಕೆನ್ನುವುದಾದರೆ, ಈ ರೀತಿ ನಡವಳಿಕೆಗಳಾದರೆ ಕಲಾಪಗಳು ಹೇಗೆ ನಡೆಯುತ್ತವೆ? ಸರ್ಕಾರ ಹೀಗೆ ನಡೆಯಬೇಕೆಂದು ಹೇಳುವುದಾದರೆ ಯಾರು ಸರ್ಕಾರ ನಡೆಸುತ್ತಿರತಕ್ಕಂಥಾದ್ದು? ಅದರ ಸಾಧಕಬಾಧಕಗಳನ್ನು ಯೋಚನೆ ಮಾಡಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ ಮೇಲೆ ನೀವು ನಮಗೆ co-operation ಕೊಡಬೇಕು ಚರ್ಚೆಯಾಗುವುದಕ್ಕೆ ಅವಕಾಶವಿಲ್ಲವೆಂದರೆ ಕಲಾಪಗಳನ್ನು ತೆಗೆದುಕೊಳ್ಳುತ್ತೇವೆ ಕಲಾಪಗಳು ಆಗುವುದಿಲ್ಲವೆಂದರೆ ಇವತ್ತು ಪೂರಕ ಬಜೆಟ್ ಎಂದು ಹೇಳಿದ್ದಾರೆ ಇದೇ ರೀತಿ ನಡೆಸಬೇಕೆನ್ನುವುದಾದರೆ ಬಹುಮತ ಇಟ್ಟುಕೊಂಡು ಸರ್ಕಾರ ಏತಕ್ಕೆ ನಡೆಸಬೇಕು? ಹಾಗಾದರೆ ನೀವೇ ಸರ್ಕಾರವನ್ನು ನಡೆಸಿಬಿಡಿ You have your say We have our way, and in that way please allow us to go

(ಗೊಂದಲ)

ಅಧ್ಯಕ್ಷರು – ನಾನು ನಿಯಮಗಳ ಪ್ರಕಾರ ಪೂರಕ ಅಂದಾಜುಗಳನ್ನು ಮಂಡನೆ ಮಾಡಲಿಕೆ ಅವಕಾಶ ಕೊಟ್ಟಿದ್ದೇನೆ ಮುಂದೆ ಚರ್ಚೆ ಮಾಡಲಿಕ್ಕೆ ನಾನು ಅವಕಾಶ ಕೊಡುತ್ತೇನೆ ಎಷ್ಟು ಇತಿಮಿತಿಯಲ್ಲಿ, ನಿಮ್ಮ ಮನಸ್ಸಿನಲ್ಲಿ ಏನಿದೆ, ಅದನ್ನು ಮಾಡಿ ಎಂದು ಈಗ ಅವರಲ್ಲಿ ನಾನು ಸಹ ವಿನಂತಿ ಮಾಡಿಕೊಂಡಿದ್ದೇನೆ

ಶ್ರೀ ಎನ್ ಧರ್ಮಸಿಂಗ್ – ಈಗ ನಾವು ಏನು ಮಾಡಬೇಕು ಹೇಳಿ, ಯಾವುದರ ಮೇಲೆ ಮಾತನಾಡಬೇಕು?

ಅಧ್ಯಕ್ಷರು – ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ

ಶ್ರೀ ಎನ್ ಧರ್ಮಸಿಂಗ್.– ಇಲ್ಲ, ಮೊದಲು ಏನೋ ಹೇಳಿದರಲ್ಲಾ, ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಮೇಲೆ ಮಾಡಿದ್ದು ಎಂದು ಹೇಳಿ ಬಜೆಟ್ ಮೇಲೆ ಇನ್ನು

discussion ಶುರು ಆಗಿಲ್ಲ ಮಂಡನೆ ಮಾಡತಕ್ಕಂಥದ್ದೇನಿದೆ? ಹೇಗೆ? ಯಾರು? ಬಜೆಟ್ ಮೇಲೆ discussion ಆಗಿದೆಯೇ? ನೀವು ಯಾವಾಗ ಬೇಕೆಂದರೆ ಏನಾದರೂ ಮಾಡಬೇಕೆಂದರೆ ಹಾಗೆ ಮಾಡಲಿಕ್ಕಾಗುತ್ತದೆಯೇ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ:- ನೀವು ಮಾತನಾಡುತ್ತಿರುವ ರೀತಿ ನೋಡಿದರೆ, ನಾವು ಬಜೆಟ್ ಮೇಲೆ ಚರ್ಚೆ ಮಾಡಲಿಕ್ಕೆ ರೆಡಿ ಇಲ್ಲವೇ? ನಿಮಗೆ ಅನುಕೂಲವಾಗಲಿ ಎಂದು ಪೂರಕ ಬಜೆಟ್ ಅನ್ನು ಮಂಡನೆ ಮಾಡಿದ್ದೇವೆ

ಶ್ರೀ ಎನ್ ಧರ್ಮಸಿಂಗ್ – ಬಜೆಟ್ ಮೇಲೆ ಚರ್ಚೆಯಾಗಿಲ್ಲ, ಹೇಗೆ ಅನುಕೂಲ ಆಗುತ್ತದೆ?

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ಇಷ್ಟು ವರ್ಷಗಳ ಕಾಲ ಅಧಿಕಾರ ನಡೆಸಿದ್ದೀರಿ, ನಿಮಗೆ ನಾನು ಏನು ಹೇಳಲಿ ನೀವು ಹಿರಿಯರಿದ್ದೀರಿ, ನಾನೇನು ಮಾತನಾಡಲಿ

ಶ್ರೀ ಎನ್ ಧರ್ಮಸಿಂಗ್ – ಇಲ್ಲ, ನಿಮಗೇನೂ ಅರ್ಥವಾಗುತ್ತಿಲ್ಲ

ಶ್ರೀ ಆರ್ ವಿ ದೇಶಪಾಂಡೆ – ನಿಮಗೆ ಯಾರು advise ಮಾಡುತ್ತಾರೋ, ಗೊತ್ತಿಲ್ಲ ಈಗ Finance Secretary ಇಲ್ಲ Principal Secretary Finance ಇಲ್ಲ ಯಾರು ಅಡ್ವೈಸ್ ಮಾಡುತ್ತಾರೆಂದು ನಮಗೆ ಗೊತ್ತಿಲ್ಲ ಒಂದು Fiscal Responsibility Act ಈ ಅಸೆಂಬ್ಲಿಯಲ್ಲಿ pass ಆಗಿದೆ ಅದಕ್ಕೇನು ಮಾನ್ಯತೆ ಇದೆಯೇ?, ಇಲ್ಲವೇ? ಆ Fiscal Responsibility Actನಲ್ಲಿ ಯಾವ ಪ್ರಕಾರ, ಯಾವ ರೀತಿ ಹಣಕಾಸು ಸಚಿವರು ಬಜೆಟ್ ಮಂಡನೆ ಮಾಡಬೇಕು, ಯಾವ ರೀತಿ fiscal deficit ಇರಬೇಕು, ಯಾವ ರೀತಿ ಕೆಲಸ ನಡೆಯಬೇಕೆಂದಿದೆ ಎಲ್ಲಾ ಬಿಟ್ಟು ಕೊಟ್ಟು ಮನಸ್ಸಿಗೆ ಬಂದಂತೆ ನಡೆಸುತ್ತಿದ್ದಾರೆ ಹಾಗಾದರೆ ಆ Fiscal Responsibility Act ಏತಕ್ಕೆ ಪಾಸ್ ಆಗಿದೆ? ನಾವು ಪಾಸ್ ಮಾಡಿದ್ದೇವೆ ಅದನ್ನು ಸ್ವಲ್ಪ ಓದಿ ಬನ್ನಿ, ಗೊತ್ತಾಗುತ್ತದೆ What is that Act? ಏನಾಗಿದೆ ಎಂದರೆ ತಮಗೆ sound advice ಇಲ್ಲ, Principal Secretary, Finance ಇಲ್ಲ ರಾಜಕಾರಣದಲ್ಲಿ ಮೊದಲನೇ ಬಾರಿ without a Principal Secretary, Finance, budget is presented

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – 2006–07ಕ್ಕೆ ಸಂಬಂಧಪಟ್ಟಂತೆ ಪೂರಕ ಅಂದಾಜುಗಳನ್ನು ಮಂಡನೆ ಮಾಡಿ ಅದರ ಮೇಲೆ ಚರ್ಚೆಯಾಗಲಿಲ್ಲವೆಂದರೆ ಹೇಗೆ? ಪೂರಕ ಅಂದಾಜುಗಳಿಗೂ ಬಜೆಟ್‌ಗೂ ಏನು ಸಂಬಂಧವಿದೆ? 2006–07 ಕ್ಕೆ ಸಂಬಂಧಪಟ್ಟಂತೆ ಪೂರಕ ಬಜೆಟ್ ಅನ್ನು ಇಲ್ಲಿ ಮಂಡಿಸಿದ್ದೇನೆ ಇಲ್ಲದಿದ್ದರೆ ನೀವೇನು ಹೇಳುತ್ತೀರಾ? ಪೂರಕ ಬೇಡಿಕೆ ಇಡದಿದ್ದರೆ ನೀವು ಏನು ಹೇಳುತ್ತೀರಿ? ನಮಗೆ ಟೈಮ್ ಸಿಗಲಿಲ್ಲ, ನಾವು ಓದಲಿಲ್ಲ, ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ ಎನ್ನುತ್ತೀರಿ 2006–07ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸಿದ್ದೇನೆ ನೀವು ಅದಕ್ಕೆ ಏತಕ್ಕೆ objection ಮಾಡುತ್ತೀರಿ? ನನಗೆ ಅರ್ಥವಾಗುತ್ತಿಲ್ಲ ನಮ್ಮಿಂದ ಏನು ಕೊರತೆಯಾಗಿದೆ ಹೇಳಿ? ನಿಮ್ಮ ಚರ್ಚೆಗೆ ಅನುಕೂಲವಾಗಲಿ ಎಂದು ಪೂರಕ ಬೇಡಿಕೆಗಳನ್ನು ಮಂಡಿಸಿದ್ದೇನೆ

ಶ್ರೀ ಆರ್ ವಿ ದೇಶಪಾಂಡೆ – ಬಜೆಟ್ ಬಗ್ಗೆ discussion ಆಗುವಾಗ ಇದನ್ನು ಮಂಡನೆ ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ – 2006–07ನೇ ಸಾಲಿಗೆ ಸಂಬಂಧಪಟ್ಟ ಪೂರಕ ಬೇಡಿಕೆಗಳನ್ನು ಮಂಡಿಸಿದ್ದೇನೆ, ಈ ವರ್ಷದ ಬಜೆಟ್‌ಗೂ ಇದಕ್ಕೂ ಏನು ಸಂಬಂಧವಿದೆ?

(ಗೊಂದಲ)

ಅಧ್ಯಕ್ಷರು – ಪೂರಕ ಅಂದಾಜುಗಳನ್ನು ಮಾಡಿದ್ದಾರೆ ಅದಕ್ಕೆ ಎಲ್ಲಾ ವಿವರಗಳನ್ನು ಕೊಟ್ಟು ಚರ್ಚೆಗೆ ಅನುಕೂಲವಾಗುವಂತೆ ಮಾಡಿದ್ದಾರೆ ಈ ವರ್ಷದ್ದು, ಆ ಕಾರಣದಿಂದ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ ಈಗ ಅವರು ಇನ್ನೇನಾದರೂ statement ಕೊಡುತ್ತಾರೆಯೋ? ನಿನ್ನೆಯಿಂದ ಸಾಲ ಮನ್ನಾ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ ಹಾಗಾಗಿ ಅವರು ಏನಾದರೂ statement ಕೊಡುವುದಾದರೆ ಕೊಡಬಹುದು ಈಗ ಕಲಾಪಗಳನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ – ಈಗ ಪ್ರಶ್ನೋತ್ತರ ಕಾರ್ಯಕಲಾಪವನ್ನು ತೆಗೆದುಕೊಳ್ಳಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ – ಅವರು ನಾವು ಸೇರಿ ಒಂದು ತೀರ್ಮಾನಕ್ಕೆ ತೆಗೆದುಕೊಳ್ಳಬೇಕು Reasonable demandಗೆ ಅವರು ಒಪ್ಪಿಕೊಳ್ಳುತ್ತಾರೆ ಆದರೆ ಏತಕ್ಕೆ ಇದಕ್ಕೆ ಅಡ್ಡಿ ಬಂದರು ಅನ್ನುವುದು ಗೊತ್ತಿಲ್ಲ ಎರಡನೆಯದು, ತಮ್ಮನ್ನು ನಾವು ಪದೇ ಪದೇ ಕೇಳಿಕೊಳ್ಳುತ್ತಿದ್ದೇವೆ ಇದು ಒಂದು statement ಈಗ ಅವರು

ಮಾಡಿದ್ದಾರೆ ಸಾಲವನ್ನು ಮನ್ನಾ ಮಾಡಲಿಕ್ಕೆ ರೈತರ ಹಿತದೃಷ್ಟಿಯಿಂದ ಎಲ್ಲರು ಒಪ್ಪಿಕೊಂಡಿದ್ದಾರೆ But only 25,000 ರೂ.ಗಳನ್ನು ಮನ್ನಾ ಮಾಡತಕ್ಕಂಥದ್ದು ಎರಡನೆಯದು, ಇದಕ್ಕೆ ಸಮಯವನ್ನು ವಿಸ್ತರಿಸಬೇಕೆಂದು ಕೇಳಿದ್ದಾರೆ ಇದನ್ನು ಬಿಟ್ಟರೆ ಬೇರೆ ಏನೂ ಇಲ್ಲ ಮತ್ತೆ ಇದರಲ್ಲಿ ಬೇರೆ ಯಾವುದೇ complications ಇಲ್ಲ ಈ ನಡುವೆ ನಾವು ಇದನ್ನು ನಿಯಮ 69ರಡಿ ಚರ್ಚೆಗೆ ತೆಗೆದುಕೊಳ್ಳಿ ಎಂದು ಅವರನ್ನು ಒಳಗಿಟ್ಟು, ನಾವು walk out ಮಾಡಿ ಪುನಃ ಇಲ್ಲಿಗೆ ಬಂದಿದ್ದೇಕೆ? ಮಾತನಾಡಬೇಕೆಂಬ ದೃಷ್ಟಿಯಿಂದಲೇ ನಾವು ಸದನದೊಳಗೆ ಬಂದೆವು ಎರಡನೆಯದಾಗಿ, ನೀವು ಅವರು ಬಾವಿಯಲ್ಲಿದ್ದಾಗಲೇ ಚರ್ಚೆಯನ್ನು ಶುರು ಮಾಡಿ ಸಪ್ಲಿಮೆಂಟರಿ ಬಜೆಟ್ ಅನ್ನು ಮಂಡನ ಮಾಡುವುದು ಇವೆಲ್ಲಾ ಚೆನ್ನಾಗಿ ಕಾಣುವುದಿಲ್ಲ

ಅಧ್ಯಕ್ಷರು – ಈಗ ಪ್ರಶ್ನೋತ್ತರ ವೇಳೆ ಆಗಿಹೋಗಿದೆ, ನಿಯಮ 69ರ ಮೇಲೆ ಚರ್ಚೆ ಆರಂಭಿಸೋಣ

ಶ್ರೀ ಮಲ್ಲಿಕಾರ್ಜುನ್ ಖರ್ಗೆ – ಒಬ್ಬರು ಒಳಗೆ, ಒಬ್ಬರು ಹೊರಗೆ, ಹೇಗೆ ಚರ್ಚೆ ಮಾಡುವುದು?

ಅಧ್ಯಕ್ಷರು – ಎಲ್ಲರೂ ಹೊರಗೆ ಇದ್ದಾರೆ, ಅವರೇನು ಎಂದರೆ ನಮ್ಮ ಕಲಾಪಕ್ಕೆ ಅಡ್ಡಿ ಮಾಡುತ್ತಿಲ್ಲವೆಂದು ಅವರು ಹೇಳಿದ್ದಾರೆ ಹಾಗಾಗಿ let us take up discussion under Rule 69

ಶ್ರೀ ಮಲ್ಲಿಕಾರ್ಜುನ ಖರ್ಗೆ – ನಾವು ಕೇಳುವ ಉದ್ದೇಶವೇನು? ಎಲ್ಲರದೂ ಒಂದೇ ಉದ್ದೇಶ ಅದನ್ನು ಈಡೇರಿಸಬೇಕು ಎಂದು ಕೇಳಿಕೊಂಡಿದ್ದೇವೆ ಅವಕ್ಕೆ ನೀವು ಅವರು ಹಾಗೇ ಇರಲಿ, ನೀವು ಮಾತನಾಡಿ ಎಂದರೆ

ಅಧ್ಯಕ್ಷರು – ಅವರು ಪರಿಶೀಲನೆ ಮಾಡುತ್ತೇವೆಂದು ಪದೇಪದೇ ಹೇಳುತ್ತಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಪರಿಶೀಲನ ಎಂದರೆ 31ಕ್ಕೆ ಮಾಡಬೇಕಾಗಿತ್ತು ಮತ್ತು ಈಗೇಕೆ statement ಮಾಡಬೇಕಾಗಿತ್ತು

ಅಧ್ಯಕ್ಷರು – ಅದಕ್ಕೆ ಸಮಯ ಬೇಕು ಎಂದು ಕೇಳುತ್ತಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಅದಕ್ಕೇ ನಾವು ಹೇಳುವುದು ಆಗ ನೀವೇ adjourn ಮಾಡಿದಿರಿ, at least ನೀವೇ ಅವರನ್ನು ಕರೆಸಿ ನಮ್ಮನ್ನು, ಅವರನ್ನು ಕೂರಿಸಿ, ಮಾತನಾಡಿಸಿ, ಯಾವಾಗ ಮಾಡುತ್ತಾರೆಂದು, ಏನು ಮಾಡುತ್ತಾರೆಂದು

ಗೊತ್ತಾಗುತ್ತಿತ್ತು suo motu ಅವರೇ ನಿರ್ಣಯ ತೆಗೆದುಕೊಳ್ಳುವುದು, suo motu ಅವರೇ statement ಮಾಡುವುದು. ಇದು ಸರಿಯಲ್ಲ

ಅಧ್ಯಕ್ಷರು – ನಾನೇ ಅವರನ್ನು ಕರೆದು ಮಾತನಾಡಿದೆ ಅದಕ್ಕೆ ಅವರು ಸಮಯ ಬೇಕು, ನಾನು ಪರಿಶೀಲನೆ ಮಾಡಬೇಕೆಂದು ಹೇಳುತ್ತಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ನಮಗೇನೂ ಈಗ alternative ಇಲ್ಲ ಈಗ ಅವರು ಅಲ್ಲಿದ್ದರೆ ನಾವು ಕೂಡ ಆ ಬೇಡಿಕೆ ಈಡೇರುವವರೆಗೂ ಕೂಡ ನಾವು ಮುಂದುವರೆಸುತ್ತೇವೆ

ಅಧ್ಯಕ್ಷರು – ಬೇಡಿಕೆ ಈಡೇರಿಸುವುದು ಈಗ statement ಆಗುತ್ತದೆ ಯಾವುದೇ ಕಲಾಪಗಳು ನಡೆಯಲಿಕ್ಕಾಗುವುದಿಲ್ಲ

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ – ಅಧ್ಯಕ್ಷರೆ, ಇದೇ ರೀತಿ ಮಾಡಿದರೆ, ಕಲಾಪಗಳಿಗೆ ಅಡ್ಡಿಯಾಗುತ್ತದೆ ಇನ್ನೂ ಮೂರು ದಿವಸಗಳಾದರೂ ಇದೇ ರೀತಿ ಮಾಡುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ – ಈಗ ಗೌರವಾನ್ವಿತ ಮುಖ್ಯಮಂತ್ರಿಗಳು ಒಂದಲ್ಲ ಹತ್ತು ಬಾರಿ ಸ್ಪಷ್ಟಪಡಿಸಿದ್ದಾರೆ ರೈತರ ಪರವಾಗಿ ಹೋರಾಟ ಮಾಡಿದ್ದೇವೆ ನಾನು ರೈತರ ಮಗನಾಗಿದ್ದೇನೆ ರೈತರ ಬಗ್ಗೆ ಚಿಂತನೆಯಿದೆ ಬರಗಾಲ ಇದೆ ಅತಿವೃಷ್ಟಿ ಇದೆ suicides ಆಗಿವೆ ನಿನ್ನೆ ನೀವು ಯಾವ ಪ್ರಕಾರ voluntary statement ಮಾಡಿದಿರಿ, ಅದು ಸಂತೋಷ ಅದೇ ಪ್ರಕಾರ ನಾವು ಇವತ್ತು ಹೇಳುತ್ತಿದ್ದೇವೆ, ಈ ರಾಜ್ಯದ ಎಲ್ಲಾ ರೈತರಿಗೆ Nationalised banks, ಇರಬಹುದು, ಆರ್ ಬಿ ಇರಬಹುದು crops ಇರಬಹುದು 25,000–00 ರೂ ಗಳನ್ನು ಮನ್ನಾ ಮಾಡಿ ಎಂದು ಕೇಳುತ್ತಿದ್ದೇವೆ ನಿಮ್ಮ ಶಾಸಕಾಂಗ ಪಕ್ಷದಲ್ಲಿ ನಿಮ್ಮ ಶಾಸಕರು ನಿಮಗೆ ಒತ್ತಾಯ ಮಾಡಿದ್ದಾರೆ ಹೇಳಿಬಿಡಿ, ಏನು ತೊಂದರೆಯಿದೆ?

ಶ್ರೀ ಎಂ ಪಿ ಪ್ರಕಾಶ್ – ಸನ್ಮಾನ್ಯ ಅಧ್ಯಕ್ಷರೇ, ಬಹಳ ವಿನಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ ಸರ್ಕಾರವನ್ನು ಇವರು ಎಷ್ಟು ದಿವಸ ನಡೆಸಿದ್ದಾರೆ? ಇದೇ ರೀತಿ, ಇದೇ ಸಮಯದಲ್ಲಿ ಇದೇ ರೀತಿ ಉತ್ತರ ಕೊಡಬೇಕೆಂದು, ನಿಮಗೆ ಒತ್ತಾಯ ಮಾಡಲಿಕ್ಕೆ ಅಧಿಕಾರವಿದೆಯೇ?

ಶ್ರೀ ಆರ್ ವಿ ದೇಶಪಾಂಡೆ – ನಾವು ವಿನಂತಿ ಮಾಡುತ್ತಿದ್ದೇವೆ ಸಮಯ ಇಲ್ಲ, ದಿನಾಂಕ 31ಕ್ಕೆ last date ಇದೆ

ಶ್ರೀ ಎಂ ಪಿ ಪ್ರಕಾಶ್ – ಆಯಿತು, ನೀವು ಹೇಳಿದ್ದೀರಿ, ಇಲ್ಲಿ ಬಂದಿರುವವರು ಯಾರೂ ಕೈಗಾರಿಕೋದ್ಯಮಿಗಳ ಮಕ್ಕಳಲ್ಲ ನಾವು ಕೂಡ ರೈತರ ಪರವಾಗಿ

ಬಂದಿದ್ದೇವೆ, ತಾವು ಕೂಡ ರೈತರ ಪರ ಬಂದಿದ್ದೀರಿ ತಾವು ವಿನಂತಿಸಿದ್ದೀರಿ, ನಿಮ್ಮ ವಿನಂತಿಯನ್ನು ಪರಿಶೀಲಿಸುತ್ತೇನೆಂದು ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ ನಿಮಗೆ ಈಗ ಇದೇ ರೀತಿಯಲ್ಲಿ ಉತ್ತರ ಕೊಡಬೇಕೆಂದು ಹೇಳಿ ಸರ್ಕಾರವನ್ನು ನೀವು ಹಿಂದೆ ನಡೆಸಿದ್ದೀರಿ, ಹಿಂದೆ ನಾವು ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದೇವೆ ಇದಕ್ಕು ಕೂಡ ಒಂದು ಪರ್ಯಾಯವಾದುದು ಇದೆಯೆಂದು ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಸೂಕ್ಷ್ಮವಾಗಿ ಹೇಳಿದ್ದಾರೆ ತಾವು ಆರು ಸಲ ಗೆದ್ದು ಬಂದಿದ್ದೀರಿ, ಸರ್ಕಾರವನ್ನು ನಡೆಸಿದ್ದೀರಿ ಇವತ್ತೇನಾಗಿರಲಿ, ನೀವು ಕಲಾಪಗಳನ್ನು ನಡೆಸಿಕೊಂಡು ಹೋಗಬಹುದು ಅವರು ಇಲ್ಲಿದ್ದಾಗ ಕಲಾಪ ನಡೆಸುವಂಥದ್ದು ಸೂಕ್ತವಲ್ಲ ಎನ್ನುವಂಥ ಮಾತನ್ನು ನಾವು ಒಪ್ಪಿದರು ಕೂಡ ನೀವು ಮಾಡಿದಂತೆ ಅವರೇನು ಘೋಷಣೆ ಕೂಗುತ್ತಿಲ್ಲ, ಅವರೇನು ಅಡ್ಡಿ ಮಾಡಿಲ್ಲ ಆದ್ದರಿಂದ ಎಷ್ಟೋ ಸಂದರ್ಭದಲ್ಲಿ ಸಭಾಧ್ಯಕ್ಷರು ತೀರ್ಮಾನ ಕೊಟ್ಟಿದ್ದಾರೆ The house is in order, even if the people are standing in the well ಎಂದು ಹೇಳಿದ್ದಾರೆ ಲೋಕ ಸಭೆಯಲ್ಲಿಯೂ ಇದೇ ರೀತಿ ಆಗಿದೆ, ಇಲ್ಲಿಯೂ ಆಗಿದೆ, ಮನವೊಲಿಸಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ ಆಗಲಿಲ್ಲವೆಂದರೆ ಕಾರ್ಯಕಲಾಪವನ್ನು can you hold it for ransom? ಆ ಕಾರಣಕ್ಕಾಗಿ ತಾವು ದಯವಿಟ್ಟು ಇದನ್ನು ಮುಂದೆ ಬೆಳೆಸಿಕೊಂಡು ಹೋಗುವಂಥದ್ದಲ್ಲ ದಯವಿಟ್ಟು ಪ್ರಶ್ನೋತ್ತರವನ್ನಾದರೂ ತೆಗೆದುಕೊಳ್ಳಿ ಇಲ್ಲವೇ ನಿಯಮ 69ರ ಮೇಲೆ ಚರ್ಚೆ ಮಾಡುವುದಿದ್ದರೆ ಅದಕ್ಕೂ ನಾವು ಸಿದ್ಧರಿದ್ದೇವೆ ದಯವಿಟ್ಟು ಅದು ಒಂದು ಬಿಟ್ಟರೆ ಬೇರೆ ದಾರಿಯಿಲ್ಲ

ಅಧ್ಯಕ್ಷರು – ಈಗ ನಿಯಮ 69ರ ಮೇಲೆ ಚರ್ಚೆಯಾಗಲಿ

ಶ್ರೀ ಆರ್ ವಿ ದೇಶಪಾಂಡೆ – ಇದೊಂದು ಸಮಸ್ಯೆಯಿದೆಯೆಲ್ಲಾ, ಈ ಸಮಸ್ಯೆ ಬಿಟ್ಟು ಮುಂದೆ ಹೇಗೆ ಹೋಗಬೇಕು ರೈತರ ಸಮಸ್ಯೆ ಇದೆ ಇಡೀ ರಾಜ್ಯದ ರೈತರ ಗಂಭೀರವಾದ ಸಮಸ್ಯೆಯಿದ್ದಾಗ, ರೈತರು ಇಷ್ಟು ಕಷ್ಟದಲ್ಲಿರುವಾಗ ನಾವು ಏಕೆ ಅವರ ಬಗ್ಗೆ ಚಿಂತನೆ ಮಾಡಬಾರದು

ಶ್ರೀ ಸುನಿಲ್ ಕುಮಾರ್ – ಅಧ್ಯಕ್ಷರೆ, ದಯವಿಟ್ಟು ನಮ್ಮ ಸಮಸ್ಯೆಗಳು ಬಹಳ ಇವೆ ನಾವು ಯುವ ಶಾಸಕರಿದ್ದೇವೆ ನಮ್ಮ ಕಡೆಗೆ ಗಮನ ಹರಿಸಿ, ದಯವಿಟ್ಟು ಇವರದ್ದು ಇದ್ದದ್ದೇ ಕೂಗು, ಮೂರು ವರ್ಷಗಳಿಂದ ಇದೇ ಕೂಗು ಕೂಗುತ್ತಿದ್ದಾರೆ ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ ರೈತರು, ರೈತರು ಎಂದು ಇಲ್ಲಿಯವರಗೆ ಇವರು ರೈತರಿಗೆ ಎಷ್ಟು ಕೊಟ್ಟಿದ್ದಾರೆಂದು ನಮಗೂ ಗೊತ್ತಿದೆ

ಶ್ರೀ ಎಂ ಪಿ ವೆಂಕಟೇಶ್ – ತೀರ್ಮಾನ ತೆಗೆದುಕೊಳ್ಳಿ ಅಧ್ಯಕ್ಷರೆ, ಈಗಾಗಲೇ ಸುಮ್ಮನೆ ಎರಡು ದಿವಸಗಳ ಕಾಲಹರಣ ಆಗಿಹೋಗಿದೆ

ಅಧ್ಯಕ್ಷರು – ಈಗ ಆಯುವ್ಯಯದ ಮೇಲೆ ಮುಂದಿನ ವಾರದಿಂದಲಾದರೂ ಚರ್ಚೆ ಆರಂಭವಾಗಲಿ ಇವತ್ತು ನಿಯಮ 69ಅನ್ನು ಮುಗಿಸಿಕೊಂಡರೆ, ಮುಂದಿನ ಮೂರ್ನಾಲ್ಕು ದಿನಗಳು ಅಷ್ಟೇ ಉಳಿಯುವುದು ಆ ಕಾರಣದಿಂದ ನಿಯಮ 69ರಡಿ ಚರ್ಚೆ ಇದೆ ಅದನ್ನು ದಯಮಾಡಿ ಆರಂಭ ಮಾಡಿ ಮಾನ್ಯ ಖರ್ಗೆಯವರೇ ನಿಯಮ 69ರಡಿ ಮಾತನಾಡಿ

ಶ್ರೀ ಹೆಚ್ ಆಂಜನೇಯ – ಅಧ್ಯಕ್ಷರೆ, ಪ್ರಶ್ನೋತ್ತರ ತೆಗೆದುಕೊಳ್ಳಿ, ಪ್ರಶ್ನೋತ್ತರವನ್ನು ತಾವು ಮೊಟಕುಗೊಳಿಸಬಾರದು ಈ ಸದಸ್ಯರ ಹಕ್ಕಿಗೆ ಚ್ಯುತಿಯಾಗಬಾರದು

ಶ್ರೀ ಮಲ್ಲಿಕಾರ್ಜುನ ಖರ್ಗೆ – ಎಲ್ಲರೂ ಕೇಳಬೇಕು ಅವರು ವೆಲ್‌ನಲ್ಲಿದ್ದಾಗ ನಾವು ಹೇಗೆ ಮಾತನಾಡಲಿಕ್ಕಾಗುತ್ತದೆ? The House is in order, as per rules, ಇರಬಹುದು ಆದರೆ ಸೌಜನ್ಯದ ದೃಷ್ಟಿಯಿಂದ ಇವರೆಲ್ಲರನ್ನೂ ಒಳಗಿಟ್ಟು, ಡಿಮ್ಯಾಂಡ್ ಇಟ್ಟು, ಅದಕ್ಕೇನೂಸ್ಪಂದಿಸದೇ ಇದ್ದಾಗ, ಈ ಚರ್ಚೆಯನ್ನು ತೆಗೆದುಕೊಂಡರೆ ಸರಿಹೋಗುತ್ತದೆ ಎಂದರೆ ಮಾತನಾಡೋಣ

ಅಧ್ಯಕ್ಷರು – ಸರಿಹೋಗುತ್ತದೆ ಎನ್ನುವುದಲ್ಲ

ಶ್ರೀ ಎಸ್ ಸಿದ್ಧರಾಮಯ್ಯ – ನಾವು ಬರುತ್ತೇವೆ ಏನಾದರೂ ಮಾತನಾಡಿ, ಸರ್ಕಾರದವರು ಈ ರೀತಿ ಹಠ ಹಿಡಿದುಕೊಂಡರೆ ಹೇಗೆ?

ಅಧ್ಯಕ್ಷರು – ಅವರು ಈಗ ಪರಿಶೀಲನೆ ಮಾಡಬೇಕೆನ್ನುತ್ತಾರೆ ನೀವು announce ಮಾಡಬೇಕೆಂದು ಹೇಳುತ್ತೀರಿ, ಹೀಗಾದರೆ ಹೇಗೆ?

ಶ್ರೀ ಎಸ್ ಸಿದ್ದರಾಮಯ್ಯ – ಇದು ಹಠವೆಂದಲ್ಲ, prestige ಅಲ್ಲ ಈಗ ಈ ಪ್ರಶ್ನೆ ಉದ್ಭವವಾಗಿರುವುದು ಏತಕ್ಕೆ? ಮಾನ್ಯ ಯಡಿಯೂರಪ್ಪನವರು ನಿನ್ನೆ statement ಮಾಡಿದ್ದರಿಂದ ಈ ಪ್ರಶ್ನೆ ಬಂತು

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಸಿದ್ದರಾಮಯ್ಯನವರೆ, ನಾವು ಯಾವುದೆ prestigeಗೆ ನಿಂತಿಲ್ಲ

ಶ್ರೀ ಎಸ್ ಸಿದ್ದರಾಮಯ್ಯ– ಅದನ್ನೆ ಮತ್ತೆ ಹೇಳಿಕೆ ಮಾಡಿ ರೈತರ ಪರವಾಗಿರುವವರು ನೀವು ಏಕೆ ಹೀಗೆ ಹಿಂದಕ್ಕೆ ಹೋಗುತ್ತೀರಿ?

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಸ್ಪೀಕರ್‌ರವರ ಹತ್ತಿರವೂ ನಾನು ಮಾತನಾಡಿದ್ದೇನೆ ಇಲ್ಲಿ ಸದನದಲ್ಲಿ ಕುಳಿತುಕೊಂಡು ಸಹ ಉತ್ತರ ಕೊಡುವ

ಸಂದರ್ಭದಲ್ಲಿ ಅದನ್ನು ಪರಿಶೀಲನೆ ಮಾಡೋಣ ಬನ್ನಿ, ವೆಲ್‌ನಿಂದ ಹೊರಗೆ ಬನ್ನಿ, ಕಾರ್ಯಕಲಾಪವನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇನೆ ನಾನು ಒಂದು ಗಂಟೆಗೆ ಏನೋ ವಿಶೇಷ ಇದೆಯೆಂದು request ಮಾಡಿಕೊಂಡು ಪರಿಶೀಲನೆ ಮಾಡಿ ಮಾಡೋಣವೆಂದು ಹೇಳಿದ ಮೇಲು ಸಹ, ಈಗಲೇ ಆಗಬೇಕೆಂದು ಹೇಳಿದರೆ, ಸರ್ಕಾರದ ಬಗ್ಗೆ ಗೌರವವಿಲ್ಲವೇ? ಈಗಲೇ ಮಾಡಬೇಕೆಂದು ಅವರು ಒತ್ತಾಯ ಮಾಡಲಿಕ್ಕೆ ಬರುತ್ತದೆಯೇ?

ಶ್ರೀ ಎಸ್ ಸಿದ್ದರಾಮಯ್ಯ– ಅಧ್ಯಕ್ಷರೆ, ಉತ್ತರ ಕೊಡುವುದು ಇವರೇ, ದಿನಾಂಕ 29 ಅಥವಾ 30ನೇ ತಾರೀಖಿಗೆ ಉತ್ತರ ಕೊಡುತ್ತಾರೆ ದಿನಾಂಕ 31 ರೊಳಗೆ 25,000–00 ರೂ ಗಳ ಅಸಲು ಕಟ್ಟಿದರೆ ಈ 25,000–00 ರೂ ಗಳು ರೈತರಿಗೆ ಸಿಗುತ್ತದೆ ಅಷ್ಟರೊಳಗೆ ಎಲ್ಲಿಂದ ಕಟ್ಟುತ್ತಾರೆ?

ಶ್ರೀ ಬಿ ಎಸ್ ಯಡಿಯೂರಪ್ಪ– ನಮ್ಮ ರಾಜ್ಯದ ಜವಾಬ್ದಾರಿಯುತ ಸರ್ಕಾರಕ್ಕೆ ಯಾವ ಸಮಯದಲ್ಲಿ ರೈತರಿಗೆ ನೆರವು ಕೊಡಬಹುದೆಂಬ ಜವಾಬ್ದಾರಿ ಇದೆ ಸಲಹೆ ಕೊಡಲಿಕ್ಕೆ ನಿಮಗೂ ಜವಾಬ್ದಾರಿ ಇದೆ ನಾವು ಇದಕ್ಕಿಂತ ಹೆಚ್ಚು ಮಾಡುವುದು ಏನಿದೆ? ನಾವು ಪರಿಶೀಲನೆ ಮಾಡುತ್ತೇವೆ, ಆಗುವುದಿಲ್ಲವೆಂದು ಹೇಳಿಲ್ಲ ಪರಿಶೀಲಿಸುತ್ತೇವೆಂದು ಹೇಳಿದ್ದೇವೆ ಆದ್ದರಿಂದ ಉಳಿದ ಕಾರ್ಯಕಲಾಪ ನಡೆಯಬೇಕು ದಿನಾಂಕ 29ರೊಳಗಾಗಿ ಚರ್ಚೆ ಮುಗಿಯಬೇಕು ಬಜೆಟ್ ಈ ಮನೆಯಲ್ಲಿ ಪಾಸಾಗಿ, ಆ ಮನೆಗೆ ಹೋಗಿ ಬರಬೇಕು

ಶ್ರೀ ಸಿದ್ದರಾಮಯ್ಯ– Any Government is a responsible Government, whether you are in power or anybody is in power ಆಗ ನೀವು ಪರಿಶೀಲನೆ ಮಾಡಿ ಉತ್ತರ ಕೊಟ್ಟರೆ, ಯಾರಿಗೂ ಏನೂ ಅನುಕೂಲವಾಗುವುದಿಲ್ಲ ಇನ್ನೊಂದು ಸಾರಿ adjourn ಮಾಡಿ ಕರೆದು ಮಾತನಾಡಿ, ಅವರ ಮನವೊಲಿಸಲಿಕ್ಕೆ ಚರ್ಚೆ ಮಾಡೋಣ ಹತ್ತು ನಿಮಿಷ ಕರೆದು ನಾವು convince ಮಾಡಿ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಬಿ ಎಸ್ ಯಡಿಯೂರಪ್ಪ– ಈ ಜವಾಬ್ದಾರಿ ನಮಗಿಲ್ಲವೇನು? ಕಳೆದ ಮೂರು ದಿವಸಗಳಿಂದ ಏನಾದರೂ ಕಾರ್ಯಕಲಾಪ ಆಗಿದೆಯೇ ಇಲ್ಲಿ? ನೀವು ಹಿರಿಯರಿದ್ದೀರಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ ನೀವು ಅವರಿಗೆ ಹೀಗೆ ಮಾಡಬೇಕೆಂದು ಹೇಳಬೇಕು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನೀವು ಹೇಳಬೇಕು ಅವರು ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ ಇದು ಸರಿಯಲ್ಲ ನೀವು ವೆಲ್‌ನಿಂದ ವಾಪಸ್ ಬನ್ನಿ ಎಂದು ನೀವು ಅವರಿಗೆ ಹೇಳಬೇಕು ನೀವು

ತಾನೆ ಅವರಿಗೆ ಹೇಳಬೇಕಾಗಿರುವುದು? ಇದೊಂದು prestige ಎಂದು ನಿಂತಿರುವುದು ಅವರೋ ನಾವೋ? ಸರ್ಕಾರಕ್ಕೆ ಇದು ಪ್ರೆಸ್ಟೀಜ್ ಎಂದು ವೆಲ್‌ನಲ್ಲಿ ನಿಂತಿರುವವರು, ಅವರೋ ನಾವೋ?

ಶ್ರೀ ಎಂ ಪಿ ವೆಂಕಟೇಶ್ – ಅಧ್ಯಕ್ಷರೆ, ನಿನ್ನೆ ಉಪ ಮುಖ್ಯಮಂತ್ರಿಗಳು ಈಗ ಆಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದರು ಇವತ್ತು ನಮ್ಮ ಶಾಸಕರ ಜೊತೆ ಚರ್ಚೆಯಾದ ಮೇಲೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಇದಕ್ಕಿಂತ ಇನ್ನೇನು ಆಗಬೇಕು?

ಶ್ರೀ ಮಲ್ಲಿಕಾರ್ಜುನ್ ಖರ್ಗೆ – ನಾವೆಲ್ಲರೂ ಕೂಡಿ ಮಾತನಾಡೋಣ ಅವರ ಮನಸ್ಸಿನಲ್ಲಿ, ತಲೆಯಲ್ಲಿ ಏನಿದೆ ಅದನ್ನು ಅವರು ಹೇಳಲಿ ನಮ್ಮ ಅಭಿಪ್ರಾಯ ಹಾಗೂ ವೆಲ್‌ನಲ್ಲಿರುವ ಶ್ರೀ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ರಾಮರೆಡ್ಡಿಯವರು, ಎಲ್ಲರೂ ಸೇರಿ ಕುಳಿತು ಮಾತನಾಡೋಣ ಮಾತನಾಡಿ ಯಾವ conclusion ಗೆ ಬರುತ್ತಾರೆ, ನೋಡೋಣ ಮಾತುಕತೆ ಇಲ್ಲದೇ suo motu one side ಅವರು ಹೇಳುವುದು, ನಾವೊಂದು ಹೇಳುವುದು ಬೇಡ

ಶ್ರೀ ಎಸ್ ಸಿದ್ಧರಾಮಯ್ಯ – ಹತ್ತು ನಿಮಿಷ ಕರೆದು ಮಾತನಾಡಿ ಆಮೇಲೆ ಶುರು ಮಾಡೋಣ ಮತ್ತೆ ನಾವು ಅವರಿಗೆ ವಾಪಸ್ಸು ಬಂದು ಕುಳಿತುಕೊಳ್ಳಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ

ಅಧ್ಯಕ್ಷರು – ಈಗ ಸದನವನ್ನು ಅರ್ಧ ಗಂಟೆಕಾಲ ಮುಂದೂಡಲಾಗಿದೆ

(ಸದನವು ಅಪರಾಹ್ನ 1 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಅರ್ಧಗಂಟೆಯ ನಂತರ ಪುನಃ ಸಭೆ ಸೇರುವುದಾಗಿ ನಿರ್ಣಯಿಸಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಸಮಾವೇಶ ಗೊಂಡಿತ್ತು ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿದ್ದರು, ಸದನದ ಬಾವಿಯಲ್ಲಿ ಮಾನ್ಯ ಸದಸ್ಯರುಗಳಾದ ಜಿ ವಿ ಶ್ರೀರಾಮರೆಡ್ಡಿ, ಕೆ ಜಯಪ್ರಕಾಶ ಹೆಗ್ಡೆ, ಜೆ ಸಿ ಮಾಧುಸ್ವಾಮಿ ಹಾಗೂ ಎಸ್ ರಾಜೇಂದ್ರನ್ ರವರು ಧರಣಿಯಲ್ಲಿದ್ದರು)

ಅಧ್ಯಕ್ಷರು ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

[ಸದನವು ಪುನಃ **ದಿನಾಂಕ 26 3 2007, ಸೋಮವಾರ ಬೆಳಿಗ್ಗೆ 11 00** ಗಂಟೆಗೆ ಸೇರುವಂತೆ, ಮದ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟಿತ್ತು]

ಅನುಬಂಧ – 1

ಕರ್ನಾಟಕ ಸರ್ಕಾರ

2007–08ನೇ ಸಾಲಿನ

ಪೂರಕ ಅಂದಾಜುಗಳು
(ಮೊದಲನೆಯ ಕಂತು)

(2007ನೇ ಸಾಲಿನ ಜುಲೈ ತಿಂಗಳಲ್ಲಿ ವಿಧಾನ ಮಂಡಲದ ಮುಂದೆ ಮಂಡಿಸಿದಂತೆ)

ಪೂರಕ ಅಂದಾಜುಗಳು 2007–2008 (ಮೊದಲನೇ ಕಂತು)

(ಲಕ್ಷ ರೂ ಗಳಲ್ಲಿ)

ಅಭಿ ಯಾಚನ ಸಂಖ್ಯೆ	ಸೇವೆ ಮತ್ತು ಉದ್ದೇಶ		ಮೊತ್ತ		
			ಪ್ರಭೃತ	ಪುರಸ್ಕೃತ	ಒಟ್ಟು
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	0 00	803 50	803 50
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	0 00	935 23	935 23
		ಬಂಡವಾಳ	0 00	1000 00	1000 00
03	ಆರ್ಥಿಕ	ರಾಜಸ್ವ	0 00	347 00	347 00
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ರಾಜಸ್ವ	80 84	400 00	480 84
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	0 00	611 19	611 19
		ಬಂಡವಾಳ	0 00	800 00	800 00
06	ಮೂಲಭೂತ ಸೌಕರ್ಯ	ಬಂಡವಾಳ	0 00	459 00	459 00
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ಬಂಡವಾಳ	0 00	20120 00	20120 00
09	ಸಹಕಾರ	ರಾಜಸ್ವ	0 00	79835 79	79835 79
		ಬಂಡವಾಳ	0 00	1111 79	1111 79
10	ಸಮಾಜ ಕಲ್ಯಾಣ	ರಾಜಸ್ವ	0 00	2347 67	2347 67
		ಬಂಡವಾಳ	0 00	1007 50	1007 50
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	0 00	2862 28	2862 28
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	0 00	345 00	345 00

13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	0 00	50 00	50 00
14	ಕಂದಾಯ	ರಾಜಸ್ವ	0 00	9212 00	9212 00
		ಬಂಡವಾಳ	0 00	3200 00	3200 00
16	ವಸತಿ	ರಾಜಸ್ವ	0 00	2223 55	2223 55
17	ಶಿಕ್ಷಣ	ರಾಜಸ್ವ	0 00	6436 18	6436 18
		ಬಂಡವಾಳ	0 00	2408 00	2408 00
18	ವಾಣಿಜ್ಯ ಮತ್ತು ಕೈಗಾರಿಕಾ	ರಾಜಸ್ವ	0 00	6107 53	6107 53
		ಬಂಡವಾಳ	0 00	4116 25	4116 25
19	ನಗರಾಭಿವೃದ್ಧಿ	ಬಂಡ ವಾಳ	0 00	25000 00	25000 00
20	ಲೋಕೋಪಯೋಗಿ	ರಾಜಸ್ವ	0 00	1684 00	1684 00
		ಬಂಡವಾಳ	0 00	1817 91	1817 91
21	ಆಲ ಸಂಪನ್ಮೂಲ	ರಾಜಸ್ವ	0 00	482 00	482 00
		ಬಂಡವಾಳ	0 00	10000 00	10000 00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	0 00	2848 00	2848 00
		ಬಂಡವಾಳ	0 00	2500 00	2500 00
23	ಕಾರ್ಮಿಕ	ರಾಜಸ್ವ	0 00	110 60	110 60
		ಬಂಡವಾಳ	0 00	375 00	375 00
24	ಇಂಧನ	ರಾಜಸ್ವ	- 0 00	420 02	420 02
		ಬಂಡವಾಳ	0 00	555 00	555 00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	0 00	2495 00	2495 00
		ಬಂಡವಾಳ	0 00	100 00	100 00
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	0 00	11 02	11 02
27	ಕಾನೂನು	ರಾಜಸ್ವ	0 00	84 63	84 63
		ಬಂಡವಾಳ	0 00	200 00	200 00

ಜುಮ್ಲಾ	ರಾಜಸ್ವ	80 84	120652 19	120733 03
	ಬಂಡವಾಳ	0 00	74770 45	74770 45
ಒಟ್ಟು ಜುಮ್ಲಾ		**80 84**	**195422 64**	**195503 48**

ಪೂರಕ ಅಂದಾಜುಗಳು 2007–2008 (ಮೊದಲನೇ ಕಂತು)

ಅಭಿಯಾಚನೆ ಕ್ರಮಾಂಕ 01

ಕೃಷಿ ಮತ್ತು ತೋಟಗಾರಿಕೆ

(ಲಕ್ಷ ರೂ ಗಳಲ್ಲಿ)

	ಮೊತ್ತ		
	ಪ್ರಭೃತ	ಪುರಸ್ಕೃತ	ಒಟ್ಟು
ಮೂಲ ಅನುದಾನ	21 93	140821 77	140843 70
ರಾಜಸ್ವ ಬಂಡ ವಾಳ	0 00	2330 05	2330 05
ಪೂರಕ ಅನುದಾನ – 1 ರಾಜಸ್ವ	0 00	803 50	803 50
ಬಂಡವಾಳ	0 00	0 00	0 00
2007–2008 ಸಾಲಿಗೆ ಒಟ್ಟು ಅನುದಾನ ರಾಜಸ್ವ	21 93	141625 27	141647 2
ಬಂಡವಾಳ	0 00	2330 05	2330 05
	ಬೇಕಾಗಿರುವ ಅನುದಾನ		
ಲೆಕ್ಕ ಶೀರ್ಷಿಕೆ	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
2401 ಸಸ್ಯ ಸಂಗೋಪನೆ 001 ನಿರ್ದೇಶನ ಮತ್ತು ಆಡಳಿತ 2 ತೋಟಗಾರಿಕೆ ಇಲಾಖೆ 01 ತೋಟಗಾರಿಕೆ ಇಲಾಖೆ ನಿರ್ದೇಶನಾಲಯ 2401–00–001–2–01 015 ಪೂರಕ ವೆಚ್ಚಗಳು 196 ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ 2 ಜಿಲ್ಲಾ ಪಂಚಾಯಿತಿಗಳು 01 ಬ್ಲಾಕ್ ಅನುದಾನ	1 ಮ	0 00	100 00

2401–00–196–2–01 402 ಬೆಂಗಳೂರು (ಗ್ರಾಮೀಣ)	2 ಮ	86 00	0 00
800 ಇತರ ವೆಚ್ಚ 2 ತೋಟಗಾರಿಕೆ ಇಲಾಖೆ 39 ಸಿದ್ಧರ ಬೆಟ್ಟದ ಅಭಿವೃದ್ಧಿ 2401–00–800–2–39 059 ಇತರ ಖರ್ಚು	3 ಮ	0 00	200 00
2405 ಮೀನುಗಾರಿಕೆ 196 ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ 6 ಜಿಲ್ಲಾ ಪಂಚಾಯತ್– ಕೇಂ ಮ ಯೋ /ಕೇಂ ವ ಯೋ 02 ಮೀನುಗಾರರ ಅಭಿವೃದ್ಧಿ ಸಂಸ್ಥೆಗೆ ಒಳನಾಡು ಮೀನುಗಾರಿಕೆಯ ತೀವ್ರ ಅಭಿವೃದ್ಧಿ 2405–00–196–6–02			
405 ಶಿವಮೊಗ್ಗ	4 ಮ	14 50	0 00
408 ಚಿಕ್ಕಮಗಳೂರು	5 ಮ	31 00	0 00
410 ಹಾಸನ	6 ಮ	31 00	0 00
413 ಬೆಳಗಾವಿ	7 ಮ	16 00	0 00
2406 ಅರಣ್ಯ ಮತ್ತು ವನ್ಯ ಜೀವನ 02 ಪರಿಸರ ಅರಣ್ಯ ಮತ್ತು ವನ್ಯ ಜೀವನ 112 ಸಾರ್ವಜನಿಕ ಉದ್ಯಾನವನಗಳು 13 ಉದ್ಯಾನವನಗಳ ತೋಟಗಾರಿಕೆ 2406–02–112–0–13 015 ಪೂರಕ ವೆಚ್ಚಗಳು	8 ಮ	0 00	25 00

2415 ಕೃಷಿ ಸಂಶೋಧನೆ ಮತ್ತು ಶಿಕ್ಷಣ 80 ಸಾಮಾನ್ಯ 277 ಶಿಕ್ಷಣ 1 ಕೃಷಿ ವಿಜ್ಞಾನ ವಿಶ್ವವಿದ್ಯಾಲಯ-ಬೆಂಗಳೂರು 11 ಹಾಸನದಲ್ಲಿ ಕೃಷಿ ಕಾಲೇಜು ಸ್ಥಾಪನೆ 2415-80-277-1-11 101 ಸಹಾಯಾನುದಾನ	9 ಮ	300 00	0 00
	ಒಟ್ಟು	**478 50**	**325 00**

ಅಭಿಯಾಚನೆ ಸಂಖ್ಯೆ 01

Agriculture & Horticulture

ಬಾಬ್ತು ಸಂಖ್ಯೆ 1

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರ ಬಾಕಿ ಪಾವತಿಗಾಗಿ 2007-08ನೇ ಸಾಲಿನಲ್ಲಿ ರೂ 100 ಲಕ್ಷ ಅನುದಾನದ ಅವಶ್ಯಕತೆಯಿದೆ

ಇದಕ್ಕೆ 2007-08ನೇ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲವಾದ್ದರಿಂದ ರೂ 100 ಲಕ್ಷಗಳನ್ನು ಈ ಅಭಿಯಾಚನೆಯಡಿಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 2

ಎನ್ ಡಿ ಡಿ ಬಿ ಸಂಸ್ಥೆಯು ಬೆಂಗಳೂರಿನ ಸಫಲ್ ಮಾರುಕಟ್ಟೆ ಸಂಕೀರ್ಣದಲ್ಲಿ ಸ್ಥಾಪಿಸಿರುವ ಶೀತಲ ಗೃಗ ಬಳಸುವ ವಿದ್ಯುತ್‌ನ ಯೂನಿಟ್ ಒಂದಕ್ಕೆ ರೂ 1 00ರಂತೆ ಸಹಾಯಧನ ಒದಗಿಸುವ ಸಲುವಾಗಿ ರೂ 86 00 ಲಕ್ಷಗಳನ್ನು ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 3

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಸಿದ್ಧರ ಬೆಟ್ಟದಲ್ಲಿ ಔಷಧೀಯ ಸಸ್ಯ ಮತ್ತು ಗಿಡಮೂಲಿಕೆಗಳ ಅಭಿವೃದ್ಧಿ, ರಸ್ತೆ ಹಾಗೂ ಕುಡಿಯುವ ನೀರು ಮತ್ತಿತರ ಸೌಕರ್ಯಗಳ ಸುಧಾರಣೆಗೆ ರೂ 200 00 ಲಕ್ಷವನ್ನು 2007-08ನೇ ಸಾಲಿನ ಮೊದಲನೆ ಪೂರಕ ಅಂದಾಜಿನಲ್ಲಿ ನೀಡಲು ಉದ್ದೇಶಿಸಿರುವುದರ ಕಾರಣ ಈ ಅಭಿಯಾಚನೆಯಡಿಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 4-7

ಆತ್ಮಹತ್ಯೆಗೆ ಒಳಗಾದಂತಹ ರಾಜ್ಯದ 6 ಜಿಲ್ಲೆಗಳಲ್ಲಿನ ರೈತರ ಪುನರ್ವಸತಿಗಾಗಿ ಪ್ರಧಾನ ಮಂತ್ರಿಯವರ ವಿಶೇಷ ಪ್ಯಾಕೇಜ್ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಕೇಂದ್ರದ ಭಾಗವನ್ನು ಭರಿಸಲು ರೂ 92.50 ಲಕ್ಷವನ್ನು ಜಿಲ್ಲಾಪಂಚಾಯತ್‌ಗಳ ಮುಖಾಂತರ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಿದೆ 2007-08ನೇ ಸಾಲಿನ ಆಯವ್ಯಯದಲ್ಲಿ ಈ ಬಾಬಿಗೆ ಅವಕಾಶ ಒದಗಿಸಿಲ್ಲವಾದ ಕಾರಣ ರೂ 92 50 ಲಕ್ಷವನ್ನು ಈ ಅಭಿಯಾಚನೆಯಡಿಯಲ್ಲಿ ಸೇರಿಸಿದೆ ನಗದು ಹೊರ ಹರಿವು ಇರುವುದಿಲ್ಲ

ಬಾಬ್ತು ಸಂಖ್ಯೆ 8

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರ ಪರಿಷ್ಕೃತ ಭತ್ಯೆ ಹಾಗೂ ಬಾಕಿ ಪಾವತಿಗಾಗಿ 2007-08ನೇ ಸಾಲಿನಲ್ಲಿ ರೂ 25 ಲಕ್ಷ ಅನುದಾನದ ಅವಶ್ಯಕತೆಯಿದೆ

ಇದಕ್ಕೆ 2007–08ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲವಾದ್ದರಿಂದ ರೂ 25 ಲಕ್ಷಗಳನ್ನು ಈ ಅಭಿಯಾಚನೆಯಡಿಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 9

ಹಾಸನ ಕೃಷಿ ಕಾಲೇಜಿನ ಎರಡನೇ ಹಂತದ ಅಂದಾಜು ವೆಚ್ಚವನ್ನು ರೂ 30 ಕೋಟಿಗಳಿಗೆ ಪರಿಷ್ಕರಿಸಲಾಗಿದ್ದು, ಈ ಯೋಜನಗೆ ಆಡಳಿತಾತ್ಮಕ ಅನುಮೋದನೆ ನೀಡಲು 1/3 ರಷ್ಟು ಅಂದರೆ ರೂ 10 ಕೋಟಿ ಅನುದಾನದ ಅವಶ್ಯಕತೆಯಿರುತ್ತದೆ 2007–08ನೇ ಸಾಲಿನಲ್ಲಿ ಹಾಸನ ಕೃಷಿ ಕಾಲೇಜಿಗೆ ರೂ 700 ಲಕ್ಷ ಅನುದಾನ ಒದಗಿಸಲಾಗಿದ್ದು, ಹೆಚ್ಚುವರಿಯಾಗಿ ರೂ 300 ಲಕ್ಷಗಳ ಅನುದಾನ ನೀಡಬೇಕಾಗಿದೆ ಆದ್ದರಿಂದ ರೂ 300 ಲಕ್ಷಗಳನ್ನು ಹೆಚ್ಚುವರಿಯಾಗಿ ನೀಡಲು ಈ ಅಭಿಯಾಚನೆಯಡಿಯಲ್ಲಿ ಸೇರಿಸಿದೆ

ಪೂರಕ ಅಂದಾಜುಗಳು 2007–2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 02
ಪಶುಸಂಗೋಪನೆ ಮತ್ತು ಮೀನುಗಾರಿಕೆ

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ		ಪ್ರಭೃತ	ಪುರಸ್ಕೃತ	ಒಟ್ಟು
	ರಾಜಸ್ವ	8 10	43733 55	43741 65
	ಬಂಡವಾಳ	0 00	5015 00	5015 00
ಪೂರಕ ಅನುದಾನ – 1	ರಾಜಸ್ವ	0 00	935 23	935 23
	ಬಂಡವಾಳ	0 00	1000 00	1000 00
2007–2008 ಸಾಲಿಗೆ ಒಟ್ಟು ಅನುದಾನ	ರಾಜಸ್ವ	8 10	44668 78	44676 88
	ಬಂಡವಾಳ	0 00	6015 00	6015 00

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
2403 ಪಶು ಸಂಗೋಪನೆ 101 ಪಶುವೈದ್ಯಕೀಯ ಸೇವೆಗಳು ಮತ್ತು ಪ್ರಾಣಿಗಳ ಆರೋಗ್ಯ 06 ಪಶು ಆರೋಗ್ಯ ಸಂಸ್ಥೆ ಮತ್ತು ಪಶುವೈದ್ಯಕೀಯ ಜೈವಿಕ ಮತ್ತು ಚಿಕಿತ್ಸಕ ಪ್ರಯೋಗಶಾಲೆ, ಬೆಂಗಳೂರು 2403–00–101–0–06 101 ಸಹಾಯಾನುದಾನ	1 ಪು	0 00	32 95
2404 ಡೇರಿ ಅಭಿವೃದ್ಧಿ 191 ಸಹಕಾರಿ ಮತ್ತು ಇತರ ಸಂಸ್ಥೆಗಳಿಗೆ ನೆರವು			

1 ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಸಂಘ ನಿಯಮಿತ			
03 ಡೈರಿಗಳ ನಷ್ಟ 2404-00-191-1-03			
106 ಸಹಾಯಧನ	2 ಮ	0 00	902 28
4403 ಪಶು ಸಂಗೋಪನೆಯ ಮೇಲಣ ಬಂಡವಾಳ ವೆಚ್ಚ			
101 ಪಶು ಸಂಗೋಪನಾ ಸೇವೆಗಳು ಮತ್ತು ಪಶು ಆರೋಗ್ಯ			
09 ಹಾಸನದಲ್ಲಿ ಪಶುವೈದ್ಯಕೀಯ ಕಾಲೇಜು 4403-00-101-0-09			
059 ಇತರ ಖರ್ಚು	3 ಮ	1000 00	0 00
	ಒಟ್ಟು	**1000 00**	**935 23**

ಅಭಿಯಾಚನೆ ಸಂಖ್ಯೆ 02

Animal Husbandry & Fisheries

ಬಾಬ್ತು ಸಂಖ್ಯೆ 1

2007–08ನೇ ಸಾಲಿನಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಸೇವೆಯಲ್ಲಿ ವಿಲೀನಗೊಂಡು ನಿವೃತ್ತರಾದ 95 ಸರ್ಕಾರಿ ನೌಕರರಿಗೆ ನೀಡಬೇಕಾದ ಸರ್ಕಾರದ ಪಾಲಿನ ವಿಶ್ರಾಂತಿ ವೇತನ (pro-rata pension) ಬಾಬ್ತು ರೂ 32,95,490ಗಳನ್ನು 2007–08ನೇ ಸಾಲಿನಲ್ಲಿ ಬರಿಸಬೇಕಾಗಿದ್ದು ಇದಕ್ಕೆ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲವಾದ ಕಾರಣ ರೂ 32,95,490ಗಳನ್ನು ಈ ಅಭಿಯಾಚನೆ ಅಡಿಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 2

ಸರ್ಕಾರವು ಕೆ ಎಂ ಎಫ್ ಸಂಸ್ಥೆಯು ಬಾಕಿ ಇರಿಸಿಕೊಂಡಿದ್ದ ರೂ 902 28 ಲಕ್ಷ ಸಾಲವನ್ನು ಅನುದಾನವಾಗಿ ಪರಿವರ್ತಿಸಲು ಉದ್ದೇಶಿಸಿದೆ ಆದ್ದರಿಂದ ಈ ಬಾಬ್ತು ಲೆಕ್ಕ ಹೊಂದಾಣಿಕೆಯನ್ನು ಮಹಾಲೇಖಪಾಲರು ಮಾಡಲು ಅನುಕೂಲವಾಗುವಂತೆ ಕಂದಾಯ ವೆಚ್ಚ ಲೆಕ್ಕಶೀರ್ಷಿಕೆಯಡಿ ರೂ 902 28 ಲಕ್ಷಗಳನ್ನು ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 3

ಹಾಸನದ ಪಶುವೈದ್ಯಕೀಯ ಕಾಲೇಜಿಗೆ 2007–08ನೇ ಸಾಲಿನ ಆಯವ್ಯಯದಲ್ಲಿ 600 00 ಲಕ್ಷ ಅನುದಾನ ಒದಗಿಸಲಾಗಿದೆ ಈ ಯೋಜನೆಯ ಕಾಮಗಾರಿಗೆ ಪ್ರಸಕ್ತ ಸಾಲಿನಲ್ಲಿ ಕನಿಷ್ಠ 1600 00 ಲಕ್ಷಗಳ ಅನುದಾನ ಅವಶ್ಯವಿರುವ ಕಾರಣ ಲೆಕ್ಕ ಶೀರ್ಷಿಕೆ 2404–00–191–1–16ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ 1000 00 ಲಕ್ಷ ಅನುದಾನವನ್ನು ಸರ್ಕಾರಕ್ಕೆ ಅಧ್ಯಾರ್ಪಣೆ ಮಾಡಿಸಿಕೊಂಡು ಹೆಚ್ಚುವರಿ ಅನುದಾನ ನೀಡಲಾಗಿದೆ ಇದರಲ್ಲಿ ನಗದು ಹೊರ ಹರಿವು ಇರುವುದಿಲ್ಲ

ಪೂರಕ ಅಂದಾಜುಗಳು 2007–2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 03
ಆರ್ಥಿಕ

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ	ಪ್ರಭೃತ	ಪುರಸ್ಕೃತ	ಒಟ್ಟು
	472 00	420057 09	420529 09
ರಾಜಸ್ವ ಬಂಡವಾಳ	0 00	3121 64	3121 64
ಪೂರಕ ಅನುದಾನ – 1 ರಾಜಸ್ವ	0 00	347 00	347 00
ಬಂಡವಾಳ	0 00	0 00	0 00
2007–2008 ಸಾಲಿಗೆ ಒಟ್ಟು	472 00	420404 09	420876 09
ಅನುದಾನ ರಾಜಸ್ವ ಬಂಡವಾಳ	0 00	3121 64	3121 64

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
2075 ವಿವಿಧ ಸಾಮಾನ್ಯ ಸೇವೆಗಳು 103 ರಾಜ್ಯ ಲಾಟರಿ 1 ರಾಜ್ಯ ಲಾಟರಿ ಇಲಾಖೆಯ ನಿರ್ದೇಶಕರು 01 ಬಹುಮಾನದ ಹಣ ಸಂದಾಯ 2075–00–103–1–01 299 ಬಹುಮಾನ ಧನ 103 ರಾಜ್ಯ ಲಾಟರಿ 1 ರಾಜ್ಯ ಲಾಟರಿ ಇಲಾಖೆಯ ನಿರ್ದೇಶಕರು 04 ಬಹುಮಾನ ವಿತರಣೆಗೆ ಸೇವಾಶುಲ್ಕಗಳು	1 ಪು	0 00	300 00

2075–00–103–1–04 051 ಸಾಮಾನ್ಯ ವೆಚ್ಚಗಳು **2250** ಇತರೆ ಸಾಮಾಜಿಕ ಸೇವೆಗಳು 800 ಇತರೆ ವೆಚ್ಚಗಳು 2 ಇತರೆ ಬಾಬುಗಳು 01 ಸಂಕೀರ್ಣ 2250–00–800–2–01 101 ಸಹಾಯಾನುದಾನ	2 ಮ 3 ಮ	0 00 0 00	25 00 22 00
	ಒಟ್ಟು	**0 00**	**347 00**

ಅಭಿಯಾಚನೆ ಸಂಖ್ಯೆ 03

Finance

ಬಾಬ್ತು ಸಂಖ್ಯೆ 1

ಕರ್ನಾಟಕ ರಾಜ್ಯ ಲಾಟರಿ ಬಹುಮಾನ ವಿಜೇತರರಿಗೆ ಬಹುಮಾನ ವಿತರಣೆ ಬಾಕಿ ಇದ್ದು 2007–08ರ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿರುವುದಿಲ್ಲ ಆದ್ದರಿಂದ, ಪ್ರಸ್ತುತ ರೂ 300 00 ಲಕ್ಷ ಹಣವನ್ನು ಈ ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 2

ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದ್ದ ಆನ್‌ಲೈನ್ ಲಾಟರಿ ನಿಯಂತ್ರಿಸುವ ಸಂಬಂಧ ಅರ್ಬಿಟ್ರೇಷನ್ ಟ್ರೆಬ್ಯುನಲ್‌ನಲ್ಲಿ ವ್ಯಾಜ್ಯ ನಡೆಯುತ್ತಿದ್ದು, ರಾಜ್ಯ ಸರ್ಕಾರದ ಪರವಾಗಿ ನೇಮಿಸಲ್ಪಟ್ಟಿರುವ ವಕೀಲರ ಸಂಭಾವನೆ ಪಾವತಿಸಬೇಕಾಗಿದ್ದು, ಆಯವ್ಯಯದಲ್ಲಿ ಅನುದಾನ ಒದಗಿಸಲಾಗಿರುವುದಿಲ್ಲ ಆದ್ದರಿಂದ, ಪ್ರಸ್ತುತ ರೂ 25 00 ಲಕ್ಷ ಹಣವನ್ನು ಆ ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 3

ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ, ಬೆಂಗಳೂರು ಇವರಿಗೆ ಸುವರ್ಣ ಕರ್ನಾಟಕ ಮಹೋತ್ಸವದ ಆಚರಣೆಗಾಗಿ ರೂ 2 00 ಲಕ್ಷಗಳ ಸಹಾಯಾನುದಾನವನ್ನು ಮಂಜೂರು ಮಾಡಲಾಯಿತು ಆಯವ್ಯಯದಲ್ಲಿ ಈ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಮೊತ್ತ ಸಾಲದಿರುವುದರಿಂದ ಅವಶ್ಯವಿರುವ ಈ ಮೊತ್ತವನ್ನು ಅಭಿಯಾಚನೆಯಲ್ಲಿ ಸೇರಿಸಿದೆ

ಇದಲ್ಲದೆ ಸಹಾಯಾನುದಾನಕ್ಕಾಗಿ ಇನ್ನೂ ಹಲವಾರು ಪ್ರಸ್ತಾವನೆಗಳು ಬಂದಿರುವುದರಿಂದ ಹೆಚ್ಚುವರಿಯಾಗಿ ರೂ 20 00 ಲಕ್ಷಗಳನ್ನು ಅಭಿಯಾಚನೆಯಲ್ಲಿ ಸೇರಿಸಿದೆ

ಪೂರಕ ಅಂದಾಜುಗಳು 2007-2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 04
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ	ಪ್ರಭೃತ	ಪುರಸ್ಕೃತ	ಒಟ್ಟು
	5602 62	27729 32	33331 94
ರಾಜಸ್ವ ಬಂಡವಾಳ	0 00	0 00	0 00
ಪೂರಕ ಅನುದಾನ – 1 ರಾಜಸ್ವ	80 84	400 00	480 84
ಬಂಡವಾಳ	0 00	0 00	0 00
2007-2008 ಸಾಲಿಗೆ ಒಟ್ಟು	5683 46	28129 32	33812 78
ಅನುದಾನ ರಾಜಸ್ವ ಬಂಡವಾಳ	0 00	0 00	0 00

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
2012 ರಾಷ್ಟ್ರಪತಿ, ಉಪ ರಾಷ್ಟ್ರಪತಿ, ರಾಜ್ಯಪಾಲ, ಕೇಂದ್ರ ಆಡಳಿತ ಪ್ರದೇಶದ ಆಡಳಿತಾಧಿಕಾರಿ			
03 ರಾಜ್ಯಪಾಲ			
090 ಸಚಿವಾಲಯ			
2012-03-090-0-00			
195 ಸಾರಿಗೆ ವೆಚ್ಚಗಳು	1 ಪು	0 00	24 26
103 ಮನೆವಾರ್ತೆ ಸಿಬ್ಬಂದಿ			
01 ಸಿಬ್ಬಂದಿ			
2012-03-103-0-01			
051 ಸಾಮಾನ್ಯ ವೆಚ್ಚಗಳು	2 ಪು	0 00	0 45
103 ಮನೆವಾರ್ತೆ ಸಿಬ್ಬಂದಿ			
02 ಅಧಿಕೃತ ನಿವಾಸಗಳ			

ಪೀಠೋಪಕರಣಗಳ ನವೀಕರಣ			
2012-03-103-0-02		0 00	
221 ಸಾಮಗ್ರಿ ಮತ್ತು ಸರಬರಾಜು	3 ಮ		2 24
103 ಮನೆವಾರ್ತೆ ಸಿಬ್ಬಂದಿ			
03 ಅಧಿಕೃತ ನಿವಾಸಗಳ ನಿರ್ವಹಣೆ ಮತ್ತು ದುರಸ್ತಿ			
2012-03-103-0-03		0 00	
200 ನಿರ್ವಹಣೆ	4 ಮ		0 25
103 ಮನೆವಾರ್ತೆ ಸಿಬ್ಬಂದಿ			
04 ತೋಟಗಳು			
2012-03-103-0-04		0 00	
059 ಇತರ ಖರ್ಚು	5 ಮ		1 28
103 ಮನೆವಾರ್ತೆ ಸಿಬ್ಬಂದಿ			
06 ಮನರಂಜನಾ ಭತ್ಯೆ			
2012-03-103-0-06		0 00	
051 ಸಾಮಾನ್ಯ ವೆಚ್ಚಗಳು	6 ಮ		0 13
104 ಆತಿಥ್ಯ ಭತ್ಯೆ			
2012-03-104-0-00		0 00	
051 ಸಾಮಾನ್ಯ ವೆಚ್ಚಗಳು	7 ಮ		0 19
107 ಕರಾರು ಭತ್ಯೆದಿಂದ ವೆಚ್ಚ			
2012-03-107-0-00		0 00	
059 ಇತರ ಖರ್ಚು	8 ಮ		2 04
2052 ಸಚಿವಾಲಯ ಸಾಮಾನ್ಯ ಸೇವೆಗಳು			
090 ಸಚಿವಾಲಯ			
80 ಮಾನವ ಸಂಪನ್ಮೂಲ ಅಭಿವೃದ್ಧಿಗೆ ತಾಂತ್ರಿಕ ಸಹಾಯ(ಜಾಗತಿಕ ಬ್ಯಾಂಕ್ ಸಹಾಯ)			

2052–00–090–0–80 051 ಸಾಮಾನ್ಯ ವೆಚ್ಚಗಳು	9 ಮು	400 00	0 00
2070 ಇತರ ಆಡಳಿತ ಸೇವೆಗಳು 104 ಜಾಗೃತಿ 02 ಕರ್ನಾಟಕ ಲೋಕಾಯುಕ್ತ 2070–00–104–0–02 015 ಪೂರಕ ವೆಚ್ಚಗಳು	10 ಮು	0 00	50 00
	ಒಟ್ಟು	**400 00**	**80 84**

ಅಭಿಯಾಚನೆ ಸಂಖ್ಯೆ 04

Department of personnel & Administrative Reforms

ಬಾಬ್ತು ಸಂಖ್ಯೆ 1

ರಾಜಭವನಕ್ಕೆ ವಾಹನಗಳನ್ನು ಖರೀದಿಸುವುದಕ್ಕಾಗಿ ಆಯವ್ಯಯದಲ್ಲಿನ ಅನುದಾನ ಸಾಲದಿರುವುದರಿಂದ ರೂ 24 26 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿದೆ ಆದ ಕಾರಣ ಅಭಿಯಾಚನೆಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 2-6

ರಾಜ್ಯಪಾಲರುಗಳ (ಬತ್ತೆ ಮತ್ತು ಸೌಲಭ್ಯಗಳು) ತಿದ್ದುಪಡಿ ನಿಯಮ 2006ರ ಅಡಿಯಲ್ಲಿ ಮಾನ್ಯ ರಾಜಪಾಲರುಗಳ ಅಧಿಕೃತ ನಿವಾಸ ನಿರ್ವಹಣಾ ಸೌಲಭ್ಯಗಳ ಗರಿಷ್ಠ ಮಿತಿಯನ್ನು ಹೆಚ್ಚಿಸಿದ್ದು ಇದಕ್ಕಾಗಿ ಆಯವ್ಯಯದಲ್ಲಿನ ಅನುದಾನ ಸಾಲದಿರುವುದರಿಂದ ರೂ 4 35 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿದೆ ಆದ ಕಾರಣ ಅಭಿಯಾಚನೆಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 7

ರಾಜ್ಯಪಾಲರುಗಳ (ಭತ್ಯೆ ಮತ್ತು ಸೌಲಭ್ಯಗಳು) ತಿದ್ದುಪಡಿ ನಿಯಮ 2006ರ ಅಡಿಯಲ್ಲಿ ಮಾನ್ಯ ರಾಜಪಾಲರುಗಳ ಅಧಿಕೃತ ನಿವಾಸ ನಿರ್ವಹಣಾ ಸೌಲಭ್ಯಗಳ ಗರಿಷ್ಠ ಮಿತಿಯನ್ನು ಹೆಚ್ಚಿಸಿದ್ದು ಇದಕ್ಕಾಗಿ ಆಯವ್ಯಯದಲ್ಲಿನ ಅನುದಾನ ಸಾಲದಿರುವುದರಿಂದ ರೂ 0 19 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿದೆ ಆದ ಕಾರಣ ಅಭಿಯಾಚನೆಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 8

ರಾಜ್ಯಪಾಲರುಗಳ (ಭತ್ಯೆ ಮತ್ತು ಸೌಲಭ್ಯಗಳು) ತಿದ್ದುಪಡಿ ನಿಯಮ 2006ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರುಗಳು ಅಧಿಕೃತ ನಿವಾಸ ನಿರ್ವಹಣಾ ಸೌಲಭ್ಯಗಳ ಗರಿಷ್ಠ ಮಿತಿಯನ್ನು ಹೆಚ್ಚಿಸಿದ್ದು ಇದಕ್ಕಾಗಿ ಆಯವ್ಯಯದಲ್ಲಿನ ಅನುದಾನ ಸಾಲದಿರುವುದರಿಂದ ರೂ 2 04 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿದೆ ಆದ ಕಾರಣ ಅಭಿಯಾಚನೆಯಲ್ಲಿ ಸೇರಿಸಿದೆ

ಬಾಬ್ತು ಸಂಖ್ಯೆ 9

ಮಾನವ ಸಂಪನ್ಮೂಲ ಮಾಹಿತಿ ನಿರ್ವಹಣಾ ಯೋಜನೆಯ ಕಾರ್ಯವನ್ನು ಇ-ಆಡಳಿತ ಇಲಾಖೆಯು ಅನುಷ್ಠಾನಗೊಳಿಸುವುದರಿಂದ ರೂ 400 00 ಲಕ್ಷಗಳನ್ನು ಒದಗಿಸಲಾಗಿದೆ ಅಷ್ಟೇ ಮೊತ್ತವನ್ನು ಆರ್ಥಿಕ ಇಲಾಖೆಯು ಅಧ್ಯರ್ಪಣೆ ಮಾಡುವುದರಿಂದ ಯಾವುದೇ ನಗದು ಹೊರಹೋಗುವಿಕೆ ಇಲ್ಲ

ಬಾಬ್ತು ಸಂಖ್ಯೆ 10

ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಾಲದೇ ಹೋಗಿದ್ದರಿಂದ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ನೇಮಕ ಮಾಡಿರುವ ವಿಶೇಷ ಸರ್ಕಾರಿ ಅಭಿಯೋಜಕರಿಗೆ ಮತ್ತು ವಕೀಲರಿಗೆ ಗೌರವಧನ ನೀಡಲು ರೂ 50 00 ಲಕ್ಷಗಳ ಹೆಚ್ಚುವರಿ ಅನುದಾನ ಮಂಜೂರು ಮಾಡಿ ಈ ಅಭಿಯಾಚನೆಯಲ್ಲಿ ಸೇರಿಸಿದೆ

ಪೂರಕ ಅಂದಾಜುಗಳು 2007–2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 05
ಆರ್ಥಿಕ

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ	ಪ್ರಭೃತ	ಪುರಸ್ಕೃತ	ಒಟ್ಟು
ರಾಜಸ್ವ	0 00	174434 48	174434 48
ಬಂಡವಾಳ	0 00	20140 00	20140 00
ಪೂರಕ ಅನುದಾನ – 1 ರಾಜಸ್ವ	0 00	611 19	611 19
ಬಂಡವಾಳ	0 00	800 00	800 00
2007–2008 ಸಾಲಿಗೆ ಒಟ್ಟು ಅನುದಾನ ರಾಜಸ್ವ	0 00	175045 67	175045 67
ಬಂಡವಾಳ	0 00	20940 00	20940 00

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
2055 ಪೊಲೀಸ್			
800 ಇತರ ವೆಚ್ಚ			
13 ಭಾರತ ರಿಸರ್ವ್ ಬೆಟಾಲಿಯನ್ ತಯಾರು ಮಾಡುವಿಕೆ 2055–00–800–0–13			
002 ವೇತನ–ಅಧಿಕಾರಿಗಳು	1 ಪು	0 00	16 20
003 ವೇತನ–ಸಿಬ್ಬಂದಿ	2 ಪು	0 00	363 00
011 ತುಟ್ಟಿ ಭತ್ಯೆ	3 ಪು	0 00	60 68

014 ಇತರೆ ಭತ್ಯೆ	4 ಮ	0 00	74 12
2070 ಇತರ ಆಡಳಿತ ಸೇವೆಗಳು			
108 ಬೆಂಕಿ ರಕ್ಷಣೆ ಮತ್ತು ನಿಯಂತ್ರಣ			
1 ನಿರ್ದೇಶನ ಮತ್ತು ಆಡಳಿತ			
01 ಅಗ್ನಿಶಾಮಕ ದಳದ ನಿರ್ದೇಶಕರು 2070–00–108–1–01			
014 ಇತರೆ ಭತ್ಯೆ	5 ಮ	0 00	97 19
4055 ಪೊಲೀಸ್ ಮೇಲಣ ಬಂಡವಾಳ ವೆಚ್ಚ			
800 ಇತರೆ ವೆಚ್ಚಗಳು			
07 ಹಾಸನದಲ್ಲಿ ಹೊಸದಾಗಿ ಕೆ ಎಸ್ ಆರ್ ಪಿ ಬೆಟಾಲಿಯನ್ ಸ್ಥಾಪಿಸುವ ಬಗ್ಗೆ 4055–00–800–0–07			
132 ಬಂಡವಾಳ ವೆಚ್ಚಗಳು	6 ಮ	800 00	0 00
	ಒಟ್ಟು	**800 00**	**611 19**

ಅಭಿಯಾಚನೆ ಸಂಖ್ಯೆ 05

Home & Transport

ಬಾಬ್ತು ಸಂಖ್ಯೆ 1–4

ಹೊಸದಾಗಿ ಸೃಜಿಸಲಾಗಿರುವ ಇಂಡಿಯ ರಿಜರ್ವ್ ಬೆಟಾಲಿಯನ್‌ನ ಅಧಿಕಾರಿ/ಸಿಬ್ಬಂದಿಗಳ ವೇತನ ಮತ್ತು ಇತರ ಬತ್ಯೆಗಳಿಗಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ ಆದುದರಿಂದ, ರೂ 514 00 ಲಕ್ಷಗಳನ್ನು ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 5

ಕರ್ನಾಟಕ ರಾಜ್ಯ ಅಗ್ನಿಶಾಮಕ ಸೇವೆ ಮತ್ತು ತುರ್ತು ಸೇವೆಗಳ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಉಚಿತ ಪಡಿತರ ವಿತರಿಸುವ ಸಲುವಾಗಿ ಒದಗಿಸಿರುವ ಅನುದಾನ ಸಾಲದಿರುವುದರಿಂದ ರೂ 97 19 ಲಕ್ಷಗಳನ್ನು ಹೆಚ್ಚುವರಿಯಾಗಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಬಾಬ್ತು ಸಂಖ್ಯೆ 6

ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಾಲದಿರುವುದರಿಂದ ಹಾಸನದಲ್ಲಿ ಹೊಸದಾಗಿ ಕೆ ಎಸ್ ಆರ್ ಪಿ ಬೆಟಾಲಿಯನ್ ಸ್ಥಾಪಿಸುವ ಸಲುವಾಗಿ ರೂ 800 00 ಲಕ್ಷಗಳನ್ನು ಹೆಚ್ಚುವರಿ ಒದಗಿಸಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ

ಪೂರಕ ಅಂದಾಜುಗಳು 2007-2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 06
ಮೂಲಭೂತ ಸೌಕರ್ಯ

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ	ಪ್ರಭೃತ	ಪುರಸ್ಕೃತ	ಒಟ್ಟು
ರಾಜಸ್ವ	0 00	110 50	110 50
ಬಂಡವಾಳ	0 00	41734 00	41734 00
ಪೂರಕ ಅನುದಾನ – 1 ರಾಜಸ್ವ	0 00	0 00	0 00
ಬಂಡವಾಳ	0 00	459 00	459 00
2007-2008 ಸಾಲಿಗೆ ಒಟ್ಟು ಅನುದಾನ ರಾಜಸ್ವ	0 00	110 5	110 5
ಬಂಡವಾಳ	0 00	42193 00	42193 00

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
5465 ಸಾಮಾನ್ಯ ಹಣಕಾಸು ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ಬಂಡವಾಳ ಹೂಡಿಕೆ 01 ಸಾಮಾನ್ಯ ಆರ್ಥಿಕ ಸಂಸ್ಥೆ ಗಳಲ್ಲಿ ಬಂಡವಾಳ ಹೂಡಿಕೆ 190 ಸಾರ್ವಜನಿಕ ವಲಯ ಮತ್ತು ಇತರೆ ಉದ್ದಿಮೆ, ಬ್ಯಾಂಕ್ ಮುಂತಾದುವುಗಳಲ್ಲಿ ಬಂಡವಾಳ ಹೂಡಿಕೆ 2 ಕೆ ಎಸ್ ಐ ಐ ಡಿ ಸಿ ಮೂಲಕ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ			

ಬಂಡವಾಳ 04 ಕವಿಪನಿಲಿವು ಕಾರ್ಯ ನಿವೇಶನಕ್ಕೆ ವಿದ್ಯುತ್ ಹೂಡಿಕೆ ಒದಗಿಸುವುದು 5465-01-190-2-04 211 ಬಂಡವಾಳ ಹೂಡಿಕೆ	1 ಪು	459 00	0 00
	ಒಟ್ಟು	**459 00**	**0 00**

ಅಭಿಯಾಚನೆ ಸಂಖ್ಯೆ 06
Infrastructure Development

ಬಾಬ್ತು ಸಂಖ್ಯೆ 1

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿದ್ಯುತ್ ಸರಬರಾಜು ಮಾಡಲು ಕಾಮಗಾರಿಗಾಗಿ ಬೇಕಾಗುವ ಮೊತ್ತ ರೂ 459 00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ ಆದ ಕಾರಣ ಅಭಿಯಾಚನೆಯಲ್ಲಿ ಸೇರಿಸಿದೆ

ಪೂರಕ ಅಂದಾಜುಗಳು 2007-2008 (ಮೊದಲನೇ ಕಂತು)
ಅಭಿಯಾಚನೆ ಕ್ರಮಾಂಕ 07
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್

(ಲಕ್ಷ ರೂ ಗಳಲ್ಲಿ)

ಮೂಲ ಅನುದಾನ	ಪ್ರಭೃತ	ಪುರಸ್ಕೃತ	ಒಟ್ಟು
ರಾಜಸ್ವ	0 00	160064 25	160064 25
ಬಂಡವಾಳ	0 00	146367 00	146367 00
ಪೂರಕ ಅನುದಾನ – 1 ರಾಜಸ್ವ	0 00	0 00	0 00
ಬಂಡವಾಳ	0 00	20120 00	20120 00
2007–2008 ಸಾಲಿಗೆ ಒಟ್ಟು ಅನುದಾನ ರಾಜಸ್ವ	0 00	160064 25	160064 25
ಬಂಡವಾಳ	0 00	166487 00	166487 00

ಲೆಕ್ಕ ಶೀರ್ಷಿಕೆ	ಬೇಕಾಗಿರುವ ಅನುದಾನ		
	ಬಾಬ್ತು ಸಂಖ್ಯೆ	ಯೋಜನೆ	ಯೋಜನೇತರ
4215 ನೀರು ಸರಬರಾಜು ಮತ್ತು ನೈರ್ಮಲ್ಯ ಮೇಲಣ ಬಂಡವಾಳ ವೆಚ್ಚ			
01 ನೀರು ಸರಬರಾಜು			
102 ಗ್ರಾಮೀಣ ನೀರು ಸರಬರಾಜು			
9 ಗ್ರಾಮ ಪಂಚಾಯತ್‌ಗಳಿಗೆ ಬಂಡವಾಳ ಬಿಡುಗಡೆ			
01 ಗ್ರಾಮೀಣ ನೀರು ಸರಬರಾಜು 4215–01-102-9–01			
132 ಬಂಡವಾಳ ವೆಚ್ಚಗಳು	1 ಪು	20000 00	0 00
4515 ಇತರೆ ಗ್ರಾಮೀಣ ಅಭಿವೃದ್ಧಿ			

ಕಾರ್ಯಕ್ರಮಗಳ ಮೇಲಣ ಬಂಡವಾಳ ವೆಚ್ಚ 103 ಗ್ರಾಮೀಣ ಅಭಿವೃದ್ಧಿ 1 1961ರ ಕರ್ನಾಟಕ ಭೂಸುಧಾರಣಾ ಅಧಿನಿಯಮದ ಮೇರೆಗೆ ಸಂದಾಯ 01 ಭೂಮಿಯನ್ನು ಸರ್ಕಾರದಲ್ಲಿ ನಿಯತಗೊಳಿಸಿದುದಕ್ಕಾಗಿ ಭೂ ಮಾಲೀಕರಿಗೆ ಹಣ ಸಂದಾಯ 4515-00-103-1-01 100 ಧನ ಸಹಾಯ/ಪರಿಹಾರ	2 ಪು	0 00	120 00
	ಒಟ್ಟು	**20000 00**	**120 00**

ಅಭಿಯಾಚನೆ ಸಂಖ್ಯೆ 07

Rural Development & Panchayath Raj

ಬಾಬ್ತು ಸಂಖ್ಯೆ 1

